ಕೌಟುಂಬಿಕ ದೌರ್ಜನ್ಯ : ಲಿಂಗೀಯ ಅಧ್ಯಯನ

(ಕೊಪ್ಪಳ ತಾಲ್ಲೂಕನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಭುವನೇಶ್ವರಿ ಗುನ್ನಳ್ಳಿ

ಮಾರ್ಗದರ್ಶಕರು

ಡಾ. ಶಿವಾನಂದ ಎಸ್. ವಿರಕ್ತಮಠ

ಪ್ರಾಧ್ಯಾಪಕರು

ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ

ಮಹಿಳಾ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ– ೫೮೩ ೨೭೬

೨೦೧೫

ಕೌಟುಂಬಿಕ ದೌರ್ಜನ್ಯ : ಲಿಂಗೀಯ ಅಧ್ಯಯನ

(ಕೊಪ್ಪಳ ತಾಲ್ಲೂಕನ್ನು ಅನುಲಕ್ಷಿಸಿ)

(ಪಿಎಚ್.ಡಿ) ಡಾಕ್ಟರ್ ಆಫ್ ಫಿಲಾಸಫಿ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಭುವನೇಶ್ವರಿ ಗುನ್ನಳ್ಳಿ

ಮಾರ್ಗದರ್ಶಕರು
ಡಾ. ಶಿವಾನಂದ ಎಸ್. ವಿರಕ್ತಮಠ
ಪ್ರಾಧ್ಯಾಪಕರು
ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೫

ಪ್ರಮಾಣ ಪತ್ರ

'ಕೌಟುಂಬಿಕ ದೌರ್ಜನ್ಯ : ಲಿಂಗೀಯ ಅಧ್ಯಯನ' (ಕೊಪ್ಪಳ ತಾಲ್ಲೂಕನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ **ಡಾ. ಶಿವಾನಂದ ಎಸ್. ವಿರಕ್ತಮಠ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 25/11/2015

ಸ್ಥಳ : ವಿದ್ಯಾರಣ್ಯ

Bhuvya

ಭುವನೇಶ್ವರಿ ಗುನ್ನಳ್ಳಿ
ಸಂಶೋಧಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩೨೭೬

ದೃಢೀಕರಣ ಪತ್ರ

'ಕೌಟುಂಬಿಕ ದೌರ್ಜನ್ಯ : ಲಿಂಗೀಯ ಅಧ್ಯಯನ' (ಕೊಪ್ಪಳ ತಾಲ್ಲೂಕನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಭುವನೇಶ್ವರಿ ಗುನ್ನಳ್ಳಿ** ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 25/11/15
ಸ್ಥಳ: ವಿದ್ಯಾರಣ್ಯ

ಡಾ. ಶಿವಾನಂದ ಎಸ್. ವಿರಕ್ತಮಠ
ಮಾರ್ಗದರ್ಶಕರು ಮತ್ತು ಮುಖ್ಯಸ್ಥರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩೨೭೬

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ

೧.೧. ಪ್ರಸ್ತಾವನೆ
೧.೨. ಅಧ್ಯಯನದ ಉದ್ದೇಶ
೧.೩. ಅಧ್ಯಯನದ ವೈಧಾನಿಕತೆ
೧.೪. ಅಧ್ಯಯನದ ವ್ಯಾಪ್ತಿ
೧.೪.೧. ಕ್ಷೇತ್ರ ವ್ಯಾಪ್ತಿ
೧.೪.೨. ವಿಷಯದ ವ್ಯಾಪ್ತಿ
೧.೪.೩. ವಿಷಯದ ಕ್ಷೇತ್ರ
೧.೫. ಇದುವರೆಗಿನ ಅಧ್ಯಯನದ ಸಮೀಕ್ಷೆ
೧.೬. ಅಧ್ಯಯನದ ಮಹತ್ವ
೧.೭. ಅಧ್ಯಯನದ ಒಳರಚನೆ.

೧.

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ

೧.೧. ಪ್ರಸ್ತಾವನೆ

ಭಾರತೀಯ ಮಹಿಳೆಯರ ಬಗ್ಗೆ ಸಮಾಜದಲ್ಲಿ ಅವರಿಗಿರುವ ಸ್ಥಾನಮಾನ, ಅವರಿಗೆ ಸಲ್ಲಬೇಕಾದ ಗೌರವ, ಅವರಿಗಿರಬೇಕಾದ ರಕ್ಷಣೆ, ಅವರ ಸ್ವಾಭಾವಿಕ ಹಕ್ಕುಗಳು, ಇವುಗಳ ಬಗ್ಗೆ ಬಹಳ ಹಿಂದಿನಿಂದಲೂ ಪುರುಷ ಪ್ರಧಾನ ವ್ಯವಸ್ಥೆ ಚರ್ಚಿಸುತ್ತಾ ಬಂದಿದೆ. ಹೆಣ್ಣಿಗೆ ವಿಶೇಷ ಶಕ್ತಿ ಇದೆ ಎಂದು ಆಕೆಯನ್ನು ವೈಭವೀಕರಿಸುವ ಜೊತೆಗೆ ಆಕೆಯನ್ನು ದಮನಗೊಳಿಸಲು ಅನೇಕ ತಂತ್ರಗಳನ್ನು ವ್ಯವಸ್ಥೆ ರಚಿಸುತ್ತಲೇ ಇದೆ. ಹೀಗೆ ಭಿನ್ನ ನಿಲುವುಗಳನ್ನು ತಳೆದ ಜನಬಳಗದವರು ಹೊರಗಡೆ ಹೆಣ್ಣಿನ ಮೇಲೆ ಏನೇ ದೌರ್ಜನ್ಯಗಳಾದರೂ ಕೂಡಲೇ ಪ್ರತಿಭಟಿಸಿ ರಕ್ಷಣೆಗೆ ಮುಂದಾಗುತ್ತಾರೆ. ಉದಾಹರಣೆಗೆ ಕಳೆದ ವರ್ಷಗಳಲ್ಲಿ ನಡೆದ ನಿರ್ಭಯಾಳ ಅತ್ಯಾಚಾರ ಮತ್ತು ಕೊಲೆ ಪ್ರಕರಣ ಆಗಿರಬಹುದು ಅಥವಾ ಮಣಿಪಾಲ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿಯ ಮೇಲೆ ನಡೆದ ಅತ್ಯಾಚಾರ ಪ್ರಕರಣ ಆಗಿರಬಹುದು. ಇಂತಹ ಸಂದರ್ಭಗಳಲ್ಲಿ ತೀವ್ರ ಸ್ವರೂಪದ ಹೋರಾಟಕ್ಕೆ ಮುಂದಾಗುತ್ತಾರೆ. ಆದರೆ ಅದೇ ತಮ್ಮ ಕುಟುಂಬಗಳ ವಿಷಯಕ್ಕೆ ಬಂದಾಗ, ಅಲ್ಲಿ ಮಹಿಳೆಯರ ಬಗ್ಗೆ ಸದಾ ನಕಾರಾತ್ಮಕ ಧೋರಣೆ ಹೊಂದಿದವರಾಗಿರುತ್ತಾರೆ. ಈ ಬಗೆಯ ಧೋರಣೆಗಳು ಕೇವಲ ಇಂದು ನಿನ್ನೆಯದ್ದಾಗಿರದೇ ಪುರುಷಶಾಹಿ ವ್ಯವಸ್ಥೆ ಜನ್ಮತಾಳಿದಾಗಿನಿಂದ ಕಾರ್ಯಪ್ರವೃತ್ತವಾಗಿರುವುದನ್ನು ಕಾಣಬಹುದಾಗಿದೆ. ಕುಟುಂಬದೊಳಗೆ ಮಹಿಳೆಯರ ವಿಷಯವಾಗಿ ಈ ಬಗೆಯ ನಕಾರಾತ್ಮಕ ಧೋರಣೆಗಳೇ ಅವರನ್ನು ಹಿಂಸೆಯಂತಹ ಕೃತ್ಯಕ್ಕೆ ಒಳಪಡಿಸಲು ಕಾರಣವಾಗಿದೆ.

ಪ್ರತಿಯೊಬ್ಬ ಮಾನವ ಜೀವಿಯು ಕಣ್ಣುಬಿಟ್ಟು ಬದುಕು ಪ್ರಾರಂಭಿಸುವುದು ಕುಟುಂಬದಲ್ಲಿ ಹಾಗೂ ಕೊನೆಯುಸಿರೆಳೆಯುವುದೂ ಕುಟುಂಬದಲ್ಲಿಯೇ. ಈ ಹಿನ್ನೆಲೆಯಲ್ಲಿ ಎಲ್ಲರೂ ಕುಟುಂಬವನ್ನು ಕೇಂದ್ರವಾಗಿರಿಸಿಕೊಂಡು ಬದುಕು ಸಾಗಿಸುತ್ತಿರುವುದು ಕಂಡುಬರುತ್ತದೆ. ಇದರಿಂದಾಗಿಯೆ ಕುಟುಂಬವು ಅತ್ಯಂತ ಮಹತ್ವದ ಸ್ಥಾನದಲ್ಲಿದ್ದು, ಇಂದಿಗೂ ತನ್ನ ಕಾರ್ಯ ನಿರ್ವಹಿಸುತ್ತಿದೆ. ಇಷ್ಟೊಂದು ಶ್ರೇಷ್ಠ ಸ್ಥಾನದಲ್ಲಿರುವ, ಮಾನವ ಜೀವಿಗಳಿಗೆ ನೆಮ್ಮದಿ ತಾಣಗಳಾಗಬೇಕಾಗಿರುವ ಕುಟುಂಬಗಳಲ್ಲಿ ಮಹಿಳೆಯರ ಮೇಲೆ ತನ್ನವರೆನಿಸಿಕೊಂಡವರಿಂದ ಆಕ್ರಮಣಗಳುಂಟಾಗುತ್ತಿವೆ. ಹೀಗಿರುವಾಗ ಮಹಿಳೆಯರು

ಬದುಕುವುದಾದರು ಎಲ್ಲಿ? ಪೂಜಿಸಲ್ಪಡುತ್ತಿರುವ ಸ್ಥಳದಲ್ಲಿಯೇ ಸಂಹಾರಕ್ಕೊಳಗಾದರೆ ನೆಮ್ಮದಿಯಿಂದ ಉಸಿರಾಡುವುದಾದರೂ ಹೇಗೆ? ಎಂಬ ಪ್ರಶ್ನೆ ಮೂಡದಿರದು. ಹೀಗೆ ಮಹಿಳೆ ತಾನು ಹುಟ್ಟಿ ಬದುಕು ನಡೆಸುವ ಕುಟುಂಬದಲ್ಲಿ ಹಿಂಸೆಗೊಳಗಾಗುತ್ತಿರುವುದು ಆಕೆಯ ಪಾಲಿನ ದುರಂತವೇ ಸರಿ. ಈ ಬಗೆಯ ಮಹಿಳೆಯರ ಜೀವನ ನಿರ್ವಹಣೆ ನಿಜಕ್ಕೂ ಮೂಕವೇದನೆ ಆಗಿದೆ. ಈ ತರಹದ ಮಹಿಳೆಯರ ಸ್ಥಿತಿ ಯಾವುದೇ ಗುಂಪು, ವಯಸ್ಸು, ಜಾತಿ, ವರ್ಗ, ವರ್ಣ, ಶಿಕ್ಷಿತರು, ಅಶಿಕ್ಷಿತರು, ವಿವಾಹಿತೆಯರು, ಅವಿವಾಹಿತೆಯರು, ವಿಧವೆಯರು, ದುಡಿಯುವ ಅಥವಾ ದುಡಿಯದಿರುವ ವರ್ಗದವರೆನ್ನದೇ ಇಡೀ ಮಹಿಳಾ ಸಂಕುಲವನ್ನು ಬಾಧಿಸುತ್ತಿರುವುದು ಕಂಡುಬರುತ್ತಿದೆ. ಈ ಬಾಧೆಗೆ ಚಿಕಿತ್ಸೆ ಎಂಬಂತೆ ಕಾನೂನುಗಳು ರಚನೆಗೊಂಡಿದ್ದರೂ ಸಹ ಅವು ವ್ಯವಸ್ಥೆಯ ತಂತ್ರಗಳಿಂದ ಜಡವಾಗಿರುವುದನ್ನು ಕಾಣಬಹುದಾಗಿದೆ.

ಪುರುಷ ಪ್ರಧಾನ ವ್ಯವಸ್ಥೆ ತನ್ನ ಅಸ್ತಿತ್ವದ ಉಳಿವಿಗಾಗಿ ಮಹಿಳೆಯರ ಮೇಲೆ ಹಿಂಸೆಯಂತಹ ಅಸ್ತ್ರವನ್ನು ಬಳಸುತ್ತಿದ್ದು, ಯಾಕೆ ಈ ಮಾರ್ಗವನ್ನು ಕಂಡುಕೊಂಡಿದೆ ಎಂಬುದನ್ನ ಅರಿಯಬೇಕಾಗುತ್ತದೆ. ಹಿಂಸೆ ಎನ್ನುವುದು ಜೀವ ಜಗತ್ತಿನ ಬಹು ದೊಡ್ಡ ಅಸ್ತ್ರ. ಇದು ಮಾಂಸಹಾರಿ ಪ್ರಾಣಿಗಳಲ್ಲಿ ಕೂಡಾ ನಿಸರ್ಗದತ್ತವಾಗಿ ಕಂಡುಬರುವ ಪ್ರವೃತ್ತಿಯಾಗಿದೆ. ಇದಕ್ಕೆ ಮಾನವ ಜನಾಂಗವೂ ಹೊರತಾಗಿಲ್ಲ. ಸೃಷ್ಟಿಯ ನಿಯಮದ ಪ್ರಕಾರ ಒಂದು ಪ್ರಾಣಿ ಮತ್ತೊಂದು ಪ್ರಾಣಿಯನ್ನು ತಿಂದು ಜೀವಿಸಬೇಕಾದ ಅನಿವಾರ್ಯತೆ ಇದೆ. ಇದು ಜೀವ ವಿಕಸನದ ಹಾದಿಯೂ ಸಹ. ಇದರಂತೆ ಮಾನವರು ಕೂಡಾ ಮೂಲದಲ್ಲಿ ಪ್ರಾಣಿಗಳನ್ನು ಬೇಟೆಯಾಡುವುದರ ಜೊತೆಗೆ ಗೆಡ್ಡೆ-ಗೆಣಸುಗಳನ್ನು ತಿಂದು ಜೀವಿಸುತ್ತಿದ್ದರು. ಈಗಲೂ ಸಹ ಮನುಷ್ಯ ಪ್ರಾಣಿಗಳ ಮಾಂಸವನ್ನು ಆಹಾರವಾಗಿ ಸೇವಿಸುತ್ತಿರುವುದು ರೂಢಿಯಲ್ಲಿದೆ. ಇದು ಜೀವ ವಿಜ್ಞಾನದ ನಿಯಮವು ಕೂಡಾ.

ಜೀವಿಗಳ ಹಸುವಿನ ಪ್ರಶ್ನೆ ಅತ್ಯಂತ ಸ್ವಾಭಾವಿಕವಾದದ್ದು. ಒಂದು ಜೀವದ ಉಳಿವಿಗಾಗಿ ಇನ್ನೊಂದು ಜೀವವನ್ನು ಬಲಿ ತೆಗೆದುಕೊಳ್ಳಬೇಕಾಗುತ್ತದೆ. ಪ್ರಕೃತಿ ನೀಡಿದ ಈ ನಡಾವಳಿಗೆ ಎಲ್ಲಾ ಜೀವ ಸಂಕುಲ ಬದ್ಧವಾಗಿದೆ. ಆದರೆ ತಮ್ಮದೇ ವರ್ಗದ ಜೀವಿಯನ್ನ ತಿಂದು ಜೀವಿಸುವ ಬಗೆಯನ್ನು ಸೃಷ್ಠಿ ಎಂದೂ ನೀಡಿಲ್ಲ. ಇದೆಲ್ಲವನ್ನು ಸೃಷ್ಟಿಸಹಜ ಧರ್ಮ ಎಂದು ಹೇಳಬಹುದು. ಯಾವಾಗ ಮಾನವರು ಕೃಷಿಯನ್ನು ವ್ಯವಸ್ಥಿತ ನೆಲೆಯಲ್ಲಿ ಕಂಡುಕೊಂಡರೋ, ಆಗ ಕ್ರೂರ ಮೃಗಗಳೊಂದಿಗಿನ ಹೋರಾಟ ನಿಲ್ಲಿಸಿ, ಪ್ರಾಣಾಪಾಯ ತರದ ಸಾಧು ಪ್ರಾಣಿಗಳನ್ನು ಆಹಾರವಾಗಿಸಿ ಕೊಳ್ಳುವುದರ ಜೊತೆಜೊತೆಗೆ ಸಸ್ಯಾಹಾರಿಗಳಾಗಿ ಮಾರ್ಪಾಡಾದರು. ಮಾನವರ ಬದುಕಿನ ಈ ಹಂತದಲ್ಲಿ ಹಸಿವಿನ ಪ್ರಶ್ನೆಗಾಗಿ ಇತರೆ ಜೀವಗಳನ್ನು ಹಿಂಸೆಗೊಳಪಡಿಸುವ ಸಮರ, ಕೃಷಿಯಿಂದಾಗಿ ಕೊಂಚ ವಿರಾಮವನ್ನು ಪಡೆದುಕೊಂಡಿತು. ಕ್ರೂರ ಮೃಗಗಳೊಂದಿಗಿನ ಹೊಡೆದಾಟ ಅಪಾಯಕಾರಿ ಯಾಗಿದ್ದರಿಂದ ಅವರು ಬೇಟೆಯಾಡುವುದನ್ನು ಕ್ರಮೇಣ ಕಡಿಮೆ ಮಾಡಿದರು.

ಮಾನವರು ಪ್ರಾರಂಭದಲ್ಲಿ ಆಹಾರಕ್ಕಾಗಿ ಪ್ರಾಣಿಗಳನ್ನು ಬೇಟೆಯಾಡಿ ಕೊಲ್ಲುತ್ತಿದ್ದ ಕಾರ್ಯವನ್ನು ಹಿಂಸೆ ಎಂದು ಭಾವಿಸಿದ್ದರು. ಜೀವ ಜಗತ್ತಿನ ಭಾಗವಾಗಿ ರೂಢಿಯಿದ್ದ ಪ್ರಾಣಿಗಳನ್ನು ಕೊಂದು ತಿನ್ನುವ ಪ್ರಕ್ರಿಯೆ ಕೆಲವರಿಗೆ ಹಿಂಸೆ ಎಂದೆನಿಸಿದರೆ, ಇನ್ನು ಕೆಲವರಿಗೆ ಅದು ಹಿಂಸೆಯಾಗಿ

ಉಳಿಯಲಿಲ್ಲ. ಈ ಹಿನ್ನೆಲೆಯಲ್ಲಿಯೇ ಮಾನವ ಜನಾಂಗ ಎರಡು ಬಗೆಯ ಗುಂಪುಗಳಾಗಿ ನಿರ್ಮಾಣ ಗೊಂಡಿತು. ಒಂದು ಗುಂಪು ಪ್ರಾಣಿಗಳ ಮಾಂಸವನ್ನು ಆಹಾರವಾಗಿ ಸೇವಿಸಿದರೆ, ಮತ್ತೊಂದು ಗುಂಪು ಪ್ರಾಣಿಗಳನ್ನು ಕೊಂದು ತಿನ್ನುವುದು ಹಿಂಸೆ ಎಂದು ಪರಿಗಣಿಸಿ, ಮಾಂಸವನ್ನು ತಿನ್ನದೇ ಇರುವ ಗುಂಪಾಗಿ ನಿರ್ಮಾಣಗೊಂಡಿತು. ಈ ನೆಲೆಯಲ್ಲಿ ಹಿಂಸೆಯನ್ನು ಗ್ರಹಿಸಿದಾಗ, ಮಾನವರು ಜೀವವನ್ನು ತೆಗೆಯುವ ಪ್ರಕ್ರಿಯೆಯನ್ನು ಮಾತ್ರ ಹಿಂಸೆ ಎಂದು ಪೂರ್ವದಲ್ಲಿ ಭಾವಿಸಿಕೊಂಡಿರುವುದು ಗೋಚರವಾಗುತ್ತದೆ.

ಕಾಲಾನಂತರ ಮಾನವ ಜಗತ್ತು ಇದೆಲ್ಲವನ್ನು ಮರೆತು ಅಧಿಕಾರದ ಲಾಲಸೆಯಿಂದ ತನ್ನದೇ ವರ್ಗಕ್ಕೆ ಸೇರಿದ ಮಾನವರನ್ನು ಅಪಮಾನಗೊಳಿಸುವ, ಹತ್ಯೆಗೀಡು ಮಾಡುವ ಮೂಲಕ ಹಿಂಸಿಸುತ್ತಾ ಬಂದಿತು. ಅಧಿಕಾರದ ಆಸೆಯಿಂದ ಮಾನವರಲ್ಲಿ, ಅದರಲ್ಲೂ ಕುಟುಂಬದಲ್ಲಿ ವ್ಯಕ್ತಿ, ವ್ಯಕ್ತಿಗಳನ್ನು ಹಿಂಸಿಸುವ ಕೃತ್ಯಕ್ಕೆ ಇಳಿದರು. ಪುಲ್ಲಿಂಗಕ್ಕೆ ಸೇರಿದ ವರ್ಗದವರು ತಮ್ಮ ಕುಹಕ ಬುದ್ಧಿವಂತಿಕೆಯಿಂದ ಮತ್ತೊಂದು ಲಿಂಗದವರಾದ ಸ್ತ್ರೀ ಲಿಂಗದವರನ್ನು ಅಧಿಕಾರದ ಚುಕ್ಕಾಣಿಗಾಗಿ ಹಿಂಸಿಸುವ ಕೃತ್ಯಕ್ಕೆ ಕೈ ಹಾಕಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯನ್ನು ಇಟ್ಟುಕೊಂಡು ಲಿಂಗದ ಆಧಾರದ ಮೇಲೆ ನಡೆಯುತ್ತಿರುವ ಕೃತ್ಯವನ್ನು ಗಮನಿಸಿದಾಗ, ಮಹಿಳೆಯರ ಮೇಲಿನ ಹಿಂಸೆಯ ಹಿಂದಿನ ಆಶಯ, ವ್ಯಾಖ್ಯಾನ, ಸ್ವರೂಪ ಎಲ್ಲವೂ ಭಿನ್ನವಾಗುತ್ತಾ ಹೋಗುತ್ತದೆ. ಇದಕ್ಕೆ ಮೂಲಕಾರಣ ಪುರುಷಶಾಹಿ ವ್ಯವಸ್ಥೆಯ ಸ್ಥಾಪನೆ ಎಂಬುವುದು ಪ್ರಸ್ತುತ ಅಧ್ಯಯನದ ಮೂಲಕ ಸ್ಪಷ್ಟವಾಗುತ್ತದೆ. ಮನುಷ್ಯ ವರ್ಗಕ್ಕೆ ಸೇರಿದವರೆಲ್ಲರೂ ತಮ್ಮ ಆಹಾರಕ್ಕಾಗಿ ಪ್ರಾಣಿಗಳನ್ನು ಹಿಂಸಿಸಿದರೆ, ಅವರಲ್ಲೇ ಭಿನ್ನ ಲಿಂಗದವರಾದ ಪುರುಷ ವರ್ಗದವರು ತಮ್ಮದೇ ಗುಂಪಿಗೆ ಸೇರಿದ ಸ್ತ್ರೀ ಲಿಂಗದವರನ್ನು ಹಿಂಸಿಸುತ್ತಾ ಬಂದಿರುವುದು ಇತಿಹಾಸದುದ್ದಕ್ಕೂ ಗೋಚರವಾಗುತ್ತದೆ. ಈ ಹಿಂಸೆಯ ಕ್ರೂರತೆ ಎಷ್ಟಿದೆ ಎಂದರೆ ಸ್ತ್ರೀಯರ ಜೀವವನ್ನು ತೆಗೆಯುವಷ್ಟರ ಮಟ್ಟಿಗೆ ಬೆಳೆದು ನಿಂತಿದೆ. ಈ ರೀತಿಯಾಗಿ ಮಾನವ ಜೀವಸಂಕುಲದ ಗಂಡು ಹೆಣ್ಣೆಂಬ ಎರಡು ಪ್ರಭೇಧಗಳಲ್ಲಿ ತರತಮಗಳು ಸೃಷ್ಟಿಗೊಂಡಿರುವುದು ನಿಜಕ್ಕೂ ಆತಂಕಕಾರಿಯದ್ದಾಗಿದೆ. ಅಲ್ಲದೇ ಇದು ಸ್ತ್ರೀ ಜೀವ ಸಂಕುಲದ ಉಳಿವಿನ ಪ್ರಶ್ನೆಯಾಗಿದೆ.

ಮಾನವರು ಅಲೆಮಾರಿಯಾಗಿದ್ದ ಸಂದರ್ಭದಲ್ಲಿ ಹೆಣ್ಣಿನ ಬಗ್ಗೆ ಹೊಂದಿರದ ಈ ಧೋರಣೆಗಳು ಹೆಣ್ಣಿನ ವಿಶಿಷ್ಠ ಗುಣ, ಜ್ಞಾನ, ನಡಾವಳಿಗಳು, ಆಕೆ ಪಡೆದುಕೊಳ್ಳುತ್ತಿರುವ ಮಾನ್ಯತೆಗಳಿಂದ ಭಿನ್ನವಾಗುತ್ತಾ ಬಂದವು. ಪ್ರಕೃತಿಯ ಎಲ್ಲಾ ನಿಯಮಗಳ ಬಗ್ಗೆ ಅರಿತು ಜ್ಞಾನ ಸಂಪಾದಿಸಿದ ಮಹಿಳೆಯ ಮೇಲೆ ಪುರುಷ ಕುತಂತ್ರ ನೀತಿಯಿಂದ ಹಲವಾರು ತಂತ್ರಗಳನ್ನು ಹೆಣೆದು, ಸುಲಭವಾಗಿ ತನ್ನ ಹಿಡಿತ ಸಾಧಿಸಿಕೊಳ್ಳಲು ಪ್ರಯತ್ನಿಸಿ ಅದರಲ್ಲಿ ಸಫಲನಾದ. ಹೀಗೆ ಪುರುಷರು ಮಹಿಳೆಯರನ್ನು ಹಿಂಸಿಸುವಂತಹ ಹಲವಾರು ನಡಾವಳಿಗಳನ್ನು ಸಾಮಾಜಿಕ ಹಂದರದಲ್ಲಿ ನಿರ್ಮಾಣಗೊಳಿಸುತ್ತಾ ಬಂದರು. ಈ ನಡಾವಳಿಗಳಲ್ಲಿ ಕುಟುಂಬದೊಳಗೆ ನಡೆಸುತ್ತಿರುವ ಮಹಿಳೆಯರ ಮೇಲಿನ ಹಿಂಸೆಯಂತಹ ಅಸ್ತ್ರವೂ ಕೂಡ ಒಂದು.

ಮಹಿಳೆಯರ ಮೇಲೆ ಜರುಗುತ್ತಿರುವ ಕೌಟುಂಬಿಕ ಹಿಂಸೆ ಭಾರತದ ನೆಲೆಗಟ್ಟಿನ ಸಂದರ್ಭದಲ್ಲಿ ಅತ್ಯಂತ ಕ್ರೂರತೆಯಿಂದ ಮೆರೆದಿರುವುದು ಕಂಡುಬರುತ್ತದೆ. ಮಾನವತಾವಾದದ ಘೋಷಣೆಯೊಂದಿಗೆ

ಬದುಕು ನಡೆಸುತ್ತಿರುವ ಪ್ರಸ್ತುತ ಮಾನವ ಸಮಾಜದಲ್ಲಿ ಇಂತಹ ಕೃತ್ಯದ ಹಿಂದಿನ ನಿಜವಾದ ಮರ್ಮ ಏನು? ಮತ್ತು ಯಾವೆಲ್ಲಾ ತಂತ್ರಗಳನ್ನು ಹೂಡಿ ತನ್ನ ಅಸ್ತಿತ್ವವನ್ನು ಸಾಧಿಸಿಕೊಳ್ಳುತ್ತಿದೆ ಎಂದು ಅರಿಯಲು ಸ್ತ್ರೀವಾದಿ ದೃಷ್ಟಿಕೋನ ಒಂದೇ ಸರಿಯಾದ ಮಾರ್ಗವಾಗಬಲ್ಲದ್ದಾಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಸಾಕಷ್ಟು ಸ್ತ್ರೀವಾದಗಳು ಹುಟ್ಟಿಕೊಂಡು ಅವು ತಮ್ಮದೇ ಆದ ಅಧ್ಯಯನಗಳ ದೃಷ್ಟಿಕೋನದಿಂದ ಮಹಿಳಾ ಸಮಸ್ಯೆಗಳಿಗೆ, ಅದರಲ್ಲೂ ಕೌಟುಂಬಿಕ ಹಿಂಸೆಯಂತಹ ಸಮಸ್ಯೆಗೆ ಕಾರಣವೇನು ಎಂಬುದನ್ನ ಪತ್ತೆ ಹಚ್ಚಿ ಪರಿಹಾರ ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿವೆ. ಆದರೆ ಇವುಗಳನ್ನು ಅನ್ವಯಿಸಿಕೊಳ್ಳುವಲ್ಲಿ ಮಾತ್ರ ಸಮಾಜ ಮುಂದಾಗುತ್ತಿಲ್ಲ. ಇದರಿಂದಾಗಿ ದಿನೇ ದಿನೇ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳು ಹೆಚ್ಚೆಚ್ಚು ಹುಟ್ಟಿಕೊಳ್ಳುತ್ತಲೇ ಸಾಗಿವೆ. ಈ ಹಿನ್ನೆಲೆಯಲ್ಲಿ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳನ್ನು ಕ್ಷೇತ್ರಕಾರ್ಯದ ಮೂಲಕ ಅಧ್ಯಯನಕ್ಕೊಳಪಡಿಸಿ, ಅದನ್ನು ಪೂರಕವಾಗಿ ಸ್ತ್ರೀವಾದಿ ದೃಷ್ಟಿಕೋನದ ಮೂಲಕ ವಿಶ್ಲೇಷಣೆ ಗೊಳಪಡಿಸುವುದು ಅಗತ್ಯವಾಗಿದೆ. ಈ ಪೂರ್ವಾಪರದೊಂದಿಗೆ ಸಂಶೋಧನೆಯಿಂದ ಪಡೆದ ಮಾಹಿತಿಯನ್ನು ವಿಶ್ಲೇಷಣೆ ಗೊಳಪಡಿಸುವ ಅಗತ್ಯತೆಯನ್ನು ಪ್ರಸ್ತುತ ಸಂಶೋಧನಾ ಅಧ್ಯಯನ ಹೊಂದಿದೆ.

ಪುರುಷ ಪ್ರಧಾನ ವ್ಯವಸ್ಥೆ ಅತ್ಯಂತ ಪ್ರಾಚೀನವಾಗಿ, ಅಂದರೆ ಮಾನವ ಜನಾಂಗದ ನಾಗರಿಕತೆಯ ಕಾಲಘಟ್ಟದಲ್ಲಿ ತನ್ನ ಚಹರೆಯನ್ನು ಪಡೆದುಕೊಂಡು, ಇಷ್ಟು ಶತಮಾನಗಳ ಕಾಲ ಎಲ್ಲರನ್ನು ಆಳುತ್ತಲೆ ಬಂದಿದೆ. ಇದು ಕಾಲಘಟ್ಟ ಬದಲಾದಂತೆ ಸಾಂಸ್ಕೃತಿಕ ಪಲ್ಲಟಗಳ ಮೂಲಕ ತನ್ನ ಅಸ್ತಿತ್ವವನ್ನು ಗಟ್ಟಿಗೊಳಿಸುತ್ತಾ ಭಿನ್ನ ರೂಪ ಪಡೆದುಕೊಂಡು ಹೊರಟಿರುವುದು ಗೋಚರವಾಗುತ್ತದೆ. ಇಷ್ಟೊಂದು ದೀರ್ಘ ಇತಿಹಾಸವಿರುವ ವ್ಯವಸ್ಥೆಯನ್ನು ಹೊಡೆದು ಹಾಕಿ ಹೊಸ ಮಾನವತಾವಾದದ ಸಮಾಜವೊಂದನ್ನು ಕಟ್ಟುವುದು ಅಷ್ಟು ಸುಲಭದ ಸಂಗತಿಯಲ್ಲ. ಇದಕ್ಕೆ ದೀರ್ಘಕಾಲದ ಹೋರಾಟವೇ ಬೇಕಾಗುತ್ತದೆ. ಹಾಗೂ ಪುರುಷ ಪ್ರಧಾನ ವ್ಯವಸ್ಥೆಯನ್ನು ಭೇದಿಸಲು, ಅಲ್ಲಿ ಮಹಿಳೆಯರ ವಿರುದ್ಧವಾಗಿ ಹೆಣೆಯುತ್ತಿರುವ ತಂತ್ರಗಳನ್ನು ಅರಿಯಲು ಸೂಕ್ತ ಅಸ್ತ್ರಗಳ ಬಳಕೆ ಮಾಡಬೇಕಾಗುತ್ತದೆ. ಅಂದರೆ, ವ್ಯವಸ್ಥೆಯು ತನ್ನ ಅಸ್ತಿತ್ವವನ್ನು ಸ್ಥಿರವಾಗಿ ಸ್ಥಾಪಿತಗೊಳಿಸಲು ಯಾವೆಲ್ಲಾ ತಂತ್ರಗಳನ್ನು ಬಳಸಿಕೊಂಡಿದೆ ಎಂಬುವುದನ್ನು ಮೊದಲು ಕಂಡುಕೊಳ್ಳಬೇಕಾಗುತ್ತದೆ. ತದನಂತರ ಇದಕ್ಕೆ ಬೇಕಾದ ಪ್ರತಿತಂತ್ರಗಳನ್ನ ಕಂಡುಕೊಂಡು ಪ್ರಯೋಗಿಸಬೇಕಾಗುತ್ತದೆ. ಅಂದಾಗ ಮಾತ್ರ ಪುರುಷ ಪ್ರಧಾನ ವ್ಯವಸ್ಥೆಯ ಕಪಿಮುಷ್ಟಿಯಿಂದ ಎಲ್ಲರೂ ಬಿಡಿಸಿಕೊಳ್ಳಲು ಸಾಧ್ಯ

ಯಾವುದೇ ಒಂದು ಮಹಿಳಾ ಸಂಬಂಧಿ ಸಂಗತಿಗಳನ್ನು ಸ್ತ್ರೀವಾದಿ ದೃಷ್ಟಿಕೋನ ಇಲ್ಲದೆ ಅರ್ಥೈಸಹೊರಟರೆ ಅವುಗಳ ನೈಜ ರೂಪ ಗಮನಕ್ಕೆ ಬಾರದೇ ಹೋಗುತ್ತದೆ. ಇದಷ್ಟೇ ಅಲ್ಲದೇ ಪ್ರಸ್ತುತ ಸಾಮಾಜಿಕ ಸಂದರ್ಭದಲ್ಲಿ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳಿಗೆ ದೊರಕುವ ಮಾರ್ಗೋಪಾಯ ಒಂದಿದೆ, ಅದು ಕಾನೂನು ವ್ಯವಸ್ಥೆಯಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಮಹಿಳೆಯರು ತಮ್ಮ ಮೇಲೆ ಆಗುತ್ತಿರುವ ದೌರ್ಜನ್ಯಗಳನ್ನು ಕಾನೂನಿನ ಮೂಲಕ ಬಗೆಹರಿಸಿ ಕೊಳ್ಳಬಹುದಾಗಿದೆ.

ಹೀಗೊಂದು ಮಾರ್ಗ ಇದೆ ಎಂದು ಅರಿತಾಗಿಯೂ ಸಹ ಅದೆಷ್ಟೋ ಮಹಿಳೆಯರು ಇನ್ನೂ ಕೌಟುಂಬಿಕ ಹಿಂಸೆಯಂತಹ ಸಮಸ್ಯೆಯಿಂದ ಮುಕ್ತಿ ಕಂಡುಕೊಂಡಿಲ್ಲ. ಆದರೆ ಕಾನೂನು ಮಹಿಳೆಯರ ಸಮಸ್ಯೆಗೆ ಎಷ್ಟರ ಮಟ್ಟಿಗೆ ಸಹಾಯಕವಾಗುತ್ತದೆ ಎಂದು ಆಯ್ದ ಪ್ರಕರಣಗಳೊಂದಿಗೆ ಪ್ರಸ್ತುತ ಅಧ್ಯಯನದಲ್ಲಿ ಚರ್ಚೆಗೊಳಪಡಿಸಲಾಗಿದೆ.

ವಿವಿಧ ಕಾಲಘಟ್ಟದಲ್ಲಿ ಮಹಿಳೆಯರ ಮೇಲೆ ಹಿಂಸೆ

ಮಾನವ ಸಂಸ್ಕೃತಿಯ ಮೂಲ ಕ್ರಿ. ಪೂ ೨೦೦೦ ವರ್ಷಗಳ ಹಿಂದಿನದ್ದು. ಅಲ್ಲಿ ಮಾನವರ ಸ್ಥಿತಿಗತಿಗಳನ್ನು ತಿಳಿಸುವ ಸಂಶೋಧನಾ ದಾಖಲೆಗಳನ್ನು ಗಮನಿಸಿದಾಗ ಮಹಿಳೆಯರಿಗೆ ಮತ್ತು ಪುರುಷರಿಗೆ ಸಮಾನ ಅವಕಾಶಗಳಿದ್ದವೆಂದು ತಿಳಿದು ಬರುತ್ತದೆ. ಕ್ರಿ. ಪೂ ೨೦೦೦ ವರ್ಷಗಳ ಹಿಂದಿನ ದಾಖಲೆಗಳೆಂದರೆ ಅದು ನಾಗರಿಕತೆಗಳ ಕಾಲ. ಇಂದಿನ ಸಮಾಜದ ಕುರುಹು ಆಗಿರುವಂತಹ ಸಿಂಧೂ ಬಯಲಿನ ನಾಗರಿಕತೆಯಿಂದ ಹಿಡಿದು, ಇತರೆ ಅಂತರಾಷ್ಟ್ರೀಯ ನಾಗರಿಕತೆಗಳ ದಾಖಲೆಗಳೆಲ್ಲವನ್ನೂ ಗಮನಿಸಿದಾಗ, ಎಲ್ಲಿಯೂ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳು ಸಹಜವಾಗಿ ಅಪರಾಧಗಳಲ್ಲ ಎಂಬಂತೆ ನಡೆದಿರುವುದು ಕಂಡುಬರುತ್ತದೆ. ಆದರೆ ಈ ಮೂಲ ದಾಖಲೆಗಳನ್ನು ಸ್ತ್ರೀವಾದಿ ದೃಷ್ಟಿಕೋನದ ಮೂಲಕ ಗಮನಿಸಿದಾಗ, ಮಹಿಳೆಯರ ಕೌಟುಂಬಿಕ ಸ್ಥಿತಿಗತಿ ಈಗ ಹೇಗಿದೆಯೋ ಅದೇ ತರನಾಗಿ ಆ ಕಾಲ ಘಟ್ಟಗಳಲ್ಲಿಯೂ ಇದ್ದಿರುವುದು ಕಂಡುಬರುತ್ತದೆ.

ಮಹಿಳೆಯರು ಅನುಭವಿಸುತ್ತಿರುವ ಕೌಟುಂಬಿಕ ಹಿಂಸೆಯನ್ನು ಮೂಲವಾಗಿಸಿಕೊಂಡು ಮೊದಲಿಗೆ ದೇಶಿ ನಾಗರಿಕತೆಯ ಮೂಲವನ್ನು ಪರಿಶೀಲಿಸ ಹೊರಟರೆ ಅಲ್ಲಿ ಸಿಗುವುದು ಸಿಂಧೂಬಯಲಿನ ನಾಗರಿಕತೆಯ ಕುರುಹುಗಳು. ಪ್ರಾಚೀನ ಭಾರತದ ಇತಿಹಾಸಕ್ಕೆ ಮುನ್ನುಡಿ ಈ ಸಿಂಧೂಬಯಲಿನ ನಾಗರಿಕತೆ. ಈ ನಾಗರಿಕತೆಯ ಕುರುಹುಗಳನ್ನೆಲ್ಲಾ ಆಧಾರವಾಗಿಟ್ಟುಕೊಂಡು ಅವಲೋಕಿಸಿದಾಗ, ಅಲ್ಲಿ ಮಹಿಳೆಯರು ಕೌಟುಂಬಿಕ ದೌರ್ಜನ್ಯಕ್ಕೊಳಪಡುತ್ತಿದ್ದರು ಎಂಬುವುದಕ್ಕೆ ಯಾವುದೇ ಖಚಿತವಾದ ಮಾಹಿತಿಗಳು ದೊರೆಯುವುದಿಲ್ಲ. ಆದರೆ ಅಲ್ಲಿ ಸ್ತ್ರೀ-ಪುರುಷರ ನಡುವೆ ಲಿಂಗ ಭೇದಗಳಿದ್ದವು ಎಂಬುವುದಕ್ಕೆ ಹಲವಾರು ಉತ್ಖನನಗಳು ಸಾಕ್ಷಿಯಾಗುತ್ತವೆ. ಉದಾಹರಣೆಗೆ, ಆ ಕಾಲದಲ್ಲಿಯ ನರ್ತಕಿಯರ ಪ್ರತಿಮೆಗಳನ್ನು ಗಮನಿಸಿದಾಗ ಹೆಣ್ಣನ್ನು ಸೌಂದರ್ಯದ ಪ್ರತೀಕವೆಂಬಂತೆ ಕಾಣಲಾಗುತ್ತಿತ್ತು ಎಂಬುವುದು ಸ್ಪಷ್ಟವಾಗುತ್ತದೆ. ಅಲ್ಲದೇ ಆ ಕಾಲದಲ್ಲಿ ಮಹಿಳೆಯರು ಧರಿಸುತ್ತಿದ್ದ ಕಾಲುಂಗುರ ಹಾಗೂ ತಾಳಿಗಳು ಹೆಣ್ಣು ಪುರುಷನ ಅಧೀನಳಾಗಿದ್ದಳು ಎಂಬುವುದನ್ನು ಸಾಕ್ಷೀಕರಿಸುತ್ತವೆ.

ಹಾಗೆಯೇ ಅಂತರ್‌ರಾಷ್ಟ್ರೀಯ ನಾಗರಿಕತೆಗಳನ್ನು ಗಮನಿಸಿದಾಗ, ಬೆಬಿಲೋನಿಯನ್ ನಾಗರಿಕತೆಯ ಸಂದರ್ಭದಲ್ಲಿ ಹೆಣ್ಣು ಸಂಪೂರ್ಣ ಸ್ವಾತಂತ್ರ್ಯ ಹಾಗೂ ಉತ್ತಮ ಸ್ಥಾನಮಾನಗಳನ್ನು ಹೊಂದಿದ್ದಳೆಂದು ದಾಖಲೆಗಳು ತಿಳಿಸುತ್ತವೆ. ಕ್ರಿ.ಪೂ. ೧೮ನೇ ಶತಮಾನದ ಹಮ್ಮೂರಾಬಿಯ (ಬೇಬಿಲೋನಿಯ ರಾಜ) ಶಾಸನದಲ್ಲಿ ವಿವಾಹಿತ ಮಹಿಳೆಗೆ ವೈಯಕ್ತಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ನೀಡಿರುವುದು ದಾಖಲಾಗಿದೆ. ಆ ಕಾಲದಲ್ಲಿ ನೀಡಲಾಗುತ್ತಿದ್ದ ಕನ್ಯಾ ಶುಲ್ಕಕ್ಕೆ ಸೇರಿದ ಜಮೀನು ಮತ್ತು ಇತರೆ

ಆಸ್ತಿಗಳು ಹೆಣ್ಣಿಗೆ ಸೇರಿದವುಗಳಾಗಿದ್ದವು. ವಿವಾಹವು ಹೆಣ್ಣು-ಗಂಡುಗಳ ಇಚ್ಛೆಯನ್ನಾಧರಿಸಿತ್ತು. ಯಾವುದೇ ಹೆಣ್ಣು ತಾನು ಇಚ್ಛಿಸಿದಲ್ಲಿ ತನ್ನ ಗಂಡನಿಂದ ವಿಚ್ಛೇದನ ಪಡೆದು ತನಗೆ ಸೇರಿದ ಆಸ್ತಿಯೊಡನೆ ತವರಿಗೆ ಮರಳಬಹುದಾಗಿತ್ತು. ಈ ಕಾಲಘಟ್ಟದಲ್ಲಿ ಹೆಣ್ಣು ತನ್ನ ಗಂಡನ ಕ್ರೌರ್ಯವನ್ನಾಗಲಿ, ಶೋಷಣೆ, ದಬ್ಬಾಳಿಕೆಗಳನ್ನಾಗಲಿ ಸಹಿಸಿಕೊಂಡು ಬದುಕಬೇಕಾಗಿರಲಿಲ್ಲ. ಗಂಡನ ಕ್ರೂರತೆ ಅಥವಾ ವಂಚನೆಯ ಆಧಾರದ ಮೇಲೆಯೇ ಆತನಿಗೆ ವಿಚ್ಛೇದನೆ ನೀಡಬಹುದಾಗಿತ್ತು[9] ಎಂದು ತಿಳಿದುಬರುತ್ತದೆ. ಈ ಮಾಹಿತಿಗಳಿಂದಾಗಿ ಮಹಿಳೆಯರಿಗೆ ಸಂಪೂರ್ಣ ಸ್ವಾತಂತ್ರ್ಯವಿತ್ತು, ಸಮಾನ ಅವಕಾಶಗಳಿದ್ದವು ಎಂಬುದನ್ನು ಸಮಾಜಶಾಸ್ತ್ರಜ್ಞರು ಹೇಳುವುದಾದರೆ, ಕನ್ಯಾ ಶುಲ್ಕ ಮತ್ತು ಪುರುಷ ಸ್ಥಾನೀಯತೆ ಎಂಬ ಪುರುಷ ಪ್ರಧಾನ ಸಾಮಾಜಿಕ ರೂಪುರೇಷೆಗಳು ಏನನ್ನು ಸೂಚಿಸುತ್ತವೆ ಎಂಬ ಪ್ರಶ್ನೆ ಮೂಡುತ್ತದೆ. ಹೆಣ್ಣು ಗಂಡನಿಂದ ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾದರೆ ಆಕೆ ವಿಚ್ಛೇದನೆ ಪಡೆಯಬಹುದೆಂಬ ಅನುಕೂಲತೆಯ ಜೊತೆಗೆ ಆಕೆ ಮತ್ತೆ ತವರಿಗೆ ಬಂದು (ಪುರುಷ ಕೇಂದ್ರಿತ ನೆಲೆ) ಬಾಳಬೇಕಿತ್ತು. ಇದು ಆಕೆಗೆ ಸ್ವತಂತ್ರವಾದ ನೆಲೆಗಳಿರಲಿಲ್ಲ ಎಂಬುವುದನ್ನು ಸ್ಪಷ್ಟಪಡಿಸುತ್ತದೆ. ಜೊತೆಗೆ ವಿಚ್ಛೇದನೆಯ ನಂತರ ಮಕ್ಕಳ ಪಾಲನೆ ಪೋಷಣೆಯನ್ನು ಹೆಣ್ಣಿನ ಕಾರ್ಯವ್ಯಾಪ್ತಿಗೆ ನೀಡುವ ಮೂಲಕ ಅದು ಸ್ತ್ರೀಯರದ್ದೇ ಜವಾಬ್ದಾರಿ ಎಂದು ಪುರುಷರನ್ನು ಅಂತಹ ಜವಾಬ್ದಾರಿಯಿಂದ ಮುಕ್ತಗೊಳಿಸಿರುವುದು ಕಂಡುಬರುತ್ತದೆ.

ಹೆಣ್ಣಿಗೆ ಹೇರಲ್ಪಡುವ ಈ ಬಗೆಯ ಜವಾಬ್ದಾರಿ ಆಕೆಯ ಕಾರ್ಯ ಕೌಶಲ್ಯತೆಯನ್ನು ಕೇವಲ ಒಂದು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರಿಸಿ ಕೊಳ್ಳುವಂತೆ ಮಾಡಿರುವುದು ತಿಳಿದುಬರುತ್ತದೆ. ಹೆಣ್ಣೆಂದರೆ ಕೇವಲ ಮಕ್ಕಳ ಹೆರುವಿಕೆ, ಪಾಲನೆ, ಪೋಷಣೆಗಳಷ್ಟಕ್ಕೆ ಸೀಮಿತವಾಗಿರುವಂತೆ ಮಾಡಿದೆ. ಇದರಿಂದಾಗಿ ಪುರುಷ ವಿನಾಯಿತಿ ಪಡೆದುಕೊಂಡು ತನ್ನ ಅಧಿಕಾರನ್ನು ಸ್ಥಾಪಿಸುವಲ್ಲಿ ಯಶಸ್ವಿಯಾಗಿರುವುದು ಕಂಡುಬರುತ್ತದೆ. ಬೆಬಿಲೋನಿಯನ್ ನಾಗರಿಕತೆಯಲ್ಲಿ ಮಹಿಳೆ ಗಂಡನಿಂದ ದೌರ್ಜನ್ಯಕ್ಕೊಳಗಾದಾಗ ಅಲ್ಲಿಂದ ಪಲಾಯನ ಮಾಡುವುದೇ ಹೆಣ್ಣಿಗೆ ದೊರೆತ ಸಮಾನ ಅವಕಾಶ ಎಂದು ಹೇಳುವುದು ತುಂಬಾ ಹಾಸ್ಯಾಸ್ಪದವೆನಿಸುತ್ತದೆ. ಗಂಡನಿಂದ ತೊಂದರೆಗೊಳಗಾದಾಗ ಆಕೆ ಅದರಿಂದ ಮುಕ್ತಿ ಹೊಂದಬಹುದಿತ್ತೆಂದು ಹೇಳುವ ಹಿನ್ನೆಲೆಯಲ್ಲಿ ತಂದೆಯ ಮನೆಗೆ ಬಂದು ವಾಸಿಸುವಂತೆ ಸೂಚಿಸಿ, ಆ ಮೂಲಕ ಮತ್ತೆ ಪುರುಷ ಕೇಂದ್ರಿತ ನೆಲೆಯನ್ನು ಗಟ್ಟಿಗೊಳಿಸಿ ಕೊಂಡಿರುವುದು ಬೆಬಿಲೋನಿಯನ್ ನಾಗರಿಕತೆಯಲ್ಲಿ ಕಂಡುಬರುತ್ತದೆ.

ಇನ್ನು ಸ್ಪಾರ್ಟಾ (ಗ್ರೀಕ್) ನಾಗರಿಕತೆಯ ಜನ ಜೀವನವನ್ನು ಹೆರೊಡೊಟಸ್ ದಾಖಲಿಸುವಂತೆ, 'ಸ್ಪಾರ್ಟಾದಲ್ಲಿ ಸ್ತ್ರೀಯರು ಸೈನಕರಾಗಿದ್ದು, ಪುರುಷರೊಂದಿಗೆ ಸರಿಸಮಾನವಾಗಿ ಸಾರ್ವಜನಿಕ ಸೇವೆಯಲ್ಲಿ ತೊಡಗಿದ್ದರು. ಕ್ರೀಡೆಗಳಲ್ಲಿ, ಮುಷ್ಠಿ ಯುದ್ಧದಲ್ಲಿ ಸ್ತ್ರೀಯು ಪುರುಷರೊಡನೆ ಭಾಗವಹಿಸಿ ಪುರುಷರನ್ನು ಸೋಲಿಸಿ ಜಯಭೇರಿ ಬಾರಿಸುತ್ತಿದ್ದರು. ಸಾರ್ವಜನಿಕ ಕ್ಷೇತ್ರವನ್ನು ಪ್ರತಿನಿಧಿಸುವ ಹಾಗೂ ಯಾವುದೇ ಕಟ್ಟುಪಾಡುಗಳಿಗೆ ಹೊರತಾದ ಬದುಕನ್ನು ಸ್ತ್ರೀಯರು ಬದುಕುತ್ತಿದ್ದರು' ಎಂದು ದಾಖಲಿಸಲಾಗಿದೆ. ಆದರೆ ಇನ್ನು ಕೆಲವು ಮಾಹಿತಿಗಳ ಮೂಲಕ ಸ್ಪಾರ್ಟಾ ನಾಗರಿಕತೆಯಲ್ಲಿನ ಮಹಿಳೆಯರ ಸ್ಥಿಗತಿಗಳನ್ನು ಗಮನಿಸಿದಾಗ ಅಲ್ಲಿ ಮಹಿಳೆಯರನ್ನು ಮಿಲಿಟರಿ ಹಾಗೂ ರಾಜಕೀಯದಿಂದ

ಸಂಪೂರ್ಣವಾಗಿ ಹೊರಗಿಡಲಾಗಿತ್ತು. ಆದರೆ ಮನೆಯ ಆರ್ಥಿಕ ನಿರ್ವಹಣೆಯನ್ನು ಸಂಪೂರ್ಣವಾಗಿ ಮಹಿಳೆಯರಿಗೆ ವಹಿಸಿಕೊಡಲಾಗಿತ್ತೆಂಬುದು ತಿಳಿದುಬರುತ್ತದೆ. ಈ ರೀತಿ ಮಹಿಳೆಯರನ್ನು ಮನೆಗೆ ಸೀಮಿತಗೊಳಿಸಿರುವುದು ಪುರುಷ ಪ್ರಧಾನ ವ್ಯವಸ್ಥೆಯ ರಾಜಕಾರಣವೆಂಬುದು ಮೇಲ್ನೋಟಕ್ಕೆ ತಿಳಿದುಬರುತ್ತದೆ. ಮಿಲಿಟರಿ ಕ್ಷೇತ್ರದಿಂದ ಮಹಿಳೆಯರನ್ನು ಸಂಪೂರ್ಣವಾಗಿ ಹೊರಗಿಟ್ಟಿರುವುದು ಅಲ್ಲಿ ಹೆಣ್ಣು-ಗಂಡುಗಳ ಮಧ್ಯೆ ಲಿಂಗಾಧಾರಿತ ಶ್ರಮವಿಭಜನಾ ನೀತಿ ಇತ್ತೆಂಬುವುದನ್ನು ತಿಳಿಸುತ್ತದೆ.

ಇನ್ನು ರೋಮ್ ನಾಗರಿಕತೆಯನ್ನು ಗಮನಿಸಿದಾಗ, ಅಲ್ಲಿನ ಸಾಮಾಜಿಕ ವ್ಯವಸ್ಥೆಯಲ್ಲಿ ಮದುವೆ, ವರದಕ್ಷಿಣೆ ಪದ್ಧತಿ, ಮದುವೆಯ ನಂತರ ಪತಿಯ ಮನೆಗೆ ಹೋಗಿ ವಾಸಿಸುವುದು ಹಾಗೂ ಮಹಿಳೆಯರನ್ನು ಸೌಂದರ್ಯದ ಪ್ರತೀಕಗಳನ್ನಾಗಿರಿಸಿರುವುದು ಕಂಡುಬರುತ್ತದೆ. ಇವೆಲ್ಲವುಗಳು ರೋಮ್ ನಾಗರಿಕತೆಯಲ್ಲಿನ ಲಿಂಗ ಅಸಮಾನತೆಗಳನ್ನು ಎತ್ತಿ ತೋರಿಸುತ್ತವೆ. ಜೊತೆಗೆ ಪ್ರಾಚೀನ ಈಜಿಪ್ಟ್ ನಾಗರಿಕತೆಯಲ್ಲೂ ಮಹಿಳೆಯರಿಗೆ ಇದೇ ತೆರನಾದ ಸ್ಥಾನಮಾನಗಳಿರುವುದು ಕಂಡುಬರುತ್ತದೆ. ಹೆಚ್ಚು ಕಡಿಮೆ ಇವೆಲ್ಲವೂ ಸಮಕಾಲೀನ ನಾಗರಿಕತೆಗಳಾಗಿದ್ದರಿಂದ ಅಲ್ಲಿ ಮಹಿಳೆಯ ಸ್ಥಾನಮಾನಗಳು ಒಂದೇ ತೆರನಾಗಿದ್ದವೆಂದು ಹೇಳಬಹುದು.

ಪ್ರಾಚೀನ ಭಾರತದ ಇತಿಹಾಸದಲ್ಲಿ ಸ್ತ್ರೀಯರ ಸ್ಥಾನಮಾನ

ಪ್ರಾಚೀನ ಭಾರತದ ಮೂಲ ದಾಖಲೆಗಳಾಗಿ ಲಭ್ಯವಾಗುವ ಆಕರಗಳೆಂದರೆ ಅದು ವೇದಗಳ ಕಾಲ ಮತ್ತು ಮಹಾಕಾವ್ಯಗಳ ಸಂದರ್ಭಗಳು. ಈ ಕಾಲದಲ್ಲಿ ದಾಖಲಾಗಿರುವ ಮಾಹಿತಿಗಳನ್ನು ಒಂದೊಂದಾಗಿ ಅಭ್ಯಸಿಸಿದಾಗ ಅಲ್ಲಿ ಮಹಿಳೆಯರ ಸ್ಥಾನಮಾನಗಳು ಪುರುಷರಿಗಿಂತ ಕೆಳ ಮಟ್ಟದ್ದಾಗಿದ್ದವೆಂಬುದು ತಿಳಿದುಬರುತ್ತದೆ. ಅಂದಿನ ಕಾಲದ ವೈದಿಕ ಸಂಹಿತೆಗಳು, ಬ್ರಾಹ್ಮಣಗಳು ಮತ್ತು ಉಪನಿಷತ್ತುಗಳು ಕೇವಲ ಮೇಲುಸ್ತರದ ಮಹಿಳೆಯರ ಬಗ್ಗೆ ಮಾಹಿತಿ ಒದಗಿಸಿರುವುದನ್ನು ಕಾಣಬಹುದಾಗಿದೆ. ಅವುಗಳನ್ನು ಗಮನಿಸಿದಾಗ ಮೇಲ್ವರ್ಗದ ಮಹಿಳೆಯರ ಸ್ಥಾನಮಾನಗಳು ಪುರುಷರಿಗಿಂತ ಕೆಳಮಟ್ಟದ್ದಾಗಿದ್ದವು ಎಂಬುವುದು ಕಂಡುಬರುತ್ತದೆ. ಮೇಲ್ವರ್ಗದ ಮಹಿಳೆಯರ ಸ್ಥಿತಿಗತಿಗಳೇ ಹೀಗಾದರೆ ಇನ್ನು ಮಧ್ಯಮ ಮತ್ತು ಕೆಳ ಸ್ತರದ ಹೆಣ್ಣು ಮಕ್ಕಳ ಸ್ಥಿತಿ ಹೇಗಿತ್ತೆಂಬುವುದನ್ನು ಪ್ರಶ್ನಾರ್ಹವಾಗಿ ಕಾಣಬೇಕಾಗುತ್ತದೆ. ದಾಖಲೆಗೂ ಬಾರದ ಆ ಮಹಿಳೆಯರ ಪರಿಸ್ಥಿತಿ ತೀರಾ ಕೆಳಮಟ್ಟದ್ದಾಗಿರಬಹುದೆಂದು ಊಹಿಸಬಹುದಾಗಿದೆ.

ಆದರೆ ಖ್ಯಾತ ಸಮಾಜಶಾಸ್ತ್ರಜ್ಞರಾದ ಆರ್.ಸಿ. ದತ್, ಪಿ.ಸಿ. ಮಿತ್ರ ಹಾಗೂ ಇತರರು ಹೇಳುವುದೇನೆಂದರೆ, ವೇದಗಳ ಕಾಲದಲ್ಲಿ ಎಲ್ಲೂ ಹೆಣ್ಣಿನ ಹುಟ್ಟಿನ ಬಗ್ಗೆ ಅಷ್ಟೊಂದು ಅಸಂತುಷ್ಟಿ ಇರಲಿಲ್ಲ ಎನ್ನುತ್ತಾರೆ. ಸ್ತ್ರೀ-ಪುರುಷರಿಗೆ ಸರಿಸಮಾನವಾದ ಸ್ಥಾನ-ಮಾನಗಳು ಲಭ್ಯವಿದ್ದವು ಎಂದು ತಮ್ಮ ಅಧ್ಯಯನದ ಮೂಲಕ ತಿಳಿಸುತ್ತಾರೆ. ಇದಕ್ಕೆ ಒಂದು ಉದಾಹರಣೆಯನ್ನು ನೀಡುತ್ತಾರೆ. ಯಜ್ಞವಲ್ಕ್ಯನು ಜಗತ್ತನ್ನು ತ್ಯಜಿಸಲು ನಿರ್ಧರಿಸಿದಾಗ ತನ್ನ ಎಲ್ಲಾ ಆಸ್ತಿಯನ್ನು ತನ್ನ ಪತ್ನಿಯರಾದ ಮೈತ್ರೇಯಿ ಮತ್ತು ಕಾತ್ಯಾಯಿನಿಯರಿಗೆ ನೀಡಲು ತೀರ್ಮಾನಿಸುತ್ತಾನೆ. ಕಾತ್ಯಾಯಿನಿ ಆಸ್ತಿಯನ್ನು ಸ್ವೀಕರಿಸಿದರೆ, ಮೈತ್ರೇಯಿ ಆಸ್ತಿಯ ಬದಲಾಗಿ ಬ್ರಹ್ಮಜ್ಞಾನದ ದೀಕ್ಷೆಯನ್ನು ಅಪೇಕ್ಷಿಸುತ್ತಾಳೆ. ಇದು

ಸ್ತ್ರೀಯರು ಹೊಂದಿದ ಆಧ್ಯಾತ್ಮಕ ಹಕ್ಕನ್ನು ತೋರ್ಪಡಿಸುತ್ತದೆ ಎಂದು ಹೇಳುತ್ತಾರೆ. ಜೊತೆಗೆ ವಿಧವೆಯರ ಪುನರ್ ವಿವಾಹ ಪ್ರಚಲಿತದಲ್ಲಿತ್ತು ಎಂದು ವಿವರಿಸುತ್ತಾರೆ. ಈ ಅಂಶಗಳು ಸ್ತ್ರೀಯರು ಪುರುಷರಂತೆ ಸಮಾನ ಅವಕಾಶಗಳನ್ನು ಹೊಂದಿದ್ದರೆನೋ ಎಂಬುವುದನ್ನು ತೋರ್ಪಡಿಸುತ್ತವೆ. ಆದರೆ ಈ ಅಂಶಗಳೇ ಅಂದೂ ಸಹ ಪುರುಷ ಪ್ರಧಾನ ವ್ಯವಸ್ಥೆ ಅಧಿಕಾರದಲ್ಲಿತ್ತು ಎಂದು ಸಾರಿಸಾರಿ ಹೇಳುತ್ತವೆ. ಪುರುಷ ಪ್ರಧಾನ ವ್ಯವಸ್ಥೆ ಇದ್ದಲ್ಲಿ ಮಹಿಳೆಯರ ಸಮಾನತೆ ಹೇಗೆ ಸಾಧ್ಯವಾಗುತ್ತದೆ ಎಂಬುದನ್ನು ಅರಿಯಬೇಕಿದೆ. ಸಮಾಜಶಾಸ್ತ್ರಜ್ಞರು ಹೇಳುವಂತೆ ಯಜ್ಞವಲ್ಕ್ಯ ಜಗತ್ತನ್ನು ತ್ಯಜಿಸುವಾಗ ಆಸ್ತಿಯನ್ನು ನೀಡುತ್ತಾನೆ. ಅಂದರೆ ಅಲ್ಲಿ ಪುರುಷಾಧಿಪತ್ಯದಲ್ಲೇ ಆಸ್ತಿಯ ನಿರ್ವಹಣೆ ಜರುಗುತ್ತಿತ್ತು ಎಂಬುವುದು ಸಾಬೀತಾಗುತ್ತದೆ. ಜೊತೆಗೆ ಯಜ್ಞವಲ್ಕ್ಯ ಏಕಕಾಲದಲ್ಲಿ ಇಬ್ಬರು ಹೆಂಡತಿಯರನ್ನು ಹೊಂದಿದ್ದ ಎಂಬುವುದು ಅಂದಿನ ಕಾಲದಲ್ಲಿಯ ಬಹುಪತ್ನಿತ್ವ ಪದ್ಧತಿಯನ್ನು ಸಾದರಪಡಿಸುತ್ತದೆ. ಅದೇ ಹೆಣ್ಣು ಗಂಡನ ನಿಧನದ ನಂತರವಷ್ಟೇ ಮತ್ತೊಬ್ಬ ಸಂಗಾತಿಯನ್ನು ಹೊಂದಬಹುದಾಗಿತ್ತೆ ವಿನಃ ಏಕಕಾಲದಲ್ಲಿ ಬಹುಪತಿತ್ವದಂತಹ ಆಚರಣೆಯ ಯಾವ ಅವಕಾಶಗಳು ಹೆಣ್ಣಿಗೆ ದೊರೆತ ಉದಾಹರಣೆಗಳು ಲಭ್ಯವಾಗುವುದಿಲ್ಲ. ಸಮಾಜಶಾಸ್ತ್ರಜ್ಞರು ಸಮಾನತೆ ಎಂದು ಹೇಳಹೊರಟ ಉದಾಹರಣೆಗಳೇ ಗಂಡು ಹೆಣ್ಣುಗಳಲ್ಲಿನ ಅಸಮಾನತೆಯನ್ನು ಎತ್ತಿ ತೋರಿಸುತ್ತವೆ. ಇಂತಹ ಉದಾಹರಣೆಗಳು ವೇದಗಳ ಕಾಲದಲ್ಲಿಯೂ ಸಹ ಮಹಿಳೆಯು ಪುರುಷನ ಅಧೀನಳಾಗಿದ್ದಳು ಎಂಬುದಕ್ಕೆ ಸಾಕ್ಷಿಯಾಗಿವೆ. ವೇದಗಳ ಕಾಲದಲ್ಲಿ ಸ್ತ್ರೀ–ಪುರುಷರ ನಡುವೆ ಸಮಾನತೆಗಳಿದ್ದವೆಂದು ಆರ್.ಸಿ. ದತ್ ಮತ್ತು ಪಿ.ಸಿ. ಮಿತ್ರರವರು ಹೇಳಿರುತ್ತಾರೆ. ಇದಕ್ಕೆ ಅವರು ನೀಡಿದ ಉದಾಹರಣೆಗಳನ್ನು ಗಮನಿಸಿದಾಗ ವೇದಗಳ ಕಾಲದಲ್ಲಿ ಗಂಡು–ಹೆಣ್ಣುಗಳ ನಡುವೆ ಸಮಾನತೆಗಳಿರಲಿಲ್ಲ, ಬದಲಾಗಿ ಹೆಣ್ಣಿಗೆ ಕೆಲವೊಂದು ಅವಕಾಶಗಳಿದ್ದವು ಎಂದು ಹೇಳಬಹುದಾಗಿದೆ.

ಇನ್ನು ವೇದಗಳ ಕಾಲದ ನಂತರ ಪ್ರಾಚೀನ ಭಾರತದ ಇತಿಹಾಸವನ್ನು ಮಹಾ ಕಥಾನಕಗಳಾದ ಮಹಾಭಾರತ ಮತ್ತು ರಾಮಾಯಣದ ಮೂಲಕ ತಿಳಿಯಬಹುದಾಗಿದೆ. ಆ ಕಾಲದಲ್ಲಿ ಹೆಣ್ಣು ಮಕ್ಕಳ ಸ್ಥಿತಿ ಅತ್ಯಂತ ಕರುಣಾಜನಕವಾಗಿತ್ತು ಎಂಬುವುದಕ್ಕೆ ಸೀತೆ, ದ್ರೌಪದಿಯರು ಅನುಭವಿಸುವ ನೋವು, ಯಾತನೆ, ಕ್ಲೇಶಗಳೇ ಸಾಕ್ಷಿಯಾಗಿವೆ. ರಾಜಮನೆತನದ ಹೆಣ್ಣು ಮಕ್ಕಳ ಸ್ಥಿತಿಯೇ ಹೀಗಿರುವಾಗ ಇನ್ನು ಸಾಮಾನ್ಯ ಮಹಿಳೆಯರ ಬದುಕು ಹೇಗಿತ್ತೆಂಬುದನ್ನು ಊಹಿಸಿಕೊಳ್ಳಲು ಕಷ್ಟವಾಗುತ್ತದೆ. ಪುರುಷ ಪ್ರಧಾನ ವ್ಯವಸ್ಥೆ ನೀಡುವ ಎಲ್ಲಾ ಹಿಂಸೆಗಳನ್ನು ಹೇಗೆ ಒಪ್ಪಿತವಾಗಿಸಿಕೊಂಡು ಅನುಭವಿಸಬೇಕಾಗುತ್ತದೆ ಎಂಬುವುದಕ್ಕೆ ಸೀತೆಯ ಅಗ್ನಿ ಪ್ರವೇಶ ಸಾಕ್ಷಿಯಾಗಿದೆ. ಅಲ್ಲದೇ ರಾಮ ಭರತರ ಪಟ್ಟಾಭಿಷೇಕ ಅಂದಿನ ಪುರುಷ ಪ್ರಧಾನ ವ್ಯವಸ್ಥೆಯನ್ನು ಚಿತ್ರೀಕರಿಸುತ್ತದೆ.

ಪ್ರಾಚೀನ ಭಾರತದಲ್ಲಿ ಸ್ತ್ರೀ–ಪುರುಷರಲ್ಲಿಯ ಲಿಂಗ ಅಸಮಾನತೆಗಳು ಅಂದಿನ ಸಮಾಜದ ಮಹಿಳೆಯರ ಸ್ಥಿತಿ ಹೇಗಿದ್ದವೆಂಬುವುದಕ್ಕೆ ಸಾಕ್ಷಿಯಾಗಿವೆ. ಮಾನವನ ನಾಗರಿಕತೆಯ ಕಾಲವನ್ನು ಒಳಗೊಂಡಂತೆ ಪ್ರಾಚೀನ ಭಾರತದ ಇತಿಹಾಸದವರೆಗೂ ದೊರೆಯುವ ಕುರುಹುಗಳೆಲ್ಲವನ್ನು ಗಮನಿಸಿದಾಗ ಪುರುಷರು ಪ್ರಧಾನರಾಗಿ, ಮಹಿಳೆಯರು ಅವರ ಅಧೀನರಾಗಿ ಇದ್ದರು ಎಂಬ ಸಾರಾಂಶ ಬಿಂಬಿತವಾಗುತ್ತದೆ.

ಕೌಟುಂಬಿಕ ಹಿಂಸೆ ಮತ್ತು ಸಾರ್ವಜನಿಕ ವಲಯದಲ್ಲಿನ ಹಿಂಸೆ

ಮಹಿಳೆಯರ ಮೇಲಿನ ಹಿಂಸೆ ಕೌಟುಂಬಿಕ ವಲಯದಲ್ಲಿದ್ದಂತೆ ಸಾರ್ವಜನಿಕ ವಲಯದಲ್ಲೂ ಹಲವಾರು ಬಗೆಗಳಲ್ಲಿ ಸ್ಥಾಪಿತಗೊಂಡಿದೆ. ಈ ಸಾರ್ವಜನಿಕ ವಲಯದಲ್ಲಿನ ಹಿಂಸೆಗಳೂ ಕೂಡ ವ್ಯವಸ್ಥೆಯ ಭಾಗವಾಗಿಯೇ ಜರುಗುತ್ತಿರುವುದನ್ನು ಕಾಣಬಹುದಾಗಿದೆ. ಕುಟುಂಬ ವಲಯದೊಳಗೆ ಮಹಿಳೆಯರ ಮೇಲೆ ಅದೆಷ್ಟೋ ಹಿಂಸೆಗಳು ಸಹಜ ಎಂಬಂತೆ ಕಾಣಬರುತ್ತವೆ. ಅಲ್ಲಿ ಮಹಿಳೆಯರು ಪ್ರತಿಭಟಿಸದಂತೆ ಮಾಡಲಾಗಿರುತ್ತದೆ. ಕಾರಣ ಹಿಂಸೆ ನೀಡುವವರು ಕುಟುಂಬದ ಸದಸ್ಯರೇ ಆಗಿರುತ್ತಾರೆ. ಜೊತೆಗೆ ಕುಟುಂಬದಲ್ಲಿ ಮಹಿಳೆಯರನ್ನು ಭಾವನಾತ್ಮಕವಾದ ಸಂಕೋಲೆಗಳ ಮೂಲಕ ಬಂಧಿಸಿರುವುದರಿಂದ ಅಲ್ಲಿ ಪ್ರತಿಭಟನೆಯ ಸ್ವರೂಪ ತೀರಾ ಕಡಿಮೆಯಾಗಿ ಕಂಡುಬರುತ್ತದೆ. ಆದರೆ ಸಾರ್ವಜನಿಕ ವಲಯದಲ್ಲಿ ಮಹಿಳೆಯರು ತಮ್ಮ ಮೇಲಾದ ಹಿಂಸೆಯನ್ನು ಪ್ರತಿಭಟಿಸಲು ಕೆಲವು ಸಂದರ್ಭಗಳಲ್ಲಿ ಮಾತ್ರ ಅವಕಾಶವಿರುತ್ತದೆ. ಹೀಗೆ ಹೇಳಲು ಕಾರಣ ಸಾರ್ವಜನಿಕ ವಲಯದಲ್ಲಿ ಲೈಂಗಿಕ ಕಿರುಕುಳದಂತಹ ಹಿಂಸೆಯನ್ನು ಮುಕ್ತವಾಗಿ ಪ್ರತಿಭಟಿಸುವುದು ಸಾಕಷ್ಟು ಸಂದರ್ಭದಲ್ಲಿ ಕಷ್ಟದಾಯಕವಾಗಿರುತ್ತದೆ.

ಈ ಎರಡೂ ವಲಯದೊಳಗಿನ ಹಿಂಸೆಯ ತೀವ್ರತೆ ಒಂದೇ ತರಹದ್ದಾಗಿದ್ದು, ಅಲ್ಲಿ ಬಲಿ ಪಶುವಾಗುತ್ತಿರುವವರು ಮಹಿಳೆಯರಾಗಿದ್ದಾರೆ. ಮಹಿಳೆಯರ ಮೇಲಿನ ಕೌಟುಂಬಿಕ ಹಿಂಸೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಸಾರ್ವಜನಿಕ ವಲಯಕ್ಕಿಂತಲೂ ಕುಟುಂಬದೊಳಗೆ ಮಹಿಳೆಯರ ಮೇಲೆ ಹೆಚ್ಚೆಚ್ಚು ಹಿಂಸೆಗಳಾಗುತ್ತಿವೆ. ಕಾರಣ ಅದು ಖಾಸಗಿ ವಲಯವಾಗಿದ್ದು ಅಲ್ಲಿ ಮಹಿಳೆಯರು ಅನುಭವಿಸುತ್ತಿರುವ ಹಿಂಸೆಯ ಬಗ್ಗೆ ಯಾರು ಪ್ರಶ್ನಿಸುವ ಗೋಜಿಗೆ ಹೋಗುವುದಿಲ್ಲ. ಆದ್ದರಿಂದ ಈ ವಲಯದಲ್ಲಿ ಮಹಿಳೆಯರು ಹೆಚ್ಚು ಹಿಂಸೆಯನ್ನು ಅನುಭವಿಸುವಂತಾಗಿದೆ. ಇಲ್ಲಿ ಹಿಂಸೆ ಒಪ್ಪಿತವಾಗಿ ಸ್ಥಾಪಿತಗೊಂಡಿರುವುದರಿಂದ ಅಥವಾ ನಡಾವಳಿಯಾಗಿ ರೂಪುಗೊಂಡಿದ್ದರಿಂದ, ಕೃತ್ಯ ಮಾಡುವವರು ನಾವು ಮಹಿಳೆಯರಿಗೆ ನೀಡುತ್ತಿರುವುದು ಹಿಂಸೆ ಎಂಬುದೂ ಸಹ ಅವರ ಅರಿವಿಗೆ ಬಾರದಂತಾಗಿದೆ.

ಮಹಿಳೆಯರು ಹಿಂಸೆ ಅನುಭವಿಸುವ ವಲಯ ಕುಟುಂಬ ವಲಯವಾಗಿರಲಿ ಅಥವಾ ಸಾರ್ವಜನಿಕ ವಲಯವಾಗಿರಲಿ ಅಲ್ಲಿನ ಒಟ್ಟು ಉದ್ದೇಶ ಮಾತ್ರ ಮಹಿಳೆಯರು ಮುಖ್ಯವಾಹಿನಿಗೆ ಬರದಂತೆ ತಡೆಯುವುದಾಗಿದೆ. ಸಾರ್ವಜನಿಕ ವಲಯದಲ್ಲಿ ಮಹಿಳೆಯರ ಮೇಲೆ ಹಿಂಸೆ ಸ್ಥಾಪಿತಗೊಳ್ಳಲು ಕಾರಣ ಮಹಿಳೆಯರು ಕೇವಲ ನಾಲ್ಕು ಗೋಡೆಗಳಿಗೆ ಮಾತ್ರ ಸೀಮಿತವಾಗಬೇಕು ಎಂಬ ಧೋರಣೆಯಾಗಿದೆ. ಇದು ಪುರುಷ ಪ್ರಧಾನ ವ್ಯವಸ್ಥೆಯ ಬಹು ದೊಡ್ಡ ಅಸ್ತ್ರವಾಗಿದೆ. ಮಹಿಳೆ ತನಗಿರುವ ಜ್ಞಾನದಿಂದ ಮತ್ತೇ ಎಲ್ಲಿ ಪ್ರಧಾನ ನೆಲೆಗೆ ಹೋಗುತ್ತಾಳೋ ಎಂಬ ಭಯದಿಂದ ಆಕೆಯನ್ನು ಹೊರ ಜಗತ್ತಿನೊಂದಿಗೆ ಹೆಚ್ಚೆಚ್ಚು ತೊಡಗಿಸಿಕೊಳ್ಳದಿರುವಂತೆ ಮಾಡಿದೆ. ಅದಕ್ಕೆ ಹಿಂಸೆಯಂತಹ ಅಸ್ತ್ರವನ್ನು ಸಾರ್ವಜನಿಕ ವಲಯದಲ್ಲಿ ಪ್ರಯೋಗಿಸುತ್ತಿರುವುದನ್ನು ಕಾಣಬಹುದಾಗಿದೆ. ಇದರಿಂದಾಗಿಯೇ ಮಹಿಳೆಯರು ಮನೆಗೆ ಸೀಮಿತಗೊಂಡು ಹೊರ ಜಗತ್ತಿನಿಂದ ಕೊಂಚ ದೂರ ಉಳಿಯಬೇಕಾಗಿದೆ.

ಈ ಎರಡೂ ವಲಯದೊಳಗೆ ಮಹಿಳೆಯರ ಮೇಲೆ ನಡೆಯುತ್ತಿರುವ ಕೃತ್ಯವನ್ನು ಗಮನಿಸಿದಾಗ, ಅಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಹಿಂಸೆಯ ಸ್ವರೂಪ ಮತ್ತು ತೀವ್ರತೆ ಬೇರೆ ಬೇರೆಯಾಗಿರುವುದು

ಕಂಡುಬರುತ್ತದೆ. ಆದರೆ ಪುರುಷ ಪ್ರಧಾನ ವ್ಯವಸ್ಥೆಯ ಧೋರಣೆ ಮಾತ್ರ ಒಂದೇ ಆಗಿರುವುದು ಬೆಳಕಿಗೆ ಬರುತ್ತದೆ.

೧.೨. ಅಧ್ಯಯನದ ಉದ್ದೇಶಗಳು

'ಕುಟುಂಬ' ಎಂಬ ಸಂಸ್ಥೆಯು ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಮಹತ್ವದ ಸ್ಥಾನ ಪಡೆದುಕೊಂಡಿದೆ. ಇದರ ನಿರ್ವಹಣೆಗೆ ಸ್ತ್ರೀ-ಪುರುಷರಿಬ್ಬರ ಪಾಲುದಾರಿಕೆ ಸಮಾನವಾದದ್ದು. ಹೀಗಿರುವಾಗ ಕುಟುಂಬದಲ್ಲಿ ಲಿಂಗ ವೈಪರೀತ್ಯಗಳು ಕಾಣಬರುತ್ತವೆ. ಈ ಹಿನ್ನೆಲೆಯಲ್ಲಿ ಮಹಿಳೆಯರ ಮೇಲೆ ದೌರ್ಜನ್ಯಗಳು ಸ್ಥಾಪಿತಗೊಂಡಿದ್ದು, ಯಾವ ಉದ್ದೇಶಗಳ ಪೂರೈಕೆಗಾಗಿ ಇಂತಹ ಕೃತ್ಯಗಳು ಜರುಗುತ್ತಿವೆ ಎಂಬುವುದನ್ನ ಅರಿಯುವುದು ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ವ್ಯವಸ್ಥೆಯು ಮಹಿಳೆಯರಿಗೆ ಯಾವ ಸ್ವಾತಂತ್ರ್ಯ ನೀಡದೇ ಹುಟ್ಟಿನಿಂದ ಸಾಯುವವರೆಗೆ ಪುರುಷರ ಆಶ್ರಯದಲ್ಲಿಯೇ ಇರಬೇಕೆಂಬ ಚೌಕಟ್ಟೊಂದನ್ನು ನಿರ್ಮಿಸಿ, ಅಲ್ಲಿ ಯಾವ ಬಗೆಯ ದೌರ್ಜನ್ಯಗಳು ಸ್ಥಾಪಿತಗೊಂಡಿವೆ ಎಂಬುದನ್ನು ಅರಿಯುವುದು ಅಧ್ಯಯನದ ಮತ್ತೊಂದು ಉದ್ದೇಶವಾಗಿದೆ.

ಮಹಿಳೆಯರಿಗೆ ನೀಡುತ್ತಿರುವ ದೌರ್ಜನ್ಯಗಳು ಯಾವ ಸ್ವರೂಪದ್ದಾಗಿವೆ ಹಾಗೂ ಅವುಗಳ ಭೀಕರತೆಯನ್ನು ತಿಳಿದುಕೊಳ್ಳುವುದು ಅಧ್ಯಯನದ ಇನ್ನೊಂದು ಉದ್ದೇಶ. ಇವುಗಳ ಆಧಾರದಿಂದಲೇ ಮಹಿಳೆಯರ ದುಸ್ಥಿತಿಗೆ ಕಾರಣವಾಗಿರುವ ಮೂಲ ಅಂಶ ಏನು? ಹಾಗೂ ಮಹಿಳೆಯರ ಅಸ್ತಿತ್ವದ ಚಹರೆಯನ್ನು ಅಲ್ಲಗಳೆಯಲು ಯಾವ ತಂತ್ರಗಳ ಮೂಲಕ ವ್ಯವಸ್ಥೆ ಕಾರ್ಯಪ್ರವೃತ್ತವಾಗಿದೆ ಎಂಬುದನ್ನು ತಿಳಿಯುವುದಾಗಿದೆ. ಮುಖ್ಯವಾಗಿ ಇವುಗಳೆಲ್ಲವನ್ನು ಸ್ತ್ರೀವಾದದ ಹಿನ್ನೆಲೆಯಲ್ಲಿ ಅರ್ಥೈಸಿ ವಿಶ್ಲೇಷಣೆಗೊಳಪಡಿಸುವ ಆಶಯ ಪ್ರಸ್ತುತ ಅಧ್ಯಯನದ್ದಾಗಿದೆ.

ಮಹಿಳೆಯರು ಅನುಭವಿಸುತ್ತಿರುವ ದೌರ್ಜನ್ಯಗಳಿಂದ ಅವರ ಮೇಲೆ ಅನೇಕ ದುಷ್ಪರಿಣಾಮಗಳು ಉಂಟಾಗುತ್ತಿದ್ದು, ಅವುಗಳನ್ನು ಅರಿಯುವುದೂ ಸಹ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಇವುಗಳ ಜೊತೆಗೆ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳನ್ನು ತಡೆಯಲೆಂದೇ ರೂಪುಗೊಂಡ ಕಾನೂನುಗಳ ಬಗ್ಗೆ ಹಾಗೂ ಅವುಗಳು ಸಾಮಾಜಿಕ ಸಂದರ್ಭದಲ್ಲಿ ಹೇಗೆ ಕಾರ್ಯನಿರ್ವಹಣೆ ಗೊಳ್ಳುತ್ತಿವೆ ಎಂದು ಅರಿಯುವ ಉದ್ದೇಶ ಪ್ರಸ್ತುತ ಅಧ್ಯಯನದ್ದಾಗಿದೆ.

೧.೩. ಅಧ್ಯಯನದ ವೈಧಾನಿಕತೆ

ಕುಟುಂಬ, ಮಹಿಳೆ, ಹಿಂಸೆ ಮತ್ತು ಪುರುಷ ಪ್ರಧಾನ ವ್ಯವಸ್ಥೆ ಎಂಬ ಚೌಕಟ್ಟಿನೊಳಗಡೆ ಮಹಿಳೆಯರ ಮೇಲಿನ ಹಿಂಸೆ ಅಥವಾ ದೌರ್ಜನ್ಯವನ್ನು ಮಹಿಳಾ ಅಧ್ಯಯನ ಮತ್ತು ಸ್ತ್ರೀವಾದದ ಹಿನ್ನೆಲೆಯಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ. ಇದು ಮುಖ್ಯವಾಗಿ ಕ್ಷೇತ್ರಕಾರ್ಯ ಆಧಾರಿತವಾದ್ದರಿಂದ, ಕ್ಷೇತ್ರದಲ್ಲಿ ದೊರೆತ ಮಾಹಿತಿಗಳ ಆಧಾರದಡಿಯಲ್ಲಿ ಪ್ರಸ್ತುತ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಮಹಿಳೆಯರ ಜೀವನಕ್ಕೆ ಸಂಬಂಧಿಸಿದ ಯಾವುದೇ ಸೂಕ್ಷ್ಮ ಸಂಗತಿಗಳು ಬಿಟ್ಟು ಹೋಗಬಾರದೆಂಬ ಕಾರಣದಿಂದ ಅವರು ಅನುಭವಿಸಿದ ನೋವು, ಸವಾಲು ಮತ್ತು ಸಾಧ್ಯತೆಗಳನ್ನು ತಿಳಿಯಲು, ವಿಶೇಷವಾಗಿ ಪ್ರಕರಣ ಅಧ್ಯಯನವನ್ನು ಸಂಶೋಧನಾ ಅಧ್ಯಯನದ ಮುಖ್ಯ ಭಾಗವಾಗಿಸಿಕೊಳ್ಳಲಾಗಿದೆ.

ಕೌಟುಂಬಿಕ ಜೀವನ ಎನ್ನುವುದು ಖಾಸಗಿಯಾಗಿರುವಾಗ, ಅಲ್ಲಿಯ ಮಹಿಳೆಯರ ಅನುಭವಗಳನ್ನು ಅದರಲ್ಲೂ ಕಹಿ ಅನುಭವಗಳನ್ನು ಹಾಗು ದುರ್ಘಟನೆಗಳನ್ನು ಸವಾಲು ಎಂಬರ್ಥದಲ್ಲಿ ನೇರ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಲು ಕಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ 'ಸಂಕಥನಾತ್ಮಕ' ಎಂಬ ಮಹಿಳಾ ಅಧ್ಯಯನದಲ್ಲಿನ ಸಂಶೋಧನಾ ವಿಧಾನವೊಂದನ್ನು ಆಯ್ದುಕೊಂಡು ಅಧ್ಯಯನ ನಡೆಸಲಾಗಿದೆ.

ಇದನ್ನು ಆಳ ಸಂದರ್ಶನ ಮತ್ತು ಸಹಭಾಗಿತ್ವ ಅವಲೋಕನದ ಮೂಲಕ ಸಂಶೋಧನೆ ಗೊಳಪಡಿಸಿ ಮಹಿಳೆಯರ ಅನುಭವಗಳನ್ನು ಪಡೆದು, ಅದನ್ನು ಅವರದ್ದೇ ಆದ ಮಾತುಗಳಲ್ಲಿ ಯಥಾವತ್ತಾಗಿ ದಾಖಲಿಸಲಾಗಿದೆ. ಈ ವಿಧಾನಗಳನ್ನು ಅಳವಡಿಸಿಕೊಳ್ಳಲು ಕಾರಣವೇನೆಂದರೆ, ಸಂದರ್ಶನದ ಸಂದರ್ಭದಲ್ಲಿ ಹಿಂಸೆಗೊಳಗಾದ ಮಹಿಳೆಯರ ಅಭಿಪ್ರಾಯ ಮತ್ತು ಮನೋಭಾವಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ಇದರ ಜೊತೆಗೆ ಮಹಿಳೆಯರು ತಮ್ಮ ನೋವುಗಳನ್ನು ಹೇಳಿಕೊಳ್ಳುವಾಗ ಸಂಶೋಧಕರು ಮಧ್ಯ ಪ್ರವೇಶಿಸುವುದರಿಂದ ಎಷ್ಟೋ ಸಂಗತಿಗಳು ಮಹಿಳೆಯರಿಗೆ ಮರೆತು ಹೋಗಬಹುದಾಗಿದೆ. ಆದ್ದರಿಂದ ದೌರ್ಜನ್ಯಕ್ಕೊಳಗಾದ ಮಹಿಳೆಯರು ಅನುಭವಿಸುತ್ತಿರುವ ಹಿಂಸೆಯ ಸತ್ಯಾಂಶವನ್ನು ಅರಿಯಲು ಆಳ ಸಂದರ್ಶನ ವಿಧಾನವನ್ನು ಬಳಸಿಕೊಳ್ಳಲಾಗಿದೆ. ಇನ್ನು ಅವಲೋಕನ ಮಾಡುವ ಸಂದರ್ಭದಲ್ಲಿ ಸಹಭಾಗಿತ್ವ ಅವಲೋಕನವನ್ನು ಕೈಗೊಳ್ಳಲಾಗಿದ್ದು, ಇದರಿಂದ ಸಂಶೋಧಕರು ದೌರ್ಜನ್ಯಕ್ಕೊಳಗಾದ ಮಹಿಳೆಯರೊಂದಿಗೆ ತಾವು ಒಬ್ಬರೆಂಬಂತೆ ಬೆರತು ಅವರು ಅನುಭವಿಸುತ್ತಿರುವ ಎಲ್ಲಾ ಬಗೆಯ ನೋವುಗಳನ್ನು ಅಂದರೆ, ಸಮಾಜ ಯಾವುದನ್ನು ಮೌನವಾಗಿ ಅನುಭವಿಸಬೇಕೆಂದು ಹೇಳಿಟಯೋ ಅಥವಾ ನಿರ್ದೇಶಿಸಿದೆಯೋ, ಅಂತಹ ಎಲ್ಲಾ ಬಗೆಯ ಹಿಂಸೆಯ ಸ್ವರೂಪಗಳನ್ನು ಹೊರತೆಗೆಯುವಲ್ಲಿ ಸಹಾಯಕವಾಗಿದೆ. ಈ ಎರಡೂ ಬಗೆಯ ವಿಧಾನಗಳು ಸಂಶೋಧನೆಯ ಸಂದರ್ಭದಲ್ಲಿ ಒಂದರೊಳಗೊಂದು ಸಂಮಿಶ್ರಣಗೊಂಡು ಕಾರ್ಯನಿರ್ವಹಿಸಿವೆ.

ಪ್ರಸ್ತುತ ಅಧ್ಯಯನದಲ್ಲಿ ಕ್ಷೇತ್ರ ಕಾರ್ಯದಿಂದ ದೊರೆತ ಪ್ರಕರಣಗಳನ್ನು ದಾಖಲಿಸುವುದರ ಜೊತೆಗೆ ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದ ನ್ಯಾಯಾಲಯಗಳಲ್ಲಿ ದಾಖಲಾದ ಪ್ರಕರಣಗಳನ್ನೂ ಸಹ ಆಯ್ದುಕೊಳ್ಳಲಾಗಿದೆ. ಕಾರಣ ಸಂಶೋಧನಾ ಅಧ್ಯಯನದ ಉದ್ದೇಶಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಹೋಗಲಾಡಿಸಲು ಕಾನೂನುಗಳ ವೈಖರಿಯನ್ನು ಒಂದು ಅಂಶವಾಗಿಸಿ ಕೊಂಡಿದ್ದರಿಂದ ಅಲ್ಲಿನ ಕೆಲ ಪ್ರಕರಣಗಳನ್ನೂ ಸಹ ದಾಖಲಿಸಲಾಗಿದೆ. ಅಲ್ಲದೆ ದೌರ್ಜನ್ಯಕ್ಕೊಳಗಾದ ಮಹಿಳೆಯರು ನೀಡಿದ ಕಂಪ್ಲೆಂಟ್ ಕಾಪಿ (ಕಂಪ್ಲೆಂಟ ಕಾಪಿಯನ್ನೂ ಸಹ ದೌರ್ಜನ್ಯಕ್ಕೊಳಗಾದ ಮಹಿಳೆಯರ ಸಂಕಥನವೇ ಎಂದು ಪರಿಗಣಿಸಿ) ಯಲ್ಲಿನ ಮಾಹಿತಿಯನ್ನು ಯಥಾವತ್ತಾಗಿ ತೆಗೆದುಕೊಂಡು ದಾಖಲಿಸಿಕೊಳ್ಳಲಾಗಿದೆ. ಜೊತೆಗೆ ಆಯಾ ಪ್ರಕರಣಕ್ಕೆ ಸಂಬಂಧಿಸಿದ ಮಹಿಳೆಯರನ್ನೂ ಸಹ ಸಂದರ್ಶಿಸಲಾಗಿದೆ.

ಈ ಎಲ್ಲಾ ವಿಧಾನಗಳ ಜೊತೆಗೆ ಮಹಿಳಾ ಅಧ್ಯಯನ ಅಥವಾ ಮಹಿಳೆಯರ ಸಮಸ್ಯೆಗಳನ್ನು ಅಭ್ಯಸಿಸುವ ಸಂದರ್ಭಗಳಲ್ಲಿ ಅನುಸರಿಸಬೇಕಾದ ಗುಣಾತ್ಮಕ ಸಂಶೋಧನಾ ವಿನ್ಯಾಸ, ವ್ಯಕ್ತಿ ನಿಷ್ಠತೆ ಹಾಗೂ ಲೈಂಗಿಕತಾವಾದಿಯಲ್ಲದ ಸಂಶೋಧನೆಗಳು ಅಧ್ಯಯನದುದ್ದಕ್ಕೂ ಹಾಸುಹೊಕ್ಕಾಗಿವೆ. ಜೊತೆಗೆ

ಮಾದರಿ (Sampling) ಪ್ರಕಾರಗಳಲ್ಲೊಂದಾದ ಸಂಭವನೀಯ ಮಾದರಿಯಲ್ಲಿ ಅಧ್ಯಯನಕ್ಕೆ ಯಾದೃಚ್ಛಿಕ ಮಾದರಿಯನ್ನು ಆಯ್ದುಕೊಳ್ಳಲಾಗಿದೆ. ಕಾರಣ ಇಡೀ ಮಾನವ ಜನಾಂಗವನ್ನು ಅಧ್ಯಯನ ಮಾಡುವುದು ಕಷ್ಟದಾಯಕ. ಇದರಿಂದ ಸಂಶೋಧನೆಯನ್ನು ಸೀಮಿತ ಕ್ಷೇತ್ರಕ್ಕೆ ಒಳಪಡಿಸಿ, ಬಂದ ಮಾಹಿತಿ ಅಥವಾ ಫಲಿತಾಂಶದ ಆಧಾರದ ಮೇಲೆ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ. ನಂತರ ಇದನ್ನು ಇಡೀ ಮಾನವ ಜನಾಂಗಕ್ಕೆ ಅನ್ವಯಿಸಲಾಗಿದೆ. ಇಂತಹ ಕಾರ್ಯ ಕೇವಲ ಸಂಭವನೀಯ ಮಾದರಿಯಿಂದ ಮಾತ್ರ ಸಾಧ್ಯವಾಗುತ್ತದೆ, ಹಾಗೂ ಸಂಶೋಧಕರ ವೈಯಕ್ತಿಕ ಆಯ್ಕೆಗೆ ಅವಕಾಶವಿರದ ಯಾದೃಚ್ಛಿಕ ಮಾದರಿ ಹೆಚ್ಚು ಸಹಾಯಕವಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಆಯ್ದ ಪ್ರಕರಣಗಳೆಲ್ಲವನ್ನು 'ಕಥನ' ಕ್ರಮದಲ್ಲಿ ದಾಖಲಿಸಲು ಅಸಾಧ್ಯವಾದ ಕಾರಣ, ಕ್ಷೇತ್ರ ಕಾರ್ಯದಿಂದ ಆಯ್ದ ೨೨ ಪ್ರಕರಣಗಳನ್ನು ಹಾಗೂ ನ್ಯಾಯಾಲಯದ ಚೌಕಟ್ಟಿನೊಳಗೆ ದಾಖಲಾದ ೮ ಪ್ರಕರಣಗಳನ್ನು ಮಾತ್ರ ಕಥನ ಕ್ರಮದಲ್ಲಿ ದಾಖಲಿಸಲಾಗಿದೆ. ಜೊತೆಗೆ ೨೫೦ ಪ್ರಕರಣಗಳನ್ನು ಗುಣಾತ್ಮಕ ಸಂಶೋಧನ ವಿನ್ಯಾಸದಲ್ಲಿಯ ಒಂದು ಅಂಶವಾದ ಪರಿಮಾಣಾತ್ಮಕ ಸಂಶೋಧನೆಯನ್ನು ಬಳಸಿಕೊಂಡು, ಅವುಗಳಲ್ಲಿನ ವಿಷಯಕ್ಕನುಸಾರವಾಗಿ ಅಂಕಿ-ಅಂಶಗಳುಳ್ಳ ಪಟ್ಟಿಯೊಂದನ್ನು ತಯಾರಿಸಿ ದಾಖಲಿಸಲಾಗಿದೆ.

ಅಧ್ಯಯನದ ಆಕರಗಳು

ಪ್ರತಿ ಸಂಶೋಧನೆಗೂ ಆಕರಗಳು ಮೂಲ ಮಾಹಿತಿಗಳಾಗಿರುತ್ತವೆ. ಅಂತೆಯೇ ಪ್ರಸ್ತುತ ಅಧ್ಯಯನ ಕ್ಷೇತ್ರಕಾರ್ಯ ಆಧಾರಿತವಾಗಿದ್ದರಿಂದ ಇದಕ್ಕೆ ಪ್ರಾಥಮಿಕ ಮಾಹಿತಿ ಮೂಲ ಮತ್ತು ದ್ವಿತೀಯ ಮಾಹಿತಿ ಮೂಲಗಳೆರಡರಿಂದಲೂ ವಿಷಯ ಸಂಗ್ರಹಿಸಿಕೊಳ್ಳಲಾಗಿದೆ. ಈಗಾಗಲೇ ಮೇಲೆ ತಿಳಿಸಿದಂತೆ ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ವಿಷಯ ಪ್ರಾಥಮಿಕ ಮಾಹಿತಿ ಮೂಲ ಆಕರವಾಗಿದೆ. ಇದರ ಜೊತೆಗೆ ದ್ವಿತೀಯ ಮಾಹಿತಿ ಮೂಲಗಳಿಂದ ಅಧ್ಯಯನಕ್ಕೆ ಸಂಬಂಧಿಸಿದ ಮುಖ್ಯವಾದ ಕೆಲವೊಂದು ಪ್ರಕಟಿತ ದಿನಪತ್ರಿಕಾ ವರದಿಗಳು, ಪುಸ್ತಕಗಳು, ಮಹಾಪ್ರಬಂಧಗಳು, ಸಂಪ್ರಬಂಧಗಳು, ಲೇಖನಗಳು, ಭಾರತೀಯ ದಂಡಸಂಹಿತೆಯಲ್ಲಿ ಮಹಿಳೆಯರ ಮೇಲಿನ ಕೌಟುಂಬಿಕ ಹಿಂಸೆಯನ್ನು ತಡೆಯುವಲ್ಲಿ ನೀಡಿರುವ ಕೆಲವೊಂದು ಕಾನೂನುಗಳು ಮತ್ತು ಅಂತರ್‌ಜಾಲದ ಸಹಾಯದಿಂದ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಪಡೆಯಲಾಗಿದೆ. ಅಲ್ಲದೇ ಪ್ರಾಥಮಿಕ ಮಾಹಿತಿ ಮೂಲದಿಂದ ಸಂಗ್ರಹಿಸಿದ ಮಾಹಿತಿಗಳೆಲ್ಲವನ್ನು ದಾಖಲಿಸಿದ ನಂತರ, ಅಧ್ಯಯನದ ವಿಶ್ಲೇಷಣೆಯ ಸಂದರ್ಭದಲ್ಲಿ ಅವು ಮತ್ತೆ ದ್ವಿತೀಯ ಮಾಹಿತಿ ಮೂಲಗಳಾಗಿಯೇ ಬಳಕೆಗೊಳ್ಳುತ್ತವೆ. ಈ ರೀತಿಯಾಗಿ ಪ್ರಸ್ತುತ ಅಧ್ಯಯನಕ್ಕೆ ಬೇಕಾದಂತಹ ಎಲ್ಲಾ ಆಕರಗಳನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳಲಾಗಿದೆ.

೧.೪. ಅಧ್ಯಯನದ ವ್ಯಾಪ್ತಿ

ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ ಎಂಬುದು ವಿಶ್ವವ್ಯಾಪಿಯಾದ ಸಂಗತಿಯಾಗಿದೆ. ಆದರೆ ಇದನ್ನು ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಭಾರತೀಯ ನೆಲೆಗಟ್ಟಿನ ಸಂದರ್ಭಕ್ಕೆ ಮಾತ್ರ

ಸೀಮಿತಗೊಳಿಸಿ ಅಧ್ಯಯನ ನಡೆಸಲಾಗಿದೆ. ಹಾಗೂ ಸಂಶೋಧನೆಯಿಂದ ಬಂದ ಫಲಿತಾಂಶವನ್ನು ಇಡೀ ಮಹಿಳಾ ಸಮುದಾಯಕ್ಕೆ ಅನ್ವಯಿಸಿಕೊಂಡು ಪ್ರಸ್ತುತ ಅಧ್ಯಯನದಲ್ಲಿ ಚರ್ಚೆಗೊಳಪಡಿಸಲಾಗಿದೆ.

ಅಧ್ಯಯನದ ಸ್ಪಷ್ಟತೆಗಾಗಿ ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಕ್ಷೇತ್ರವ್ಯಾಪ್ತಿ, ವಿಷಯದ ಕ್ಷೇತ್ರ ಮತ್ತು ವಿಷಯದ ವ್ಯಾಪ್ತಿ ಎಂದು ವಿಭಾಗಿಸಿಕೊಳ್ಳಲಾಗಿದೆ. ಇದರೊಂದಿಗೆ ಇಲ್ಲಿ ಸ್ಪಷ್ಟಪಡಿಸಬೇಕಾದ ಮತ್ತೊಂದು ಸಂಗತಿ ಏನೆಂದರೆ ಸಮಾಜದಲ್ಲಿ ಇತ್ತೀಚೆಗೆ ಬೇರೆ ಬೇರೆ ಲಿಂಗಗಳ (ತೃತೀಯ ಲಿಂಗ) ಬಗ್ಗೆ ಹೆಚ್ಚೆಚ್ಚು ಚರ್ಚೆಗಳಾಗುತ್ತಿವೆ. ಆದ್ದರಿಂದ ಪ್ರಸ್ತುತ ಅಧ್ಯಯನಕ್ಕೆ ಸಮಾಜದಲ್ಲಿ ಸ್ತ್ರೀ ಲಿಂಗ ಮತ್ತು ಪುಲ್ಲಿಂಗ ಎಂದು ಗುರುತಿಸಲ್ಪಡುತ್ತಿರುವವರನ್ನು ಮಾತ್ರ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕ್ಕೊಳ್ಳಲಾಗಿದೆ.

೧.೪.೧. ಕ್ಷೇತ್ರ ವ್ಯಾಪ್ತಿ –

ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳನ್ನು ತಿಳಿದುಕೊಳ್ಳಲು ಪ್ರಾತಿನಿಧಿಕವಾಗಿ ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲ್ಲೂಕೊಂದನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಇದರ ವ್ಯಾಪ್ತಿಗೆ ಬರುವ ಎಲ್ಲಾ ಹಳ್ಳಿಗಳನ್ನು ಆಯ್ದುಕೊಂಡಿದ್ದು, ಅಲ್ಲಿನ ಇಡೀ ಮಾನವ ಸಮುದಾಯವನ್ನೇ ಗಣನೆಗೆ ತೆಗೆದುಕೊಳ್ಳಲಾಗಿದೆ. ಜೊತೆಗೆ ಮಹಿಳೆಯರು ಕೌಟುಂಬಿಕ ದೌರ್ಜನ್ಯಕ್ಕೊಳಗಾಗಿ ಕೊಪ್ಪಳ ಜಿಲ್ಲಾ ನ್ಯಾಯಾಲಯಗಳಿಗೆ ಮೊರೆಹೋದಂತಹ ಪ್ರಕರಣಗಳನ್ನೂ ಸಹ ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಕಾರಣ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಕಾನೂನು ಯಾವ ರೀತಿಯಲ್ಲಿ ರಕ್ಷಣೆ ನೀಡಬಲ್ಲದು ಹಾಗೂ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳನ್ನು ತಡೆಯುವಲ್ಲಿ ಎಷ್ಟು ಸಹಾಯಕವಾಗಿದೆ ಎಂಬುದನ್ನು ಅರಿಯುವುದಾಗಿದೆ.

೧.೪.೨. ವಿಷಯದ ವ್ಯಾಪ್ತಿ –

ಆರೋಗ್ಯಯುತ ಸಮಾಜಕ್ಕೆ ಇಡೀ ಮಾನವ ಸಂಕುಲದ ಹಿತ ಮುಖ್ಯವಾಗಿದೆ. ಆದರೆ ಇಡೀ ಮಾನವ ಕುಲದ ಅರ್ಧ ಭಾಗವಾಗಿರುವ ಮಹಿಳೆಯರ ಮೇಲೆ ಕುಟುಂಬದೊಳಗಡೆ ತನ್ನವರೆನಿಸಿ ಕೊಂಡವರಿಂದಲೇ ದಿನನಿತ್ಯ ನಿರಂತರವಾಗಿ ದೌರ್ಜನ್ಯಗಳು ಜರುಗುತ್ತಲಿವೆ. ಈ ಬಗೆಯ ಕೃತ್ಯ ಮಾನವ ಜನಾಂಗಕ್ಕೆ ಮಾರಕವಾಗಬಲ್ಲದೆಂದು ಅರಿತಿದ್ದರೂ ಸಹ ಪ್ರಜ್ಞಾವಂತ ಸಮಾಜ ತನ್ನ ಸ್ಥಿರತೆಗಾಗಿ ಅಧಿಕಾರದ ಹಿನ್ನೆಲೆಯಲ್ಲಿ ನಿರಂತರವಾಗಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಸಲು ಮುಂದಾಗಿದೆ. ಮಹಿಳೆಯರ ಮೇಲೆ ಈ ವಿಧವಾಗಿ ನಡೆಯುವ ದೌರ್ಜನ್ಯಗಳು ಭಿನ್ನ ಭಿನ್ನ ಆಯಾಮಗಳಲ್ಲಿ ಪ್ರಕಟಗೊಳ್ಳುತ್ತಾ ಹೋಗುತ್ತಿವೆ.

ಪ್ರಸ್ತುತ ಅಧ್ಯಯನದಲ್ಲಿ ಇವುಗಳನ್ನು ನಿಖರವಾಗಿ ಒಟ್ಟುಗೂಡಿಸಿ ಮಹಿಳೆಯರ ಮೇಲೆ ನಡೆಯುತ್ತಿರುವ ಆರ್ಥಿಕ ಹಿಂಸೆ, ದೈಹಿಕ ಹಿಂಸೆ, ಶಾಬ್ದಿಕ ಹಿಂಸೆ, ಲೈಂಗಿಕ ಹಿಂಸೆ, ಭಾವನಾತ್ಮಕ ಹಿಂಸೆ ಮತ್ತು ಸಾಮಾಜಿಕ ಹಿಂಸೆಯಂತಹ ಕೌಟುಂಬಿಕ ದೌರ್ಜನ್ಯಗಳನ್ನು ವಿಷಯದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಲಿಂಗ ತಾರತಮ್ಯ ಧೋರಣೆಗಳು ಮತ್ತು ಹೆಣ್ಣು ಭ್ರೂಣ ಹತ್ಯೆ, ಹೆಣ್ಣು ಶಿಶು ಹತ್ಯೆ, ವರದಕ್ಷಿಣೆ ಹತ್ಯೆಯಂತಹ ದೌರ್ಜನ್ಯಗಳನ್ನೂ ಸಹ ಅವು ಹೊಂದಿದ ಸ್ವರೂಪದ ಹಿನ್ನೆಲೆಯಲ್ಲಿ ಮೇಲೆ ಸೂಚಿಸಿದ ದೌರ್ಜನ್ಯಗಳ ವ್ಯಾಪ್ತಿಗೆ ಒಳಪಡಿಸಲಾಗಿದೆ.

೧.೪.೩. ವಿಷಯದ ಕ್ಷೇತ್ರ –

ಮಹಿಳೆಯರು ನೆಲೆಗೊಂಡ ಆಧಾರದ ಮೇಲೆ ವಿಷಯ ಸಂಗ್ರಹಿಸಲಾಗಿದ್ದು, ಅವು ಮಹಿಳೆಯರು ಹುಟ್ಟಿದ ಮನೆಯಲ್ಲಿನ ದೌರ್ಜನ್ಯಗಳು, ಗಂಡನ ಮನೆಯಲ್ಲಿನ ದೌರ್ಜನ್ಯಗಳು ಮತ್ತು ವಿವಾಹ ಏರ್ಪಡಿಸಿಕೊಳ್ಳದೇ ಗಂಡು – ಹೆಣ್ಣು ಸಹಚರರಾಗಿ ಜೀವನ ನಡೆಸುತ್ತಿರುವ ಕುಟುಂಬಗಳಲ್ಲಿನ ದೌರ್ಜನ್ಯಗಳನ್ನು, ಅಲ್ಲದೇ ಒಂದು ಕುಟುಂಬದಲ್ಲಿ ಬಹಳ ದಿನಗಳಿಂದ ಅಥವಾ ತಿಂಗಳು, ವರ್ಷಗಳಿಂದ ರಕ್ತಸಂಬಂಧ ಇದ್ದು ಅಥವಾ ಇಲ್ಲದೆಯೋ ಆ ಕುಟುಂಬದ ಸದಸ್ಯರಾಗಿದ್ದಲ್ಲಿ, ಅಂತಹ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಹಾಗೂ ದೇವದಾಸಿ ಮಹಿಳೆಯರು ಅನುಭವಿಸುತ್ತಿರುವ (ತಾವು ಕೂಡಿಕೊಳ್ಳುವ ಪುರುಷರಿಂದ) ದೌರ್ಜನ್ಯಗಳನ್ನೂ ಸಹ ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಳ್ಳಲಾಗಿದೆ.

೧.೫. ಇದುವರೆಗಿನ ಅಧ್ಯಯನದ ಸಮಿಕ್ಷೆ

ಈಗಾಗಲೇ ಪ್ರಸ್ತಾಪಿಸಿದಂತೆ 'ಕೌಟುಂಬಿಕ ದೌರ್ಜನ್ಯ : ಲಿಂಗೀಯ ಅಧ್ಯಯನ' ಎಂಬ ವಿಷಯದ ಮೇಲೆ ಪ್ರಸ್ತುತ ಅಧ್ಯಯನ ಕೈಗೊಂಡಿದ್ದು, ಇದಕ್ಕೆ ಪೂರಕವಾಗಿರುವ ಕೆಲವೊಂದು ಪುಸ್ತಕಗಳು, ಮಹಾಪ್ರಬಂಧಗಳು ಹಾಗೂ ಸಂಪ್ರಬಂಧಗಳನ್ನು ಸಮೀಕ್ಷೆ ಗೊಳಪಡಿಸಲಾಗಿದೆ. ಕಾರಣ ಪ್ರಸ್ತುತ ಅಧ್ಯಯನವು ಇತರೆ ಅಧ್ಯಯನಗಳಿಗಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ಗಮನಕ್ಕೆ ತರುತ್ತದೆ. ಈ ಹಿನ್ನೆಲೆಯಲ್ಲಿ ಅಧ್ಯಯನದ ಸಮೀಕ್ಷೆ ಇಂತಿದೆ,

'Domestic Violence' ಎಂಬ ಪುಸ್ತಕದಲ್ಲಿ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳ ಬಗ್ಗೆ ಚರ್ಚಿಸಿದ್ದಾರೆ. ಮಹಿಳೆಯರ ಮೇಲೆ ಅನೇಕ ದೌರ್ಜನ್ಯಗಳಾಗುತ್ತಿದ್ದು, ಅವುಗಳಲ್ಲಿ ವಿಶೇಷವಾಗಿ ವರದಕ್ಷಿಣೆ ಪ್ರಕರಣಗಳನ್ನು ದಾಖಲಿಸಿದ್ದಾರೆ. ನ್ಯಾಯಾಲಯದಲ್ಲಿ ದಾಖಲಾದ ಪ್ರಕರಣಗಳನ್ನು ಗಣನೆಗೆ ತೆಗೆದುಕೊಂಡು, ಆ ಹಿನ್ನೆಲೆಯಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಕಾರಣ ಮತ್ತು ಪರಿಣಾಮಗಳನ್ನು ಕಂಡುಕೊಂಡಿದ್ದಾರೆ. ಈ ಪುಸ್ತಕ ಪಿಎಚ್.ಡಿ. ಮಹಾಪ್ರಬಂಧದ ಪ್ರಕಟಿತ ಪುಸ್ತಕವಾಗಿದೆ. ಇನ್ನು 'Crime against Women' ಎಂಬ ಪುಸ್ತಕದಲ್ಲಿ ಹಲವಾರು ಬಗೆಯ ಮಹಿಳಾ ದೌರ್ಜನ್ಯಗಳ ಬಗ್ಗೆ ವಿವರಿಸಿದ್ದಾರೆ. ಮಹಿಳೆಯರ ವಿರುದ್ಧದ ದೌರ್ಜನ್ಯಗಳು ಯಾಕೆ ನಡೆಯುತ್ತಿವೆ ಎಂಬುವುದನ್ನು ವಿವರಿಸಿದ್ದಾರೆ. ಇದು ಮಹಿಳಾ ಪರ ದೃಷ್ಟಿಕೋನ ಇಟ್ಟುಕೊಂಡು ರಚಿಸಿರುವುದಾಗಿ ಕಂಡುಬರುತ್ತದೆ. ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ಎಲ್ಲಾ ಬಗೆಯ ದೌರ್ಜನ್ಯಗಳ ವಿರುದ್ಧ ಧ್ವನಿ ಎತ್ತಿರುವುದು ಈ ಪುಸ್ತಕದಿಂದ ತಿಳಿದುಬರುತ್ತದೆ.

'Within the Four walls-A Profile of Domestic Violence' ಎಂಬ ಪುಸ್ತಕದಲ್ಲಿ ಸಾಮಾಜಿಕ ಹಿನ್ನೆಲೆಯಲ್ಲಿ ಹೇಗೆ ಮಹಿಳೆಯರ ಮೇಲೆ ದೌರ್ಜನ್ಯಗಳು ಸ್ಥಾಪಿತಗೊಂಡಿವೆ ಎಂಬುದನ್ನು ವಿವರಿಸಿದ್ದಾರೆ. ಅತ್ಯಾಚಾರ, ಜೀವನಾಂಶ, ವರದಕ್ಷಿಣೆ ಹೀಗೆ ಹಲವಾರು ಸಮಸ್ಯೆಗಳ ಬಗ್ಗೆ ಚರ್ಚಿಸಿದ್ದಾರೆ. ಇನ್ನು 'The Violence of Women' ಎಂಬ ಪುಸ್ತಕದಲ್ಲಿ ಮಹಿಳೆಯರ ಮೇಲಿನ ಹಿಂಸೆಗೆ ಕಾರಣಗಳನ್ನು ಸವಿವರವಾಗಿ ವಿವರಿಸುವುದರ ಜೊತೆಗೆ ಅದರ ಸ್ವರೂಪವನ್ನೂ ಸಹ ತಿಳಿಸಿದ್ದಾರೆ. ಹೆಚ್ಚು ಪ್ರಚಲಿತದಲ್ಲಿರುವ

ಮಹಿಳಾ ದೌರ್ಜನ್ಯಗಳ ಬಗ್ಗೆ ಈ ಪುಸ್ತಕದಲ್ಲಿ ಚರ್ಚಿಸಲಾಗಿದೆ. ಮಹಿಳೆಯರ ಮೇಲಿನ ದೌರ್ಜನ್ಯಗಳು ಯಾಕೆ ನಡೆಯುತ್ತಿವೆ ಎಂದು ಲೇಖಕರು ಹೇಳುವ ಮಾರ್ಗ ಪುರುಷ ಪ್ರಧಾನ ವ್ಯವಸ್ಥೆಯತ್ತಲೇ ಕೈ ಮಾಡಿ ತೋರಿಸುವುದು ಕಂಡುಬರುತ್ತದೆ.

ಇಷ್ಟಲ್ಲದೇ 'ಸಾರ್ವಜನಿಕ ವಲಯಗಳಲ್ಲಿ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯ' ಎಂಬ ಮಹಾಪ್ರಬಂಧದಲ್ಲಿ ಮಹಿಳೆಯರು ಸಾರ್ವಜನಿಕ ವಲಯದಲ್ಲಿ ಹೇಗೆಲ್ಲಾ ಹಿಂಸೆ ಅನುಭವಿಸುತ್ತಿದ್ದಾರೆ ಎಂದು ಹೇಳಲಾಗಿದೆ. ಈ ಮಹಾಪ್ರಬಂಧದಲ್ಲಿ ಕೌಟುಂಬಿಕ ವಲಯಕ್ಕಿಂತ ಸಾರ್ವಜನಿಕ ವಲಯದಲ್ಲಿಯೇ ಮಹಿಳೆಯರ ಮೇಲೆ ಹೆಚ್ಚು ದೌರ್ಜನ್ಯಗಳಾತ್ತಿವೆ ಎಂಬುದನ್ನು ವಿವರಿಸಿದ್ದಾರೆ. ಈ ಮಹಾಪ್ರಬಂಧದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಮೂಲ ಕಾರಣ ಪಿತೃಪ್ರಧಾನ ವ್ಯವಸ್ಥೆ ಎಂದು ಅಂತಿಮವಾಗಿ ಸೂಚಿಸುವುದು ಕಂಡುಬರುತ್ತದೆ. ಅಂತೆಯೇ 'ಮಹಿಳೆಯರ ಮೇಲಿನ ದೌರ್ಜನ್ಯದ ಹಿನ್ನೆಲೆಯಲ್ಲಿ : ಮಹಿಳಾ ಅಪರಾಧಗಳು, ವ್ಯಾಖ್ಯೆ ಮತ್ತು ಶಿಕ್ಷೆ' ಎಂಬ ಮತ್ತೊಂದು ಮಹಾಪ್ರಬಂಧದಲ್ಲಿ ಮಹಿಳೆಯರು ಅನೇಕ ಬಗೆಯ ದೌರ್ಜನ್ಯಕ್ಕೊಳಗಾಗುವುದರ ಜೊತೆಜೊತೆಗೆ ದೌರ್ಜನ್ಯಗಳನ್ನೂ ಸಹ ಮಾಡುತ್ತಿದ್ದಾರೆ. ಮಹಿಳೆಯರು ನಡೆಸುವ ದೌರ್ಜನ್ಯಗಳು ಯಾಕೆ ಜರುಗುತ್ತಿವೆ. ಅದರ ಹಿಂದಿನ ಸಾಮಾಜಿಕ ಹಿನ್ನೆಲೆ ಎಂತಹದ್ದು ಎಂದು ವಿವರಿಸಿದ್ದಾರೆ. ಅಂತಿಮವಾಗಿ ಪುರುಷ ಪ್ರಧಾನ ನಡಾವಳಿಗಳೇ ಮಹಿಳೆಯರು ನಡೆಸಿರುವ ದೌರ್ಜನ್ಯಗಳಿಗೆ ಮೂಲಕಾರಣ ಎನ್ನುವುದು ಕಂಡುಬರುತ್ತದೆ.

ಇನ್ನು 'ಕೌಟುಂಬಿಕ ಹಿಂಸೆ ಮತ್ತು ಮಹಿಳೆ' ಎಂಬ ಸಂಪ್ರಬಂಧದಲ್ಲಿ ಕಾನೂನಿನ ಮೂಲಕ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯದ ವ್ಯಾಖ್ಯಾನವನ್ನು ಸ್ಪಷ್ಟಪಡಿಸುತ್ತಾ, ಮಹಿಳೆಯರು ಗಂಡನ ಮನೆಯಲ್ಲಿ ಅನುಭವಿಸುವ ದೌರ್ಜನ್ಯಗಳಿಗೆ ಮಾತ್ರ ಒತ್ತು ಕೊಟ್ಟಿರುವುದು ಕಂಡುಬರುತ್ತದೆ. ಇದರಂತೆ 'ಬಿಸರಳ್ಳಿ ದೇವದಾಸಿ ಪದ್ಧತಿ' ಎಂಬ ಸಂಪ್ರಬಂಧದಲ್ಲಿ, ದೇವದಾಸಿಯರು ಅನುಭವಿಸುವ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಆರೋಗ್ಯ ಹೀಗೆ ಇತರೆ ಸಮಸ್ಯೆಗಳ ಬಗ್ಗೆ ಚರ್ಚಿಸಿದ್ದಾರೆ. ದೇವದಾಸಿ ಪದ್ಧತಿ ಒಂದು ಕೌಟುಂಬಿಕ ಹಿಂಸೆಯೂ ಹೌದು, ಸಾಮಾಜಿಕ ಸಮಸ್ಯೆಯೂ ಹೌದು. ಈ ಹಿನ್ನೆಲೆಯಲ್ಲಿ ಅವರ ಬದುಕಿನ ಸಮಗ್ರ ಚಿತ್ರಣವನ್ನು ಈ ಸಂಪ್ರಬಂಧದಲ್ಲಿ ವಿವರಿಸಿದ್ದಾರೆ.

ಮಹಿಳೆಯರ ಮೇಲಿನ ಕೌಟುಂಬಿಕ ಹಿಂಸೆಗೆ ಸಂಬಂಧಿಸಿದಂತೆ ಇಷ್ಟೆಲ್ಲಾ ಅಧ್ಯಯನಗಳು ಈಗಾಗಲೇ ಜರುಗಿದ್ದು, ಸಾರ್ವಜನಿಕ ವಲಯದಲ್ಲಿ ಮತ್ತು ಕೌಟುಂಬಿಕ ವಲಯದಲ್ಲಿ ಮಹಿಳೆಯರು ಅನುಭವಿಸುತ್ತಿರುವ ಹಿಂಸೆಯ ಸಂಪೂರ್ಣ ಚಿತ್ರಣವನ್ನು ತೆರೆದಿಡುವಲ್ಲಿ ಈ ಅಧ್ಯಯನಗಳು ಯಶಸ್ವಿಯಾಗಿವೆ. ಆದರೆ ಇವುಗಳ ಅಂತಿಮ ನಿರ್ಣಯ ಮಾತ್ರ ಪುರುಷ ಪ್ರಧಾನ ವ್ಯವಸ್ಥೆಯತ್ತಲೇ ಬೆರಳು ಮಾಡಿ ತೋರಿಸುತ್ತವೆ. ಸದ್ಯದ ಪ್ರಸ್ತುತ 'ಕೌಟುಂಬಿಕ ದೌರ್ಜನ್ಯ : ಲಿಂಗೀಯ ಅಧ್ಯಯನ' ಎಂಬ ಸಂಶೋಧನಾ ಅಧ್ಯಯನ ಪುರುಷ ಪ್ರಧಾನ ವಿಚಾರ ಧಾರೆಯೇ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳಿಗೆ ಮೂಲ ಕಾರಣವಾಗಿದ್ದು, ವ್ಯವಸ್ಥೆ ಯಾವೆಲ್ಲಾ ರಹದಾರಿಗಳ ಮೂಲಕ ತನ್ನ ಅಸ್ತಿತ್ವವನ್ನು ಸ್ಥಾಪಿತಗೊಳಿಸಿದೆ ಎಂಬುವುದನ್ನು ಬಹಿರಂಗಗೊಳಿಸಿದೆ. ಪುರುಷ ಪ್ರಧಾನ

ವ್ಯವಸ್ಥೆ ತನ್ನ ಅಸ್ತಿತ್ವಕ್ಕಾಗಿ ಮಹಿಳೆಯರ ಮೇಲೆ ಕೌಟುಂಬಿಕ ದೌರ್ಜನ್ಯಗಳನ್ನು ಸ್ಥಾಪಿತಗೊಳಿಸಿದ್ದು, ಅವುಗಳನ್ನು ಮಹಿಳಾ ಅಧ್ಯಯನದ ಹಿನ್ನೆಲೆಯಲ್ಲಿ ಗುರುತಿಸುವ ಹಾಗೂ ಸ್ತ್ರೀವಾದದ ಹಿನ್ನೆಲೆಯಲ್ಲಿ ಆ ಸಮಸ್ಯೆಗಳ ಹಿಂದಿನ ರಾಜಕಾರಣವನ್ನು ಭೇದಿಸುವ ಕಾರ್ಯ ಮಾಡಲಾಗಿದೆ. ಇತರೇ ಅಧ್ಯಯನಗಳಲ್ಲಿ ಕೇವಲ ಕೆಲವೊಂದು ಮಹಿಳಾ ಸಮಸ್ಯೆಗಳಿಗೆ ಒತ್ತು ನೀಡಿದ್ದು, ಪ್ರಸ್ತುತ ಅಧ್ಯಯನದಲ್ಲಿ ಕೌಟುಂಬಿಕ ವಲಯದಲ್ಲಿ ಮಹಿಳೆಯರು ಲಿಂಗಾಧಾರಿತವಾಗಿ ಅನುಭವಿಸುತ್ತಿರುವ ಎಲ್ಲಾ ಸಮಸ್ಯೆಗಳನ್ನು ವ್ಯವಸ್ಥಿತವಾಗಿ ಅಧ್ಯಯನಕ್ಕೊಳಪಡಿಸಲಾಗಿದೆ. ಜೊತೆಗೆ ಕಾನೂನು ಸಾಮಾಜಿಕ ಸಂದರ್ಭದಲ್ಲಿ ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂಬುವುದನ್ನೂ ಸಹ ಚರ್ಚೆಗೊಳಪಡಿಸಲಾಗಿದೆ. ಇದರಿಂದಾಗಿ ಪ್ರಸ್ತುತ ಸಂಶೋಧನಾ ಅಧ್ಯಯನ ಇದುವರೆಗಿನ ಬೇರೆ ಅಧ್ಯಯನಗಳಿಗಿಂತಾ ಬಹಳಷ್ಟು ಭಿನ್ನವಾಗಿ ಗುರುತಿಸಿಕೊಂಡಿದೆ.

೧.೬. ಅಧ್ಯಯನದ ಮಹತ್ವ

ಮಾನವ ಸಮಾಜದಲ್ಲಿ ಪುರುಷ ಪ್ರಧಾನ ವ್ಯವಸ್ಥೆ ತನ್ನ ಅಸ್ತಿತ್ವದ ಉಳಿವಿಗಾಗಿ ವಿಭಿನ್ನ ಆಯಾಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದು ಕಂಡುಬರುತ್ತದೆ. ಅವುಗಳಲ್ಲಿ ಮಹಿಳೆಯ ಮೇಲಿನ ಕೌಟುಂಬಿಕ ದೌರ್ಜನ್ಯವೂ ಕೂಡಾ ಒಂದಾಗಿದೆ. ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ ಎಂದಾಕ್ಷಣ ಸಹಜವಾಗಿ ಎಲ್ಲರ ಕಣ್ಣಿನ ಮುಂದೆ ಬರುವ ಚಿತ್ರಣ ಎಂದರೆ, ಹೆಣ್ಣು ಗಂಡನ ಮನೆಯಲ್ಲಿ ಅನುಭವಿಸುತ್ತಿರುವ ಹಿಂಸೆಯ ಘಟನಾವಳಿಗಳು. ಆದರೆ ಇದರಾಚೆಗೂ ಹೆಣ್ಣು ತಾನು ಹುಟ್ಟಿದ ಮನೆಯಲ್ಲೇ ಕೊಲೆಯಾಗುವಂತಹ ಸನ್ನಿವೇಶಗಳು ಕಂಡುಬರುತ್ತವೆ. ಅದು ಹೆಣ್ಣು ಶಿಶುಹತ್ಯೆ ಆಗಿರಬಹುದು ಅಥವಾ ಹೆಣ್ಣು ಭ್ರೂಣ ಹತ್ಯೆಯಾಗಿರಬಹುದು ಅಥವಾ ಮರ್ಯಾದೆ ಹತ್ಯೆ ಆಗಿರಬಹುದಾಗಿದೆ. ಇಂತಹ ಎಲ್ಲಾ ಬಗೆಯ ಹಿಂಸೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಗಮನಿಸಲಾಗಿದೆ. ಇವಷ್ಟೇ ಅಲ್ಲದೆ ಇನ್ನೂ ಅನೇಕ ಬಗೆಯ ದೌರ್ಜನ್ಯಗಳಿಗೆ ಹೆಣ್ಣು ಹುಟ್ಟಿದ ಮನೆಯಲ್ಲಿ ಬಲಿಯಾಗುತ್ತಿರುವುದು ಕಂಡುಬರುತ್ತದೆ. ಇದು ನಿಜಕ್ಕೂ ಬೇಸರದ ಸಂಗತಿಯಾಗಿದೆ. ಇವುಗಳೆಲ್ಲವನ್ನು ಗಮನಿಸಿದಾಗ ಹೆಣ್ಣು ಹುಟ್ಟಿದಾಗಿನಿಂದ ಸಾಯುವವರೆಗೆ ಒಂದಲ್ಲ ಒಂದು ಬಗೆಯ ದೌರ್ಜನ್ಯಕ್ಕೊಳಗಾಗುತ್ತಿದ್ದು, ಇದರ ಹಿಂದೆ ವ್ಯವಸ್ಥೆಯು ಯಾವೆಲ್ಲಾ ತಂತ್ರಗಳನ್ನು ಹೂಡಿದೆ ಎಂಬುದನ್ನು ಅರಿಯುವಲ್ಲಿ ಅಧ್ಯಯನ ಬಹಳ ಮಹತ್ವದ ಪಾತ್ರವಹಿಸಿದೆ.

ವ್ಯವಸ್ಥೆ ಅತ್ಯಂತ ಜಾಣ್ಮೆಯಿಂದ ಕ್ರಿಯಾಶೀಲವಾಗಿದ್ದು, ತನ್ನ ಉಳಿವಿಗಾಗಿ ಸ್ತ್ರೀ-ಪುರುಷರಿಬ್ಬರನ್ನು ಬಳಸಿಕೊಂಡಿರುವುದು ಕಾಣಬಹುದಾಗಿದೆ. ಕುಟುಂಬದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯವನ್ನು ಸ್ಥಾಪಿತಗೊಳಿಸಲು ಕೇವಲ ಗಂಡ, ಮಾವ, ಮೈದುನ, ತಂದೆ, ಅಣ್ಣ-ತಮ್ಮಂದಿರನ್ನು ಮಾತ್ರವಲ್ಲದೇ ತಾಯಿ, ಅತ್ತೆ, ನಾದಿನಿ, ಮಗಳು, ಅತ್ತಿಗೆ, ಅಕ್ಕ, ತಂಗಿ ಎಂಬ ಸಿದ್ಧ ಮಾದರಿಗಳನ್ನು ಹೆಣ್ಣಿಗೆ ನೀಡಿ, ಆ ಮೂಲಕ ಹೆಣ್ಣಿನಿಂದ ಹೆಣ್ಣಿಗೆ ಹಿಂಸೆ ನೀಡುವಂತೆ ಪ್ರೇರೇಪಣೆ ಮಾಡಿ ವ್ಯವಸ್ಥೆಯು ತನ್ನ ಕಾರ್ಯಸಾಧಿಸಿಕೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ಕುಟುಂಬಗಳಲ್ಲಿ ಪುರುಷರಿಂದ ಮಾತ್ರವಲ್ಲದೆ ಮಹಿಳೆಯರಿಂದಲೂ ಮಹಿಳೆಯರ ಮೇಲೆ ದೌರ್ಜನ್ಯಗಳಾಗುತ್ತಿರುವುದನ್ನು

ಕಾಣಬಹುದಾಗಿದೆ. ಇವು ಹೇಗೆ ವ್ಯವಸ್ಥೆಯ ಭಾಗವಾಗಿ ರೂಪಿತಗೊಂಡವುಗಳಾಗಿವೆ ಎಂಬುದನ್ನು ಅರಿಯುವಲ್ಲಿ ಪ್ರಸ್ತುತ ಅಧ್ಯಯನ ಬಹಳ ಮಹತ್ವದ ಪಾತ್ರವಹಿಸಿಕೊಂಡಿದೆ ಎಂದು ಹೇಳಬಹುದು.

ಕೌಟುಂಬಿಕ ವಲಯದಲ್ಲಿ ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯಗಳ ಬಗ್ಗೆ ಈಗಾಗಲೇ ಅದೆಷ್ಟೋ ಅಧ್ಯಯನಗಳಾಗಿದ್ದು, ಅವುಗಳನ್ನು ಬಿಡಿಬಿಡಿಯಾಗಿ ಚರ್ಚಿಸಲಾಗಿದೆ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಬಿಡಿ ಬಿಡಿ ಕಲ್ಪನೆಗಳನ್ನು ಇಡಿಯಾಗಿಸಿಕೊಂಡು ಸಮಸ್ಯೆಗಳನ್ನು ಒಟ್ಟುಗೂಡಿಸಿ ವಿಶ್ಲೇಷಣೆಗೊಳಪಡಿಸುವಲ್ಲಿ ಈ ಅಧ್ಯಯನ ಅತೀ ಮಹತ್ವದ ಪಾತ್ರನಿರ್ವಹಿಸಿದೆ. ಹೀಗೆ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ದಾಖಲಿಸಿ, ವಿಶ್ಲೇಷಣೆಗೊಳಪಡಿಸುವುದರ ಜೊತೆಗೆ ಆ ಸಮಸ್ಯೆಗಳಿಗೆ ಕಾರಣವಾದ ಮೂಲ ಅಂಶಗಳೇನು? ಎಂದು ಸ್ತ್ರೀವಾದದ ಹಿನ್ನೆಲೆಯಿಂದ ಅರಿಯುವಲ್ಲಿ ಅಧ್ಯಯನ ಮತ್ತಷ್ಟು ಮಹತ್ವದ ಪಾತ್ರನಿರ್ವಹಿಸಿದೆ.

ಕೌಟುಂಬಿಕ ವಲಯದಲ್ಲಿನ ಮಹಿಳಾ ದೌರ್ಜನ್ಯಗಳಿಗೆ ಕಾರಣಗಳೇನು? ಎಂದು ಪತ್ತೆ ಹಚ್ಚಿ ಸ್ತ್ರೀವಾದದ ಹಿನ್ನೆಲೆಯಲ್ಲಿ ಇದಕ್ಕೆ ಪರಿಹಾರ ಕಂಡುಕೊಳ್ಳಬಹುದಾಗಿದೆ. ಈ ನಿಟ್ಟಿನಲ್ಲಿ ಮಹಿಳೆಯರನ್ನು ದೌರ್ಜನ್ಯಗಳಿಂದ ಮುಕ್ತಗೊಳಿಸಲು ಸ್ತ್ರೀವಾದದ ಮಾರ್ಗವೊಂದಾದರೆ, ಕಾನೂನಿನ ಮಾರ್ಗೋಪಾಯ ಮತ್ತೊಂದಿದೆ. ಈ ಹಿನ್ನೆಲೆಯಲ್ಲಿ ಯಾವೆಲ್ಲಾ ಕಾನೂನುಗಳು ಮಹಿಳೆಯರನ್ನು ಹಿಂಸೆಯಿಂದ ಮುಕ್ತಗೊಳ್ಳಲು ಕಾರ್ಯನಿರತವಾಗಿವೆ ಹಾಗೂ ಅವುಗಳು ಸಾಮಾಜಿಕ ಸಂದರ್ಭದಲ್ಲಿ ಹೇಗೆ ಕಾರ್ಯನಿರ್ವಹಣೆಗೊಳ್ಳುತ್ತಿವೆ ಎಂಬುದನ್ನು ಅರಿಯುವಲ್ಲಿ ಈ ಅಧ್ಯಯನ ಬಹು ಮಹತ್ವದ ಪಾತ್ರನಿರ್ವಹಿಸಿದೆ.

ಕುಟುಂಬ ವಲಯದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯಗಳು ಸ್ಥಾಪಿತಗೊಂಡಂತೆ, ಸಾರ್ವಜನಿಕ ವಲಯದಲ್ಲೂ ಅನೇಕ ಬಗೆಯ ದೌರ್ಜನ್ಯಗಳು ಮಹಿಳೆಯರ ಮೇಲೆ ಸ್ಥಾಪಿತಗೊಂಡಿವೆ. ಈ ಎರಡೂ ವಲಯಗಳಲ್ಲಿನ ದೌರ್ಜನ್ಯಗಳ ಭೀಕರತೆ ಒಂದೇ ಪ್ರಮಾಣದಲ್ಲಿದೆ. ಆದರೆ ದೌರ್ಜನ್ಯಗಳ ಸ್ವರೂಪ, ತೀವ್ರತೆ ಮಾತ್ರ ಸಾರ್ವಜನಿಕ ವಲಯಕ್ಕಿಂತಲೂ ಕೌಟುಂಬಿಕ ವಲಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿದೆ. ಕಾರಣ ಕೌಟುಂಬಿಕ ವಲಯದಲ್ಲಿ ಮಹಿಳೆಯರ ಮೇಲಿನ ಅದೆಷ್ಟೋ ದೌರ್ಜನ್ಯಗಳು ಒಪ್ಪಿತವಾಗಿ ಸ್ಥಾಪಿತಗೊಂಡವುಗಳಾಗಿವೆ. ಕುಟುಂಬ ವಲಯ ಖಾಸಗಿ ಎಂದು ನಿರ್ಮಾಣಗೊಂಡಿದ್ದು, ಅಲ್ಲಿನ ಕಾರ್ಯ ಮತ್ತು ಕೃತ್ಯಗಳನ್ನು ಯಾರು ಪ್ರಶ್ನಿಸುವ ಗೋಜಿಗೆ ಹೋಗುವುದಿಲ್ಲ. ಇದರಿಂದಾಗಿಯೇ ಪ್ರತಿಕ್ಷಣ ಪ್ರತಿನಿತ್ಯ ನಿರಂತರವಾಗಿ ಕುಟುಂಬಗಳಲ್ಲಿ ಮಹಿಳೆಯರ ಮೇಲೆ ದೌರ್ಜನ್ಯಗಳು ನಡೆಯುತ್ತಲಿವೆ. ಇಷ್ಟಲ್ಲದೇ ದೌರ್ಜನ್ಯಗಳು ಸಹಜ ಎಂಬಂತೆ ಒಪ್ಪಿತವಾಗಿ ಜರುಗುತ್ತಿರುವುದನ್ನು ಕಾಣಬಹುದಾಗಿದೆ. ಉದಾಹರಣೆಗೆ ಗಂಡ ಹೆಂಡತಿಗೆ ಹೊಡೆಯುವುದು, ಹೆಣ್ಣು ಮಕ್ಕಳೆಂಬ ಕಾರಣಕ್ಕೆ ಲಿಂಗತಾರತಮ್ಯ ಮಾಡುವುದು, ವರದಕ್ಷಿಣೆ ಪಡೆದುಕೊಳ್ಳುವುದು ಮುಂತಾದವುಗಳಾಗಿವೆ. ಇವೆಲ್ಲಾ ಕೃತ್ಯಗಳು ಒಪ್ಪಿತ ನೆಲೆಯಲ್ಲಿ ಜಾರಿಗೊಂಡಿರುವುದನ್ನು ಗಮನಿಸಿದಾಗ ಅದು ವ್ಯವಸ್ಥೆಯ ಚಾಣಾಕ್ಷತನದ ಭಾಗವಾಗಿರುವುದಾಗಿ ಕಂಡುಬರುತ್ತದೆ. ಈ ಮೇಲಿನ ಕೃತ್ಯಗಳು ಮಾತ್ರವಲ್ಲದೇ ಮಹಿಳೆಯರ ಮೇಲೆ ಒಪ್ಪಿತವಾಗಿ ಇನ್ನೂ ಅನೇಕ ಬಗೆಯಲ್ಲಿ ದೌರ್ಜನ್ಯಗಳು ಸ್ಥಾಪಿತಗೊಂಡಿದ್ದು, ಅವು ಸಾಂಸ್ಕೃತಿಕ

ಆಚರಣೆಗಳು, ರೂಢಿ – ಪದ್ಧತಿಗಳು, ಸಂಪ್ರದಾಯಗಳೆಂಬ ಹೆಸರಿನಲ್ಲಿ ಅಧಿಕೃತವಾಗಿ ಜರಗುತ್ತಿರುವುದನ್ನು ಕಾಣಬಹುದಾಗಿದೆ. ಇವುಗಳನ್ನು ಭೇದಿಸುವ ಹಿನ್ನೆಲೆಯಲ್ಲಿ ಲಿಂಗಾಧಾರಿತವಾದ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯದ ಅಧ್ಯಯನ ಬಹಳ ಮಹತ್ವದ ಪಾತ್ರನಿರ್ವಹಿಸಿದೆ ಎಂದು ಹೇಳಬಹುದು.

೧.೭. ಅಧ್ಯಯನದ ಒಳರಚನೆ

'ಕೌಟುಂಬಿಕ ದೌರ್ಜನ್ಯ : ಲಿಂಗೀಯ ಅಧ್ಯಯನ' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಅಧ್ಯಯನದ ಉದ್ದೇಶಗಳ ಈಡೇರಿಕೆಯ ಹಿನ್ನೆಲೆಯಲ್ಲಿ ಒಟ್ಟು ಏಳು ಅಧ್ಯಾಯಗಳನ್ನಾಗಿ ವರ್ಗೀಕರಿಸಿ ಕೊಳ್ಳಲಾಗಿದೆ. ಹೀಗೆ ವಿಭಾಗಿಸಿಕೊಂಡ ಮೊದಲನೆಯ ಅಧ್ಯಾಯ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ ಎಂಬ ಶೀರ್ಷಿಕೆಯನ್ನು ಹೊಂದಿದೆ. ಇದರಲ್ಲಿ ಪ್ರಸ್ತುತ ಅಧ್ಯಯನವನ್ನು ಕೇಂದ್ರಿಕರಿಸಿಕೊಂಡ ಪ್ರಸ್ತಾವನೆ, ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆಯನ್ನು ಸ್ಪಷ್ಟಪಡಿಸುವುದರ ಜೊತೆಗೆ ಅಧ್ಯಯನಕ್ಕೆ ಬಳಸಿಕೊಂಡ ಮುಖ್ಯ ಪರಿಕರಗಳನ್ನು ಸಹ ಸ್ಪಷ್ಟಪಡಿಸಲಾಗಿದೆ. ಅಲ್ಲದೇ ಪ್ರಸ್ತುತ ಅಧ್ಯಯನ ಏಕೆ ಮಹತ್ವ ಪಡೆದುಕೊಂಡಿದೆ ಎಂಬುವುದನ್ನೂ ಸಹ ವಿವರಿಸಲಾಗಿದೆ.

'ಮಹಿಳೆಯರ ಮೇಲಿನ ಕೌಟುಂಬಿಕ ಹಿಂಸೆಯ ವ್ಯಾಖ್ಯಾನ ಹಾಗೂ ಅದರ ಸ್ವರೂಪ' ಎಂಬ ಎರಡನೆಯ ಅಧ್ಯಾಯದಲ್ಲಿ ಕುಟುಂಬ ಎಂದರೇನು? ಹಿಂಸೆ ಎಂದರೇನು? ಕೌಟುಂಬಿಕ ಹಿಂಸೆ ಎಂದರೇನು? ಹಾಗೂ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರು ಹೇಗೆ ಕೌಟುಂಬಿಕ ಹಿಂಸೆಯನ್ನು ಅನುಭವಿಸುತ್ತಿದ್ದಾರೆ ಎಂಬ ಚಿತ್ರಣವನ್ನು ವಿವರಿಸಲಾಗಿದೆ. ಜೊತೆಗೆ ಸಮಾಜದಲ್ಲಿ ಕಾನೂನುಬದ್ಧ ಕುಟುಂಬಗಳು ಮಾತ್ರವಲ್ಲದೆ, ವ್ಯವಸ್ಥೆಯ ಹುನ್ನಾರದ ಭಾಗವಾಗಿ ರೂಪಿತಗೊಂಡ ಕಾನೂನು ಬಾಹಿರ ಕುಟುಂಬಗಳನ್ನು ಒಳಗೊಂಡಂತೆ ಮಹಿಳೆಯರ ಮೇಲಿನ ಕೌಟುಂಬಿಕ ಹಿಂಸೆಯ ಸ್ವರೂಪಗಳನ್ನು ವಿವರಿಸಲಾಗಿದೆ. ಇವುಗಳನ್ನು ವ್ಯವಸ್ಥಿತವಾಗಿ ಹೆಣ್ಣು ಹುಟ್ಟಿದ ಮನೆಯಲ್ಲಿ ಅನುಭವಿಸುವ, ಗಂಡನ ಮನೆಯಲ್ಲಿ ಅನುಭವಿಸುವ, ಸಹಚರ ಜೀವನ ಸಂಗಾತಿಗಳಲ್ಲಿ ಅನುಭವಿಸುವ, ಯಾರೋ ಒಬ್ಬ ಮಹಿಳೆ ರಕ್ತ ಸಂಬಂಧ ಇಲ್ಲದೆಯೇ ಆಕೆ ವಾಸಿಸುವ ಮನೆಯ ಸದಸ್ಯಳಾಗಿ ಅಲ್ಲಿ ಅವಳು ಅನುಭವಿಸುವ ಹಿಂಸೆಯನ್ನು, ಜೊತೆಗೆ ದೇವದಾಸಿ ಮಹಿಳೆಯರ ಮೇಲೆ ಅವರ ಸಂಗಾತಿಗಳು ನಡೆಸುವ ದೌರ್ಜನ್ಯಗಳ ಸ್ವರೂಪಗಳನ್ನು ವಿವರಿಸಲಾಗಿದೆ.

ಇನ್ನು 'ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ : ಕಾರಣ, ಪರಿಣಾಮಗಳು ಮತ್ತು ಸ್ತ್ರೀವಾದಿ ನಿಲುವುಗಳು' ಎಂಬ ಮೂರನೆಯ ಅಧ್ಯಾಯದಲ್ಲಿ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಸ್ತ್ರೀವಾದಿ ನಿಲುವುಗಳನ್ನು ತಿಳಿಸುವುದರ ಮೂಲಕ ಅವುಗಳು ಮಹಿಳೆಯರನ್ನು ಎಷ್ಟರ ಮಟ್ಟಿಗೆ ಕೌಟುಂಬಿಕ ದೌರ್ಜನ್ಯದಿಂದ ಮುಕ್ತಗೊಳಿಸಲು ಸಹಾಯಕವಾಗಿವೆ ಎಂಬುದನ್ನು ಚರ್ಚಿಸಲಾಗಿದೆ. ಜೊತೆಗೆ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಕ್ಕೆ ಮೇಲ್ನೋಟದಲ್ಲಿ ಗುರುತಿಸಬಹುದಾದ ಕಾರಣಗಳನ್ನು ತಿಳಿಸಲಾಗಿದೆ. ಹಾಗೂ ಕೌಟುಂಬಿಕ ದೌರ್ಜನ್ಯದಿಂದಾಗಿ ಮಹಿಳೆಯರು ಅನುಭವಿಸುವ ನೋವು, ಪರಿಣಾಮಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

'ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳನ್ನು ತಡೆಯುವ ಕಾನೂನುಗಳು ಮತ್ತು ಅವುಗಳ ಚರ್ಚೆ' ಎಂಬ ನಾಲ್ಕನೆಯ ಅಧ್ಯಾಯದಲ್ಲಿ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳನ್ನು ತಡೆಯುವಲ್ಲಿ ಕಾನೂನುಗಳು ಯಾವುವು, ಸಾಮಾಜಿಕ ಸಂದರ್ಭದಲ್ಲಿ ಅವುಗಳ ಕಾರ್ಯನಿರ್ವಹಣೆ, ಅವುಗಳ ಬಳಕೆಯ ವಿಷಯವಾಗಿ ಚರ್ಚಿಸಲಾಗಿದೆ.

ಇನ್ನು 'ಮಾದರಿ ಪ್ರಕರಣಗಳ ನಿರೂಪಣೆ ಹಾಗೂ ಅವುಗಳ ವಿಶ್ಲೇಷಣೆ' ಎಂಬ ಐದನೆಯ ಅಧ್ಯಾಯದಲ್ಲಿ ಕ್ಷೇತ್ರಕಾರ್ಯದಿಂದ ಆಯ್ದ ಮಾದರಿ ಪ್ರಕರಣಗಳನ್ನು ದೌರ್ಜನ್ಯಕ್ಕೊಳಗಾದ ಮಹಿಳೆಯರು ಹೇಳಿದ ಮಾತುಗಳಲ್ಲಿ ಯಥಾವತ್ತಾಗಿ ದಾಖಲಿಸುವುದರ ಜೊತೆಗೆ ಅವುಗಳನ್ನು ಸ್ತ್ರೀವಾದದ ನೆಲೆಯಲ್ಲಿ ವಿಶ್ಲೇಷಣೆಗೊಳಪಡಿಸಲಾಗಿದೆ. ಅಂತೆಯೇ 'ನ್ಯಾಯಾಲಯದಲ್ಲಿ ದಾಖಲಾದ ಪ್ರಕರಣಗಳು ಹಾಗೂ ಅವುಗಳ ವಿಶ್ಲೇಷಣೆ' ಎಂಬ ಶೀರ್ಷಿಕೆಯುಳ್ಳ ಅಧ್ಯಾಯ ಆರರಲ್ಲಿ ನ್ಯಾಯಾಲಯಗಳಲ್ಲಿ ದಾಖಲಾದ ಕೆಲವು ಪ್ರಕರಣಗಳನ್ನು ಅವರು ನೀಡಿದ ಕಂಪ್ಲೇಂಟ್ ಕಾಪಿಗನುಗುಣವಾಗಿ ದಾಖಲಿಸಲಾಗಿದೆ. ಜೊತೆಗೆ ಅವುಗಳನ್ನು ಕಾನೂನುಗಳ ಹಿನ್ನೆಲೆಯಲ್ಲಿ ವಿಶ್ಲೇಷಣೆಗೊಳಪಡಿಸಲಾಗಿದೆ.

ಏಳನೆಯ ಅಧ್ಯಾಯ ಸಮಾರೋಪದಲ್ಲಿ, ಅಧ್ಯಯನದಿಂದ ದೊರೆತ ಫಲಿತಗಳನ್ನು ದಾಖಲಿಸಲಾಗಿದೆ. ಜೊತೆಗೆ ಈ ವಿಷಯಕ್ಕೆ ಸಂಬಂಧಿಸಿದಂತೆ ಭವಿಷ್ಯದಲ್ಲಿ ಭಿನ್ನ ದೃಷ್ಟಿಕೋನದಿಂದ ಕೈಗೊಳ್ಳಬಹುದಾದ ಸಂಶೋಧನೆಗಳ ಮಾರ್ಗಗಳನ್ನೂ ಸಹ ಸೂಚಿಸಲಾಗಿದೆ. ಒಟ್ಟಾರೆಯಾಗಿ ಪ್ರಸ್ತುತ ಅಧ್ಯಯನದಲ್ಲಿ ಮಹಿಳೆಯರ ಮೇಲೆ ಲಿಂಗಾಧಾರಿತವಾಗಿ ನಡೆಯುವ ಕೌಟುಂಬಿಕ ದೌರ್ಜನ್ಯಗಳ ಹಿಂದಿನ ಎಲ್ಲಾ ಮಜಲುಗಳನ್ನು ಹಿಡಿದಿಡುವ ಪ್ರಯತ್ನ ಮಾಡಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಲಿಂಗಾಧಾರಿತವಾಗಿ ಮಹಿಳೆಯರ ಮೇಲೆ ನಡೆಯುತ್ತಿರುವ ಕೌಟುಂಬಿಕ ದೌರ್ಜನ್ಯಗಳನ್ನು ಅರಿತು, ಅವುಗಳು ಯಾವ ಕಾರಣಕ್ಕಾಗಿ ಜರುಗುತ್ತಿವೆ ಎಂಬುವುದನ್ನ ಮಹಿಳಾ ಅಧ್ಯಯನದ ಹಿನ್ನೆಲೆಯಲ್ಲಿ ಪತ್ತೆ ಹಚ್ಚಿ, ನಂತರ ಅವುಗಳ ಹಿಂದಿನ ಹುನ್ನಾರವನ್ನು ಅರಿಯಲು ಸ್ತ್ರೀವಾದದ ದೃಷ್ಟಿಕೋನವನ್ನು ಬಳಸಿಕೊಂಡು ಬರವಣಿಗೆ ಮೂಲಕ ಇಡೀ ಅಧ್ಯಯನದಲ್ಲಿ ಹಂತ ಹಂತವಾಗಿ ವಿವರಿಸಲಾಗಿದೆ.

ಅಡಿಟಿಪ್ಪಣಿಗಳು

೧. ಮಹಿಳಾ ಚಳುವಳಿ, ಡಾ. ಹಾಲತಿ ಸೋಮಶೇಖರ್, ಪು.ಸಂ. ३೦.

ಅಧ್ಯಾಯ ಎರಡು

ಮಹಿಳೆಯರ ಮೇಲಿನ ಕೌಟುಂಬಿಕ ಹಿಂಸೆಯ ವ್ಯಾಖ್ಯಾನ ಹಾಗೂ ಅದರ ಸ್ವರೂಪ

೨.

ಮಹಿಳೆಯರ ಮೇಲಿನ ಕೌಟುಂಬಿಕ ಹಿಂಸೆಯ ವ್ಯಾಖ್ಯಾನ ಹಾಗೂ ಅದರ ಸ್ವರೂಪ

೨.೧. ಪ್ರಸ್ತಾವನೆ

ಮಹಿಳೆಯರ ಮೇಲಿನ ಹಿಂಸೆ ಈಗಾಗಲೇ ಸ್ಥಾಪಿತಗೊಂಡ ಸತ್ಯವಾಗಿದ್ದರೂ, ಅದರ ಸತ್ಯ-ಅಸತ್ಯತೆಯ ಪರಾಮರ್ಶನ ಮುಖ್ಯವಾಗಿರುತ್ತದೆ. ಕುಟುಂಬದೊಳಗಿನ ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ ಕಾರಣವಾಗುವ ಅಂಶಗಳ ಹಿಂದಿನ ಸತ್ಯಶೋಧನೆಗೆ ಅದರ ಮೂಲ ತಿಳುವಳಿಕೆ ಅತೀ ಮುಖ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಹಿಂಸೆ ನಡೆಯುತ್ತಿರುವ ಮೂಲ ಸ್ಥಾನವಾದ ಕುಟುಂಬದ ರಚನೆಯ ಬಗ್ಗೆ, ಅದರ ಪ್ರಕಾರಗಳ ಬಗ್ಗೆ ಹಾಗೂ ವಾಸ್ತವದಲ್ಲಿ ಅವುಗಳ ಕಾರ್ಯನಿರ್ವಹಣೆ ಬಗ್ಗೆ ತಿಳಿಯುವುದರ ಜೊತೆಗೆ, ಹಿಂಸೆ ಎಂದರೇನು? ಮಹಿಳೆಯರ ಮೇಲಿನ ಕೌಟುಂಬಿಕ ಹಿಂಸೆ ಎಂದರೇನು? ಎನ್ನುವುದನ್ನು ಪ್ರಸ್ತುತ ಅಧ್ಯಾಯದಲ್ಲಿ ಅನಾವರಣಗೊಳಿಸಲಾಗಿದೆ.

ಮಹಿಳೆಯರ ಮೇಲಿನ ಕೌಟುಂಬಿಕ ಹಿಂಸೆಯನ್ನು ವಿವರಿಸುವಲ್ಲಿ ಕಾನೂನುಬದ್ಧ ಮತ್ತು ಕಾನೂನು ಬಾಹಿರ ಕುಟುಂಬಗಳೆರಡನ್ನು (ವಿವಾಹ ಬಾಹಿರ ಸಂಬಂಧ) ಕೌಟುಂಬಿಕ ವ್ಯಾಪ್ತಿಗೆ ತೆಗೆದುಕೊಂಡು ವಿಷಯವನ್ನು ಪ್ರಸ್ತುತಪಡಿಸಲಾಗಿದೆ. ಈ ಎರಡು ಬಗೆಯ ಕುಟುಂಬಗಳಲ್ಲಿ ಮಹಿಳೆಯರು ಅನುಭವಿಸುವ ಹಿಂಸೆಯ ಸ್ವರೂಪ ಒಂದೇ ಆಗಿದ್ದರೂ ಸಹ ಆಕ್ರಮಣಕ ಧೋರಣೆಗಳು ಮಾತ್ರ ಕೊಂಚ ಭಿನ್ನವಾಗಿರುತ್ತವೆ. ಆದರೆ ಅಲ್ಲಿ ಮಹಿಳೆಯರ ಮೇಲೆ ಜರುಗುವ ದೌರ್ಜನ್ಯಗಳಿಗೆ ಸಾಮಾಜಿಕವಾಗಿ ಸಿಗುವ ನ್ಯಾಯ ನಿರ್ಣಯಗಳು ಹಾಗೂ ಕಾನೂನಾತ್ಮಕವಾಗಿ ಸಿಗುವ ನ್ಯಾಯ ನಿರ್ಣಯಗಳು ಬೇರೆ ಬೇರೆಯಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಾಯದಲ್ಲಿ ಇವುಗಳ ಬಗೆಗಿನ ಸ್ಪಷ್ಟ ಚಿತ್ರಣ ಹಾಗೂ ಅಲ್ಲಿನ ಮಹಿಳೆಯರು ಅನುಭವಿಸುತ್ತಿರುವ ದೌರ್ಜನ್ಯಗಳ ಸ್ವರೂಪವನ್ನು ದಾಖಲಿಸಲಾಗಿದೆ.

೨.೨. ಕುಟುಂಬದ ನಿರ್ವಚನ, ವೈವಿಧ್ಯತೆಯ ಸ್ವರೂಪ

ಅಲೆಮಾರಿಯಾಗಿ ಜೀವಿಸುತ್ತಿದ್ದ ಮಾನವರು ಶತಶತಮಾನಗಳ ಹಿಂದೆ ವಿವಿಧ ಉದ್ದೇಶಗಳ ಪೂರೈಕೆಗಾಗಿ ಒಂದೆಡೆ ನೆಲೆಸಲು ಪ್ರಾರಂಭಿಸಿದರು. ಹೀಗೆ ನೆಲೆಗೊಂಡವರು ಸಾಮಾಜಿಕ ಪಲ್ಲಟಗಳಿಂದಾಗಿ ಒಂದೇ ಬಗೆಯ ಅಥವಾ ಒಂದೇ ರಕ್ತ ಹಂಚಿಕೊಂಡು ಹುಟ್ಟಿದವರು ಪ್ರತ್ಯೇಕ

ಗುಂಪುಗಳಾಗಿ ವಾಸಿಸಲು ಪ್ರಾರಂಭಿಸಿದರು. ತದನಂತರದಲ್ಲಿ ಅವುಗಳೇ ಕುಟುಂಬಗಳಾಗಿ ಸ್ಥಾಪಿತಗೊಂಡವು. ಹೀಗೆ ಸೃಷ್ಟಿಗೊಂಡ ಕುಟುಂಬಗಳು ನಿರ್ದಿಷ್ಟ ಉದ್ದೇಶಗಳನ್ನಿರಿಸಿಕೊಂಡು ರಚಿಸಲ್ಪಡುತ್ತಾ ಬಂದವು. ಇವುಗಳು ಒಂದೊಂದು ಕಾಲಘಟ್ಟದಲ್ಲಿ ಒಂದೊಂದು ಬಗೆಯಾಗಿ ತನ್ನ ಸ್ವರೂಪವನ್ನು ಬದಲಿಸಿಕೊಳ್ಳುತ್ತಾ ಬಂದಿರುವುದು ಕಂಡುಬರುತ್ತದೆ. ಈ ರೀತಿಯಲ್ಲಿ ರಚನೆಗೊಂಡ ಕುಟುಂಬಗಳಿಗೆ ಯಾವಾಗಲೂ ಮಾನ್ಯತೆ ಇದೆ. ಪ್ರಸಕ್ತ ಸಂದರ್ಭದಲ್ಲಿ ಕುಟುಂಬವು ಬಹಳಷ್ಟು ರೂಪುರೇಷೆಗಳೊಂದಿಗೆ ಸ್ಥಾಪಿತಗೊಳ್ಳುತ್ತಾ ಹೊರಟಿರುವುದನ್ನು ಕಾಣಬಹುದಾಗಿದೆ. ಉದಾಹರಣೆಗೆ, ವಿಭಕ್ತ ಕುಟುಂಬಗಳಾಗಿರಬಹುದು, ಸಹಚರರಾಗಿ ಒಂದೇ ಸೂರಿನಡಿ ಬದುಕುವ ಕುಟುಂಬಗಳಾಗಿರಬಹುದು ಅಥವಾ ವಿವಾಹ ಬಾಹಿರವಾಗಿ ಕಟ್ಟಿಕೊಂಡ ಕುಟುಂಬಗಳೇ ಆಗಿರಬಹುದು. ಹೀಗೆ ಭಿನ್ನವಾಗಿ ಕಟ್ಟಿಕೊಂಡ ಎಲ್ಲಾ ಕುಟುಂಬಗಳಲ್ಲಿ ಮಹಿಳೆಯರ ಸ್ಥಾನ ಹೇಗಿದೆ ಎಂಬುವುದನ್ನು ಅರಿಯುವುದು ಪ್ರಸ್ತುತ ಅಧ್ಯಯನದ ಸವಾಲಾಗಿದೆ.

೨.೨.೧. ಸಮಾಜಶಾಸ್ತ್ರೀಯ ವಿವರಣೆ

ಸಮಾಜಶಾಸ್ತ್ರಜ್ಞರು ಸಮಾಜದ ಮೂಲ ಬೇರುಗಳನ್ನು ಹಿಡಿದವರಾಗಿದ್ದಾರೆ. ಒಟ್ಟಾರೆಯಾಗಿ ಇವರ ಅಧ್ಯಯನದ ಪ್ರಕಾರ ಕುಟುಂಬ ಎಂದರೆ, ಒಂದೇ ಸೂರಿನಡಿ ಬದುಕುವ, ಸಮಾನ ಮನೋಭಾವವುಳ್ಳ, ನಿರಂತರ ಒಡನಾಟ ಹೊಂದಿರುವ, ಒಂದೇ ಬಗೆಯ ಊಟ, ಆರ್ಥಿಕ ನಿರ್ವಹಣೆ, ವಿವಿಧ ಸಾಂಸ್ಕೃತಿಕ ಚಟುವಟಿಕೆಗಳನ್ನೊಳಗೊಂಡಂತೆ, ವಿವಾಹ ಎಂಬ ಸಂಸ್ಥೆಯ ಕಾರ್ಯಗಳಾದ ಲೈಂಗಿಕ ಹಿತಾಸಕ್ತಿಗಳ ಪೂರೈಕೆ, ಸಂತಾನೋತ್ಪತ್ತಿ ಮತ್ತು ಮಕ್ಕಳ ಪಾಲನೆ ಪೋಷಣೆಗಳನ್ನೊಳಗೊಂಡ ಎಲ್ಲಾ ಕಾರ್ಯಚಟುವಟಿಕೆಗಳು, ಕುಟುಂಬದ ಉದ್ದೇಶಗಳ ವ್ಯಾಪ್ತಿಗೆ ಒಳಪಟ್ಟಂತಹ ಸ್ವರೂಪವುಳ್ಳ ಚಿಕ್ಕ ಗುಂಪಿಗೆ ಸಮಾಜಶಾಸ್ತ್ರಜ್ಞರು 'ಕುಟುಂಬ' ಎಂದು ಹೇಳುತ್ತಾರೆ. ಇನ್ನು ಕೆಲ ಸಮಾಜಶಾಸ್ತ್ರಜ್ಞರು ಕುಟುಂಬ ಎಂದರೇನು? ಎಂಬುದಕ್ಕೆ ನಿರ್ದಿಷ್ಟ ವ್ಯಾಖ್ಯಾನಗಳನ್ನು ನೀಡಿದ್ದು, ಅವುಗಳು ಹೀಗಿವೆ,

೧. ಆಗಬರ್ನ್ ಮತ್ತು ನಿಮ್‌ಕಾಪ್‌ರವರ ಪ್ರಕಾರ

"ಸಂತತಿ ಸಹಿತವಾಗಿ ಇಲ್ಲವೆ ಸಂತತಿ ರಹಿತವಾಗಿ ಗಂಡ ಹೆಂಡತಿಯರೂ ಕೂಡಿಕೊಂಡು, ಇಲ್ಲವೇ ಗಂಡನೊಬ್ಬನೇ ಆಗಲಿ ಇಲ್ಲವೇ ಹೆಂಡತಿಯೊಬ್ಬಳೆ ಆಗಲಿ ಮಕ್ಕಳೊಂದಿಗೆ ಚಿರಕಾಲ ಬಾಳುವೆ ನಡೆಸುವ ಕ್ರಮಕ್ಕೆ ಕುಟುಂಬ"[೧] ಎಂದು ಹೇಳುತ್ತಾರೆ.

೨. ಸಮ್ನರ್ ಮತ್ತು ಕೆಲ್ಲರ್‌ರವರ ಪ್ರಕಾರ

"ಕುಟುಂಬವು ರಕ್ತ ಸಂಬಂಧದ ಬಾಂಧವ್ಯವನ್ನೇ ಪ್ರಧಾನ ಲಕ್ಷಣವಾಗಿ ಹೊಂದಿ ಕೊನೆಯ ಪಕ್ಷ ಎರಡು ತಲೆಮಾರಿನವರನ್ನಾದರೂ ಒಳಗೊಂಡ ಸಾಮಾಜಿಕ ಸಂಘಟನೆಯ ಸೂಕ್ಷ್ಮ ರೂಪದಂತಿದೆ"[೨] ಎಂದು ಹೇಳುತ್ತಾರೆ.

ಈ ಮೇಲಿನ ಉದ್ದೇಶಗಳನ್ನಿರಿಸಿಕೊಂಡು ರಚನೆಗೊಂಡಂತಹ ಕುಟುಂಬಗಳಲ್ಲಿ ಯಾವಾಗ ಹೆಣ್ಣು ಗಂಡುಗಳೆಂಬ ತಾರತಮ್ಯ ನಿರ್ಮಾಣಗೊಂಡಿತೋ, ಆಗ ಕುಟುಂಬ ತನ್ನ ಮೂಲ ಉದ್ದೇಶವನ್ನು ಕಳೆದುಕೊಳ್ಳುತ್ತಾ ಬಂದಿತೆಂದು ಹೇಳಬಹುದು. ಈ ಬಗೆಯ ಹಲವಾರು

ಗುಣಲಕ್ಷಣಗಳನ್ನುಳ್ಳ ಕುಟುಂಬಗಳು ಸಮಾಜದಲ್ಲಿ ಸ್ಥಾಪಿತಗೊಂಡಿರುವುದನ್ನು ಕಾಣಬಹುದಾಗಿದೆ. ಹೀಗೆ ಒಂದೇ ತೆರನಾದ ಗುಣ-ಲಕ್ಷಣಗಳನ್ನೊಳಗೊಂಡಂತಹ ಕುಟುಂಬಗಳು ಒಂದೆಡೆ ನೆಲೆಗೊಂಡು ಅವುಗಳು ಸಮುದಾಯ ಎಂದು ಗುರುತಿಸಿಕೊಂಡವು. ಈ ಬಗೆಯ ಸಮುದಾಯಗಳು ಒಟ್ಟುಗೂಡಿ ಸಮಾಜವಾಗಿ ನಿರ್ಮಾಣಗೊಂಡಿರುವುದನ್ನು ಕಾಣಬಹುದಾಗಿದೆ. ಈ ರೀತಿ ಹಂತ ಹಂತವಾಗಿ ರಚನೆಗೊಂಡ ಸಮಾಜಕ್ಕೆ ಮೂಲ ತಳಹದಿಯೇ ಕುಟುಂಬ ವ್ಯವಸ್ಥೆಯಾಗಿದೆ.

೨.೨.೨. ಸ್ತ್ರೀವಾದಿ ವಿವರಣೆ

ಸಮಾಜಶಾಸ್ತ್ರಜ್ಞರ ಪ್ರಕಾರ ಕುಟುಂಬದ ವಿವರಣೆ ಒಂದು ಬಗೆಯಾದರೆ, ಪ್ರಸ್ತುತ ಸಾಮಾಜಿಕ ಸಂದರ್ಭದಲ್ಲಿ ಕುಟುಂಬ ಎಂದರೇನು? ಎಂಬುವುದನ್ನು ಸ್ತ್ರೀವಾದಿ ನೆಲೆಯಲ್ಲಿ ಮರುವ್ಯಾಖ್ಯಾನಿಸುವ ಅಗತ್ಯತೆ ಇದೆ. ಕಾರಣ ಈಗಾಗಲೇ ಚರ್ಚಿಸಿದಂತೆ ಇಡೀ ಸಮಾಜ ಪುರುಷ ರೂಪಿತವಾದದ್ದಾಗಿದೆ. ಆದ್ದರಿಂದ ಕುಟುಂಬ ಎಂಬುವುದನ್ನು ಸ್ತ್ರೀವಾದದ ದೃಷ್ಟಿಕೋನದಿಂದ ಮರುವ್ಯಾಖ್ಯಾನಿಸಿಕೊಳ್ಳಬೇಕಾದ ಅಗತ್ಯತೆ ಇದೆ. ಪ್ರಸ್ತುತ ಸಾಮಾಜಿಕ ವ್ಯವಸ್ಥೆಯನ್ನು ಅರ್ಥೈಸಿಕೊಂಡು ಕುಟುಂಬವನ್ನು ಪುನಃ ವ್ಯಾಖ್ಯಾನಿಸುವುದಾದರೆ "ಒಂದೇ ಸೂರಿನಡಿ ನಿರಂತರ ಒಡನಾಟ ಹೊಂದಿರುವ, ಭಿನ್ನ ಮನೋಭಾವವುಳ್ಳ, ಪುರುಷರ ಕೈಯಲ್ಲಿ ಆರ್ಥಿಕ ನಿರ್ವಹಣೆ ಇದ್ದು, ಪುರುಷ ಶ್ರೇಷ್ಠ ಮಹಿಳೆ ಕನಿಷ್ಠ ಎಂಬ ಸಾಂಸ್ಕೃತಿಕ ಮತ್ತು ಸಾಂಪ್ರದಾಯಿಕ ಶ್ರೇಣೀಕರಣ ಹೊಂದಿದ ಕಾರ್ಯಚಟುವಟಿಕೆಗಳನ್ನೂ ಒಳಗೊಂಡಂತೆ, 'ವಿವಾಹ' ಎಂಬ ಸಂಸ್ಥೆಯ ಕಾರ್ಯಗಳಾದ ಲೈಂಗಿಕತೆ, ಸಂತಾನೋತ್ಪತ್ತಿ ಮತ್ತು ಮಕ್ಕಳ ಪಾಲನೆ, ಪೋಷಣೆ ಎಲ್ಲವೂ ಪುರುಷನ ಹಿಡಿತದಲ್ಲಿ ಇರುವಂತಹ ಕಾರ್ಯಚಟುವಟಿಕೆಗಳನ್ನುಳ್ಳ ಮಾನವರ ಗುಂಪಿಗೆ ಕುಟುಂಬ ಎಂದು ಕರೆಯಬಹುದಾಗಿದೆ". ಇದನ್ನು ಗಮನಿಸಿದಾಗ ಕುಟುಂಬ ಎಂಬ ಸಂಸ್ಥೆ ತನ್ನ ಹುಟ್ಟಿನ ಸಂದರ್ಭದಲ್ಲಿ ಇಟ್ಟುಕೊಂಡಂತಹ ಯಾವ ಧ್ಯೇಯೋದ್ದೇಶಗಳು ಇಂದು ಗೋಚರವಾಗುವುದಿಲ್ಲ. ಇಂದಷ್ಟೇ ಅಲ್ಲದೆ ಇತಿಹಾಸದುದ್ದಕ್ಕೂ ಗಮನಿಸಿದಾಗ ಕುಟುಂಬದಲ್ಲಿ ಎಲ್ಲೂ ಸ್ತ್ರೀ-ಪುರುಷರ ಮಧ್ಯೆ ಸಮಾನ ಸ್ಥಾನಮಾನಗಳು ಕಂಡುಬರುವುದಿಲ್ಲ. ಮಾನವರ ಹುಟ್ಟು, ಅವರ ಗುಂಪುಗಾರಿಕೆ ಮತ್ತು ಕುಟುಂಬ ಸ್ಥಾಪನೆಯ ಪ್ರಾರಂಭಿಕ ಹಂತದಲ್ಲಿ ಮಾತ್ರ ಸ್ತ್ರೀ-ಪುರುಷರ ನಡುವೆ ಸಮಾನತೆ ಇದ್ದಿರಬಹುದೆಂದು ಹೇಳಬಹುದಾಗಿದೆ.

೨.೩. ಅಧ್ಯಯನಕ್ಕೊಳಪಡಿಸಿದ ಕುಟುಂಬದ ಪ್ರಕಾರಗಳು

ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬವನ್ನು ಪ್ರಮುಖವಾಗಿ ಅವಿಭಕ್ತ ಕುಟುಂಬ ಮತ್ತು ವಿಭಕ್ತ ಕುಟುಂಬಗಳೆಂದು ಎರಡು ಪ್ರಕಾರಗಳಲ್ಲಿ ಗುರುತಿಸಲಾಗುತ್ತದೆ. ಅವಿಭಕ್ತ ಕುಟುಂಬ ಎಂದರೆ, ಅಲ್ಲಿ 'ಅಜ್ಜ-ಅಜ್ಜಿ, ತಂದೆ-ತಾಯಿ, ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು, ಅತ್ತಿಗೆ-ನಾದಿನಿಯರು, ಅಳಿಯಂದಿರು ಹಾಗೂ ಇವರ ಮಕ್ಕಳನ್ನೂ ಸಹ ಒಳಗೊಂಡಂತಹ ಗುಂಪಾಗಿರುತ್ತದೆ'. ಇನ್ನು ವಿಭಕ್ತ ಕುಟುಂಬ ಎಂದರೆ, ಅಲ್ಲಿ 'ಗಂಡ-ಹೆಂಡತಿ, ಹೆಚ್ಚೆಂದರೆ ಅವರ ಮಕ್ಕಳ ನೆಲೆಗೊಳ್ಳುವಿಕೆಗೆ ಮಾತ್ರ ಸೀಮಿತವಾಗಿರುತ್ತದೆ'. ನಮ್ಮ ಸಮಾಜದಲ್ಲಿ ಈ ಎರಡೂ ಬಗೆಯ ಕುಟುಂಬ ವ್ಯವಸ್ಥೆಗಳು ಸ್ಥಾಪಿತಗೊಂಡಿರುವುದನ್ನು ಕಾಣಬಹುದಾಗಿದೆ. ಸಾಮಾಜಿಕ ಸಂದರ್ಭದಲ್ಲಿ ಈ ಎರಡು ಬಗೆಯ ಕುಟುಂಬ ವ್ಯವಸ್ಥೆಗಳು ಭಿನ್ನ ಭಿನ್ನ ಸ್ವರೂಪಗಳಲ್ಲಿ ಸ್ಥಾಪಿತಗೊಂಡಿರುವುದು ಕಂಡುಬರುತ್ತದೆ.

ಅವುಗಳೆಂದರೆ, ಮಾತೃಸ್ಥಾನೀಯ, ಪಿತೃಸ್ಥಾನೀಯ, ಮಾತೃಮೂಲೀಯ ಮತ್ತು ಪಿತೃಮೂಲೀಯ ಕುಟುಂಬ ವ್ಯವಸ್ಥೆಗಳಾಗಿವೆ. ವಿಶೇಷವೆಂದರೆ ಇವುಗಳೆಲ್ಲವೂ ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಗಳಾಗಿರುವುದೇ ಗಮನಾರ್ಹ ಸಂಗತಿಯಾಗಿದೆ.

ಇವುಗಳ ಸ್ವರೂಪವನ್ನು ತಿಳಿಯುದಾದರೆ, ಮಾತೃಸ್ಥಾನೀಯ ಕುಟುಂಬ ವ್ಯವಸ್ಥೆಯಲ್ಲಿ ಹೆಣ್ಣನ್ನು ಮದುವೆಯಾದ ಪುರುಷನು ಹೆಣ್ಣಿನ ಮನೆಗೆ ಬಂದು ವಾಸಿಸಬೇಕಾಗುತ್ತದೆ. ಹಾಗೂ ಇದಕ್ಕೆ ತದ್ವಿರುದ್ಧವಾದ ವ್ಯವಸ್ಥೆಯೇ ಪಿತೃಸ್ಥಾನೀಯ ವ್ಯವಸ್ಥೆ. ಇಲ್ಲಿ ಮದುವೆಯಾದ ಹೆಣ್ಣು ಗಂಡಿನ ಮನೆಗೆ ಬಂದು ವಾಸವಿರಬೇಕಾಗುತ್ತದೆ. ಇನ್ನು ಮಾತೃ ಮೂಲೀಯ ಕುಟುಂಬ ಪದ್ಧತಿಯಲ್ಲಿ ಮನೆಯ ಮಕ್ಕಳು, ಮೊಮ್ಮಕ್ಕಳೆಲ್ಲಾ ತಾಯಿಯ ವಂಶದಿಂದ ಗುರುತಿಸಲ್ಪಟ್ಟರೆ, ಪಿತೃಮೂಲೀಯ ಕುಟುಂಬ ಪದ್ಧತಿಯಲ್ಲಿ ಮನೆಯ ಮಕ್ಕಳು, ಮೊಮ್ಮಕ್ಕಳೆಲ್ಲಾ ತಂದೆಯ ವಂಶದಿಂದ ಗುರುತಿಸಲ್ಪಡುತ್ತಾರೆ. ಈ ನಾಲ್ಕು ಬಗೆಯ ಕುಟುಂಬ ಪದ್ಧತಿಗಳು ಪುರುಷ ಪ್ರಧಾನ ವ್ಯವಸ್ಥೆಯ ಭಾಗಗಳಾಗಿ ರೂಪಿತಗೊಂಡಿರುವುದು ಕಂಡುಬರುತ್ತದೆ.

ಈ ಮೇಲಿನ ನಾಲ್ಕು ಬಗೆಯ ಕುಟುಂಬ ವ್ಯವಸ್ಥೆಗಳಲ್ಲಿ, ಸ್ತ್ರೀ-ಪುರುಷರ ಸ್ಥಾನ ಪಲ್ಲಟಗೊಳ್ಳುವ ಹಾಗೂ ವಂಶದ ಮೂಲಕ ಕುಟುಂಬದ ವ್ಯಕ್ತಿಗಳನ್ನು ಗುರುತಿಸುವ ಮೂಲಕವಷ್ಟೇ ಅವುಗಳ ಸ್ವರೂಪ ಭಿನ್ನವಾಗಿದ್ದು, ಇಲ್ಲಿಯೂ ಪುರುಷರೇ ಸರ್ವಾಧಿಕಾರ ಹೊಂದಿರುವುದು ಗೋಚರವಾಗುತ್ತದೆ. ಸ್ತ್ರೀ ಮೂಲೀಯ ಮತ್ತು ಸ್ತ್ರೀ ಸ್ಥಾನೀಯ ಕುಟುಂಬಗಳಲ್ಲಿ ಸಣ್ಣ-ಪುಟ್ಟ ಆಸ್ತಿಗಳನ್ನು ಮಹಿಳೆಯರು ಹೊಂದದವರಾಗಿರುತ್ತಾರೆ. ಹೀಗಿದ್ದರೂ ಸಹ ಅಲ್ಲಿ ಪರೋಕ್ಷವಾಗಿ ಮನೆಯ ಗಂಡಸರೇ ಆ ಆಸ್ತಿಯ ಮೇಲೆ ಅಧಿಕಾರ ಹೊಂದಿರುತ್ತಾರೆ. ಈ ಎಲ್ಲಾ ಭಿನ್ನ ಗುಣಲಕ್ಷಣಗಳನ್ನು ಹೊಂದಿದ ಕುಟುಂಬ ವ್ಯವಸ್ಥೆಗಳಲ್ಲಿ ಮಹಿಳೆಯರು ಕಡೆಗಾಣಿಸಲ್ಪಟ್ಟವರಾಗಿದ್ದಾರೆಯೇ ಹೊರತು ಎಲ್ಲೂ ಅವರ ಸ್ಥಾನ-ಮಾನಗಳಲ್ಲಿ ಸಮಾನತೆ ಗೋಚರಿಸುವುದಿಲ್ಲ. ಇದು ಮಹಿಳೆಯರು ಆಳಿಸಿಕೊಳ್ಳುವವರಾಗಿದ್ದಾರೆ ಎಂಬುದನ್ನು ಮತ್ತಷ್ಟು ಸಾರಿ ಹೇಳುತ್ತದೆ.

ಈ ಬಗೆಯ ಕುಟುಂಬ ವ್ಯವಸ್ಥೆಯ ಅಧಿಕಾರ ಛಾಯೆಗಳನ್ನು ಗಮನಿಸಿದಾಗ ಅವು ಪುರುಷ ಪ್ರಧಾನ ನೆಲೆಯಲ್ಲಿ ರಚನೆಗೊಂಡವುಗಳಾಗಿವೆ ಎಂಬುವುದನ್ನು ಸ್ಪಷ್ಟಪಡಿಸುತ್ತದೆ. ಅಲ್ಲಿ ವ್ಯವಸ್ಥೆ ತನ್ನ ಅಧಿಕಾರದ ಉಳಿವಿಗಾಗಿ ಏನು ಬೇಕೋ ಅಂತಹ ಎಲ್ಲಾ ತಂತ್ರಗಳನ್ನು ಮಹಿಳೆಯರ ವಿರುದ್ಧ ಹೂಡಿರುವುದು ಕಾಣಬರುತ್ತದೆ. ಅಗತ್ಯ ಅನುಕೂಲತೆಗಳನ್ನು ಆಧರಿಸಿ ಈ ಭಿನ್ನ ಗುಣಲಕ್ಷಣಗಳುಳ್ಳ ಕುಟುಂಬಗಳನ್ನು ವ್ಯವಸ್ಥೆ ಸ್ಥಾಪಿತಗೊಳಿಸಿದೆ ಎಂದು ಹೇಳಬಹುದು.

೨.೩.೧. ಕಾನೂನು ಒಪ್ಪಿತ ಕುಟುಂಬಗಳು

ಕುಟುಂಬ ವ್ಯವಸ್ಥೆಯ ಬಗ್ಗೆ ಈಗಾಗಲೇ ಚರ್ಚಿಸಲಾಗಿದ್ದು, ವಿವಾಹ ಎಂಬ ಮತ್ತೊಂದು ಸಂಸ್ಥೆಯು ಕುಟುಂಬದ ಅಸ್ತಿತ್ವಕ್ಕೆ ಕಾರಣವಾಗಿದೆ. ಕುಟುಂಬದಲ್ಲಿಯ ಸದಸ್ಯರುಗಳ ನೈಸರ್ಗಿಕ ಕ್ರಿಯೆಗಳಾದ ಲೈಂಗಿಕ ಹಿತಾಸಕ್ತಿ ಹಾಗೂ ಸಂತಾನೋತ್ಪತ್ತಿ ಮುಖ್ಯವಾಗಿರುತ್ತದೆ. ಇವುಗಳ ಪೂರೈಕೆಗಾಗಿ ಕುಟುಂಬದಲ್ಲಿ ವ್ಯವಸ್ಥಿತವಾದ ಚೌಕಟ್ಟೊಂದನ್ನು ರೂಪಿಸಿಕೊಳ್ಳಲಾಗಿದ್ದು, ಇದಕ್ಕೆ ವಿವಾಹ ವ್ಯವಸ್ಥೆ ಎಂದು ಕರೆಯಲಾಗುತ್ತದೆ. ಈ ವಿವಾಹ ಸಂಸ್ಥೆಯ ಕಾರ್ಯಗಳನ್ನೊಳಗೊಂಡಂತೆ ಇದರ ವಿಸ್ತೃತ

ಚಟುವಟಿಕೆಗಳು ಕುಟುಂಬದ ಕಾರ್ಯಗಳಾಗಿರುತ್ತವೆ. ವಿವಾಹ ಸಂಸ್ಥೆ ಸ್ವಲ್ಪ ಮಟ್ಟಿಗೆ ಜಟಿಲವಾದ ಸಂಗತಿಯಾಗಿದೆ. ಕಾರಣ ವಿವಾಹ ಸಂಬಂಧಗಳು ಜಾತಿ, ಧರ್ಮಗಳ ಅಂಕಿತದಲ್ಲಿ ನಡೆದುಕೊಂಡು ಹೋಗುತ್ತಿರುವುದಾಗಿದೆ.

ಈ ಹಿನ್ನೆಲೆಯಲ್ಲಿ ವಿವಾಹದ ಒಂದು ಸಂಕ್ಷಿಪ್ತ ಚಿತ್ರಣ ಅಗತ್ಯವಾಗುತ್ತದೆ. ವಿವಾಹ ಸಂಬಂಧಗಳು ಸಾಮಾನ್ಯವಾಗಿ ಸ್ವ-ಗೋತ್ರಗಳಲ್ಲಿ ಜರುಗುವುದಿಲ್ಲ. ಬದಲಾಗಿ ಮದುವೆ ಆಗುವ ಗಂಡು-ಹೆಣ್ಣು ಒಂದೇ ಹೊಟ್ಟೆಯಲ್ಲಿ ಹುಟ್ಟಿರದೇ, ಸೋದರ ಸೋದರಿಯರಾಗಿರದೇ ಇರುವವರಲ್ಲಿ ವಿವಾಹ ಸಂಬಂಧಗಳು ಏರ್ಪಡುತ್ತವೆ. ಇವುಗಳಿಗೆ ಸಾಮಾಜಿಕವಾದ ಮಾನ್ಯತೆಯೂ ಕೂಡಾ ಲಭ್ಯವಾಗುತ್ತದೆ. ಈ ಬಗೆಯಲ್ಲಿ ಏರ್ಪಡಿಸುವ ವಿವಾಹಗಳಿಗೆ ಒಂದು ನಿರ್ದಿಷ್ಟ ಸ್ವರೂಪವಿದೆ. ಅದು ಏಕಪತ್ನಿತ್ವ ಅಥವಾ ಏಕಪತಿತ್ವ, ಏಕಪತ್ನಿತ್ವ ಅಥವಾ ಏಕಪತಿತ್ವ ಎಂದರೆ ಒಬ್ಬ ಪುರುಷ ಒಬ್ಬಳನ್ನು ಮದುವೆಯಾಗುವುದೆಂದು ಅರ್ಥ. ಇದನ್ನು ಹೊರತುಪಡಿಸಿ ಮುಸ್ಲಿಂ ಸಮುದಾಯದಲ್ಲಿ ಬಹುಪತ್ನಿತ್ವಕ್ಕೆ ಅವಕಾಶವಿದೆ. ಅದಕ್ಕೆ ಕಾರಣ ಆ ಸಮುದಾಯದ ಹಿತಾಸಕ್ತಿ ಆಗಿರಬಹುದು. ಈ ಬಗೆಯ ವಿವಾಹಗಳು ಅಂದರೆ, ಏಕಪತ್ನಿತ್ವ ಅಥವಾ ಏಕಪತಿತ್ವ ಹಾಗೂ ಮುಸ್ಲಿಂರಲ್ಲಿ ಬಹುಪತ್ನಿತ್ವಗಳು ಜಾರಿಯಲ್ಲಿವೆ. ಕಾನೂನಿನಲ್ಲಿ ಇವುಗಳಿಗೆ ಮಾನ್ಯತೆಯೂ ಇದೆ. ಆದರೆ ಸಮಾಜದಲ್ಲಿ ಬಹುಪತ್ನಿತ್ವದಂತಹ ಪದ್ಧತಿ ಜಾರಿಯಲ್ಲಿದ್ದು ಇದು ಪುರುಷ ಪ್ರಧಾನತೆಯ ಭಾಗವಾಗಿ ರೂಪಗೊಂಡದ್ದಾಗಿದೆ. ಕಾನೂನು ಬದ್ಧವಾಗಿ ಏಕಪತ್ನಿತ್ವ ಜಾರಿಗೊಳಿಸಿದ್ದರೂ ಸಮಾಜದಲ್ಲಿ ಬಹುಪತ್ನಿತ್ವದಂತಹ (ಗಂಡಸಿನ ಲೈಂಗಿಕ ಸ್ವಾತಂತ್ರ್ಯಕ್ಕಾಗಿ) ಪದ್ಧತಿಯು ಆಚರಣೆಯಲ್ಲಿದೆ. ಅಷ್ಟಲ್ಲದೇ ಗಂಡಸರ ಲೈಂಗಿಕ ಅಪೇಕ್ಷೆಗಳಿಗಾಗಿ ದೇವದಾಸಿಯಂತಹ ಪದ್ಧತಿಯೂ ಪ್ರಚಲಿತದಲ್ಲಿದೆ.

ವಿವಾಹದ ಕಾರ್ಯಾಚರಣೆಯು ಮಹಿಳೆಯರಿಗೆ ಮುಖ್ಯವಾಗಿ ಕೆಲವೊಂದು ಕಲ್ಪನೆಗಳನ್ನು ಹುಟ್ಟುಹಾಕಿದೆ. ಅದು ಶೀಲದ ಕಲ್ಪನೆ, ವೈದವ್ಯ ಪರಿಪಾಲನೆ, ಸತಿ ಪದ್ಧತಿಯಂತಹ ಆಚರಣೆಗಳಾಗಿವೆ. ಇಂದು ಸತಿ ಪದ್ಧತಿಯಂತಹ ಆಚರಣೆ ಇಲ್ಲವಾದ್ದರಿಂದ ಅದನ್ನು ಕೇವಲ ನಾಮಾಂಕಿತಗೊಳಿಸಿ ಅದಕ್ಕಿಂತಲೂ ಕಠೋರ ಆಚರಣೆಯಾದ ವೈದವ್ಯ ಪರಿಪಾಲನೆ ಮತ್ತು ಶೀಲದ ಕಲ್ಪನೆಯನ್ನು ವಿವಾಹ ಸಂಸ್ಥೆ ಸ್ಥಾಪಿತಗೊಳಿಸಿಕೊಂಡು ಹೊರಟಿದೆ. ಸಮಾಜದಲ್ಲಿ 'ಹೆಣ್ಣಿನ ಲೈಂಗಿಕತೆ' ಎಂಬುದನ್ನು ಹೆಸರಿಸಲಾರದಷ್ಟು ಗೌಪ್ಯತೆ ಮತ್ತು ಅದರ ಮೇಲೆ ಹಿಡಿತವನ್ನು ವ್ಯವಸ್ಥೆಯು ಸ್ಥಾಪಿಸಿರುವುದು ಕಾಣಬರುತ್ತದೆ.

ಈ ಬಗೆಯ ಚರ್ಚೆ ಅಥವಾ ವಿವರಣೆಯ ಉದ್ದೇಶ ಇಷ್ಟೆ, ಭಾರತ ದೇಶ ಕಾನೂನು ವ್ಯವಸ್ಥೆಯೊಂದನ್ನು ಅಳವಡಿಸಿಕೊಂಡಿದ್ದು ಅದರನ್ವಯ ಸ್ತ್ರೀ-ಪುರುಷರಿಬ್ಬರೂ ಸಮಾನರು. ಹಾಗೂ ಎಲ್ಲಾ ನ್ಯಾಯ ನಿರ್ಣಯಗಳು ಸಮಾನವಾಗಿ ಲಭ್ಯವಾಗುತ್ತವೆ. ಹೀಗಿರುವಾಗ ಸಮಾಜದಲ್ಲಿ ಕಾನೂನು ರೂಪಿಸಿದ 'ವಿವಾಹ'ದ ಚೌಕಟ್ಟನ್ನು ಹೊರತುಪಡಿಸಿ ಪುರುಷರು ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕಾನೂನು ಮತ್ತು ಸಮಾಜದ ನಡಾವಳಿಗಳು ಭಿನ್ನ ಆಯಾಮಗಳಂತೆ ಗೋಚರಿಸುತ್ತವೆ. ಸಮಾಜದ ಒಳಿತಿಗಾಗಿ ಕಾನೂನು ಇದ್ದರೂ, ಕಾನೂನು ಮತ್ತು ವ್ಯವಸ್ಥೆ ಎರಡು ಬೇರೆ ಬೇರೆ ಎಂಬಂತೆ ಕಾಣುತ್ತವೆ. ಒಮ್ಮೊಮ್ಮೆ ಎರಡೂ ಘರ್ಷಣೆಗೊಳಪಟ್ಟಂತೆ ಭಾಸವಾಗುತ್ತದೆ. ಇದರಿಂದಾಗಿ ಪ್ರಸ್ತುತ ಅಧ್ಯಾಯ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ

ವಾದ್ದರಿಂದ ಕಾನೂನು ಏನೇ ಸ್ಪಷ್ಟಪಡಿಸಿದರೂ ಸಮಾಜದಲ್ಲಿನ ಕಾನೂನುಬದ್ಧ ಮತ್ತು ಕಾನೂನುಬಾಹಿರ ಎಂಬ ಎರಡೂ ಬಗೆಯ ಕುಟುಂಬಗಳನ್ನು ಆಯ್ದುಕೊಳ್ಳಲಾಗಿದೆ. ಜೊತೆಗೆ ಕಾನೂನು ತನ್ನ ಮಿತಿಯನ್ನು ಮೀರಿ ನಡೆಯುವವರಿಗೆ ಯಾವ ನ್ಯಾಯ ನಿರ್ಣಯಗಳನ್ನು ದೊರಕಿಸುವುದಿಲ್ಲ. ಈ ಹಿನ್ನೆಲೆಯಲ್ಲಿ ಕಾನೂನುಬಾಹಿರ ಕುಟುಂಬಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ ಪರಿಹಾರ ಇಲ್ಲದಂತಾಗಿದೆ. ದೌರ್ಜನ್ಯಗಳ ಸ್ವರೂಪ ಒಂದೇ ಇದ್ದರೂ ನ್ಯಾಯ ನಿರ್ಣಯಗಳು ಕೆಲವೊಂದು ಸಂದರ್ಭಗಳಲ್ಲಿ ಬೇರೆ ಬೇರೆಯಾಗಿರುತ್ತವೆ. ಜೊತೆಗೆ ವೈವಾಹಿಕ ವ್ಯವಸ್ಥೆಯು ಸ್ತ್ರೀಯರನ್ನು ಅಂಕಿತದಲ್ಲಿಟ್ಟುಕೊಳ್ಳಲು ಸ್ಥಾಪಿತಗೊಂಡ ಸಂಸ್ಥೆಯಾಗಿದ್ದು, ಆ ಮೂಲಕ ಮಹಿಳೆಯರನ್ನು ಹೇಗೆ ಹಿಂಸೆಗೊಳಪಡಿಸಲಾಗುತ್ತದೆ ಎಂಬುದನ್ನು ಅರಿಯಬಹುದಾಗಿದೆ.

ವಿವಾಹದ ಹಿನ್ನೆಲೆಯಲ್ಲಿ ಕಾನೂನುಬದ್ಧ ಕುಟುಂಬ ಹಾಗೂ ಕಾನೂನುಬಾಹಿರ ಕುಟುಂಬ ಗಳೆರಡನ್ನೂ ಆಯ್ದುಕೊಳ್ಳಲಾಗಿದೆ. ಕಾನೂನುಬದ್ಧ ಕುಟುಂಬಗಳೆಂದರೆ ಅವು ವಿವಾಹದ ಹಿನ್ನೆಲೆಯಲ್ಲೇ ನಿರ್ಮಿತಗೊಂಡಿರುತ್ತವೆ. ಈ ಆಧಾರವಾಗಿ ಕಾನೂನು ಕೆಲವೊಂದು ಮತ, ಧರ್ಮಗಳಿಗೆ ಭಿನ್ನ ಭಿನ್ನವಾದ ನೀತಿ ನಿಯಮಾವಳಿಗಳನ್ನು ಸೂಚಿಸುತ್ತದೆ. ಒಟ್ಟಾರೆಯಾಗಿ ಅವುಗಳನ್ನು ಸಾರಾಂಶೀಕರಿಸಿ ಹೇಳುವುದಾದರೆ,

೧. ವಿವಾಹವಾಗಲು ಹಿಂದೂಗಳಲ್ಲಿ, ಕ್ರಿಶ್ಚಿಯನ್‌ರಲ್ಲಿ ಹುಡುಗನಿಗೆ ೨೧ ವರ್ಷ ವಯಸ್ಸು ಹುಡುಗಿಗೆ ೧೮ ವರ್ಷ ವಯಸ್ಸಾಗಿರಬೇಕು. ಮುಸ್ಲಿಮರಲ್ಲಿ ಈ ಬದ್ಧತೆ ಇರುವುದಿಲ್ಲ. ಒಂದು ವೇಳೆ ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡಿದ್ದರೆ, ಅವರು ತಾರುಣ್ಯಕ್ಕೆ ಬಂದ ನಂತರದಲ್ಲಿ ವಿವಾಹವಾದ ಸಂಗಾತಿಗಳೊಂದಿಗೆ ಇರಬೇಕೋ, ಬೇಡವೋ ಎಂಬುವುದು ಅವರ ಆಯ್ಕೆಗೆ ಸಂಬಂಧಿಸಿದ್ದಾಗಿರುತ್ತದೆ. ಇನ್ನು ಪಾರ್ಸಿಗಳಲ್ಲಿ ಹುಡುಗ ಮತ್ತು ಹುಡುಗಿ ಇಬ್ಬರಿಗೂ ೨೧ ವರ್ಷ ವಯಸ್ಸಾಗಿರಬೇಕು.
೨. ಹಿಂದೂ ಅಥವಾ ಇತರೆ ಧರ್ಮ ದ್ವಿಪತಿತ್ವ ಅಥವಾ ದ್ವಿಪತ್ನಿತ್ವವನ್ನು ನಿರಾಕರಿಸುತ್ತದೆ. ಒಂದು ವೇಳೆ ಎರಡನೇ ವಿವಾಹವಾಗಬೇಕಿದ್ದರೆ, ಅದಕ್ಕೆ ಮೊದಲನೇ ಸಂಗಾತಿಯ ಒಪ್ಪಿಗೆ ಇರಬೇಕಾಗುತ್ತದೆ. ಒಂದು ವೇಳೆ ಸಂಗಾತಿ ಸತ್ತುಹೋದ ಪಕ್ಷದಲ್ಲಿ ಅವರಿಗೆ ಎರಡನೇ ವಿವಾಹಕ್ಕೆ ಕಾನೂನಿನ ಅನುಮತಿಯಿರುತ್ತದೆ. ಹಾಗೆಯೇ ಮುಸ್ಲಿಮರಲ್ಲಿ ಬಹು ಪತ್ನಿತ್ವಕ್ಕೆ ಅವಕಾಶವಿರುತ್ತದೆ. ಆದರೆ ಅಲ್ಲಿ ಎಲ್ಲಾ ಹೆಂಡತಿಯರ ಒಪ್ಪಿಗೆ ಇರಬೇಕಾಗುತ್ತದೆ.
೩. ವಿವಾಹವಾಗುವ ಹುಡುಗ ಅಥವಾ ಹುಡುಗಿ ನಿಷೇಧಿತ ವರ್ಗಕ್ಕೆ ಸೇರಿದವರಾಗಿರಬಾರದು. ಇದು ಎಲ್ಲಾ ಧರ್ಮಗಳಿಗೂ ಅನ್ವಯಿಸುತ್ತದೆ. ಉದಾ: ತಂಗಿ–ಅಣ್ಣ, ಅಕ್ಕ–ತಮ್ಮ, ತಾಯಿ–ಮಗ, ತಂದೆ–ಮಗಳು ಹೀಗೆ ಕಾನೂನು ಕೆಲ ಸಂಬಂಧಗಳನ್ನು ಆಯಾ ಧರ್ಮಗಳ ವಿವಾಹ ಕಾಯ್ದೆಯ ಪರಿಮಿತಿಯಲ್ಲಿ ಹಲವು ನಿಷೇಧಿತ ಸಂಬಂಧಗಳ ಪಟ್ಟಿಯನ್ನು ನೀಡುತ್ತದೆ.
೪. ವಿವಾಹವಾಗುವ ವ್ಯಕ್ತಿಗಳು ಯಾವುದೇ ಮಾನಸಿಕ ಅಥವಾ ದೈಹಿಕ ನ್ಯೂನ್ಯತೆಗಳಿಂದ ಬಳಲುತ್ತಿರಬಾರದು, ಜೊತೆಗೆ ಅವರು ಸಂತಾನ ಹೊಂದಲು ಯೋಗ್ಯವಾಗಿರಬೇಕು.
೫. ಕಾನೂನುಬದ್ಧ ವಿವಾಹಗಳಿಗೆ ಸಾಕ್ಷಿಯ ಅವಶ್ಯಕತೆ ಇರುತ್ತದೆ. ಅದು ಲಗ್ನ ಪತ್ರಿಕೆ ಆಗಿರಬಹುದು, ಜನಗಳ ಸಾಕ್ಷಿಯಾಗಿರಬಹುದು ಅಥವಾ ರಿಜಿಸ್ಟರ್ ದಾಖಲಾತಿಗಳಾಗಿರಬಹುದು.

ಇವೆಲ್ಲವುಗಳು ಕಾನೂನುಬದ್ಧ ವಿವಾಹಗಳೆಂದು ಗುರುತಿಸುವ ಮಾರ್ಗವಾಗಿದ್ದರೆ, ಇವುಗಳಿಗೆ ಬದ್ಧವಾಗಿಲ್ಲದೇ ವಿವಾಹಗಳು ಏರ್ಪಟ್ಟಿದ್ದರೆ ಅವೆಲ್ಲವೂ ಕಾನೂನುಬಾಹಿರ ವಿವಾಹಗಳಾಗಿರುತ್ತವೆ. ಉದಾ : ಹೆಂಡತಿಯ ಒಪ್ಪಿಗೆ ಇಲ್ಲದೇ ಎರಡನೇ ಮದುವೆಯಾಗುವುದು, ಅನಾರೋಗ್ಯ ಕುರಿತಾದ ವಿಷಯವನ್ನು ತಿಳಿಸದೇ (ಮಾನಸಿಕ ಮತ್ತು ದೀರ್ಘಕಾಲದ ದೈಹಿಕ ಸಮಸ್ಯೆಗಳಿಂದ ಬಳಲುತ್ತಿರುವವರು) ಮದುವೆಯಾಗಿದ್ದರೆ, ಇತ್ಯಾದಿ... ಅಂತವುಗಳು ಕಾನೂನುಬಾಹಿರ ವಿವಾಹಗಳಾಗಿರುತ್ತವೆ.

ಪುರುಷ ಪ್ರಧಾನ ಸಮಾಜದಲ್ಲಿ ವಿವಾಹಬದ್ಧ ಮತ್ತು ವಿವಾಹ ಬಾಹಿರ ಕುಟುಂಬಳೆರಡು ಸ್ಥಾಪಿತಗೊಂಡಿದ್ದು, ಈ ಎರಡೂ ಬಗೆಯ ಕುಟುಂಬಗಳಲ್ಲಿ ಸರಿಸುಮಾರು ಒಂದೇ ಬಗೆಯ ದೌರ್ಜನ್ಯಗಳು ಜರಗುತ್ತಿವೆ, ಆದ್ದರಿಂದ ಅವುಗಳೆರಡನ್ನು ಒಟ್ಟುಗೂಡಿಸಿ ಇಲ್ಲಿ ಚರ್ಚಿಸಲಾಗಿದೆ. ಇವುಗಳಲ್ಲಿಯೇ ಮತ್ತೆ ಹುಟ್ಟಿದ ಮನೆಯಲ್ಲಿ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳು, ಗಂಡನ ಮನೆಯಲ್ಲಿ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳು, ಸಹಚರ ಜೀವನ ಸಂಗಾತಿಗಳಲ್ಲಿ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳು, ರಕ್ತ ಸಂಬಂಧ ಇದ್ದು ಅಥವಾ ಇಲ್ಲದೆಯೇ ಆ ಕುಟುಂಬದ ಸದಸ್ಯರಾಗಿದ್ದಲ್ಲಿ ಅಲ್ಲಿನ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳು, ದೇವದಾಸಿ ಕುಟುಂಬಗಳಲ್ಲಿ (ವಿಶೇಷವಾಗಿ ಸಂಗಾತಿಗಳಿಂದ) ಆಗುವ ದೌರ್ಜನ್ಯಗಳೆಂದು ವಿಂಗಡಿಸಿಕೊಳ್ಳಲಾಗಿದೆ.

ಹುಟ್ಟಿದ ಮನೆಯಲ್ಲಿ ಸಾಮಾನ್ಯವಾಗಿ ಹೆಣ್ಣು ಮಗು ಭ್ರೂಣವಾಗಿರುವಾಗಲೇ ಅಂತ್ಯವನ್ನು ಕಾಣುತ್ತದೆ. ಅಲ್ಲದೇ ಹೆಣ್ಣು ಶಿಶು ಹತ್ಯೆ, ಬಾಲ್ಯ ವಿವಾಹ, ಲಿಂಗ ತಾರತಮ್ಯ ಹೀಗೆ ಇನ್ನೂ ಹಲವಾರು ಸಮಸ್ಯೆಗಳನ್ನು ಹೆಣ್ಣು ಹುಟ್ಟಿದ ಮನೆಯಲ್ಲಿಯೇ ಅನುಭವಿಸುವಂತಾಗಿದೆ. ಇನ್ನು ಗಂಡನ ಮನೆಯಲ್ಲಿ ಹೆಣ್ಣು ಅನುಭವಿಸುವ ಮೊದಲ ಸಮಸ್ಯೆಯೆಂದರೆ ವರದಕ್ಷಿಣೆ ಸಮಸ್ಯೆ. ಅಲ್ಲದೇಗಂಡನ ಮನೆಯಲ್ಲಿ ಎಲ್ಲಾ ಸದಸ್ಯರಿಂದ ಮಾನಸಿಕವಾಗಿ, ದೈಹಿಕವಾಗಿ, ಲೈಂಗಿಕವಾಗಿ, ಆರ್ಥಿಕವಾಗಿ, ಭಾವನಾತ್ಮಕವಾಗಿ, ಸಾಮಾಜಿಕವಾಗಿ ಹೀಗೆ ಇನ್ನೂ ಹತ್ತು ಹಲವಾರು ಬಗೆಗಳಲ್ಲಿ ಮಹಿಳೆಯರು ಹಿಂಸೆಗೆ ಒಳಗಾಗುತ್ತಿರುವುದನ್ನು ಕಾಣಬಹುದಾಗಿದೆ.

ಇಷ್ಟಲ್ಲದೇ ಸಮಾಜದಲ್ಲಿ ಗಂಡು ಹೆಣ್ಣುಗಳು ತಾವು ಇಚ್ಛಿಸಿದವರೊಂದಿಗೆ ಸಹಚರರಾಗಿ ಬಾಳುತ್ತಿದ್ದು, ಇದಕ್ಕೆ ಮದುವೆಯ ಚೌಕಟ್ಟನ್ನು ಏರ್ಪಡಿಸಿಕೊಂಡಿರುವುದಿಲ್ಲ. ಇದರಿಂದ ಬಿಡುಗಡೆ ಹೊಂದಲು ಕಾನೂನಿನ ಅವಶ್ಯಕತೆ ಕೂಡಾ ಇರುವುದಿಲ್ಲ. ಇವರು ಮದುವೆ ಆದವರಂತೆ ಒಂದೇ ಸೂರಿನಡಿ ಜೀವನ ನಡೆಸುತ್ತಿರುತ್ತಾರೆ. ವಿಶೇಷವೆಂದರೆ, ಭಾರತೀಯ ನ್ಯಾಯಾಲಯ ಈ ಬಗೆಯ ಸಂಬಂಧಗಳಿಗೆ ನಿರ್ದಿಷ್ಠ ನಿಯಮಾವಳಿಗಳನ್ನು ನೀಡಿ ಮದುವೆಯ ವ್ಯಾಪ್ತಿಯೊಳಗಡೆ ತಂದಿರುವುದನ್ನು ಕಾಣಬಹುದಾಗಿದೆ. ಕಾರಣ ಇಲ್ಲಿಯೂ ಸಹ ಮಹಿಳೆಯರು ಸಂಗಾತಿಯಿಂದ ದೌರ್ಜನ್ಯಗಳಿಗೆ ಒಳಗಾಗುತ್ತಿದ್ದಾರೆ. ಈ ಬಗೆಯ ಸಹಚರ ಜೀವನ ಸಾಂಗತ್ಯವು ಒಂದೊಂದು ದೇಶದಲ್ಲಿ ಒಂದೊಂದು ಬಗೆಯಲ್ಲಿ ರೂಢಿಯಲ್ಲಿರುವುದು ಕಂಡುಬರುತ್ತದೆ. ಫ್ರಾನ್ಸ್ ಹಾಗೂ ಫಿಲಿಫೈನ್ಸ್‌ದಂತಹ ದೇಶಗಳಲ್ಲಿ ಈ ಬಗೆಯ ಸಂಬಂಧಗಳು ಹೆಚ್ಚಾಗಿ ಕಾಣಬರುತ್ತವೆ. ಈ ದೇಶಗಳಲ್ಲಿ ಸಹಚರ ಜೀವನ ಸಾಂಗತ್ಯ

ಎಂದರೆ, ಗಂಡು–ಹೆಣ್ಣು ತಮಗಿಷ್ಟ ಬಂದಷ್ಟು ದಿನ ಅಂದರೆ ನಾಲ್ಕು ದಿನವಾದರೂ ಆಗಿರಬಹುದು,[೧೦] ದಿನವಾದರೂ ಆಗಿರಬಹುದು ಅಥವಾ ವರ್ಷಗಳೇ ಆಗಿರಬಹುದು, ಹೀಗೆ ಕೂಡಿ ಬದುಕುವ ಜೀವನ ಶೈಲಿಗೆ ಸಹಚರ ಜೀವನ ಸಾಂಗತ್ಯ (ಲಿವ್ ಇನ್ ಟುಗೆದರ್ ರಿಲೇಷನ್) ಎಂದು ಹೆಸರಿಸಿಕೊಂಡಿದ್ದಾರೆ.

ಇದನ್ನು ಭಾರತದಂತಹ ಸಾಂಪ್ರದಾಯಿಕ ವ್ಯವಸ್ಥೆಯು ಸಂಪೂರ್ಣವಾಗಿ ನಿಷೇಧಿಸಿದೆ. ಒಂದು ವೇಳೆ ಇದ್ದರೂ ಸಾಮಾಜಿಕ ವ್ಯವಸ್ಥೆಯಲ್ಲಿ ಈ ಬಗೆಯ ಸಂಬಂಧಗಳು ಹೆಚ್ಚು ಮಾನ್ಯತೆ ಪಡೆಯದೇ ಹೋಗುತ್ತವೆ. ಆದರೆ ಭಾರತೀಯ ನ್ಯಾಯಾಂಗ ವ್ಯವಸ್ಥೆಯು ಈ ಬಗೆಯ ಸಂಬಂಧಗಳನ್ನು ಇತ್ತೀಚೆಗೆ ಮಾನ್ಯಮಾಡಿದ್ದು, ಇದಕ್ಕೆ ಕೆಲವೊಂದು ನಿಯಮಾವಳಿಗಳನ್ನು ಸೂಚಿಸಿದೆ. ಕಾನೂನು ಲಿವ್ ಇನ್ ಟುಗೆದರ್ ಸಂಬಂಧವನ್ನು ಹೀಗೆ ಅರ್ಥೈಸಿದೆ, "The arrangement of living under which the couples which are unmarried live together to conduct along going relationship similarly as in marriage"[೧೧] ಇದನ್ನು ಗಮನಿಸಿದಾಗ ಭಾರತದಲ್ಲಿಯ ಸಹಚರ ಜೀವನ ಸಾಂಗತ್ಯವನ್ನು ಮದುವೆಯ ನಿಯಮಾವಳಿಗಳ ಮೂಲಕ ಗುರುತಿಸಲಾಗುತ್ತಿರುವುದನ್ನು ಕಾಣಬಹುದಾಗಿದೆ. ಈ ಬಗೆಯ ಸಂಬಂಧಗಳಲ್ಲಿ ಮಹಿಳೆಯರು ಅನೇಕ ದೌರ್ಜನ್ಯಗಳಿಗೆ ಒಳಗಾಗುತ್ತಿರುವುದನ್ನು ಕಾಣಬಹುದಾಗಿದೆ. ತಮ್ಮ ಇಚ್ಛೆಗೆ ಅನುಸಾರವಾಗಿ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಎಂಬುವುದೊಂದನ್ನು ಹೊರತುಪಡಿಸಿದರೆ, ಇಂತಹ ಕುಟುಂಬಗಳಲ್ಲೂ ಸಹ ಪುರುಷ ಪ್ರಧಾನ ವ್ಯವಸ್ಥೆಯ ಅಧಿಕಾರ ಛಾಯೆಗಳು ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ. ಈ ಬಗೆಯ ಕುಟುಂಬದಲ್ಲಿ ಮಹಿಳೆಯರ ಮೇಲಿನ ಹಿಂಸೆಗಳು ಮತ್ತಷ್ಟು ತಮ್ಮ ಕರಾಳತೆಯನ್ನು ತೋರ್ಪಡಿಸಿರುತ್ತವೆ. ಆದ್ದರಿಂದ ಈ ರೀತಿಯಾದ ಕುಟುಂಬಗಳಲ್ಲಿನ ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಿಳಿದುಕೊಳ್ಳುವುದೂ ಸಹ ಪ್ರಸ್ತುತ ಅಧ್ಯಯನಕ್ಕೆ ಅಗತ್ಯವಾಗಿದೆ.

ಕುಟುಂಬದಲ್ಲಿ ವಾಸವಾಗಿರುವ ಮತ್ತೊಂದು ಬಗೆಯ ಮಹಿಳೆಯರೆಂದರೆ, ಅನಿವಾರ್ಯ ಕಾರಣಗಳಿಗಾಗಿ ಬೇರೊಂದು ಕುಟುಂಬದಲ್ಲಿ ಬಂದು ವಾಸವಾಗಿರುವವರಾಗಿದ್ದಾರೆ. ಕೆಲಸದ ನಿಮಿತ್ತ ಅಥವಾ ಯಾರು ದಿಕ್ಕಿಲ್ಲದ್ದಕ್ಕಾಗಿ ಅಥವಾ ಮನೆ ಕೆಲಸಕ್ಕಾಗಿ ಬಂದು ಇರುವವರು, ವಿದ್ಯಾಭ್ಯಾಸದ ಕಾರಣಕ್ಕಾಗಿ ಬಂದು ಇರುವವರು, ಹೀಗೆ ಇನ್ನು ಹಲವಾರು ಕಾರಣಗಳಿಗಾಗಿ ಬಂದು ಇರುವವರು ಅನಧಿಕೃತವಾಗಿ ಆ ಕುಟುಂಬದ ಸದಸ್ಯರಾಗಿರುತ್ತಾರೆ. ಇಂತವರ ಮೇಲೂ ಅನೇಕ ಬಗೆಯ ದೌರ್ಜನ್ಯಗಳಾಗುತ್ತಿದ್ದು ಅವುಗಳನ್ನು ಕೌಟುಂಬಿಕ ಹಿಂಸೆ ಎಂದೇ ಗುರುತಿಸಲಾಗಿದೆ.

೨.೩.೨. ಕಾನೂನು ಬಾಹಿರ ಕುಟುಂಬಗಳು

ಇನ್ನು ವಿಶೇಷವಾಗಿ ಆಯ್ದುಕೊಂಡಿರುವ ಕುಟುಂಬಗಳೆಂದರೆ ದೇವದಾಸಿಯರ ಕುಟುಂಬಗಳು. ದೇವದಾಸಿಯರ ಕುಟುಂಬಗಳು ಕಾನೂನು ಬಾಹಿರವಾಗಿದ್ದು, ತಾವು ಕೂಡುವ ಪುರುಷನನ್ನೊಳಗೂಡಿಸಿ ಕೊಂಡು ತಮ್ಮ ಕುಟುಂಬ ಎಂದು ಭಾವಿಸಿಕೊಂಡಿರುತ್ತಾರೆ. ಇವರ ಮೇಲೆ ಅವರು ಕೂಡಿಕೊಳ್ಳುವ ಪುರುಷರಿಂದ ಅನೇಕ ಬಗೆಯ, ಅದರಲ್ಲೂ ಹೆಚ್ಚೆಚ್ಚು ಲೈಂಗಿಕ ಹಾಗೂ ಆರ್ಥಿಕ ಹಿಂಸೆಗಳಾಗುತ್ತಿವೆ. ಇಂತಹ ಸಮಸ್ಯೆಗಳಿಗೆ ದೇವದಾಸಿಯರು ಯಾರಲ್ಲೂ ಮೊರೆ ಹೋಗಲಾಗದೇ ಮತ್ತಷ್ಟು ಹಿಂಸೆ

ಅನುಭವಿಸುತ್ತಿದ್ದಾರೆ. ಇಂತವರ ಮೇಲಾಗುತ್ತಿರುವ ದೌರ್ಜನ್ಯಗಳು ಸಮಾಜದಲ್ಲಿ ಮೌನವಾಗುಳಿದಿವೆ. ಇತರೆ ಮಹಿಳೆಯರಿಗಿರುವ ಅಲ್ಪ ಸ್ವಲ್ಪ ಪ್ರತಿಭಟನಾ ಧೋರಣೆಯೂ ಸಹ ಇವರಿಗೆ ಇಲ್ಲದಾಗಿದೆ. ಇವರ ಮೇಲೆ ನಡೆಯುತ್ತಿರುವ ಹಿಂಸೆಗಳು ಮೌನದೊಳಗಿನ ಮೌನವಾಗಿ ಉಳಿದು ಹೋಗಿವೆ. ಆದ್ದರಿಂದ ಈ ಮಹಿಳೆಯರ ಮೇಲಿನ ಹಿಂಸೆಗಳನ್ನೂ ಸಹ ಅಧ್ಯಯನದಲ್ಲಿ ಭಾಗಿಯಾಗಿಸಿ ಕೊಳ್ಳಲಾಗಿದೆ.

ಅಲ್ಲದೇ ಸಮಾಜದಲ್ಲಿ ಇನ್ನೂ ಅನೇಕ ರೀತಿಯಲ್ಲಿ ಕಾನೂನುಬಾಹಿರ ಕುಟುಂಬಗಳು ಸ್ಥಾಪಿತಗೊಂಡಿರುವುದು ಕಂಡುಬರುತ್ತದೆ. ಅವು ದ್ವಿಪತ್ನಿತ್ವ ಆಗಿರಬಹುದು, ವಿವಾಹ ಬಾಹಿರವಾಗಿ ಏರ್ಪಡಿಸಿಕೊಂಡ ಸಂಬಂಧಗಳಾಗಿರಬಹುದು. ಹೀಗೆ ಸಮಾಜದಲ್ಲಿ ವಿವಿಧ ಸ್ವರೂಪಗಳನ್ನು ಹೊಂದಿದ ಕುಟುಂಬಗಳು ಸ್ಥಾಪಿತಗೊಂಡಿದ್ದು, ಅಲ್ಲಿಯೂ ಸಹ ಮಹಿಳೆಯರು ಹಿಂಸೆಗೊಳಗಾ ಗುತ್ತಿದ್ದಾರೆ. ಆದ್ದರಿಂದ ಇಲ್ಲಿನ ಮಹಿಳೆಯರು ಅನುಭವಿಸುತ್ತಿರುವ ಕೌಟುಂಬಿಕ ಹಿಂಸೆಯನ್ನು ಅರಿಯಲು ಇಂತಹ ಕುಟುಂಬಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

೨.೪. ಹಿಂಸೆ ಎಂದರೇನು? ಕೌಟುಂಬಿಕ ಹಿಂಸೆಯ ವ್ಯಾಖ್ಯಾನ

ಯಾವುದೇ ಜೀವಿ ಆಕ್ರಮಣ ನೀತಿ ಹೊಂದಿದ್ದರೆ ಅದು ಆಕ್ರಮಣಕ್ಕೊಳಗಾಗುವ ಜೀವಿಯ ಮೇಲಿನ ಹಿಂಸೆ ಆಗಿರುತ್ತದೆ. ಈ ಬಗೆಯ ಆಕ್ರಮಣಕ ಧೋರಣೆ ಯಾವುದೇ ಒಂದು ಜೀವಿಯ ಉಳಿವಿಗಾಗಿ ಜರುಗುವಂತಹದ್ದಾಗಿರುತ್ತದೆ ಎಂಬುವುದರಲ್ಲಿ ಮರುಮಾತಿಲ್ಲ. ಇಂಥಹ ಆಕ್ರಮಣಗಳಿಗೆ ಪ್ರತಿರೋಧಗಳಿಲ್ಲ ಎಂದೇನಲ್ಲ, ಇವುಗಳಲ್ಲಿ ಯಾವುದು ಹೆಚ್ಚು ಬಲಿಷ್ಠವಾಗಿರುತ್ತದೆಯೋ ಅದು ಅಸ್ತಿತ್ವವನ್ನು ಪಡೆದುಕೊಳ್ಳುತ್ತದೆ. ಹೀಗೆ ಹೇಳುವ ತಾತ್ಪರ್ಯ ಹಿಂಸೆ ಅನಿವಾರ್ಯ ಎಂಬುವುದಲ್ಲ, ಬದಲಿಗೆ ಕೇವಲ ಪ್ರಕೃತಿಯ ನಿಯಮವನ್ನು ಸಾದರಪಡಿಸುವುದಾಗಿದೆ. ಪ್ರಕೃತಿಯಲ್ಲಿ ಕೆಲವೊಂದು ಪ್ರಾಣಿಗಳು ಬೇರೊಂದು ಪ್ರಾಣಿಗಳನ್ನು ಆಹಾರವಾಗಿಸಿಕೊಳ್ಳದೇ ಅವುಗಳ ಉಳಿವು ಸಾಧ್ಯವಿಲ್ಲ. ಅವುಗಳ ಉಳಿವಿಗಾಗಿ ಹಿಂಸೆ ಅನಿವಾರ್ಯವಾಗಿರುತ್ತದೆ. ಆದರೆ ಮಾನವ ಜನಾಂಗಕ್ಕೆ ಈ ಅನಿವಾರ್ಯತೆ ಇಲ್ಲ. ಹಸುವಿನ ಪ್ರಶ್ನೆ ಬಂದಾಗ ಮಾನವರಿಗೆ ಪ್ರಾಣಿಗಳನ್ನು ಕೊಂದು ತಿನ್ನುವುದು ಮಾತ್ರವಲ್ಲದೇ ಪರ್ಯಾಯ ಮಾರ್ಗಗಳನ್ನು ಸಹ ಪ್ರಕೃತಿ ನೀಡಿದೆ. ಹೀಗಿದ್ದರೂ ಸಹ ಮಾನವರು ಪ್ರಾಣಿಯನ್ನು ಹಿಂಸಿಸುವಂತಹ ಕಾರ್ಯಕ್ಕೆ ಕೈ ಹಾಕಿದ್ದಾರೆ. ಪ್ರಾಣಿ ಹಿಂಸೆ ಎಂದರೆ, ಕೇವಲ ಪ್ರಾಣಿಗಳನ್ನು ಕೊಲ್ಲುವುದಷ್ಟೇ ಅಲ್ಲದೇ, ಪ್ರಾಣಿಗಳಿಗೆ ಯಾವುದೇ ರೀತಿಯ ದುಃಖ, ಸಂತಾಪ, ಕ್ಲೇಶ, ವ್ಯಥೆ, ನೋವು, ಬಾಧೆ, ತೊಂದರೆ ಇತ್ಯಾದಿಗಳನ್ನುಂಟು ಮಾಡುವುದಾಗಿದೆ. ಈ ಸಿದ್ಧಾಂತ ಕೇವಲ ಪ್ರಾಣಿಗಳಿಗೆ ಮಾತ್ರ ಅನ್ವಯಿಸದೇ ಮಾನವ ಜನಾಂಗಕ್ಕೂ ಅನ್ವಯಿಸುತ್ತದೆ. ಮಾನವರು ತಮ್ಮ ಹಿತಾಸಕ್ತಿಗಳ ಈಡೇರಿಕೆಗಾಗಿ ತನ್ನದೇ ವರ್ಗದ ಜನರನ್ನು ಹಿಂಸಿಸುತ್ತಿರುವುದು ಕಂಡುಬರುತ್ತದೆ.

ಧರ್ಮ ಹಿಂಸೆಯನ್ನು ಹೀಗೆ ಗುರುತಿಸುತ್ತದೆ, "ಪ್ರಮತ್ತಯೋಗಾತ್ಪ್ರಾಣಮ್ಯ ಸರೋಪಣಂ ಹಿಂಸಾ"ಯೆಂದು ಧರ್ಮಶಾಸ್ತ್ರದಲ್ಲಿ ವಿವರಣೆ ನೀಡಿದೆ. ಅಂದರೆ ಪ್ರಮಾದದ ಮನವಚನ ಕಾಯಕ್ರಿಯೆಗಳಿಂದ ಪ್ರಾಣಿಗಳು ಪ್ರಾಣಿಗಳನ್ನು ದುಃಖಕ್ಕೀಡು ಮಾಡುವುದು ಹಿಂಸೆಯಾಗಿದೆ. ರಾಜಾ ಕಥಾ, ಭೋಜನ ಕಥಾ, ರಾಷ್ಟ್ರ ಕಥಾ, ಸ್ತ್ರೀ ಕಥಾ ಎಂಬ ನಾಲ್ಕು ಕಥೆಗಳು, ಕಣ್ಣು ಮೂಗು ನಾಲಿಗೆ

ಕಿವಿ ಚರ್ಮ ಎಂಬ ಐದು ಇಂದ್ರೀಯಗಳು, ಕ್ರೋಧ ಮಾನ ಮಾಯಾ ಲೋಭ ಎಂಬ ನಾಲ್ಕು ಕಷಾಯಗಳು, ನಿದ್ರೆ ಮತ್ತು ಸ್ನೇಹ ಇವು ಪ್ರಮಾದದ ಹದಿನೈದು ಭೇದಗಳೆಂದು, ಇವುಗಳೆಲ್ಲವುಗಳಿಂದ ರಾಗ ದ್ವೇಷಗಳುಂಟಾಗಿ ಹಿಂಸೆಗೆ ಕಾರಣವಾಗುತ್ತದೆ.

ಹಿಂಸೆಯಲ್ಲಿ ಎರಡು ಬಗೆ, ಒಂದು ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ನೀಡುವ ಹಿಂಸೆ, ಮತ್ತೊಂದು ಸ್ವ ಹಿಂಸೆ. ಧರ್ಮ ಏನೇ ಹೇಳಿದ್ದರೂ, ಮಾನವ ಸಮಾಜದಲ್ಲಿ ಮಾತ್ರ ಅಧಿಕಾರದ ಲಾಲಸೆ ಹಾಗೂ ತಮ್ಮ ಉಳಿವಿನ ಪ್ರಶ್ನೆಗಾಗಿ ಹಿಂಸೆಯಂತಹ ಕೃತ್ಯ ನಡೆಯುತ್ತಲಿದೆ. ಇದು ವ್ಯಕ್ತಿಗಳಲ್ಲಿ ಮುಖ್ಯವಾಗಿ ಎರಡು ನೆಲೆಯಲ್ಲಿ ಬಿಂಬಿತವಾಗುತ್ತದೆ. ವ್ಯಕ್ತಿಯಿಂದ ವ್ಯಕ್ತಿಗೆ ನಡೆಯುವ ಹಿಂಸೆಯು ಪ್ರಜ್ಞಾಪೂರ್ವಕವಾಗಿ ಇತರರಿಗೆ ನೋವನ್ನುಂಟು ಮಾಡುವುದಾಗಿದೆ. ಇದು ದೈಹಿಕವಾಗಿ, ಮಾನಸಿಕವಾಗಿ, ಆರ್ಥಿಕವಾಗಿ, ಲೈಂಗಿಕವಾಗಿ, ಶಾಬ್ಧಿಕವಾಗಿ ವ್ಯಕ್ತಿಯನ್ನು ಅಪಮಾನಗೊಳಿಸುವಂತಹ ಕ್ರಿಯೆ ಅಥವಾ ನಡುವಳಿಕೆಯಾಗಿದೆ. ಹಾಗೂ ಹಿಂಸೆಯ ಮತ್ತೊಂದು ಬಗೆಯಾದ ಆಂತರಿಕ ಅಥವಾ ಸ್ವ ಹಿಂಸೆ ಎಂದರೆ ವ್ಯಕ್ತಿಯು ತನ್ನನ್ನು ತಾನು ಘಾಸಿಗೊಳಿಸಿಕೊಳ್ಳುವಂತಹ ಕ್ರಿಯೆಯಾಗಿದೆ. ಈ ಬಗೆಯ ಸ್ವ ಹಿಂಸೆಯು ಎಷ್ಟೋ ಬಾರಿ ಸಮಾಜದ ನಡುವಳಿಕೆಯ ಭಾಗವಾಗಿ ಬಂದಿರುತ್ತದೆ. ಉದಾಹರಣೆಗೆ, ವ್ಯಕ್ತಿಯು ತನ್ನನ್ನು ತಾನು ಸುಂದರವಾಗಿಲ್ಲ ಎಂದು ತನ್ನ ಮನಸ್ಸಿನಲ್ಲಿ ಕೀಳರಿಮೆಯನ್ನು ಸೃಷ್ಟಿಸಿಕೊಂಡು ಕೊರಗುತ್ತಾನೆ. ಈ ಬಗೆಯ ಕೀಳರಿಮೆಯು ಭಾವನಾತ್ಮಕ ಹಿಂಸೆಯನ್ನುಂಟು ಮಾಡುತ್ತದೆ. ಇದಕ್ಕೆ ಮೂಲ ಸಮಾಜವು ವ್ಯಕ್ತಿಯ ದೈಹಿಕ ಸೌಂದರ್ಯಕ್ಕೆ ಕೊಡಲ್ಪಡುವ ಪ್ರಾಧಾನ್ಯತೆಯಾಗಿದೆ.

ಸ್ವ ಹಿಂಸೆಯು ಹೆಚ್ಚಾಗಿ ಅಸ್ವಸ್ಥ ಮನಸ್ಸುಳ್ಳ ವ್ಯಕ್ತಿಗಳಲ್ಲಿ ಕಂಡುಬರುತ್ತದೆ. ಎಷ್ಟೋ ಅಸ್ವಸ್ಥ ಮನಸ್ಸುಗಳು ಪುರುಷ ಪ್ರಧಾನತೆಯ ಫಲವಾಗಿ ರೂಪಿತಗೊಂಡವುಗಳಾಗಿವೆ. ಪ್ರಸ್ತುತ ಅಧ್ಯಯನ ಮಹಿಳೆಯ ಮೇಲೆ ನಡೆಯುವ ಕೌಟುಂಬಿಕ ದೌರ್ಜನ್ಯವಾದ್ದರಿಂದ, ಇದು ಏಕ ವ್ಯಕ್ತಿಗೆ ಸಂಬಂಧಿಸಿರದೇ, ವ್ಯಕ್ತಿಯಿಂದ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಂದ ವ್ಯಕ್ತಿಯ ಮೇಲೆ ನಡೆಯುವ ಹಿಂಸೆ ಎಂದು ಮನದಟ್ಟಾಗುತ್ತದೆ. ಇಲ್ಲಿ ಹಿಂಸೆ ಹಾಗೂ ದೌರ್ಜನ್ಯ ಎಂಬ ಪದಗಳನ್ನು ಒಂದಕ್ಕೊಂದು ಪರ್ಯಾಯವಾಗಿ ಬಳಸಲಾಗುತ್ತಿದ್ದು, ಇವುಗಳಿಗೆ ಸ್ಪಷ್ಟೀಕರಣ ಅಗತ್ಯವಾಗುತ್ತದೆ. ಹಿಂಸೆಯನ್ನು ಕಾನೂನಿನ ಪರಿಭಾಷೆಯಲ್ಲಿ 'ದೌರ್ಜನ್ಯ' ಎಂದು ಪರಿಗಣಿಸಲಾಗುತ್ತದೆ. ಹಿಂಸೆ ಮತ್ತು ದೌರ್ಜನ್ಯಗಳೆಂಬ ಎರಡು ಪದಗಳನ್ನು ಪರ್ಯಾಯವಾಗಿ ಅಧ್ಯಯನದುದ್ದಕ್ಕೂ ಬಳಸಿಕೊಳ್ಳಲಾಗಿದೆ. ಕಾನೂನಿನಲ್ಲಿ ಎಲ್ಲಿಯೂ ಈ ಪದಗಳಿಗೆ ಪ್ರತ್ಯೇಕ ಅರ್ಥಗಳನ್ನು ನೀಡಿಲ್ಲದಿರುವುದು ಒಂದರ್ಥದಲ್ಲಿ ದೌರ್ಜನ್ಯಕ್ಕಿಂತ ಹಿಂಸೆಯ ಸ್ವರೂಪ ಹೆಚ್ಚಾಗಿರುತ್ತದೆ ಎಂದು ತಿಳಿದುಬರುತ್ತದೆ.

ಕೌಟುಂಬಿಕ ಹಿಂಸೆಯ ವ್ಯಾಖ್ಯಾನ

ವಿವಿಧ ಉದ್ದೇಶಗಳ ಪೂರೈಕೆಗಾಗಿ ಕಟ್ಟಿಕೊಂಡಿರುವ ಸಾಮಾಜಿಕ ವ್ಯವಸ್ಥೆಯ ಮುಖ್ಯ ಭಾಗ ಕುಟುಂಬ ಆಗಿದೆ. ಈ ಕುಟುಂಬದಲ್ಲಿ ಅಜ್ಜ-ಅಜ್ಜಿ, ತಾಯಿ-ತಂದೆ, ಅಕ್ಕ-ತಂಗಿ, ಅಣ್ಣ-ತಮ್ಮಂದಿರು, ಸೊಸೆಯಂದಿರು, ನಾದಿನಿಯರು, ಅಳಿಯಂದಿರು ಹಾಗೂ ಬಹಳ ವರ್ಷಗಳ ಕಾಲ ಆ ಕುಟುಂಬದಲ್ಲಿ ನೆಲೆಗೊಂಡಂತಹ ವ್ಯಕ್ತಿಗಳೂ ಸಹ ಆ ಕುಟುಂಬದ ಸದಸ್ಯರಾಗಿರುತ್ತಾರೆ. ಇಲ್ಲಿ ಒಬ್ಬರಿಂದ ಮತ್ತೊಬ್ಬರಿಗೆ ದೈಹಿಕವಾಗಿ, ಮಾನಸಿಕವಾಗಿ, ಆರ್ಥಿಕವಾಗಿ, ಲೈಂಗಿಕವಾಗಿ, ಶಾಬ್ಧಿಕವಾಗಿ ಅಪಮಾನ

ಗೊಳಿಸುವಂತಹ ಅಥವಾ ಅಪಮಾನಗೊಳ್ಳುವಂತಹ ಸಂದರ್ಭಗಳು ಸೃಷ್ಟಿಯಾದಲ್ಲಿ ಅದನ್ನು ಕೌಟುಂಬಿಕ ಹಿಂಸೆ ಎಂದು ಹೇಳಲಾಗುತ್ತದೆ.

೨.೫. ಮಹಿಳೆಯರ ಮೇಲಿನ ಹಿಂಸೆ ಮತ್ತು ಪಿತೃಪ್ರಧಾನತೆ

ಮಾನವರು ಅಲೆಮಾರಿಯಾಗಿ ಅಲೆದಾಡುತ್ತಿದ್ದ ಸಂದರ್ಭದಲ್ಲಿ, ತಾವು ನೈಸರ್ಗಿಕವಾಗಿ ಅವಲಂಬಿಸಿದ್ದ ಆಹಾರ, ನೀರು ಸಿಗುವ ಸ್ಥಳಗಳಲ್ಲಿ ವಾಸಿಸಬೇಕಾದ ಅನಿವಾರ್ಯತೆ ಉಂಟಾಯಿತು. ಈ ಹಿನ್ನೆಲೆಯಲ್ಲಿ ಮಾನವರು ಒಂದೆಡೆ ಸೇರಿ ನೆಲೆಗೊಂಡರು. ಹೀಗೆ ಮಾನವರು ಒಂದೆಡೆ ಗುಂಪು ಗುಂಪಾಗಿ ಜೀವಿಸಲು ಪ್ರಾರಂಭಿಸಿದ ಸಂದರ್ಭದಲ್ಲಿ ಅವರಲ್ಲಿ ಯಾವೊಂದು ಬಗೆಯ ಲಿಂಗಾರೋಪಗಳು ಇರಲಿಲ್ಲ. ಜೀವ ಸಂಕುಲದ ಬೆಳವಣಿಗೆಗಾಗಿ ಹೆಣ್ಣು (ದೈಹಿಕ ರಚನೆಯ ಆಧಾರದ ಮೇಲೆ ವಿಭಾಗಿಸಲ್ಪಟ್ಟಂತೆ) ಸಂತಾನೋತ್ಪತ್ತಿಯ ಸಂದರ್ಭದಲ್ಲಿ ಅನಿವಾರ್ಯತೆಯಿಂದಾಗಿ ಸಹಜವಾಗಿಯೇ ಗುಂಪಿನ ಇತರೆ ಜನರು ಆಕೆಗೆ ಸಹಾಯಕವಾಗಿ ನಿಲ್ಲಬೇಕಾಯಿತು. ಅವರು ಕೇವಲ ಪುರುಷರಷ್ಟೇ ಆಗಿರದೆ ಮಹಿಳೆಯರೂ ಸಹ ಆಗಿದ್ದರು. ಹೀಗೆ ಒಬ್ಬರಿಗೊಬ್ಬರು ಸಹಾಯಕವಾಗಿ ಹೆಣ್ಣಿನ ಸಂತಾನೋತ್ಪತ್ತಿ ಸಂದರ್ಭದಲ್ಲಿ ಪಾಲುದಾರರಾಗುತ್ತಿದ್ದರು. ಈ ರೀತಿಯಾಗಿ ಗುಂಪುಗಾರಿಕೆ, ಅವಲಂಬನೆ, ರಕ್ಷಣೆ ಇತರೆ ಕಾರಣಗಳಿಂದಾಗಿ ಮಾನವರೆಲ್ಲರೂ ಒಬ್ಬರಿಗೊಬ್ಬರು ಅವಲಂಬಿತರಾಗ ಬೇಕಾದ ಸಂದರ್ಭ ನಿರ್ಮಾಣಗೊಂಡಿತು.

ಸಂತಾನೋತ್ಪತ್ತಿ ಕ್ರಿಯೆಯ ಸಂದರ್ಭದಲ್ಲಿ ಒಂದೆಡೆ ನೆಲೆಗೊಂಡ ಮಹಿಳೆಯರನ್ನು ಹೊರತುಪಡಿಸಿ ಮಿಕ್ಕೆಲ್ಲಾ ಮಹಿಳೆಯರು ಮತ್ತು ಪುರುಷರು ಗೆಡ್ಡೆ–ಗೆಣಸು, ಹಣ್ಣು ಹಂಪಲುಗಳನ್ನು ಮತ್ತು ಬೇಟೆಯಾಡಿ ಪ್ರಾಣಿಗಳನ್ನು ತಂದು ಎಲ್ಲರೂ ಜೊತೆಗೂಡಿ ತಿಂದು ಜೀವನ ಸಾಗಿಸುತ್ತಿದ್ದರು. ಕಾಲಾನಂತರದಲ್ಲಿ ತಮ್ಮ ಬುದ್ಧಿಶಕ್ತಿಯಿಂದ ಮಾನವರು ನೆಲೆಗೊಳ್ಳುವಿಕೆಗಾಗಿ ಸೂರುಗಳನ್ನು ನಿರ್ಮಾಣ ಮಾಡಿಕೊಂಡರು. ಹೆರಿಗೆಯ ಕಾರಣದಿಂದಾಗಿ ಈ ಸೂರಿನಲ್ಲೇ ಉಳಿಯಬೇಕಾದ ಮಹಿಳೆಯರು ಕ್ರಮೇಣ ತಮ್ಮ ಜ್ಞಾನ, ಕೌಶಲ್ಯದಿಂದಾಗಿ ಕೃಷಿಯನ್ನು ಕಂಡುಕೊಂಡರು. ಬೇಟೆಗಾರಿಕೆ ಅಪಾಯಕಾರಿ ಆದ್ದರಿಂದ ತದನಂತರದಲ್ಲಿ ಎಲ್ಲರೂ ಕೃಷಿಯನ್ನು ಹೆಚ್ಚು ಅವಲಂಬಿಸತೊಡಗಿದರು. ಜೊತೆಗೆ ಸಾಂದರ್ಭಿಕವಾಗಿ ಬೇಟೆಯನ್ನೂ ಸಹ ಆಡುತ್ತಿದ್ದರು. ಆದರೆ ಈ ಸಂದರ್ಭವನ್ನು ಸ್ತ್ರೀವಾದಿ 'ಸಿಮೋನ ದ ಬೋವಾ' ರವರು ತಮ್ಮ ಕೃತಿಯಲ್ಲಿ ಭಿನ್ನವಾಗಿ ಪ್ರಕಟಿಸಿದ್ದಾರೆ. ಬೇಟೆಗಾರಿಕೆ ಕೇವಲ ಪುರುಷರದ್ದಾಗಿತ್ತು ಮತ್ತು ಅದು ಶ್ರೇಷ್ಠವಾಗಿತ್ತೆಂದು ಹೀಗೆ ಹೇಳುತ್ತಾರೆ, 'ಮೊದಲ ಹಂತದಲ್ಲಿ ಗಂಡಸಿನ ಚಟುವಟಿಕೆಗೆ ಘನತೆಯನ್ನು ತಂದುಕೊಟ್ಟ ಮತ್ತೊಂದು ಆಯಾಮವಿದೆ. ಅದು ಸದಾ ಅಪಾಯಕಾರಿಯಾಗಿತ್ತು. ರಕ್ತವೆಂಬುದು ಕೇವಲ ಪೋಷಕ ದ್ರವವಾಗಿದ್ದರೆ ಅದಕ್ಕೆ ಹಾಲಿಗಿಂತ ಹೆಚ್ಚಿನ ಬೆಲೆಯೇನೂ ಇರುತ್ತಿರಲಿಲ್ಲ. ಆದರೆ ಬೇಟೆಗಾರನದು ಕೇವಲ ಕಟುಕನ ಕೆಲಸವಲ್ಲ. ಕ್ರೂರ ಮೃಗಗಳೊಡನೆ ಹೋರಾಡುವಾಗ ಗಂಡಸು ಜೀವವನ್ನು ಪಣಕ್ಕಿಡಬೇಕಾಗುತ್ತದೆ. ಸಮುದಾಯದ ಹೆಮ್ಮೆಯನ್ನು ಕಾಯ್ದುಕೊಳ್ಳಲು ಯೋಧನಾಗಿ ತನ್ನ ಬದುಕನ್ನು ಸಂಕಷ್ಟಕ್ಕೆ ಗುರಿಮಾಡುತ್ತಿದ್ದ. ಈ ಮೂಲಕ ಜೀವವೆಂಬುದು ಮಾತ್ರ ಮನುಷ್ಯನಿಗೆ ಹೆಚ್ಚಿನ ಮೌಲ್ಯವುಳ್ಳ ಸಂಗತಿಯಲ್ಲವೆಂಬುದನ್ನು ಆತ ಸಾಧಿಸಿ ತೋರಿಸಿದ. ಇಂಥ ಯುದ್ಧ ಚಟುವಟಿಕೆಗಳಿಂದ ಹೊರಗೆ ಉಳಿಯಬೇಕಾಯಿತೆಂಬುದು

ಹೆಂಗಸಿಗೆ ಒದಗಿದ ಶಾಪವಾಯಿತು. ಗಂಡಸು ಜೀವ ಸೃಷ್ಟಿಸುವುದಕ್ಕಿಂತ ಜೀವ ದಹನ ಮಾಡುವ ಮೂಲಕವೇ ಮನುಷ್ಯ ಪ್ರಾಣಿಗಳಿಗಿಂತ ಮೇಲೆ ಹೋಗಲು ಸಾಧ್ಯವೆಂದು ತೋರಿಸುತ್ತಿದ್ದ. ಅದಕ್ಕಾಗಿ ಮಾನವರಲ್ಲಿ ಜೀವಕಟ್ಟುವ ಹೆಣ್ಣಿಗಿಂತ, ಜೀವ ತೆಗೆಯಬಲ್ಲ ಗಂಡಿಗೆ ಮೇಲುಗೈ ದೊರಕಿತು" ಎಂದು ಗಂಡಸರನ್ನು ಅಪ್ರತಿಮರೆಂದು ಕೊಂಡಾಡುತ್ತಾರೆ.

ಈ ಮೂಲಕ ಪುರುಷರೇ ಮಹಿಳೆಯರಿಗಿಂತ ಶ್ರೇಷ್ಠರು ಎಂಬುದನ್ನು ಸಾಬೀತು ಮಾಡುತ್ತಾರೆ. ಇವರ ಈ ನಿಲುವು ಮಹಿಳೆಯರು ಬೇಟೆಗಾರಿಕೆಯಿಂದ ದೂರವಿದ್ದರೆಂಬುದಕ್ಕಿಂತ ಬೇಟೆಯನ್ನೇ ಆಡುತ್ತಿರಲಿಲ್ಲ ಎಂಬುದನ್ನು ಸಾಬೀತು ಮಾಡುತ್ತದೆ. ಆದರೆ ಮಾನವರು ಗುಂಪುಗಾರಿಕೆ ಕಟ್ಟಿಕೊಳ್ಳುವ ಪೂರ್ವದಲ್ಲಿ (ಅಲೆಮಾರಿಯಾಗಿ ಅಲೆದಾಡುತ್ತಿರುವಂತಹ ಸಂದರ್ಭದಲ್ಲಿ) ಸ್ತ್ರೀ–ಪುರುಷರಿಬ್ಬರೂ ಇತರೆ ಜೀವಿಗಳಂತೆ ಸ್ವತಂತ್ರವಾಗಿ ತಮ್ಮ ಹೊಟ್ಟೆಯನ್ನು ತಾವೇ ಭರಿಸಿಕೊಳ್ಳುತ್ತಿದ್ದರು. ನಂತರ ಸ್ತ್ರೀ–ಪುರುಷರಿಬ್ಬರೂ ಬೇಟೆಯಾಡಿ ಆಹಾರವನ್ನು ತರುವ ಕಾರ್ಯದಲ್ಲಿ ತೊಡಗಿಕೊಂಡಿದ್ದರು. ಆದರೆ ಇದನ್ನು ಸಿಮೋನ್‌ದ ಬೋವಾ ಗಮನಿಸಿದಂತೆ ಕಾಣಬರುವುದಿಲ್ಲ. ಜೊತೆಗೆ ಮಹಿಳೆಯರು ಸಂತಾನ ಸೃಷ್ಟಿಯನ್ನು ಜೀವಕಟ್ಟುವ ಕೆಲಸವಾಗಿ ನೋಡಿದ್ದಾರೆ ವಿನಃ ಹೆಣ್ಣು ಹೆರುವ ಸಂದರ್ಭ ಕೂಡಾ ತನ್ನ ಜೀವವನ್ನು ಪಣಕಿಟ್ಟೆ ಹೆರುತ್ತಾಳೆ ಎಂಬ ಸಂಗತಿಯನ್ನು ಸಿಮೋನ್ ದ ಬೋವಾರವರು ಯಾಕೋ ಮರೆತಂತೆ ಕಾಣುತ್ತದೆ. ಮುಖ್ಯವಾದ ಸಂಗತಿಯೆಂದರೆ ಸ್ತ್ರೀವಾದಿ ಚಿಂತಕರಾದ ಇವರು ಯಾಕೆ ಸಂತಾನೋತ್ಪತ್ತಿ ಕ್ರಿಯೆ ಹೆಣ್ಣಿಗೆ ಒದಗಿದ ಶಾಪವಾಗಿದೆ ಎಂದು ನಿರ್ಧರಿಸುತ್ತಾರೆ? ಎಂಬುದು ಗೊಂದಲಕ್ಕೀಡು ಮಾಡುತ್ತದೆ. ಮಹಿಳೆಯರನ್ನು ಅಲ್ಲಗಳೆದು, ಮಹಿಳೆಯರು ಮನುಕುಲದ ಉಳಿವಿಗಾಗಿ ಮಾಡುವ ಜೀವ ಸೃಷ್ಟಿಯಂತಹ ಮಹತ್ತರ ಕಾರ್ಯವನ್ನು ಅಲ್ಲಗಳೆಯುತ್ತಾರೆ.

ಬೇಟೆಯನ್ನು ಯಾರು ಬೇಕಾದರೂ ಆಡಬಹುದು. ಆದರೆ ಸಂತಾನೋತ್ಪತ್ತಿ ಕ್ರಿಯೆ ಕೇವಲ ಸ್ತ್ರೀಯರು ಮಾತ್ರ ಮಾಡಬಲ್ಲರು ಎಂಬುದು ಅವರ ವಿಶೇಷತೆಗೆ ಕಾರಣವಾಗಿದೆ. ಜೊತೆಗೆ ಸಂತಾನೋತ್ಪತ್ತಿಯ ಸಂದರ್ಭದಲ್ಲಿ ಮನೆಯಲ್ಲಿ ಉಳಿದ ಹೆಣ್ಣುಮಕ್ಕಳು ತಾವು ಕಂಡುಕೊಂಡ ಕೃಷಿಯನ್ನು ಅಭಿವೃದ್ಧಿಪಡಿಸುತ್ತಾ ಬಂದರು. ಇದಕ್ಕೆ ಪೂರಕವಾಗಿ ಪ್ರಾಣಿಗಳನ್ನು ಬಳಸಿಕೊಳ್ಳಲು ಪ್ರಾರಂಭಿಸಿದರು. ಆ ಪ್ರಾಣಿಗಳ ಉತ್ಪನ್ನಗಳಿಂದ ಹೈನುಗಾರಿಕೆಯನ್ನೂ ಸಹ ಕಂಡುಕೊಂಡರು. ಹೆಣ್ಣು ಈ ಎಲ್ಲಾ ವಿಚಾರ ಶಕ್ತಿ, ವಿಶೇಷತೆಗಳನ್ನು ಅರಿತಿದ್ದರಿಂದಲೇ ಮಾನವ ಕುಲ ಮಾತೃದೇವತಾ ಆರಾಧನೆಯಂತಹ ಕಲ್ಪನೆಗೆ ಮುಂದಾಯಿತು. ಈ ಹಿನ್ನೆಲೆಯಲ್ಲಿ ಹೆಣ್ಣಾದವಳು ಇಡೀ ಮನುಕುಲದ ಸೃಷ್ಟಿಕರ್ತೆ ಎಂದು ಒಪ್ಪಿಕೊಳ್ಳಲಾಯಿತು. ಹೊಸದೊಂದನ್ನು ನಿರ್ಮಾಣ ಮಾಡುವ ವಿಶೇಷತೆಯೇ ಹೆಣ್ಣನ್ನು ಪ್ರಧಾನವಾಗಿಸಲು ಕಾರಣವಾಯಿತು. ಹಾಗು ಅದನ್ನು ಮಾತೃ ಪ್ರಧಾನತೆಯಿಂದ ಗುರುತಿಸಲಾರಂಭಿಸಿದರು.

ಮಾತೃ ಪ್ರಧಾನತೆ ಎಂದರೆ ತಾಯಿಯಾದವಳು ಮುಖ್ಯಸ್ಥಳು ಎಂದರ್ಥ ಅಷ್ಟೇ. ಮಾತೃ ಪ್ರಧಾನ ಎಂದಾಕ್ಷಣ ಇತರರನ್ನು ಎರಡನೇ ಸ್ಥಾನದಲ್ಲಿರಿಸಿ ಕಾಣುವುದಾಗಿರಲಿಲ್ಲ. ಬದಲಿಗೆ ಅದೊಂದು ವಿಶೇಷ ಸ್ಥಾನವಾಗಿತ್ತು. ತಾಯಿಯನ್ನು ಒಳಗೊಂಡಂತೆ ಗುಂಪುಗಾರಿಕೆಯಲ್ಲಿ ಎಲ್ಲರೂ ಸಮಾನರಾಗಿದ್ದರು. ಕಾಲಾನಂತರದಲ್ಲಿ ವಲಸೆ, ವಿವಿಧ ಉದ್ದೇಶಗಳ ಈಡೇರಿಕೆಗಾಗಿ ಈಗಾಗಲೇ ಚರ್ಚಿಸಿದಂತೆ ಕುಟುಂಬಗಳು ನಿರ್ಮಾಣಗೊಂಡವು. ಅಲ್ಲಿ ನಮ್ಮವು ನಿಮ್ಮವು ಎಂಬ ಭಿನ್ನ

ಮನೋಭಾವನೆಗಳು ಮೂಡತೊಡಗಿದವು. ಇದರಿಂದಾಗಿ ಮಾನವರಲ್ಲಿ ಒಡೆತನದ ಪ್ರಶ್ನೆಗಳು ಮೂಡಲಾರಂಭಿಸಿದವು. ಆಗ ಎಲ್ಲರೂ ತಾವು ಊಳುತ್ತಿದ್ದ ಭೂಮಿಯ ಒಡೆತನವನ್ನು ಪಡೆದುಕೊಳ್ಳಲಾರಂಭಿಸಿದರು. ತಾಯಿಯನ್ನು ಮುಖ್ಯಸ್ಥಳಾಗಿ ಕಾಣುತ್ತಿದ್ದ ಹಿನ್ನೆಲೆಯಲ್ಲಿ ಆಕೆಗೆ ಎಲ್ಲಾ ಉಸ್ತುವಾರಿಕೆಯನ್ನು ನೀಡಿದರು. ಹೀಗೆ ಎಲ್ಲಾ ಸ್ವತ್ತು, ಸಂಪತ್ತುಗಳು ಹೆಣ್ಣಿನ ಅಧೀನವಾಗ ತೊಡಗಿದವು. ಆದರೆ ಎಲ್ಲೂ ಸ್ತ್ರೀ ಪುರುಷರೆಂಬ ಭೇದಭಾವಗಳಿರಲಿಲ್ಲ. ಕೇವಲ ತಾಯಿಯ ಒಡೆತನಕ್ಕೆ ಎಲ್ಲವೂ ಸೇರಿಕೊಳ್ಳುತ್ತಿದ್ದವು.

ಭೂಮಿ ಫಸಲನ್ನು ಉತ್ಪತ್ತಿ ಮಾಡುತ್ತಿದ್ದಿದ್ದರಿಂದ ಅದನ್ನು ಮಹಿಳೆಗೆ ಹೋಲಿಸಿದರು. ಆಗ ಭೂಮಿಗೆ ಭೂತಾಯಿ ಎಂದು ಕರೆದರು. ಹೀಗೆ ಎಲ್ಲವೂ ಸರಾಗವಾಗಿ ನಡೆಯುತ್ತಿರುವಾಗ ಕಾಲಾನಂತರ ಪುರುಷರಲ್ಲಿ ತಮ್ಮ ಅಸ್ತಿತ್ವದ ಪ್ರಶ್ನೆ ಮೂಡಿದಂತೆ ಕಾಣಬರುತ್ತದೆ. ಭೂಮಿಯ ಕಲ್ಪನೆಯನ್ನೇ ಮೂಲವಾಗಿಟ್ಟುಕೊಂಡು, ಹೇಗೆ ಭೂಮಿಯಲ್ಲಿ ಕಾಳುಗಳನ್ನು ಬಿತ್ತಿದರೆ ಮಾತ್ರ ಫಲ ದೊರೆಯುತ್ತದೆಯೋ, ಹಾಗೆ ಹೆಣ್ಣಿನಲ್ಲಿ ಗಂಡು ಬೀಜ ಬಿತ್ತಿದರೆ ಮಾತ್ರ ಫಲ ದೊರೆಯುತ್ತದೆ. ಆದ್ದರಿಂದ ಮಹಿಳೆಯರಿಗಿಂತ ನಾವೇ ಶ್ರೇಷ್ಠ ಎಂಬ ಸ್ವ-ಪ್ರತಿಷ್ಠೆ ತಳೆದರು. ಆಗ ಪುರುಷರು ನಾವು ಶ್ರೇಷ್ಠವಾಗಿರುವಾಗ ಏಕೆ ಮಹಿಳೆಯರನ್ನು ಮುಖ್ಯವಾಗಿಸಬೇಕು ಎಂಬ ಕೀಳು ಆಲೋಚನೆಗಿಳಿದರು. ಅಷ್ಟೊತ್ತಿಗಾಗಲೆ ಮಹಿಳೆಯರು ಪ್ರಧಾನರಾಗಿದ್ದ ಕಾರಣ ಅವರಿಂದ ತಮಗೆ ಪ್ರಧಾನತೆಯನ್ನು ವರ್ಗಾಯಿಸಿಕೊಳ್ಳುವುದು ಅಷ್ಟೊಂದು ಸುಲಭದ ವಿಷಯವಾಗಿರಲಿಲ್ಲ ಎಂಬುವುದನ್ನು ಅರಿತರು. ಕಾರಣ ತಾವು ಲೈಂಗಿಕ ಕ್ರಿಯೆಗಾಗಿ ಹೆಣ್ಣನ್ನು ಅವಲಂಬಿಸಿದ್ದರಿಂದ ಹಾಗೂ ಸಂತಾನೋತ್ಪತ್ತಿ ಕ್ರಿಯೆ ಅವರಿಂದ ಮಾತ್ರ ಸಾಧ್ಯವಾದದ್ದರಿಂದ, ಮನುಕುಲದ ಸೃಷ್ಟಿಕರ್ತೆ ಆಕೆ ಎಂಬ ಅಂಶವನ್ನು ತಿಳಿದಿದ್ದರು. ಇದರಿಂದಾಗಿ ಪುರುಷರು ಕುತಂತ್ರ ಬುದ್ಧಿಯಿಂದ ಹೆಣ್ಣನ್ನು ತಮ್ಮ ಅಧೀನಳನ್ನಾಗಿಸ ತೊಡಗಿದರು.

ಬೇಟೆಯಾಡಲು ಬಳಸುತ್ತಿದ್ದ ತಂತ್ರಗಾರಿಕೆಯಿಂದ ಹೇಗೆ ಬೇಟೆಯನ್ನು ತಮ್ಮದಾಗಿಸಿ ಕೊಳ್ಳುತ್ತಿದ್ದರೋ, ಹಾಗೆ ಮಹಿಳಾ ಸಂಕುಲವನ್ನು ತಂತ್ರಗಾರಿಕೆಯಿಂದ ತಮ್ಮದಾಗಿಸಿಕೊಳ್ಳಲು ನಿರ್ಧರಿಸಿದರು. ಈ ಹಿನ್ನೆಲೆಯಲ್ಲಿ ಮಹಿಳೆಯರನ್ನು ವೈಭವೀಕರಿಸುತ್ತಾ, ಅವರ ಸಂತನೋತ್ಪತ್ತಿಯನ್ನು ಕೊಂಡಾಡುತ್ತಾ, ಅವರಿಗೆ ಆರೈಕೆ, ವಿಶ್ರಾಂತಿ ಮುಖ್ಯ ಎಂದು ಹೇಳಿದರು. ಜೊತೆಗೆ ಅವರ ಉಸ್ತುವಾರಿಯಲ್ಲಿದ್ದ ಎಲ್ಲಾ ಅಧಿಕಾರಗಳನ್ನು ಹೊರೆ ಎಂದು ತಿಳಿಸಿ, ಅದನ್ನು ತಾವು ನಿಭಾಯಿಸುವುದಾಗಿ ಹೇಳಿ ಸ್ತ್ರೀಯರಿಂದ ಪುರುಷರು ಎಲ್ಲವನ್ನೂ ಕಬಳಿಸುತ್ತ ತಮ್ಮ ಪ್ರಧಾನತೆಯನ್ನು ಸ್ಥಾಪಿಸಿಕೊಳ್ಳುವತ್ತ ಮುನ್ನುಗ್ಗಿದರು. ಮಹಿಳೆಯರು ತಮ್ಮ ಈ ತಂತ್ರಗಾರಿಕೆಯನ್ನು ಅರಿತರೆ ಅದು ತಮಗೆ ಎಲ್ಲಿ ಕುತ್ತಾಗುತ್ತದೆಯೋ ಎಂಬ ಭಯದಿಂದ ಮಹಿಳೆಯರನ್ನು ಮೇಲ್ನೋಟಕ್ಕೆ ಸದಾ ವೈಭವೀಕರಿಸುತ್ತಾ, ಹಿಂದಿನಿಂದ ತಮ್ಮ ಅಧಿಕಾರಕ್ಕಾಗಿ ಏನು ಬೇಕೋ ಅದೆಲ್ಲವನ್ನು ಸ್ಥಾಪಿಸುತ್ತಾ ಬಂದರು. ಹೀಗೆ ಮಹಿಳೆಯರನ್ನು ಹಿಂದಕ್ಕೆ ಸರಿಸುವ ಎಲ್ಲ ತಂತ್ರಗಳು ಮಹಿಳೆಯರನ್ನು ಹಿಂಸಿಸುವ ಅಸ್ತ್ರಗಳಾಗಿ ನಿರ್ಮಾಣಗೊಂಡವು. ಕಾಲ ಗತಿಸಿದಂತೆ ಎಂದಾದರೂ ಒಂದು ದಿನ ತಮ್ಮ ಮುಖ್ಯಸ್ಥಿಕೆಗೆ ಧಕ್ಕೆ ಬರಬಹುದು ಎಂಬ ಕಾರಣದಿಂದ ತಾವು ಪಡೆದುಕೊಂಡ ಸ್ಥಾನವನ್ನು ಸಾಮಾಜೀಕರಣ ಪ್ರಕ್ರಿಯೆಯ ಮೂಲಕ ಜೀವಂತಗೊಳಿಸುತ್ತಾ ಬಂದರು. ಇದರ ಪರಿಣಾಮವಾಗಿ ಮಾನವ ಸಮಾಜವೇ ಇಂದು

ತನ್ನ ಪರಿಸರವನ್ನು ಹಾಳು ಮಾಡಿಕೊಂಡಿದ್ದು, ತಮ್ಮನ್ನು ತಾವೇ ಅವನತಿಯ ಅಂಚಿನಲ್ಲಿ ತಂದು ನಿಲ್ಲಿಸಿಕೊಂಡಿದ್ದಾರೆ.

ಇದರಿಂದಾಗಿ ಇಂದು ಹಲವಾರು ಮನಸ್ಸುಗಳು ಹೊಸ ಮಾನವತಾವಾದದ ನಿರ್ಮಾಣದತ್ತ ದಾಪುಗಾಲಿಡುತ್ತಿವೆ. ಆದರೆ ಪುರುಷ ಪ್ರಧಾನ ವ್ಯವಸ್ಥೆ ಅತ್ಯಂತ ಜಟಿಲವಾಗಿ ಹೆಣೆದುಕೊಂಡಿದ್ದು ಇದರಿಂದ ಹೊರಬರಲು ಕಷ್ಟಸಾಧ್ಯವಾಗಿದೆ. ಪುರುಷ ಪ್ರಧಾನವಾಗಿರುವುದರಲ್ಲಿ ತೊಡಕಿಲ್ಲ. ಬದಲಾಗಿ ತನ್ನ ಉಳಿವಿಗಾಗಿ ಮಹಿಳೆಯರನ್ನು ಶೋಷಿಸುವಂತಹ ಹೀನ ಕೃತ್ಯಕ್ಕಿಳಿದಿರುವುದು ಸಮಸ್ಯೆಗೀಡು ಮಾಡಿದೆ. ಈ ಬಗೆಯ ಕೃತ್ಯವನ್ನು ನಡಾವಳಿ, ಸಂಪ್ರದಾಯ, ಧರ್ಮ, ಸಂಸ್ಕೃತಿ, ಅಧಿಕಾರ ಎಂಬ ಹೆಸರಿನಲ್ಲಿ ಸ್ಥಾಪಿಸುತ್ತಾ ಬಂದಿದೆ. ಮುಖ್ಯವಾಗಿ ಸಂತಾನೋತ್ಪತ್ತಿಯು ಮಹಿಳೆಯರ ಪ್ರಾಮುಖ್ಯತೆಗೆ ಕಾರಣವಾಗಿದ್ದರಿಂದ ಅದನ್ನು ಮಹಿಳೆಯರ ದುರ್ಬಲ ಸ್ಥಿತಿ ಎಂದು ಹೇಳುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ ಎಷ್ಟೋ ಸ್ತ್ರೀವಾದಿಗಳು ಮಹಿಳೆಯರ ಪ್ರಜನನ ಕ್ರಿಯೆಯನ್ನ ಮಹಿಳಾ ದೌರ್ಜನ್ಯದ ಮೂಲ ಎಂದು ಗುರುತಿಸಿ ಅದರಿಂದ ಹೊರಬರಬೇಕೆಂದು ಹೇಳುತ್ತಾರೆ. ಈ ಎಲ್ಲಾ ಸಂಗತಿಗಳಿಂದಾಗಿ ಪುರುಷ ಪ್ರಧಾನತೆ ಎಂದರೆ ಮಹಿಳೆಯರನ್ನು ಶೋಷಿಸುವ ವ್ಯವಸ್ಥೆ ಎಂದು ಗುರುತಿಸುವಂತಾಗಿದೆ. ಈ ವ್ಯವಸ್ಥೆಯನ್ನು ಕಾಲದಿಂದ ಕಾಲಕ್ಕೆ ಮಾನವ ಸಮಾಜ ವಿವಿಧ ಮಾರ್ಗಗಳ ಮೂಲಕ ಒಪ್ಪಿತವಾಗಿಸುತ್ತಾ ಹೊರಟಿದೆ. ಜೊತೆಗೆ ಸ್ತ್ರೀ–ಪುರುಷರಿಬ್ಬರನ್ನು ಬಳಸಿಕೊಳ್ಳುವ ಮೂಲಕ ಪುರುಷ ಪ್ರಧಾನ ವ್ಯವಸ್ಥೆ ತನ್ನ ನೆಲೆಯನ್ನು ಗಟ್ಟಿಗೊಳಿಸುತ್ತಾ ಹೊರಟಿರುವುದು ಕಾಣಬರುತ್ತದೆ. ಈ ಮಾತುಗಳನ್ನು ಅಥವಾ ಸಂಗತಿಗಳನ್ನು ಪ್ರತಿಬಿಂಬಿಸುವ ಜನಪದದ ಹಾಡೊಂದನ್ನು ಇಲ್ಲಿ ಉದಾಹರಣೆಯಾಗಿ ನೀಡಲಾಗಿದೆ.

ಹಾಡು

'ಮಾವನ ಮಾತು। ಕಟುವಿಷದ ಗುಟುಕು। ತಾಯಿ–ತಂದೆಯರೆ ನಿಮಗಾಗಿ ಮಾಡಿರುವೆ ಸಿಹಿಯೊಂದನ್ನು ಅತ್ತೆಯೊಡನೆ ವಾಸ। ಅಳುವನೆ ತರಿಸುತ್ತಿದೆ ಹೆಜ್ಜೆ ಹೆಜ್ಜೆಗು। ಮಗಳು ದೊಡ್ಡವರೊಡನೆ ಆಡಳು। ಅಂತೆ ಯಾರೊಡನೆ ಎಂದಿಗೂ ಮಾವನ ಮಾತು। ಮುಳ್ಳುಗೊಂಚಲಿನಂತೆ। ಹೇಳುವಳು ತಾಯಿ। ಶೀಲವಂತರ ಮಗಳು ಇರು ಸೈರಿಸುತ।'.[೫]

ಈ ಜನಪದದ ಹಾಡಿನಲ್ಲಿ ಮಹಿಳೆಯೊಬ್ಬಳು ಗಂಡನ ಮನೆಗೆ ಹೋದಾಗ ಅಲ್ಲಿ ತನಗಾಗುತ್ತಿರುವ ಹಿಂಸೆಯನ್ನು ತಾಯಿಯ ಬಳಿ ಹೇಳಿಕೊಳ್ಳುವ ರೀತಿ ಹಾಗೂ ತಾಯಿ ಅದನ್ನು ಮಗಳಿಗೆ ಮನವರಿಕೆ ಮಾಡಿಕೊಡುವ ಸನ್ನಿವೇಶ ನಿರೂಪಣೆಗೊಂಡಿದೆ.

ಒಬ್ಬ ವಿವಾಹಿತ ಹೆಣ್ಣುಮಗಳು ಗಂಡನ ಮನೆಯಲ್ಲಿ ಮಾವನ ಮಾತುಗಳು ವಿಷಕುಡಿದಾಗ ಆಗುವಷ್ಟು ಸಂಕಟ ಮತ್ತು ಮುಳ್ಳಿನ ಗೊಂಚಲು ಚುಚ್ಚಿದಾಗ ಆಗುವಷ್ಟು ನೋವನ್ನು ತರಿಸುತ್ತಿದೆ. ಅತ್ತೆಯ ಹಿಡಿತದಲ್ಲಿನ ಜೀವನ ನನಗೆ ಒಂದೊಂದು ಕ್ಷಣವೂ ಅಳುವನ್ನು ತರಿಸುತ್ತಿದೆ. ಅತ್ತೆ ನನ್ನೊಂದಿಗೆ ಚೆನ್ನಾಗಿ ಬೆರೆಯುತ್ತಿಲ್ಲ, ನಾನು ಯಾರಿಗೂ ಎಂದಿಗೂ ಎದುರು ಮಾತನಾಡಿಲ್ಲ ಅಮ್ಮ ಎಂದು ತಾಯಿಯ ಬಳಿಯಲ್ಲಿ ತನಗಾಗುತ್ತಿರುವ ನೋವು, ಹಿಂಸೆಯನ್ನು ವ್ಯಕ್ತಪಡಿಸುತ್ತಾಳೆ. ಅದಕ್ಕೆ ತಾಯಿಯಾದವಳು ನೀನು ಮಾನ ಮರ್ಯಾದೆಯಿಂದ ಬದುಕಿದವರ ಮಗಳು ಇದೆಲ್ಲವನ್ನು ಸಹಿಸಿಕೊಳ್ಳಲೇಬೇಕು. ಇಲ್ಲದೆ ಹೋದರೆ ತಂದೆ–ತಾಯಿಗಳಿಗೆ ಕೆಟ್ಟ ಹೆಸರು ಎಂದು ಹಿಂಸೆಯನ್ನು

ಒಪ್ಪಿಸುವ ಹಿನ್ನೆಲೆಯಲ್ಲಿ ಮಗಳಿಗೆ ಹೇಳುವುದು ಈ ಜನಪದದ ಹಾಡಿನಲ್ಲಿ ಕಂಡುಬರುತ್ತದೆ. ಗಂಡನ ಮನೆಯಲ್ಲಿ ಎಷ್ಟೇ ಹಿಂಸೆಯಾದರು ಅದನ್ನು ಒಪ್ಪಿ ಬಾಳಬೇಕು. ತಿರುಗಿ ಮಾತನಾಡಬಾರದು. ಒಂದು ವೇಳೆ ಮಾತನಾಡಿದ್ದೇ ಆದರೆ ತಂದೆ-ತಾಯಿಗಳಿಗೆ ಕೆಟ್ಟಮಾತು ಬರುತ್ತದೆ ಎಂದು ಹಿಂಸೆಯನ್ನು ಒಪ್ಪಿಸುವ ಅಥವಾ ಒಪ್ಪಿತ ನೆಲೆಗೆ ತರುವಲ್ಲಿ ತಾಯಿಯ ಪಾತ್ರ ಇಲ್ಲಿ ಕಾರ್ಯ ನಿರ್ವಹಿಸುವುದನ್ನು ಕಾಣಬಹುದಾಗಿದೆ.

ಗಂಡನ ಮನೆಯಲ್ಲಿ ಹೆಣ್ಣಿನ ಮೇಲೆ ಆಗುವ ಹಿಂಸೆಯನ್ನು ತಾಯಿಯಿಂದಲೇ ಒಪ್ಪಿಸುವ ಕಾರ್ಯ ಹೇಗೆ ಮಾಡಲಾಗುತ್ತದೆ ಎಂಬುವುದನ್ನು ಈ ಜನಪದದ ಹಾಡಿನ ಮೂಲಕ ಗಮನಿಸ ಬಹುದಾಗಿದೆ. ಅಲ್ಲದೇ ಮಹಿಳೆಯರು ತಮ್ಮ ಮೇಲಾದ ಹಿಂಸೆಯನ್ನು ಹೇಗೆ ಒಪ್ಪಿಕೊಂಡು ಮೌನವಾಗಿ ಅನುಭವಿಸುತ್ತಿದ್ದಾರೆ ಎಂಬುವುದಕ್ಕೆ ಮತ್ತೊಂದು ಉದಾಹರಣೆಯಾಗಿ ರಾಮಾಯಣದ ಸೀತೆಯ ಪಾತ್ರವನ್ನು ಇಲ್ಲಿ ಸ್ಮರಿಸಬಹುದಾಗಿದೆ. ಗೊಂದಲಪುರ ಎಂಬ ಪುಸ್ತಕದಲ್ಲಿ ರೇಣು ಮುಕುಂದ್‌ರವರು 'ಸ್ತ್ರೀ ಪ್ರತಿಮೆಗಳು ಮತ್ತು ಹಿಂಸೆಯ ಬೇರುಗಳು' ಎಂಬ ಲೇಖನದಲ್ಲಿ ಸ್ತ್ರೀ ಮೌನವಾಗಿ ಅನುಭವಿಸುವ ಹಿಂಸೆಯನ್ನು ರಾಮಯಣದ ಕಥಾನಕವೊಂದರ ಮೂಲಕ ನಿರೂಪಿಸುತ್ತಾರೆ. ಅದನ್ನು ಇಲ್ಲಿ ಯಥಾವತ್ತಾಗಿ ದಾಖಲಿಸಿ ಹಿಂಸೆಯ ಚಹರೆ ಯಾವುದಾಗಿರುತ್ತದೆ, ಅದಕ್ಕೆ ಮೂಲ ಕಾರಣ ಏನಾಗಿರುತ್ತದೆ, ವ್ಯವಸ್ಥೆ ಹೇಗೆ ಅದನ್ನು ಮರೆಮಾಚಿ ಒಪ್ಪಿಸಿ ಮೌನವಾಗಿಸುತ್ತದೆ ಎಂಬುವುದನ್ನು ಮಹಿಳೆಯರು ಮೌನವಾಗಿ ಅನುಭವಿಸುತ್ತಿರುವ ಹಿಂಸೆಯ ಹಿನ್ನೆಲೆಯಲ್ಲಿ ವಿವರಿಸಲಾಗಿದೆ.

ಕಥೆ ಹೀಗಿದೆ

"ಲವಕುಶರು ರಾಮನ ಯಜ್ಞದ ಕುದುರೆಯನ್ನು ಬಂಧಿಸಿದಾಗ, ಒಂದು ಗಂಭೀರ ಸನ್ನಿವೇಶ ಉದ್ಭವಿಸುತ್ತದೆ. ಸೀತೆ ಇನ್ನೂ ಜೀವಂತವಾಗಿದ್ದಾಳೆಂದು ಹಾಗೂ ಈ ಹುಡುಗರೇ ತನ್ನ ಮಕ್ಕಳೆಂದು ರಾಮನಿಗೆ ತಿಳಿದಿರುವುದಿಲ್ಲ. ಕುದುರೆಯನ್ನು ಬಿಡುಗಡೆ ಮಾಡಲು ಹನುಮಂತ, ಲಕ್ಷ್ಮಣ ಮತ್ತು ರಾಮ ಕೂಡ ಮರಣ ಹೊಂದುತ್ತಾರೆ. ಸೀತೆ ದುಃಖಿಸುತ್ತಾ ತಮ್ಮ ತಂದೆಯನ್ನು ಕೊಂದದ್ದಕ್ಕಾಗಿ ಮಕ್ಕಳನ್ನು ದಂಡಿಸುತ್ತಾಳೆ. ವಾಲ್ಮೀಕಿ ರಕ್ಷಣೆಗೆ ಬಂದು ಸಾವಿಗೀಡಾದವರನ್ನು ಬದುಕಿಸುತ್ತಾನೆ. ರಾಮ ತಾನು ಹಿಂದೆ ಮಾಡಿದ ಕೆಲಸಗಳಿಗೆ ಪಶ್ಚಾತ್ತಾಪ ಪಡುತ್ತಾ, ತನ್ನ ಪತ್ನಿ ಸೀತೆಯನ್ನು ಕಾಣಲು ತವಕಿಸುತ್ತಾನೆ. ಆದರೆ ತಮ್ಮ ಗರ್ಭಿಣಿ ತಾಯಿಯನ್ನು ತ್ಯಜಿಸಿದ ಮತ್ತು ಗರ್ಭದಲ್ಲೇ ತಮ್ಮನ್ನು ಕೊಲ್ಲಲು ಯತ್ನಿಸಿದ ರಾಮನ ಕೃತ್ಯವನ್ನು ಮರೆತು, ಎಲ್ಲವನ್ನು ಕ್ಷಮಿಸಿ ಅವನನ್ನು ಭೇಟಿ ಮಾಡಲು ಯತ್ನಿಸುವ ಸೀತೆಯನ್ನು ಲವಕುಶರು ತಡೆಯುತ್ತಾರೆ. ಈ ಸಮಸ್ಯೆಯನ್ನು ಬಿಡಿಸಲು ಎಲ್ಲಾ ದೇವರುಗಳು ತಮ್ಮ ಹೆಂಡತಿಯರೊಡನೆ ಭೂಮಿಗೆ ಇಳಿಯುತ್ತಾರೆ. ಬ್ರಹ್ಮ, ಶಿವ, ಸೂರ್ಯ, ಇಂದ್ರ ಮತ್ತಿತರ ದೇವರುಗಳು ರಾಮನ ಪಕ್ಷವಹಿಸಿದರೆ ಈ ದೇವರುಗಳ ಹೆಂಡತಿಯರು ಹುಡುಗರ ನಿರ್ಧಾರವನ್ನು ಬೆಂಬಲಿಸುತ್ತಾರೆ. ರಾಮನ ಜೀವನ ಯಾತ್ರೆಯ, ಅಜ್ಞಾತ ವಾಸದ ಬವಣೆಯ ಅವಧಿಯಲ್ಲಿ ಒಂದಲ್ಲ ಒಂದು ಕಾರಣಕ್ಕಾಗಿ ಆತನಿಗೆ ಬೆಂಬಲ ನೀಡಿದ, ಸಹಾಯವನ್ನು ಒದಗಿಸಿದ ಪುರುಷ ದೇವರುಗಳೆಲ್ಲಾ ಈಗ ರಾಮನ ಪಕ್ಷ ವಹಿಸಿದ್ದರಿಂದ ಅವರ ನಿರ್ಣಯ ನಿಷ್ಪಕ್ಷಪಾತವಾಗಿರಲು ಸಾಧ್ಯವಿಲ್ಲ. ವಾಲ್ಮೀಕಿಯ ಮಧ್ಯಸ್ಥಿಕೆಯೂ ನಿರಾಕರಿಸಲ್ಪಡುತ್ತದೆ. ಶಿವನ ಸತಿ ಪಾರ್ವತಿ ಕುದುರೆಯನ್ನು ಒಪ್ಪಿಸದಿರುವಂತೆ ಸಲಹೆ ನೀಡುತ್ತಾಳೆ. ರಾಮ ತನ್ನ ತಪ್ಪನ್ನು ಒಪ್ಪಿಕೊಂಡು ತಲೆಬಾಗುವಂತೆ

ಒತ್ತಾಯಿಸುತ್ತಾಳೆ. ಮತ್ತೊಂದು ಯುದ್ಧ ಅನಿವಾರ್ಯವೆಂಬಂತೆ ಕಾಣುತ್ತದೆ. ಕೊನೆಯಲ್ಲಿ ಒಂದು ಒಪ್ಪಂದಕ್ಕೆ ಬರುತ್ತಾರೆ. ರಾಮ ತನ್ನ ಮಕ್ಕಳ ಕಾಲಿಗೆ ಬೀಳುವುದರ ಮೂಲಕ ಕಥಾನಕಕ್ಕೆ ತೆರೆ ಎಳೆಯುತ್ತಾರೆ'.[೬]

ರಾಮಾಯಣದ ಈ ಒಂದು ಕಥಾನಕದಲ್ಲಿ ಸೀತೆ ರಾಮನಿಂದ ದೌರ್ಜನ್ಯಕ್ಕೊಳಗಾಗಿರುತ್ತಾಳೆ. ಪುರುಷ ಪ್ರಧಾನ ವ್ಯವಸ್ಥೆ ಹೇಗೆ ಮಹಿಳೆಗೆ ಹಿಂಸೆ ನೀಡುತ್ತಿದೆ. ಮತ್ತು ಅದನ್ನು ಯಾವ ರೀತಿಯಲ್ಲಿ ಒಪ್ಪಿತ ನೆಲೆಗೆ ತರಲು ಯಶಸ್ವಿಯಾಗಿದೆ ಎಂಬುವುದಕ್ಕೆ ಇದೊಂದು ಉತ್ತಮ ಉದಾಹರಣೆಯಾಗಿದೆ. ಈ ಕಥಾನಕದಲ್ಲಿ ರಾಮ ನೋವನ್ನುಂಡ ಸೀತೆಯ ಕಾಲಿಗೆ ತಪ್ಪೊಪ್ಪಿಸುವ ಕಾರ್ಯ ಮಾಡದೆ, ಮಕ್ಕಳಾದ ಲವ-ಕುಶರ ಕಾಲಿಗೆ ಬೀಳುವುದು ಗಮನಾರ್ಹ ಸಂಗತಿಯಾಗಿದೆ. ಇಲ್ಲಿ ಸೀತೆಯ ಪಾತ್ರವು ಹಿಂಸೆಯನ್ನು ಮೌನವಾಗಿ ಅನುಭವಿಸುವ ಪಾತ್ರವಾಗಿ ಬಿಂಬಿಸುತ್ತಾರೆ. ಆದರೆ ಈ ಕಥಾನಕದಲ್ಲಿಯ ಮತ್ತೊಂದು ಮುಖ್ಯ ಅಂಶವೆಂದರೆ, ಸೀತೆ ಅನುಭವಿಸುವ ಹಿಂಸೆಯನ್ನು ಮೌನವಾಗಿಸಲು ಮಿಕ್ಕೆಲ್ಲಾ ಪಾತ್ರಗಳು ಹೇಗೆ ಕಾರ್ಯ ಪ್ರವೃತ್ತವಾಗಿವೆ ಎಂಬುವುದನ್ನು ಗಮನಿಸುವುದಿಲ್ಲ. ಸೀತೆಯನ್ನು ಒಡಗೂಡಿ ಈ ಕಥಾನಕದಲ್ಲಿ ಬರುವ ಎಲ್ಲಾ ಪಾತ್ರಗಳು ಪುರುಷ ಪ್ರಧಾನ ವ್ಯವಸ್ಥೆಯ ಉಳಿವಿಗಾಗಿ ಕಾರ್ಯನಿರ್ವಹಿಸುವುದು ಕಂಡುಬರುತ್ತದೆ. ಇಲ್ಲಿ ಸೀತೆಗಾದ ನೋವು, ಅಪಮಾನ ಯಾವುವು ಗಣನೆಗೆ ಬಾರದೇ ಕೇವಲ ಲವಕುಶರ ಅಸ್ತಿತ್ವದ ಪ್ರಶ್ನೆ ಮಾತ್ರ ಇಲ್ಲಿ ಮುಖ್ಯವಾಗುವುದು ಗೋಚರವಾಗುತ್ತದೆ.

ಇಲ್ಲಿ ಸೀತೆಯ ಪಾತ್ರ ಹಿಂಸೆಯನ್ನು ಮೌನವಾಗಿ ಅನುಭವಿಸುವ ಹಾಗೂ ಆ ಹಿಂಸೆಯನ್ನು ನೀಡಿದವರು ಪತಿ ಆದದ್ದರಿಂದ ಆತನನ್ನು ಮಾನ್ಯ ಸ್ಥಾನದಲ್ಲಿರಿಸಿ ಗೌರವಿಸುವ ಪುರುಷ ಪ್ರಧಾನತೆಯ ಭಾಗವಾಗಿರುವುದು ಕಂಡುಬರುತ್ತದೆ. ಅಷ್ಟೇ ಏಕೆ ಶಿವ ಪಾರ್ವತಿಯರು ಧರೆಗಿಳಿದಾಗ ಶಿವ, ಬ್ರಹ್ಮ, ಸೂರ್ಯ, ಇಂದ್ರರಿರಲಿ, ಪಾರ್ವತಿ ಹಾಗೂ ಇತರೆ ಮಹಿಳಾ ದೇವತೆಗಳೂ ಸಹ ನೋವನ್ನುಂಡ ಸೀತೆಯ ಬೆಂಬಲಕ್ಕಲ್ಲದೇ ತಮ್ಮ ಅಸ್ತಿತ್ವದ ಪ್ರಶ್ನೆಗಾಗಿ ಹೋರಾಡುವ ಲವಕುಶರ ಬೆಂಬಲಕ್ಕೆ ನಿಲ್ಲುತ್ತಾರೆ. ದೇವತೆಗಳು ಕೂಡಾ ತಂದೆಯ ಮೂಲಕವೇ ಮಕ್ಕಳನ್ನು ಗುರುತಿಸುವ ಪುರುಷ ಪ್ರಧಾನತೆಯ ಮೂಲಬೇರಿನ ಅಡಿಪಾಯವನ್ನು ಮತ್ತಷ್ಟು ಭದ್ರಗೊಳಿಸುವ ಕಾರ್ಯನಿರ್ವಹಿಸುವುದು ಕಂಡುಬರುತ್ತದೆ. ಒಟ್ಟಾರೆ ಇಡೀ ಕಥಾನಕದಲ್ಲಿ ಸೀತೆ ಹೆಣ್ಣಾಗಿ ಅನುಭವಿಸುವ ವ್ಯಥೆಯನ್ನು ಮುಖ್ಯವಾಗಿಸದೇ ಅದು ಆಕೆಯ ಧರ್ಮ ಎಂಬಂತಹ ನಿಲುವು ತಳೆಯಲಾಗಿದೆ. ಸೀತೆ ಪುರುಷ ಪ್ರಧಾನತೆಯನ್ನು ಒಪ್ಪಿಕೊಂಡಿರುವ ಪಾತ್ರವಾಗಿ ಇಲ್ಲಿ ಗೋಚರಿಸುತ್ತಾಳೆ. ಜೊತೆಗೆ ಎಲ್ಲಾ ಮಹಿಳೆಯರನ್ನು ಪ್ರತಿನಿಧಿಸುವ ಪಾತ್ರವಾಗಿದ್ದಾಳೆ. ಪತಿಯಾದವನು ಏನೇ ಹಿಂಸೆಗೊಳಪಡಿಸಿದರು ಅದನ್ನು ಮೌನವಾಗಿ ಅನುಭವಿಸುವ ಎಲ್ಲಾ ಹೆಣ್ಣುಮಕ್ಕಳಿಗೂ ಹೋಲಿಕೆ ನೀಡಬಹುದಾದ ಉಪಮೇಯದಂತೆ ಸೀತೆಯ ಪಾತ್ರ ಇಲ್ಲಿ ನಿರೂಪಣೆ ಗೊಂಡಿರುವುದನ್ನು ಕಾಣಬಹುದಾಗಿದೆ. ಸೀತೆ ಎಲ್ಲೂ ವ್ಯವಸ್ಥೆಯನ್ನು ಮುರಿಯುವ ಕಾರ್ಯ ಮಾಡುವುದಿಲ್ಲ, ಬದಲಾಗಿ ಇಷ್ಟೆಲ್ಲಾ ನೋವು, ಸಂಕಷ್ಟಗಳನ್ನು ಅನುಭವಿಸಿದರೆ ಆದರ್ಶ ವ್ಯಕ್ತಿ (ಗೃಹಿಣಿ) ಯಾಗುತ್ತಾರೆ ಎಂಬಂತೆ ಬಿಂಬಿತವಾಗಿದ್ದಾಳೆ.

ಹೀಗೆ ಎಲ್ಲಾ ಸ್ತ್ರೀಯರು ಕುಟುಂಬದೊಳಗೆ ತಮ್ಮ ಮೇಲಾಗುವ ಹಿಂಸೆಯನ್ನು ಪ್ರಶ್ನಿಸದೇ ಸೀತೆಯಂತೆ ಮೌನವಾಗಿ ಅನುಭವಿಸಿದ್ದೇ ಆದಲ್ಲಿ ಅಂತವರು ಆದರ್ಶಪ್ರಾಯರಾಗುತ್ತಾರೆ. ಒಂದು

ವೇಳೆ ತಮಗಾಗುತ್ತಿರುವ ಹಿಂಸೆಯನ್ನು ಪ್ರತಿಭಟಿಸಿದ್ದೇ ಆದಲ್ಲಿ ಅವರನ್ನು ಭಜಾರಿ, ಗಂಡುಬೀರಿ, ವ್ಯವಸ್ಥೆ ಮುರಿದು ಬದುಕುವವಳು ಎಂದು ಆರೋಪಿಸುತ್ತಾರೆ. ಸಮಾಜದಿಂದ ಅವರನ್ನು ಪ್ರತ್ಯೇಕಿಸಿ ಕಾಣಲು ಪ್ರಾರಂಭಿಸುತ್ತಾರೆ. ಈ ರೀತಿಯಾಗಿ ಮಹಿಳೆಯರ ಪ್ರತಿಭಟನೆಯನ್ನು ಹತ್ತಿಕ್ಕಲು ಒಂದಲ್ಲ ಒಂದು ಬಗೆಯ ಆರೋಪಗಳನ್ನು ಮಾಡುತ್ತಾ, ಸದಾ ಅವರ ಮೇಲೆ ಕುಟುಂಬದೊಳಗಡೆ ದೌರ್ಜನ್ಯಗಳನ್ನು ಸ್ಥಾಪಿಸುತ್ತಾ ಹೊರಟಿರುವುದು ಕಂಡುಬರುತ್ತದೆ.

ಪಿತೃಪ್ರಧಾನತೆಯ ಹಿನ್ನೆಲೆಯಲ್ಲಿ ಕುಟುಂಬದೊಳಗಡೆ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಬಗ್ಗೆ ಈ ಮೇಲೆ ಸವಿವರವಾಗಿ ತಿಳಿಸಲಾಗಿದೆ. ಅಂತೆಯೇ ಇದನ್ನು ನಿಶ್ಚಿತ ಚೌಕಟ್ಟಿನೊಳಗೆ ಇರಿಸಿ ತನ್ನ ವ್ಯಾಪ್ತಿ ಯಾವುದೆಂಬುದನ್ನು ಹೇಳುತ್ತದೆ. ಕಾನೂನು ವ್ಯಾಖ್ಯಾನಿಸುವಂತೆ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯವೆಂದರೆ – ಕುಟುಂಬದೊಳಗಡೆ '(ಅ) ಭಾದಿತ ವ್ಯಕ್ತಿ (ಮಹಿಳೆ) ಗೆ ದೈಹಿಕವಾಗಿ ಅಥವಾ ಮಾನಸಿಕವಾಗಿ ಕಿರುಕುಳ ನೀಡುವುದು, ಗಾಯಗೊಳಿಸುವುದು ಮತ್ತು ಆರ್ಥಿಕ ನಿಂದನೆ; ಅಥವಾ (ಬ) ಭಾದಿತ ವ್ಯಕ್ತಿಗೆ ಕಿರುಕುಳ ನೀಡುವುದು, ಧಕ್ಕೆ ಒದಗಿಸುವುದು, ಗೋಳಾಡಿಸುವುದು, ಭಯಭೀತಗೊಳಿಸುವುದು ಅಥವಾ ಅವಳಿಗೆ ಅಥವಾ ಅವಳಿಗೆ ಸಂಬಂಧಿಸಿದ ವ್ಯಕ್ತಿಯನ್ನು ಕುರಿತು ವರದಕ್ಷಿಣೆ ಹಣ ನೀಡುವಂತೆ ಬಲವಂತವಾಗಿ ಒತ್ತಾಯಿಸುವುದು ಅಥವಾ ಆಸ್ತಿ ಅಥವಾ ಬೆಲೆಯುಳ್ಳ ಭದ್ರತೆಯನ್ನು ನೀಡುವಂತೆ ಒತ್ತಾಯಿಸುವುದು (ಕ) ಉಪಕಲಮು (ಅ) (ಬ) ರಡಿಯಲ್ಲಿ ವಿವರಿಸಲಾದಂತೆ ಭಾದಿತ ವ್ಯಕ್ತಿಯನ್ನು ಅಥವಾ ಅವಳಿಗೆ ಸಂಬಂಧಿಸಿದವರನ್ನು ಬೆದರಿಸುವುದು (ಡ) ಬಾಧಿತ ವ್ಯಕ್ತಿಗೆ ಒದಗಿಸಿರುವ ನೋವು ಅದು ದೈಹಿಕವಾಗಿರಬಹುದು ಅಥವಾ ಮಾನಸಿಕವಾಗಿರಬಹುದು ಈ ಎಲ್ಲಾ ಬಗೆಯ ನಡುವಳಿಕೆಗಳನ್ನು ಕಾನೂನು ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ ಎಂದು ಪರಿಗಣಿಸುತ್ತದೆ.'[೭] ಈ ರೀತಿಯಲ್ಲಿ ಮಹಿಳೆ ಕುಟುಂಬದೊಳಗಡೆ ಯಾವುದೇ ಬಗೆಯ ಹಿಂಸೆಗೊಳಗಾದಲ್ಲಿ ಅದಕ್ಕೆ ಕಾನೂನು ಅವರಿಗೆ ನ್ಯಾಯ ದೊರಕಿಸಿಕೊಡುತ್ತದೆ. ಹಲವಾರು ಕಾಯ್ದೆ ಕಾನೂನುಗಳು ಮಹಿಳೆಯರು ಅನುಭವಿಸುವ ವಿಭಿನ್ನ ಹಿಂಸೆಗಳಿಂದ ಮುಕ್ತಿ ಹೊಂದಲು ಸಹಾಯಕವಾಗಿದೆ.

೨.೬. ಮಹಿಳೆಯರ ಮೇಲಿನ ಕೌಟುಂಬಿಕ ಹಿಂಸೆಯ ಸ್ವರೂಪ

ಕುಟುಂಬಗಳಲ್ಲಿ ಇಂದು ಮಹಿಳೆಯರು ಹಲವಾರು ದೌರ್ಜನ್ಯಗಳಿಗೆ ಒಳಗಾಗುತ್ತಿದ್ದಾರೆಂದು ಈಗಾಗಲೇ ಅರಿತಿದ್ದೇವೆ. ಆದರೆ ಅದರ ಸ್ವರೂಪ ಯಾವ ಬಗೆಯಲ್ಲಿದೆ ಎಂದು ಅಧ್ಯಯನದ ದೃಷ್ಟಿಯಿಂದ ತಿಳಿಯಬೇಕಾದ ಅವಶ್ಯಕತೆ ಇದೆ. ಈ ನೆಲೆಯಲ್ಲಿ ಮಹಿಳೆಯರ ಮೇಲೆ ಜರುಗುತ್ತಿರುವ ಕೌಟುಂಬಿಕ ದೌರ್ಜನ್ಯವನ್ನು ಗಮನಿಸಿದಾಗ, ಅದು ಅತ್ಯಂತ ಕರಾಳತೆಯಿಂದ ಕೂಡಿದೆ ಎಂದು ಹೇಳಬಹುದು. ಮಹಿಳೆಯರ ದೇಹ, ಮನಸ್ಸು, ಲೈಂಗಿಕತೆ ಎಲ್ಲದರ ಮೇಲೂ ತನ್ನ ಹಿಡಿತ ಸಾಧಿಸುವಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಎಂಥೆಂತಹ ಹೀನ ಕೃತ್ಯಗಳಿಗೆ ಕೈಹಾಕಿದೆ ಎಂಬುದನ್ನು ಅದರ ಸ್ವರೂಪದಿಂದ ಮಾತ್ರ ಅರಿಯಲು ಸಾಧ್ಯವಾಗುತ್ತದೆ. ಆದ್ದರಿಂದ ಮಹಿಳೆಯರು ಅನುಭವಿಸುತ್ತಿರುವ ದೌರ್ಜನ್ಯದ ಸ್ವರೂಪವನ್ನು ವ್ಯವಸ್ಥಿತವಾಗಿ ದಾಖಲಿಸುವ ಉದ್ದೇಶದಿಂದ ಮಹಿಳೆಯರ ಮೇಲಿನ ದೌರ್ಜನ್ಯವನ್ನು ಅವರು ಹುಟ್ಟಿದ ಮನೆಯಲ್ಲಿ, ಗಂಡನ ಮನೆಯಲ್ಲಿ, ಸಹಚರ ಜೀವನ ಸಂಗಾತಿಗಳಲ್ಲಿ,

ರಕ್ತ ಸಂಬಂಧ ಇದ್ದು ಅಥವಾ ಇಲ್ಲದೆಯೇ ಆ ಕುಟುಂಬದ ಸದಸ್ಯರಾಗಿರುವ ಮಹಿಳೆಯರು ಅನುಭವಿಸುತ್ತಿರುವ ದೌರ್ಜನ್ಯಗಳು ಹಾಗೂ ವಿಶೇಷವಾಗಿ ದೇವದಾಸಿ ಮಹಿಳೆಯರು ಸಂಗಾತಿಗಳಿಂದ ಅನುಭವಿಸುತ್ತಿರುವ ದೌರ್ಜನ್ಯಗಳು ಎಂದು ವಿಂಗಡಿಸಿ ವಿವರಿಸಲಾಗಿದೆ.

೨.೬.೧. ಹುಟ್ಟಿದ ಮನೆಯಲ್ಲಿನ ಹಿಂಸೆಯ ಸ್ವರೂಪ

ಗಂಡು ಸಂತಾನಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುವ ಈ ಸಮಾಜದಲ್ಲಿ ಹೆಣ್ಣು ಹುಟ್ಟಿತೆಂದರೆ ಹುಣ್ಣಾದಂತೆ ಭಾವಿಸುತ್ತಾರೆ. ಅಂದರೆ ಸಮಾಜದಲ್ಲಿ ಹೆಣ್ಣಿಗೆ ನೀಡುವ ಕೀಳು ಸ್ಥಾನ-ಮಾನವನ್ನ ತಿಳಿಸುತ್ತದೆ. ಹೆಣ್ಣಿಲ್ಲದೇ ಹೋದರೆ ಜಗತ್ತು ಇಲ್ಲ ಎಂಬುದನ್ನು ಅರಿತ ಸಮಾಜವೇ ಆಕೆಯನ್ನು ಕುಟುಂಬದ ವಿಕಲಚೇತನರಂತೆ ಭಾವಿಸುತ್ತದೆ. ಹೆಣ್ಣು ಭ್ರೂಣದಲ್ಲಿರುವಾಗಿನಿಂದ ಪ್ರಾರಂಭಗೊಂಡ ಆಕೆಯ ಮೇಲಿನ ಹಿಂಸೆ ಹುಟ್ಟಿದ ನಂತರವು ನಿರಂತರವಾಗಿ ಜರುಗುತ್ತಲೇ ಇರುತ್ತದೆ. ಆಕೆಯನ್ನು ಜೀವಂತ ಕೊಲ್ಲುವ ಹಂತದವರೆಗೂ ಹಿಂಸೆ ತನ್ನ ಕರಾಳತೆಯನ್ನು ತೋರುತ್ತದೆ. ಹುಟ್ಟಿದ ಮನೆಯೇ ಶ್ರೇಷ್ಠ ಎಂದು ಭಾವಿಸುವವರು ಬಹಳಷ್ಟು ಜನ ಇದ್ದಾರೆ. ಆದರೆ ಅಲ್ಲಿಯೇ ಅತ್ಯಂತ ಭೀಕರ ರೀತಿಯಲ್ಲಿ ದೌರ್ಜನ್ಯ ತನ್ನ ಛಾಪನ್ನು ಮೂಡಿಸಿದೆ.

ನೆರಳಾಗಿ ಕಾಪಾಡುವ ಹೊಣೆ ಹೊತ್ತ ಕುಟುಂಬ ಅಥವಾ ತಂದೆ-ತಾಯಿಗಳೇ ಮಹಿಳೆಯರ ಶೋಷಣೆಗೆ ಮುಂದಾಗುತ್ತಾರೆ. ಹೆಣ್ಣು ಭ್ರೂಣ ಹತ್ಯೆ, ಹೆಣ್ಣು ಶಿಶು ಹತ್ಯೆ, ಹೆಣ್ಣುಮಕ್ಕಳನ್ನು ಬೀದಿಗೆ ಎಸೆಯುವುದು, ಬಾಲ ಕಾರ್ಮಿಕರನ್ನಾಗಿಸುವುದು, ಹೆಣ್ಣು ಮಕ್ಕಳನ್ನು ದುರ್ಬಳಕೆ ಮಾಡಿಕೊಳ್ಳುವುದು, ಆರ್ಥಿಕ, ಆರೋಗ್ಯ, ಶಿಕ್ಷಣ ಎಲ್ಲಾ ಬಗೆಯಿಂದಲೂ ಲಿಂಗ ತಾರತಮ್ಯ ಮಾಡುವುದು, ಬಾಲ್ಯ ವಿವಾಹ ಮಾಡುವುದು, ಹೆಣ್ಣೆಂಬ ಕಾರಣಕ್ಕೆ ಶಾಬ್ದಿಕವಾಗಿ ನಿಂದನೆ ಮಾಡುವುದು, ದೇವದಾಸಿಯ ರನ್ನಾಗಿಸುವುದು ಇಂತಹ ಇನ್ನೂ ಹಲವಾರು ಬಗೆಯ ಕೃತ್ಯಗಳನ್ನು ಎಸಗಲಾಗುತ್ತಿದೆ. ಹೆಣ್ಣು ಭ್ರೂಣ ಹತ್ಯೆಯಂತಹ ಕೃತ್ಯವು ಹೆತ್ತ ತಾಯಿಯನ್ನೂ ಸಹ ಇದು ತನ್ನ ತೆಕ್ಕೆಗೆ ಎಳೆದುಕೊಂಡಿರುವುದು ವಿಪರ್ಯಾಸವಾಗಿದೆ. ಅಂದರೆ ಪುರುಷ ಪ್ರಧಾನ ವ್ಯವಸ್ಥೆ ತನ್ನ ಅಸ್ತಿತ್ವ ಸ್ಥಾಪನೆಗಾಗಿ ಯಾರನ್ನೂ ಬಿಡದೇ ತಾಯಿ, ತಂದೆ, ಅಜ್ಜ, ಅಜ್ಜಿ ಹೀಗೆ ಕುಟುಂಬದ ಎಲ್ಲಾ ಸದಸ್ಯರನ್ನು ಬಳಸಿಕೊಳ್ಳುತ್ತಿರುವುದು ಕಾಣಬರುತ್ತದೆ.

ಹೆಣ್ಣು ಭ್ರೂಣ ಹತ್ಯೆ

ಹೆಣ್ಣು ಭ್ರೂಣ ಹತ್ಯೆ ಎನ್ನುವುದು ಜನನ ಪೂರ್ವ ಲಿಂಗ ನಿರ್ಧರಣಾ ತಂತ್ರಗಳು ಬಂದಾಗಿನಿಂದ ಪ್ರಾರಂಭಗೊಂಡಿತು. ಮಗು ಗರ್ಭದಲ್ಲಿದ್ದಾಗ ಅದರ ಆರೋಗ್ಯ ಪರೀಕ್ಷೆಗೆಂದು ಕಂಡುಕೊಂಡ ತಂತ್ರಜ್ಞಾನದಿಂದ ಲಿಂಗ ಗುರುತಿಸಿಕೊಂಡು, ಹೆಣ್ಣಾಗಿದ್ದಲ್ಲಿ ಅದನ್ನು ಗರ್ಭಪಾತ ಮಾಡುವ ಕೃತ್ಯಕ್ಕೆ ಇಂದು ಕುಟುಂಬಗಳು ಮುಂದಾಗಿವೆ. ಇದಕ್ಕೂ ಪೂರ್ವದಲ್ಲಿ ಹೆಣ್ಣು ಶಿಶು ಹತ್ಯೆಯಂತಹ ಕೃತ್ಯ ನಡೆಸುತ್ತಿದ್ದರು. ಈ ಬಗೆಯ ತಂತ್ರಜ್ಞಾನದ ಫಲವಾಗಿ ಹೆಣ್ಣನ್ನು ಭ್ರೂಣವಾಗಿರುವಾಗಲೇ ನಾಶಗೊಳಿಸುವಂತಹ ಅಮಾನವೀಯ ಕೃತ್ಯಗಳು ಜರುಗುತ್ತಿವೆ. ಹೆಣ್ಣು ಭ್ರೂಣ ನಾಶದ ಜೊತೆಗೆ ಗರ್ಭಿಣಿಗೂ ಇದು ಬಹಳ ನೋವನ್ನುಂಟು ಮಾಡುವುದಾಗಿದೆ. ಸಹಜ ಹೆರಿಗೆಗಿಂತಲೂ ಗರ್ಭಪಾತ ಮಹಿಳೆಯರಿಗೆ ಹೆಚ್ಚು ನೋವನ್ನುಂಟು ಮಾಡುತ್ತದೆ. ಮಹಿಳೆಯರು ಸಾಮಾಜಿಕ, ಕೌಟುಂಬಿಕ

ಒತ್ತಡಗಳಿಗೆ ಮಣಿದು ಇಂತಹ ಕೃತ್ಯಕ್ಕೆ ಕೈ ಜೋಡಿಸಬೇಕಾಗಿದೆ. ಇದು ಮಹಿಳೆಯರ ಅಸಹಾಯಕತೆ ಎಷ್ಟೆಂಬುವುದನ್ನು ತೋರುತ್ತದೆ. ಹೆಣ್ಣು ಹೊರೆ ಎಂಬ ಭಾವನೆ ಹಾಗೂ ಕೆಲವೊಂದು ಸಾಂಪ್ರದಾಯಿಕ ಆಚರಣೆಗಳು ಹೆಣ್ಣು ಭ್ರೂಣ ಹತ್ಯೆಯಂತಹ ಹೇಯ ಕೃತ್ಯಕ್ಕಿಳಿಯಲು ಕಾರಣವಾಗಿದೆ. ಇದು ದೌರ್ಜನ್ಯದ ಅತಿರೇಕದ ಹಂತವೆಂದು ಹೇಳಬಹುದು.

ವೈದ್ಯರು ವೈಜ್ಞಾನಿಕವಾಗಿ ಗರ್ಭಪಾತ ಮಾಡುವುದಕ್ಕೆ ಮುಂದಾಗಿದ್ದರೆ, ಅದೆಷ್ಟೋ ನಾಟಿ ವೈದ್ಯರು ಮನೆಯಲ್ಲಿ ಗರ್ಭಪಾತ ಮಾಡಿಸುವುದು ಕಂಡುಬರುತ್ತದೆ. ಇದರಿಂದಾಗಿ ಗರ್ಭಿಣಿ ಮಹಿಳೆಯರ ದೇಹದ ಮೇಲೆ ಅನೇಕ ದುಷ್ಪರಿಣಾಮಗಳು ಉಂಟಾಗುತ್ತಿವೆ. ಹೊಟ್ಟೆನೋವು, ರಕ್ತಸ್ರಾವ, ಗುಪ್ತಾಂಗದ ಇನ್‌ಫೆಕ್ಷನ್‌ಗಳಿಂದ ತೊಳಲಾಡುವಂತಾಗುತ್ತದೆ. ಇಷ್ಟೇ ಏಕೆ ಎಷ್ಟೋ ಬಾರಿ ಗರ್ಭಿಣಿ ಮಹಿಳೆಯರ ಸಾವು ಕೂಡಾ ಸಂಭವಿಸುತ್ತದೆ. ಇಂತಹ ಕೃತ್ಯ ಕೇವಲ ಮಹಿಳೆಯರ ಮೇಲೆ ಮಾತ್ರವಲ್ಲದೇ ಇಡೀ ಮಾನವ ಜನಾಂಗದ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುತ್ತಿದೆ.

ಭಾರತದಲ್ಲಿ ೧೯೭೭ ಮತ್ತು ೧೯೮೫ರ ಅವಧಿಯೊಳಗೆ ೭೮೦೦೦ ಹೆಣ್ಣು ಭ್ರೂಣ ಹತ್ಯೆಗಳನ್ನು ಮಾಡಲಾಗಿದೆ. ಇದನ್ನು ಸಮರ್ಥಿಸುವವರು ಕೊಡುವ ಕಾರಣವೇನೆಂದರೆ ಕುಟುಂಬ ನಿಯಂತ್ರಣಕ್ಕೆ ಇದು ಪೂರಕವಾಗಿದ್ದು, ಜನಸಂಖ್ಯಾ ಸ್ಫೋಟವನ್ನು ತಡೆಗಟ್ಟಲು ಸಹಾಯಕವಾಗುತ್ತದೆ ಎಂದು. ಇಂತಹ ಹೇಳಿಕೆಯಿಂದ ನಿಜಕ್ಕೂ ಮಾನವ ಸಮಾಜ ನಾಚಿಕೆ ಪಟ್ಟುಕೊಳ್ಳುವಂತದ್ದಾಗಿದೆ. ಭ್ರೂಣಹತ್ಯೆಯೇ ಒಂದು ಅಪರಾಧ. ಅಂತದರಲ್ಲಿ ಅದನ್ನು ಈ ರೀತಿಯಲ್ಲಿ ಸಮರ್ಥಿಸಿಕೊಳ್ಳುವುದು ಮಹಾ ಅಪರಾಧವಾಗಿದೆ. ಈ ಮೇಲಿನ ಅಂಕಿ ಸಂಖ್ಯೆಯಂತೆ ಪ್ರಕರಣಗಳು ದೊರೆತಿವೆ ಎಂದಾಗ್ಯೂ ಸಹ ತಪ್ಪಿತಸ್ಥರಿಗೆ ಶಿಕ್ಷೆ ಆಗದಿರುವುದು ಮಹಿಳಾ ಬದುಕಿನ ದುರಂತ ಎಂದಷ್ಟೇ ಹೇಳಬಹುದು.

ಹೆಣ್ಣು ಶಿಶುಹತ್ಯೆ

ವಿಕೃತ ಸಮಾಜದ ಮತ್ತೊಂದು ದುಷ್ಟ ಕೆಲಸವೇನೆಂದರೆ ಹೆಣ್ಣು ಶಿಶು ಹತ್ಯೆ ನಡೆಸುವ ಕೃತ್ಯವಾಗಿದೆ. ಭ್ರೂಣ ಹತ್ಯೆಯ ಮುಂದುವರೆದ ಭಾಗ ಹೆಣ್ಣು ಶಿಶು ಹತ್ಯೆ ಎಂದು ಹೇಳಬಹುದಾಗಿದೆ. ಇದು ಶತ ಶತಮಾನಗಳಿಂದಲೂ ಜರುಗುತ್ತಿದ್ದು, ಸ್ತ್ರೀಯರ ಜನಸಂಖ್ಯೆ ಇಳಿಮುಖವಾಗಲು ಮುಖ್ಯ ಕಾರಣವಾಗಿದೆ. ಹೆಣ್ಣು ತಂದೆ-ತಾಯಿಗಳನ್ನು ಸಾಕಲಾರಳು, ದುಡಿದು ಕೊಡಲಾರಳು, ಆಕೆ ಗಂಡನ ಮನೆಯವರ ಸ್ವತ್ತು ಜೊತೆಗೆ ಆಕೆಯನ್ನು ಸಾಕುವುದು ಸುಮ್ಮನೆ ಖರ್ಚುದಾಯಕ ಹಾಗೂ ವರದಕ್ಷಿಣೆ ಪಿಡುಗಿಗೆ ಹೆಣ್ಣು ಕಾರಣವಾಗುತ್ತಾಳೆ ಎಂಬ ಅಂಶಗಳೇ ಹೆಣ್ಣು ಶಿಶುಹತ್ಯೆಗೆ ಕಾರಣಗಳಾಗಿವೆ. ಜೊತೆಗೆ ಹೆಣ್ಣಿಗೆ ನೀಡಿರುವ ಶೀಲದ ಕಲ್ಪನೆಯಿಂದ ಆಕೆಯನ್ನು ಯಾವಾಗಲೂ ಕಾಯಬೇಕಾದ ಸಂಗತಿಯು ಹೆಣ್ಣು ಮಗುವಿನ ನಕಾರಕ್ಕೆ ಕಾರಣವೆಂದು ಹೇಳುತ್ತಾರೆ. ಎಷ್ಟೋ ಬಾರಿ ಹೆತ್ತ ತಾಯಿ ಕೂಡಾ ತನ್ನ ಮಗುವಿನ ಮರಣಕ್ಕೆ ಮೂಕ ಸಾಕ್ಷಿಯಾಗಿರುತ್ತಾಳೆ. ಇವೆಲ್ಲವುಗಳು ಹೆಣ್ಣು ಮಗುವಿನ ಸಾಕುವಿಕೆಗೆ ಅಡೆತಡೆಯಾಗುತ್ತಿವೆ. ಈ ಅಡೆತಡೆಗೆ ಹೆಣ್ಣೇ ಕಾರಣವೆಂದು ದೂಷಿಸುವ ಸಮಾಜಕ್ಕೆ ಯಾರಿಂದ ಈ ಸಂದರ್ಭಗಳು ನಿರ್ಮಾಣಗೊಂಡಿವೆ ಎಂದುವಿಚಾರ ಮಾಡುವುದಿಲ್ಲ. ಹೆಣ್ಣು ಶಿಶುವನ್ನು ಕೊಲ್ಲುವುದೊಂದೇ ತಮ್ಮ ಸಮಸ್ಯೆಗೆ ಪರಿಹಾರ ಎಂದು ಅರಿತಿದ್ದಾರೆ. ಸಮಾಜವನ್ನು ಅರಿಯುವ ಮುಂಚೆಯೇ ಮಗುವೊಂದು ದುರ್‌ಮರಣ ಹೊಂದುವುದು ನಿಜಕ್ಕೂ ಬೇಸರದ ಸಂಗತಿಯಾಗಿದೆ.

ಮಗುವನ್ನು ಕತ್ತು ಹಿಸುಕುವ ಮೂಲಕ, ಹೊಡೆಯುವ ಮೂಲಕ, ಉಸಿರು ಗಟ್ಟಿಸುವ ಮೂಲಕ, ಅಷ್ಟೇ ಏಕೆ ಹೆತ್ತ ತಾಯಿಯೇ ಮಗುವಿಗೆ ಹಾಲು ಕುಡಿಸದೆ ಹಸುವಿನಿಂದ ಸಾಯಿಸುವ ಮೂಲಕ ಹೆಣ್ಣು ಶಿಶು ಹತ್ಯೆಗಳನ್ನು ಮಾಡಲಾಗುತ್ತಿದೆ. ಇದು ವ್ಯವಸ್ಥೆಯ ಕ್ರೌರ್ಯತೆಯನ್ನಲ್ಲದೇ ಮತ್ತೇನನ್ನೂ ತೋರಲಾರದು .

ಹೆಣ್ಣು ಮಗುವನ್ನು ಬೀದಿಗೆ ಎಸೆಯುವುದು

ಇದು ಹೆಣ್ಣು ಮಗುವನ್ನು ಭ್ರೂಣದಲ್ಲಿರುವಾಗ ಅಥವಾ ಶಿಶುವಾಗಿರುವಾಗ ಹತ್ಯೆ ಮಾಡಲು ಸಾಧ್ಯವಾಗದ ಪಕ್ಷದಲ್ಲಿ ಜರುಗುವ ಘಟನೆ ಎಂದು ಹೇಳಬಹುದು. ಬೀದಿಗೆ ಬಿದ್ದ ಮಗುವಿಗೆ ಜೀವದ ಮೇಲೆ ಸ್ವಲ್ಪ ಅಂತಃಕರಣ ತೋರಿದರೂ ನಂತರ ಜೀವನದ ಮೇಲೆ ಆಗುವ ಆಘಾತ ಅಪಾರ. ಹೆಣ್ಣು ಮಗು ಬೇಡವೆಂದು ನಿರ್ಧರಿಸಿದಾಗ ಬೀದಿಗೆ ತಂದು ಹಾಕಿಬಿಡುತ್ತಾರೆ ಅಥವಾ ಮಗುವನ್ನು ತೊರೆದು ಬಿಡುತ್ತಾರೆ. ಹೆತ್ತವರಿಂದ ದೊರೆಯಬೇಕಾದ ಯಾವೊಂದು ಹಕ್ಕುಗಳು ದೊರೆಯದೇ ಹೆಣ್ಣು ಮಕ್ಕಳು ಅನಾಥರಾಗಿಬಿಡುತ್ತಾರೆ. ಆದಾಗ್ಯೂ ಆ ಅನಾಥ ಮಕ್ಕಳು ದತ್ತು ಪಡೆದವರ ಪಾಲಾಗುತ್ತಾರೆ ಅಥವಾ ಸರ್ಕಾರ ನೇಮಿತ ಅನಾಥಾಲಯಗಳ ಪಾಲಾಗುತ್ತಾರೆ. ಹೆಣ್ಣಿನ ಬಗೆಗಿರುವ ಕೀಳು ಭಾವನೆಯೇ ಈ ಬಗೆಯ ಹೀನ ಕೃತ್ಯಕ್ಕೆ ಕಾರಣವೆಂದು ಹೇಳಬಹುದು.

ಹೆಣ್ಣು ಮಕ್ಕಳ ದುರ್ಬಳಕೆ

ಹೆಣ್ಣು ಮಕ್ಕಳ ದುರ್ಬಳಕೆ ಅನೇಕ ಬಗೆಗಳಲ್ಲಿ ಕಾಣಬರುತ್ತದೆ. ಹೆಣ್ಣು ಮಕ್ಕಳನ್ನು ಬಾಲ ಕಾರ್ಮಿಕರನ್ನಾಗಿಸುವುದು ಒಂದು ಬಗೆಯ ದುರ್‌ಬಳಕೆಯಾದರೆ, ಆಕೆಯ ಲೈಂಗಿಕತೆಯನ್ನು ಕೇಂದ್ರವಾಗಿಸಿ ದುರ್ಬಳಕೆಗೊಳಪಡಿಸುವ ಕೃತ್ಯ ಮತ್ತೊಂದಾಗಿದೆ. ತಂದೆ-ತಾಯಿಯಂದಿರು ತಮ್ಮ ಹಿತಾಸಕ್ತಿಗಾಗಿ ಹೆಣ್ಣು ಮಕ್ಕಳನ್ನು ಬಾಲ ಕಾರ್ಮಿಕರನ್ನಾಗಿಸುತ್ತಿದ್ದಾರೆ. ಮನೆ, ಹೋಟೆಲ್, ಕ್ಲಬ್, ಫ್ಯಾಕ್ಟರಿ ಮುಂತಾದ ಕಡೆಗಳಲ್ಲೆಲ್ಲಾ ಬಾಲ ಕಾರ್ಮಿಕರನ್ನು ಕಾಣಬಹುದಾಗಿದೆ. ಅವರ ದೇಹದ ಶಕ್ತಿ ಸಾಮರ್ಥ್ಯಕ್ಕೂ ಮೀರಿದ ಕೆಲಸ ಕಾರ್ಯಗಳನ್ನು ಬಾಲ ಕಾರ್ಮಿಕರು ಮಾಡಬೇಕಾಗುತ್ತದೆ. ಇದು ಅವರ ದೇಹ ಮತ್ತು ಮನಸ್ಸಿನ ಮೇಲೆ ನೇರವಾದ ಪರಿಣಾಮ ಬೀರಿ ದೌರ್ಜನ್ಯಕ್ಕೆ ಒಳಪಡಿಸಿ ದಂತಾಗುತ್ತದೆ. ಜೊತೆಗೆ ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿಸುತ್ತದೆ. ಈ ಬಗೆಯ ಹಿಂಸೆ ಮಕ್ಕಳ ಮೇಲೆ ಅನೇಕ ರೀತಿಯ ಪರಿಣಾಮಗಳನ್ನು ತಂದೊಡ್ಡಬಹುದಾಗಿದೆ. ಹೀಗೆ ಹೆಣ್ಣು ಮಕ್ಕಳನ್ನು ಬಾಲಕಾರ್ಮಿಕರನ್ನಾಗಿಸುವವರು ಕುಟುಂಬದ ಸದಸ್ಯರೇ ಆಗಿರುತ್ತಾರೆ.

ಹೆಣ್ಣು ಮಕ್ಕಳನ್ನು ಬಾಲಕಾರ್ಮಿಕರನ್ನಾಗಿಸುವುದು ಮಾತ್ರವಲ್ಲದೇ, ಅವರನ್ನು ಹಣಕ್ಕಾಗಿ ಮಾರಾಟ ಮಾಡುವುದೂ ಸಹ ಕಂಡುಬರುತ್ತದೆ. ಹೀಗೆ ಮಾರಾಟ ಮಾಡುವುದರ ಹಿಂದಿನ ಉದ್ದೇಶ ಹೆಣ್ಣಿನ ಲೈಂಗಿಕತೆಯನ್ನು ಆಧರಿಸಿದ್ದಾಗಿರುತ್ತದೆ. ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆ ಇರುವ ಪ್ರದೇಶಗಳಲ್ಲಿನ ಜನರು ಬೇರೆ ಕಡೆಯಿಂದ ಹೆಣ್ಣು ಮಕ್ಕಳನ್ನು ಕೊಂಡುಕೊಂಡು ತಮ್ಮ ಪ್ರದೇಶಕ್ಕೆ ಕರೆದೊಯ್ಯುವುದೂ ಸಹ ಕಂಡುಬರುತ್ತಿದೆ. ಈ ಪ್ರಕ್ರಿಯೆ ಹೆಣ್ಣನ್ನು ಮಾರಾಟದ ಸರಕಾಗಿಸಿ, ಆಕೆಯ ಮೇಲೆ ಆಕೆಗೆ ಯಾವುದೇ ತರಹದ ಹಕ್ಕಿಲ್ಲದಿರುವಂತೆ ಮಾಡಿರುವುದು ಸ್ಪಷ್ಟವಾಗುತ್ತದೆ.

ಲಿಂಗ ತಾರತಮ್ಯ ಮಾಡುವುದು

ಕುಟುಂಬದಲ್ಲಿ ಗಂಡು ಹೆಣ್ಣೆಂಬ ಕಾರಣಕ್ಕೆ ಅನೇಕ ಸಂಗತಿಗಳಲ್ಲಿ ಲಿಂಗ ತಾರತಮ್ಯ ಮಾಡುವುದು ಕಂಡುಬರುತ್ತದೆ. ಇಂತಹ ನಡಾವಳಿ ಮಾನವನ ಜೀವನದಲ್ಲಿ ದಿನನಿತ್ಯದ ಕಾರ್ಯವಾಗಿ ನಡೆದು ಹೋಗುವುದರಿಂದ ಅಲ್ಲಿನ ದೌರ್ಜನ್ಯ ಗೌಣವಾಗಿ ಹೋಗುತ್ತದೆ. ಹೆಣ್ಣು-ಗಂಡು ಹುಟ್ಟಿದ ಕ್ಷಣದಿಂದ ಭಿನ್ನ ನಡವಳಿಕೆಗಳನ್ನು, ಅವರ ಬಗ್ಗೆ ಹೊಂದಿದ ಭಿನ್ನ ಧೋರಣೆಗಳನ್ನು ಕಾಣಬಹುದಾಗಿದೆ. ಗಂಡು ಹುಟ್ಟಿದರೆ ತುಪ್ಪದ ದೀಪ ಹಚ್ಚುವುದು, ಸಿಹಿ ಹಂಚುವುದು ಮಾಡುತ್ತಾರೆ. ಹೆಣ್ಣು ಹುಟ್ಟಿದರೆ ಅಳುವುದು, ತಲೆಯ ಮೇಲೆ ಕೈ ಹೊತ್ತು ಕೂಡುವುದು ಕಂಡುಬರುತ್ತದೆ. ಹೀಗೆ ಗಂಡು ಹೆಣ್ಣುಗಳು ಜೀವನದುದ್ದಕ್ಕೂ ಲಿಂಗ ತಾರತಮ್ಯಕ್ಕೆ ಒಳಗಾಗುವುದು ಕಂಡುಬರುತ್ತದೆ. ಇದು ಹೆಚ್ಚು ಒಪ್ಪಿತವಾಗಿ ನಡೆದು ಬರುತ್ತಿರುವುದರಿಂದ ಮೌನವಾಗಿ ತನ್ನ ಕಾರ್ಯನಿರ್ವಹಿಸುವುದು ಕಂಡುಬರುತ್ತದೆ. ಲಿಂಗ ತಾರತಮ್ಯ ಪ್ರಕ್ರಿಯೆ ಕುಟುಂಬದೊಳಗಡೆ ಹೇಗೆ ಕ್ರಿಯಾಶೀಲವಾಗಿದೆ ಎಂಬುವುದನ್ನು ವಿಭಾಗಿಸಿಕೊಂಡು ನೋಡುವುದಾದರೆ,

ಆರೋಗ್ಯ : ಕುಟುಂಬದಲ್ಲಿ ಸಾಮಾನ್ಯವಾಗಿ ಆರೋಗ್ಯಕ್ಕೆ ಸಂಬಂಧಿಸಿದಂತೆ ಹೆಣ್ಣು ಮಕ್ಕಳಿಗಿಂತ ಗಂಡು ಮಕ್ಕಳಿಗೆ ಹೆಚ್ಚು ಆರೈಕೆ ಮಾಡುವುದು, ಸದಾ ಅವರ ಕಡೆಯೇ ಗಮನ ಹರಿಸುವುದು ಕಂಡುಬರುತ್ತದೆ. ಗಂಡು ಮಕ್ಕಳಿಗೆ ಒಳ್ಳೆಯ ಪೌಷ್ಠಿಕಾಂಶಗಳುಳ್ಳ ಆಹಾರ ನೀಡಿದರೆ, ಹೆಣ್ಣು ಮಕ್ಕಳಿಗೆ ಸಮರ್ಪಕವಾದ ಆಹಾರ ನೀಡುವುದಿಲ್ಲ. ಗಂಡು ಮಕ್ಕಳ ಆರೋಗ್ಯ, ಬೆಳವಣಿಗೆಗೆ ನೀಡಿದಷ್ಟು ಪ್ರಾಧಾನ್ಯತೆಯನ್ನು ಹೆಣ್ಣು ಮಕ್ಕಳಿಗೆ ನೀಡುವುದಿಲ್ಲ. ಹೀಗೆ ಮಾಡುವುದರಿಂದ ಹೆಣ್ಣು ಮಕ್ಕಳು ರಕ್ತಹೀನತೆಯಿಂದ ಬಳಲುವುದು, ಪ್ರಸವದ ಸಂದರ್ಭದಲ್ಲಿ ಸಾವನ್ನಪ್ಪುವುದು ಕಂಡುಬರುತ್ತದೆ. ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳ ಕೆಲಸದ ಹೊರೆ ಹೆಚ್ಚಾಗಿದ್ದು ಅವರಿಗೆ ಸರಿಯಾದ ಪೌಷ್ಠಿಕಾಂಶ ದೊರಕದೇ ಮಹಿಳೆಯರು ಪುರುಷರಿಗಿಂತ ಕಡಿಮೆ ಶಕ್ತಿ ಇರುವವರು ಎಂಬಂತಾಗಿದೆ.

ಇಷ್ಟಲ್ಲದೇ ಹೆಣ್ಣು ಮಕ್ಕಳು ಅನಾರೋಗ್ಯದಿಂದ ಬಳಲುತ್ತಿದ್ದರೆ ಮನೆ ಮದ್ದಿನ ಮೂಲಕ ಸರಿಪಡಿಸುವುದು, ಗಂಡು ಮಕ್ಕಳು ಅನಾರೋಗ್ಯದಿಂದ ಬಳಲಿದರೆ ಕೂಡಲೇ ಆಸ್ಪತ್ರೆಗಳಿಗೆ ಧಾವಿಸುವುದು ಕಂಡುಬರುತ್ತದೆ. ಇಷ್ಟಲ್ಲದೇ ಹೆಣ್ಣು ಮಕ್ಕಳಿಗೆ ಅತಿ ಚಿಕ್ಕ ವಯಸ್ಸಿನಲ್ಲೇ ದುಡಿಮೆಗೆ ಹಚ್ಚುತ್ತಾರೆ. ಇದರಿಂದಾಗಿ ಅವರ ಆರೋಗ್ಯ ಗಂಡು ಮಕ್ಕಳಷ್ಟು ಸದೃಢವಾಗದೆ ಹೋಗುತ್ತದೆ. ಹೀಗೆ ಇನ್ನೂ ಅನೇಕ ರೀತಿಯಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳ ಆರೋಗ್ಯಕ್ಕೆ ಸಂಬಂಧಿಸಿದಂತೆ ತಾರತಮ್ಯ ಮಾಡಲಾಗುತ್ತದೆ.

ಶಿಕ್ಷಣ : ಹೆಣ್ಣಾದವಳು ಕೊಟ್ಟ ಮನೆಗೆ ಹೋಗುತ್ತಾಳೆ. ಏನನ್ನು ದುಡಿದು ತಂದು ಕೊಡುವುದಿಲ್ಲ. ಆದ್ದರಿಂದ ಆಕೆಗೋಸ್ಕರ ಏಕೆ ಹಣ ಖರ್ಚು ಮಾಡಿ ಶಿಕ್ಷಣ ನೀಡಬೇಕು ಎಂಬ ಮನೋ ಧೋರಣೆಯನ್ನು ಹೊಂದಿರುವುದು ಕಂಡುಬರುತ್ತದೆ. ಹೆಣ್ಣು ಮಕ್ಕಳನ್ನು ಮನೆ ಕೆಲಸಕ್ಕೆ ಹೆಚ್ಚೆಚ್ಚು ಸೀಮಿತಗೊಳಿಸುವುದನ್ನು ಕಾಣಬಹುದಾಗಿದೆ. ಮನೆಯ ಹಿರಿಯ ಹೆಣ್ಣು ಮಕ್ಕಳು ಇತರೆ ಚಿಕ್ಕ ಮಕ್ಕಳನ್ನು ಪಾಲನೆ ಪೋಷಣೆ ಮಾಡುವ ಉದ್ದೇಶಕ್ಕಾಗಿ ಶಿಕ್ಷಣದಿಂದ ವಂಚಿತರಾಗುವುದು ಕಂಡುಬರುತ್ತದೆ. ಇತ್ತೀಚಿನ ದಶಕಗಳಲ್ಲಿ ಒಂದು ಹಂತದವರೆಗೆ ಹೆಣ್ಣು ಹಾಗೂ ಗಂಡು ಮಕ್ಕಳ ಶಿಕ್ಷಣ ಸ್ವಲ್ಪ ಮಟ್ಟಿಗೆ ಉತ್ತಮವಾಗಿದ್ದು, ಉನ್ನತ ಹಂತದ ಶಿಕ್ಷಣಕ್ಕೆ ಹೋದಂತೆಲ್ಲಾ ಗಂಡು ಮಕ್ಕಳ

ಸಂಖ್ಯೆ ಹೆಚ್ಚಾಗಿದ್ದು, ಹೆಣ್ಣು ಮಕ್ಕಳ ಕಲಿಕಾ ಪ್ರಮಾಣ ಕಡಿಮೆಯಾಗಿರುವುದು ಕಂಡುಬರುತ್ತದೆ. ಇದು ಹೆಣ್ಣು ಮಕ್ಕಳ ಶಿಕ್ಷಣದ ಬಗೆಗೆ ಜನರು ತಳೆದಿರುವ ಧೋರಣೆಯನ್ನು ತೋರ್ಪಡಿಸುತ್ತದೆ.

ಅಷ್ಟೇ ಅಲ್ಲದೇ ಹೆಣ್ಣು ಮಕ್ಕಳಿಗೆ ಹೆಚ್ಚು ಓದಿಸಿದರೆ ಅವರ ಓದಿಗೆ ತಕ್ಕ ಹಾಗೆ ಗಂಡು ಹುಡುಕುವುದು ಕಷ್ಟವಾಗುತ್ತದೆ. ಇದರ ಜೊತೆಗೆ ಓದಿದವರ ಎಂದರೆ ವರದಕ್ಷಿಣೆ ನಿರೀಕ್ಷೆ ಹೆಚ್ಚಾಗುತ್ತದೆ ಎಂದು ಹೆಣ್ಣು ಮಕ್ಕಳಿಗೆ ಕಡಿಮೆ ಶಿಕ್ಷಣವನ್ನು ಕೊಡಿಸುತ್ತಾರೆ. ಹೆಣ್ಣು ಮಕ್ಕಳಿಗೆ ಓದು ಬರಹ ಕಲಿಸುವಷ್ಟು ಜ್ಞಾನವಿದ್ದರೆ ಸಾಕು ಎಂದು ಆಕೆಗೆ ಅತಿ ಕಡಿಮೆ ಮಟ್ಟದ ಶಿಕ್ಷಣವನ್ನು ಹೆಣ್ಣೇ ನೀಡುವುದು ಕಂಡುಬರುತ್ತದೆ. ಇನ್ನು ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಅನೇಕ ತಾರತಮ್ಯಗಳಾಗುತ್ತಿದ್ದು, ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡದಿರುವಂತಹ ನಿರಾಕರಣೆಗಳು ಕುಟುಂಬಗಳಲ್ಲಿ ಕಾಣಬರುತ್ತವೆ.

ಆರ್ಥಿಕತೆ : ಮಹಿಳೆಯರ ಜೀವನ ವ್ಯವಸ್ಥೆಯನ್ನೇ ಬದಲಾಯಿಸಿರುವ ಅಂಶಗಳಲ್ಲಿ ಪ್ರಮುಖವಾದ ಒಂದು ಅಂಶವೆಂದರೆ ಅದು ಆರ್ಥಿಕತೆ ಎಂದು ಹೇಳಬಹುದು. ಹೆಣ್ಣು ಮಕ್ಕಳನ್ನು ಹೆಚ್ಚಾಗಿ ಆದಾಯಬಾರದ ದುಡಿಮೆಯಲ್ಲಿ ತೊಡಗಿಸಿ ಅವರ ದುಡಿಮೆಯನ್ನು ಗೌಣವಾಗಿಸಿರುವುದು ಕಂಡುಬರುತ್ತದೆ. ಆದರೆ ಗಂಡಿನ ದುಡಿಮೆ ಆರ್ಥಿಕಗಳಿಕೆ ತರುವಂತದ್ದಾಗಿದ್ದು, ಗಂಡಿಗೆ ಹೆಚ್ಚಿನ ಮಾನ್ಯತೆ ದೊರೆಯುವಂತಾಗಿದೆ. ಆಸ್ತಿಯ ವಿಲೇವಾರಿ ಕೂಡಾ ಗಂಡು ಸಂತಾನಕ್ಕೆ ಲಭ್ಯವಿದ್ದು ಹೆಣ್ಣು ಸಂಪೂರ್ಣವಾಗಿ ಆರ್ಥಿಕತೆಯಿಂದ ನಿರಾಕರಿಸಲ್ಪಟ್ಟ ವ್ಯಕ್ತಿಯಾಗಿದ್ದಾಳೆ. ಒಂದು ವೇಳೆ ಆಸ್ತಿ ಕೇಳಿದರೆ ಆಕೆಯನ್ನು ಭಾವನಾತ್ಮಕವಾದ ಹಿಂಸೆಗೆ ಗುರಿ ಮಾಡುತ್ತಾರೆ. ಇಷ್ಟಲ್ಲದೇ ಆಸ್ತಿಗೋಸ್ಕರ ದೈಹಿಕವಾಗಿ ದಂಡಿಸುವಂತಹ ಕೃತ್ಯಗಳು ಕಂಡುಬರುತ್ತಿವೆ. ಒಂದು ವೇಳೆ ಹೆಣ್ಣು ದುಡಿದರೂ ಅದನ್ನು ಆಕೆ ತನ್ನ ಇಚ್ಛೆಯಂತೆ ವ್ಯಯಿಸುವ ಹಾಗಿಲ್ಲ. ಏಕೆಂದರೆ ಮನೆಯ ಯಜಮಾನನ ಹಿಡಿತಕ್ಕೆ ಆಕೆಯ ಆದಾಯ ಸೇರಿದ್ದಾಗಿರುತ್ತದೆ. ಇದೆಲ್ಲವು ಮಹಿಳೆಯನ್ನು ಆರ್ಥಿಕತೆಯಿಂದ ಹೊರಗಿಟ್ಟಿರುವುದನ್ನು ಸ್ಪಷ್ಟಪಡಿಸುತ್ತದೆ. ಇದರಿಂದ ಮಹಿಳೆಯರು ವಿನಾಕಾರಣ ಆರ್ಥಿಕ ದೌರ್ಜನ್ಯಕ್ಕೆ ಒಳಗಾಗುವಂತಾಗಿದೆ.

೨.೬.೨. ಗಂಡನ ಮನೆಯಲ್ಲಿನ ಹಿಂಸೆಯ ಸ್ವರೂಪ :

ಭಾರತದಲ್ಲಿ ವಿವಾಹವೆಂಬ ಸಂಸ್ಥೆ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದುಕೊಂಡದ್ದಾಗಿದೆ, ಹಾಗೂ ಅತ್ಯಂತ ಪ್ರಾಚೀನ ಮತ್ತು ಬಲಿಷ್ಠ ಸಂಸ್ಥೆ ಕೂಡಾ ಆಗಿದೆ. ಲೈಂಗಿಕ ಬಯಕೆಗಳ ಈಡೇರಿಕೆ ಮತ್ತು ಸಂತಾನೋತ್ಪತ್ತಿಯನ್ನು ಮುಖ್ಯವಾಗಿರಿಸಿಕೊಂಡು ಇತರೆ ಕಾರಣಗಳ ಪೂರೈಕೆಗಾಗಿ ಗಂಡು-ಹೆಣ್ಣುಗಳ ಮಧ್ಯೆ ಸಾಮಾಜಿಕ ಒಪ್ಪಂದದ ಮೇಲೆ ಕಟ್ಟಿಕೊಂಡ ಸಂಬಂಧ ವಿವಾಹ ವ್ಯವಸ್ಥೆಯದ್ದಾಗಿದೆ. ಭಾರತದಂತಹ ಸಾಂಪ್ರದಾಯಿಕ ದೇಶದಲ್ಲಿ ವಿವಾಹಕ್ಕೆ ಪವಿತ್ರ ಸ್ಥಾನವಿದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಪುರುಷ ಕೇಂದ್ರಿತ ಕುಟುಂಬಗಳೇ ಅಧಿಕವಾಗಿದ್ದು, ವಿವಾಹದ ನಂತರ ಹೆಣ್ಣು ಗಂಡನ ಮನೆಗೆ ಹೋಗಿ ವಾಸಮಾಡಬೇಕಾಗುತ್ತದೆ. ಹೆಣ್ಣಾದವಳು ಮದುವೆಗೆ ಮುಂಚೆ ತಂದೆಯ ಮನೆಯಲ್ಲಿ, ಮದುವೆಯ ನಂತರ ಗಂಡನ ಮನೆಯಲ್ಲಿ ಹಾಗೂ ಮುಪ್ಪಾವಸ್ಥೆಯಲ್ಲಿ ಗಂಡು ಮಕ್ಕಳ ಅಂಕಿತದಲ್ಲಿ ಇರಬೇಕೆಂದು ಹೇಳುತ್ತದೆ. ಹಾಗೂ ಹೆಣ್ಣಿನ ಮೇಲಿನ ಅಧಿಕಾರ ತಂದೆ, ಗಂಡ ಮತ್ತು ಮಗನದ್ದಾಗಿರುತ್ತದೆಯೇ ವಿನಃ ಆಕೆಯ ಮೇಲೆ ಆಕೆಗೆ ಅಧಿಕಾರವಿರುವುದಿಲ್ಲ. ಆಕೆಯನ್ನು ಕೇವಲ

ಒಂದು ವಸ್ತುವಿನಂತೆ ಗುರುತಿಸಲಾಗುತ್ತಿದೆ. ಗೃಹಕೃತ್ಯ ಹಾಗೂ ಸಂತಾನೋತ್ಪತ್ತಿಯನ್ನು ಮಹಿಳೆಯ ಮುಖ್ಯ ಕಾರ್ಯವಾಗಿಸಿ ಆಕೆಯನ್ನು ಗೃಹ ಕೇಂದ್ರಿತವಾಗಿ ಕಾಣಲಿಚ್ಚಿಸುತ್ತದೆ. ವಿವಾಹದಂತಹ ವ್ಯವಸ್ಥೆಯಲ್ಲಿ ಮಹಿಳೆಯನ್ನು ಕೇವಲ ಭೋಗದ ವಸ್ತುವಿನಂತೆ, ಕೆಲಸ ಮಾಡುವ ಹಾಗೂ ಹೆರುವ ಯಂತ್ರದಂತೆ ಕಾಣಲಾಗುತ್ತಿದೆ. ಈ ರೀತಿಯಲ್ಲಿ ಹೆಣೆದುಕೊಂಡ ವ್ಯವಸ್ಥೆಯಲ್ಲಿ ಮಹಿಳೆ ಸಿಲುಕಿ ದಿನನಿತ್ಯ ನಲುಗಿಹೋಗುತ್ತಿದ್ದಾಳೆ.

ವಿವಾಹ ಸಂಸ್ಥೆಯನ್ನು ಸ್ಥಾಪಿಸುವ ಪ್ರಾರಂಭದಲ್ಲಿಯೇ ವರದಕ್ಷಿಣೆಯಂತಹ ಪೆಡಂಭೂತ ಮಹಿಳೆಯರಿಗೆ ಕಾಡತೊಡಗುತ್ತದೆ. ಇಲ್ಲಿಂದ ಆರಂಭಗೊಳ್ಳುವ ಗಂಡನ ಮನೆಯಲ್ಲಿನ ದೌರ್ಜನ್ಯ ಆಕೆ ಕೊನೆಯುಸಿರೆಳೆಯುವವರೆಗೂ ಒಂದಿಲ್ಲೊಂದು ರೀತಿಯಲ್ಲಿ ವ್ಯಾಪಿಸುತ್ತಾ ಹೋಗುತ್ತದೆ. ಮದುವೆಯ ನಂತರ ಗಂಡನ ಮನೆಯವರು ಆಕೆಯನ್ನು ತಮ್ಮ ಆಸ್ತಿ ಎಂದು ಹಿಂಸಿಸುವುದು, ತಮ್ಮ ಹಕ್ಕೆಂದು ಭಾವಿಸಿರುವುದು ಕಂಡುಬರುತ್ತದೆ. ಇಲ್ಲಿ ನಡೆಯುವ ಹಿಂಸೆಯ ತೀವ್ರತೆ ಮಹಿಳೆಯ ಸಾವಿನಲ್ಲಿ ಕೆಲವೊಮ್ಮೆ ಅಂತ್ಯಗೊಳ್ಳುತ್ತದೆ. ಹುಟ್ಟಿದ ಮನೆಯಲ್ಲಿ ಮಹಿಳೆಯರ ಸಾವಿನ ಪ್ರಕರಣಗಳಿಗಿಂತ ದ್ವಿಗುಣವಾಗಿ ಗಂಡನ ಮನೆಯಲ್ಲಿ ಮಹಿಳೆಯರು ಸಾಯುತ್ತಿರುವುದು ಕಂಡುಬರುತ್ತಿದೆ. ಸುಶಿಕ್ಷಿತ ಸಮಾಜ ಎಂದು ಕರೆಸಿಕೊಳ್ಳುತ್ತಿರುವ ಇಂದಿನ ವ್ಯವಸ್ಥೆಯಲ್ಲಿ ದಿನದಿಂದ ದಿನಕ್ಕೆ ಮಹಿಳೆಯರ ಮೇಲೆ ಕೌಟುಂಬಿಕ ದೌರ್ಜನ್ಯಗಳು ಹೆಚ್ಚುತ್ತಿವೆ. ಇದನ್ನು ಗಮನಿಸಿದಾಗ ಮನುಷ್ಯರು ನಾಗರಿಕತೆಯಿಂದ ಅನಾಗರಿಕತೆಯೆಡೆಗೆ ತೆರಳಿ ತಮ್ಮ ಅಂತ್ಯ ಕಂಡುಕೊಳ್ಳಲು ಮುಂದಾಗಿರುವುದು ಕಂಡುಬರುತ್ತದೆ.

ಮಹಿಳೆ ಹುಟ್ಟಿದ ಮನೆಯಲ್ಲಿ ಈ ಮೇಲ್ಕಂಡ ರೀತಿಯಲ್ಲಿ ಹಿಂಸೆಗೊಳಗಾದರೆ, ಗಂಡನ ಮನೆಯಲ್ಲಿ ಮತ್ತೊಂದು ಬಗೆಯ ಹಿಂಸೆಗೊಳಗಾಗುತ್ತಿದ್ದಾಳೆ. ಒಟ್ಟಾರೆ ಹೆಣ್ಣು ಹುಟ್ಟಿನಿಂದ ಸಾಯುವವರೆಗೂ ಪುರುಷ ಪ್ರಧಾನ ವ್ಯವಸ್ಥೆಯ ತಂತ್ರಗಳಿಗೆ ಬಲಿಯಾಗುತ್ತಲೇ ಇದ್ದಾಳೆ. ಗಂಡನ ಮನೆಯಲ್ಲಿ ಮಹಿಳೆಗೆ ವರದಕ್ಷಿಣೆಗಾಗಿ ನಡೆಯುವ ಕಿರುಕುಳ ಮುಂಚೂಣಿಗೆ ಬರುತ್ತದೆ. ಆದರೆ ವಿವಾಹದ ನಂತರ ಕೌಟುಂಬಿಕ ವ್ಯವಸ್ಥೆಯಲ್ಲಿ ಹೊರಗಿನಿಂದ ಏಕಾಂಗಿಯಾಗಿ ಬಂದ ಹೆಣ್ಣು ಏನೆಲ್ಲಾ ದೌರ್ಜನ್ಯಗಳಿಗೆ ಒಳಗಾಗುತ್ತಾಳೆ ಎಂಬುವುದನ್ನು ವ್ಯವಸ್ಥೆಯು ಹೆಚ್ಚು ಮುಂಚೂಣಿಗೆ ತರುವುದಿಲ್ಲ. ಕಾರಣ ಮಹಿಳೆಯ ಮೇಲಿನ ಬಹುತೇಕ ದೌರ್ಜನ್ಯಗಳು ಸಮಾಜ ಒಪ್ಪಿತವಾಗಿಯೇ ನಡೆಯುತ್ತಿರುವುದಾಗಿದೆ. ದೌರ್ಜನ್ಯ ಅನುಭವಿಸುವವರನ್ನೂ ಸಹ ವ್ಯವಸ್ಥೆ ಒಪ್ಪಿಸಿ ಹಿಂಸಿಸುತ್ತಿರುವುದು ಗಮನಾರ್ಹವಾಗಿದೆ. ಆದ್ದರಿಂದ ಮಹಿಳೆಯರ ಮೇಲಿನ ಎಷ್ಟೋ ಕೌಟುಂಬಿಕ ಹಿಂಸೆಗಳು ಎಲೆಮರೆಯ ಕಾಯಿಯಂತಾಗಿರುತ್ತವೆ.

ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳು ಹುಟ್ಟಿದ ಮನೆಯಲ್ಲಿ ಜರುಗುವಷ್ಟೇ ಭೀಕರತೆಯನ್ನು ಗಂಡನ ಮನೆಯಲ್ಲೂ ಪಡೆದುಕೊಂಡಿವೆ. ಅವುಗಳ ಸ್ವರೂಪವನ್ನು ದೈಹಿಕವಾಗಿ, ಭಾವನಾತ್ಮಕವಾಗಿ, ಶಾಬ್ದಿಕವಾಗಿ, ಆರ್ಥಿಕವಾಗಿ, ಲೈಂಗಿಕವಾಗಿ ಹಾಗೂ ಸಾಮಾಜಿಕವಾಗಿ ವಿಭಾಗಿಸಿ ಕೊಂಡು ಗಮನಿಸುವುದಾದರೆ,

ದೈಹಿಕ ಹಿಂಸೆ

ಮದುವೆ ಆಗಿ ಬಂದ ಹೆಣ್ಣಿಗೆ ಗಂಡ ಮತ್ತು ಆತನ ಮನೆಯವರು ಹೊಡೆಯುವುದು, ಕಚ್ಚುವುದು, ನೂಕುವುದು, ಒದೆಯುವುದು, ಮಾರಕಾಸ್ತ್ರಗಳಿಂದ ಗಾಸಿಗೊಳಿಸುವುದು, ಬೆಂಕಿಯಿಂದ

ಗಾಯಗಳನ್ನು ಉಂಟುಮಾಡುವುದು, ದೇಹವನ್ನು ದಂಡಿಸುವಂತಹ ಕೆಲಸ ಕಾರ್ಯಗಳನ್ನು ಮಾಡಿಸುವುದು, ಮಹಿಳೆಯರು ನಿಶಕ್ತರಾಗಿರುವಾಗ ಅಧಿಕವಾದ ದೈಹಿಕ ಶ್ರಮ ನೀಡಿ ಹಿಂಸಿಸುವುದು ಕಂಡುಬರುತ್ತದೆ. ಮನೆಯ ನಾಲ್ಕು ಗೋಡೆಗಳ ಮಧ್ಯೆ ಕೂಡಿ ಹಾಕಿ ದೈಹಿಕವಾಗಿ ದಂಡಿಸುತ್ತಾರೆ. ಇಷ್ಟೇ ಏಕೆ ಮಹಿಳೆ ನಿಶಕ್ತಳಾಗಿದ್ದರೂ ಆಕೆಯನ್ನು ಪುನಃ ಪುನಃ ಗರ್ಭಧರಿಸುವಂತೆ, ಮಗು ಹೆರುವಂತೆ ಒತ್ತಡ ತರುತ್ತಾರೆ. ಹಾಗೂ ಒತ್ತಾಯ ಪೂರಕ ಗರ್ಭಪಾತವು ಹೆಣ್ಣಿಗೆ ತನ್ನ ದೇಹದ ಮೇಲೆ ತನಗೆ ಹಕ್ಕಿಲ್ಲದಂತೆ ನಡೆಸಿಕೊಳ್ಳುವುದಕ್ಕೆ ಸಾಕ್ಷಿಯಾಗಿದೆ. ಹೆಣ್ಣೆಂದರೆ ದೇವತೆ ಎಂದು ಹೇಳಿ ಕೈ ಮುಗಿಯುವ ವ್ಯವಸ್ಥೆ ಆಕೆಯ ದೇಹ ಮತ್ತು ಮನಸ್ಸಿನ ಮೇಲೆ ಸಂಪೂರ್ಣ ಹಿಡಿತ ಸಾಧಿಸುವಲ್ಲಿ ಯಶಸ್ವಿಯಾಗಿದೆ. ಮನೆಯಲ್ಲಿ ಹೆಣ್ಣನ್ನು ದೈಹಿಕವಾಗಿ ದಂಡಿಸುತ್ತಿದ್ದು, ಆಕೆ ನಮ್ಮ ಮಗಳು, ನನ್ನ ಹೆಂಡತಿ, ಅದು ನಮ್ಮ ಖಾಸಗಿ ವಿಷಯ ಎಂದು ಹೇಳಿ ಆಕೆಯನ್ನು ಮತ್ತಷ್ಟು ದೈಹಿಕ ಹಿಂಸೆಗೊಳಪಡಿಸುವುದು ಕಂಡುಬರುತ್ತದೆ.

ಲೈಂಗಿಕ ಹಿಂಸೆ

ಕುಟುಂಬದೊಳಗೆ ನಡೆಯುವ ಮಹಿಳೆಯರ ಮೇಲಿನ ಲೈಂಗಿಕ ಹಿಂಸೆಗಳು ಬಹುತೇಕ ಗೌಪ್ಯವಾಗಿ ಉಳಿದು ಬಿಟ್ಟಿರುತ್ತವೆ. ನಮ್ಮ ಸಮಾಜ ಲೈಂಗಿಕತೆಗೆ ವಿಶೇಷ ಸ್ಥಾನಮಾನ ನೀಡಿದ್ದು, ಅಲ್ಲಿ ಜರುಗುವ ಹಿಂಸೆಗಳು ಚರ್ಚೆಗೆ ಬಾರದ ಸಂಗತಿಗಳಾಗಿವೆ. ವಿವಾಹದ ಚೌಕಟ್ಟಿನಲ್ಲಿ ಪತಿ-ಪತ್ನಿಯರ ಲೈಂಗಿಕ ಬಯಕೆಯ ಈಡೇರಿಕೆಯೂ ಒಂದು ಮುಖ್ಯ ಅಂಶವಾಗಿದ್ದು, ಅಲ್ಲಿ ಅತ್ಯಂತ ಗೌರವಾನ್ವಿತ ನಡುವಳಿಕೆ ಅಗತ್ಯವಾಗಿರುತ್ತದೆ. ಆದರೆ ಕೆಲ ಪುರುಷರು ಹೆಂಡತಿಯರ ಮೇಲೆ ಮೃಗಗಳಂತೆ ವರ್ತಿಸುವುದು ಕಂಡುಬರುತ್ತದೆ. ಹೆಂಡತಿಯ ಜೊತೆ ಬಲವಂತವಾಗಿ ಸಂಭೋಗ ಮಾಡುವುದು, ಅಶ್ಲೀಲ ಚಿತ್ರಗಳನ್ನು ಅಥವಾ ಇನ್ನಿತರ ಅಸಯ್ಯಕರವಾದ ದೃಶ್ಯಗಳನ್ನು ನೋಡುವಂತೆ ಒತ್ತಾಯಿಸುವುದು ಕಂಡುಬರುತ್ತದೆ. ಇದು ಹೆಣ್ಣಿಗೆ ಹಿಂಸೆಯಾಗಿ ಪರಿಣಮಿಸುತ್ತದೆ. ಇದಷ್ಟೇ ಅಲ್ಲದೇ ಹೆಂಡತಿಯ ಲೈಂಗಿಕ ಬಯಕೆಗೆ ಸ್ಪಂದಿಸದೇ ಇರುವುದೂ ಸಹ ಹೆಣ್ಣಿಗೆ ನೀಡುವ ಲೈಂಗಿಕ ಹಿಂಸೆಯಾಗಿರುತ್ತದೆ.

ಇನ್ನು ಕೆಲವೊಂದು ಗಂಡಸರು ಹೆಂಡತಿಯ ಲೈಂಗಿಕತೆಯನ್ನು ವ್ಯಾಪಾರದ ದೃಷ್ಟಿಯಿಂದ ಕಾಣುತ್ತಾರೆ. ಹೆಂಡತಿಯನ್ನು ತಮ್ಮ ಒಳಿತಿಗಾಗಿ ವಿವಾಹ ಬಾಹಿರ ಸಂಬಂಧಗಳಲ್ಲಿ ತೊಡಗಿಸುತ್ತಾರೆ. ಜೊತೆಗೆ ತೊಡಗಿಕೊಳ್ಳುವಂತೆ ಒತ್ತಾಯಿಸುತ್ತಾರೆ. ಈ ಬಗೆಯ ಹಿಂಸೆ ಅತ್ಯಂತ ಗೌಪ್ಯವಾಗಿ ಉಳಿದುಬಿಡುತ್ತದೆ. ಹೆಣ್ಣಿಗೆ ನೀಡಿರುವ ಮಡಿವಂತಿಕೆ ಕಲ್ಪನೆ ಈ ತರಹದ ಹಿಂಸೆಯನ್ನು ಮುಚ್ಚಿಹಾಕಿ ಬಿಡುತ್ತದೆ. ಒಂದು ವೇಳೆ ಮಹಿಳೆಯರು ಲೈಂಗಿಕತೆ ಬಗ್ಗೆ ಮಾತನಾಡಿದ್ದಾದರೆ ಅಂತವರನ್ನು ಲಜ್ಜೆಗೆಟ್ಟವರು, ಮಾನಗೆಟ್ಟವರು ಎಂದು ದೂಷಿಸಲಾಗುತ್ತದೆ. ಅಷ್ಟೇ ಏಕೆ ಗಂಡನನ್ನು ಹೊರತುಪಡಿಸಿ ಗಂಡನ ಮನೆಯ ಇತರೆ ಪುರುಷ ಸದಸ್ಯರೂ ಸಹ ಸೊಸೆಯಾಗಿ ಬಂದ ಹೆಣ್ಣಿಗೆ ಲೈಂಗಿಕ ಕಿರುಕುಳ ನೀಡುತ್ತಿರುವ ಪ್ರಕರಣಗಳು ಕಂಡುಬರುತ್ತವೆ. ಇಂತಹ ಅದೆಷ್ಟೋ ಪ್ರಕರಣಗಳು ಮನೆಯ ಮರ್ಯಾದೆ ಎಂಬ ಹೆಸರಿನಲ್ಲಿ ಮುಚ್ಚಿ ಹೋಗುತ್ತಿವೆ. ಇದರಿಂದ ಮಹಿಳೆಯರು ನೆಮ್ಮದಿಯಿಂದ ಮನೆಯಲ್ಲಿ ವಾಸಿಸುವ ವಾತಾವರಣ ಹಾಳಾಗುತ್ತಿದೆ. ಆದ್ದರಿಂದ ಮಹಿಳೆಯರ ದೇಹ ಹಾಗೂ ಮನಸ್ಸಿನ ಮೇಲೆ ದೀರ್ಘ ಸ್ವರೂಪದ ದುಷ್ಪರಿಣಾಮಗಳಾಗುತ್ತಿವೆ.

ಶಾಬ್ಧಿಕ ಹಿಂಸೆ

ದಿನನಿತ್ಯ ಬಹುತೇಕ ಮಹಿಳೆಯರ ಮೇಲೆ ಶಾಬ್ಧಿಕ ಹಿಂಸೆ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಲಿವೆ. ಶಾಬ್ಧಿಕ ಹಿಂಸೆ ಎಂದರೆ, ಕೆಟ್ಟ ಪದಗಳಿಂದ ಮಹಿಳೆಯರನ್ನು ಅಪಮಾನಗೊಳಿಸುವುದಾಗಿದೆ. ಹಾಗೂ ಅವರ ಭಾವನೆಗಳನ್ನು ಕೆಣಕುವಂತೆ ಅವರಿಗೆ ಮಾತನಾಡುವುದಾಗಿದೆ. ಸಾಮಾನ್ಯವಾಗಿ ಬೈಯ್ಯಲು ಬಳಸುವ ಎಷ್ಟೋ ಕೆಟ್ಟ ಶಬ್ಧಗಳು ಹೆಣ್ಣಿನ ಚಾರಿತ್ರ್ಯವನ್ನು ವಧೆಗೊಳಿಸುವವುಗಳಾಗಿವೆ. ಉದಾಹರಣೆಗೆ ಬೊಸುಡಿ, ಹಾದರಗಿತ್ತಿ, ಮಿಂಡ್ರಿ ಮುಂತಾದವುಗಳು. ಈ ಬಗೆಯ ಪದಗಳ ಬಳಕೆ ಪುರುಷ ಪ್ರಧಾನ ವ್ಯವಸ್ಥೆ ರೂಪಿತ ಮತ್ತು ಆರೋಪಿತ ಪದಗಳಾಗಿವೆ. ಈ ಬಗೆಯ ಪದಗಳು ಹೆಚ್ಚಾಗಿ ಪುರುಷರ ಬಗ್ಗೆ ರೂಪಿತಗೊಂಡಿಲ್ಲ, ರೂಪಿತಗೊಂಡಿದ್ದರೂ ಸಹ ಅವು ಕೇವಲ ವ್ಯಾಕರಣದ ಭಾಗವಾಗಿ ನಿಘಂಟುಗಳಲ್ಲಿ ಉಳಿದುಕೊಂಡಿವೆ.

ಸಾಮಾನ್ಯವಾಗಿ ಕುಟುಂಬಗಳಲ್ಲಿ ಹೆಣ್ಣಿಗೆ ಅನರ್ಥ ಬರುವ ಹೆಸರುಗಳಿಂದ ಕರೆಯುವುದು, ಚಾರಿತ್ರ್ಯ ಹಾಗೂ ನಡತೆಯ ಬಗ್ಗೆ ಆರೋಪ ಮಾಡುವುದು, 'ಗಂಡು ಮಗು ಹೆರಲಿಲ್ಲ, ವರದಕ್ಷಿಣೆ ಹೆಚ್ಚು ತರಲಿಲ್ಲ' ಎಂದು ಹೀಯಾಳಿಸಿ ಮಾತನಾಡುವುದು ಹೀಗೆ ಹೆಣ್ಣನ್ನು ಅವಮಾನಗೊಳಿಸಲು ಯಾವುದಾದರೂ ಕ್ಷುಲ್ಲಕ ಸಂಗತಿಗಳನ್ನು ಎಳೆದುಕೊಂಡು ಶಾಬ್ಧಿಕವಾಗಿ ಘಾಸಿಗೊಳಿಸುವ ಕೃತ್ಯ ಕಂಡುಬರುತ್ತದೆ. ಇದರಿಂದ ಹೆಣ್ಣು ಮೂದಲಿಸುವವರ ಇಚ್ಛೆಯಂತೆ ನಡೆದುಕೊಳ್ಳಬೇಕಾಗುತ್ತದೆ. ವ್ಯವಸ್ಥೆ ತನ್ನ ಹಿಡಿತಕ್ಕೆ ಮಹಿಳೆಯರನ್ನು ತಂದುಕೊಳ್ಳಲು ಬಳಸುವ ತಂತ್ರವಾಗಿ ಶಾಬ್ಧಿಕ ಹಿಂಸೆ ರೂಪುಗೊಂಡು ದಿನನಿತ್ಯ ಮಹಿಳೆಯರನ್ನು ಹಿಂಸಿಸುತ್ತಿದೆ.

ಭಾವನಾತ್ಮಕ ಹಿಂಸೆ

ಭಾವನಾತ್ಮಕ ಹಿಂಸೆಯಂತೂ ಮಹಿಳೆಯರ ಮೇಲೆ ಪ್ರತಿ ದಿನ, ಪ್ರತಿ ಕ್ಷಣ ಕುಟುಂಬಗಳಲ್ಲಿ ತಪ್ಪಲ್ಲವೇನೋ ಎಂಬ ನಂಬಿಕೆಯಲ್ಲಿ ನಡೆಯುತ್ತಲಿದೆ. ಇದು ಪುರುಷ ಪ್ರಧಾನ ಸಮಾಜವಾದ್ದರಿಂದ ಇಲ್ಲಿ ಕೇವಲ ಗಂಡಿನ ಭಾವನೆಗಳಿಗೆ ಮಾತ್ರ ಬೆಲೆ ಇದೆ. ಹೆಣ್ಣು ಉಡುವ-ತೊಡುವ ಬಟ್ಟೆ, ಆಭರಣಗಳಿಂದ ಹಿಡಿದ್ರು ಶಿಕ್ಷಣ ಪಡೆಯುವ, ಇಚ್ಛೆಗನುಸಾರವಾಗಿ ಮದುವೆಯಾಗುವ, ಇಚ್ಛೆಗನುಸಾರವಾಗಿ ಹೆರುವ, ಸ್ವತಂತ್ರವಾಗಿ ಹೊರಗೆ ತಿರುಗಾಡುವ ಹೀಗೆ ಎಲ್ಲಾ ಬಗೆಯ ಭಾವನೆಗಳಿಗೂ ಕಡಿವಾಣ ಹಾಕಲಾಗಿದೆ. ಹೆಣ್ಣು ಬಯಸುವ ಪ್ರತಿಯೊಂದು ಕೆಲಸಕ್ಕೂ ಧಕ್ಕೆಯನ್ನುಂಟು ಮಾಡುವ ಕ್ರಿಯೆ ಭಾವನಾತ್ಮಕ ಹಿಂಸೆಯನ್ನು ತಂದೊಡ್ಡುತ್ತದೆ.

ಹೆಣ್ಣು ಮದುವೆಯಾದ ನಂತರ ಉದ್ಯೋಗ ಮಾಡಲಿಚ್ಛಿಸಿದಲ್ಲಿ ಅದಕ್ಕೆ ಮನೆಯವರು 'ಹೋ... ದುಡುದು ಅರಮನಿ ಕಟಸ್ತಾಳಂತ' ಎಂದು ಮೂದಲಿಸುವ ಬಗೆಯೂ ಕೂಡಾ ಹೆಣ್ಣಿನ ಭಾವನೆಗೆ ಧಕ್ಕೆಯನ್ನುಂಟು ಮಾಡುತ್ತದೆ. ಹೆಣ್ಣಿನ ಇಚ್ಛೆಗೆ ವಿರುದ್ಧವಾಗಿ ಆಕೆಯನ್ನು ಗಂಡ ಸತ್ತ ನಂತರ ವೈದವ್ಯ ಪರಿಪಾಲಿಸುವಂತೆ ಹೇಳುವುದು ಕೂಡ ಭಾವನಾತ್ಮಕ ಹಿಂಸೆಯಾಗಿರುತ್ತದೆ. ಹೆಣ್ಣಿನ ಆಚರಣೆಗಳು ಈ ಸಾಮಾಜಿಕ ವ್ಯವಸ್ಥೆಯ ಉಳಿಯುವಿಕೆಗಾಗಿ ಹೋರಾಡುವಂತಿರಬೇಕು. ಅಂದಾಗ ಮಾತ್ರ ಹಿಂಸೆ ಇಂದ ಮುಕ್ತಿ ಹೊಂದಲು ಸಾಧ್ಯವಾಗುತ್ತದೆ. ಹೆಣ್ಣಿನ ಭಾವನೆಗಳು ರೂಪಿತ ಗೊಂಡಿರುವುದಿಲ್ಲ, ಬದಲಾಗಿ ರೂಪಿಸಲ್ಪಟ್ಟವುಗಳಾಗಿರುತ್ತವೆ. ಭಾವನಾತ್ಮಕ ಹಿಂಸೆಯೂ ಅತಿರೇಖಕ್ಕೆ ಹೋದಾಗ ಮಹಿಳೆಯರಲ್ಲಿ ಮಾನಸಿಕ ಕಾಯಿಲೆಗಳು ಉಂಟಾಗಲು ಕಾರಣವಾಗುತ್ತವೆ.

ಆರ್ಥಿಕ ಹಿಂಸೆ

ಜೀವನ ನಿರ್ವಹಣೆಗೆ ಹಣ ತುಂಬಾ ಅಗತ್ಯ. ಅಂತಹ ಆರ್ಥಿಕತೆಯನ್ನು ಕುಟುಂಬದಲ್ಲಿ ಪುರುಷರೇ ಸಂಪೂರ್ಣವಾಗಿ ನಿಭಾಯಿಸುತ್ತಾರೆ. ಅದು ಸ್ತ್ರೀ ಅಥವಾ ಪುರುಷ ಯಾರ ದುಡಿಮೆಯಾದರೂ ಆಗಿರಬಹುದು. ಕುಟುಂಬದಲ್ಲಿ ಗಂಡಿನ ಕೈಗೆ ಆರ್ಥಿಕ ಜವಾಬ್ದಾರಿ ನೀಡುವ ಮೂಲಕ ಮಹಿಳೆಯರ ಎಲ್ಲಾ ಚಟುವಟಿಕೆಗಳ ಮೇಲೆ ನೇರವಾಗಿ ನಿಯಂತ್ರಣ ಹೇರಲಾಗುತ್ತದೆ. ವಿವಾಹವಾಗಿ ಬಂದ ಮಹಿಳೆಗೆ ಯಾವುದೇ ಆರ್ಥಿಕ ಬೆಂಬಲವೂ ಇರುವುದಿಲ್ಲ. ಆಕೆಯ ಜೀವನ ನಿರ್ವಹಣೆಗೆ ಸರಿಯಾಗಿ ಹಣ ಕೊಡದೇ ಇರುವುದು ಆರ್ಥಿಕ ಹಿಂಸೆಯಾಗುತ್ತದೆ. ಹೆಂಡತಿ ಹಾಗೂ ಮಕ್ಕಳಿಗೆ ಗಂಡ ಅಥವಾ ಕುಟುಂಬದ ಇತರೆ ಸದಸ್ಯರು ಅವರ ಜೀವನ ನಿರ್ವಹಣೆಗೆ ಸರಿಯಾದ ಆಹಾರ, ಔಷಧೋಪಚಾರ, ವಸ್ತ್ರ ನೀಡದೇ ಇರುವುದು ಅಥವಾ ಇರಲು ವ್ಯವಸ್ಥಿತ ಸೂರು ಇಲ್ಲದಂತೆ ಮಾಡುವುದು ಆರ್ಥಿಕ ಹಿಂಸೆಯಾಗಿರುತ್ತದೆ.

ಒಂದು ವೇಳೆ ಮಹಿಳೆ ಕೆಲಸಕ್ಕೆ ಹೋಗುತ್ತಿದ್ದರೆ ಅದಕ್ಕೆ ತೊಂದರೆಯನ್ನುಂಟು ಮಾಡುವುದು ಅಥವಾ ಸಂಬಳವನ್ನು ಸಂಪೂರ್ಣವಾಗಿ ತಾವೇ ತೆಗೆದುಕೊಳ್ಳುವುದು, ಜೊತೆಗೆ ದುಡಿದವರಿಗೆ ಅದರ ಮೇಲೆ ಹಕ್ಕಿಲ್ಲದಂತೆ ಮಾಡುವುದು ಕೂಡ ಮಹಿಳೆಯರನ್ನು ಜರ್ಝರಿತರನ್ನಾಗಿಸುತ್ತದೆ. ಹೆಣ್ಣು ದುಡಿದುತರುವ, ತಂದಿದ್ದನ್ನು ವ್ಯಯ ಮಾಡುವ ಹಾಗೂ ಸಂಗ್ರಹಿಸಿಕೊಳ್ಳುವ ಅವಕಾಶ ನೀಡದಿರುವುದು ಕೂಡಾ ಮಹಿಳೆಯರ ಮೇಲಿನ ಆರ್ಥಿಕ ದೌರ್ಜನ್ಯವಾಗಿರುತ್ತದೆ. ಹೆಣ್ಣಿಗೆ ಆರ್ಥಿಕ ಸ್ವಾತಂತ್ರ್ಯ ಸಿಕ್ಕರೆ ತನ್ನ ಹಿಡಿತದಿಂದ ತಪ್ಪಿಸಿಕೊಳ್ಳುತ್ತಾಳೆ ಎಂಬ ಭಯದಿಂದ ಪುರುಷ ಪ್ರಧಾನ ವ್ಯವಸ್ಥೆ ಆರ್ಥಿಕತೆಯನ್ನು ತನ್ನದಾಗಿಸಿಕೊಂಡು ಆ ಮೂಲಕ ಮಹಿಳೆಯರನ್ನು ಹಿಂಸಿಸುತ್ತದೆ. ಗಂಡಿನ ಈ ಅಧಿಕಾರ ಚಲಾವಣೆ ಆರ್ಥಿಕತೆಯನ್ನು ತನ್ನ ಮುಷ್ಟಿಯಲ್ಲಿಟ್ಟ ಕೊಳ್ಳುವುದು ಮತ್ತಷ್ಟು ಬಲಾಢ್ಯತೆಯನ್ನು ತಂದುಕೊಡುತ್ತದೆ. ಮಹಿಳೆಯರನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಆರ್ಥಿಕ ಹಿಂಸೆಯಂತಹ ಮತ್ತೊಂದು ಅಸ್ತ್ರವನ್ನು ವ್ಯವಸ್ಥೆ ಇಲ್ಲಿ ಬಳಸುತ್ತಿದೆ.

ಆರ್ಥಿಕ ಹಿಂಸೆಯಲ್ಲಿ ಗುರುತಿಸಲ್ಪಡುವ ಪ್ರಮುಖ ಕೃತ್ಯ ಎಂದರೆ ವರದಕ್ಷಿಣೆ ಪೀಡನೆಯಾಗಿದೆ. ಅಲ್ಲದೇ ಹೆಣ್ಣಿಗೆ ಮನಸಿಲ್ಲದಿದ್ದರೂ ದುಡಿಯುವಂತೆ ಒತ್ತಡ ತರುವುದು ಇನ್ನೊಂದು ಬಗೆಯ ಆರ್ಥಿಕ ಹಿಂಸೆಯಾಗಿದೆ.

ಸಾಮಾಜಿಕ ಹಿಂಸೆ

ಸಾಮಾಜಿಕ ಹಿಂಸೆಯಲ್ಲಿ ಮುಖ್ಯವಾಗಿ ಕುಟುಂಬದಲ್ಲಿ ಮಹಿಳೆಯರಿಗೆ ವೈದವ್ಯ ಪರಿಪಾಲನೆಯನ್ನು ಹೇರುವುದಾಗಿದೆ. ವಿಧವೆಯರಿಗೆ ಅವರದ್ದೇ ಆದ ನೀತಿ ನಿಯಮಗಳನ್ನು ರೂಪಿಸಿ ಅದನ್ನು ಪಾಲಿಸುವಂತೆ ಸೂಚಿಸಲಾಗಿದೆ. ವೈದವ್ಯ ಪರಿಪಾಲನೆ ಮುಖ್ಯವಾಗಿ ಆಕೆಯ ಸಹಜ ಕ್ರಿಯೆಯಾದ ಲೈಂಗಿಕತೆಯ ಮೇಲೆ ಸಂಪೂರ್ಣ ನಿಯಂತ್ರಣ ಹೇರುತ್ತದೆ. ಇದರಿಂದ ಯೌವ್ವನದಲ್ಲಿ ಗಂಡನನ್ನು ಕಳೆದುಕೊಂಡ ಮಹಿಳೆಯರನ್ನು ಮಾನಸಿಕವಾಗಿ ಮತ್ತು ಲೈಂಗಿಕವಾಗಿ ಬಹಳಷ್ಟು ಹಿಂಸೆಗೊಳಗಾಗುವಂತೆ ಮಾಡಿದೆ. ಗಂಡ ತೀರಿಕೊಂಡ ನಂತರ ತಮ್ಮ ದೈಹಿಕ, ಮಾನಸಿಕ ಭಾವನೆಗಳನ್ನು ಕೆರಳದಿರುವಂತೆ ವಿಧವೆಯರಿಗೆ ನಿರ್ದೇಶಿಸಲಾಗಿರುತ್ತದೆ. ಕುಟುಂಬದಲ್ಲಿ ಜರುಗುವ ಎಲ್ಲಾ ಸಮಾರಂಭಗಳಿಂದಲೂ

ವಿಧವೆಯರನ್ನು ದೂರವಿರುವಂತೆ ಸೂಚಿಸಿ, ಮೈಲಿಗೆ ಎಂಬಂತೆ ಗುರುತಿಸುತ್ತಿದ್ದಾರೆ. ಇದರಿಂದ ಮಹಿಳೆಯರ ಮೇಲೆ ಕೆಟ್ಟ ಪರಿಣಾಮ ಬೀರಿ ಅವರು ಸಾಕಷ್ಟು ಹಿಂಸೆ ಅನುಭವಿಸುತ್ತಿರುವುದು ಕಂಡುಬರುತ್ತದೆ.

ಪುರುಷ ಪ್ರಧಾನ ವ್ಯವಸ್ಥೆಯು ಗಂಡ ಸತ್ತ ನಂತರ ಮಹಿಳೆಯರಿಗೆ ತಮ್ಮ ಲೈಂಗಿಕ ಹಿತಾಸಕ್ತಿಗಳನ್ನ ಕೊನೆಗೊಳಿಸಿಕೊಳ್ಳಬೇಕೆಂದು ನಿರ್ದೇಶಿಸುತ್ತದೆ. ಅಲ್ಲದೇ ಮದುವೆಗೂ ಮುಂಚೆ ಕುಟುಂಬದೊಳಗಡೆ ಹೆಣ್ಣಿಗೆ ಹೇಗೆ ಕನ್ಯತ್ವದ ಪರಿಪಾಲನೆ ಇರುತ್ತದೆಯೋ ಹಾಗೆ ವಿಧವೆಯರಿಗೆ ಶೀಲವನ್ನು ಉಳಿಸಿಕೊಳ್ಳುವಂತೆ ಸೂಚಿಸುತ್ತದೆ. ಇಷ್ಟಲ್ಲದೇ ಮಹಿಳೆಯರಿಗೆ ಸಾಮಾಜಿಕವಾಗಿ ಹಲವಾರು ನಿಯಮಗಳನ್ನು ಹೇರಿ ಅದನ್ನು ಮನಸ್ಸಿಲ್ಲದಿದ್ದರೂ ಚಾಚೂ ತಪ್ಪದೇ ಪಾಲಿಸುವಂತೆ ನಿರ್ದೇಶಿಸುತ್ತದೆ.

ಈ ರೀತಿಯಾಗಿ ಮಹಿಳೆ ಗಂಡನ ಮನೆಯಲ್ಲಿ ದೌರ್ಜನ್ಯಕ್ಕೊಳಗಾಗುತ್ತಿದ್ದು, ಅದು ವಿಕೋಪಕ್ಕೆ ಹೋದಾಗ ಸಾವು ಕೂಡಾ ಸಂಭವಿಸುವುದು ಕಂಡುಬರುತ್ತದೆ. ಹೆಣ್ಣಿನ ಮೇಲೆ ಹುಟ್ಟಿದ ಮನೆಯಲ್ಲಿ ಒಂದು ಬಗೆಯ ದೌರ್ಜನ್ಯಗಳಾದರೆ, ಗಂಡನ ಮನೆಯಲ್ಲಿ ಮತ್ತೊಂದು ಬಗೆಯ ದೌರ್ಜನ್ಯ ಗಳಾಗುತ್ತಿರುವುದನ್ನ ಈ ರೀತಿಯಾಗಿ ಕಾಣಬಹುದಾಗಿದೆ.

೨.೬.೩. ಸಹಚರ ಜೀವನ ಸಂಗಾತಿಗಳಲ್ಲಿನ ಹಿಂಸೆಯ ಸ್ವರೂಪ

ಸಹಚರ ಜೀವನ ಸಂಗಾತಿಗಳಲ್ಲಿ ಹೆಣ್ಣು ತನ್ನ ಇಚ್ಛೆಗೆ ಅನುಗುಣವಾಗಿ ಸಂಗಾತಿಯನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಅದನ್ನು ಹೊರತುಪಡಿಸಿದರೆ, ಅಲ್ಲಿಯೂ ಸಹ ಪುರುಷ ಪ್ರಧಾನತೆಯ ಚಹರೆಯುಗಳೇ ಕಾರ್ಯ ನಿರ್ವಹಿಸುವುದು ಕಾಣಬರುತ್ತದೆ. ಈಗಾಗಲೇ ಈ ಮೇಲೆ ತಿಳಿಸಿದ ಗಂಡನ ಮನೆಯಲ್ಲಿನ ದೌರ್ಜನ್ಯದ ಸ್ವರೂಪದಂತೆ ಈ ಬಗೆಯ ವ್ಯವಸ್ಥೆಯಲ್ಲೂ ಮಹಿಳೆಯರ ಮೇಲೆ ದೌರ್ಜನ್ಯಗಳಾಗುತ್ತಿವೆ. ಆರ್ಥಿಕ, ದೈಹಿಕ, ಶಾಬ್ಧಿಕ, ಭಾವನಾತ್ಮಕ, ಲೈಂಗಿಕ ಹಿಂಸೆಗಳಾಗುತ್ತಿರುವುದು ಕಂಡುಬರುತ್ತಿವೆ.

ಈ ಬಗೆಯ ಅನೇಕ ಕುಟುಂಬಗಳು ಸಮಾಜದಲ್ಲಿ ಚಾಲ್ತಿಯಲ್ಲಿದ್ದು, ಅವು ಸರಿಯಾಗಿ ಅಂದರೆ ಸಹಚರ ಜೀವನ ಸಾಂಗತ್ಯ ಎಂದು ಹೆಸರಿಸಿಕೊಳ್ಳಲಾರದೇ ಸ್ಥಾಪಿತಗೊಂಡಿರುವುದನ್ನು ಕಾಣಬಹುದಾಗಿದೆ. ಇಲ್ಲಿ ಹೆಚ್ಚಾಗಿ ಲೈಂಗಿಕ ಹಾಗೂ ಆರ್ಥಿಕ ಹಿಂಸೆಗಳಾಗುತ್ತಿರುವುದು ಕಂಡುಬರುತ್ತಿವೆ. ದೊಡ್ಡ ದೊಡ್ಡ ನಗರಗಳಲ್ಲಿ ಈ ಬಗೆಯ ಸಂಬಂಧಗಳು ಇರುವುದಕ್ಕಿಂತ ಹೆಚ್ಚಾಗಿ ಹಳ್ಳಿ, ತಾಲ್ಲೂಕು, ಪಟ್ಟಣ ಪ್ರದೇಶಗಳಲ್ಲೇ ಹೆಚ್ಚಾಗಿ ಕಾಣಬರುತ್ತವೆ. ಇಲ್ಲಿ ಮಹಿಳೆಯರು ಅನೇಕ ಬಗೆಯ ಹಿಂಸೆಗೊಳಗಾಗುತ್ತಿದ್ದು, ಅದಕ್ಕೆ ಕಾನೂನಿನ ಮೂಲಕ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಿಲ್ಲ. ಕಾರಣ ಈ ಬಗೆಯ ಸಂಬಂಧ ಕಾನೂನು ಬಾಹಿರವಾದದ್ದು ಎಂಬ ನಂಬಿಕೆಯಲ್ಲಿಯೇ ಅವರು ಜೀವನ ಸಾಗಿಸುತ್ತಿದ್ದಾರೆ. ಕಾನೂನು ತನ್ನ ಅರಿವನ್ನು ಎಲ್ಲರಿಗೂ ತಲುಪಿಸುವ ಕಾರ್ಯ ಮಾಡುತ್ತಿಲ್ಲ ಎಂಬುವುದಕ್ಕೆ ಇದು ಒಂದು ಉದಾಹರಣೆಯಾಗಿದೆ.

ಈ ಬಗೆಯ ಸಂಬಂಧಗಳಿಂದ ಮಹಿಳೆಯರು ದೌರ್ಜನ್ಯಕ್ಕೊಳಗಾದಾಗ ಆ ಸಂಬಂಧದಿಂದ ಹಿಂದೆ ಸರಿಯುದೊಂದನ್ನೇ ಮಾರ್ಗವಾಗಿಸಿಕೊಂಡಿದ್ದಾರೆ. ಇದರಿಂದ ಮಹಿಳೆಯರ ವ್ಯವಸ್ಥಿತ

ಪತನವಾಗುತ್ತಿದೆ, ತಮ್ಮ ಆಯ್ಕೆಗನುಗುಣವಾಗಿ ಸಂಗಾತಿಗಳನ್ನು ಆಯ್ದುಕೊಳ್ಳುತ್ತಿದ್ದಾರೆ ಎಂಬುವುದೊಂದನ್ನು ಹೊರತುಪಡಿಸಿ ಯಾವೊಂದು ಲಾಭಕರ ಸಂಗತಿಯು ಮಹಿಳೆಯರಿಗೆ ಇಲ್ಲದಂತಾಗಿದೆ.

೨.೬.೪. ರಕ್ತಸಂಬಂಧ ಇದ್ದು ಅಥವಾ ಇಲ್ಲದೆಯೂ ಆ ಕುಟುಂಬದ ಸದಸ್ಯರಾಗಿದ್ದಲ್ಲಿಯ ಮಹಿಳೆಯರ ಮೇಲಿನ ಹಿಂಸೆಯ ಸ್ವರೂಪ

ಯಾವುದೇ ಒಂದು ಕುಟುಂಬದೊಳಗೆ ಬಹಳ ದಿನಗಳ ಕಾಲ ಒಬ್ಬ ಮಹಿಳೆ ವಾಸವಾಗಿದ್ದರೆ, ಅಂತಹ ಮಹಿಳೆ ಆ ಕುಟುಂಬದ ಸದಸ್ಯಳಾಗಿರುತ್ತಾಳೆ. ಅವರು ನಿರಾಶ್ರಿತರಾಗಿ ಬಂದಿರಬಹುದು ಅಥವಾ ತಮ್ಮ ಕೆಲಸದ ನಿರ್ವಹಣೆಗಾಗಿ ಆ ಕುಟುಂಬದವರು ಕರೆದುಕೊಂಡು ಬಂದು ಇರಿಸಿಕೊಂಡಿರಬಹುದು. ಹೀಗೆ ಇರುವ ಮಹಿಳೆಯರ ಮೇಲೆ ಆ ಕುಟುಂಬದೊಳಗಡೆ ಭಾವನಾತ್ಮಕ, ಲೈಂಗಿಕ, ಆರ್ಥಿಕ, ದೈಹಿಕ ಹಿಂಸೆಗಳಾಗುತ್ತಿರುವುದನ್ನು ಕಾಣಬಹುದಾಗಿದೆ. ಯಾವುದೋ ಅತಂತ್ರತೆಯ ಕಾರಣಕ್ಕಾಗಿ ಉಳಿದ ಮಹಿಳೆಯರ ಮೇಲೆ ತಾವು ಇರಿಸಿಕೊಂಡು ಸಾಕುತ್ತಿದ್ದೇವೆ ಎಂಬ ಕಾರಣಕ್ಕಾಗಿ ಅವರನ್ನು ಹೆಚ್ಚೆಚ್ಚು ದುಡಿಸಿಕೊಳ್ಳವುದು, ಸರಿಯಾಗಿ ಊಟಕ್ಕೆ ಕೊಡದಿರುವುದು, ದೈಹಿಕವಾಗಿ ನೋವನ್ನುಂಟು ಮಾಡುವುದು, ಮೂದಲಿಸಿ ಅಪಮಾನಗೊಳಿಸುವುದು, ಲೈಂಗಿಕವಾಗಿ ದುರ್ಬಳಕೆ ಮಾಡಿಕೊಳ್ಳುವುದು ಕಂಡುಬರುತ್ತಿದೆ.

ಅದೆಷ್ಟೋ ಮಹಿಳೆಯರಿಗೆ ಬೇರೆಯವರ ಮನೆಯಲ್ಲಿ ಉಳಿಯುವ ಸಂದರ್ಭ ಅನಿವಾರ್ಯವಾದ್ದರಿಂದ ಆ ಮನೆಯವರು ನೀಡುವ ಎಷ್ಟೋ ಹಿಂಸೆಗಳನ್ನು ಸಹಿಸಿಕೊಂಡು ಹೋಗುತ್ತಿರುವುದು ಕಂಡುಬರುತ್ತದೆ. ಇನ್ನು ಕೆಲಸದ ನಿಮಿತ್ತ ಉಳಿಸಿಕೊಂಡ ಹೆಣ್ಣು ಮಕ್ಕಳ ಸ್ಥಿತಿಯಂತೂ ಹೇಳತೀರದ್ದಾಗಿದೆ. ಅವರನ್ನು ಹೊಡೆಯುವುದು, ಬೆಂಕಿಯಿಂದ ಸುಡುವುದು, ಊಟ ಕೊಡದೇ ಸತಾಯಿಸುವುದು ಹಾಗೂ ಅವರ ಮೇಲೆ ಅತ್ಯಾಚಾರ ಎಸಗುವುದು ಹೀಗೆ ಇನ್ನೂ ಅದೆಷ್ಟೋ ರೀತಿಯಲ್ಲಿ ಅಮಾನವೀಯತೆಯಿಂದ ನಡೆಸಿಕೊಳ್ಳುತ್ತಿರುವ ಸನ್ನಿವೇಶಗಳು ಇಂದು ಕಾಣಬರುತ್ತಿವೆ.

೨.೬.೫. ದೇವದಾಸಿ ಕುಟುಂಬಗಳಲ್ಲಿ (ವಿಶೇಷವಾಗಿ ಸಂಗಾತಿಗಳಿಂದ) ನಡೆಯುವ ಹಿಂಸೆಯ ಸ್ವರೂಪ :

ದೇವರ ಹೆಸರಿನಲ್ಲಿ ಲೈಂಗಿಕ ಬಳಕೆಗೆ ಒಳಗಾಗುತ್ತಿರುವ ಮಹಿಳೆಯರು ತಾವು ಕೂಡುವ ಪುರುಷರನ್ನೊಳಗೊಂಡು ತಮ್ಮ ಕುಟುಂಬ ಎಂದು ಹೇಳುತ್ತಾರೆ. ಇಂತಹ ವ್ಯವಸ್ಥೆಯಲ್ಲಿ ಸಂಗಾತಿಗಳಿಂದ ಈ ಮಹಿಳೆಯರು ಅನೇಕ ದೌರ್ಜನ್ಯಗಳಿಗೆ ಒಳಗಾಗುತ್ತಿದ್ದು, ವಿಶೇಷವಾಗಿ ದೈಹಿಕ, ಲೈಂಗಿಕ ಹಾಗೂ ಆರ್ಥಿಕ ಹಿಂಸೆಗೆ ಒಳಗಾಗುತ್ತಿರುವುದು ಕಾಣಬರುತ್ತದೆ. ಲೈಂಗಿಕ ಆಸಕ್ತಿಯ ಪೂರೈಕೆಗಾಗಿ ಬರುವವರು ಅವರ ಮೇಲೆ ಕ್ರೂರ ಮೃಗಗಳಂತೆ ವರ್ತಿಸುವುದು ಕಂಡುಬರುತ್ತದೆ. ಎಚ್.ಐ.ವಿ ಸೋಂಕಿತರಿದ್ದರೆ ಆ ದೇವದಾಸಿ ಮಹಿಳೆಯರಿಗೂ ಆ ಸೋಂಕನ್ನು ಪಸರಿಸಿ ಹೋಗುವುದು ಅವರ ಜೀವಕ್ಕೆ ಕುತ್ತು ತರುವಂತಹ ಕಾರ್ಯವಾಗಿದೆ.

ಲೈಂಗಿಕತೆಯಿಂದ ಹರಡುವ ರೋಗಗಳ ಬಗ್ಗೆ ಸ್ವಲ್ಪ ಜಾಗೃತಗೊಂಡ ಮಹಿಳೆಯರು ಲೈಂಗಿಕ ಬಯಕೆಗಾಗಿ ಬರುವ ಪುರುಷರಿಗೆ ಕಾಂಡೋಮ್‌ಗಳನ್ನು ಬಳಸುವಂತೆ ಹೇಳಿದರೆ, ಹಣ ಕೊಡುವುದೇ

ಸುಖಕ್ಕಾಗಿ ಎಂದು ಅವರಿಗೆ ತಾಳಲಾರದಷ್ಟು ಬಲವಂತದ ಸಂಭೋಗ ನಡೆಸುವುದು ಕಂಡುಬರುತ್ತದೆ. ಇದು ಆ ಹೆಣ್ಣುಮಕ್ಕಳಿಗೆ ಅತ್ಯಂತ ಹಿಂಸೆಯನ್ನುಂಟು ಮಾಡುತ್ತದೆ. ಇಷ್ಟಲ್ಲದೇ ಪುರುಷರು ತಾವು ಇಚ್ಛಿಸಿದಂತೆ ಸ್ಪಂದಿಸದೇ ಹೋದಲ್ಲಿ ಹೊಡೆಯುವುದನ್ನು, ನೂಕಾಡುವುದನ್ನು ಮಾಡಿ ಅವರಿಗೆ ದೈಹಿಕ ಹಿಂಸೆಯನ್ನುಂಟು ಮಾಡುತ್ತಾರೆ. ತಾವು ಇರುವುದೇ ಲೈಂಗಿಕ ಬಳಕೆಗಾಗಿ ಎಂದು ತಿಳಿದಿರುವ ಮಹಿಳೆಯರು ಇದನ್ನೆಲ್ಲಾ ಮೌನವಾಗಿ ಅನುಭವಿಸುವುದು ಕಂಡುಬರುತ್ತದೆ. ಇನ್ನು ಎಷ್ಟೋ ಜನ ತಮ್ಮ ಬಯಕೆ ಈಡೇರಿಸಿಕೊಂಡ ಮೇಲೆ ಆ ಮಹಿಳೆಯರಿಗೆ ಹಣ ಕೊಡದೇ ಹೋಗುವುದುಂಟು ಮತ್ತು ಅದೆಷ್ಟೋ ಮಹಿಳೆಯರು ಇಂತಹ ಪುರುಷರಿಂದಾಗಿ ತಾವು ಸಂಪಾದಿಸಿದ ಹಣವನ್ನು ಕಳೆದುಕೊಂಡು ಆರ್ಥಿಕ ಸಂಕಷ್ಟಕ್ಕೊಳಗಾಗಿರುವುದು ಕಂಡುಬರುತ್ತಿದೆ.

ದೇವದಾಸಿಯೊಂದಿಗೆ ಸಂಪರ್ಕದಲ್ಲಿರುವ ಎಷ್ಟೋ ಗಂಡಸರು ಅವರನ್ನು ತಮ್ಮ ಹೆಂಡತಿಯಂತೆ ನಡೆಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ದೇವದಾಸಿ ಮಹಿಳೆಯರು ದೇವರಿಗೆ ಮಾಡಿದ ಪ್ರಮಾಣದಂತೆ ನಡೆದುಕೊಳ್ಳುವುದೂ ಕೂಡಾ ತಪ್ಪು ಎಂಬಂತೆ ಎಷ್ಟೋ ಗಂಡಸರು ಅವರ ನಡುವಳಿಕೆಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಅವರ ಮೇಲೆ ಅಧಿಕಾರ ಚಲಾಯಿಸುತ್ತಾರೆ. ಆ ಮಹಿಳೆಯರು ಬೇರೆಯವರೊಂದಿಗೆ ಸಂಪರ್ಕ ಏರ್ಪಡಿಸಿಕೊಳ್ಳುವುದನ್ನೂ ನಿರಾಕರಿಸಿರುತ್ತಾರೆ. ಆ ಮಹಿಳೆಯರು ಬೇರೆಯವರೊಂದಿಗೆ ಸಂಬಂಧ ಹೊಂದಿರಬಹುದೆಂದು ಅನುಮಾನಿಸುವುದು ಕಂಡುಬರುತ್ತದೆ. ಈ ವಿಚಾರವಾಗಿ ಅವರಿಗೆ ಹೀಯಾಳಿಸಿ ಮಾತನಾಡುವುದು, ತಳಿಸುವುದು ಕಂಡುಬರುತ್ತದೆ. ಇಷ್ಟಲ್ಲದೇ ಇಂತಹ ಮಹಿಳೆಯರನ್ನು ಲೈಂಗಿಕ ದುರ್ಬಳಕೆಗಾಗಿ ಬೇರೆ ಕಡೆಗೆ ಸರಕಿನ ಹಾಗೆ ಸಾಗಾಣಿಕೆ ಮಾಡುವುದನ್ನು ಕಾಣಬಹುದಾಗಿದೆ.

ಒಟ್ಟಾರೆಯಾಗಿ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ ಎಂಬುದು ವಿವಿಧ ಸ್ವರೂಪಗಳಲ್ಲಿ ತನ್ನ ಚಹರೆಯನ್ನು ಮೂಡಿಸಿದ್ದು, ಇದರಿಂದ ಮಹಿಳೆಯರು ಹೊರಬರಲು ಸಾಧ್ಯವೇ? ಎಂಬಂತಹ ಅನುಮಾನಗಳು ಕ್ಷಣಮಾತ್ರದಲ್ಲಿ ಮೂಡುತ್ತವೆ. ಈ ಎಲ್ಲಾ ಬಗೆಯ ದೌರ್ಜನ್ಯಗಳನ್ನು ಗಮನಿಸಿದಾಗ ಮಾನವ ಭೂಮಿಯ ಮೇಲೆ ತನ್ನ ಅಸ್ತಿತ್ವವನ್ನು ತಾನೇ ಕಳೆದುಕೊಳ್ಳುವ ಹಂತ ತಲುಪುತ್ತಿದ್ದಾನೆ ಎಂದು ಭಾಸವಾಗುತ್ತಿದೆ. ಪ್ರಾಣಿಗಳು ಕ್ರೂರವಾಗಿರಲು ಅವುಗಳು ನೈಸರ್ಗಿಕವಾಗಿ ಪಡೆದುಕೊಂಡು ಬಂದ ನಡಾವಳಿಯಾಗಿರುತ್ತದೆ. ಆದರೆ ಮಾನವ ಪ್ರಕೃತಿ ತನಗೆ ನೀಡಿದ ನಡಾವಳಿಗಳಾಚೆಗೆ ತನ್ನ ಕುತಂತ್ರ ಬುದ್ಧಿಯಿಂದ ಪ್ರಾಣಿಗಳಿಗಿಂತಲೂ ಕ್ರೂರತನದಿಂದ ನಡೆದುಕೊಳ್ಳುತ್ತಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಅವರು ನಡೆಸುತ್ತಿರುವ ದೌರ್ಜನ್ಯದ ತೀವ್ರತೆ ಎಷ್ಟಿದೆ ಎಂದರೆ ಅದು ಮಹಿಳೆಯರನ್ನು ಕೊಲ್ಲುವ ಹಂತದವರೆಗೂ ಮುಂದುವರೆದಿದೆ. ಇದೆಲ್ಲವು ಒಪ್ಪಿತವಾಗಿ ಶತ ಶತಮಾನಗಳಿಂದಲೂ ನಡೆದುಕೊಂಡು ಬರುತ್ತಿರುವುದನ್ನು ನೋಡಿದಾಗ ಮಾನವರು ನಿಜವಾಗಿಯೂ ಮಾನವೀಯತೆಯನ್ನು ಮರೆತು ಬದುಕುತ್ತಿರುವುದಕ್ಕೆ ಸಾಕ್ಷಿಯಾಗಿದೆ.

ಅಡಿಟಿಪ್ಪಣಿಗಳು

೧. ಸಮಾಜಶಾಸ್ತ್ರ, ಪ್ರೊ. ಎಂ. ನಾರಾಯಣ, ಪು.ಸಂ.೧೧೫.

೨. ಸಮಾಜಶಾಸ್ತ್ರ, ಪ್ರೊ. ಎಂ. ನಾರಾಯಣ, ಪು.ಸಂ.೧೧೫.

೩. http://legaservices. co. in/blogs/entry/live in Relationship

೪. ದ ಸೆಕೆಂಡ ಸೆಕ್ಸ್, ಸಿಮೊನ್ ದ ಬೋವಾ, ಒಂದು ಕನ್ನಡ ಓದು – ಡಾ. ಎಚ್.ಎಸ್. ಶ್ರೀಮತಿ, ಪು.ಸಂ. ೭೬.

೫. ಭಾರತೀಯ ಸ್ತ್ರೀ ಜೀವನ, ಡಾ. ಲೀಲಾ ಪಾಟೀಲ ಮರಾಠಿಯಲ್ಲಿ, ಕನ್ನಡಕ್ಕೆ ಡಾ. ವಿಠ್ಠಲರಾವ್ ಟಿ. ಗಾಯಕ್ವಾಡ್, ಪು.ಸಂ. ೨.

೬ ಗೊಂದಲಪುರ, ಲೇ., ಸ್ತ್ರೀ ಪ್ರತಿಮೆಗಳು ಮತ್ತು ಹಿಂಸೆಯ ಬೇರುಗಳು, ಲೇ.ರೇಣು ಮುಕುಂದ, ಪು.ಸಂ.೪೪.

೭ ಹೆಣ್ಣು ಮಕ್ಕಳನ್ನು ಕೌಟುಂಬಿಕ ಹಿಂಸೆಯಿಂದ ಸುರಕ್ಷಿಸುವ ಕಾಯ್ದೆ – ೨೦೦೫, ದಾದಾಪೀರ್ ಕೆ. ವಕೀಲರು, ಪು.ಸಂ.೧೨

ಅಧ್ಯಾಯ : ಮೂರು

ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ : ಕಾರಣ, ಪರಿಣಾಮಗಳು ಹಾಗೂ ಸ್ತ್ರೀವಾದಿ ನಿಲುವುಗಳು

೩.

ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ : ಕಾರಣ, ಪರಿಣಾಮಗಳು ಹಾಗೂ ಸ್ತ್ರೀವಾದಿ ನಿಲುವುಗಳು

೩.೧. ಸ್ತ್ರೀವಾದಿ ನಿಲುವುಗಳು ಮತ್ತು ಅವುಗಳ ವಿಸ್ತೃತ ಚರ್ಚೆ

ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ನೇರವಾಗಿ ಖಂಡಿಸಿ, ಪ್ರಶ್ನಿಸಿ ಪರಿಹಾರ ಕಂಡುಕೊಳ್ಳುವ ಕಾರ್ಯಗಳನ್ನು ಎಲ್ಲಾ ಸ್ತ್ರೀವಾದಗಳು ಮಾಡುತ್ತವೆ. ಬಹುತೇಕ ಎಲ್ಲಾ ಸ್ತ್ರೀವಾದಗಳು ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಸಮಾಜದ ಮುಖ್ಯ ಸಂಸ್ಥೆಯಾದ ಕುಟುಂಬದ ಮೂಲದಿಂದಲೇ ಗುರುತಿಸುತ್ತವೆ. ಹಾಗು ಕುಟುಂಬದೊಳಗೆ ನಿರ್ಮಿಸಿಕೊಂಡ ಮತ್ತೊಂದು ಸಂಸ್ಥೆಯಾದ ವಿವಾಹವು ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಮೂಲ ಸಂಗತಿಯಾಗಿ ಗುರುತಿಸುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಸ್ತ್ರೀವಾದಗಳು ತಮ್ಮ ತತ್ವ-ಸಿದ್ಧಾಂತಗಳನ್ನು ಕಟ್ಟಿಕೊಂಡಿರುವುದು ಕಾಣಬರುತ್ತದೆ. ಉದಾಹರಣೆಗೆ, ಉದಾರವಾದ ಸ್ತ್ರೀವಾದ, ತೀವ್ರಗಾಮಿ ಸ್ತ್ರೀವಾದ, ಮಾರ್ಕ್ಸವಾದ ಸ್ತ್ರೀವಾದ, ಸಾಂಸ್ಕೃತಿಕ ಸ್ತ್ರೀವಾದ ಮುಂತಾದವುಗಳಾಗಿವೆ.

ಈ ಸ್ತ್ರೀವಾದಗಳಲ್ಲಿ ಕೆಲವೊಂದು ಅಂದಿನ ಸಾಮಾಜಿಕ ಸಂದರ್ಭದಲ್ಲಿಯ ಮಹಿಳೆಯರ ಸ್ಥಿತಿಗತಿಗಳನ್ನು ಆಧರಿಸಿ ಹುಟ್ಟಿಕೊಂಡಂತವುಗಳಾದರೆ, ಇನ್ನು ಕೆಲವೊಂದು ಒಟ್ಟು ಮಹಿಳೆಯರ ಸ್ಥಿತಿಗತಿಗಳನ್ನು ಆಧರಿಸಿ ಹುಟ್ಟಿಕೊಂಡಂತವುಗಳಾಗಿವೆ. ಈ ಹಿನ್ನೆಲೆಯಲ್ಲಿ ಅವು ತಮ್ಮ ತಮ್ಮ ತತ್ವ ಸಿದ್ಧಾಂತಗಳನ್ನು ರೂಪಿಸಿಕೊಂಡಿವೆ. ಆಯಾ ಸಂದರ್ಭದಲ್ಲಿಯ ಮಹಿಳೆಯರ ಸ್ಥಿತಿಗತಿಗಳನ್ನೇ ಕೇಂದ್ರವಾಗಿರಿಸಿಕೊಂಡು ಮಹಿಳೆಯರ ಮೇಲಿನ ಶೋಷಣೆಗಳನ್ನು ಗುರುತಿಸುತ್ತಾ, ಅವುಗಳಿಗೆ ಪರಿಹಾರ ಕಂಡುಕೊಳ್ಳುವತ್ತ ತಮ್ಮ ನಿಲುವುಗಳನ್ನು ರೂಪಿಸಿಕೊಂಡು ಹೋರಾಟ ನಡೆಸುತ್ತಿರುವುದು ಬಹುತೇಕ ಎಲ್ಲಾ ಸ್ತ್ರೀವಾದಗಳ ಆಶಯವಾಗಿದೆ. ಈ ಸ್ತ್ರೀವಾದಗಳಲ್ಲಿ ಕೆಲವೊಂದು ಸ್ತ್ರೀವಾದ ಎಂಬ ಹೆಸರಿನಿಂದ ಹುಟ್ಟಿಕೊಂಡವುಗಳಾಗಿಲ್ಲ. ಬದಲಾಗಿ, ಅವು ಆಯಾ ಸಾಮಾಜಿಕ ಸಂದರ್ಭದಲ್ಲಿನ ಮಹಿಳೆಯರ ಸ್ಥಿತಿಗತಿ ಏನು? ಅವುಗಳಿಗೆ ಪರಿಹಾರಗಳೇನು? ಅಥವಾ ಹೇಗೆ ಸಮಾನತೆ ಪಡೆದುಕೊಳ್ಳುವುದು? ಎಂದು ಸ್ತ್ರೀಲಿಂಗದ ಮೇಲೆ ನಡೆಯುತ್ತಿರುವ ಲಿಂಗ ಅಸಮಾನತೆಗಳ ಹುಟ್ಟಿನ ಹಿನ್ನೆಲೆಯಲ್ಲಿ ಹೋರಾಟ ನಡೆಸಿದಂತವುಗಳಾಗಿವೆ. ಹೀಗೆ ಕಾರ್ಯಗತಗೊಂಡ ಸ್ತ್ರೀವಾದಗಳು ಮಹಿಳೆಯರ ಮೇಲಿನ ಕೌಟುಂಬಿಕ ಹಿಂಸೆಯನ್ನು ತಡೆಗಟ್ಟುವಲ್ಲಿ ಎಷ್ಟು ಸಹಾಯಕವಾಗಿವೆ ಎಂಬುವುದನ್ನು ವಿವಿಧ ಸ್ತ್ರೀವಾದಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಈಗಾಗಲೇ ಸ್ತ್ರೀವಾದ

ಎಂದರೇನು ಎಂದು ಒಂದು ಚಿತ್ರಣ ದೊರೆತಿದ್ದು ಆ ಮೂಲಕ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಕ್ಕೆ ಮೂಲ ಕಾರಣಗಳನ್ನು ಸಮಸ್ಯೆಗಳ ಹಿನ್ನೆಲೆಯಲ್ಲಿ ಹುಡುಕುವ ಪ್ರಯತ್ನ ಮಾಡಲಾಗಿದೆ.

ಪ್ರಸ್ತುತ ಭಾಗದಲ್ಲಿ ಮಹಿಳಾ ಅಧ್ಯಯನ ಕೇವಲ ಇಂದಿನ ಮಹಿಳೆಯರ ಸ್ಥಿತಿಗತಿಯನ್ನು ಮಾತ್ರ ಮೂಲವಾಗಿಸಿಕೊಳ್ಳದೇ ಮಹಿಳೆಯರ ಹಿಂದಿನ ಎಲ್ಲಾ ಸ್ಥಿತಿಗತಿಗಳ ಮೂಲ ಏನು ಎಂದು ಶೋಧಿಸುವ ಕಾರ್ಯ ಮಾಡುತ್ತದೆ. ಈ ಹಿನ್ನೆಲೆಯಲ್ಲಿ ಮಹಿಳಾ ಅಧ್ಯಯನದ ಒಟ್ಟೊಟ್ಟಿಗೆ ಸ್ತ್ರೀವಾದವನ್ನು ಅಳವಡಿಸಿಕೊಂಡು ಮಹಿಳೆಯರ ಮೇಲೆ ಯಾಕೆ ಕೌಟುಂಬಿಕ ದೌರ್ಜನ್ಯಗಳು ನಡೆಯುತ್ತಿವೆ ಎಂಬುವುದನ್ನು ಗಮನಿಸಿದಾಗ, ಮಹಿಳೆಯರ ಮೇಲಿನ ಹಿಂಸೆಗೆ ಮೂಲ ಏನೆಂದು ತಿಳಿದುಬರುತ್ತದೆ. ಈ ಹಿನ್ನೆಲೆಯಲ್ಲಿ ಅನೇಕ ಸ್ತ್ರೀವಾದಗಳು ಮಹಿಳೆಯರ ಮೇಲಾಗುತ್ತಿರುವ ಹಿಂಸೆಗೆ ಯಾವೆಲ್ಲಾ ಅಂಶಗಳು ಕಾರಣವಾಗಿವೆ ಎಂಬುದನ್ನು ಕಂಡುಕೊಂಡಿದ್ದಾರೆ. ಜೊತೆಗೆ ಯಾವ ಬಗೆಯ ಪರಿಹಾರೋಪಾಯಗಳನ್ನು ಸೂಚಿಸಿದ್ದಾರೆ ಎಂಬುದನ್ನ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಜೊತೆಗೆ ಇವುಗಳು ಮಹಿಳೆಯರನ್ನು ಹಿಂಸೆಯಿಂದ ಹೊರತರುವಲ್ಲಿ ಎಷ್ಟರ ಮಟ್ಟಿಗೆ ಸಹಾಯಕವಾಗಿವೆ ಎಂಬುದನ್ನು ಪರಾಮರ್ಶೆಗೊಳಪಡಿಸಲಾಗಿದೆ.

ಇವುಗಳ ಜೊತೆಗೆ ಪ್ರಸ್ತುತ ಅಧ್ಯಯನದಲ್ಲಿ ಕ್ಷೇತ್ರ ಕಾರ್ಯದಿಂದ ಕಂಡುಕೊಂಡ ಅಂಶಗಳಿಗೆ ಹೊಸದೊಂದು ಸಿದ್ಧಾಂತವನ್ನು ಮಹಿಳೆಯರು ಅನುಭವಿಸುತ್ತಿರುವ ಕೌಟುಂಬಿಕ ದೌರ್ಜನ್ಯಗಳಿಗೆ ಅನ್ವಯಿಸಿ ಚರ್ಚಿಸಲಾಗಿದೆ. ವಿವಿಧ ಸ್ತ್ರೀವಾದಗಳು ಭಿನ್ನ ಭಿನ್ನ ಹರವುಗಳಲ್ಲಿ ಹರಡಿಕೊಂಡಿದ್ದು, ಮಹಿಳೆಯರ ಮೇಲಿನ ಕೌಟುಂಬಿಕ ಹಿಂಸೆ ತಡೆಯುವಲ್ಲಿ ಇವು ಎಷ್ಟರ ಮಟ್ಟಿಗೆ ಸಹಾಯಕವಾಗಿವೆ ಎಂಬುದನ್ನು ಅರಿಯಲಾಗಿದೆ. ಜೊತೆ ಜೊತೆಗೆ ಭಿನ್ನ ಸ್ತ್ರೀವಾದದ ನೋಟವೊಂದನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಸ್ತ್ರೀವಾದ ಎಂಬುದು ಮಹಿಳೆಯರನ್ನು ಶೋಷಣೆಯಿಂದ ಮುಕ್ತಗೊಳಿಸುವ ಮಾರ್ಗ ಎಂದು ಹೇಳಬಹುದು. ಮಹಿಳೆಯರ ಮೇಲಿನ ಸಮಸ್ಯೆಗಳನ್ನು ಮೇಲುಸ್ತರದಲ್ಲಿ ಅರ್ಥೈಸಿಕೊಂಡು ಅದನ್ನು ಸ್ತ್ರೀವಾದದ ನೆಲೆಯಲ್ಲಿ ಗುರುತಿಸಿಕೊಂಡಾಗ ಮಾತ್ರ ಮಹಿಳೆಯರು ಅನುಭವಿಸುತ್ತಿರುವ ಕೌಟುಂಬಿಕ ಹಿಂಸೆಗೆ ನಿಜವಾದ ಕಾರಣವೇನೆಂಬುದು ಗೋಚರವಾಗುತ್ತದೆ. ಸ್ತ್ರೀವಾದಿ ದೃಷ್ಟಿಕೋನವನ್ನು ಆಧಾರವಾಗಿಸಿಕೊಂಡು ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಕ್ಕೆ ಕಾರಣ ಏನೆಂದು ಹುಡುಕುವುದರ ಜೊತೆಗೆ ಸೂಕ್ತ ಪರಿಹಾರವನ್ನು ಸಹ ಕಂಡುಕೊಳ್ಳಬಹುದಾಗಿದೆ. ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಕ್ಕೆ ಕಾರಣ ಪುರುಷ ಪ್ರಧಾನ ವ್ಯವಸ್ಥೆ ಎಂದು ಅರಿತುಕೊಂಡ ಸ್ತ್ರೀವಾದಗಳು ವ್ಯವಸ್ಥೆಯನ್ನು ಕೇವಲ ಒಂದು ಸಿದ್ಧಾಂತದ ಮೂಲಕ ಒಡೆಯಲು ಸಾಧ್ಯವಿಲ್ಲ ಎಂದು ಅವುಗಳ ಕಾರ್ಯನಿರ್ವಹಣೆಯ ಸಂದರ್ಭದಲ್ಲಿ ತೋರ್ಪಡಿಸಿವೆ. ಆದ್ದರಿಂದ ಎಲ್ಲಾ ಸ್ತ್ರೀವಾದದ ನಿಲುವುಗಳನ್ನು ಸಂದರ್ಭ, ಸನ್ನಿವೇಶಗಳಿಗೆ ಅನುಗುಣವಾಗಿ ಎಲ್ಲರೂ ಅಳವಡಿಸಿಕೊಳ್ಳಬೇಕು. ಆಗ ಮಾತ್ರ ಸಮಾಜದಲ್ಲಿಯ ಎಲ್ಲಾ ಲಿಂಗ ಅಸಮಾನತೆಗಳನ್ನು ಹೋಗಲಾಡಿಸಲು ಸಾಧ್ಯವಾಗುತ್ತದೆ, ಹಾಗೂ ಆ ಮೂಲಕ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳಿಗೂ ಸಹ ಇತಿಶ್ರೀ ಹಾಡಬಹುದಾಗಿದೆ.

೩.೧.೧. ಉದಾರವಾದ ಸ್ತ್ರೀವಾದ

ಉದಾರವಾದಿ ಸ್ತ್ರೀವಾದಿಗಳು ಕುಟುಂಬದಲ್ಲಿಯ ಆರ್ಥಿಕ ಅಸಮಾನತೆಯನ್ನು ಮುಂಚೂಣಿಯಲ್ಲಿಟ್ಟುಕೊಂಡು ತಮ್ಮ ನಿಲುವುಗಳನ್ನು ಮಂಡಿಸುತ್ತಾರೆ. ಆರ್ಥಿಕ ಸ್ವಾತಂತ್ರ್ಯ ಮಹಿಳೆಯರ ಅಸಮಾನತೆಗೆ ಕಾರಣವಾಗುವ ಅಂಶ ಎಂದು ಗುರುತಿಸುತ್ತಾರೆ. ಹಾಗೂ ಮಹಿಳೆಯರು ಮೂಲ ವಾಸಸ್ಥಾನವಾದ ಕುಟುಂಬದಲ್ಲೇ ಶೋಷಣೆಗೊಳಗಾಗುತ್ತಿದ್ದರೆ, ಸ್ತ್ರೀ–ಪುರುಷರ ಸಮಾನತೆ ಅಸಾಧ್ಯ ಎಂದು ಹೇಳುತ್ತಾರೆ. ಆದ್ದರಿಂದ ಮಹಿಳೆಯರು ಇಂತಹ ಆರ್ಥಿಕ ಅಸಮಾನತೆ, ಆರ್ಥಿಕ ದೌರ್ಜನ್ಯಗಳಿಂದ ಹೊರಬರಬೇಕೆಂದು ಹೇಳುತ್ತಾರೆ. ಜೊತೆಗೆ ಸಾಮಾಜಿಕವಾಗಿ ಸ್ತ್ರೀಯರ ಪರವಾದ ಏನೇ ಹೋರಾಟಗಳು ನಡೆದರು ಅವು ನಿಷ್ಪ್ರಯೋಜಕ ಎನ್ನುತ್ತಾರೆ. ಇದರಿಂದ ಹೊರಬರಬೇಕಾದರೆ ಮಹಿಳೆಯರು ಕುಟುಂಬದಿಂದ ಹೊರಗೆ ಬಂದು ದುಡಿಯಬೇಕು ಎಂದು ತಿಳಿಸುತ್ತಾರೆ. ಜೊತೆಗೆ ದುಡಿಮೆಯ ನಿರಾಕರಣೆಯೂ ಸಹ ಆಕೆಯ ಅವಕಾಶವೇ ಆಗಿರಬೇಕು ಎಂದು ಉದಾರವಾದಿ ಸ್ತ್ರೀವಾದಿ ಹ್ಯಾರಿಯಟ್ ಟೇಲರ್ ಮಿಲ್‌ರವರು ಹೇಳುತ್ತಾರೆ.

ಮೇರಿ ವುಲ್‌ಸ್ಟನ್ ಕ್ರಾಫ್ಟ್‌ರವರು ತಮ್ಮ 'A Vindication of the Right of Women' ಎಂಬ ಕೃತಿಯಲ್ಲಿ ಪುರುಷರು ತಮ್ಮ ಭಾದ್ಯತೆಗಳನ್ನು ಉಳಿಸಿಕೊಳ್ಳಲು ಮಹಿಳೆಯರನ್ನು ದ್ವಿತೀಯ ಸ್ಥಾನದಲ್ಲಿ ಕಾಣುತ್ತಿದ್ದಾರೆ, ಅಲ್ಲದೇ ಅದೇ ಸ್ಥಿತಿಯಲ್ಲಿ ಮುಂದುವರೆಯುವಂತೆ ಮಾಡುತ್ತಾರೆ ಎಂದು ಪ್ರಸ್ತಾಪಿಸುತ್ತಾರೆ. ಪುರುಷ ಪ್ರಧಾನ ವ್ಯವಸ್ಥೆ ತನ್ನ ಉಳಿವಿಗಾಗಿ ನಿರಂತರವಾಗಿ ಕಾರ್ಯ ಪ್ರವೃತ್ತವಾಗಿದೆ ಎಂದು ಇವರು ವಿವರಿಸುತ್ತಾರೆ. ಉದಾರವಾದಿ ಸ್ತ್ರೀವಾದದ ಮೊದಲ ಹಂತದ ಚಿಂತಕಿಯರ ವಿಚಾರಧಾರೆಗಳು ಇವುಗಳಾದರೆ, ಇನ್ನು ಎರಡನೇ ಹಂತದ ಚಿಂತಕಿಯರು ಅದಕ್ಕೂ ಭಿನ್ನ ವಿಚಾರಧಾರೆಗಳನ್ನು ಹೊರತರುತ್ತಾರೆ. ಇವರು, ಮಹಿಳೆಯರು ಶೋಷಣೆಯಿಂದ ಮುಕ್ತಗೊಳ್ಳಬೇಕಾದರೆ ಲೈಂಗಿಕ ಸಮಾನತೆ ಸಾಧಿಸಬೇಕೆಂದು ಹೇಳುತ್ತಾರೆ. ಉದಾರವಾದದ ಮತ್ತೊಬ್ಬ ಚಿಂತಕಿಯಾದ ಬೆಟ್ಟಿ ಫ್ರೀಡನ್‌ರವರು ತಮ್ಮ 'ದ ಫೆಮಿನೈನ್ ಮಿಸ್ಟಿಕ್' ಎಂಬ ಗ್ರಂಥದಲ್ಲಿ ಹೆಣ್ಣು ಬದುಕಿನಲ್ಲಿ ನಿರ್ವಹಿಸುತ್ತಿರುವ ತಾಯಿ ಅಥವಾ ಹೆಂಡತಿಯ ಪಾತ್ರಕ್ಕೆ ಸಂಬಂಧಿಸಿದಂತೆ ಕೆಲವು ಚಿಂತನೆಗಳನ್ನು ಪ್ರಸ್ತಾಪಿಸುತ್ತಾರೆ. ಇವರು ಹೆಣ್ಣು, ತಾಯಿ ಮತ್ತು ಹೆಂಡತಿ ಎಂಬ ಸಿದ್ಧಮಾದರಿಗಳಿಂದ ಹೊರಬಂದು ದುಡಿಯಬೇಕು. ತಮ್ಮ ವ್ಯಕ್ತಿತ್ವವನ್ನು ವಿಕಸನ ಮಾಡಿಕೊಳ್ಳಬೇಕು ಎಂದು ಹೇಳುತ್ತಾರೆ. ಇವರೂ ಸಹ ಹೆಣ್ಣು ದುಡಿಮೆ ಕೈಗೊಳ್ಳಬೇಕು ಎಂದು ತಿಳಿಸುತ್ತಾರೆ. ಇದರಿಂದ ಮಹಿಳೆಯರು ಶೋಷಣೆಯಿಂದ ಹೊರಬಂದು ಸಮಾನತೆ ಸಾಧಿಸಬಲ್ಲರು ಎಂದು ಹೇಳುತ್ತಾರೆ.

ಉದಾರವಾದಿ ಸ್ತ್ರೀವಾದಿಗಳು ಮಹಿಳಾ ದುಡಿಮೆಯನ್ನೇ ಮೂಲವಾಗಿಸಿಕೊಂಡು ತಮ್ಮ ವಿಚಾರಗಳನ್ನು ಮಂಡಿಸುತ್ತಾರೆ. ಇದು ಅವರು ಮಹಿಳೆಯರ ಮನೆಗೆಲಸವನ್ನು ದುಡಿಮೆ ಎಂದು ಪರಿಗಣಿಸಿದಂತೆ ಕಂಡುಬರುವುದಿಲ್ಲ ಎಂದೆನಿಸುತ್ತದೆ. ಜೊತೆಗೆ ಅವರು ಮನೆ ಹೊರಗಿನ ಪ್ರಪಂಚ ಒಂದೇ ವ್ಯಕ್ತಿತ್ವ ವಿಕಸನ ದಾರಿ ಎಂಬಂತೆ ತಮ್ಮ ವಿಚಾರಗಳನ್ನು ಮಂಡಿಸುತ್ತಾರೆ. ಆದರೆ ಮನೆಯೊಳಗಿನ ಮಹಿಳೆಯರ ಪ್ರಪಂಚವೇನೂ ಚಿಕ್ಕದಾಗಿಲ್ಲ. ಅಲ್ಲಿ ಮಹಿಳೆಯರು ರಸಪಾಕ, ವೈದ್ಯ, ಕಲೆಗಳು, ಕೈ ಕಸುಬುಗಳು ಎಲ್ಲವನ್ನು ಸೃಷ್ಟಿಸಿದ್ದಾರೆ. ಅದನ್ನೆ ಪುರುಷರು ಮನೆಯಿಂದ ಆಚೆ ತಂದು

ವ್ಯಾಪಾರೀಕರಣದ ದೃಷ್ಟಿಕೋನಕ್ಕೆ ಒಳಪಡಿಸಿದ್ದಾರೆ. ಇದನ್ನು ಉದಾರವಾದಿ ಸ್ತ್ರೀವಾದಿಗಳು ಗಮನಿಸದಂತೆ ಕಾಣುವುದಿಲ್ಲ. ಜೊತೆಗೆ ಉದಾರವಾದಿಗಳು ಪ್ರಸ್ತಾಪಿಸಿದ್ದನ್ನು ಗಮನಿಸಿದಾಗ, ಅವರು ಕೇವಲ ದುಡಿಯದಿರುವ ಮಹಿಳಾ ವರ್ಗವನ್ನು ಮಾತ್ರ ಗಮನಿಸಿದಂತೆ ಕಾಣಬರುತ್ತದೆ. ಉದಾರವಾದದ ಹುಟ್ಟಿನ ಸಂದರ್ಭದಲ್ಲಿ ಅನೇಕ ಮಹಿಳೆಯರು ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರು. ಅವರೂ ಸಹ ಕೌಟುಂಬಿಕ ದೌರ್ಜನ್ಯಗಳಿಗೆ ಒಳಗಾಗುತ್ತಿದ್ದರು. ಆದರೆ ಈ ಬಗ್ಗೆ ಉದಾರವಾದಿಗಳು ಎಲ್ಲಿಯೂ ಮಾತನಾಡುವುದಿಲ್ಲ.

ಆಧುನಿಕ ಉದಾರವಾದಿ ಸ್ತ್ರೀವಾದಿಗಳು ಸ್ವಲ್ಪ ಮುಂದುವರೆದು ಲೈಂಗಿಕ ಸಮಾನತೆ ಸ್ತ್ರೀ-ಪುರುಷರ ಸಮಾನತೆಗೆ ಕಾರಣವಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಬಗೆಯ ನಿಲುವು ಮಹಿಳಾ ದೌರ್ಜನ್ಯದ ಹಿನ್ನೆಲೆಯಲ್ಲಿ ಚರ್ಚಿಸುವುದು ಸ್ವಾಗತಾರ್ಹ ಸಂಗತಿಯಾಗಿದೆ.

೩.೧.೨. ಮಾರ್ಕ್ಸ್‌ವಾದ ಸ್ತ್ರೀವಾದ

ಮಾರ್ಕ್ಸ್ ಮತ್ತು ಏಂಗಲ್ಸರು ಮಾರ್ಕ್ಸ್‌ವಾದದ ಪ್ರಮುಖ ಚಿಂತಕರು. ಇವರ ಪ್ರಕಾರ ಮಹಿಳೆಯರ ಮೇಲಿನ ಹಿಂಸೆ ಎನ್ನುವುದು ಗಂಡಸರ ಪ್ರಮುಖ ಗುರಿಯೇನು ಆಗಿರಲಿಲ್ಲ. ಬದಲಾಗಿ ಬಂಡವಾಳಶಾಹಿ ವ್ಯವಸ್ಥೆಯ ಭಾಗವಾಗಿ ಸ್ತ್ರೀ ಶೋಷಣೆ ಹುಟ್ಟಿಕೊಂಡಿದೆ ಎಂದು ಹೇಳುತ್ತಾರೆ. ಹಾಗೂ ಇವರ ಇಡೀ ಚಿಂತನೆಯ ಕೇಂದ್ರವೂ ಕೂಡ ಬಂಡವಾಳಶಾಹಿ ವ್ಯವಸ್ಥೆ ಆಗಿರುವುದು ಕಂಡುಬರುತ್ತದೆ. ಏಂಗಲ್ಸ್‌ರವರು ತಮ್ಮ 'The Caporigin of Family, Private Property and the State' ಎಂಬ ಮಹಾಪ್ರಬಂಧದಲ್ಲಿ ಸ್ತ್ರೀ ಶೋಷಣೆ ಎನ್ನುವುದು ಖಾಸಗಿ ಸಂಪತ್ತಿನ ಗಳಿಕೆಯಿಂದ ಹುಟ್ಟಿಕೊಂಡಿತು ಎಂದು ಪ್ರತಿಪಾದಿಸುತ್ತಾರೆ. ಜೊತೆಗೆ ಮಾರ್ಕ್ಸ್ ಕೂಡಾ ತಮ್ಮ 'The Holy Family' ಎಂಬ ಕೃತಿಯಲ್ಲಿ ಸ್ಪಷ್ಟವಾಗಿ ಸ್ತ್ರೀ ವಿಮೋಚನೆಯನ್ನು ಪ್ರತಿಪಾದಿಸಿದ್ದಲ್ಲದೇ ಹೆಣ್ಣಿನ ವಿಮೋಚನೆ ಕೇವಲ ಮಾನವೀಕರಣದ ಅಳತೆಗೋಲಷ್ಟೇ ಅಲ್ಲ. ಮಾನವತೆ ಎಂಬುದು ಪಶುತ್ವ, ಸಂಸ್ಕೃತಿ, ಪ್ರಕೃತಿ ಎಲ್ಲವನ್ನು ಗೆದ್ದದ್ದು ಎಂದು ತಿಳಿಸುತ್ತಾರೆ.

ಏಂಗಲ್ಸ್ ಸ್ತ್ರೀ-ಪುರುಷರ ನಡುವಿನ ಅಸಮಾನತೆಯನ್ನು ಚರ್ಚಿಸುತ್ತಾ, ಮಹಿಳೆ ಉತ್ಪಾದನೆ ಹಾಗೂ ಆರ್ಥಿಕ ಕ್ಷೇತ್ರದಿಂದ ದೂರ ಉಳಿದಿರುವುದೇ ಆಕೆಯನ್ನು ತುಳಿಯಲು ಮೂಲ ಕಾರಣ ಎನ್ನುತ್ತಾರೆ. ಜೊತೆಗೆ ವಿವಾಹಕ್ಕೂ ಮತ್ತು ಹೆಣ್ಣಿನ ಮೇಲಿನ ಹಿಂಸೆಗೂ ಸಂಬಂಧ ಇದೆ ಎಂದು ಪ್ರತಿಪಾದಿಸುತ್ತಾರೆ. ಏಕಪತ್ನಿತ್ವವನ್ನು ಜಾರಿಗೊಳಿಸುವ ಮೂಲಕ ಹೆಂಡತಿಯನ್ನು ತನ್ನ ಖಾಸಗಿ ಆಸ್ತಿಯೆಂದು ಆಕೆಯ ಮೇಲೆ ಸಂಪೂರ್ಣವಾಗಿ ಹಿಡಿತ ಸ್ಥಾಪಿಸುವಲ್ಲಿ ವ್ಯವಸ್ಥೆ ಯಶಸ್ವಿಯಾಗಿದೆ ಎಂದು ಹೇಳುತ್ತಾರೆ. ಮಾತೃ ಪ್ರಧಾನವಾಗಿದ್ದ ಸಾಮಾಜಿಕ ವ್ಯವಸ್ಥೆಯು ಪಿತೃಪ್ರಧಾನವಾದಾಗ ಮಹಿಳೆಯರು ಪರಾವಲಂಬಿಯಾದರು. ಇದೇ ಅವರ ಶೋಷಣೆಗೆ ಮೂಲ ಕಾರಣವಾಯಿತು ಎಂದು ಹೇಳುತ್ತಾರೆ. ಆದ್ದರಿಂದ ಮಹಿಳೆಯರು ಶೋಷಣೆ, ದೌರ್ಜನ್ಯಗಳಿಂದ ಹೊರ ಬರಬೇಕಾದರೆ ಮನೆಯಿಂದ ಹೊರಬಂದು ದುಡಿಯಬೇಕು ಎನ್ನುತ್ತಾರೆ. ಉದಾರವಾದಿಗಳ ವಿಚಾರದಂತೆ ಮಾರ್ಕ್ಸ್‌ವಾದಿಗಳೂ ಸಹ ಮಹಿಳೆಯರು ಮನೆಯಿಂದ ಹೊರ ಬಂದು ದುಡಿದರೆ ಪುರುಷ ಪ್ರಧಾನ ವ್ಯವಸ್ಥೆಯಿಂದ ಹೊರಬರಲು ಸಾಧ್ಯ ಎನ್ನುತ್ತಾರೆ.

ಇವರ ಹೇಳಿಕೆಗಳನ್ನು ಗಮನಿಸಿದಾಗ ಮಾರ್ಕ್ಸವಾದಿಗಳು ಆರ್ಥಿಕ ಲಾಭತರುವ ಕಾರ್ಯವನ್ನು ಮಾತ್ರ ದುಡಿಮೆ ಎಂದು ಭಾವಿಸಿದಂತೆ ಕಾಣಬರುತ್ತದೆ. ಮಹಿಳೆಯರು ಮನೆಯಲ್ಲಿ ಪುರುಷರಿಗಾಗಿ ಮಾಡುವ ಕೆಲಸಕಾರ್ಯಗಳನ್ನು ದುಡಿಮೆ ಎಂದು ಪರಿಗಣಿಸದೇ ಅಲ್ಲಿಯ ಮಹಿಳಾ ದುಡಿಮೆಯ ಮಾನ್ಯತೆಯನ್ನು ಮುಖ್ಯವಾಹಿನಿಗೆ ತರದೇ ಹೋಗುತ್ತಾರೆ. ಜೊತೆಗೆ ಮಹಿಳೆಯರ ಇಬ್ಬಗೆಯ ಜವಾಬ್ದಾರಿಗಳ ಬಗ್ಗೆ ಇವರು ಗಮನ ಹರಿಸಿದಂತೆ ಕಂಡುಬರುವುದಿಲ್ಲ. ಇವರು, ಪುರುಷರು ಹಂಚಿಕೊಳ್ಳಬೇಕಾದ ಕೆಲಸಗಳ ಬಗ್ಗೆ ಮಾತನಾಡದೆ ಮಹಿಳೆಯರಿಗೆ ನೀವೇ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಿರಿ, ಯಾರು ನಿಮ್ಮನ್ನು ಶೋಷಣೆಗೊಳಪಡಿಸುತ್ತಿಲ್ಲ. ಇದರಿಂದ ಹೊರ ಬನ್ನಿ ಎಂದು ಅತ್ಯಂತ ಸರಳವಾಗಿ ಸಮಸ್ಯೆಗೆ ಪರಿಹಾರ ಸೂಚಿಸಿದಂತೆ ಕಾಣಬರುತ್ತದೆ. ಇಂದು ಅದೆಷ್ಟೋ ಮಹಿಳೆಯರು ಮನೆಯಿಂದ ಹೊರ ಬಂದು ದುಡಿದರೂ ಸಹ ಕೌಟುಂಬಿಕ ದೌರ್ಜನ್ಯಗಳಿಂದ ಮುಕ್ತಿ ಪಡೆಯಲಾಗಿಲ್ಲ. ಕಾರಣ ಪುರುಷ ಪ್ರಧಾನ ವ್ಯವಸ್ಥೆ ತನ್ನ ವಿರುದ್ಧದ ಪ್ರತಿ ಸಂದರ್ಭಕ್ಕೆ ಪರ್ಯಾಯ ತಂತ್ರಗಳನ್ನು ರಚಿಸುತ್ತಲೇ ಬಂದಿದೆ. ಮಹಿಳೆಯರು ಹೊರಗೆ ಹೋಗಿ ದುಡಿದು ಆರ್ಥಿಕ ಗಳಿಕೆ ತಂದಾಗಲೂ ಸಹ ಅವರ ಮೇಲೆ, ಅವರ ಗಳಿಕೆಯ ಮೇಲೆ ಸಂಪೂರ್ಣವಾಗಿ ಹಿಡಿತ ಸಾಧಿಸಿಕೊಂಡಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಮಾರ್ಕ್ಸವಾದಿಗಳು ಇದರಾಚೆಗೂ ತಮ್ಮ ದೃಷ್ಟಿಕೋನ ಹರಿಸಿ ಸಮಸ್ಯೆಗೆ ಸೂಕ್ತ ಪರಿಹಾರ ಸೂಚಿಸುವ ಕಾರ್ಯ ಮಾಡಬೇಕಾಗಿದೆ. ಮಾರ್ಕ್ಸವಾದದ ಮುಂದುವರಿದ ಭಾಗವಾಗಿ ಮಹಿಳೆಯರನ್ನು ದೌರ್ಜನ್ಯದಿಂದ ಹೊರತರುವಲ್ಲಿ ಹೊಸ ತಿರುವೊಂದನ್ನು ಕಂಡುಕೊಳ್ಳಬೇಕಾಗಿದೆ. ಸಮಸ್ಯೆಯ ಮೂಲವನ್ನು ಗುರುತಿಸುವಲ್ಲಿ ಯಶಸ್ವಿಯಾದ ಮಾರ್ಕ್ಸವಾದಿಗಳು ಪರಿಹಾರ ಕಂಡುಕೊಳ್ಳುವಲ್ಲಿ ಸ್ವಲ್ಪ ಮಟ್ಟಿಗೆ ಸಫಲ ಮತ್ತು ಸ್ವಲ್ಪ ಮಟ್ಟಿಗೆ ವಿಫಲರಾಗಿದ್ದಾರೆಂದು ಹೇಳಬಹುದು.

೩.೧.೩. ತೀವ್ರಗಾಮಿ ಸ್ತ್ರೀವಾದ

ಮಹಿಳೆಯರ ಬದುಕಿನ ಬಹುದೊಡ್ಡ ಕ್ರಾಂತಿಕಾರಕ ಘಟ್ಟ ಎಂದರೆ ಅದು ತೀವ್ರಗಾಮಿ ಸ್ತ್ರೀವಾದದ ಉಗಮದ ಸಂದರ್ಭ ಎಂದು ಹೇಳಬಹುದು. ಅದುವರೆಗೂ ಸ್ತ್ರೀ-ಪುರುಷರನ್ನು ನೋಡುತ್ತಿದ್ದ ಬಗೆಯನ್ನು ತೀವ್ರಗಾಮಿಗಳು ಹೊಡೆದು ಹಾಕಿದರು. ಜೈವಿಕ ಹಿನ್ನೆಲೆಯಲ್ಲಿ, ಸಾಂಪ್ರದಾಯಿಕ ಹಿನ್ನೆಲೆಯಲ್ಲಿ ಸ್ತ್ರೀ-ಪುರುಷರನ್ನು ಗುರುತಿಸುತ್ತಿದ್ದ ಬಗೆಯನ್ನು ಇವರು ಅಲ್ಲಗಳೆದರು. ಆ ಕಾರಣಕ್ಕಾಗಿ ಮಹಿಳೆಯರ ಮೇಲೆ ದೌರ್ಜನ್ಯಗಳಾಗುತ್ತಿದ್ದು ಅಂತಹ ಪೂರ್ವಪಿಡಿತ ಕಲ್ಪನೆಗಳಿಂದ ಹೊರಬರಬೇಕೆಂದು ಹೇಳಿದರು.

ತೀವ್ರಗಾಮಿ ಚಿಂತಕಿಯರಲ್ಲೊಬ್ಬರಾದ ಶೂಲಮಿಥ್ ಫೈರ್‌ಸ್ಟೋನ್‌ರವರು ತಮ್ಮ 'The dialectic of Sex' ಎಂಬ ಗ್ರಂಥದಲ್ಲಿ ತಾಯ್ತನದ ಪರಿಕಲ್ಪನೆಯನ್ನು ಸಂಪೂರ್ಣವಾಗಿ ನಿರಾಕರಿಸಿ ಮಾತನಾಡುತ್ತಾರೆ. ಜೈವಿಕ ತಾಯ್ತನವು ಅತಿಯಾದ ಭಾವುಕತೆಯಿಂದ ತುಂಬಿದ್ದು ಹೆಣ್ಣು ಮಕ್ಕಳು ಅದನ್ನು ತಿರಸ್ಕರಿಸುವಂತೆ ಹೇಳುತ್ತಾರೆ. ಇದರಿಂದ ಮಕ್ಕಳು ನನ್ನವೆಂಬ ಭಾವನೆ ಸ್ವಾರ್ಥ, ಆಸೆ ಬುರುಕತನ, ಹೊಟ್ಟೆಕಿಚ್ಚು ಮುಂತಾದ ದುರ್ಗುಣಗಳನ್ನು ಹುಟ್ಟಿಹಾಕುತ್ತದೆ. ಇದರಿಂದ ಗಂಡು ಹೆಣ್ಣನ್ನು ಭಾವುಕಳಾಗಿಸಿ, ತಾಯ್ತನವನ್ನು ಮೂಲವಾಗಿಸಿಕೊಂಡು ದಬ್ಬಾಳಿಕೆ ನಡೆಸುತ್ತಿದ್ದಾನೆ ಎಂದು ಹೇಳುತ್ತಾರೆ.

ಇದರಂತೆ 'ಜೈವಿಕ ತಾಯ್ತನ'ದ ಕಲ್ಪನೆಯ ಬಗ್ಗೆ ಮಾರ್ಜ್ ಪರ್ಸಿಯವರು ಕೂಡಾ ತಮ್ಮ 'Women on the edge times' ಕಾದಂಬರಿಯಲ್ಲಿ ಸಂತಾನೋತ್ಪತ್ತಿ ಕ್ರಿಯೆ ಹೆಣ್ಣಿನಲ್ಲಿನ ವಿಶೇಷ ಗುಣ ಎಂದು ಹೇಳುತ್ತಾರೆ. ಇದನ್ನೇ ಪುರುಷರು ದುರ್ಬಲ ಎಂದು ನೆಪ ಮಾಡುತ್ತಾ ಹೆಣ್ಣುಮಕ್ಕಳನ್ನು ತಮ್ಮ ಅಡಿಯಾಳಾಗಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಈ ಪುರುಷರಿಂದ ಹೊಂದುವ ಸಂತಾನೋತ್ಪತ್ತಿಯ ಬದಲಾಗಿ ಕೃತಕ ಗರ್ಭಧಾರಣೆ ಹೊಂದುವುದು ಸೂಕ್ತ ಎಂದು ಹೇಳುತ್ತಾರೆ. ಈ ನಿಟ್ಟಿನಲ್ಲಿ ಆನ್ ಓಕ್ಲೆಯವರು 'Women Works, The house wife, Past and Present' ಎಂಬ ಕೃತಿಯಲ್ಲಿ ಅತ್ಯಂತ ಸಮರ್ಥವಾಗಿ ತಮ್ಮ ಚಿಂತನೆಗಳನ್ನು ಮಂಡಿಸಿದ್ದಾರೆ. ಹೆಣ್ಣಿಗೆ ತಾಯ್ತನವೇನು ಅನಿವಾರ್ಯವಲ್ಲ. ಮಕ್ಕಳನ್ನು ಬೆಳೆಸುವುದು ಕೇವಲ ತಾಯಿಯ ಜವಾಬ್ದಾರಿಯಲ್ಲ. ಅದು ಎಲ್ಲರ ಜವಾಬ್ದಾರಿಯಾಗಬೇಕು ಎಂದು ಹೇಳುತ್ತಾರೆ. ಹೆಣ್ಣಿನ ಪರಮ ಗುರಿ ಹೆರುವುದು ಎಂಬ ಕಲ್ಪನೆಯನ್ನು ಮೊದಲು ಹೊಡೆದು ಹಾಕಬೇಕೆಂದು ಹೇಳುತ್ತಾರೆ.

ಇನ್ನು ಇತರೆ ತೀವ್ರಗಾಮಿ ಸ್ತ್ರೀವಾದಿಗಳಾದ ಏಡ್ರಿಯ ಅಲೆನ್, ಕೆಟ್ ಮಿಲ್ಲಟ್, ಹ್ಯಾರಿಯಟ್ ಬ್ಲಾಚ್ ಮುಂತಾದವರು ಕೂಡಾ ಹೆಣ್ಣಿನ ಸಂತಾನೋತ್ಪತ್ತಿಯನ್ನೇ ಕೇಂದ್ರವಾಗಿರಿಸಿಕೊಂಡು ತಮ್ಮ ವಿಚಾರಗಳನ್ನು ಮಂಡಿಸುತ್ತಾರೆ.

ಒಟ್ಟಾರೆ ತೀವ್ರಗಾಮಿ ಸ್ತ್ರೀವಾದಿಗಳು ಹೆಣ್ಣಿನ ಜೈವಿಕ ತಾಯ್ತನವನ್ನೆ ನಿರಾಕರಿಸುತ್ತಾರೆ. ಇದು ಎಲ್ಲೋ ಪ್ರಕೃತಿಗೆ ವಿರುದ್ಧವಾದ ಸಂಗತಿ ಎಂದೆನಿಸುತ್ತದೆ. ಇವರ ಪ್ರಕಾರ ಪ್ರಕೃತಿಗೆ ಎದುರಾಗಿ ನಡೆದುಕೊಂಡಿದ್ದೇ ಆದಲ್ಲಿ, ಅಲ್ಲಿ ಆಗುವುದು ಇಡೀ ಮಾನವ ಜನಾಂಗದ ಅವಸಾನವೇ ಹೊರತು ಬೇರೆನೂ ಅಲ್ಲ ಎಂದು ಹೇಳಬಹುದು. ಅಷ್ಟೇ ಅಲ್ಲದೆ ತೀವ್ರಗಾಮಿಗಳು ಜೈವಿಕ ತಾಯ್ತನದಿಂದ ಬಿಡುಗಡೆ ಹೊಂದಿ ತಮಗೆ ಬೇಕಾದಷ್ಟು ಮಕ್ಕಳನ್ನು ಬೇಕಾದಾಗ ಕೃತಕ ಗರ್ಭಧಾರಣೆಯಿಂದ ಪಡೆದುಕೊಳ್ಳಬಹುದೆಂದು ಹೇಳುತ್ತಾರೆ. ಆದರೆ ಅದಕ್ಕೂ ಸಹ ಗಂಡಸರನ್ನೇ ಮೊರೆ ಹೋಗಬೇಕಾಗುತ್ತದೆ ಎಂಬ ಅಂಶವನ್ನು ಇವರು ಮರೆತಂತಿದೆ. ತೀವ್ರಗಾಮಿ ಸ್ತ್ರೀವಾದಿಗಳು ಕಂಡುಕೊಂಡ ಮಹಿಳಾ ಶೋಷಣೆಯ ಅಂಶಗಳೇನೊ ಸತ್ಯವಾಗಿದ್ದು, ಅದಕ್ಕೆ ಕಂಡುಕೊಂಡ ಪರಿಹಾರ ಎಲ್ಲೊ ಮಾನವ ಕುಲಕ್ಕೆ ದಕ್ಕೆಯಾಗುವಂತದ್ದಾಗಿದೆ ಎಂದೆನಿಸುತ್ತದೆ. ಮಾನವ ಕುಲಕ್ಕೆ ಬೇಕಾಗಿರುವುದು ಸಮಾನತೆಯ ಬದುಕೆ ಹೊರತು ಒಬ್ಬರನ್ನೊಬ್ಬರು ಧಿಕ್ಕರಿಸಿ ಬದುಕುವುದಲ್ಲ ಎಂಬ ಅಂಶದತ್ತ ಏಕೋ ತೀವ್ರಗಾಮಿ ಸ್ತ್ರೀವಾದಿಗಳು ಗಮನಹರಿಸಿದಂತೆ ಕಂಡುಬರುವುದಿಲ್ಲ.

೩.೧.೪. ಸಮಾಜವಾದಿ ಸ್ತ್ರೀವಾದ

ಬೇರೆ ಬೇರೆ ಸ್ತ್ರೀವಾದಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳ ಬಗ್ಗೆ ಚರ್ಚಿಸಿದ ವಿಷಯಗಳ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸಮಾಜವಾದಿ ಸ್ತ್ರೀವಾದಿಗಳು ತಮ್ಮ ವಾದವನ್ನು ಮಂಡಿಸಿದಂತೆ ಭಾಸವಾಗುತ್ತದೆ. ಸಮಾಜವಾದಿ ಸ್ತ್ರೀವಾದಿ ಜ್ಯೂಲಿಯಟ್ ಮಿಷಲ್ ರವರು ತೀವ್ರಗಾಮಿ ಸ್ತ್ರೀವಾದದ ವಿಚಾರಗಳನ್ನು ಅಲ್ಲಗಳೆದು ಹೆಣ್ಣು ಕೃತಕ ಗರ್ಭದಾರಣೆಯಿಂದಾಗಿ ಪುರುಷ ಪ್ರಧಾನ ಶೋಷಣೆಯಿಂದ ಹೊರಬರಲು ಸಾಧ್ಯವಿಲ್ಲ, ಬದಲಾಗಿ ಮಹಿಳೆಯರ ಮೂಲಭೂತ ಮಾನಸಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕೆಂದು ಹೇಳುತ್ತಾರೆ. ಜೊತೆಗೆ ಮಾರ್ಕ್ಸವಾದದ

ತಳಹದಿಯನ್ನು ಮುಖ್ಯವಾಗಿಸಿಕೊಂಡು ಬಂಡವಾಳಶಾಹಿಯ ನಿರ್ಮೂಲನೆಯೊಂದಿಗೆ ಪುರುಷ ಪ್ರಧಾನ ಮೌಲ್ಯ ವ್ಯವಸ್ಥೆಯ ನಿರ್ಮೂಲನವಾದಾಗ ಮಾತ್ರ ಸಮಾನತೆಯನ್ನು ಸಾಧಿಸಲು ಸಾಧ್ಯವಾಗುತ್ತದೆ ಎಂದು ಹೇಳುತ್ತಾರೆ. ಸಮಾಜವಾದ ಸ್ತ್ರೀವಾದದ ಕರ್ತೃಗಳಲ್ಲಿ ಮತ್ತೊಬ್ಬರಾದ ಹಾರ್ಟಮನ್‌ರವರೂ ಕೂಡಾ ಮಾರ್ಕ್ಸವಾದಿಗಳ ವಿಚಾರದಂತೆಯೇ ತಮ್ಮ ವಿಚಾರಗಳನ್ನು ಮಂಡಿಸುತ್ತಾರೆ. ಪುರುಷ ಪ್ರಧಾನ ವ್ಯವಸ್ಥೆಯನ್ನು ಬಂಡವಾಳಶಾಹಿಗಳಿಗೆ ಹೋಲಿಸುತ್ತಾರೆ. ಹೇಗೆ ಬಂಡವಾಳಶಾಹಿ ವ್ಯವಸ್ಥೆ ದುಡಿಯುವ ವರ್ಗವನ್ನು ತನ್ನ ಅಡಿಯಲ್ಲಿಟ್ಟುಕೊಂಡು ಹೊರಟಿದೆಯೋ ಹಾಗೆ ಪುರುಷ ಪ್ರಧಾನ ವ್ಯವಸ್ಥೆ ಮಹಿಳೆಯರನ್ನು ತನ್ನ ಅಡಿಯಾಳಾಗಿಸಿಕೊಂಡು ಹೊರಟಿದೆ ಎಂದು ಹೇಳುತ್ತಾರೆ.

ಸಮಾಜವಾದಿ ಸ್ತ್ರೀವಾದಿಗಳಲ್ಲಿ ಮತ್ತೊಬ್ಬರಾದ ಶೀಲಾ ರೋಬಾತಮ್‌ರವರು ಪುರುಷ ನಿರ್ಮಿತ ಎಲ್ಲಾ ನಡಾವಳಿಗಳನ್ನು ಒಡೆದು ಕಟ್ಟುವುದು ಸೂಕ್ತ ಎಂದು ತಮ್ಮ ಕೃತಿಯಲ್ಲಿ ಹೇಳುತ್ತಾರೆ. ಸಾಮಾಜೀಕರಣದ ಮೂಲಕ ಹೆಣ್ಣಿಗೆಂದೇ ರೂಪಿಸಲ್ಪಟ್ಟ ಸಂಸ್ಕೃತಿಯೊಂದಿದ್ದು ಅದನ್ನು ಸ್ಥಾಪಿಸುತ್ತಾ ಹೊರಟಿದ್ದಾರೆ. ಅದರ ಮೂಲಕವೇ ಆಕೆ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದು ಅದು ಆಕೆಯ ಸ್ವಂತ ವ್ಯಕ್ತಿತ್ವವಲ್ಲ, ಬದಲಾಗಿ ನಿರ್ಮಿಸಲ್ಪಟ್ಟ ವ್ಯಕ್ತಿತ್ವ, ಕಾರಣ ಇದರಿಂದ ಹೊರಬಂದು ವಾಸ್ತವದ ಸಂದರ್ಭಕ್ಕನುಗುಣವಾಗಿ ಸಮಾನತೆಯನ್ನು ಸಾಧಿಸುವ ನಿಟ್ಟಿನಲ್ಲಿ ಹೆಣ್ಣಿನ ನಡಾವಳಿ, ಸಂಸ್ಕೃತಿಯನ್ನು ರೂಪಿಸಿಕೊಳ್ಳುವ ಅಗತ್ಯವಿದೆ ಎಂದು ಹೇಳುತ್ತಾರೆ. ಐರಿಷ್ ಯಂಗ್ ಎಂಬ ಮತ್ತೊಬ್ಬ ಸಮಾಜವಾದಿ ಸ್ತ್ರೀವಾದಿ ಲಿಂಗಾಧಾರಿತ ಶ್ರಮವಿಭಜನೆಯೇ ಹೆಣ್ಣಿನ ಶೋಷಣೆಯ ಮೂಲ ಎಂದು ಗುರುತಿಸುತ್ತಾರೆ. ಲೈಂಗಿಕತೆಯನ್ನು ಆಧರಿಸಿ ಶ್ರಮವಿಭಜನೆಗೊಂಡಿದ್ದು, ಇದು ಮಹಿಳೆಯರ ಶೋಷಣೆಗೆ ಮೂಲವಾಯಿತೆಂದು ಗುರುತಿಸುತ್ತಾರೆ. ಈ ಬಗೆಯ ಶ್ರಮವಿಭಜನೆಯಲ್ಲಿ ಅವುಗಳ ಸ್ವರೂಪ, ಪ್ರಮಾಣದಲ್ಲಿ ವರ್ಗದಿಂದ ವರ್ಗಕ್ಕೆ ಕೆಳ ಸಮಾಜದಲ್ಲಿ ಅಥವಾ ಮುಂದುವರೆದ ಸಮಾಜದಲ್ಲಿ ಭಿನ್ನವಾಗಿದ್ದು ಅದರ ಮೂಲ ಒಂದೇ ಎಂದು ಗುರುತಿಸುತ್ತಾರೆ.

ಸಮಾಜವಾದಿ ಸ್ತ್ರೀವಾದದ ಮತ್ತೊಬ್ಬ ಚಿಂತಕರಾದ ಆಲಿಸನ್ ಜ್ಯಾಗರ್ ತಮ್ಮ'Feminist Politics and Human Nature' ಗ್ರಂಥದಲ್ಲಿ ಮಾರ್ಕ್ಸನ ಅನ್ಯಕ್ರಾಂತಿಯ ಪರಿಕಲ್ಪನೆಯನ್ನಿಟ್ಟುಕೊಂಡು ಸ್ತ್ರೀವಾದವನ್ನು ಪ್ರಸ್ತುತಪಡಿಸುತ್ತಾರೆ. ಮಾರ್ಕ್ಸವಾದಿಗಳು ಹೇಳುವಂತೆ ಹೆಣ್ಣಿನ ದೇಹ ಕಾರ್ಮಿಕರದಂತಾಗಿದ್ದು, ಹೆಣ್ಣಿನ ದೇಹದ ಉತ್ಪಾದನೆಯಾದ ಮಕ್ಕಳನ್ನು ಹೆರುವುದು, ಅವರ ಬಸಿರು, ಭ್ರೂಣದ ಮೇಲಿನ ಹಿಡಿತ ಎಲ್ಲದರ ಮೇಲೆ ಬಂಡವಾಳಶಾಹಿಯಂತಹ ಪುರುಷ ಪ್ರಧಾನ ವ್ಯವಸ್ಥೆ ತನ್ನ ನಿಯಂತ್ರಣವನ್ನು ಪಡೆದುಕೊಂಡಿದೆ ಎಂದು ಹೇಳುತ್ತಾರೆ. ಜೊತೆಗೆ ಹೆಣ್ಣಿನ ದೇಹವನ್ನು ವೈದ್ಯಕೀಯ ಕ್ಷೇತ್ರದ ಪ್ರಯೋಗ ಶಾಲೆಯನ್ನಾಗಿಸಿಕೊಂಡು ಎಲ್ಲಾ ಔಷಧಿಗಳನ್ನು ಪ್ರಯೋಗಿಸುತ್ತಲೆ ಇರುತ್ತಾರೆ. ಇದರಿಂದಾಗುವ ಎಲ್ಲಾ ಅಡ್ಡ ಪರಿಣಾಮಗಳನ್ನು ಹೆಣ್ಣು ಮಕ್ಕಳು ಅನಭವಿಸಬೇಕಾಗುತ್ತದೆ ಎಂದು ಹೇಳುತ್ತಾರೆ. ಸಾಮಾಜಿಕ ಸಂಸ್ಥೆಗಳಲ್ಲಿ ಸಂಸ್ಕೃತಿ ಎಂಬ ಹೆಸರಿನಲ್ಲಿ ಶೋಷಿಸುತ್ತಿರುವ ನೆಲೆಗಳನ್ನು ಹುಡುಕಿ ಅವುಗಳನ್ನು ಪರಿಹರಿಸಬೇಕು ಅಂದಾಗ ಮಾತ್ರ ಮಹಿಳೆಯರು ಶೋಷಣೆಯಿಂದ ಮುಕ್ತಿ ಹೊಂದಲು ಸಾಧ್ಯ ಎಂದು ಹೇಳುತ್ತಾರೆ.

ಸಮಾಜವಾದಿ ಸ್ತ್ರೀವಾದಿಗಳು ಕುಟುಂಬ ಮತ್ತು ವಿವಾಹದ ಚೌಕಟ್ಟಿನೊಳಗಡೆ ಮಹಿಳೆಯರ ಮೇಲೆ ಪುರುಷ ಪ್ರಧಾನ ವ್ಯವಸ್ಥೆ ಹಿಡಿತ ಸಾಧಿಸಿರುವುದನ್ನು ಪ್ರತಿಪಾದಿಸುತ್ತಾರೆ. ಇದುವೇ

ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಮೂಲ ಎಂದು ಹೇಳುತ್ತಾರೆ. ಇವರ ಹೇಳಿಕೆಗಳನ್ನು ಗಮನಿಸಿದಾಗ ಬಹುತೇಕ ಸಮಾಜವಾದಿ ಸ್ತ್ರೀವಾದಿಗಳು ಮಾರ್ಕ್ಸವಾದಿಗಳ ವಿಚಾರಗಳನ್ನು ಬಿಡಿ ಬಿಡಿಯಾಗಿಸಿ ಮಂಡಿಸಿದಂತೆ ಕಂಡುಬರುತ್ತದೆ. ಸ್ತ್ರೀವಾದಿ ಶೀಲಾ ರೋಬರವರು ಮಾತ್ರ ಸ್ವಲ್ಪ ಭಿನ್ನವಾದ ವಿಚಾರಧಾರೆಯನ್ನು ಮಂಡಿಸಿದ್ದಾರೆ ಎಂದು ಹೇಳಬಹುದು. ಇವರು ಸಮಾಜದ ನಡುವಳಿಕೆಯನ್ನು ಬದಲಾಯಿಸಬೇಕು ಆಗ ಮಾತ್ರ ಹೆಣ್ಣು ಶೋಷಣೆಯಿಂದ ಹೊರಬರಲು ಸಾಧ್ಯ ಎಂದು ಹೇಳುತ್ತಾರೆ. ಆದರೆ ಈ ಬಗೆಯ ವಾದ ಕೇವಲ ಪ್ರತಿಪಾದನೆಯಲ್ಲಿ ಮುಕ್ತಾಯಗೊಂಡಂತೆ ಭಾಸವಾಗುತ್ತದೆ. ಇತರೆ ಸ್ತ್ರೀವಾದಿಗಳು ಮಾರ್ಕ್ಸವಾದಿಗಳ ಹೆಜ್ಜೆಯನ್ನು ಹಿಂಬಾಲಿಸಿದಂತೆ ಕಂಡರೂ ಸಹ ಸಮಸ್ಯೆಗಳಿಗೆ ಸರಿಯಾದ ಪರಿಹಾರ ಎಲ್ಲಿದೆ ಎಂದು ಸ್ಪಷ್ಟಪಡಿಸುತ್ತಾರೆ. ಹೀಗೆ ಸಮಾಜವಾದಿ ಸ್ತ್ರೀವಾದಿಗಳಲ್ಲಿಯ ಭಿನ್ನ ಅಭಿಪ್ರಾಯಗಳು ಗೊಂದಲಕ್ಕೀಡುಮಾಡುತ್ತವೆ. ಒಟ್ಟಾರೆ ಸಮಾಜವಾದಿ ಸ್ತ್ರೀವಾದಿಗಳು ಇತರೆ ಎಲ್ಲಾ ಸ್ತ್ರೀವಾದಗಳನ್ನು ಅಲ್ಲಗಳೆಯುತ್ತಾ ಮಾರ್ಕ್ಸವಾದವೊಂದನ್ನು ಮಾತ್ರ ಹಿಂಬಾಲಿಸಿರುವುದು ಕಂಡುಬರುತ್ತದೆ.

೩.೧.೫. ಅಸ್ತಿತ್ವವಾದ ಸ್ತ್ರೀವಾದ

ಅಸ್ತಿತ್ವವಾದ ಸ್ತ್ರೀವಾದದ ಪ್ರಮುಖ ಚಿಂತಕಿ ಸಿಮೋನ್ ದ ಬೋವಾರವರು ಹೆಣ್ಣಿನ ಅಸ್ತಿತ್ವದ ಮೂಲಕ ಆಕೆಯ ಶೋಷಣೆಯನ್ನು ಗುರುತಿಸಲು ಪ್ರಯತ್ನಿಸುತ್ತಾರೆ. ಸ್ತ್ರೀಯರ ಶೋಷಣೆಯ ಮೂಲ ಅಡಗಿರುವುದು ಆಕೆ ಪುರುಷನಿಗಿಂತ 'ಭಿನ್ನವಾದವಳು' ಎಂಬ ಕಾರಣಕ್ಕಾಗಿ ಎಂದು ಗುರುತಿಸುತ್ತಾರೆ. ಸ್ತ್ರೀ–ಪುರುಷರಿಗೆ ಇರುವ ಭಿನ್ನ ಅಸ್ತಿತ್ವಗಳೆಂದರೆ 'ಸ್ತ್ರೀ ದೇಹ' ಮತ್ತು 'ಪುರುಷ ದೇಹ'ಗಳ ನಡುವಿನ ಭಿನ್ನತೆ. ಇದುವೇ ಸ್ತ್ರೀ ಮತ್ತು ಪುರುಷರ ನಡುವಿನ ಅಂತರ ಸೃಷ್ಟಿಗೊಳ್ಳಲು ಕಾರಣವಾಯಿತು ಎಂದು ಹೇಳುತ್ತಾರೆ. ಗಂಡಿಗೆ ತನ್ನದೇ ಆದ ಸ್ವಾತಂತ್ರ್ಯ, ಸ್ವಂತಿಕೆ ಹಾಗೂ ಸ್ವತಂತ್ರವಾಗಿ ವ್ಯಕ್ತಿತ್ವ ರೂಪಿಸಿಕೊಳ್ಳುವ ಚಾಕಚಕ್ಯತೆ ಇದೆ. ಆದರೆ ಅದು ಹೆಣ್ಣಿಗೆ ಇಲ್ಲ. ಆದ್ದರಿಂದ ಗಂಡು ಶ್ರೇಷ್ಠನಾದ ಎಂದು ಹೇಳುತ್ತಾರೆ. ಮಾನವ ನಾಗರಿಕತೆಯ ಪ್ರಾರಂಭಿಕ ಹಂತದಲ್ಲಿ ಪುರುಷ ಬೇಟೆಯಾಡಿ ತನ್ನ ಹೊಟ್ಟೆ ಬರಿಸಿಕೊಳ್ಳುವ ಜೊತೆಗೆ ಹೆಣ್ಣಿನ ಹಸಿವನ್ನು ಸಹ ಪೂರೈಸುತ್ತಿದ್ದ. ಸ್ತ್ರೀಯಾದವಳು ಗರ್ಭ ಹೊತ್ತಿದ್ದರಿಂದ ನಿಶಕ್ತಳಾಗಿ ತನ್ನ ಹಸಿವನ್ನು ಪೂರೈಸಿಕೊಳ್ಳಲು ಗಂಡನನ್ನೇ ಅವಲಂಬಿಸಬೇಕಾಗುತ್ತಿತ್ತು. ಆದ ಕಾರಣದಿಂದ ಆಕೆ ಪರಾಧೀನಳಾದಳು ಎಂದು ಸಿಮೋನ್ ದ ಬೋವಾ ಹೇಳುತ್ತಾರೆ.

ಸ್ತ್ರೀಯ ಅಸ್ತಿತ್ವವೇ ಅವಳ ಶೋಷಣೆಗೆ ಮೂಲ ಕಾರಣ ಎನ್ನುವ ಬೋವಾ ಸ್ತ್ರೀ ತನ್ನ ಈ ಪರಿಸ್ಥಿತಿಯಿಂದ ಹೊರಬರಲು ಸಾಧ್ಯ ಎನ್ನುತ್ತಾಳೆ. 'ಸ್ತ್ರೀ ತನ್ನ ಮೇಲೆ ಪುರುಷರಿಂದ ಹೇರಲ್ಪಟ್ಟಿರುವ ಕೃತಕ ಬಂಧನಗಳನ್ನು ಕಿತ್ತೊಗೆದು ತನ್ನದೇ ಆದ ಅಸ್ತಿತ್ವವನ್ನು ಕಂಡುಕೊಳ್ಳಬಹುದು. ಸಾಮಾಜಿಕ ಜೀವನದಲ್ಲಿ ಸಕ್ರಿಯವಾಗಿ ಭಾಗವಹಿಸುವ ಸ್ತ್ರೀಗೆ ಸಾಂಪ್ರದಾಯಿಕ ಬಂಧನಗಳಿಂದ ಹೊರಬರಲು ಸಾಧ್ಯ. ಇದುವರೆಗೆ ಹತ್ತಿಕ್ಕಲಾದ ಅವಳ ಪ್ರತಿಭೆಯನ್ನು ಕ್ರಿಯಾತ್ಮಕವಾದ ದಿಶೆಗಳಲ್ಲಿ ತಿರುಗಿಸಿದಾಗ ಸ್ತ್ರೀ ಕುಲಕಷ್ಟೇ ಅಲ್ಲದೆ ಇಡೀ ಸಮಾಜಕ್ಕೆ ಒಳಿತಾಗುತ್ತದೆ ಎಂದು ಹೇಳುತ್ತಾರೆ. ಇಷ್ಟು ದೀರ್ಘಕಾಲ ಎರಡನೇ ದರ್ಜೆಯ ಸ್ಥಾನದಲ್ಲಿದ್ದ ಸ್ತ್ರೀಯರು ಇನ್ನು ಮುಂದಾದರೂ ತಮ್ಮನ್ನು ಸುತ್ತುವರೆದಿರುವ

ಅನಾನುಕೂಲ ಪರಿಸ್ಥಿತಿಗಳನ್ನು ಮೆಟ್ಟಿ ಪುರುಷರಂತೆ ಸ್ವತಂತ್ರ ಜೀವನವನ್ನು ನಡೆಸುವಂತಾಗಬೇಕು”[೧] ಎಂದು ಸಿಮೊನ್ ದ ಬೋವಾ ಹೇಳುತ್ತಾರೆ.

ಸಿಮೋನ್ ದ ಬೋವಾರ ಪ್ರಕಾರ ಸ್ತ್ರೀ ಮೂಲತಹವಾಗಿ ಪರಾವಲಂಬಿ. ಹುಟ್ಟುತ್ತಲೇ ಆಕೆ ಪುರುಷನಿಗಿಂತ ಭಿನ್ನವಾದವಳು. ಪುರುಷನಿಗಿಂತ ಸ್ತ್ರೀ ಕನಿಷ್ಠ ಎಂದು ಒಪ್ಪಿಕೊಂಡು ತಮ್ಮ ವಾದವನ್ನು ಮಂಡಿಸುತ್ತಾರೆ. ಹೆಣ್ಣನ್ನು ವೈಭವೀಕರಿಸುವುದಿರಲಿ ಕೊನೆ ಪಕ್ಷ ಗಂಡಿನ ಸಮಾನ ನೆಲೆಯಲ್ಲಿಯೂ ಸಹ ಇಟ್ಟು ಕಾಣುವುದಿಲ್ಲ. ಸ್ತ್ರೀ ಗಂಡಿನ ನೆರಳಲ್ಲೇ ಬದುಕುವವಳು ಇದು ಸತ್ಯ. ಆದರೆ ಇದು ಪುರುಷ ಪ್ರಧಾನ ಸಮಾಜ ರೂಪಿತವಾದ್ದದ್ದು. ಇದನ್ನು ಬೋವಾರವರು ಸಹಜವಾದದ್ದು ಎಂದು ಹೇಳುತ್ತಾರೆ. ಗಂಡಿಗೆ ಮಾತ್ರ ಬೇಟೆಗಾರಿಕೆ ಗೊತ್ತು ಎಂದು ಹೇಳುವ ಇವರು, ಮಾನವ ಜನಾಂಗದ ಹುಟ್ಟಿನ ಸಂದರ್ಭದಲ್ಲಿ ಗಂಡು-ಹೆಣ್ಣುಗಳಿಬ್ಬರೂ ತಮ್ಮ ತಮ್ಮ ಹೊಟ್ಟೆಯನ್ನು ತಾವೇ ಬರಿಸಿಕೊಳ್ಳುತ್ತಿದ್ದರು ಎಂಬ ಅಂಶವನ್ನು ಪರಿಗಣಿಸಿದಂತೆ ಕಂಡುಬರುವುದಿಲ್ಲ. ಬೇಟೆಗಾರಿಕೆ ಕೇವಲ ಗಂಡಿನಿಂದ ಬಂದಂತಹದ್ದಲ್ಲ. ಪ್ರಕೃತಿ ಸ್ತ್ರೀ-ಪುರುಷರಿಗಿಬ್ಬರಿಗೂ ಈ ಕಲೆಯನ್ನು ನೀಡಿದ್ದು ಇಬ್ಬರೂ ಇದರಲ್ಲಿ ನುರಿತವರಾಗಿದ್ದಾರೆ. ಆದರೆ ಬೋವಾ ಮಾತ್ರ ರಕ್ತ ಸಿಕ್ತ ಚರಿತ್ರೆ ಕೇವಲ ಗಂಡಿನದ್ದಾಗಿದೆ ಎಂದು ಹೇಳುತ್ತಾರೆ. ಮೊದಲೇ ಹೆಣ್ಣನ್ನು ಪುರುಷನಿಗಿಂತ ಅಶಕ್ತ ಎಂದು ಹೇಳಿದರೆ, ಮಹಿಳೆ ಹೇಗೆ ತಾನೆ ವ್ಯವಸ್ಥೆಯ ಕಪಿಮುಷ್ಠಿಯಿಂದ ಬಿಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಬೋವಾರ ಇಂತಹ ಕಲ್ಪನೆ ಹೇಗೆ ಮಹಿಳೆಯರನ್ನು ಶೋಷಣೆಯಿಂದ ಬಿಡಿಸಿಕೊಳ್ಳಲು ನೆರವಾಗುತ್ತದೆ ಎಂಬುದು ಪ್ರಶ್ನೆಯಾಗಿಯೇ ಉಳಿದುಕೊಳ್ಳುತ್ತದೆ.

೩.೧.೬. ಮನೋವಿಶ್ಲೇಷಣಾತ್ಮಕ ಸ್ತ್ರೀವಾದ

ಮನೋವಲಯದ ಖ್ಯಾತ ಚಿಂತಕ ಸಿಗ್ಮಂಡ್ ಫ್ರಾಯ್ಡ್ ಸಾಂಪ್ರದಾಯಿಕ ಹಿನ್ನೆಲೆಯಲ್ಲಿ ಗಂಡು ಹೆಣ್ಣುಗಳ ಬಗ್ಗೆ ಹೇಳಿಕೆ ನೀಡುತ್ತಾರೆ. ಗಂಡು ಹೆಣ್ಣಿನ ಲೈಂಗಿಕತೆ ಹುಟ್ಟುತ್ತಲೇ ರೂಪುಗೊಂಡಿದ್ದು, ಅವರು ಬೆಳೆದಂತೆ ಹಾರ್ಮೋನ್‌ಗಳ ಬೆಳವಣಿಗೆಯಿಂದ ಗಂಡು ಹೆಣ್ಣುಗಳ ನಡುವಳಿಕೆಗಳು ರೂಪುಗೊಳ್ಳುತ್ತವೆ ಎಂದು ಹೇಳುತ್ತಾರೆ. ಹಾಗೂ ಹೆಣ್ಣಿಗಿಂತ ಗಂಡಿನ ವ್ಯಕ್ತಿತ್ವ, ನಡವಳಿಕೆ ಎಲ್ಲವೂ ಶ್ರೇಷ್ಠ ಎಂದು ಹೇಳುತ್ತಾರೆ. ಈ ಹೇಳಿಕೆ ಸ್ತ್ರೀವಾದಿಗಳನ್ನು ಬಹಳಷ್ಟು ಅಸಮಾಧಾನಕ್ಕೆ ಈಡು ಮಾಡುತ್ತದೆ.

ಇದನ್ನು ವಿರೋಧಿಸಿ ಸ್ತ್ರೀವಾದಿಗಳು ತಮ್ಮ ವಾದವನ್ನು ಮಂಡಿಸುತ್ತಾರೆ. ಹೆಣ್ಣು ಹೆಂಗಸಾಗುವ ಪ್ರಕ್ರಿಯೆ ಸಾಮಾಜೀಕರಣದಿಂದಾಗಿಯೇ ಹೊರತು ಸಹಜವಾದ ಪ್ರಕ್ರಿಯೆ ಅಲ್ಲ ಎಂದು ಮನೋ ವಿಶ್ಲೇಷಣಾತ್ಮಕ ಸ್ತ್ರೀವಾದಿಗಳಾದ ಕೇಟ್‌ಮಿಲ್ಲಟ್, ಶೂಲಮಿಥ್ ಫೈರ್‌ಸ್ಟೋನ್, ಬೆಟ್ಟಿಫ್ರೀಡನ್ ಮೊದಲಾದವರು ಹೇಳುತ್ತಾರೆ. ಫ್ರಾಯ್ಡ್ ಗಂಡಿನ ಅವಯವಗಳು ಶ್ರೇಷ್ಠ, ಹೆಣ್ಣಾದವಳು ಇದನ್ನು ನೋಡಿ ಕೊರಗುತ್ತಾಳೆ. ಗಂಡಿನ ಶಿಶ್ನ ಶ್ರೇಷ್ಠವಾದದ್ದು, ಅದು ನನ್ನಲ್ಲಿ ಇಲ್ಲ ಎಂಬ ಕೀಳರಿಮೆಯನ್ನು ಹೊಂದಿ ತನ್ನ ಶ್ರೇಷ್ಠತೆಯನ್ನು ಕಂಡುಕೊಳ್ಳಲು ತಾಯ್ತನಕ್ಕೆ ಮೊರೆ ಹೋಗುತ್ತಾಳೆ ಎಂದು ಹೇಳುತ್ತಾರೆ. ಫ್ರಾಯ್ಡ್‌ರವರ ಈ ಹೇಳಿಕೆಯನ್ನು ಸ್ತ್ರೀವಾದಿಗಳು ವ್ಯಂಗ್ಯವಾಡುತ್ತಾರೆ. ಫ್ರಾಯ್ಡ್‌ರವರು ಗಂಡಾಗಿರುವ ಕಾರಣದಿಂದ ತನ್ನ ವರ್ಗಕ್ಕೆ ಸೇರಿದವರನ್ನು ಶ್ರೇಷ್ಠ ಎಂದು ಹೇಳುತ್ತಿದ್ದಾರೆ. ಫ್ರಾಯ್ಡ್

ಹೇಳುವ ಗಂಡುತನ, ಹೆಣ್ಣುತನಗಳು ಸಹಜವಾದವುಗಳೋ (ಜೈವಿಕ), ಸಾಮಾಜಿಕವಾದವುಗಳೋ ಅಥವಾ ಸಾಂದರ್ಭಿಕವಾದವುಗಳೋ ಎಂದು ಅರಿಯಲು ಸ್ತ್ರೀವಾದಿಗಳು ಮನೋನೆಲೆಯನ್ನು ಕಂಡುಕೊಳ್ಳುತ್ತಾರೆ.

ಜಾನ್ ಲಕನ್‌ರವರು ಫ್ರಾಯ್ಡ್‌ರ 'ಈಡಿ ಪ್ಲಸ್ ಕಾಂಪ್ಲೆಕ್ಸ್' ಸಿದ್ಧಾಂತವನ್ನು ಎತ್ತಿಕೊಂಡು ಮಾತನಾಡುತ್ತಾ, ಲೈಂಗಿಕ ಬಯಕೆಯ ಬಗ್ಗೆ ವಿವರಿಸುತ್ತಾರೆ. ಹೆಣ್ಣಿಗೆ ತನ್ನ ಬಯಕೆ ಈಡೇರಬೇಕಾದರೆ ಆಕೆ ಗಂಡಿನ ಮೊರೆ ಹೋಗಬೇಕು. ಹಾಗಾಗಿ ಆಕೆಗೆ ಗಂಡಸಿಗೆ ಹೇಗೆ ಬೇಕು ಹಾಗೆ ನಡೆದುಕೊಳ್ಳುವ, ಅವನಿಚ್ಚೇಯಂತೆ ವರ್ತಿಸುವ ಕಾರ್ಯ ಅನಿವಾರ್ಯ. ಆಕೆ ಏನೇ ಮಾಡಿದರು ಅದು ಕೇವಲ ಗಂಡಸಿನಿಂದ ಆಕರ್ಷಣೆ ಹೊಂದಲು ಎಂದು ಹೇಳುತ್ತಾನೆ. ಇಂತಹ ಹೇಳಿಕೆಗಳು ಸ್ತ್ರೀವಾದಿಗಳಲ್ಲಿ ಹೆಚ್ಚು ಚರ್ಚೆಗೆ ಗ್ರಾಸವಾಗುತ್ತವೆ. ಯಾವುದನ್ನು ನಿರ್ಮಿತ ಎಂದು ಸ್ತ್ರೀವಾದಿಗಳು ಹೇಳುತ್ತಾರೋ ಅವುಗಳು ಸಹಜವಾದವುಗಳೆಂದು ಫ್ರಾಯ್ಡ್ ಹಾಗೂ ಆತನ ಸಿದ್ಧಾಂತದ ಬೆಂಬಲಿಗರು ಸ್ಥಾಪಿಸುತ್ತಾ ಹೋಗುತ್ತಾರೆ. ಇದನ್ನು ಒಪ್ಪಿಕೊಳ್ಳದ ಸ್ತ್ರೀವಾದಿಗಳು ಪ್ರತಿವಾದಗಳನ್ನು ಮಾಡುತ್ತಾ ಹೋಗುತ್ತಾರೆ. ಎಲ್ಲಾ ಮನೋವಿಶ್ಲೇಷಣಾತ್ಮಕ ಸ್ತ್ರೀವಾದಿಗಳು ಮಾನವ ಜೀವಿಯ ಲೈಂಗಿಕತೆಯನ್ನೇ ಮೂಲವಾಗಿಸಿ ಕೊಂಡು ತಮ್ಮ ವಾದವನ್ನು ಗಟ್ಟಿಗೊಳಿಸುತ್ತಾ ಹೋಗುತ್ತಾರೆ.

ಈ ವಾದ ಪ್ರತಿವಾದಗಳನ್ನು ಗಮನಿಸಿದಾಗ, ಇವರಿಬ್ಬರ ಸಿದ್ಧಾಂತಗಳು ಹೆಣ್ಣನ್ನು ಹೇಗೆ ಪುರುಷ ಪ್ರಧಾನ ವ್ಯವಸ್ಥೆಯಿಂದ ಹೊರತರಲು ಸಹಾಯಕವಾಗುತ್ತದೆ ಎಂಬುದು ಖಚಿತವಾಗದೇ ಹೋಗುತ್ತದೆ. ಅಲ್ಲದೇ ಇಲ್ಲಿ ಮಹಿಳೆಯರನ್ನು ದೌರ್ಜನ್ಯ, ಶೋಷಣೆಗಳಿಂದ ಹೊರತರುವ ಮಾರ್ಗ ಯಾವುದೆಂಬುವುದು ಸ್ಪಷ್ಟವಾಗದೇ ಹೋಗುತ್ತದೆ.

೩.೧.೭. ಆಧುನಿಕೋತ್ತರ ಸ್ತ್ರೀವಾದ

ಆಧುನಿಕ ಸ್ತ್ರೀವಾದಿಗಳು ಇತರೆ ಎಲ್ಲಾ ಸ್ತ್ರೀವಾದಗಳಿಗಿಂತ ತಮ್ಮ ವಿಚಾರಧಾರೆಯನ್ನು ಭಿನ್ನವಾಗಿ ಮಂಡಿಸುತ್ತಾರೆ. ಇವರು ಹೆಣ್ಣಿನ ಸಮಸ್ಯೆಯನ್ನು ಯಾವುದೇ ಒಂದು ಸೈದ್ಧಾಂತಿಕ ಚೌಕಟ್ಟಿನ ಒಳಗಡೆ ತರದೇ ಪ್ರತಿ ಹೆಣ್ಣಿನ ಅನುಭವ ಭಿನ್ನವಾಗಿದ್ದು ಅದರದ್ದೇ ಆದ ಅನುಭವದ ಹಿನ್ನೆಲೆಯಲ್ಲಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಸೂಕ್ತ ಎಂದು ಹೇಳುತ್ತಾರೆ. ಈ ಸ್ತ್ರೀವಾದದ ಪ್ರಮುಖ ಚಿಂತಕರೆಂದರೆ, ಜಾನ್ ಲಕಾನ್, ಲ್ಯೂಸ್ ಇರಿಗೆರೆ, ಜೂಲಿಯ ಕ್ರಿಸ್ತೇವ, ಮೋನಿಕಾ ವಿಟ್ಟಿಂಗ್, ಡೆರಿಡಾ, ಹೆಲೆನ್ ಸಿಕ್ಸೂ ಮುಂತಾದವರು.

ಇವರು ಹೆಣ್ಣಿಗೆ ಆದೇಶಿಸಿದ ತಾಯ್ತನದ ಬಗ್ಗೆ ಮಾತನಾಡುತ್ತಾರೆ. ಇದುವರೆಗಿನ ಇತಿಹಾಸವನ್ನು ಗಮನಿಸಿ ಈ ಇತಿಹಾಸ ಗಂಡು ನಿರ್ಮಿಸಿದ್ದಾಗಿದೆ. ಹಾಗಾಗಿ ಎಲ್ಲವೂ ಪುರುಷ ಕೇಂದ್ರಿತವಾಗಿ ಮಹಿಳೆ ಪರಾಧೀನಳೆಂಬಂತೆ ಚಿತ್ರಿಸಲಾಗಿದೆ. ಆದ್ದರಿಂದ ಇತಿಹಾಸವನ್ನು ಮಹಿಳಾ ದೃಷ್ಟಿಕೋನದಿಂದ ನೋಡಬೇಕಿದೆ ಎಂದು ಹೇಳುತ್ತಾರೆ. ಹಾಗೂ ಹೆಣ್ಣಿಗೆ ತಾಯ್ತನ ಆದರ್ಶ ಸೂಚಕವಾಗಿರದೇ ಅದು ಆಕೆಯ ಆಯ್ಕೆಯಾಗಬೇಕು ಎಂದು ಚರ್ಚಿಸುತ್ತಾರೆ. ಸಮಾಜದಲ್ಲಿಯ ಲಿಂಗ ತಾರತಮ್ಯ ಧೋರಣೆ ಹೆಣ್ಣು ಗಂಡುಗಳ ನಡುವೆ ತರತಮ ಸೃಷ್ಟಿಗೊಳ್ಳಲು ಕಾರಣ ಎಂದು ಹೇಳುತ್ತಾರೆ. ಆಧುನಿಕೋತ್ತರ ಸ್ತ್ರೀವಾದಿಯಾದ ಜಕ್ ಲಕಾನ್‌ರವರು ಮಗು ಹುಟ್ಟಿದಾಗ ಆಲಿಸುವ ಭಾಷೆಯೇ ಅವರು ಭಿನ್ನವಾಗಿ

ಬೆಳೆಯಲು ಕಾರಣವಾಗಿದೆ ಎಂದು ಹೇಳುತ್ತಾರೆ. ಭಾಷೆಯ ಮೂಲಕ ಸಮಾಜ ನಿರ್ದೇಶಿಸಿದ ಆದೇಶಗಳೊಂದಿಗೆ ಬೆಳೆಯುವ ಗಂಡು ಮಗು ತಂದೆಯೊಂದಿಗೆ ತನ್ನನ್ನು ಗುರುತಿಸಿಕೊಳ್ಳುತ್ತದೆ. ಹಾಗೂ ಅವರಂತೆ ಪುರುಷ ಪ್ರಧಾನ ಓರೆಕೋರೆಗಳನ್ನು ಪಾಲಿಸತೊಡಗುತ್ತದೆ. ಈ ಮೂಲಕ ವ್ಯವಸ್ಥೆ ಸ್ಥಿರವಾಗುತ್ತಾ ಹೋಗುತ್ತದೆ ಎಂದು ಗುರುತಿಸುತ್ತಾರೆ.

ಒಟ್ಟಾರೆಯಾಗಿ ಆಧುನಿಕೋತ್ತರ ಸ್ತ್ರೀವಾದಿಗಳು ಸಮಾಜದ ಬದಲಾವಣೆ ಕುರಿತು ಮಾತನಾಡುತ್ತಾರೆ. ಹೆಣ್ಣು ಯಾವ ಯಾವ ಅಂಶಗಳಲ್ಲಿ ಕೀಳು ಎಂದು ಹೇಳುತ್ತಾರೋ ಆ ಎಲ್ಲಾ ಅಂಶಗಳು ಶ್ರೇಷ್ಠವಾದವುಗಳು ಎಂದು ಮರುವ್ಯಾಖ್ಯಾನ ಮಾಡುವ ಅಗತ್ಯತೆ ಕುರಿತು ಪ್ರಸ್ತಾಪಿಸುತ್ತಾರೆ. ಜೊತೆಗೆ ಭಾಷೆಯು ಮಹಿಳೆಯರನ್ನು ದಮನಿಯವಾಗಿಸುವ ಮತ್ತೊಂದು ಅಂಶವಾಗಿದ್ದು ಅದನ್ನೂ ಸಹ ಬದಲಾವಣೆಗೊಳಿಸಬೇಕೆಂದು ಎಂದು ಹೇಳುತ್ತಾರೆ.

ಆಧುನಿಕೋತ್ತರ ಸ್ತ್ರೀವಾದಿಗಳು ಮಹಿಳೆಯರನ್ನು ದಮನಿಯಗೊಳಿಸುವ ಅಂಶಗಳನ್ನು ಗುರುತಿಸಿ ಅವುಗಳಿಗೆ ಪರಿಹಾರ ಕೊಂಡುಕೊಳ್ಳುವಂತೆ ಸೂಚಿಸುತ್ತಾರೆ ವಿನಃ ಎಲ್ಲಾ ಅಂಶಗಳಿಗೂ ಹೇಗೆ ಪರಿಹಾರ ಕೊಂಡುಕೊಳ್ಳಬೇಕೆಂದು ನಿರ್ದಿಷ್ಟವಾಗಿ ಹೇಳುವುದಿಲ್ಲ. ಉದಾಹರಣೆಗೆ, ಭಾಷೆಯು ಮಹಿಳೆಯರನ್ನು ದಮನಿಯಗೊಳಿಸುವ ಅಂಶವಾಗಿದ್ದು, ಅದನ್ನು ಹೊಸ ಶಬ್ದಗಳ ಬಳಕೆಯಿಂದ ಹೊಡೆದು ಹಾಕಬೇಕು ಎಂದು ಹೇಳುತ್ತಾರೆ. ಆದರೆ ಈಗಾಗಲೇ ಭಾಷೆ ತನ್ನದೇ ಆದಂತಹ ಛಾಪನ್ನು ವ್ಯವಸ್ಥಿತವಾಗಿ ಮೂಡಿಸಿದ್ದು, ಇದರ ಮರುವ್ಯಾಖ್ಯಾನ ಹೇಗಾಗಬೇಕೆಂದು ಹೇಳುವುದಿಲ್ಲ. ಮಹಿಳೆಯರನ್ನು ದೌರ್ಜನ್ಯಗಳಿಂದ ಮುಕ್ತಗೊಳಿಸಬೇಕೆಂದು ಪರಿಹಾರವನ್ನು ಸೂಚಿಸುವ ಆಧುನಿಕೋತ್ತರ ಸ್ತ್ರೀವಾದಿಗಳು ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಸ್ವಲ್ಪ ಹಿಂದುಳಿದಂತೆ ಕಂಡುಬರುತ್ತದೆ.

೩.೧.೮ ಪರಿಸರ ಸ್ತ್ರೀವಾದ

ಹೆಣ್ಣನ್ನು ಪ್ರಕೃತಿಗೆ ಹೋಲಿಸಿ ಮಾತನಾಡುವ ಪರಂಪರೆ ಹಿಂದಿನಿಂದಲೂ ನಡೆದುಬಂದಿದೆ. ಈ ಹಿನ್ನೆಲೆಯಲ್ಲಿ ಪರಿಸರ ಸ್ತ್ರೀವಾದಿಗಳು ಮಾನವನು ಪರಿಸರದ ಮೇಲೆ ಹೇಗೆ ಹಿಡಿತ ಸಾಧಿಸಿದ್ದಾನೋ, ಹಾಗೆ ಹೆಣ್ಣಿನ ಮೇಲೆ ವ್ಯವಸ್ಥೆಯು ಹಿಡಿತ ಸಾಧಿಸಿರುವುದಾಗಿ ಹೇಳುತ್ತಾರೆ. ಫ್ರಾಗಾಯ್ಸ್ ಡ್ಯು ಬೊನ್ ಪರಿಸರ ಸ್ತ್ರೀವಾದದ ಮೊದಲ ನೇತಾರರು. ಇವರು ಪರಿಸರ ಹಾಗೂ ಮಹಿಳೆಯನ್ನು ಏಕಾಕಾರವಾಗಿ ಕಾಣುತ್ತಾರೆ. ಮಾನವ ಪರಿಸರವನ್ನು ತನಗೆ ಹೇಗೆ ಬೇಕೋ ಹಾಗೆ ಬಳಕೆ ಮಾಡಿಕೊಳ್ಳುತ್ತಾ ಅದರ ಮೇಲೆ ತನ್ನ ಹಿಡಿತ ಸಾಧಿಸಿ, ಪ್ರಕೃತಿಯನ್ನು ಹಾಳುಮಾಡುತ್ತಾ ಬಂದಿದ್ದಾನೆ ಎಂದು ಹೇಳುತ್ತಾರೆ. ಈ ಪ್ರಕಾರವಾಗಿ ಮಾನವನು ಹೆಣ್ಣಿನ ಮೇಲೂ ಹಿಡಿತ ಸಾಧಿಸುತ್ತಾ ಆಕೆಯ ಗರ್ಭ, ದೇಹ, ಲೈಂಗಿಕತೆ ಎಲ್ಲದರ ಮೇಲೂ ಹಿಡಿತ ಸಾಧಿಸಿದ್ದಾನೆ ಎಂದು ಪ್ರತಿಪಾದಿಸುತ್ತಾರೆ. ಹೀಗೆ ಎಲ್ಲದರ ಮೇಲೆ ಒಡೆತನವನ್ನು ಸಾಧಿಸಿಕೊಳ್ಳುವುದು ಪುರುಷ ತನ್ನ ಹಕ್ಕು ಎಂದು ಭಾವಿಸಿಕೊಳ್ಳುತ್ತಾ, ಹೆಣ್ಣನ್ನು ವಸ್ತು ಎಂಬಂತೆ ತಿಳಿದು ಆಕೆಯನ್ನೂ ಸಹ ದೌರ್ಜನ್ಯಕ್ಕೊಳ ಪಡಿಸುತ್ತಿದ್ದಾನೆ ಎಂದು ಹೇಳುತ್ತಾರೆ.

ಪರಿಸರ ಮತ್ತು ಹೆಣ್ಣಿನ ಮೇಲಿನ ದೌರ್ಜನ್ಯ ಒಂದಕ್ಕೊಂದು ಪೂರಕವಾಗಿದ್ದು ಇವೆರಡನ್ನು ಅರ್ಥಮಾಡಿ ಕೊಂಡಾಗಲೇ ಶೋಷಣೆಯ ನೆಲೆಯನ್ನು ಅರ್ಥಮಾಡಿಕೊಳ್ಳಲು ಮತ್ತು ಪರಿಹಾರ

ಕೊಂಡುಕೊಳ್ಳಲು ಸಾಧ್ಯ ಎಂದು ಹೇಳುತ್ತಾರೆ. ಹೆಣ್ಣು ಪುರುಷ ಪ್ರಧಾನ ವ್ಯವಸ್ಥೆಯ ಕಪಿಮುಷ್ಠಿಯಿಂದ ಹೊರಬರಬೇಕಾದರೆ ಅವರು ಸ್ತ್ರೀಯಾತ್ಮಕತೆಯನ್ನು ಗಟ್ಟಿಯಾಗಿ ಕಟ್ಟಿಕೊಳ್ಳಬೇಕು ಎಂದು ಪರಿಸರ ಸ್ತ್ರೀವಾದಿಗಳು ಹೇಳುತ್ತಾರೆ. ಇಲ್ಲಿ ಪರಿಸರ ಸ್ತ್ರೀವಾದಿಗಳು ಹೆಣ್ಣು ಗಂಡಿನ ಸ್ವತ್ತಾಗಿರುವ ಕಾರಣದಿಂದ ಆಕೆಯ ಮೇಲೆ ದೌರ್ಜನ್ಯವೆಸಗುತ್ತಿದ್ದಾನೆ ಎಂದು ಹೇಳುತ್ತಾರೆ. ಆದರೆ ವಾಸ್ತವವನ್ನು ಅರಿತಾಗ ಆಕೆಯನ್ನು ಸ್ವತ್ತಾದ ನಂತರ ದೌರ್ಜನ್ಯಕ್ಕೊಳಪಡಿಸುವುದಕ್ಕಿಂತ ಸ್ವತ್ತಾಗಿಸಿಕೊಳ್ಳಬೇಕೆಂಬ, ಸದಾ ತನ್ನ ಅಂಕಿತದಲ್ಲಿ ಇಟ್ಟುಕ್ಕೊಳಬೇಕೆಂಬ ಹಂಬಲದಿಂದ ದೌರ್ಜನ್ಯಕ್ಕೊಳಪಡಿಸುತ್ತಿದ್ದಾರೆ. ತಮ್ಮ ಸ್ವತ್ತಲ್ಲದ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯಗಳು ನಡೆಸುತ್ತಿರುವುದನ್ನು ಗಮನಿಸಿದಾಗ ಪರಿಸರ ಸ್ತ್ರೀವಾದದ ಹೇಳಿಕೆ ಕೊಂಚ ಪಲ್ಲಟಗೊಂಡ ವಾದವಾಗಿ ಕಾಣಬರುತ್ತದೆ.

೩.೧೧. ಕಪ್ಪು ಸ್ತ್ರೀವಾದ

ಕಪ್ಪು ಸ್ತ್ರೀವಾದವು ಅಮೇರಿಕಾದಲ್ಲಿ ಕಪ್ಪು ಮಹಿಳೆಯರು ಬಿಳಿಯರಿಂದ ಅನುಭವಿಸುವ ಹಿಂಸೆ, ನೋವುಗಳಿಂದ ಹುಟ್ಟಿದ್ದಾಗಿದೆ. ಕಪ್ಪು ಮಹಿಳೆಯರು ತಮಗಾದ ನೋವುಗಳನ್ನು ಸಾಹಿತ್ಯದ ಮೂಲಕ ಪ್ರಕಟಪಡಿಸಿದಾಗ, ಎಚ್ಚೆತ್ತ ಬಿಳಿಯ ವರ್ಗದವರು ಕಪ್ಪು ಮಹಿಳೆಯರ ಹಕ್ಕು, ಅವರಿಗಾಗುತ್ತಿರುವ ಹಿಂಸೆಗಳ ವಿರುದ್ಧ ಹೋರಾಟ ನಡೆಸುತ್ತಾರೆ. ಇದನ್ನೇ ಕಪ್ಪು ಸ್ತ್ರೀವಾದ ಎಂದು ಹೇಳಬಹುದು. ಭಾರತದ ಸಂದರ್ಭದಲ್ಲಿ ಕೆಳ ಜಾತಿಯವರೆಂದು ಗುರುತಿಸಿಕೊಳ್ಳುತ್ತಿರುವ ಮಹಿಳೆಯರನ್ನು ಹೇಗೆ ಲೈಂಗಿಕವಾಗಿ ದುರ್‌ಬಳಕೆ ಮಾಡಿಕೊಳ್ಳಲಾಗುತ್ತಿದೆಯೋ, ಅದೇ ರೀತಿ ಅಮೇರಿಕಾ ದೇಶದಲ್ಲಿ ಜನಾಂಗ, ವರ್ಗ ಎಂಬ ಹೆಸರಿನಲ್ಲಿ ಕಪ್ಪು ಮಹಿಳೆಯರನ್ನು ದುರ್‌ಬಳಕೆ ಮಾಡಿಕೊಳ್ಳುತ್ತಿದ್ದರು. ಅವರು ಕೇವಲ ಬಿಳಿಯ ಗಂಡಸರಿಂದ ಮಾತ್ರವಲ್ಲದೆ, ತಮ್ಮ ಜನಾಂಗದ ಪುರುಷರಿಂದಲೂ ಶೋಷಣೆ ಗೊಳಗಾಗುತ್ತಿದ್ದರು. ಕಪ್ಪು ಮಹಿಳೆಯರೆಂದರೆ ಅವರು ಲೈಂಗಿಕ ಬಳಕೆಗಾಗಿಯೇ ಇರುವವರು ಎಂಬಂತೆ ಅವರನ್ನು ಕಾಣಲಾಗುತ್ತಿತ್ತು.

ಕಪ್ಪು ಸ್ತ್ರೀವಾದದ ಚಿಂತಕಿಯಾದ ಫೈರ್‌ಸ್ಟೋನಳು ತನ್ನ 'The dialectic sex' ಎಂಬ ಕೃತಿಯಲ್ಲಿ ಬಿಳಿಯ ಹೆಂಗಸರು ಹಾಗೂ ಕಪ್ಪು ಗಂಡಸರು ಬಿಳಿಯ ಗಂಡಸರಿಂದ ದೌರ್ಜನ್ಯಕ್ಕೊಳಗಾಗುತ್ತಿದ್ದು, ಬಿಳಿಯ ಹೆಂಗಸರು ಕಪ್ಪು ಗಂಡಸರಂತಹ ಸ್ಥಿತಿಯೆ ನಮ್ಮ ಸ್ಥಿತಿ ಎಂದು ಭಾವಿಸತೊಡಗಿದರು ಎಂದು ಹೇಳುತ್ತಾರೆ. ಇವರು ಇಡೀಪ್ಲಸ್ ಕಾಂಪ್ಲೆಕ್ಸ ಕಲ್ಪನೆಯನ್ನು ಇಲ್ಲಿ ಮುಂದಾಗಿಸಿ ಬಿಳಿಯ ಮಹಿಳೆಯರು ತಮ್ಮನ್ನು ಕಪ್ಪು ಗಂಡಸರೊಟ್ಟಿಗೆ ಹೋಲಿಸಿಕೊಳ್ಳುವುದಾಗಿ ಹೇಳುತ್ತಾರೆ. ಜೊತೆಗೆ ಕಪ್ಪು ಮಹಿಳೆಯರ ಮೇಲಾಗುವ ದಮನವನ್ನು ತಡೆಯಲು ಪ್ರಯತ್ನಿಸುತ್ತಾರೆ ಎಂದು ಹೇಳುತ್ತಾರೆ. ಇದರಂತೆ ಭಾರತೀಯ ನೆಲೆಗಟ್ಟಿನ ಸಂದರ್ಭದಲ್ಲಿ ಕೆಳ ಜಾತಿ ಎಂದು ಗುರುತಿಸಲ್ಪಡುತ್ತಿರುವ ಹೆಣ್ಣು ಮಕ್ಕಳು ಅನೇಕ ಬಗೆಯ ದೌರ್ಜನ್ಯಗಳಿಗೆ ಒಳಗಾಗುತ್ತಿರುವುದು ಕಂಡುಬರುತ್ತದೆ. ಈ ವರ್ಗದ ಮಹಿಳೆಯರು ಪುರುಷರಿಂದ ಅದರಲ್ಲೂ ಮೇಲ್ ವರ್ಗದ ಪುರುಷರಿಂದ ಲೈಂಗಿಕ ದೌರ್ಜನ್ಯಗಳಿಗೆ ಒಳಗಾಗುತ್ತಿದ್ದು ಇವರ ಪರವಾದ ಸ್ತ್ರೀವಾದದ ಅಗತ್ಯತೆ ಕಂಡುಬರುತ್ತದೆ. ಇತ್ತಿಚೇಗೆ ಭಾರತೀಯ ನೆಲೆಗಟ್ಟಿನಲ್ಲಿ ದಲಿತ ಸ್ತ್ರೀವಾದ ಹುಟ್ಟಿಕೊಂಡಿದ್ದು, ಅದು ದಲಿತ ಸ್ತ್ರೀಯರ ಪರವಾಗಿ ತನ್ನ ವಿಚಾರಧಾರೆಗಳನ್ನು ಮುಂಚೂಣಿಗೆ ತರುತ್ತಿದೆ.

೩.೧.೧೦. ಸಾಂಸ್ಕೃತಿಕ ಸ್ತ್ರೀವಾದ

ಸಾಂಸ್ಕೃತಿಕ ಸ್ತ್ರೀವಾದವು ತೀವ್ರಗಾಮಿ ಸ್ತ್ರೀವಾದ ಮುಂದುವರೆದ ಭಾಗವೆಂದು ಹೇಳಬಹುದು. ಸಮಾಜ ಈಗಾಗಲೇ ಗಂಡು-ಹೆಣ್ಣಿಗೆ ಭಿನ್ನ ಗುಣನಡಾವಳಿಗಳನ್ನು ನೀಡಿ, ಗಂಡಿನ ನಡಾವಳಿಯೇ ಶ್ರೇಷ್ಠವಾದದ್ದು ಎಂದು ಸ್ಥಾಪಿಸಿದೆ. ಹಾಗೂ ಹೆಣ್ಣಿನ ಗುಣ ನಡಾವಳಿಗಳು ಎರಡನೇ ದರ್ಜೆಯವೆಂದು ಹೇಳುತ್ತದೆ. ಸಾಂಸ್ಕೃತಿಕ ಸ್ತ್ರೀವಾದಿಗಳು ಇದನ್ನೆ ಮುಖ್ಯವಾಗಿಸಿಕೊಂಡು ಈಗಾಗಲೇ ಸಮಾಜ ಏನನ್ನು ಸ್ಥಾಪಿಸಿದೆಯೋ ಆ ಎಲ್ಲಾ ಹೆಣ್ಣಿನ ಗುಣ ನಡಾವಳಿಗಳು ಗಂಡಿನ ನಡಾವಳಿಗಿಂತ ಶ್ರೇಷ್ಠ ಎಂದು ಹೇಳುತ್ತಾರೆ. ಹೆಣ್ಣನ್ನು ತಾಯ್ತನ, ಭಾವನಾತ್ಮಕ ನೆಲೆಗಳಿಗೆ ಸೀಮಿತಗೊಳಿಸಿ ಗಂಡಿನ ಬೌದ್ಧಿಕತೆಯೇ ಶ್ರೇಷ್ಠ ಎಂದು ಹೇಳುವ ಸಾಮಾಜಿಕ ನೀತಿಗಳ ವಿರುದ್ಧ ಸಿಡಿಕಾರುತ್ತಾರೆ. ಹೆಣ್ಣಿನಿಂದ ನಿರೀಕ್ಷಿಸುವ ಗುಣ ಮೌಲ್ಯಗಳಿಂದ ಹೆಣ್ಣು ತನ್ನನ್ನು ತಾನು ಬಿಡಿಸಿಕೊಂಡು, ನೈಸರ್ಗಿಕವಾಗಿ ತನ್ನ ದೌರ್ಬಲ್ಯಗಳೆಂದು ಹೇಳಲ್ಪಡುತ್ತಿರುವ ಗುಣಲಕ್ಷಣಗಳು ವಿಶಿಷ್ಠತೆಯ ಸಂಕೇತಗಳೆಂದು ತಿಳಿದು ತನ್ನ ಶ್ರೇಷ್ಠತೆಯನ್ನು ಸಾಧಿಸಿಕೊಳ್ಳುವುದಾಗಿ ಹೇಳುತ್ತಾರೆ.

ಲೆಸ್ಬಿಯನ್ ಸ್ತ್ರೀವಾದಿಗಳಾದ ಆಡ್ರಿಯನ್ ರೀಚ್ ಮತ್ತು ಮೇರಿ ಡಾಲಿರವರು ಸಾಂಸ್ಕೃತಿಕ ಸ್ತ್ರೀವಾದಿಗಳಾಗಿ ತಮ್ಮ ವಿಚಾರಗಳನ್ನು ಮಂಡಿಸುತ್ತಾರೆ. ಹೆಣ್ಣು ದೈಹಿಕವಾಗಿ ಪಡೆದಿರುವ ಋತುಚಕ್ರ, ಗರ್ಭಧಾರಣೆ, ಹೆರುವಿಕೆ, ಹಾಲುಣಿಸುವಿಕೆ ಎಲ್ಲವೂ ಹೊಸದೊಂದು ಅನುಭವ. ಗಂಡಿಗೆ ಸಾಧ್ಯವಾಗದ ಈ ಅನುಭವಗಳು ಹೆಣ್ಣಿಗೆ ದಕ್ಕಿದುದರಿಂದ ಆ ವಿಚಾರವಾಗಿ ಆಕೆ ಹೆಮ್ಮೆಪಡಬೇಕೆ ವಿನಃ ಅವುಗಳನ್ನು ನ್ಯೂನ್ಯತೆಗಳೆಂದು ಭಾವಿಸಿಕೊಳ್ಳದಿರುವಂತೆ ಹೇಳುತ್ತಾರೆ. ಮೇರಿ ಡಾಲಿಯವರು, ಸಾಂಸ್ಕೃತಿಕ ಸ್ತ್ರೀವಾದಿಗಳು ಹೆಣ್ಣಿನ ಮಾತೃತ್ವದ ಬಗ್ಗೆ ಬೇಸರಪಟ್ಟುಕೊಳ್ಳುವುದಿಲ್ಲ. ಬದಲಾಗಿ ಅದೊಂದು ವಿಶಿಷ್ಠ ಮತ್ತು ವಿಶೇಷ ಅನುಭವ ಎಂದು ಹೇಳುತ್ತಾರೆ. ಇಡೀ ಮಾನವ ಕುಲದ ಉಳಿವಿಗೆ, ಬೆಳವಣಿಗೆಗೆ ಕಾರಣವಾದ ಈ ಅಂಶವೇ ಶ್ರೇಷ್ಠ ಎಂದು ಹೇಳುತ್ತಾರೆ. ಆದರೆ ಪುರುಷರು ಈ ಬಗ್ಗೆ ಹಲವಾರು ಆಪಾದನೆಗಳನ್ನು ಮಾಡುತ್ತಾ ಹೆಣ್ಣನ್ನು ಮುಖ್ಯವಾಹಿನಿಗೆ ತರದೇ ಹೋಗುತ್ತಾರೆ ಎಂದು ಹೇಳುತ್ತಾರೆ.

ಸಾಂಸ್ಕೃತಿಕ ಸ್ತ್ರೀವಾದಿಗಳು ಹೆಣ್ಣಿಗೆ ಈಗಾಗಲೇ ನೀಡಲ್ಪಟ್ಟಿರುವ ವಾತ್ಸಲ್ಯ, ಮಮತೆ, ತಾಯ್ತನದ ಅನುಭವ ಎಲ್ಲವೂ ಸಹಜವಾದವುಗಳು. ಅವು ಹೆಣ್ಣಿಗೆ ವಿಶೇಷವಾದ ಗುಣಗಳಾಗಿವೆ. ಅವುಗಳ ನೆಲೆಯಲ್ಲಿಯೇ ಸ್ತ್ರೀ ತನ್ನ ಚಹರೆಯನ್ನು ವಿಶಿಷ್ಟಗೊಳಿಸಿಕೊಳ್ಳಬೇಕು ಎಂದು ಹೇಳುತ್ತಾರೆ. ಆದರೆ ಇತರೆ ಸ್ತ್ರೀವಾದಿಗಳು ಸಾಂಸ್ಕೃತಿಕ ಸ್ತ್ರೀವಾದಿಗಳ ಸಿದ್ಧಾಂತಗಳನ್ನು ಪ್ರಶ್ನಿಸುತ್ತಾರೆ. 'ತಾಯ್ತನ'ದ ವೈಭವೀಕರಣವನ್ನು ಎಲ್ಲರೂ ದಿಕ್ಕರಿಸುತ್ತಾರೆ. ಸಾಂಸ್ಕೃತಿಕ ಸ್ತ್ರೀವಾದಿಗಳು ಅದನ್ನೇ ಶ್ರೇಷ್ಠ ಎಂದು ಹೇಳುವ ಮೂಲಕ ಲೈಂಗಿಕ ಭೇದವನ್ನು ಒಪ್ಪಿಕೊಂಡಂತೆ ಕಾಣುತ್ತದೆ ಎಂದು ಹೇಳುತ್ತಾರೆ. ಇದಕ್ಕೆ ಮಹಾಶ್ವೇತಾದೇವಿಯ 'ಸ್ತನದಾಯಿನಿ' ಕಥೆಯನ್ನು ಉದಾಹರಣೆಯಾಗಿ ನೀಡುತ್ತಾರೆ. "ಸ್ತನದಾಯಿನಿ ಕಥೆಯ ಯಶೋಧ ತನ್ನ ಕುಟುಂಬದ ನಿರ್ವಹಣೆಗೆ ಶ್ರೀಮಂತ ಹಸುಗೂಸುಗಳಿಗೆ ಹಾಲೂಡುವ ಕಾಯಕದಲ್ಲಿ ನಿರತಳಾಗಿದ್ದಾಳೆ. ಮಕ್ಕಳಿಗೆ ಹಾಲೂಡಬೇಕಾದ ಕಾರಣದಿಂದ ತನ್ನ ಮಡಿಲಲ್ಲಿ ತನ್ನದೆ ಆದ ಹಸುಗೂಸೊಂದು ಇದ್ದೆ ಇರಬೇಕಾದ ಅನಿವಾರ್ಯತೆಯಿದೆ. ಇದೆ ನೆಪವಾಗಿ ಗಂಡನಿಗೆ ನಿತ್ಯ

ಲೈಂಗಿಕ ಬಳಕೆಗೊಳಗಾಗುತ್ತಾಳೆ. ಶ್ರೀಮಂತರು ಹಾಗೂ ಗಂಡ ಇವರಿಬ್ಬರ ಶೋಷಣೆಗೂ ಅವಳ 'ಮಾತೃತ್ವ' ಬಳಕೆಯಾಗುತ್ತದೆ. ಹೀಗಾಗಿ 'ತಾಯ್ತನ' ಹೆಣ್ಣಿನ ಅನನ್ಯತೆ ಎಂಬ ಕಾರಣಕ್ಕೆ ಅದನ್ನು ಒಪ್ಪಿಕೊಳ್ಳಲೇಬೇಕು. ಸಾಂಸ್ಕೃತಿಕ ಸ್ತ್ರೀವಾದಿಗಳ ನಿಲುವನ್ನು ಇತರ ಸ್ತ್ರೀವಾದಿಗಳು ಒಪ್ಪಿಕೊಳ್ಳುವುದಿಲ್ಲ ಅವರ ಪ್ರಕಾರ'ತಾಯ್ತನ' ವಿಜೃಂಭಣೆಯ ವಿಷಯವೇನೂ ಅಲ್ಲ."[೨]

ಮಹಿಳೆಯರು ಪುರುಷ ಪ್ರಧಾನ ವ್ಯವಸ್ಥೆಯಿಂದ ಹೊರಬರಬೇಕೆಂದು ಸಾಂಸ್ಕೃತಿಕ ಸ್ತ್ರೀವಾದಿಗಳು ಪ್ರತಿಪಾದಿಸುವ ಸಿದ್ಧಾಂತದ ವಿರುದ್ಧವಾಗಿ ಇತರೆ ಸ್ತ್ರೀವಾದಿಗಳು ಹೇಳುವಂತೆ ತಾಯ್ತನದ ವೈಭವೀಕರಣ ಅಷ್ಟೊಂದು ಸೂಕ್ತವಾದ ಪರಿಹಾರ ಅಲ್ಲ. ಎಂದೆನಿಸುತ್ತದೆ. ಇತರೆ ಸ್ತ್ರೀವಾದಿಗಳು ಮಹಾಶ್ವೇತಾದೇವಿಯ 'ಸ್ತನದಾಯಿನಿ' ಕಥೆಯನ್ನು ಉದಾಹರಣೆಯಾಗಿ ನೀಡುತ್ತಾರೆ. ಈ ಉದಾಹರಣೆ ಕೇವಲ ಒಂದು ಹೆಣ್ಣಿನ ಜೀವನಕ್ಕೆ ಸೀಮಿತವೆನಿಸುತ್ತದೆ. ಆದರೆ ಸ್ತ್ರೀವಾದಿಗಳು ಗರ್ಭ ಇದ್ದು ಹೆರುವ ಸಾಮರ್ಥ್ಯ ಇಲ್ಲದಿರುವ ಅದೆಷ್ಟೋ ಬಹುಸಂಖ್ಯಾತ ಮಹಿಳೆಯರ ಬಗ್ಗೆ ಗಮನಹರಿಸಿದಂತೆ ಕಾಣಬರುವುದಿಲ್ಲ. ತಾಯ್ತನದ ಕೊಂಡಾಟದಲ್ಲಿ ತಾಯಿ ಆಗದಿರುವ ಅನೇಕ ಮಹಿಳೆಯರು ಮತ್ತೆ ವ್ಯವಸ್ಥೆಯ ಕಪಿಮುಷ್ಠಿಯೊಳಗಡೆ ಸಿಲುಕಿ ನರಳುವಂತಾಗುತ್ತದೆ. ಆದ್ದರಿಂದ ಸಾಂಸ್ಕೃತಿಕ ಸ್ತ್ರೀವಾದಿಗಳು ಹೆಣ್ಣಿನ ತಾಯ್ತನ, ಮಮಕಾರವನ್ನು ಕೊಂಡಾಡದೆ ಮಹಿಳಾ ವಿಮೋಚನೆಗಾಗಿ ಬೇರೆ ಭಿನ್ನವಾದ ಮಾರ್ಗವನ್ನು ಕಂಡುಕೊಂಡಿದ್ದರೆ ಸೂಕ್ತ ಎನಿಸುತ್ತಿತ್ತು.

೩.೧.೧೧. ಭಾರತೀಯ ಸ್ತ್ರೀವಾದ

ಸ್ತ್ರೀವಾದವೆಂದರೆ ಸ್ತ್ರೀಪರವಾದಂತಹ ಒಂದು ವಾದ. ಈ ಹಿನ್ನೆಲೆಯಲ್ಲಿ ಭಾರತೀಯ ನೆಲೆಗಟ್ಟಿನ ಸಂದರ್ಭದಲ್ಲಿ ಸ್ತ್ರೀವಾದವನ್ನು ವಿವರಿಸುವುದಾದರೆ, ಇದನ್ನು ೧೭ ಮತ್ತು ೧೮ನೇ ಶತಮಾನಗಳ ಸಮಾಜ ಸುಧಾರಣಾ ಚಳುವಳಿಗಳ ಮೂಲಕ ಗುರುತಿಸಬಹುದಾಗಿದೆ. ಈ ಸ್ತ್ರೀವಾದದ ಹುಟ್ಟಿಗೆ ಇಂತವರೇ ಪ್ರಮುಖರು ಎಂದು ಹೇಳಲಾಗದು. ಏಕೆಂದರೆ ಭಾರತೀಯ ಮಹಿಳೆಯರ ವಿರುದ್ಧದ ದಮನಕಾರಿ ನೀತಿಗಳನ್ನು ಹತ್ತಿಕ್ಕುವಲ್ಲಿ ಅನೇಕ ಸುಧಾರಣಾವಾದಿಗಳು ಶ್ರಮಿಸಿದ್ದಾರೆ. ಹಾಗೂ ಇಂದಿಗೂ ಶ್ರಮಿಸುತ್ತಲೇ ಇದ್ದಾರೆ. ಆದರೆ ಮಹಿಳಾ ಪರವಾಗಿ ಅಥವಾ ಮಹಿಳೆಯರನ್ನು ದೌರ್ಜನ್ಯಗಳಿಂದ ಹೊರತರುವಲ್ಲಿ ಪ್ರಮುಖ ಹೋರಾಟದ ನೀತಿ ತಲೆದೋರಿದ್ದು ರಾಜಾರಾಮ್ ಮೋಹನರಾಯ್, ಈಶ್ವರ ಚಂದ್ರ ವಿದ್ಯಾಸಾಗರ, ಸ್ವಾಮಿ ದಯಾನಂದ ಸರಸ್ವತಿ, ಜ್ಯೋತಿ ಬಾ ಫುಲೆಯವರಂತಹ ಸುಧಾರಣಾವಾದಿಗಳಿಂದ ಎಂದು ಹೇಳಬಹುದು. ಇವರೆಲ್ಲರೂ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಭಾರತೀಯ ಮಹಿಳೆಯರು ಅನುಭವಿಸುತ್ತಿದ್ದ ಸತಿ ಆಚರಣೆ, ಬಾಲ್ಯ ವಿವಾಹ, ಸ್ತ್ರೀ ಶಿಕ್ಷಣ, ವಿಧವಾ ಪುನರ್ ವಿವಾಹ ಇಂತಹ ಹಲವಾರು ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಪಟ್ಟರು. ಅಲ್ಲದೇ ಕಾನೂನುಗಳ ಮೂಲಕ ಅವುಗಳಿಗೆ ಪರಿಹಾರವನ್ನು ಸಹ ಕಂಡುಕೊಂಡರು.

ಇದನ್ನು ಗಮನಿಸಿದಾಗ ಭಾರತೀಯ ಸ್ತ್ರೀವಾದವು ಮಹಿಳೆಯರ ಸಮಸ್ಯೆಗಳನ್ನು ಗುರುತಿಸಿ, ಅವುಗಳಿಗೆ ಪರಿಹಾರವನ್ನು ಕಾನೂನಿನ ಮೂಲಕ ಬಗೆಹರಿಸಿಕೊಳ್ಳುವ ಹಿನ್ನೆಲೆಯಲ್ಲಿ ತನ್ನ ಅಸ್ತಿತ್ವವನ್ನು ಪಡೆದುಕೊಂಡಿತು ಎಂದು ಹೇಳಬಹುದು. ಈ ನಿಟ್ಟಿನಲ್ಲಿ ಮಹಿಳೆಯರ ಪರವಾಗಿ ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯ ನಂತರದಲ್ಲಿ ಹಲವಾರು ಸಮಸ್ಯೆಗಳ ಬಗ್ಗೆ ಹೋರಾಟ ನಡೆಸಿ

ಪರಿಹಾರ ಕಂಡುಕೊಳ್ಳಲಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಬಾಲ್ಯ ವಿವಾಹ ನಿಷೇಧ, ಸತಿ ಪದ್ಧತಿ ನಿಷೇಧ, ಹೆಣ್ಣಿನ ಶಿಕ್ಷಣಕ್ಕೆ ಮಾನ್ಯತೆ, ವಿಧವಾ ಪುನರ್ ವಿವಾಹಕ್ಕೆ ಮಾನ್ಯತೆ, ಹೀಗೆ ಇನ್ನೂ ಹಲವಾರು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಂಡರೆ, ಸ್ವಾತಂತ್ರ್ಯ ನಂತರದಲ್ಲಿ ಮಹಿಳೆಯರ ಆರ್ಥಿಕ ಸಬಲತೆಗಾಗಿ ಆಸ್ತಿ ಹಕ್ಕು, ಜೀವನಾಂಶ, ಹೆಣ್ಣು ಭ್ರೂಣ ಹತ್ಯೆ ನಿಷೇಧ, ಶಿಶು ಹತ್ಯೆ ನಿಷೇಧ, ಸಮಾನ ಶಿಕ್ಷಣಕ್ಕೆ ಅವಕಾಶ, ವರದಕ್ಷಿಣೆ ನಿಷೇಧ, ದೇವದಾಸಿ ಪದ್ಧತಿ ನಿರ್ಮೂಲನೆ, ಕೌಟುಂಬಿಕ ಹಿಂಸೆ ತಡೆ ಕಾಯ್ದೆ ಹೀಗೆ ಅನೇಕ ಕಾನೂನುಗಳನ್ನು ಮಹಿಳೆಯರ ಪರವಾಗಿ ಪರಿಹಾರೋಪಾಯವಾಗಿ ಕಂಡುಕೊಂಡಿರುವುದು ಕಾಣಬರುತ್ತದೆ.

ಇಷ್ಟಲ್ಲದೇ ಚಳುವಳಿಗಳು, ಜಾಗೃತಿ ಕಾರ್ಯಕ್ರಮಗಳು, ಮಹಿಳಾ ಪರ ಹೋರಾಟಗಳು ಹೀಗೆ ಹಲವಾರು ಮಾರ್ಗಗಳನ್ನು ಭಾರತೀಯ ಸ್ತ್ರೀವಾದದ ಹಿನ್ನೆಲೆಯಲ್ಲಿ ಗುರುತಿಸಬಹುದಾಗಿದೆ. ವಿಪರ್ಯಾಸವೆಂದರೆ, ಸಾಮಾಜಿಕ ವ್ಯವಸ್ಥೆ ಕಾನೂನುಗಳನ್ನೂ ಸಹ ಲೆಕ್ಕಿಸದೆ ತನ್ನ ಕ್ರೌರ್ಯವನ್ನು ಪ್ರದರ್ಶಿಸುತ್ತಿರುವುದು ನಿಜಕ್ಕೂ ಬೇಸರದ ಸಂಗತಿಯಾಗಿದೆ. ಹೀಗೆಂದ ಮಾತ್ರಕ್ಕೆ ಕಾನೂನುಗಳು ನಿಷ್ಪ್ರಯೋಜಕ ಎಂದೇನಲ್ಲ. ಆದರೆ ಅವುಗಳನ್ನು ಬಳಸಿಕೊಳ್ಳದಂತೆ ವ್ಯವಸ್ಥೆ ನಿರ್ಮಿಸಿರುವ ಬಲೆಯಲ್ಲಿ ಮಹಿಳೆಯರು ಸಿಲುಕಿ ತಮಗಾಗುತ್ತಿರುವ ಹಿಂಸೆಯಿಂದ ಹೊರಬರಲು ಸಾಧ್ಯವಾಗದೇ ಹೋಗಿದೆ. ಭಾರತೀಯ ಸ್ತ್ರೀವಾದ ಆಯಾ ಸಮಸ್ಯೆಯ ಹಿನ್ನೆಲೆಯಲ್ಲಿ ಮಹಿಳೆಯರ ನೋವುಗಳನ್ನು ಅರಿತು ಅದಕ್ಕೆ ಪರಿಹಾರ ಕಂಡುಕೊಂಡಿದ್ದರೂ ಸಹ ಅವು ಸರಿಯಾಗಿ ಸದ್ಬಳಕೆ ಆಗದಿರುವುದು ನಿಜಕ್ಕೂ ಬೇಸರದ ಸಂಗತಿಯಾಗಿದೆ.

೩.೧.೧೨. ಅಧ್ಯಯನ ಕಂಡುಕೊಂಡ ಸ್ತ್ರೀವಾದದ ಭಿನ್ನ ನೆಲೆ

ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ ಎಂಬುದು ಪುರುಷ ಪ್ರಧಾನತೆಯ ಉಳಿವಿಗಾಗಿ ವ್ಯವಸ್ಥೆ ನಿರ್ಮಿಸಿಕೊಂಡ ಬಹುದೊಡ್ಡ ಅಸ್ತ್ರವಾಗಿದೆ. ಪುರುಷ ಪ್ರಧಾನತೆಯನ್ನು ಸಾರ್ವಜನಿಕವಾಗಿ ಸ್ಥಾಪಿಸಲು ಹೊರಟಿದ್ದಾದಲ್ಲಿ ಬಹಳಷ್ಟು ಪ್ರತಿಭಟನೆಗಳನ್ನು ಎದುರಿಸಬೇಕಾಗುತ್ತಿತ್ತು. ಆದ ಕಾರಣದಿಂದ ಪುರುಷರು ಮೊದಲು ಕುಟುಂಬದೊಳಗೆ ಹಲವಾರು ತಂತ್ರಗಳನ್ನು ರೂಪಿಸಿದರು. ಇದರ ಅರ್ಥ ಸಾರ್ವಜನಿಕ ವಲಯದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯಗಳು ನಡೆಯುತ್ತಿಲ್ಲ ಎಂದೇನಲ್ಲ. ಆದರೆ ವ್ಯವಸ್ಥೆ ತನ್ನ ಉಳಿವಿಗಾಗಿ ಮೊದಲು ಕುಟುಂಬವನ್ನು ಕೇಂದ್ರವಾಗಿರಿಸಿಕೊಂಡಿರುವುದನ್ನ ಕಾಣಬಹುದಾಗಿದೆ. ಕುಟುಂಬದೊಳಗೆ ಮಹಿಳೆಯರಿಗೆ ಚೌಕಟ್ಟೊಂದನ್ನು ನಿರ್ಮಿಸುವುದರ ಜೊತೆಜೊತೆಗೆ ಹೊರಗೆ ಹೋಗಿ ದುಡಿಯುತ್ತೇನೆಂಬ ಮಹಿಳೆಯರ ವಿರುದ್ಧವೂ ಹಲವಾರು ತಂತ್ರಗಳನ್ನ ರೂಪಿಸಿ, ಮಹಿಳೆಯರಿಗೆ ಮನೆಯ ಒಳಗೂ ಹೊರಗೂ ಎಲ್ಲಾ ಕಡೆ ದೌರ್ಜನ್ಯಗಳು ನಡೆಯುವಂತೆ ಮಾಡಿದೆ. ಇದನ್ನು ಗಮನಿಸಿದಾಗ ಕುಟುಂಬದೊಳಗಡೆ ಮಹಿಳೆಯರ ವಿರುದ್ಧದ ದೌರ್ಜನ್ಯವನ್ನು ಒಪ್ಪಿತವಾಗಿಸುತ್ತಾ ಸ್ಥಾಪಿತಗೊಳಿಸಿರುವುದು ಕಂಡುಬರುತ್ತದೆ.

ಇದರಿಂದಾಗಿ ಬಹುತೇಕ ಎಲ್ಲಾ ಸ್ತ್ರೀವಾದಿಗಳು ಮಹಿಳಾ ಶೋಷಣೆಯನ್ನು ಮುಖ್ಯವಾಗಿ ಕುಟುಂಬವನ್ನು ಕೇಂದ್ರವಾಗಿರಿಸಿಕೊಂಡು ಮಾತನಾಡುತ್ತಾರೆ. ಪುರುಷ ಪ್ರಧಾನತೆ ತನ್ನ ಉಳಿವಿಗಾಗಿ ಹಲವಾರು ಬಗೆಯ ಹಿಂಸೆಗಳನ್ನು ಮಹಿಳೆಯರ ಮೇಲೆ ಸ್ಥಾಪಿಸುತ್ತಾ ಬಂದಿದೆ. ಇದನ್ನೇ

ಮೂಲವಾಗಿಸಿಕೊಂಡು ಸ್ತ್ರೀವಾದಗಳು ತಮ್ಮ ತಮ್ಮ ಕಾಲ ಸಂದರ್ಭಗಳ ಹಿನ್ನೆಲೆಯಲ್ಲಿ ಸಮಸ್ಯೆಗಳನ್ನು ಮೂಲವಾಗಿಟ್ಟು ಕೊಂಡು ಅವುಗಳನ್ನು ಬಗೆಹರಿಸುವ ಮಾರ್ಗ ಕಂಡುಕೊಂಡಿದ್ದಾರೆ.

ಉದಾರವಾದಿ ಸ್ತ್ರೀವಾದಿಗಳು ಆರ್ಥಿಕತೆಯನ್ನು ಮೂಲವಾಗಿಸಿಕೊಂಡು, ಮಹಿಳೆಯರು ಮನೆಯಿಂದ ಹೊರಗೆ ಬಂದು ದುಡಿದರೆ ಶೋಷಣೆಯಿಂದ ಮುಕ್ತಿ ಹೊಂದಬಹುದು ಎಂದು ಹೇಳುತ್ತಾರೆ. ತೀವ್ರಗಾಮಿ ಸ್ತ್ರೀವಾದಿಗಳು ಮಹಿಳೆಯರ ಜೈವಿಕತೆಯಿಂದ ಅವರ ಮೇಲೆ ದೌರ್ಜನ್ಯಗಳಾಗುತ್ತಿವೆ ಎಂದು ಗುರುತಿಸುತ್ತಾರೆ. ಹೆಣ್ಣನ್ನು ಗರ್ಭಕೇಂದ್ರಿತವಾಗಿ ಸಮಾಜ ಗುರುತಿಸುತ್ತಿದ್ದು ಆ ಗರ್ಭದ ಮೇಲಿನ ಪುರುಷರ ಆಳ್ವಿಕೆಯನ್ನು ತಡೆಯಬೇಕು ಎಂದು ಹೇಳುತ್ತಾರೆ. ಕೃತಕ ಗರ್ಭಧಾರಣೆಯ ಮೂಲಕ ಮಹಿಳೆಯರು ತಮಗೆ ಇಷ್ಟ ಬಂದಾಗ ಬೇಕಾದಷ್ಟು ಮಕ್ಕಳನ್ನು ಪಡೆಯಬೇಕೆಂದು ಹೇಳುತ್ತಾರೆ. ಹಾಗೂ ತಾಯ್ತನವನ್ನು ಸಮಾಜ ಅತ್ಯಂತ ಭಾವುಕತೆಯಿಂದ ಕಟ್ಟಿಕೊಟ್ಟಿದ್ದು ಮಹಿಳೆಯರು ಅದರಿಂದ ಬಿಡುಗಡೆಗೊಳ್ಳಬೇಕೆಂದು ಹೇಳುತ್ತಾರೆ. ಇನ್ನು ಮಾರ್ಕ್ಸವಾದಿ ಸ್ತ್ರೀವಾದಿಗಳು ಬಂಡವಾಳ ಶಾಹಿ ವ್ಯವಸ್ಥೆಯನ್ನು ಸ್ತ್ರೀ-ಪುರುಷರಿಗೆ ಹೋಲಿಸಿ ಆಳುವವರು ಮತ್ತು ಆಳಿಸಿಕೊಳ್ಳುವವರಾಗಿ ನಿರ್ಮಾಣಗೊಂಡಿದ್ದು ಇದರಿಂದ ಹೊರಬರಬೇಕು, ಅಂದಾಗ ಮಾತ್ರ ಸ್ತ್ರೀ ವಿಮೋಚನೆ ಸಾಧ್ಯ ಎಂದು ಹೇಳುತ್ತಾರೆ. ಬಂಡವಾಳಶಾಹಿಗಳೆಂದರೆ ಪುರುಷರು, ಕಾರ್ಮಿಕ ವರ್ಗದವರೆಂದರೆ ಸ್ತ್ರೀಯರು ಎಂದು ಹೋಲಿಕೆ ನೀಡುತ್ತಾರೆ. ಮಹಿಳೆಯರು ಈ ವರ್ಗ ಸಂಘರ್ಷದಿಂದ ಹೊರಬರಬೇಕಾದರೆ ಮನೆಯಿಂದ ಹೊರಗಡೆ ಬಂದು ಆರ್ಥಿಕಗಳಿಕೆ ತರುವಂತಹ ಕೆಲಸಗಳಲ್ಲಿ ಪಾಲ್ಗೊಳ್ಳಬೇಕು, ಅಂದಾಗ ಮಾತ್ರ ಸ್ತ್ರೀಯರು ಸಮಾನತೆ ಸಾಧಿಸಬಲ್ಲರು ಜೊತೆಗೆ ದೌರ್ಜನ್ಯಗಳಿಂದ ಮುಕ್ತಿ ಹೊಂದಬಲ್ಲರು ಎಂದು ತಿಳಿಸಿದ್ದಾರೆ.

ಇನ್ನು ಸಾಂಸ್ಕೃತಿಕ ಸ್ತ್ರೀವಾದಿಗಳು ತೀವ್ರಗಾಮಿ ಸಿದ್ಧಾಂತವನ್ನು ಮುಂದುವರೆಸಿ ಸ್ತ್ರೀ-ಪುರುಷರಲ್ಲಿಯ ಜೈವಿಕತೆಯನ್ನೇ ಕೇಂದ್ರವಾಗಿರಿಸಿಕೊಂಡು ಸ್ತ್ರೀಯರನ್ನು ಶೋಷಿಸುತ್ತಿರುವ ಹಿನ್ನೆಲೆಯನ್ನು ಗುರುತಿಸಿ ಸ್ತ್ರೀಯರ ಜೈವಿಕ ಕ್ರಿಯೆ ಅತ್ಯಂತ ಶ್ರೇಷ್ಠವಾದದ್ದು, ಪುರುಷರು ಪಡೆಯಲಾಗದ ಒಂದು ವಿಶಿಷ್ಠ ಶಕ್ತಿ ಮತ್ತು ಅನುಭವ ಎಂದು ಹೇಳುತ್ತಾರೆ. ಇದರಿಂದಾಗಿ ಮಹಿಳೆಯರು ಪುರುಷರಿಗಿಂತ ಶ್ರೇಷ್ಠ ಎಂದು ಹೆಮ್ಮೆಪಟ್ಟುಕೊಳ್ಳಲು ತಿಳಿಸುತ್ತಾರೆ. ಪುರಷರನ್ನು ಅವಲಂಬಿಸದೇ ಅವರ ಅಧಿಕಾರದ ಕಪಿ ಮುಷ್ಠಿಯಿಂದ ಹೊರಬರುವ ಮಾರ್ಗವೇ ಮಹಿಳಾ ಶೋಷಣೆಯ ವಿಮೋಚನಾ ದಾರಿ ಎಂದು ಹೇಳುತ್ತಾರೆ. ಇನ್ನು ಸಮಾಜವಾದಿ ಸ್ತ್ರೀವಾದಿಗಳು ಮಾರ್ಕ್ಸವಾದ, ತೀವ್ರಗಾಮಿ ಸ್ತ್ರೀವಾದ ಮತ್ತು ಮನೋವಿಶ್ಲೇಷಣಾತ್ಮಕ ಸ್ತ್ರೀವಾದಿ ಚಿಂತನೆಗಳನ್ನು ಇಟ್ಟುಕೊಂಡು ಅವುಗಳನ್ನು ಮುಂದುವರೆಸಿ ತಮ್ಮ ಸಿದ್ಧಾಂತವನ್ನು ರೂಪಿಸಿಕೊಂಡಿದ್ದಾರೆ. ಸಮಾಜವಾದಿ ಸ್ತ್ರೀವಾದಿಗಳು ಮುಖ್ಯವಾಗಿ ಲೈಂಗಿಕ ಅಸಮಾನತೆಯನ್ನು ಅವಲಂಬಿಸಿ ಶ್ರಮವಿಭಜನೆ ಮಾಡುವ ವ್ಯವಸ್ಥೆಯನ್ನು ಪ್ರಶ್ನಿಸುವ ಮೂಲಕ ಅಸಮಾನತೆಯ ಕಾರಣಗಳನ್ನು ಹುಡುಕಿಕೊಳ್ಳಬಹುದು ಎನ್ನುತ್ತಾರೆ.

ಇನ್ನು ಭಾರತೀಯ ಸ್ತ್ರೀವಾದವನ್ನು ವಿವರಿಸುವುದಾದರೆ, ಇದು ಪ್ರಸ್ತುತ ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಹುಟ್ಟಿಕೊಂಡಂತಹದ್ದಾಗಿದೆ. ಇದು ಸತಿ ಪದ್ಧತಿ, ಬಾಲ್ಯ ವಿವಾಹ, ವಿಧವೆಯರಿಗೆ ಮರು ಮದುವೆ ಮಾಡದಿರುವುದು ಹೀಗೆ ಮುಂತಾದ ಸಮಸ್ಯೆಗಳನ್ನು ಗುರುತಿಸಿ ಅವುಗಳಿಗೆ ಕಾನೂನಾತ್ಮಕವಾಗಿ ಪರಿಹಾರವನ್ನು ಕಂಡುಕೊಳ್ಳುವ ಮಾರ್ಗವನ್ನು ಸೂಚಿಸುತ್ತದೆ.

ಈ ಎಲ್ಲಾ ಸ್ತ್ರೀವಾದಗಳನ್ನು ಗಮನಿಸಿದಾಗ ಕೆಲವೊಂದು ಸ್ತ್ರೀವಾದಗಳು ಆಯಾ ಕಾಲಘಟ್ಟದಲ್ಲಿನ ಸಂದರ್ಭವನ್ನು ಆಧರಿಸಿ ಮಹಿಳಾ ದೌರ್ಜನ್ಯವನ್ನು ಗುರುತಿಸಿ ಪರಿಹಾರ ಕಂಡುಕೊಂಡಿವೆ. ಇನ್ನೂ ಕೆಲವು ಸ್ತ್ರೀವಾದಿಗಳು ಮಹಿಳೆಯರ ಶೋಷಣೆಯ ಮೂಲ ಅಂಶವನ್ನು ಮುಖ್ಯವಾಗಿಸಿಕೊಂಡು ಅದಕ್ಕೆ ಮೂಲಕಾರಣ ಏನೆಂದು ತಿಳಿದು ತಮ್ಮ ಪರಿಹಾರ ಸಿದ್ಧಾಂತಗಳನ್ನು ರೂಪಿಸಿರುವುದು ಕಂಡುಬರುತ್ತದೆ. ಇಷ್ಟೆಲ್ಲಾ ಸಿದ್ಧಾಂತಗಳು ಹೋರಾಟೋಪಾದಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗಲೂ ವ್ಯವಸ್ಥೆ ಮಾತ್ರ ಕೊಂಚವು ಬದಲಾಗಿಲ್ಲ. ಈ ವ್ಯವಸ್ಥೆಯನ್ನು ಸರಿಯಾಗಿ ಭೇದಿಸುವ ಕಾರ್ಯ ಸ್ತ್ರೀವಾದಿಗಳು ಮಾಡಬೇಕಾಗಿದೆ. ಈ ವ್ಯವಸ್ಥೆ ಬದಲಾಗಬೇಕಾದರೆ ಶತಮಾನಗಳೇ ಉರುಳಬೇಕಾಗಿದೆ. ಈ ವ್ಯವಸ್ಥೆಯನ್ನು ಕಿತ್ತುಹಾಕುವುದು ಕಷ್ಟವಾದರೂ ಸಹ ಖಂಡಿತವಾಗಿ ಅದು ಸಾಧ್ಯವಾಗುತ್ತದೆ. ನಿಸರ್ಗದಲ್ಲಿ ಎಲ್ಲಕ್ಕೂ ಒಂದು ಅಂತ್ಯ ಎಂಬುವುದಿದೆ. ಅಂತ್ಯ ಎನ್ನುವುದು ಪ್ರಕೃತಿಯನ್ನು ಸಹ ಬಿಡದು. ಹೀಗಿರುವಾಗ ಮಾನವನ ದುರ್ವರ್ತನೆಗೆ ಕೊನೆ ಇರಲಾರದೆಂದೆನಿಲ್ಲ. ಆದರೆ ಹೇಗೆ ಇಂತಹ ವ್ಯವಸ್ಥೆಯಿಂದ ಬಿಡಿಸಿಕೊಳ್ಳಬೇಕು ಎಂಬವುದನ್ನು ಸ್ತ್ರೀವಾದದ ನೆಲೆಯಲ್ಲಿಯೇ ಕಂಡುಕೊಳ್ಳಬೇಕಾಗಿದೆ.

ಸ್ತ್ರೀವಾದದ ಭಿನ್ನ ನೋಟ

ಸಮಾಜದಲ್ಲಿ ಲಿಂಗ ಅಸಮಾನತೆಯನ್ನು ಸೃಷ್ಟಿಸಿ ಆ ಮೂಲಕ ಮಹಿಳೆಯರ ಮೇಲೆ ಕೌಟುಂಬಿಕ ದೌರ್ಜನ್ಯಗಳನ್ನು ವ್ಯವಸ್ಥೆಯು ಸ್ಥಾಪಿಸುತ್ತಾ ಹೊರಟಿದೆ. ಇಂತಹ ದೌರ್ಜನ್ಯಗಳಿಂದ ಹೊರಬರಬೇಕಾದರೆ ಸಮಸ್ಯೆಯ ಮೂಲಬೇರಿನ ಆಳಕ್ಕಿಳಿದು ವ್ಯವಸ್ಥೆ ನಿರ್ಮಿಸಿದ ಲಿಂಗ ರಾಜಕಾರಣವನ್ನು ಮೊದಲು ಕಿತ್ತು ಹಾಕಬೇಕಿದೆ. ಇಂದು ಈ ಬೇರು ಬೆಳೆದು ವಿವಿಧ ಕವಲುಗಳಾಗಿ ಹರಡಿಕೊಂಡಿದ್ದು, ಅವುಗಳನ್ನು ಬುಡಸಮೇತವಾಗಿ ಕಿತ್ತೆಸೆಯಬೇಕಾಗಿದೆ. ಈಗಾಗಲೇ ಈ ನಿಟ್ಟಿನಲ್ಲಿ ಹಲವಾರು ಸ್ತ್ರೀ ವಾದಗಳು ಸಾಕಷ್ಟು ಕಾರ್ಯನಿರ್ವಹಿಸಿದ್ದು, ಇನ್ನು ಭಿನ್ನ ಭಿನ್ನ ಒಳನೋಟಗಳು ಸ್ತ್ರೀವಾದದ ತೆಕ್ಕೆಗೆ ಸೇರಬೇಕಾಗಿವೆ.

ಈಗಾಗಲೇ ಹಲವಾರು ಸ್ತ್ರೀ ವಾದಿಗಳು ಮಹಿಳೆಯರ ಪರವಾಗಿ ಕೆಲಸ ಮಾಡಿದ್ದು ಅವು ಸರಿಯಾಗಿ ಫಲಪ್ರದವಾಗಿಲ್ಲ. ಕಾರಣ ಪುರುಷ ಪ್ರಧಾನ ವ್ಯವಸ್ಥೆ ಸ್ತ್ರೀವಾದದ ತಂತ್ರಗಳಿಗೆ ಪ್ರತಿ ತಂತ್ರಗಳನ್ನು ಸದಾ ರೂಪಿಸುತ್ತಲೇ ಇರುತ್ತದೆ. ಇದರಿಂದಾಗಿ ಮಹಿಳೆಯರು ವ್ಯವಸ್ಥೆಯ ಕಪಿ ಮುಷ್ಠಿಯಿಂದ ಹೊರಬರಲು ಸಾಧ್ಯವಾಗುತ್ತಿಲ್ಲ. ಆಧುನಿಕೋತ್ತರ ಸ್ತ್ರೀವಾದಿಗಳು ಎಲ್ಲಾ ಸ್ತ್ರೀಯರ ಅನುಭವಗಳು ಏಕಘನಾಕೃತ ಮಾದರಿಯವಲ್ಲ. ಒಬ್ಬೊಬ್ಬ ಮಹಿಳೆಯರ ಸಮಸ್ಯೆಗಳು ಬೇರೆ ಬೇರೆಯಾಗಿರುತ್ತವೆ. ಇದನ್ನು ಸೀಮಿತ ದೃಷ್ಟಿಕೋನದಿಂದ ನೋಡುವುದು ಸರಿಯಲ್ಲ ಎಂದು ಹೇಳುತ್ತಾರೆ. ಹಾಗೂ ಎಲ್ಲಾ ಮಹಿಳೆಯರ ಸಮಸ್ಯೆಗಳಿಗೆ ಏಕರೂಪವಾದ ಪರಿಹಾರ ಕಂಡುಕೊಳ್ಳುವುದು ಸಹ ಸೂಕ್ತವಲ್ಲ ಎಂದು ಸೂಚಿಸುತ್ತಾರೆ. ಇವರು ಹೇಳುವಂತೆ ಪ್ರತಿಯೊಬ್ಬ ಮಹಿಳೆಯ ಅನುಭವದ ಹಿನ್ನೆಲೆಯಲ್ಲಿ ಸಮಸ್ಯೆಯನ್ನು ತಿಳಿದು ಪರಿಹಾರ ಕಂಡುಕೊಳ್ಳುವುದು ಕಷ್ಟದಾಯಕ. ಆದ್ದರಿಂದ ಮಹಿಳೆಯರು ಅನುಭವಿಸುತ್ತಿರುವ ಏಕರೂಪದ ಸಮಸ್ಯೆಗಳನ್ನು ವಿಂಗಡಿಸಿ ಆ ಮೂಲಕ ಪರಿಹಾರ ಕಂಡುಕೊಳ್ಳುವುದು ಹೆಚ್ಚು ಉಪಯುಕ್ತವಾಗಬಲ್ಲದು.

ಈ ನಿಟ್ಟಿನಲ್ಲಿ ಮಹಿಳೆಯರು ಅನುಭವಿಸುತ್ತಿರುವ ಹಿಂಸೆಗಳನ್ನು ಗ್ರಹಿಸಿದಾಗ ಹಲವಾರು ಬಗೆಯ ದೌರ್ಜನ್ಯಗಳಿಗೆ, ಸಮಸ್ಯೆಗಳಿಗೆ ಒಳಗಾಗುತ್ತಿರುವುದು ಕಾಣಬರುತ್ತದೆ. ಈ ಹಿನ್ನೆಲೆಯಲ್ಲಿ ಮಹಿಳೆಯರು ಅನುಭವಿಸುತ್ತಿರುವ ದೌರ್ಜನ್ಯಗಳನ್ನು ಕೇಂದ್ರಿಕರಿಸಿ ಆ ದೌರ್ಜನ್ಯಕ್ಕೆ ಕಾರಣವಾದ ಮೂಲ ಅಂಶ ಏನೆಂದು ಸ್ತ್ರೀವಾದಿ ದೃಷ್ಟಿಕೋನದಿಂದ ಅರಿತು ಅದಕ್ಕೆ ವಿರುದ್ಧವಾದ ಹೋರಾಟ ಅಥವಾ ಪರಿಹಾರ ಕೈಗೊಳ್ಳಬೇಕಾಗಿದೆ. ಉದಾಹರಣೆಗೆ ಭಾರತದಲ್ಲಿ ಬಹುವಾಗಿ ಕಾಡುತ್ತಿರುವ ಬಾಲ್ಯ ವಿವಾಹದಂತಹ ಹೆಣ್ಣು ಮಕ್ಕಳ ಸಮಸ್ಯೆಯನ್ನು ತೆಗೆದುಕೊಂಡಾಗ, ಬಾಲ್ಯ ವಿವಾಹ ಶತ ಶತಮಾನಗಳಿಂದಲೂ ನಡೆದುಕೊಂಡು ಬಂದ ಆಚರಣೆಯಾಗಿದೆ. ಇದಕ್ಕೆ ಕಾರಣ ಏನು? ಎಂದು ಸಂಶೋಧಿಸಿದಾಗ ಮೇಲ್ಪದರದಲ್ಲಿ ಪೋಷಕರ ಬಡತನ, ಅನಕ್ಷರತೆ, ಅವಿದ್ಯಾವಂತರಾಗಿ ಇರುವುದು, ರಕ್ತ ಸಂಬಂಧಗಳ ಉಳಿಯುವಿಕೆಗಾಗಿ, ಹಿರಿಯರ ಆಸೆಗಳ ಪೂರೈಕೆಗಾಗಿ ಎಂಬ ಇತ್ಯಾದಿ ಅಂಶಗಳು ಗೋಚರವಾಗುತ್ತವೆ. ಆದರೆ ಸ್ತ್ರೀವಾದಿ ದೃಷ್ಟಿಕೋನದಿಂದ ಈ ಸಮಸ್ಯೆಯ ಮೂಲವನ್ನು ಹುಡುಕಿದಾಗ ಪುರುಷಶಾಹಿ ವ್ಯವಸ್ಥೆ ರಚಿಸಿದ ಬಹುದೊಡ್ಡ ಹುನ್ನಾರವೇ ಹೊರಬೀಳುತ್ತದೆ. ಬಾಲ್ಯವಿವಾಹ ಎಂಬುವುದೂ ಕೂಡಾ ಇಂದು ಸಾಮಾಜೀಕರಣ ಪ್ರಕ್ರಿಯೆಯ ಭಾಗವಾಗಿ ಹಲವಾರು ಕಾರಣಗಳನ್ನು ಹೊತ್ತು ಜರುಗುತ್ತಿರುವುದನ್ನು ಕಾಣಬಹುದಾಗಿದೆ. ಆದರೆ ಇದರ ಮೂಲಹುಟ್ಟು ಮಾತ್ರ ಬೇರೆಯೇ ಆಗಿದೆ.

ಈಗಾಗಲೇ ಸ್ಪಷ್ಟಪಡಿಸಿದಂತೆ ಸ್ತ್ರೀವಾದದ ಹಿನ್ನೆಲೆಯಲ್ಲಿ ಬಾಲ್ಯ ವಿವಾಹದಂತಹ ಸಮಸ್ಯೆಯನ್ನು ಗಮನಿಸಿದಾಗ, ಬಾಲ್ಯ ವಿವಾಹಕ್ಕೆ ಮುಖ್ಯ ಕಾರಣ ಹೆಣ್ಣಿನ ಲೈಂಗಿಕತೆಯನ್ನು ನಿಯಂತ್ರಿಸುವುದಾಗಿದೆ. ಹೆಣ್ಣಿನ ಲೈಂಗಿಕತೆಯನ್ನು ಹಿಡಿತದಲ್ಲಿಟ್ಟುಕೊಳ್ಳಲು ವ್ಯವಸ್ಥೆಯುಹೂಡಿದ ತಂತ್ರ ಬಾಲ್ಯ ವಿವಾಹ ಪದ್ಧತಿಯಾಗಿದೆ. ಹೆಣ್ಣಿನಲ್ಲಿ ಋತುಚಕ್ರ ಆರಂಭಗೊಂಡಿತೆಂದರೆ ಆಕೆಯಲ್ಲಿ ಫಲವಂತಿಕೆ ಪ್ರಾರಂಭವಾಗುತ್ತದೆ. ಈ ಫಲವಂತಿಕೆ ಹಾಗೂ ಲೈಂಗಿಕತೆ ಮೇಲೆ ನಿಯಂತ್ರಣ ಹೊಂದುವ ಉದ್ದೇಶ ಬಾಲ್ಯ ವಿವಾಹದಂತಹ ಆಚರಣೆಗೆ ಮೂಲ ಕಾರಣವಾಗಿದೆ. ಈ ಸಮಸ್ಯೆಗೆ ಪರಿಹಾರವೆಂದರೆ ಮಹಿಳೆಯರು ತಮ್ಮ ಸಂಗಾತಿಗಳ ಆಯ್ಕೆಯಲ್ಲಿನ ಸ್ವಾತಂತ್ರ್ಯ ಹಾಗೂ ತಮ್ಮ ಲೈಂಗಿಕತೆ ಮೇಲೆ ಸ್ವಾತಂತ್ರ್ಯ ಪಡೆದುಕೊಳ್ಳುವುದಾಗಿದೆ ಎಂದು ಹೇಳಬಹುದು.

ಈ ತೆರನಾಗಿ ಮಹಿಳೆಯರ ಪ್ರತಿ ಸಮಸ್ಯೆಗಳಿಗೆ ಸ್ತ್ರೀವಾದದ ದೃಷ್ಟಿಕೋನದಿಂದ ಅದರ ಮೂಲವನ್ನು ಹುಡುಕಿ ಪರಿಹಾರ ಕಂಡುಕೊಂಡಿದ್ದೇ ಆದರೆ ನಿಜಕ್ಕೂ ಮಹಿಳೆಯರು ವ್ಯವಸ್ಥೆಯ ಕಪಿಮುಷ್ಟಿಯಿಂದ ಬಿಡಿಸಿಕೊಳ್ಳಬಹುದಾಗಿದೆ. ಜೊತೆಗೆ ಆ ಮೂಲಕ ಮಹಿಳೆಯರು ಲಿಂಗಾಧಾರಿತವಾಗಿ ಜರುಗುತ್ತಿರುವ ದೌರ್ಜನ್ಯಳಿಂದಲೂ ಸಹ ಮುಕ್ತಿ ಹೊಂದಬಹುದಾಗಿದೆ.

೩.೨. ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಕ್ಕೆ ಕಾರಣಗಳು ಮತ್ತು ಪರಿಣಾಮಗಳು

ಎಲ್ಲರಿಗೂ ಎಲ್ಲಾ ಬಗೆಯ ರಕ್ಷಣೆ ದೊರಕಿಸಿ ಕೊಡುವ ಜವಾಬ್ದಾರಿಯನ್ನು ಹೊತ್ತ ಕುಟುಂಬದಲ್ಲಿ ವ್ಯವಸ್ಥೆ ತನ್ನ ಅಧಿಕಾರದ ಲಾಲಸೆಗಾಗಿ ಸ್ತ್ರೀ ಸಂಕುಲವನ್ನು ನಲುಗಿಸುವ ಕಾರ್ಯವನ್ನು ಶತ ಶತಮಾನಗಳಿಂದಲೂ ನಡೆಸುತ್ತಿದೆ. ಈ ಹಿನ್ನೆಲೆಯಲ್ಲಿಯೇ ಸ್ತ್ರೀಯರನ್ನು ಕಡೆಗಾಣಿಸುವ ನೀತಿ, ಹಿಂಸಿಸುವ ಕೃತ್ಯಗಳು ಕಾಣಬರುತ್ತಿವೆ. ಇದರಲ್ಲಿ ಸ್ತ್ರೀ-ಪುರುಷರಿಬ್ಬರೂ ಭಾಗಿಗಳಾಗಿದ್ದಾರೆ. ಇವರು ವ್ಯವಸ್ಥೆಯ ಭಾಗವಾಗಿ ಕಾರ್ಯನಿರ್ವಹಿಸುತ್ತಿರುವುದು ಕಂಡುಬರುತ್ತದೆ.

ಪುರುಷ ಪ್ರಧಾನ ವ್ಯವಸ್ಥೆಯು ತನ್ನ ಉಳಿವಿಗಾಗಿ ಮಹಿಳೆಯರ ವಿರುದ್ಧ ಅನೇಕ ಬಗೆಯ ತಂತ್ರಗಳನ್ನು ರೂಪಿಸಿದ್ದು ಅವುಗಳಲ್ಲಿ ಹಿಂಸೆಯಂತಹ ಅಸ್ತ್ರವನ್ನೂ ಸಹ ಬಳಸಿಕೊಂಡಿದೆ. ಈಗಾಗಲೇ ಮಹಿಳೆಯರು ಕೌಟುಂಬಿಕ ಹಿಂಸೆಯನ್ನು ಅನುಭವಿಸುತ್ತಿದ್ದಾರೆಂದು ತಿಳಿದಿದ್ದೇವೆ. ಆದರೆ ಯಾವೆಲ್ಲಾ ಕಾರ್ಯತಂತ್ರಗಳನ್ನು ನಿರ್ಮಿಸಿಕೊಂಡು ಮಹಿಳೆಯರಿಗೆ ವ್ಯವಸ್ಥೆ ಹಿಂಸಿಸುತ್ತಿದೆ ಎಂಬುದನ್ನು ತಿಳಿಯಬೇಕಿದೆ. ಆ ಅಂಶಗಳೇ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಕ್ಕೆ ಕಾರಣಗಳಾಗಿವೆ.

ಲಿಂಗಾಧಾರಿತ ಸಾಮಾಜೀಕರಣ

ಸಾಮಾಜೀಕರಣ ಎಂದರೆ ಹುಟ್ಟಿದ ಮಗುವನ್ನು ಸಾಮಾಜಿಕ ಜೀವಿಯನ್ನಾಗಿಸುವುದು. ಅಂದರೆ ಈಗಾಗಲೇ ಸಮಾಜ ನಿರ್ಮಿಸಿಕೊಂಡಿರುವ ನೀತಿ ನಿಯಮಾವಳಿಗೆ ಮಗುವನ್ನು ಪ್ರತಿ ಹಂತದ ಬೆಳವಣಿಗೆಯಲ್ಲೂ ಹೊಂದಿಕೊಳ್ಳುವಂತೆ ರೂಪಿಸುವುದಾಗಿದೆ. ಈ ಪ್ರಕ್ರಿಯೆ ಮಗು ಹುಟ್ಟಿನಿಂದ ಹಿಡಿದು ಸಾಯುವವರೆಗೂ ಜರುಗುತ್ತಲೇ ಇರುತ್ತದೆ. ಇದನ್ನೇ ಸಮಾಜಶಾಸ್ತ್ರಜ್ಞರಾದ ಆಗ್‌ಬರ್ನ್‌ರವರು ಈ ಪ್ರಕಾರವಾಗಿ ವ್ಯಾಖ್ಯಾನಿಸುತ್ತಾರೆ.

"ಪ್ರತಿಯೊಬ್ಬ ವ್ಯಕ್ತಿಯು ಸಾಮಾಜಿಕ ನಿಯಮಗಳಿಗೆ ಅನುಗುಣವಾಗಿ ತನ್ನ ವರ್ತನೆಗಳನ್ನು ರೂಪಿಸಿಕೊಳ್ಳುವ ಪ್ರಕ್ರಿಯೇ" ಎಂದು ಹೇಳುತ್ತಾರೆ.[3]

ಈ ಪ್ರಕ್ರಿಯೆ ಹೇಗೆ ಮಹಿಳೆಯರ ಮೇಲೆ ಕೌಟುಂಬಿಕ ದೌರ್ಜನ್ಯ ನಡೆಸುವಲ್ಲಿ ಅಥವಾ ಸ್ಥಾಪಿಸುವಲ್ಲಿ ಕಾರಣವಾಗಿದೆ ಎಂದು ಅರಿಯುವುದಾದರೆ, ಸಾಮಾಜಿಕ ವ್ಯವಸ್ಥೆ ಪುರುಷ ಪ್ರಧಾನವಾಗಿ ರೂಪಿತಗೊಂಡಿದ್ದು ತನ್ನ ಅಸ್ತಿತ್ವವನ್ನು ಆ ಮೂಲಕ ಉಳಿಸಿಕೊಳ್ಳುತ್ತಾ ಹೊರಟಿದೆ. ಮಹಿಳೆಯರ ಮೇಲಿನ ದೌರ್ಜನ್ಯಗಳನ್ನೂ ಸಹ ಇದೇ ರೀತಿಯಾಗಿ ತಪ್ಪೇ ಅಲ್ಲ ಎಂಬಂತೆ ಸಾಮಾಜೀಕರಣದ ಭಾಗವಾಗಿ ಸ್ಥಾಪಿಸುತ್ತಾ ಹೊರಟಿದೆ. ಗಂಡು ಮಗುವಿಗೆ ಆಳುವ ಪ್ರವೃತ್ತಿ ಬೆಳೆಸಿದರೆ ಹೆಣ್ಣು ಮಗುವಿಗೆ ವಿಧೇಯಳಾಗಿ ನಡೆದುಕೊಳ್ಳುವಂತೆ ಬೆಳವಣಿಗೆಯ ಪ್ರತಿ ಹಂತದಲ್ಲೂ ರೂಪಿಸುತ್ತದೆ. ಇದರೊಟ್ಟಿಗೆ ಪುರುಷ ಪ್ರಧಾನ ನಡಾವಳಿಗಳ ಮೂಲಕ ಹೆಣ್ಣು ಅನುಭವಿಸುತ್ತಿರುವ ದೌರ್ಜನ್ಯಗಳು ಹೆಣ್ಣಾಗಿರುವುದರಿಂದ ಆಕೆಗೆ ಅನಿವಾರ್ಯ ಎಂದು ಸಾಮಾಜೀಕರಣದ ಮೂಲಕ ಸ್ಥಾಪಿತವಾಗುತ್ತಾ ಹೋಗುತ್ತಿವೆ. ಆದ್ದರಿಂದ ಹೆಣ್ಣಿನ ಮೇಲೆ ದೌರ್ಜನ್ಯಗಳು ನಿತ್ಯ ನಿರಂತರವಾಗಿ ನಡೆಯುತ್ತಲೇ ಇವೆ. ಸಾಮಾಜೀಕರಣ ಪ್ರಕ್ರಿಯೆ ಬಹುತೇಕ ಸಾಮಾಜಿಕ ನಡುವಳಿಕೆಗಳೆಲ್ಲವುಗಳನ್ನ ಒಪ್ಪಿತವಾಗಿಸುತ್ತಲೇ ಹೊರಟಿರುವುದರಿಂದ ಮಹಿಳಾ ದೌರ್ಜನ್ಯದಂತಹ ಸಂದರ್ಭದಲ್ಲಿ ಇದು ಹೆಚ್ಚು ಅಪಾಯಕಾರಿಯಾದ ಸಾಧನವಾಗಿದೆ.

ಲಿಂಗ ಅಸಮಾನತೆಯಿಂದ ಕೂಡಿರುವ ಸಾಂಪ್ರದಾಯಿಕ ಮತ್ತು ಸಾಮಾಜಿಕ ಮೌಲ್ಯಗಳು

ಮಾನವರು ಸಮಾಜ ಜೀವಿಗಳು. ತಾವು ಬದುಕಲು ಕೆಲವೊಂದು ನೀತಿ ನಿಯಮಾವಳಿಗಳನ್ನು ರಚಿಸಿಕೊಂಡು ಜೀವನ ನಡೆಸುತ್ತಿದ್ದಾರೆ. ಬದುಕಿನ ಭಾಗವಾಗಿ ಅನೇಕ ಸಂಪ್ರದಾಯಗಳನ್ನು, ಸಾಮಾಜಿಕ ಮೌಲ್ಯಗಳನ್ನು ಕಟ್ಟಿಕೊಂಡಿದ್ದಾರೆ. ಈ ಸಂಪ್ರದಾಯ ಮತ್ತು ಸಾಮಾಜಿಕ ಮೌಲ್ಯಗಳು ಲಿಂಗ ಅಸಮಾನತೆಯಿಂದ ಕೂಡಿರುವುದು ಕಂಡುಬರುತ್ತದೆ. ಇವುಗಳು ಹೆಣ್ಣನ್ನು ದೌರ್ಜನ್ಯಕ್ಕೊಳ ಪಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಹೆಣ್ಣು ಹುಟ್ಟುವುದಿರಲಿ ಹುಟ್ಟುವ ಪೂರ್ವದಲ್ಲೇ ತಿಳಿದು

ಅದನ್ನು ಹೊಸಕಿ ಹಾಕುವ ಕೃತ್ಯಕ್ಕೆ ಕೈ ಹಾಕಿವೆ. ಹೆಣ್ಣು ಹುಟ್ಟಿದರೆ ಮೈಮೇಲೆ ಹುಣ್ಣಾದಂತೆ ಎಂದು ಭಾವಿಸುತ್ತಾರೆ. ಆದರೆ ಗಂಡಿನ ಜನನಕ್ಕೆ ಮಾತ್ರ ಎಲ್ಲಿಲ್ಲದ ಮಹತ್ವ ನೀಡುತ್ತಾರೆ. ಮುಕ್ತಿ, ಮೋಕ್ಷ ಎಂಬ ಧಾರ್ಮಿಕ ನಂಬಿಕೆಗಳ ಈಡೇರಿಕೆಗೆ ಗಂಡಿನ ಜನನ ಶ್ರೇಷ್ಠ ಎಂದು ನಂಬಿದ್ದಾರೆ. ಗಂಡಿಗಿರುವ ಸಾಮಾಜಿಕ ಮೌಲ್ಯ ಹೆಣ್ಣನ್ನು ಹಿಂಸಿಸುವಂತಹ ಕೃತ್ಯಕ್ಕೆ ಕಾರಣವಾಗಿದೆ. ಹೆಣ್ಣನ್ನು ವೈಭವೀಕರಿಸುವ ಸಮಾಜ ಇಂತಹ ದುಷ್ಕೃತ್ಯಕ್ಕೆ ಮುಂದಾಗುವುದು ನಿಜಕ್ಕೂ ಶೋಚನೀಯ ಸಂಗತಿಯಾಗಿದೆ. ಗಂಡು ಮಕ್ಕಳು ಹುಟ್ಟಿದರೆ ಮುಂದೆ ದುಡಿದು ತಂದೆ ತಾಯಿಗಳನ್ನು ಸಾಕುತ್ತಾರೆ. ಜೊತೆಗೆ ಸತ್ತಾಗ ಶವಸಂಸ್ಕಾರ ಮಾಡುತ್ತಾರೆ ಎಂಬ ಕಾರಣದಿಂದ ಗಂಡಿಗೆ ಬಹಳಷ್ಟು ಮಹತ್ವ ನೀಡುತ್ತಾರೆ. ಹೆಣ್ಣಾದರೆ ಗಂಡನ ಮನೆಗೆ ಹೋಗುವವಳು, ತಂದೆ ತಾಯಿಗೆ ಆಸರೆಯಾಗುವವಳಲ್ಲ ಎಂದು ಎಲ್ಲಾ ಸೌಲಭ್ಯಗಳಿಂದಲೂ ಆಕೆಯನ್ನು ವಂಚಿತರನ್ನಾಗಿಸುತ್ತಾರೆ. ಈ ರೀತಿಯಾಗಿ ಗಂಡು-ಹೆಣ್ಣುಗಳ ಮಧ್ಯೆ ಭೇದವೆಸಗಿ ಹೆಣ್ಣು ಮಕ್ಕಳನ್ನು ಮೂಲಭೂತ ಸೌಲಭ್ಯಗಳಿಂದ ಸಂಪೂರ್ಣವಾಗಿ ವಂಚಿಸಿ ಹಿಂಸೆಗೊಳಗಾಗುವಂತೆ ಮಾಡುತ್ತಾರೆ.

ಹೆಣ್ಣು ಹುಟ್ಟಿದರೆ ತವರು ಮನೆಯವರು ಮಾಡುವ ಅನೇಕ ಶಾಸ್ತ್ರಗಳು ಖರ್ಚುದಾಯಕ ವಾಗಿರುತ್ತವೆ. ಋತುಮತಿಯಾದಾಗ ಮಾಡುವ ಶಾಸ್ತ್ರಗಳು, ಮದುವೆ, ವರದಕ್ಷಿಣೆ, ಬಾಣಂತನ ಇವೆಲ್ಲವೂ ಹೊರೆ ಎನಿಸುವುದರಿಂದ ಹೆಣ್ಣು ಬೇಡವೇ ಬೇಡ ಎಂಬ ನಿರ್ಧಾರಕ್ಕೆ ಬರುತ್ತಾರೆ. ಇದರಿಂದಾಗಿ ಗರ್ಭದಲ್ಲಿಯೇ ಹೆಣ್ಣು ಭ್ರೂಣವನ್ನು ಕೊಲ್ಲುವುದು ಮತ್ತು ಶಿಶುವಾಗಿರುವಾಗ ಹೆಣ್ಣು ಮಗುವನ್ನು ಕೊಲ್ಲುವ ಕಾರ್ಯಕ್ಕೆ ಮುಂದಾಗುತ್ತಾರೆ. ಹೆಣ್ಣನ್ನು ಆರ್ಥಿಕ ಆದಾಯ ನೀಡದಂತಹ ಗೃಹ ಕೃತ್ಯಕ್ಕೆ ಸೀಮಿತಗೊಳಿಸಿ ಹೆಚ್ಚು ಹೊರ ಜಗತ್ತಿನ ತಿಳುವಳಿಕೆಗೆ ಬಾರದಂತೆ ಮಾಡುತ್ತಾರೆ. ಈ ರೀತಿಯ ಅನಿವಾರ್ಯದ ಬದುಕಿಗೆ ಆಕೆ ಮನೆಯಲ್ಲಿನ ಎಲ್ಲಾ ಹಿಂಸೆಗಳನ್ನು ಸಹಿಸಿಕೊಳ್ಳುವಂತಾಗಿದೆ. ಸಂಪ್ರದಾಯ ಮತ್ತು ಸಾಮಾಜಿಕ ಮೌಲ್ಯಗಳೆಲ್ಲವೂ ಬಹುತೇಕ ಧರ್ಮವನ್ನಾಧರಿಸಿರುವುದರಿಂದ ಧರ್ಮ ಕೂಡಾ ಮಹಿಳೆಯರ ಮೇಲೆ ದೌರ್ಜನ್ಯವನ್ನು ಸ್ಥಾಪಿತಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ ಎಂದು ಹೇಳಬಹುದು.

ಹೆಣ್ಣು ಮಕ್ಕಳನ್ನು ಹೆಚ್ಚು ಪರಾವಲಂಬಿಗಳನ್ನಾಗಿಸಿರುವುದು

ಪರಾವಲಂಬನೆ ಎಂಬುದು ಮಾನವರ ಬದುಕಿನ ಅವಿಭಾಜ್ಯ ಅಂಗವಾಗಿದೆ. ಅದು ಗಂಡು ಹೆಣ್ಣು ಇಬ್ಬರಿಗೂ ಅನಿವಾರ್ಯವಾಗಿದೆ. ಆದರೆ ಲಿಂಗಾಧಾರಿತವಾಗಿ ಹೆಣ್ಣನ್ನು ಪುರುಷ ಪ್ರಧಾನ ನೆಲೆ ಪರಾವಲಂಬಿಯನ್ನಾಗಿ ಮಾಡಿರುವುದು ಆಕೆಯ ಬದುಕಿನ ಬಹುದೊಡ್ಡ ದುರಂತವಾಗಿದೆ. ಹೀಗೆ ಪರಾವಲಂಬಿತನ ಹೆಣ್ಣನ್ನು ಹೆಚ್ಚೆಚ್ಚು ಕೌಟುಂಬಿಕ ಹಿಂಸೆಗೆ ಒಳಾಗುವಂತೆ ಮಾಡುವಲ್ಲಿ ಮುಖ್ಯ ಕಾರಣವಾಗಿದೆ. ಹೆಣ್ಣಿನ ಲೈಂಗಿಕತೆ, ಬಸಿರು, ಬಾಣಂತನದ ನೆಪಗಳನ್ನೊಡ್ಡಿ ಆಕೆಯನ್ನು ಸದಾ ಅವಲಂಬಿಯನ್ನಾಗಿಸಿ ಪುರುಷ ಪ್ರಧಾನ ವ್ಯವಸ್ಥೆ ತಾನು ನೀಡುವ ಎಲ್ಲಾ ಬಗೆಯ ಹಿಂಸೆಗಳನ್ನು ಅನಿವಾರ್ಯವಾಗಿ ಸಹಿಸಿಕೊಳ್ಳುವಂತೆ ಮಾಡುತ್ತಿದೆ. ಆರ್ಥಿಕತೆ, ಚಲನವಲನ ಎಲ್ಲದರ ಮೇಲೂ ಹೆಣ್ಣಿಗೆ ಅವಲಂಬಿತನವನ್ನು ರೂಢಿಗೊಳಿಸಿದೆ. ಇಷ್ಟಲ್ಲದೇ ಹೆಣ್ಣು ಹುಟ್ಟಿದಾಗ ತಂದೆಯ ಆಶ್ರಯದಲ್ಲಿ, ಯೌವ್ವನವನ್ನು ಗಂಡನ ಆಶ್ರಯದಲ್ಲಿ ಮತ್ತು ಮುಪ್ಪಾವಸ್ಥೆಯನ್ನು ಮಗನ ಆಶ್ರಯದಲ್ಲಿಯೇ

ಕಳೆಯತಕ್ಕದ್ದು ಎಂದು ನಿರ್ದೇಶಿಸಿ ಸದಾ ಪುರುಷ ಸ್ಥಾನೀಯ ನೆಲೆಯಲ್ಲಿ ಬದುಕುವಂತೆ ಮಾಡಿದೆ. ಹೆಣ್ಣು ಮಕ್ಕಳು ಪ್ರತಿಯೊಂದಕ್ಕೂ ಇನ್ನೊಬ್ಬರನ್ನು ಅವಲಂಬಿಸಿ ಬದುಕುವಂತಹ ವಾತಾವರಣವನ್ನು ಪುರುಷ ಪ್ರಧಾನ ವ್ಯವಸ್ಥೆ ನಿರ್ಮಾಣಮಾಡಿದೆ.

ಹೆಣ್ಣು ತನ್ನ ಮೂಲಭೂತ ಸೌಕರ್ಯಗಳಿಗಾಗಿ ಬೇರೆಯವರ ಮೊರೆ ಹೋಗ ಬೇಕಾಗಿರುವುದರಿಂದ, ಸಹಜವಾಗಿ ಪುರುಷಶಾಹಿ ವ್ಯವಸ್ಥೆ ಲಿಂಗಾಧಾರಿತವಾಗಿ ನೀಡುವ ಎಲ್ಲಾ ಬಗೆಯ ಹಿಂಸೆಗಳನ್ನು ಈ ಸಂದರ್ಭಗಳಲ್ಲಿ ಸ್ಥಾಪಿತಗೊಳಿಸುತ್ತದೆ. ಒಬ್ಬರನ್ನೊಬ್ಬರು ಅವಲಂಬಿಸಿ ಬದುಕುವುದು ಮಾನವರ ಜೀವನದಲ್ಲಿ ಅನಿವಾರ್ಯ. ಆದರೆ ಅದು ಹೆಣ್ಣಿಗೆ ಹೆಚ್ಚೆಚ್ಚು ಅನಿವಾರ್ಯ ಎಂಬಂತಹ ವಾತಾವರಣವನ್ನು ಸಮಾಜವು ನಿರ್ಮಾಣ ಮಾಡಿ, ಆ ಮೂಲಕ ಪುರುಷ ಪ್ರಧಾನ ವ್ಯವಸ್ಥೆ ಮಹಿಳೆಯರನ್ನು ಹೆಚ್ಚೆಚ್ಚು ಹಿಂಸೆಗೊಳಪಡಿಸುವುದು ಕಂಡುಬರುತ್ತದೆ.

ಸ್ತ್ರೀ ಲಿಂಗದ ಮೇಲೆ ಪುರುಷರು ಹೊಂದಿರುವ ಒಡೆತನದ ಹಕ್ಕು

ಮಹಿಳೆ ಎಂದರೆ ವಸ್ತು ಏನೋ ಎಂಬಂತೆ ಪುರುಷ ಪ್ರಧಾನ ಸಮಾಜದಲ್ಲಿ ಆಕೆ ಮಾರ್ಪಾಡಾಗಿದ್ದಾಳೆ. ಪ್ರತಿಯೊಬ್ಬ ಹೆಣ್ಣು ಮಗಳು ಮನೆಯಲ್ಲಿ ಪುರುಷರು ಹೇಳಿದಂತೆ ಅಥವಾ ಮನೆಯ ಹಿರಿಯರು ಹೇಳಿದಂತೆ ನಡೆದುಕೊಳ್ಳಬೇಕು. ಹೆಣ್ಣಿನ ಮಾತು, ನಡತೆ, ಚಲನವಲನ, ಶಿಕ್ಷಣ, ಜೀವನದ ಪ್ರತಿ ಹಂತದಲ್ಲಿನ ನಿರ್ಧಾರಗಳೆಲ್ಲವೂ ಮನೆಯ ಯಜಮಾನನ ಆಳ್ವಿಕೆಯಲ್ಲಿಯೇ ನಡೆಯುತ್ತವೆ. ಹೆಣ್ಣು ಪುರುಷನ ಆಸ್ತಿ ಎಂಬಂತೆ ಗೋಚರವಾಗುತ್ತಾಳೆ. ಪ್ರಕೃತಿಯಲ್ಲಿನ ಒಂದು ಜೀವಿಯಾಗಿ ತಾನು ಬದುಕಲು ಪಡೆಯಬೇಕಾದ ಮೂಲಭೂತ ಸೌಲಭ್ಯಗಳನ್ನು ಪಡೆದುಕೊಳ್ಳಲ್ಲೂ ಸಹ ಪುರುಷನ ಒಪ್ಪಿಗೆ ಪಡೆಯಬೇಕಾಗಿದೆ. ಹೀಗೆ ಮಹಿಳೆಯ ಬದುಕು ಸಂಪೂರ್ಣವಾಗಿ ಇನ್ನೊಬ್ಬರ ನಿಯಂತ್ರಣದಲ್ಲಿರುವುದು ಸಂವಿಧಾನ ನೀಡಿದ ಮೂಲಭೂತ ಹಕ್ಕುಗಳನ್ನೇ ಪ್ರಶ್ನಿಸುವಂತಾಗಿದೆ. ಪುರುಷ ಪ್ರಧಾನ ವ್ಯವಸ್ಥೆಯ ಕಪಿಮುಷ್ಠಿಯಿಂದ ಹೊರಬಂದು ಸ್ವತಂತ್ರವಾಗಿ ಬದುಕು ಸಾಗಿಸುವ ಕಲ್ಪನೆ ಸಾಧ್ಯವೇ ಇಲ್ಲವೆನೋ ಎಂಬುವಷ್ಟರ ಮಟ್ಟಿಗೆ ಮಹಿಳೆಯರನ್ನು ಕುಟುಂಬದೊಳಗೆ ಬಂಧಿಯನ್ನಾಗಿಸಿದೆ. ಒಂದು ವೇಳೆ ಇದನ್ನು ಮೀರಿ ಹೊರಟರೆ ಅಲ್ಲಿ ಮಹಿಳೆಯರನ್ನು ಹಿಂಸೆಯ ಮೂಲಕ ವ್ಯವಸ್ಥೆ ಹಿಡಿದಿಡಲು ಪ್ರಯತ್ನಿಸುತ್ತದೆ. ಈ ರೀತಿಯ ನಡುವಳಿಕೆ ಪುರುಷರು ಪಡೆದ ಒಡೆತನದ ಹಕ್ಕೆನೋ ಎಂಬಂತಾಗಿದೆ. ಇದರಿಂಗಾಗಿ ಮಹಿಳೆಯರು ವ್ಯಕ್ತಿ ಸ್ವಾತಂತ್ರ್ಯದ ಕಲ್ಪನೆಯನ್ನೇ ಮರೆತುಬಿಟ್ಟಿದ್ದಾರೆ.

ಒಡೆತನ ಎಂಬುವುದು ಆಳುವವರು ಮತ್ತು ಆಳಿಸಿಕೊಳ್ಳುವವರ ನಡುವಿನ ಸೂಚ್ಯಾರ್ಥಕ ಪದವಾಗಿದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಆಳುವವರು ಮತ್ತು ಆಳಿಸಿಕೊಳ್ಳುವವರ ಸಂಬಂಧ ಒಡೆತನದ ಹಕ್ಕಿನಲ್ಲಿ ಬಿಂಬಿತವಾಗುತ್ತದೆ. ಆಳುವವರು ಸರ್ವ ಸ್ವತಂತ್ರರು. ಆಳಿಸಿಕೊಳ್ಳುವವರು ಅವರ ಅಡಿಯಾಳುಗಳು ಎಂಬಂತಾಗಿದೆ. ಪುರುಷರು ಪಡೆದಿರುವ ಈ ಒಡೆತನದ ಹಕ್ಕು ಮಹಿಳೆಯರನ್ನು ಪ್ರತಿ ದಿನ, ಪ್ರತಿ ಕ್ಷಣ ಕೌಟುಂಬಿಕ ಹಿಂಸೆಯಂತಹ ಕೃತ್ಯದಿಂದ ನಲುಗುವಂತೆ ಮಾಡಿದೆ.

ಕುಟುಂಬ ಎಂಬುವುದು ಖಾಸಗಿ ವಲಯ ಮತ್ತು ಅಲ್ಲಿ ಪುರುಷಾಧಿಕಾರದ ನಿಯಂತ್ರಣದಲ್ಲಿ ಎಲ್ಲಾ ಕಾರ್ಯಗಳು ನಿರ್ವಹಣೆಗೊಳ್ಳುತ್ತವೆ. ಹೀಗೆ ಕುಟುಂಬವು ಖಾಸಗಿ ವಲಯವೆಂದು ಗುರುತಿಸಿಕೊಂಡಿದ್ದು ಅಲ್ಲಿ ಮಹಿಳೆಯರ ವಿರುದ್ಧವಾಗಿ ಏನೇ ನಡೆದರೂ ಅದನ್ನು ಯಾರೂ ಪ್ರಶ್ನಿಸುವ ಗೋಜಿಗೆ ಹೋಗುವುದಿಲ್ಲ. ಕಾರಣ ತಮ್ಮ ಮನೆಯಲ್ಲಿ ಮಹಿಳೆಯರ ವಿಚಾರವಾಗಿ ಅದೇ ತರಹದ ಕೃತ್ಯ ನಡೆಯುತ್ತಿರುತ್ತವೆ. ಆದ್ದರಿಂದ ಕುಟುಂಬದಲ್ಲಿ ಏನೇ ಆದರೂ ಅದನ್ನು ಇತರರು ಪ್ರಶ್ನಿಸದಿರುವಂತೆ ಎಚ್ಚರಿಕೆ ವಹಿಸುತ್ತಾರೆ. ಕುಟುಂಬ ಎಲ್ಲರಿಗೂ ಆಶ್ರಯ ತಾಣವಾಗಿದ್ದು, ಅಲ್ಲಿ ಗಂಡು ಹೆಣ್ಣು ಇಬ್ಬರು ಸಮಾನರೆಂಬ ಧೋರಣೆ ಎಂದಿಗೂ ಇಲ್ಲದಾಗಿದೆ. ಕುಟುಂಬದಲ್ಲಿ ಹೆಣ್ಣು ಸದಾ ಆಲಿಸುವವಳು ಮತ್ತು ಪಾಲಿಸುವವಳು ಎಂಬಂತಾದರೆ, ಗಂಡು ಸದಾ ಆದೇಶಿಸುವವನು, ಕುಟುಂಬದ ಒಡೆಯನಾಗಿರುವುದು ಕಂಡುಬರುತ್ತದೆ. ಇದನ್ನು ಸಾಮಾಜೀಕರಣ ಪ್ರಕ್ರಿಯೆ ಮೂಲಕ ಮಹಿಳೆಯರು ಇದಕ್ಕೆ ಒಗ್ಗಿಕೊಳ್ಳುವಂತೆ ಮಾಡಲಾಗುತ್ತದೆ. ಒಂದು ವೇಳೆ ಇದರ ವಿರುದ್ಧ ನಡೆದುಕೊಂಡರೆ ಅಲ್ಲಿ ಮಹಿಳೆಯರಿಗೆ ಹಿಂಸೆ ಕಟ್ಟಿಟ್ಟ ಬುತ್ತಿಯಾಗಿರುತ್ತದೆ. ಇಲ್ಲಿ ಎಷ್ಟೋ ಬಗೆಯ ಹಿಂಸೆ, ಹಿಂಸೆ ಎಂದು ಗುರುತಿಸಲಾಗದಷ್ಟು ಬದುಕಿನ ಭಾಗವಾಗಿ ಜರುಗುತ್ತಿರುವುದನ್ನು ಕಾಣಬಹುದಾಗಿದೆ. ಇವೆಲ್ಲವು ಪುರುಷಾಧಿಕಾರದ ನಿಯಂತ್ರಣದಲ್ಲಿಯೇ ನಡೆದುಕೊಂಡು ಬರುತ್ತಿವೆ. ಹೆಣ್ಣಿನ ಪ್ರತಿ ಹೆಜ್ಜೆ ಕುಟುಂಬ ನಿಯಂತ್ರಣದಲ್ಲಿ ನಡೆಯಬೇಕೆಂಬ ಪುರುಷ ಪ್ರಧಾನ ವ್ಯವಸ್ಥೆಯ ಆಶಯ ಹೆಣ್ಣನ್ನು ಹಿಂಸೆಗೊಳಪಡಿಸಲು ಕಾರಣವಾಗಿದೆ. ಹೆಣ್ಣಿನ ಭಾವನೆ, ಬದುಕು ಎಲ್ಲದರ ಮೇಲೂ ನಿಯಂತ್ರಣ ಹೇರಿ ಆಕೆಯನ್ನು ಹೇಳಿದಂತೆ ಕೇಳುವ ಗೊಂಬೆಯನ್ನಾಗಿಸಿದೆ.

ಹೆಣ್ಣುಮಕ್ಕಳ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ

ಅಭಿವ್ಯಕ್ತಿ ಸ್ವಾತಂತ್ರ್ಯಹರಣ ಆಕೆಯನ್ನು ಹೆಚ್ಚು ಹಿಂಸೆಗೊಳಪಡಿಸಲು ಕಾರಣವಾಗಿದೆ. ಹೆಣ್ಣು ತನ್ನ ಯಾವ ಭಾವನೆಗಳನ್ನು ಅಭಿವ್ಯಕ್ತಿಸುವಂತಿಲ್ಲ. ಇಂತಹ ಮನೋಭಾವನೆ ಮಹಿಳೆಯರನ್ನು ಹೆಚೆಚ್ಚು ಭಾವನಾತ್ಮಕ ಹಿಂಸೆಗೆ ಒಳಗಾಗುವಂತೆ ಮಾಡುತ್ತದೆ. ಮಹಿಳೆ ತನ್ನ ಮೇಲೆ ಏನೇ ದೌರ್ಜನ್ಯಗಳಾದರೂ ಅವನ್ನು ಮೌನವಾಗಿಯೇ ಅನುಭವಿಸಬೇಕು. ದೌರ್ಜನ್ಯಗಳ ವಿರುದ್ಧ ಪ್ರತಿಭಟಿಸುವುದಿರಲಿ ಅಭಿವ್ಯಕ್ತಿಸುವುದು ಕೂಡಾ ಅಪರಾಧ ಎಂಬಂತೆ ಸಮಾಜ ಕಾಣುತ್ತದೆ. ಉದಾಹರಣೆಗೆ ಗಂಡ ಅಧಿಕಾರದ ಅಮಲಿನಲ್ಲಿ ಹೆಂಡತಿಗೆ ಹೊಡೆದ ಎಂದರೆ, ಆಕೆ ಅದನ್ನು ತಪ್ಪು ಎಂದು ಪ್ರತಿಭಟಿಸುವುದಿರಲಿ ತನಗೆ ಹೀಗಾಗಿದೆ ಎಂದು ಗಂಡನನ್ನು ದೂಷಿಸುವ ಹಾಗೂ ಇಲ್ಲ. ಒಂದು ವೇಳೆ ದೂಷಿಸಿದರೆ ಪುರುಷ ಪ್ರಧಾನ ವ್ಯವಸ್ಥೆಗೆ ಬದ್ಧವಾದ ಜನಬಳಗದವರು 'ಗಂಡ ಹೊಡಿದೇ ಯಾರು ಹೊಡಿಬೇಕು?', 'ಸಂಸಾರದ ಗುಟ್ಟು ವ್ಯಾದಿ ರಟ್ಟು ಮಾಡಬಾರದಂತೆ, ಒಳಗ ನುಂಗ್‌ಕೋಬೇಕು' ಎಂದು ಹಿಂಸೆ ಅನುಭವಿಸಿದವರಿಗೆ ಬುದ್ಧಿ ಮಾತುಗಳಿವೆಂಬಂತೆ ಹೇಳುತ್ತಾರೆ. ಇಂತಹ ಮಾತುಗಳು ಹೆಣ್ಣು ಏನೇ ಹಿಂಸೆ ಅನುಭವಿಸಿದರೂ ಅಭಿವ್ಯಕ್ತಿಸದೆ ಒಳಗೊಳಗೆ ಮತ್ತಷ್ಟು ಹಿಂಸೆ ಅನುಭವಿಸುವಂತಾಗುತ್ತದೆ, ಹಾಗೂ ಹೆಣ್ಣಿಗೆ ಸೂಚಿಸುವ ಇಂತಹ ನಡುವಳಿಕೆ ಆಕೆಯ ಮೇಲೆ ಮತ್ತಷ್ಟು ಹಿಂಸೆಯನ್ನು ಸ್ಥಾಪಿಸುವಲ್ಲಿ ಸಹಾಯಕವಾಗುತ್ತದೆ.

ಕಾನೂನು ಜಾರಿಗೊಳ್ಳುವಲ್ಲಿನ ಕೆಲ ವೈಫಲ್ಯತೆಗಳು

ಕಾನೂನಿನ ಮಾಹಿತಿಗಳು ಹೇಗಾಗಿವೆ ಎಂದರೆ ಅವುಗಳ ತಿಳುವಳಿಕೆ ಕೇವಲ ಓದಿದವರಿಗೆ ಮಾತ್ರ ಎಂಬಂತಾಗಿದೆ. ಎಷ್ಟೋ ಜನಗಳಿಗೆ ಮಹಿಳೆಯರ ಮೇಲೆ ಕೌಟುಂಬಿಕ ದೌರ್ಜನ್ಯಗಳನ್ನೆಸಗುವುದು ಅಪರಾಧ ಎಂಬ ತಿಳುವಳಿಕೆಯೇ ಇಲ್ಲದಂತಾಗಿದೆ. ಅಷ್ಟೇ ಏಕೆ ಹಿಂಸೆಯನ್ನು ಅನುಭವಿಸುವ ಮಹಿಳೆಯರಿಗೆ ಕೂಡಾ ತಮ್ಮ ಮೇಲಿನ ದೌರ್ಜನ್ಯ ಕಾನೂನು ಬಾಹಿರವಾದದ್ದು ಎಂಬ ಅರಿವು ಇಲ್ಲದಂತಾಗಿದೆ. ಕಾರಣ ಮಹಿಳೆಯರ ಮೇಲಿನ ದೌರ್ಜನ್ಯ ಸಾಮಾಜಿಕವಾಗಿ ಒಪ್ಪಿಸಿ ನಡೆಸುತ್ತಿರುವುದರಾದ್ದರಿಂದ ಅದನ್ನು ನೀಡುವವರಿಗೆ ಭಯ ಅಥವಾ ಮಾನವೀಯತೆ ಆಧಾರದ ಮೇಲೆ ಯಾವುದೇ ಬಗೆಯ ಕೀಳರಿಮೆ ಇಲ್ಲದಂತಾಗಿದೆ. ಮಹಿಳೆಯರು ಒಂದು ವೇಳೆ ಕಾನೂನಿನ ಬಗ್ಗೆ ಮಾಹಿತಿ ಪಡೆದರೂ ಸಹ ಕಾನೂನಿನ ಮೊರೆ ಹೋಗಲು ಹಿಂಜರಿಯುತ್ತಾರೆ. ಕಾರಣ ತಮ್ಮ ಮೇಲೆ ದೌರ್ಜನ್ಯವೆಸಗುವವರು ಕುಟುಂಬದವರೇ ಆಗಿದ್ದರಿಂದ ತಾವು ಪುನಃ ಅವರೊಟ್ಟಿಗೆ ಜೀವನ ನಿರ್ವಹಣೆ ಮಾಡಬೇಕಿರುತ್ತದೆ. ಇದರಿಂದ ಮುಂದಿನ ಜೀವನಕ್ಕೆ ತೊಂದರೆ ಆಗಬಹುದೆಂದು ಕಾನೂನಿನಿಂದ ದೊರೆಯಬಹುದಾದ ನ್ಯಾಯ ನಿರ್ಣಯಗಳಿಂದ ದೂರ ಸರಿಯುತ್ತಾರೆ. ಮಹಿಳೆಯರನ್ನು ಅಧೈರ್ಯವಂತರನ್ನಾಗಿ ಬೆಳೆಸುವುದು ಅವರು ಯಾವುದೇ ನ್ಯಾಯ ನಿರ್ಣಯಗಳನ್ನು ತೆಗೆದುಕೊಳ್ಳದಂತೆ ಮಾಡುತ್ತದೆ. ಇಂತಹ ಬೆಳವಣಿಗೆ ಕಾನೂನಿನ ಸೌಲಭ್ಯ ಪಡೆಯುವಲ್ಲಿ ಮುಳುವಾಗುತ್ತದೆ.

ಇನ್ನು ಕಾನೂನುಗಳಲ್ಲಿನ ತೊಡಕುಗಳನ್ನು ಗಮನಿಸುವುದಾದರೆ, ಕೌಟುಂಬಿಕ ದೌರ್ಜನ್ಯಗಳನ್ನು ತಡೆಯುವಲ್ಲಿ ಕಾನೂನು ವಿಫಲವಾಗಿವೆ ಎಂಬುವುದಕ್ಕಿಂತ ಅವುಗಳನ್ನು ಬಳಸಿಕೊಳ್ಳುವಲ್ಲಿ ವ್ಯವಸ್ಥೆ ಮಹಿಳೆಯರಿಗೆ ತೊಡಕಾಗಿ ನಿರ್ಮಾಣಗೊಂಡಿದೆ. ಜೊತೆಗೆ ಕಾನೂನುಗಳು ಜಾರಿಗೊಳ್ಳುವುದು ನ್ಯಾಯಾಲಯಗಳಿಂದಾದ್ದರಿಂದ ಅಲ್ಲಿಯ ಕಾರ್ಯ ವೈಖರಿಯಲ್ಲಿನ ಕೆಲ ನ್ಯೂನ್ಯತೆಗಳು ಕಾನೂನುಗಳ ಮೊರೆ ಹೋಗಲು ಹಿಂದೆಟಾಕುವಂತೆ ಮಾಡಿದೆ. ನ್ಯಾಯ ನಿರ್ಣಯಗಳನ್ನು ಕೈಗೊಳ್ಳಲು ನ್ಯಾಯಾಲಯ ತನ್ನದೇ ಆದ ನೀತಿನಿಯಮಾವಳಿಗಳನ್ನ ಅನುಸರಿಸುತ್ತಿದ್ದು, ಅದು ತುಂಬಾ ವಿಳಂಬಕಾರಿ ಆದದ್ದಾಗಿದೆ. ಹಾಗೂ ಕೆಲ ಸಂದರ್ಭದಲ್ಲಿ ಇದು ಬಹಳಷ್ಟು ವೆಚ್ಚದಾಯಕವಾಗಿರುತ್ತದೆ. ಹೀಗಿರುವಾಗ ಆರ್ಥಿಕತೆಯ ಮೇಲೆ ಹಿಡಿತವಿಲ್ಲದಂತಹ ಮಹಿಳೆಯರು ಕಾನೂನಿನ ಮೂಲಕ ನ್ಯಾಯ ಪಡೆಯಬಹುದೆಂಬ ಆಶಯ ಕೊಂಚ ದೂರದ್ದೆನಿಸುತ್ತದೆ. ಕಾನೂನುಗಳು ಜಾರಿಗೊಳ್ಳುವಲ್ಲಿನ ಕೆಲ ನ್ಯೂನ್ಯತೆಗಳು ಮತ್ತು ಕಾನೂನುಗಳನ್ನು ಬಳಸಿಕೊಳ್ಳುವಲ್ಲಿ ಮಹಿಳೆಯರಿಗೆ ತೊಡಕಾಗಿರುವ ಸಾಮಾಜಿಕ ವ್ಯವಸ್ಥೆಕಾನೂನಿನ ಲಾಭ ಪಡೆಯುವಲ್ಲಿ ಹಿಂದೆಟಾಕುವಂತೆ ಮಾಡಿದೆ.

ಮಹಿಳೆಯರ ಆರ್ಥಿಕ ಸ್ವಾತಂತ್ರ್ಯದ ಹರಣ

ಪ್ರಸ್ತುತ ಜಗತ್ತು ಹಣಕಾಸಿನ ವ್ಯವಸ್ಥೆಯ ಮೇಲೆ ನಿಂತಿದ್ದು ಇದರ ಮೇಲೆ ಹಿಡಿತ ಹೊಂದುವಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಯಶಸ್ವಿಯಾಗಿದೆ. ಮಹಿಳೆಗೆ ಮೂಲಭೂತ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿಯೂ ಸಹ ಪರಾವಲಂಬಿಯನ್ನಾಗಿಸಿ ಆರ್ಥಿಕ ಕ್ಷೇತ್ರವನ್ನು ಪುರುಷ ಪ್ರಧಾನ ವ್ಯವಸ್ಥೆ ಸಂಪೂರ್ಣ ತನ್ನ ಹಿಡಿತದಲ್ಲಿರಿಸಿಕೊಂಡಿದೆ. ಮಹಿಳೆಯರಿಗೆ ಹಣ ಮತ್ತು ಆಸ್ತಿಯ ಮೇಲೆ ಒಡೆತನವನ್ನು ನಿರಾಕರಣೆ ಮಾಡುವ ಮೂಲಕ ಅವರನ್ನು ಆರ್ಥಿಕವಾಗಿ ಸಂಕಷ್ಟಕ್ಕೊಳಗಾಗುವಂತೆ

ಮಾಡಿದೆ. ಹೆಣ್ಣು ಪ್ರತಿಯೊಂದು ಹಣಕಾಸಿನ ವ್ಯವಹಾರಗಳಿಗೆ ಮನೆಯ ಪುರುಷರನ್ನೇ ಅವಲಂಬಿಸಿದ್ದು ಆ ಮೂಲಕ ಆರ್ಥಿಕ ದೌರ್ಜನ್ಯಕ್ಕೊಳಗಾಗುವಂತಾಗಿದೆ. ಹೆಣ್ಣು ದುಡಿದು ಆರ್ಥಿಕ ಗಳಿಕೆ ತಂದರೂ ಅದರ ಮೇಲೆ ಆಕೆಗೆ ಒಡೆತನದ ಹಕ್ಕು ಇಲ್ಲವೆಂಬಂತಹ ವಾತಾವರಣವನ್ನು ವ್ಯವಸ್ಥೆ ನಿರ್ಮಾಣ ಮಾಡಿದೆ. ಈ ರೀತಿಯಾಗಿ ಹೆಣ್ಣನ್ನು ಆರ್ಥಿಕತೆಯಿಂದ ಸಂಪೂರ್ಣವಾಗಿ ದೂರವಿರಿಸಿ ಆ ಮೂಲಕ ಮಹಿಳೆಯರನ್ನು ಆರ್ಥಿಕವಾಗಿ ದೌರ್ಜನ್ಯಕ್ಕೊಳಪಡಿಸುತ್ತಿದ್ದಾರೆ.

ಪುರುಷರು ಕುಟುಂಬದ ಆರ್ಥಿಕತೆ ಮೇಲೆ ಒಡೆತನ ಹೊಂದಿರುವುದರಿಂದ ಮಹಿಳೆಯರು ಸಹಜವಾಗಿಯೇ ಅವರು ಹೇಳಿದಂತೆ ಕೇಳಬೇಕಾದ ಅನಿವಾರ್ಯತೆ ಉಂಟಾಗಿದೆ. ಮನೆಯಿಂದ ಆಚೆ ಹೋದರೆ ಹಣ ಇಲ್ಲದೆ ಏನು ಜರುಗದಂತಹ ವಾತಾವರಣ ಇಂದು ಹೆಚ್ಚೆಚ್ಚು ಆರ್ಥಿಕ ಒತ್ತಡ ತರುತ್ತಿದೆ. ಇಂತಹ ಸಂದರ್ಭ ಸಹಜವಾಗಿಯೇ ಮಹಿಳೆಯರಿಗೆ ತೊಡಕಾಗಿ ನಿರ್ಮಾಣ ಗೊಳ್ಳುತ್ತದೆ, ಮತ್ತು ಅವರನ್ನು ಆರ್ಥಿಕ ಸಂಕಷ್ಟಕ್ಕೀಡು ಮಾಡುತ್ತದೆ. ಪುರುಷ ಸಂತತಿಗೆ ಸೇರುತ್ತಾ ಹೋಗುವ ಕುಟುಂಬದ ಆಸ್ತಿಯು ಮಹಿಳೆಯ ಸ್ವಾಧೀನಕ್ಕೆ ಬಾರದೇ ಮಹಿಳೆಯರು ಸದಾ ಆರ್ಥಿಕ ಸಂಕಷ್ಟದಲ್ಲಿ ಇರುವಂತೆ ಮಾಡಿದೆ. ಇಲ್ಲಿ ಮತ್ತೊಂದು ವಿಷಯವನ್ನು ಸ್ಪಷ್ಟಪಡಿಸುವುದಾದರೆ ಯಾವಾಗ ಮಾನವರಲ್ಲಿ ಆಸ್ತಿಯ ಕಲ್ಪನೆ ಮೂಡಿತೋ ಆವಾಗ ಹೆಣ್ಣು ಗಂಡಿನ ನಡುವೆ ತಾರತಮ್ಯಗಳು ಏರ್ಪಟ್ಟವು. ಪುರುಷನ ಕುತಂತ್ರ ನೀತಿಗೆ ಒಳಪಟ್ಟು ಮೂಲವಾಗಿ ಆಸ್ತಿಯ ಒಡೆತನ ಹೊಂದಿದ ಮಹಿಳೆಯಿಂದ ಕ್ರಮೇಣ ಪುರುಷನಿಗೆ ಎಲ್ಲಾ ಆರ್ಥಿಕ ಒಡೆತನದ ಹಕ್ಕುಗಳು ವರ್ಗಾವಣೆಗೊಂಡವು. ಆ ಮೂಲಕ ಪುರುಷ ಆರ್ಥಿಕತೆ ಮೇಲೆ ಹಿಡಿತ ಸಾಧಿಸಿ ಮಹಿಳೆಯರನ್ನು ಆರ್ಥಿಕವಾಗಿ ದೌರ್ಜನ್ಯಗಳೆಸಗುತ್ತಿರುವುದು ಕಂಡುಬರುತ್ತವೆ.

ಮಹಿಳೆಯರಲ್ಲಿ ವ್ಯಕ್ತಿ ಸ್ವಾತಂತ್ರ್ಯದ ಕಲ್ಪನೆ ಮೂಡದಿರುವುದು ಹಾಗೂ ಅದನ್ನು ಕಾರ್ಯಗತ ಗೊಳಿಸದಿರುವುದು

ವ್ಯಕ್ತಿ ಸ್ವಾತಂತ್ರ್ಯ ಎಂದರೆ ತಮಗೆ ಭೂಮಿಯ ಮೇಲೆ ಹೆಣ್ಣಾಗಿ ಹುಟ್ಟಿ ಗಂಡಿನಷ್ಟೇ ಸರಿಸಮಾನಳು ಎಂಬ ಅರಿವು ಇಲ್ಲದಿರುವುದಾಗಿದೆ. ಇದನ್ನು ಇನ್ನೊಂದು ಅರ್ಥದಲ್ಲಿ ಸ್ತ್ರೀವಾದದ ಮನೋಭಾವ ಅಥವಾ ಕಲ್ಪನೆ ಇಲ್ಲದಿರುವುದಾಗಿದೆ ಎಂದು ಹೇಳಬಹುದು. ಒಂದು ವೇಳೆ ಮಹಿಳೆಯರು ಈ ಬಗೆಯ ಅರಿವು ತಂದುಕೊಂಡರೆ ಪುರುಷ ಪ್ರಧಾನ ವ್ಯವಸ್ಥೆ ಅದನ್ನು ಸೂಕ್ಷ್ಮವಾಗಿ ಹತ್ತಿಕ್ಕಿಬಿಡುತ್ತದೆ.

ಯಾಕೆ ವ್ಯಕ್ತಿ ಸ್ವಾತಂತ್ರ್ಯದ ಕಲ್ಪನೆ ಇಲ್ಲದಿರುವುದು ಮಹಿಳಾ ದೌರ್ಜನ್ಯಕ್ಕೆ ಹೇಗೆ ಕಾರಣ ಆಗಿದೆ ಎಂಬುದನ್ನು ಗುರುತಿಸಲಾಗಿದೆ ಎಂದರೆ, ಮಹಿಳೆಯರ ಸಮಸ್ಯೆಗಳಿಗೆ ಕೇವಲ ಒಂದು ದಿಕ್ಕಿನಿಂದ ಪರಿಹಾರ ಕಂಡುಕೊಳ್ಳುವುದು ಸೂಕ್ತ ಎಂದು ಹೇಳಲಾಗುವುದಿಲ್ಲ. ಬದಲಾಗಿ ಯಾರಿಗಾಗಿ ಈ ಬದಲಾವಣೆ ಎಂದು ಹೇಳ ಹೊರಟಿದ್ದೇವೆಯೋ ಆ ಮನಸ್ಸುಗಳಲ್ಲಿ ವ್ಯಕ್ತಿ ಸ್ವಾತಂತ್ರ್ಯದ ಕಲ್ಪನೆ, ಅಭಿವ್ಯಕ್ತಿ ಸ್ವಾತಂತ್ರ್ಯದ ಕಲ್ಪನೆ ಮೂಡುವುದು ಅಷ್ಟೇ ಮುಖ್ಯವಾಗಿದೆ. ಈ ಬಗೆಯ ಆಲೋಚನೆ ಮಹಿಳೆಯರಲ್ಲಿ ಇಲ್ಲದಿರುವುದೇ ಅವರ ಮೇಲಿನ ಕೌಟುಂಬಿಕ ದೌರ್ಜನ್ಯಗಳಿಗೆ ಕಾರಣವಾಗಿದೆ. ಪುರುಷ ಪ್ರಧಾನ ಸಮಾಜ ಈ ಬಗೆಯ ಆಲೋಚನೆಗೆ ಮಹಿಳೆಯರಿಗೆ ದಾರಿ ಮಾಡಕೊಡದು

ಎಂದು ಹೇಳಲಾಗುತ್ತದೇನೊ ಸರಿ, ಆದರೆ ಈ ಬಗೆಯ ಆಲೋಚನೆ ಇರುವ ಅದೆಷ್ಟು ಮಹಿಳೆಯರು ಪುರುಷ ಪ್ರಧಾನ ಸಂಕೋಲೆಗಳಿಂದ ಮುಕ್ತಿ ಪಡೆಯುವಲ್ಲಿ ಇಚ್ಚಿತರಾಗಿದ್ದಾರೆ ಎಂಬುವುದನ್ನ ಸಹ ಗಮನಿಸಬೇಕಾಗುತ್ತದೆ.

ಸಂವಿಧಾನಾತ್ಮಕ ವ್ಯವಸ್ಥೆಯಲ್ಲಿ ಇಂದು ಬದುಕುತ್ತಿದ್ದು, ಸಂವಿಧಾನ ನೀಡಿದ ಎಲ್ಲಾ ಹಕ್ಕುಗಳಿಗೂ ಮಹಿಳೆಯರು ಬದ್ಧರಾಗಿದ್ದಾರೆ. ಇದನ್ನು ಅರಿತಾಗಲೂ ಮಹಿಳೆಯರು ತಮಗೆ ನೀಡಿದ ಹಕ್ಕುಗಳನ್ನು ಪಡೆಯುವಲ್ಲಿ ಹಿಂದೆಟಾಕುತ್ತಿದ್ದಾರೆ. ಒಟ್ಟಾರೇ ಇಡೀ ಸಾಮಾಜಿಕ ವ್ಯವಸ್ಥೆಯೇ ಪುರುಷ ಪ್ರಧಾನವಾಗಿ ರಚಿಸಲ್ಪಟ್ಟಿದ್ದು, ಅದರಲ್ಲಿ ಮಹಿಳೆಯರ ಎಲ್ಲಾ ವರ್ತನೆಗಳು ರೂಪಿಸಲ್ಪಟ್ಟವುಗಳಾಗಿವೆ. ಹೀಗಿರುವಾಗ ಮಹಿಳೆಯರು ಅದನ್ನು ಅರಿತು ಯಾವ ಅಂಶಗಳು ತಮಗೆ ಸಮಾಜದಲ್ಲಿ ಬದುಕಲು ಯೋಗ್ಯವೆನುಸುತ್ತದೆಯೋ ಅವುಗಳನ್ನು ಮಾತ್ರ ಅನುಸರಿಸಿಕೊಂಡು ಮಿಕ್ಕೆಲ್ಲಾ ನಡಾವಳಿಗಳನ್ನು ವ್ಯಕ್ತಿಯ ಆಯ್ಕೆ ಸ್ವಾತಂತ್ರ್ಯದ ಹಿನ್ನೆಲೆಯಲ್ಲಿ ಮಾರ್ಪಡಿಸಿಕೊಳ್ಳುತ್ತಾ ಹೋಗಬೇಕಾಗುತ್ತದೆ. ಇಂತಹ ಹಲವಾರು ಅಂಶಗಳ ಬಗ್ಗೆ ಮಹಿಳೆಯರು ನಿರಾಸಕ್ತರಾಗಿದ್ದಾರೆ. ಅವರಿಗೆ ವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಅರಿವೇ ಇಲ್ಲದಂತಾಗಿದೆ. ಒಂದು ವೇಳೆ ವ್ಯಕ್ತಿಗತವಾಗಿ ತಮ್ಮನ್ನು ಗುರುತಿಸಿಕೊಂಡರೂ ಅದನ್ನು ಸಾಮಾಜಿಕವಾಗಿ ಅಳವಡಿಸಿಕೊಳ್ಳುವವರು ತೀರಾ ಕಡಿಮೆ ಸಂಖ್ಯೆಯಲ್ಲಿ ಲಭ್ಯವಾಗುತ್ತಾರೆ.

ಒಟ್ಟಾರೆಯಾಗಿ ಪುರುಷ ಪ್ರಧಾನ ವ್ಯವಸ್ಥೆಯ ನಡಾವಳಿಗಳನ್ನು ಹುಡುಕ ಹೊರಟರೆ ಇಂತಹ ಇನ್ನು ಹತ್ತು ಹಲವಾರು ಅಂಶಗಳು ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ ಕಾರಣಗಳಾಗಿ ಸಾಕ್ಷೀಕರಿಸುತ್ತವೆ. ಮಹಿಳೆಯರ ಮೇಲಿನ ಇಂತಹ ಲಿಂಗ ಆಧಾರಿತ ದೌರ್ಜನ್ಯಗಳಿಗೆ ಕಾರಣಗಳೆನೆಂದು ಅವಲೋಕಿಸಿದಾಗ ಈ ಎಲ್ಲಾ ಅಂಶಗಳು ಗೋಚರಿಸುತ್ತವೆನೋ ನಿಜ, ಆದರೆ ಇವು ಕೇವಲ ಮೇಲು ನೋಟದ ಫಲಿತಾಂಶಗಳಾಗಿವೆಯೇ ಹೊರತು ಲಿಂಗ ತಾರತಮ್ಯದ ನಂಟಿನ ಮಹಿಳಾ ದೌರ್ಜನ್ಯಕ್ಕೆ ಕಾರಣಗಳಾಗಿರುವ ಅಂಶಗಳಿವುಗಳಲ್ಲ. ಅವನ್ನು ಅರಿಯಬೇಕೆಂದರೆ ಸ್ತ್ರೀವಾದದ ದೃಷ್ಟಿಕೋನ ಒಂದೇ ಸರಿಯಾದ ಮಾರ್ಗವಾಗಬಲ್ಲದು.

ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಮೇಲಾಗುವ ಪರಿಣಾಮಗಳು

ಕೌಟುಂಬಿಕ ದೌರ್ಜನ್ಯದಿಂದಾಗಿ ಮಹಿಳೆಯರ ಮೇಲೆ ಅನೇಕ ಪರಿಣಾಮಗಳುಂಟಾಗುತ್ತಿದ್ದು, ಅದರಿಂದ ಮಹಿಳೆಯರು ತಮ್ಮ ವ್ಯಕ್ತಿತ್ವದ ಬಗ್ಗೆ ಗಮನಹರಿಸದಂತಾಗಿದೆ. ಪುರುಷ ಪ್ರಧಾನ ವ್ಯವಸ್ಥೆ ಮಹಿಳೆಯರನ್ನು ಸದಾ ತನ್ನ ಅಂಕಿತದಲ್ಲಿಟ್ಟುಕೊಳ್ಳಲು ದೌರ್ಜನ್ಯದಂತಹ ಕೃತ್ಯವನ್ನು ಅಸ್ತ್ರವಾಗಿ ಬಳಸಿಕೊಳ್ಳುತ್ತಿರುವುದರ ಬಗ್ಗೆ ಈಗಾಗಲೇ ಚರ್ಚಿಸಿದ್ದೇವೆ. ಇದರ ಜೊತೆಗೆ ಮಹಿಳೆಯರು ಕೌಟುಂಬಿಕ ದೌರ್ಜನ್ಯಗಳಿಂದ ಅನೇಕ ರೀತಿಯ ಪರಿಣಾಮಗಳನ್ನು ಎದುರಿಸುವಂತಾಗಿದ್ದು, ಅವುಗಳ ಬಗ್ಗೆಯೂ ಸಹ ತಿಳಿದುಕೊಳ್ಳುವುದು ಅಗತ್ಯವಾಗಿದೆ. ದೌರ್ಜನ್ಯವನ್ನು ದೈಹಿಕವಾಗಿ ನೀಡಲಿ ಅಥವಾ ಮಾನಸಿಕವಾಗಿಯೇ ನೀಡಲಿ ಅದು ಮಹಿಳೆಯ ದೇಹದ ಮೇಲೆ ಪರಿಣಾಮವನ್ನು ಬೀರುವುದು ಮಾತ್ರವಲ್ಲದೇ ಆಕೆಯ ವ್ಯಕ್ತಿತ್ವ ನಿರ್ಮಾಣದ ಮೇಲೆ ಹಾಗೂ ಇಡೀ ಜೀವನದ ಮೇಲೆ ಅನೇಕ ರೀತಿಯ ದುಷ್ ಪರಿಣಾಮವನ್ನುಂಟು ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಮೇಲಾಗುತ್ತಿರುವ ಪರಿಣಾಮಗಳನ್ನು ಹೀಗೆ ವಿವರಿಸಬಹುದಾಗಿದೆ,

* ಮಹಿಳೆಯರು ಅಪರಾಧಿಗಳಾಗುವ ಸಾಧ್ಯತೆ ಹೆಚ್ಚಿರುತ್ತದೆ.
* ಮಹಿಳೆಯರ ದೈಹಿಕ ಆರೋಗ್ಯದ ಮೇಲೆ ನೇರ ಪರಿಣಾಮಗಳನ್ನುಂಟು ಮಾಡುತ್ತದೆ.
* ಮಾನಸಿಕವಾಗಿ ಅನುಭವಿಸುವ ಹಿಂಸೆಗಳಿಂದ ಮಾನಸಿಕ ಕಾಯಿಲೆಗಳಾದ ಉದ್ವೇಗ, ಖಿನ್ನತೆಗೊಳಗಾಗುವ ಸಾಧ್ಯತೆಗಳಿರುತ್ತದೆ.
* ಕುಟುಂಬದೊಳಗೆ ಮಕ್ಕಳ ಮೇಲೆ ದುಷ್ಪರಿಣಾಮಗಳಾಗುತ್ತವೆ.
* ಮಹಿಳೆಯರ ವ್ಯಕ್ತಿತ್ವ ವಿಕಸನಕ್ಕೆ ತಡೆಯನ್ನುಂಟು ಮಾಡುತ್ತದೆ.
* ದೌರ್ಜನ್ಯದ ಅತಿರೇಕ ಮಹಿಳೆಯರ ಸಾವಿನ ಮೂಲಕ ಅಂತ್ಯಗೊಳ್ಳುವುದನ್ನು ಕಾಣಬಹುದಾಗಿದೆ.
* ಮಹಿಳೆಯರು ಹೆಚ್ಚೆಚ್ಚು ಪರಾವಲಂಬಿಗಳಾಗುತ್ತಿದ್ದಾರೆ.
* ಮಹಿಳೆ ಮತ್ತೆ ಮತ್ತೆ ಎರಡನೇ ದರ್ಜೆಯ ಪ್ರಜೆಯಾಗಿ ಸ್ವ ಹಿತಾಸಕ್ತಿಯಿಂದ ಗುರುತಿಸಿ ಕೊಳ್ಳುವಂತಾಗಿದೆ.
* ಮಹಿಳೆಯರು ತಮ್ಮ ಸ್ವ-ವ್ಯಕ್ತಿತ್ವವನ್ನು ಮರೆತು ಪುರುಷರ ಮೂಲಕವೇ ತಮ್ಮನ್ನು ಗುರುತಿಸಿಕೊಳ್ಳುವಂತಾಗಿದೆ.

ಅಡಿಟಿಪ್ಪಣಿಗಳು

೧. ಸ್ತ್ರೀವಾದ ದಿಕ್ಸೂಚಿ, ಡಾ.ಆರ್. ಇಂದಿರಾ, ಪು.ಸಂ.೪೧.

೨. ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ, ಡಾ.ಡಿ. ಮಂಗಳಾ ಪ್ರಿಯದರ್ಶಿನಿ, ಪು.ಸಂ.೧೦೬.

೩. ಸಮಾಜಶಾಸ್ತ್ರದ ಮೂಲತತ್ವಗಳು, ಎಸ್.ಎಸ್. ಸರಗಣಾಚಾರಿ, ಪು.ಸಂ.೨೯.

ಅಧ್ಯಾಯ : ನಾಲ್ಕು

ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳನ್ನು ತಡೆಯುವ ಕಾನೂನುಗಳು ಮತ್ತು ಅವುಗಳ ಚರ್ಚೆ

೪.೧. ಕಾನೂನುಗಳು

೪.೧.೧. ಗರ್ಭಪಾತ(ಕಲಂ ೩೧೨-೩೧೪)

೪.೧.೨. ಜನನ ಪೂರ್ವ ರೋಗ ಪರೀಕ್ಷೆ; ತಂತ್ರಜ್ಞಾನ ನಿಯಂತ್ರಣ ಮತ್ತು ದುರ್ಬಳಕೆ ತಡೆ ಕಾಯ್ದೆ(೧೯೯೪)

೪.೧.೩. ಬಾಲ್ಯ ವಿವಾಹ ನಿಷೇಧ ಕಾಯ್ದೆ(೧೯೨೯ ತಿದ್ದುಪಡಿ ೧೯೭೮)

೪.೧.೪. ಮಗುವನ್ನು ಬೀದಿಗೆ ಬಿಡುವುದು(ಕಲಂ ೩೧೭)

೪.೧.೫. ವಿಧವಾ ಪುನರ್ ವಿವಾಹ(೧೮೫೬)

೪.೧.೬. ಅನೈತಿಕ ವ್ಯವಹಾರಗಳಿಗಾಗಿ ಮಹಿಳೆಯರ ಸಾಗಣೆ (೧೯೫೮ ತಿದ್ದುಪಡಿ ೧೯೮೬)

೪.೧.೭. ಬಾಲ ಕಾರ್ಮಿಕರ ತಡೆ ಕಾಯ್ದೆ(೧೯೮೬)

೪.೧.೮. ವರದಕ್ಷಿಣೆ ನಿಷೇಧ

೪.೧.೯. ಜೀವನಾಂಶ

೪.೧.೧೦. ಅತ್ಯಾಚಾರ ಕಾಯ್ದೆ

೪.೧.೧೧. ಆಸ್ತಿ ಹಕ್ಕು

೪.೧.೧೨. ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ(೨೦೦೫)

೪.೧.೧೩. ಸಿಡಾ(ಅಂತರಾಷ್ಟ್ರೀಯ ಮಟ್ಟದಲ್ಲಿ)

೪.೧.೧೪. ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) ಅಧಿನಿಯಮ(೧೯೮೨)

೪.೨. ಕೊಪ್ಪಳ ತಾಲ್ಲೂಕು ನ್ಯಾಯಾಲಯಗಳಲ್ಲಿ ದಾಖಲಾದಂತಹ ಅಂಕಿ-ಅಂಶಗಳ ಪಟ್ಟಿ

೪.೩. ಕಾನೂನಿನ ಸೂಕ್ಷ್ಮಾವಲೋಕನ.

೪.

ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳನ್ನು ತಡೆಯುವ ಕಾನೂನುಗಳು ಮತ್ತು ಅವುಗಳ ಚರ್ಚೆ

೪.೧. ಕಾನೂನುಗಳು

ಇಡೀ ಮಾನವ ಕುಲದಲ್ಲಿ ಅರ್ಧಭಾಗ ಮಹಿಳೆಯರೇ ಇದ್ದು, ಮಾನವ ಕುಲದ ಉಳಿವಿಗೆ ಅವರ ಕೊಡುಗೆ ಅಪಾರ. ಇಂತಹ ಮಹಿಳೆಯರ ಮೇಲೆ ದಿನ ನಿತ್ಯ ಕುಟುಂಬದಲ್ಲಿ ತನ್ನವರೆನಿಸಿ ಕೊಂಡವರಿಂದಲೇ ದೌರ್ಜನ್ಯಗಳು ನಡೆಯುತ್ತಿರುವುದು ತುಂಬಾ ಶೋಚನೀಯ ಸಂಗತಿಯಾಗಿದೆ. ಮಹಿಳೆಯರ ಈ ಸ್ಥಿತಿ ಇಂದು ನಿನ್ನೆಯದ್ದಾಗಿರದೇ ಶತ ಶತಮಾನಗಳಿಂದ ನಡೆಯುತ್ತ ಬಂದಿರುವುದನ್ನು ಕಾಣಬಹುದಾಗಿದೆ.

'ಯತ್ರ ನಾರ್ಯಸ್ತು ಪೂಜ್ಯ ತತ್ರ ದೇವತಾಂ' ಎಂದು ಭಾರತೀಯ ಸಾಮಾಜಿಕ ಸಂದರ್ಭದಲ್ಲಿ ಮಹಿಳೆಯರನ್ನು ಪೂಜಿಸುತ್ತಾ, ವೈಭವೀಕರಿಸುತ್ತಾ ಅವರನ್ನು ವ್ಯವಸ್ಥಿತವಾಗಿ ದೌರ್ಜನ್ಯಗಳಿಗೆ ಒಳಪಡಿಸುತ್ತಿರುವುದು ಕಂಡುಬರುತ್ತದೆ. ಇದರಿಂದಾಗಿ ಮಹಿಳೆಯರಿಗೆ ಮನೆಯ ಒಳಗೂ ಹೊರಗೂ ನೆಮ್ಮದಿಯುತ ಬದುಕು ಇಲ್ಲದಂತಾಗಿದೆ. ಆಚಾರ-ವಿಚಾರ, ಸಂಪ್ರದಾಯ, ನಡಾವಳಿಗಳ ಮೂಲಕ ಮಹಿಳೆಯರ ಮೇಲೆ ದೌರ್ಜನ್ಯವನ್ನು ಒಪ್ಪಿತ ನೆಲೆಯಲ್ಲೆ ವ್ಯವಸ್ಥೆ ಸ್ಥಾಪಿತಗೊಳಿಸುತ್ತಲಿದೆ. ಮಹಿಳೆಯರಿಗೆ ಯಾವೊಂದು ಸ್ವಂತ ವಿಚಾರ ಶಕ್ತಿ ಇಲ್ಲದಂತೆ ಮಾಡಿ, ಅವರು ಮಾಡುವ ವಿಚಾರಗಳೆಲ್ಲವು ವ್ಯವಸ್ಥೆಗೆ ಪೂರಕವಾಗಿರುವಂತೆ ನಿರ್ಮಿಸಿದೆ ಅಥವಾ ನಿರ್ದೇಶಿಸಿದೆ ಎಂದು ಹೇಳಬಹುದು. ಮಹಿಳೆಯರು ಅವರು ಅವರಾಗಿರದೇ ಹುಟ್ಟುತ್ತಲೇ ಸಮಾಜದಿಂದ ರೂಪಿಸಲ್ಪಟ್ಟವರಾಗಿ ಬೆಳೆಯುತ್ತಿರುವುದು ಕಂಡುಬರುತ್ತಿದೆ. ಪ್ರತಿಭಟನೆಗೂ ಕೂಡಾ ಅವಕಾಶವಿರದಂತೆ ವ್ಯವಸ್ಥೆ ಅವರನ್ನು ಸದಾ ಸೆದೆಬಡಿಯುತ್ತಲೆ ಇರುತ್ತದೆ. ಇಂತಹ ಅನಿವಾರ್ಯದ ಪರಿಸ್ಥಿತಿಯಲ್ಲಿ ಮಹಿಳೆಯರು ಸಂಕಷ್ಟಗಳನ್ನು ಅನುಭವಿಸುವುದು ಬಿಟ್ಟರೆ ಅವರಿಗೆ ಬೇರೆನೂ ಮಾರ್ಗ ಇಲ್ಲದಂತಾಗಿದೆ.

ನೆಮ್ಮದಿ ತಾಣಗಳಾಗಬೇಕಾಗಿರುವ ಕುಟುಂಬಗಳಲ್ಲಿ ದಿನನಿತ್ಯ ಮಹಿಳೆಯರ ವಿರುದ್ಧವಾಗಿ ಹಲವಾರು ದೌರ್ಜನ್ಯಗಳು ನಡೆಯುತ್ತಲಿವೆ. ಅವು ಮಹಿಳೆಯರನ್ನು ಮಾನಸಿಕವಾಗಿ, ದೈಹಿಕವಾಗಿ, ಶಾಬ್ಧಿಕವಾಗಿ, ಲೈಂಗಿಕವಾಗಿ, ಆರ್ಥಿಕವಾಗಿ ಘಾಸಿಗೊಳಿಸುತ್ತಿರುವುದು ಕಂಡುಬರುತ್ತಿದೆ. ಇಷ್ಟಲ್ಲದೇ ಹೆಣ್ಣುಮಕ್ಕಳನ್ನು ದೇವರ ದಾಸಿಯರನ್ನಾಗಿಸುವುದು, ದುರ್ಬಳಕೆ ಮಾಡಿಕೊಳ್ಳುವುದು, ಹೆಣ್ಣು ಮತ್ತು ಗಂಡು ಮಕ್ಕಳ ಮಧ್ಯ ಲಿಂಗ ತಾರತಮ್ಯ ಮಾಡುವುದು ಕಂಡುಬರುತ್ತದೆ. ಇದಷ್ಟೇ ಅಲ್ಲದೇ ಈ

ಹಿಂದೆ ಸತಿ ಸಹಗಮನ ಪದ್ಧತಿಯಂತಹ ಅನಿಷ್ಟ ಪದ್ಧತಿ ಜಾರಿಯಲ್ಲಿತ್ತು. ಈ ಎಲ್ಲಾ ಬಗೆಯ ದೌರ್ಜನ್ಯಗಳಿಂದ ಇಡೀ ಮಹಿಳಾ ಸಂಕುಲ ಸದಾ ಭಯದ ವಾತಾವರಣದಲ್ಲಿ ಜೀವನ ಸಾಗಿಸುವಂತಾಗಿದ್ದು, ಯಾವುದೇ ಸ್ವ ಅನುಭವವನ್ನೂ ಸಹ ಅವರಿಗೆ ಇಲ್ಲವಾಗಿಸಿದೆ.

ಇಂತಹ ಹಲವಾರು ಸಮಸ್ಯೆಗಳಿಂದ ಮಹಿಳೆಯರು ಹೊರಬರಲು ಅಥವಾ ಸಮಸ್ಯೆಗಳಿಗೆ ಪರಿಹಾರವೆಂಬಂತೆ ಬ್ರಿಟಿಷರ ಆಳ್ವಿಕೆ ಸಂದರ್ಭದಲ್ಲಿ ಅನೇಕ ಕಾನೂನುಗಳು ಸ್ತ್ರೀಪರ ಹೋರಾಟದ ಭಾಗವಾಗಿ ಜಾರಿಗೊಂಡವು. ಅಂದು ಈ ಹೋರಾಟಗಳು ಸಮಾಜ ಸುಧಾರಣಾ ಚಳುವಳಿಗಳಾಗಿದ್ದವು. ಈ ಮೂಲದಿಂದಲೇ ಮೌಢ್ಯ ಸಂಪ್ರದಾಯಗಳಿಂದ ಕೂಡಿದ್ದ ಭಾರತೀಯ ಸಮಾಜ ಮಂದಗತಿಯಲ್ಲಿ ಪರಿವರ್ತನೆ ಹೊಂದಲು ಸಹಕಾರವಾಯಿತು ಎಂದು ಹೇಳಬಹುದು. ಈ ಸಂದರ್ಭದಲ್ಲಿ ನಡೆದ ಹೋರಾಟಗಳನ್ನು ೧೮ ಮತ್ತು ೧೯ನೇ ಶತಮಾನದಲ್ಲಿ ನಡೆದ ಸಮಾಜ ಸುಧಾರಣಾ ಚಳುವಳಿಗಳೆಂದು ಗುರುತಿಸಲಾಯಿತು. ಈ ಚಳುವಳಿಗಳ ಪ್ರಮುಖ ಕಾರಣಿಕರ್ತರೆಂದರೆ ರಾಜಾರಾಮ್ ಮೋಹನರಾಯ್, ಜ್ಯೋತಿ ಬಾ ಪುಲೆ, ಸ್ವಾಮಿ ದಯಾನಂದ ಸರಸ್ವತಿ ಹೀಗೆ ಇನ್ನು ಮುಂತಾದವರು. ಇವರೆಲ್ಲರೂ ಭಾರತೀಯ ಸಮಾಜದಲ್ಲಿ ಬಹಳಷ್ಟು ಆಳವಾಗಿ ಬೇರೂರಿದ್ದಂತಹ ಕೆಟ್ಟ ಸಂಪ್ರದಾಯಗಳಾದ ಬಾಲ್ಯ ವಿವಾಹ, ಸತಿ ಸಹಗಮನ ಪದ್ಧತಿ, ವಿಧವಾ ಪುನರ್ ವಿವಾಹ ನಿರಾಕರಣೆ, ಸ್ತ್ರೀ ಶಿಕ್ಷಣ ನೀಡದಿರುವಂತಹ ಇನ್ನು ಹಲವಾರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಯಶಸ್ವಿಯಾದರು. ಒಟ್ಟಾರೆಯಾಗಿ ಬ್ರಿಟಿಷರ ಆಳ್ವಿಕೆಯಂತಹ ಸಂದರ್ಭದಲ್ಲಿ ಭಾರತೀಯ ಮಹಿಳೆಯರ ರಕ್ಷಣೆಗಾಗಿ ಕಾನೂನು ಜಾರಿಗೊಳಿಸುವಲ್ಲಿ ಈ ಗಣ್ಯರ ಹೋರಾಟ ನಗಣ್ಯವಾದದ್ದಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಈ ಸಮಾಜ ಸುಧಾರಕರಿಂದ ಸ್ತ್ರೀ ಹಿಂಸೆಯಂತಹ ಸಮಸ್ಯೆಗಳಿಗೆ ದೊರೆತ ಪ್ರತಿಫಲಗಳಿವುಗಳಾದರೆ, ಸ್ವಾತಂತ್ರ್ಯ ನಂತರದಲ್ಲಂತೂ ಅನೇಕ ಕಾನೂನುಗಳು ಮಹಿಳೆಯರನ್ನು ದೌರ್ಜನ್ಯಗಳಿಂದ ಮುಕ್ತಿಗೊಳಿಸುವಲ್ಲಿ ಜಾರಿಗೊಂಡಿರುವುದನ್ನು ಕಾಣಬಹುದಾಗಿದೆ. ಅವುಗಳೆಂದರೆ ಗರ್ಭಪಾತ (ಕಲಂ ೩೧೨-೩೧೮), ಜನನ ಪೂರ್ವರೋಗ ಪರೀಕ್ಷೆ ತಂತ್ರಜ್ಞಾನ, ನಿಯಂತ್ರಣ ಮತ್ತು ದುರ್ಬಳಕೆ ತಡೆ ಕಾಯ್ದೆ (೧೯೯೪), ಬಾಲ್ಯ ವಿವಾಹ ನಿಷೇಧ ಕಾಯ್ದೆ (೧೯೨೯ ತಿದ್ದುಪಡಿ ೧೯೭೮), ವಿಧವಾ ಪುನರ್ ವಿವಾಹ (೧೮೫೬), ಅನೈತಿಕ ವ್ಯವಹಾರಗಳಿಗಾಗಿ ಮಹಿಳೆಯರ ಸಾಗಣೆ (೧೯೫೮ ತಿದ್ದುಪಡಿ ೧೯೮೬), ಬಾಲ ಕಾರ್ಮಿಕರ ತಡೆ ಕಾಯ್ದೆ (೧೯೮೬), ವರದಕ್ಷಿಣೆ ನಿಷೇಧ ಕಾಯ್ದೆ (೧೯೬೧), ದೇವದಾಸಿ ಪದ್ಧತಿ ನಿಷೇಧ ಕಾಯ್ದೆ (೧೯೮೪), ಅತ್ಯಾಚಾರ ಕಾಯ್ದೆ, ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ (೨೦೦೫). ಹೀಗೆ ಇನ್ನು ಹಲವಾರು ಕಾಯ್ದೆಗಳು ಮಹಿಳೆಯರನ್ನು ದೌರ್ಜನ್ಯಗಳಿಂದ ಮುಕ್ತಗೊಳಿಸುವಲ್ಲಿ ಪರಿಹಾರಗಳಾಗಿ ಜನ್ಮತಳೆದಿವೆ. ಇವಷ್ಟೇ ಅಲ್ಲದೇ ವಿಶ್ವಸಂಸ್ಥೆಯೂ ಕೂಡಾ ಹೆಣ್ಣು ಗಂಡೆಂಬ ಕಾರಣಕ್ಕೆ ತಾರತಮ್ಯ ಮಾಡುವುದನ್ನು ಅಪರಾಧವನ್ನಾಗಿಸಿದೆ. ಇಷ್ಟೆಲ್ಲಾ ಕಾನೂನುಗಳು ಜಾರಿಗೊಂಡಿದ್ದರೂ ಸಹ ಮಹಿಳೆಯರ ಮೇಲೆ ಪ್ರತಿ ಕ್ಷಣವು ಕೌಟುಂಬಿಕ ದೌರ್ಜನ್ಯಗಳು ನಡೆಯುತ್ತಿರುವುದು ನಿಜಕ್ಕೂ ಆಶ್ಚರ್ಯಕರ ಹಾಗೂ ಚಿಂತೆಗೀಡು ಮಾಡುವಂತಹ ಸಂಗತಿಯಾಗಿದೆ. ಇದೆಲ್ಲವನ್ನು ಗಮನಿಸಿದಾಗ ಕಾನೂನುಗಳು ಸರಿಯಾಗಿ ಕಾರ್ಯ ನಿರ್ವಹಣೆ ಗೊಳ್ಳುತ್ತಿಲ್ಲವೋ ಅಥವಾ ಅವುಗಳನ್ನು ಮಹಿಳೆಯರು ಸರಿಯಾಗಿ ಬಳಸಿಕೊಳ್ಳುತ್ತಿಲ್ಲವೋ ಅಥವಾ ಬಳಸಿಕೊಳ್ಳದಂತಹ ವಾತಾವರಣ ವ್ಯವಸ್ಥೆ ನಿರ್ಮಿಸಿದೆಯೋ

ಎಂಬುದು ಪ್ರಶ್ನಾರ್ಹವಾಗಿದೆ. ಒಂದು ವೇಳೆ ಕಾನೂನುಗಳೇ ಸರಿಯಾಗಿ ಕಾರ್ಯ ನಿರ್ವಹಣೆ ಗೊಳ್ಳುತ್ತಿಲ್ಲವೆಂದರೆ ಅದು ಏಕೆ ಅಥವಾ ಮಹಿಳೆಯರೇ ಈ ಕಾನೂನುಗಳನ್ನು ಸರಿಯಾಗಿ ಸದ್ಬಳಕೆ ಮಾಡಿಕೊಳ್ಳುತ್ತಿಲ್ಲವೆಂದರೆ ಅದು ಯಾಕೆ ಅಥವಾ ವ್ಯವಸ್ಥೆ ಕಾನೂನುಗಳನ್ನು ಸರಿಯಾಗಿ ಬಳಸಿಕೊಳ್ಳದಂತೆ ಮಾಡಿದೆ ಎಂದರೆ ಅದರ ಹಿಂದಿನ ಉದ್ದೇಶ ಏನಿರಬಹುದೆಂದು ಸವಿವರವಾಗಿ ಅರಿಯಬೇಕಾಗಿದೆ.

೪.೧.೧. ಗರ್ಭಪಾತ (ಕಲಂ ೩೧೨-೩೧೪)

ಗರ್ಭಪಾತವೆಂದರೆ ಮಗು ಭ್ರೂಣವಾಗಿರುವಾಗಲೇ ಅದು ಹೊರ ಪ್ರಪಂಚಕ್ಕೆ ಬಾರದಂತೆ ಅದನ್ನು ಕೊಲ್ಲುವ ಉದ್ದೇಶವಾಗಿದೆ. ಮಹಿಳೆಗೆ ಸಹಜವಾದ ಗರ್ಭಪಾತವಾಗಿರದೇ ಅದು ಅಸಹಜವಾಗಿದ್ದಲ್ಲಿ ಅದು ಕಾನೂನು ಪ್ರಕಾರ ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಯಾರು ಗರ್ಭಧರಿಸಿರುವ ಮಹಿಳೆಗೆ ಗೊತ್ತಿಲ್ಲದಂತೆ ಅಥವಾ ಒತ್ತಾಯ ಪೂರ್ವಕವಾಗಿ ಅಥವಾ ಆಕೆಯ ಜೀವ ರಕ್ಷಿಸುವ ಉದ್ದೇಶ ಹೊಂದಿರದೆ ಗರ್ಭಪಾತ ಮಾಡಿಸುತ್ತಾರೊ ಅಂತವರು ಕಾನೂನು ರೀತಿಯಲ್ಲಿ ಶಿಕ್ಷಾರ್ಹ ಅಪರಾಧಿಗಳಾಗಿರುತ್ತಾರೆ. ಇಂತವರಿಗೆ ಜೈಲುವಾಸದೊಂದಿಗೆ ಅಥವಾ ಜುಲ್ಮಾನೆಯೊಂದಿಗೆ ಅಥವಾ ಇವೆರಡರಿಂದಲೂ ಶಿಕ್ಷೆಗೊಳಪಡಿಸಲಾಗುತ್ತದೆ. ಒಂದು ವೇಳೆ ಮಹಿಳೆಯ ಗರ್ಭದಲ್ಲಿಯ ಭ್ರೂಣ ಚಲನವಲನಗೊಳ್ಳುತ್ತಿರುವ ಸಂದರ್ಭದಲ್ಲಿ ಗರ್ಭಪಾತ ಮಾಡಿಸಿದಲ್ಲಿ ಅಂತವರಿಗೆ ಏಳು ವರ್ಷದವರೆಗೂ ಶಿಕ್ಷೆ ವಿಧಿಸಬಹುದಾಗಿದೆ.

ಯಾವ ಮಹಿಳೆ ತನ್ನ ಸ್ವ ಇಚ್ಛೆಯಿಂದ ಇಂತ ದುಷ್ ಕೃತ್ಯ ಎಸಗುವವಳೋ ಅವಳು ಕೂಡ ಈ ಕಲಂಮಿನ ವ್ಯಾಪ್ತಿಯೊಳಗೆ ಬರುತ್ತಾಳೆ.

ಒಂದು ವೇಳೆ ಇಂತಹ ಕೃತ್ಯದಿಂದ ಮಹಿಳೆ ಮರಣ ಹೊಂದಿದರೆ ಕೃತ್ಯ ಎಸಗಿದವರಿಗೆ ೧೦ ವರ್ಷಗಳಿಗೂ ವಿಸ್ತರಿಸಬಹುದಾದ ಜೈಲುವಾಸ ಹಾಗೂ ಜುಲ್ಮಾನೆಗೆ ಗುರಿಪಡಿಸಲಾಗುತ್ತದೆ. ಗರ್ಭಪಾತ ದಂತಹ ಕೆಲಸದ ಸಂದರ್ಭದಲ್ಲಿ ಗರ್ಭಿಣಿಯನ್ನೂ ಸಹ ಕೊಲ್ಲುವ ಉದ್ದೇಶ ಹೊಂದಿ ಈ ಕೃತ್ಯ ಎಸಗಿದರೆ ಅಂತವರಿಗೆ ೧೦ ವರ್ಷಗಳಿಂದ ಜೀವಾವಧಿಯವರೆಗೂ ವಿಸ್ತರಿಸಬಹುದಾದ ಶಿಕ್ಷೆಗೆ ಮತ್ತು ಜುಲ್ಮಾನೆಗೆ ಗುರಿಪಡಿಸಬಹುದಾಗಿದೆ.

೪.೧.೨. ಜನನ ಪೂರ್ವರೋಗಪರೀಕ್ಷೆ ತಂತ್ರಜ್ಞಾನ ನಿಯಂತ್ರಣ ಮತ್ತು ದುರ್‌ಬಳಕೆ ತಡೆ ಕಾಯ್ದೆ (೧೯೯೪)

ಹೆಣ್ಣು ಭ್ರೂಣ ಹತ್ಯೆಗೂ ಮುಂಚೆ ಸಮಾಜದಲ್ಲಿ ಚಾಲ್ತಿ ಇದ್ದ ಕೃತ್ಯವೆಂದರೆ ಅದು ಹೆಣ್ಣು ಶಿಶು ಹತ್ಯೆ. ಯಾವಾಗ ಆಮ್ನಿಯೋಸಿಂಟೆಸಿಸ್ ಎಂಬ ತಂತ್ರಜ್ಞಾನದ ಆವಿಷ್ಕಾರವಾಯಿತೊ ಆಗ ಹೆಣ್ಣು ಭ್ರೂಣ ಹತ್ಯೆಗಳ ಸಂಖ್ಯೆ ಹೆಚ್ಚಿತೆಂದು ಹೇಳಬಹುದು. ಹೊಟ್ಟೆಯೊಳಗಿನ ಮಗು ಯಾವುದಾದರು ದೈಹಿಕ ನ್ಯೂನ್ಯತೆಗಳಿಂದ ಬಳಲುತ್ತಿದ್ದರೆ ಅದನ್ನು ಪತ್ತೆ ಹಚ್ಚಲು ಬಳಸಲಾಗುತ್ತಿತ್ತು. ಆದರೆ ಈ ತಂತ್ರಜ್ಞಾನವನ್ನು ಸ್ತ್ರೀ ಭ್ರೂಣ ಹತ್ಯೆಯಂತಹ ಕೆಟ್ಟ ಕೆಲಸಕ್ಕೆ ಇಂದು ಬಳಸಿಕೊಳ್ಳಲಾಗುತ್ತಿದೆ.

ಈ ಕಾನೂನಿನ ಪ್ರಕಾರ ವಿವಿಧ ಉದ್ದೇಶಗಳ ಈಡೇರಿಕೆಯ ಸಂದರ್ಭದಲ್ಲಿ ಮಾತ್ರ ವೈದ್ಯಕೀಯ ಭ್ರೂಣ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ. ಆ ಉದ್ದೇಶಗಳೆಂದರೆ, ವರ್ಣ ತಂತುಗಳಲ್ಲಿಯ ಅಸಹಜತೆಗಳನ್ನು ಪತ್ತೆ ಮಾಡಲು, ಅನುವಂಶೀಯ ಕಾಯಿಲೆಗಳನ್ನು ಪತ್ತೆ ಮಾಡಲು, ರಕ್ತಕೋಶಗಳಲ್ಲಿ

ಪ್ರಾಣವಾಯುವನ್ನು ಕೊಂಡೊಯ್ಯುವ ಕಣಗಳಲ್ಲಿಯ ಅಸಹಜತೆ ಪತ್ತೆ ಮಾಡಲು, ಲಿಂಗ ಸಂಬಂಧಿತ ಅನುವಂಶೀಯ ರೋಗಗಳನ್ನು ಪತ್ತೆ ಮಾಡಲು ಬಳಸಲಾಗುತ್ತದೆ.

ಮೇಲಿನ ಉದ್ದೇಶಗಳಿಗಾಗಿಯಲ್ಲದೆ ಬೇರಾವುದೇ ಉದ್ದೇಶಕ್ಕಾಗಿ ಗರ್ಭಸ್ಥ ಶಿಶುವಿನ ಭ್ರೂಣ ಪರೀಕ್ಷಾ ತಂತ್ರಜ್ಞಾನವನ್ನು ಬಳಕೆ ಮಾಡಿದಲ್ಲಿ ಅದು ಶಿಕ್ಷಾರ್ಹವಾದ ಅಪರಾಧವಾಗುತ್ತದೆ. ಅದಕ್ಕೆ ಗರಿಷ್ಠ ೩ ವರ್ಷದವರೆಗೂ ಜೈಲುವಾಸ ಮತ್ತು ರೂ.೧೦,೦೦೦ಗಳ ವರೆಗಿನ ದಂಡದ ಶಿಕ್ಷೆಯನ್ನು ವಿಧಿಸಲಾಗುತ್ತದೆ. ಪುನಃ ಇಂತಹದೆ ಅಪರಾಧ ಎಸಗಿದಲ್ಲಿ ಐದು ವರ್ಷಗಳಿಗೆ ವಿಸ್ತರಿಸಬಹುದಾದ ಕಾರಾಗೃಹ ವಾಸದ ಹಾಗೂ ರೂ.೫೦ ಸಾವಿರಗಳ ವರೆಗಿನ ದಂಡದ ಶಿಕ್ಷೆಯನ್ನು ವಿಧಿಸಲಾಗುತ್ತದೆ.

೪.೧.೩. ಬಾಲ್ಯ ವಿವಾಹ ನಿಷೇಧ ಕಾಯ್ದೆ (೧೯೨೯ ತಿದ್ದುಪಡಿ ೧೯೭೮)

೧೯ ಮತ್ತು ೨೦ನೇ ಶತಮಾನದಲ್ಲಿ ನಡೆದ ಸಮಾಜ ಸುಧಾರಣಾ ಚಳುವಳಿಯ ಭಾಗವಾಗಿ ಬಾಲ್ಯ ವಿವಾಹದಂತಹ ಅನಿಷ್ಟ ಪದ್ಧತಿಗೆ ತಡೆ ಒಡ್ಡಲಾಯಿತು. ಈ ಚಳುವಳಿಯ ಪ್ರಮುಖರೆಂದರೆ ಸಮಾಜ ಸುಧಾರಕರಾದ ಈಶ್ವರಚಂದ್ರ ವಿದ್ಯಾಸಾಗರವರು. ಇವರು ಅಂದಿನ ಬ್ರಿಟಿಷ್ ಸರ್ಕಾರವನ್ನು ಒತ್ತಾಯಿಸಿ ಬಾಲ್ಯ ವಿವಾಹಕ್ಕೆ ವಯಸ್ಸನ್ನು ಮಿತಗೊಳಿಸಿದರು. ಅದರ ಫಲವಾಗಿ ೧೮೬೦ರಲ್ಲಿ ಇಂಡಿಯನ್ ಪೀನಲ್ ಕೋಡ್ ಹತ್ತು ವರ್ಷ ವಯಸ್ಸಿಗಿಂತ ಕಮ್ಮಿ ಇರುವ ಹೆಣ್ಣಿನೊಂದಿಗೆ ಲೈಂಗಿಕ ಸಂಬಂಧ ಹೊಂದುವುದು ಕಾನೂನುಬಾಹಿರ ಎಂದು ಘೋಷಿಸಿದರು. ನಂತರ ೧೮೭೨ರಲ್ಲಿ 'ದಿ ನೇಟಿವ್ ಮ್ಯಾರೇಜ್ ಆ್ಯಕ್ಟ್ ೩ ಅನ್ನು ಜಾರಿಗೊಳಿಸಿದರು. ಇದರ ನಂತರವು ಸಮಾಜ ತನ್ನ ನೀತಿಯನ್ನು ಸಡಿಲಗೊಲಿಸದೆ ಮತ್ತೆ ಮತ್ತೆ ಬಾಲ್ಯ ವಿವಾಹವನ್ನು ಚಾಲ್ತಿಗೊಳಿಸುತ್ತಲೇ ಬಂತು. ಇದರಿಂದಾಗಿ ಬ್ರಿಟಿಷ್ ಸರ್ಕಾರ ೧೯೨೯ರಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆಯನ್ನು ಜಾರಿಗೊಳಿಸಿತು. ಇದನ್ನು 'ಶಾರದಾ ಕಾಯ್ದೆ' ಎಂದು ಕರೆಯಲಾಯಿತು.

ಇದು ಬದಲಾದ ಸಾಮಾಜಿಕ ಸಂದರ್ಭಕ್ಕನುಗುಣವಾಗಿ ಶಿಕ್ಷಣದ ಪ್ರಭಾವದಿಂದಾಗಿ ೧೯೭೮ ರಲ್ಲಿ ತಿದ್ದುಪಡಿಗೊಂಡಿತು. ಇದರ ಪ್ರಕಾರ ಹುಡುಗಿಗೆ ೧೮ ವಯಸ್ಸು ಹಾಗೂ ಹುಡುಗನಿಗೆ ೨೧ ವಯಸ್ಸನ್ನು ಮದುವೆಯಾಗಲು ನಿಗದಿಪಡಿಸಲಾಯಿತು. ಇದನ್ನು ಮೀರಿ ಮದುವೆ ಮಾಡಿದವರಿಗೆ ಈ ಕಾಯ್ದೆಯ ಅಧಿನಿಯಮದ ಕಲಂ ೩, ೪ ಮತ್ತು ೫ ಇವುಗಳ ಅಡಿಯಲ್ಲಿ ಶಿಕ್ಷೆ ವಿಧಿಸಲಾಗುತ್ತದೆ. ಕಲಂ ಎ ರಲ್ಲಿ ಹೇಳಲಾದ ಪ್ರಕಾರ ಯಾವಾತನು ೧೮ ವರ್ಷಗಳ ವಯಸ್ಸಿಗಿಂತ ಮೇಲಿನವನಾಗಿದ್ದು ಮತ್ತು ೨೧ ವರ್ಷಗಳಿಗಿಂತ ಕೆಳಗಿನವನಾಗಿದ್ದು, ಬಾಲ್ಯವಿವಾಹದ ಕರಾರು ಮಾಡಿಕೊಳ್ಳುವನೋ ಆತನು ೧೫ ದಿನಗಳಿಗೆ ವಿಸ್ತರಿಸಬಹುದಾದ ಸರಳ ಜೈಲುವಾಸದೊಂದಿಗೆ ಅಥವಾ ರೂ. ೧೦೦೦ಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಅಥವಾ ಇವೆರಡರೊಂದಿಗೆ ಶಿಕ್ಷಿಸಲ್ಪಡತಕ್ಕದ್ದು.

ಕಲಂ ೪ ರಿಂದ ಉಪಬಂಧಿಸಲಾದ ಪ್ರಕಾರ ಯಾವಾತನು ೧೨ ವರ್ಷಗಳ ವಯಸ್ಸಿಗಿಂತ ಮೇಲಿನವನಾಗಿದ್ದು ೨೧ ವಯಸ್ಸಿಗಿಂತ ಕಡಿಮೆ ವಯಸ್ಸಿನ ಒಬ್ಬ ಪುರುಷನಾಗಿದ್ದು ಆತನು ಒಂದು ಬಾಲ್ಯವಿವಾಹದ ಕರಾರು ಮಾಡಿಕೊಂಡರೆ ಆತನು ೩ ತಿಂಗಳುಗಳಿಗೆ ವಿಸ್ತರಿಸಬಹುದಾದ ಸರಳ ಜೈಲುವಾಸದೊಂದಿಗೆ ಶಿಕ್ಷಿಸಲ್ಪಡತಕ್ಕದ್ದು, ಮತ್ತು ಜುಲ್ಮಾನೆಗೂ ಸಹ ಬಾಧ್ಯನಾಗತಕ್ಕದ್ದು. ಜೊತೆಗೆ ಬಾಲ್ಯ ವಿವಾಹ ಮಾಡಿಸುವವರು ಅಥವಾ ನಿರ್ದೇಶಿಸುವವರು ಹಾಗೂ ಅದಕ್ಕೆ ಸಮ್ಮತಿಸುವವರಿಗೂ

ಸಹ ಕಲಂ ೫೬೮ರ ಪ್ರಕಾರ ೩ ತಿಂಗಳಿಗೆ ವಿಸ್ತರಿಸಬಹುದಾದ ಸರಳ ಜೈಲುವಾಸದೊಂದಿಗೆ ಶಿಕ್ಷಿಸಲ್ಪಡತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಬಾಧ್ಯನಾಗತಕ್ಕದ್ದು.

೪.೧.೪. ಮಗುವನ್ನು ಬೀದಿಗೆ ಬಿಡುವುದು (ಕಲಂ ೩೧೭)

ಹನ್ನೆರಡು ವರ್ಷಕ್ಕೆ ಕಡಿಮೆ ವಯಸ್ಸಿನ ಮಗುವಿನ ತಂದೆ–ತಾಯಿಯಾಗಿರುವ ಅಥವಾ ಆ ಮಗುವಿನ ರಕ್ಷಣೆಯ ಹೊಣೆ ಹೊತ್ತಿರುವ ವ್ಯಕ್ತಿಯು ಆ ಮಗುವನ್ನು ಅಪಾಯಕ್ಕೊಡ್ಡಿದರೆ ಅಥವಾ ಅದನ್ನು ಸಂಪೂರ್ಣವಾಗಿ ತೊರೆದು ಬಿಡುವ ಉದ್ದೇಶದಿಂದ ಏಳು ವರ್ಷಗಳವರೆಗಿನ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತರಾಗತಕ್ಕದ್ದು.[೧]

ಈ ಕಲಂ ಹೆಣ್ಣು ಮಕ್ಕಳನ್ನು ಹೆಣ್ಣೆಂಬ ಕಾರಣಕ್ಕಾಗಿ ಬೀದಿಗೆ ಎಸೆಯುವ ಅಥವಾ ಬಿಡುವ ಕೃತ್ಯನ್ನು ಸಹ ಅಪರಾಧ ಎಂದು ಹೇಳುತ್ತದೆ.

೪.೧.೫. ವಿಧವಾ ಪುನರ್‌ವಿವಾಹ (೧೮೫೬)

೧೯ನೇ ಶತಮಾನದ ಸಮಾಜ ಸುಧಾರಣಾ ಚಳುವಳಿಯಲ್ಲಿ ವಿಧವಾ ಪುನರ್ ವಿವಾಹದಂತಹ ಮಹಿಳಾ ಪರ ಕಾಳಜಿಯನ್ನು ಸಹ ಕೈಗೆತ್ತಿಕೊಳ್ಳಲಾಯಿತು. ಈಶ್ವರಚಂದ್ರ ವಿದ್ಯಾಸಾಗರವರು ವಿಧವೆಯರ ಜೀವನ ಭಾರತೀಯರ ಸಂದರ್ಭದಲ್ಲಿ ತುಂಬಾ ಹೀನಾಯವಾಗಿತ್ತು. ಆದ್ದರಿಂದ ಇದನ್ನು ತೊಡೆದುಹಾಕಲು ಬ್ರಿಟಿಷ್ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಈ ವಿಚಾರದ ಬಗ್ಗೆ ಜನರ ಅಭಿಪ್ರಾಯವನ್ನು ಪಡೆಯುವ ಕೆಲಸ ಮಾಡಿದರು. ಜನಾಭಿಪ್ರಾಯ ಮಹಿಳೆಯರ ಪರವಾಗಿದ್ದರಿಂದ ವಿದ್ಯಾಸಾಗರ್‌ರವರು ಬ್ರಿಟಿಷ್ ಸರ್ಕಾರಕ್ಕೆ ಕಾಯ್ದೆ ಜಾರಿಗೊಳಿಸುವಂತೆ ಒತ್ತಡ ಹೇರಿದರು. ಇದರ ಪರಿಣಾಮವಾಗಿ ಬ್ರಿಟಿಷ್ ಸರ್ಕಾರ ೧೮೫೬ರಲ್ಲಿ ವಿಧವಾ ಮರುವಿವಾಹ ಕಾಯ್ದೆಯನ್ನು ಜಾರಿಗೆ ತಂದಿತು.

೪.೧.೬. ಅನೈತಿಕ ವ್ಯವಹಾರಗಳಿಗಾಗಿ ಮಹಿಳೆಯರ ಸಾಗಣೆ (೧೯೫೮ ತಿದ್ದುಪಡಿ ೧೯೮೬)

ಮಹಿಳೆಯರ ಮತ್ತು ಮಾನವ ಸಂಪನ್ಮೂಲದ ಹಿತದೃಷ್ಟಿಯಿಂದ ವಿಶ್ವಸಂಸ್ಥೆ ಮಹಿಳೆಯರನ್ನು ಅನೈತಿಕ ವ್ಯವಹಾರಗಳಿಗಾಗಿ ದುರ್‌ಬಳಕೆ ಮಾಡಿಕೊಳ್ಳುವುದನ್ನು ಟೀಕಿಸಿತು. ಈ ಹಿನ್ನೆಲೆಯಲ್ಲಿ ವಿಶ್ವಸಂಸ್ಥೆ ತನ್ನ ಸಾಮಾನ್ಯಸಭೆಯಲ್ಲಿ ಹೆಣ್ಣು ಮಕ್ಕಳನ್ನು ಅನೈತಿಕ ಚಟುವಟಿಕೆಗಳಿಗಾಗಿ ಬಳಸಿ ಕೊಳ್ಳುವುದನ್ನು ನಿಷೇಧಿಸಿತು. ಒಂದು ವೇಳೆ ಮಹಿಳೆಯರನ್ನು ಅನೈತಿಕ ಕಾರ್ಯಗಳಿಗಾಗಿ ಬಳಸಿಕೊಂಡಿದ್ದೇ ಆದಲ್ಲಿ, ಅಂತವರನ್ನು ಶಿಕ್ಷಿಸುವ ಹಾಗೂ ಅಂತ ಕೃತ್ಯಕ್ಕೆ ಒಳಗಾದ ಮಹಿಳೆಯರನ್ನು ಸಂರಕ್ಷಿಸುವ ಘೋಷಣೆಯನ್ನು ತನ್ನ ಎಲ್ಲಾ ಅಧೀನ ರಾಷ್ಟ್ರಗಳಿಗೆ ಹೊರಡಿಸಿತು. ಸಿಡಾದಲ್ಲಿ ಮಹಿಳೆಯರ ವಿರುದ್ಧ ತಾರತಮ್ಯ ನಿವಾರಿಸುವ ಜೊತೆಗೆ ಹೆಣ್ಣು ಮಕ್ಕಳನ್ನು ಅನೈತಿಕ ವ್ಯವಹಾರಗಳಿಗಾಗಿ ಬಳಸಿಕೊಳ್ಳುವುದನ್ನು ಅಪರಾಧವಾಗಿಸಿತು.

ಅನೈತಿಕ ವ್ಯವಹಾರಗಳು ಮತ್ತು ಶೋಷಣೆ ಮತ್ತು ವ್ಯಭಿಚಾರದ ಪರಿಭಾಷೆಯನ್ನು ೧೯೪೯ರ ವ್ಯಕ್ತಿಗಳ ಅನೈತಿಕ ವ್ಯವಹಾರ ತಡೆಗಟ್ಟುವಿಕೆ ಮತ್ತು ಇತರರ ವ್ಯಭಿಚಾರ ಶೋಷಣೆ ಬಗೆಗಿನ ಒಡಂಬಡಿಕೆಯ ೧ ಮತ್ತು ೨ನೇ ಅನುಚ್ಛೇದದಲ್ಲಿ ನೀಡಲಾಯಿತು.[೨] ಇದನ್ನು ೧೯೪೯ರಲ್ಲಿ ಕೇವಲ

ಅನೈತಿಕ ಕಾರಣಗಳ ಬಳಕೆಗಾಗಿ ಬಳಸುವುದು ಮಾತ್ರವಲ್ಲದೆ, ಇತರೆ ರೀತಿಯಲ್ಲಿ ದುರ್ಬಳಕೆ ಮಾಡಿಕೊಳ್ಳುವುದನ್ನು ಸೇರ್ಪಡೆಗೊಳಿಸಿತು. ಬಲವಂತದ ವಿವಾಹಗಳು, ಒತ್ತಾಯದ ದುಡಿಮೆ ಹಾಗೂ ಇತರೆ ಅಂಶಗಳನ್ನು ಸೇರ್ಪಡೆಗೊಳಿಸಿತು.

ಭಾರತದಲ್ಲಿ ಈ ಪ್ರತಿಬಂಧನ ಕಾಯ್ದೆಗೆ ಅನುಸಾರವಾಗಿ ಸಂಸತ್ತಿನಲ್ಲಿ ೧೯೫೬ರಲ್ಲಿ ಅನುಮೋದಿಸಿ ೧೯೫೮ರಲ್ಲಿ ಅಧಿನಿಯಮವಾಗಿ ಜಾರಿಗೊಳಿಸಿತು. ಇದರಡಿಯಲ್ಲಿ ಮಹಿಳೆಯರನ್ನು ಇಂತಹ ಕೃತ್ಯಗಳಿಗೆ ಒಳಪಡಿಸುವವರನ್ನು ಹೆಚ್ಚಿನ ಶಿಕ್ಷೆಗೆ ಒಳಪಡಿಸುವಂತೆ ಸೂಚಿಸಿತು.

೪.೧.೭. ಬಾಲ ಕಾರ್ಮಿಕರ ತಡೆ ಕಾಯ್ದೆ (೧೯೮೬)

ಅನಕ್ಷರತೆ, ಬಡತನ, ಕುಟುಂಬದ ಆರ್ಥಿಕ ದುರ್ಬಲತೆ, ಪಾಲಕರ ಅಜ್ಞಾನ ಹಾಗೂ ಮಕ್ಕಳ ಬಗೆಗಿನ ಅನಾಸಕ್ತಿ ಮುಂತಾದ ಕಾರಣಗಳಿಂದಾಗಿ ಬಾಲ್ಯದಲ್ಲಿ ಮಕ್ಕಳನ್ನು ದುಡಿಮೆಗೆ ಹಚ್ಚಲಾಗುತ್ತದೆ. ಅಂತಹ ಮಕ್ಕಳನ್ನೇ ಬಾಲ ಕಾರ್ಮಿಕರು ಎನ್ನಲಾಗುತ್ತದೆ.

೧೪ ವರ್ಷಕ್ಕಿಂತ ಕೆಳ ವಯಸ್ಸಿನ ಮಕ್ಕಳಿಗೆ ಬಾಲಕರು ಎಂದು ಈ ಕಾಯ್ದೆಯಡಿ ಗುರುತಿಸಲಾಗಿದೆ. ಇಂತವರನ್ನು ಆರ್ಥಿಕ ಹಾಗೂ ಇತರೆ ಲಾಭದ ದೃಷ್ಟಿಯಿಂದ ಗೃಹಕೃತ್ಯದಿಂದ ಕಾರ್ಖಾನೆಗಳಲ್ಲಿ, ರೈಲ್ವೆ-ಬಸ್ ನಿಲ್ದಾಣಗಳಲ್ಲಿ, ಬಂದರುಗಳಲ್ಲಿ, ಸಣ್ಣ ಉದ್ಯಮಗಳಲ್ಲಿ ಇತ್ಯಾದಿ ಕಡೆಗಳಲ್ಲಿ ಬಳಸಿಕೊಂಡರೆ ಅವರು ಬಾಲಕಾರ್ಮಿಕರಾಗುತ್ತಾರೆ. ಮಕ್ಕಳನ್ನು ಈ ಬಗೆ ಕೆಲಸಗಳಿಗೆ ಬಳಸಿಕೊಳ್ಳುವುದು ಅಪರಾಧವಾಗಿದ್ದು ಅಂತವರು ಶಿಕ್ಷೆಗೆ ಗುರಿಯಾಗುತ್ತಾರೆ.

೪.೧.೮. ವರದಕ್ಷಿಣೆ ನಿಷೇಧ ಕಾಯ್ದೆ

ಹಿಂದಿನ ಕಾಲದಲ್ಲಿ ಹೆಣ್ಣು ಮಕ್ಕಳನ್ನು ವಿವಾಹ ಮಾಡಿಕೊಟ್ಟು ಗಂಡನ ಮನೆಗೆ ಕಳುಹಿಸುವಾಗ ತವರು ಮನೆಯವರು ನೆನಪಿಗಾಗಿ ಒಂದು ಹಸುವನ್ನೋ ಅಥವಾ ಬೇರೆ ಏನನ್ನಾದರು ಕಾಣಿಕೆಯಾಗಿ ನೀಡುತ್ತಿದ್ದರೆಂಬ ನಡಾವಳಿ ಜಗಜ್ಜಾಹೀರಾದ ಸಂಗತಿ. ಅದು ಕಾಲಾನಂತರದಲ್ಲಿ ವರದಕ್ಷಿಣೆಯಾಗಿ ರೂಪ ಪಡೆದುಕೊಂಡಿದೆ. ಅದು ಹೆತ್ತವರ ಪಾಲಿಗೆ ಹಾಗೂ ಹೆಣ್ಣಿನ ಪಾಲಿಗೆ ಬಹುದೊಡ್ಡ ಉರುಳಾಗಿ ಪರಿಣಮಿಸಿದೆ.

ವರದಕ್ಷಿಣೆ ಎಂದರೆ, ವಿವಾಹದ ಸಮಯದಲ್ಲಿ ಹೆಣ್ಣಿನ ತಂದೆ, ತಾಯಿ ಅಥವಾ ಅಣ್ಣ ತಮ್ಮಂದಿರು ವರನಿಗೆ ಅಥವಾ ಆತನ ಪೋಷಕರಿಗೆ ಹಣದ ರೂಪದಲ್ಲಿ ಅಥವಾ ಚರಾಸ್ತಿ ರೂಪದಲ್ಲಿ ಅಥವಾ ಸ್ಥಿರಾಸ್ತಿ ರೂಪದಲ್ಲಿ ಕೊಡುವ ಸಂಪತ್ತಾಗಿದೆ.

ಪುರುಷ ಪ್ರಧಾನ ವ್ಯವಸ್ಥೆಯ ಭಾಗವಾಗಿ ರೂಪಿತಗೊಂಡ ವರದಕ್ಷಿಣೆ ಪದ್ಧತಿ ಇಂದು ಸಮಾಜದ ಹಲವಾರು ಸಮಸ್ಯೆಗಳಲ್ಲಿ ಒಂದಾಗಿದೆ. ಇದರ ನಿರ್ಮೂಲನೆಗಾಗಿ ೧೯೬೧ರಲ್ಲಿ ಅಧಿನಿಯಮ ಒಂದನ್ನು ಜಾರಿಗೊಳಿಸಲಾಯಿತು. ಅದುವೇ ವರದಕ್ಷಿಣೆ ನಿಷೇಧ ಕಾಯ್ದೆ. ಈ ಕಾಯ್ದೆಯ ಪ್ರಕಾರ ವರದಕ್ಷಿಣೆ ನೀಡುವುದು ಹಾಗೂ ತೆಗೆದುಕೊಳ್ಳುವುದು ಎರಡೂ ಮಹಾ ಅಪರಾಧ. ಇಷ್ಟಲ್ಲದೇ ವರದಕ್ಷಿಣೆ ಕೊಡುವಂತೆ ಮತ್ತು ಪಡೆದುಕೊಳ್ಳುವಂತೆ ಉತ್ತೇಜಿಸುವುದು ಕೂಡಾ ಅಪರಾಧವಾಗಿದೆ. ಇದಕ್ಕೆ ಶಿಕ್ಷೆಯಾಗಿ ಆರು ತಿಂಗಳಿಗೆ ಕಡಿಮೆ ಇಲ್ಲದಂತೆ ಎರಡು

ವರ್ಷಗಳಿಗೂ ವಿಸ್ತರಿಸಬಹುದಾದ ಕಾರಾಗೃಹವಾಸ ಅಥವಾ ರೂ. ೫೦೦೦ ಜುಲ್ಮಾನೆಯನ್ನು ತುಂಬಬೇಕಾಗುತ್ತದೆ.

೬(೧)ನೇ ಉಪಪ್ರಕರಣದ ಅನ್ವಯ ವರದಕ್ಷಿಣೆ ಪಡೆದವರು ೩ ತಿಂಗಳ ಒಳಗಾಗಿ ಆ ಸ್ವತ್ತನ್ನು ಹುಡುಗಿಯ ಹೆಸರಿಗೆ ವರ್ಗಾಯಿಸಬೇಕು. ಇಲ್ಲದಿದ್ದರೆ ವರದಕ್ಷಿಣೆ ಪಡೆದವರನ್ನು ಎರಡು ವರ್ಷಗಳಿಗೆ ವಿಸ್ತರಿಸಬಹುದಾದ ಅಥವಾ ರೂ.೫,೦೦೦ ದಿಂದ ೧೦,೦೦೦ ವರೆಗಿನ ಜುಲ್ಮಾನೆಗೆ ಒಳಪಡಿಸಬಹುದಾಗಿದೆ. ಈ ವರದಕ್ಷಿಣೆ ದೂರನ್ನು ಮದುವೆಯಾದ ಹೆಣ್ಣು, ಅವಳ ತಂದೆ–ತಾಯಿ, ಅಣ್ಣ–ತಮ್ಮಂದಿರು ಅಥವಾ ಇತರೆ ಸಂಬಂಧಿಕರು ಹಾಗೂ ಕೇಂದ್ರ ಅಥವಾ ರಾಜ್ಯ ಸರ್ಕಾರಗಳಿಂದ ಮಾನ್ಯತೆ ಪಡೆದ ಯಾವುದಾದರು ಸಂಸ್ಥೆಗಳು ಹುಡುಗಿಯ ಪರವಾಗಿ ದೂರು ಸಲ್ಲಿಸಬಹುದಾಗಿದೆ.

೪.೧.೯. ಜೀವನಾಂಶ

ಮದುವೆಯಾದ ಗಂಡನು ತನ್ನ ಪತ್ನಿಯನ್ನು, ತಂದೆ–ತಾಯಿ, ತನ್ನ ಮಕ್ಕಳನ್ನು ವಯಸ್ಕ ಮತ್ತು ಉದ್ಯೋಗಸ್ಥ ಮಕ್ಕಳು ತಮ್ಮ ವೃದ್ಧ ತಂದೆ–ತಾಯಿಗಳನ್ನು, ಅಲ್ಲದೇ ಕುಟುಂಬದ ಜವಾಬ್ದಾರಿ ಪಡೆದುಕೊಂಡವನು ತನ್ನ ಮೇಲೆ ಅವಲಂಬಿತರಾದ ವಿಧವೆ ಸೊಸೆ, ಆಕೆಯ ಮಕ್ಕಳು, ಆಕೆಯ ಸಹೋದರರ ಮಕ್ಕಳು ಮುಂತಾದವರನ್ನು ಸಂರಕ್ಷಿಸುವುದು ಸಮಾಜ ನಿರ್ಮಿಸಿದ ಹಾಗೂ ಸಮಾಜದ ಇಚ್ಛೆಗನುಸಾರ ಕಾನೂನು ವಿಧಿಸಿದ ಹೊಣೆಗಾರಿಕೆಯಾಗಿರುತ್ತದೆ.

ಹಲವಾರು ಸಂದರ್ಭಗಳಲ್ಲಿ ಇಂತಹ ಹೊಣೆಯನ್ನು ನಿಭಾಯಿಸುವ ಸಾಮರ್ಥ್ಯ ಇದ್ದು, ತಮ್ಮ ಸಾಮರ್ಥ್ಯವನ್ನು ನಿಭಾಯಿಸದಿದ್ದಲ್ಲಿ ನಿರ್ಲಕ್ಷಕ್ಕೊಳಗಾದವರು ಕಾನೂನಿನ ಮೊರೆ ಹೋಗಬಹುದಾಗಿದೆ. ಕಾನೂನು ಸಹ ಎಲ್ಲಾ ಧರ್ಮದವರಿಗೆ ಅನ್ವಯವಾಗುವಂತೆ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ ೧೨೫ ರಡಿಯಲ್ಲಿ ಆರ್ಥಿಕ ನಿರ್ಲಕ್ಷಕ್ಕೊಳಗಾದವರಿಗೆ ಜೀವನಾಂಶ ದೊರಕಿಸಿಕೊಡುತ್ತದೆ.

ಜೀವನಾಂಶ ಎಂದರೆ ಒಬ್ಬ ವ್ಯಕ್ತಿಗೆ, ಜೀವನ ಸಾಗಿಸಲು ಬೇಕಾದಂತಹ ಆಹಾರ, ಬಟ್ಟೆ, ಔಷಧಿ, ಆಶ್ರಯ, ವಿದ್ಯಾಭ್ಯಾಸ ಮುಂತಾದವುಗಳನ್ನು ಅಥವಾ ಅವುಗಳನ್ನು ಪಡೆಯಲು ಅವಶ್ಯವಾಗಿಬೇಕಾದ ಹಣ ಎಂದು ಹೇಳಬಹುದು.

೪.೧.೧೦. ಅತ್ಯಾಚಾರ ಕಾಯ್ದೆ

ಅತ್ಯಾಚಾರ ಎಂಬ ಹೇಯ ಕೃತ್ಯ ಕೇಳಲಿಕ್ಕೆ ತುಂಬಾ ನೋವನ್ನುಂಟು ಮಾಡುತ್ತದೆ. ಹೀಗಿರುವಾಗ ಅದಕ್ಕೆ ಒಳಗಾದವರ ಸ್ಥಿತಿ ಅಂತೂ ಹೇಳತೀರದ್ದು. ಮಹಿಳೆಯರ ಮೇಲೆ ಇದನ್ನೊಂದು ಅಸ್ತ್ರವಾಗಿ ಬಳಸಲಾಗುತ್ತಿದೆ. ಹೆಣ್ಣಿನ ಇಚ್ಛೆಗೆ ವಿರುದ್ಧವಾದ ಲೈಂಗಿಕ ಕ್ರಿಯೆ ಅತ್ಯಾಚಾರವೆನಿಸಿಕೊಳ್ಳುತ್ತದೆ. ಒಂದು ವೇಳೆ ಆಕೆಯ ಸಮ್ಮತಿಯಿಂದ ಜರುಗಿಸಿದಾದಲ್ಲಿ ಆ ಸಮ್ಮತಿಯನ್ನು ಆಕೆಗೆ ಬೇಕಾದವರ ಜೀವಕ್ಕೆ ಸಂಚಕಾರ ತಂದು ಅಥವಾ ಗಂಡ ಆದವನು ತಾನು ಕಾನೂನು ಸಮ್ಮತ ಮದುವೆಯಾದ ಗಂಡ ಎಂದು ಆಕೆ ನಂಬುವಂತೆ ಮಾಡಿ ಅಥವಾ ಪ್ರತ್ಯಕ್ಷವಾಗಿ – ಪರೋಕ್ಷವಾಗಿ ಮತ್ತೊಬ್ಬರ ಮೂಲಕ, ಆಕೆಗೆ ಮತ್ತು ಬರುವ ಪದಾರ್ಥ ನೀಡಿ ಅಥವಾ ಆಕೆ ಮಾನಸಿಕವಾಗಿ ಅಸ್ವಸ್ಥಳಾಗಿದ್ದಾಗ ಆಕೆಯ ಜೊತೆ ಲೈಂಗಿಕ ಸಂಪರ್ಕ ಹೊಂದುವುದೇ ಅತ್ಯಾಚಾರವಾಗಿದೆ.

ಇಷ್ಟಲ್ಲದೇ ಹದಿನಾರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಹಿಳೆಯೊಂದಿಗಿನ ಲೈಂಗಿಕ ಸಂಭೋಗ ಆಕೆಯ ಸಮ್ಮತಿಯಿಂದ ಜರುಗಿರಲಿ ಅಥವಾ ಸಮ್ಮತಿ ಇಲ್ಲದಿರಲಿ ಅದು ಅತ್ಯಾಚಾರವೆಂದೇ ಪರಿಗಣಿಸಲಾಗುತ್ತದೆ, ಮತ್ತು ೧೫ ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಹಿಳೆಯೊಂದಿಗೆ ಆಕೆಯ ಪತಿ ಆಕೆಯ ಸಮ್ಮತಿ ಇಲ್ಲದೇ ಲೈಂಗಿಕ ಕ್ರಿಯೆ ನಡೆಸಿದ್ದೆ ಆದರೆ ಅದು ಕೂಡಾ ಅತ್ಯಾಚಾರ ಎಂದು ಪರಿಗಣಿಸಲಾಗುತ್ತದೆ.

ಈ ಕಾಯ್ದೆಯಡಿ ಅತ್ಯಾಚಾರಕ್ಕೊಳಗಾದ ಮಹಿಳೆ ಅತ್ಯಾಚಾರಕ್ಕೊಳಗಾದ ಕೂಡಲೇ ಕೆಲವೊಂದು ನಿಯಮಗಳನ್ನು ಪಾಲಿಸುವಂತೆ ಸೂಚಿಸುತ್ತದೆ. ಅವು,

೧. ಆಕೆ ಅತ್ಯಾಚಾರಕ್ಕೊಳಗಾದ ನಂತರ ಮೊದಲು ಆಕೆ ತನ್ನನ್ನು ಕಂಡವರಿಗೆ ವಿಷಯ ತಿಳಿಸಬೇಕು. ೨. ಆಕೆ ಕೂಡಲೇ ಹತ್ತಿರದ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಬೇಕು. ೩. ಅತ್ಯಾಚಾರಕ್ಕೊಳಗಾದ ಮಹಿಳೆ ವೈದ್ಯಕೀಯ ಪರೀಕ್ಷೆಗೆ ಒಳಗಾಗುವವರೆಗೂ ದೇಹವನ್ನು ಸ್ವಚ್ಛಗೊಳಿಸಿಕೊಳ್ಳುವ ಹಾಗಿಲ್ಲ. ೪. ಆಕೆ ಒಂದು ವೇಳೆ ಮಾತನಾಡುವ ಪರಿಸ್ಥಿತಿಯಲ್ಲಿ ಇಲ್ಲದಿದ್ದರೆ, ಆಕೆಯೊಂದಿಗೆ ಬಂದವರು ಘಟನಾವಳಿಯ ಸಂದರ್ಭವನ್ನು ಪೊಲೀಸರಿಗೆ ಹೇಳಬೇಕು.

ಆದರೆ ಈ ಎಲ್ಲಾ ಅಂಶಗಳನ್ನು ದೆಹಲಿಯ ಬಸ್‌ವೊಂದರಲ್ಲಿ ಯುವತಿಯ (ನಿರ್ಭಯಾ) ಮೇಲೆ ನಡೆದ ಸಾಮೂಹಿಕ ಅತ್ಯಾಚಾರದ ನ್ಯಾಯ ನಿರ್ಣಯಗಳ ಸಂದರ್ಭದಲ್ಲಿ, ಅತ್ಯಾಚಾರದ ಕಾಯ್ದೆಯಲ್ಲಿ ಬಹಳಷ್ಟು ತಿದ್ದುಪಡಿಗಳನ್ನು ತರಲಾಗಿದೆ. ಅತ್ಯಾಚಾರಕ್ಕೊಳಗಾದ ಮಹಿಳೆಯ ಹೇಳಿಕೆಯೇ ಮೊದಲ ದಾಖಲಾತಿ ಎಂದು ತೆಗೆದುಕೊಳ್ಳುತ್ತದೆ. ನಂತರ ಇತರೆ ಪರಿಕ್ಷೇಗಳಿಗೆ ಒಳಪಡಿಸಲಾಗುತ್ತದೆ.

ಈ ಕಾಯ್ದೆಯಡಿ ೧೦ ವರ್ಷಗಳಿಗೆ ಕಡಿಮೆ ಇಲ್ಲದೆ, ಆದರೆ ಆಜೀವಾವಧಿಗೂ ವಿಸ್ತರಿಸಬಹುದಾದ ಕಾರಾಗೃಹವಾಸ ಹಾಗೂ ದಂಡದ ಶಿಕ್ಷೆಯನ್ನು ಸಹ ತಪ್ಪಿತಸ್ಥರಿಗೆ ನೀಡಬಹುದಾಗಿದೆ. ಅತ್ಯಾಚಾರದ ಕ್ರೌರ್ಯತೆಗೆ ಅನುಗುಣವಾಗಿ ಶಿಕ್ಷೆಯನ್ನು ಮತ್ತಷ್ಟು ಕಠಿಣಗೊಳಿಸಲು ಈ ಕಾನೂನಿನಲ್ಲಿ ಅವಕಾಶಗಳಿವೆ. ಸಾಮೂಹಿಕ ಅತ್ಯಾಚಾರದ ಸಂದರ್ಭದಲ್ಲಿ ತಪ್ಪಿತಸ್ಥರು ಇನ್ನೂ ಹೆಚ್ಚಿನ ಶಿಕ್ಷೆಗೆ ಗುರಿಯಾಗುತ್ತಾರೆ.

೪.೧.೧೧. ಆಸ್ತಿ ಹಕ್ಕು (೧೯೫೬)

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಗೆ ಯಾವ ಸ್ವತ್ತಿನ ಮೇಲೂ ಅಧಿಕಾರ ಇಲ್ಲದಂತಹ ಸಂದರ್ಭದಲ್ಲಿ (೧೯೩೭ನೇ ವರ್ಷಕ್ಕಿಂತಲೂ ಮೊದಲು ಮಹಿಳೆಯರಿಗೆ ಯಾವೊಂದು ಆಸ್ತಿಯ ಹಕ್ಕು ಇರಲಿಲ್ಲ). ೧೯೩೭ರಲ್ಲಿ ಪ್ರಥಮ ಬಾರಿಗೆ ಹಿಂದೂ ಮಹಿಳೆಯ ಆಸ್ತಿ ಹಕ್ಕು ಅಧಿನಿಯಮದ ಮೇರೆಗೆ ವಿಧವೆ, ಮಗನ ಮಗನ ವಿಧವೆ ಆದ ಹಿಂದೂ ಮಹಿಳೆಯರು ಆಸ್ತಿಯನ್ನು ಪಡೆಯಬಹುದಾಗಿತ್ತು. ಈ ಉತ್ತರಾಧಿಕಾರತ್ವದ ಹಕ್ಕು ಅವರವರ ಜೀವಿತಾವಧಿಗೆ ಮಾತ್ರ ಸೀಮಿತವಾಗಿತ್ತು. ಇಂಥ ಮಹಿಳೆಯರ ಮರಣದ ನಂತರ ಅವರು ಹೊಂದಿರುತ್ತಿದ್ದ ಆಸ್ತಿಯ ಹಕ್ಕು ಅವರ ಹಿಂದಿನ ಪೂರ್ಣ ಮಾಲೀಕರ ವಾರಸುದಾರರಿಗೆ ಸೇರುತ್ತಿತ್ತು.

೧೯೫೬ರಲ್ಲಿ ಜಾರಿಗೆ ಬಂದ ಹಿಂದೂ ಉತ್ತರಾಧಿಕಾರದ ಅಧಿನಿಯಮವು ಈ ನ್ಯೂನ್ಯತೆಗಳನ್ನು ಸರಿಪಡಿಸಿತು. ಈ ಅಧಿನಿಯಮದ ೧೪ನೇ ಪ್ರಕರಣದ ಅನ್ವಯ ಹಿಂದೂ ಮಹಿಳೆ ಉತ್ತರಾಧಿಕಾರದ

ಹಕ್ಕಿನ ಆಧಾರದ ಮೇಲೆ ಕುಟುಂಬದಲ್ಲಿ ಪಡೆದ ಆಸ್ತಿಗೆ ಅವಳೇ ಸಂಪೂರ್ಣ ಮಾಲೀಕಳಾಗುತ್ತಾಳೆ. ತಂದೆಯ ಸ್ವಯಾರ್ಜಿತ ಆಸ್ತಿ ಇದ್ದರೆ ಅದನ್ನು ಅವರು ತಮ್ಮ ಜೀವಿತಾವಧಿಯಲ್ಲಿ ಇಚ್ಚಿಸಿದ ಮಕ್ಕಳಿಗೆ ನೀಡಬಹುದಾಗಿದೆ ಹಾಗೂ ಉಯಿಲನ್ನು ಸಹ ಬರೆಯಬಹುದಾಗಿದೆ. ಒಂದು ವೇಳೆ ವ್ಯಕ್ತಿಯು ಸ್ವಯಾರ್ಜಿತ ಆಸ್ತಿಯನ್ನು ಯಾರ ಹೆಸರಿಗೂ ವಿಲೇವಾರಿ ಮಾಡದೆ ಮರಣ ಹೊಂದಿದಲ್ಲಿ ಅಂತಹ ಆಸ್ತಿಯು ಹೆಂಡತಿಗೆ ಸೇರುತ್ತದೆ. ಅವರು ಇಲ್ಲದಿದ್ದ ಪಕ್ಷದಲ್ಲಿ ಮಾತ್ರ ಆ ಆಸ್ತಿ ಗಂಡು ಮಕ್ಕಳಿಗೆ ಹಾಗೂ ಹೆಣ್ಣು ಮಕ್ಕಳಿಗೆ ಸಮನಾಗಿ ಹಂಚಲ್ಪಡುತ್ತದೆ.

ಪಿತ್ರಾರ್ಜಿತ ಆಸ್ತಿಯನ್ನು ಕೇವಲ ಅವರ ಜೀವತಾವಧಿಯವರೆಗೆ ಮಾತ್ರ ಅನುಭವಿಸುವ ಅವಕಾಶ ನೀಡಿತ್ತು. ೧೯೮೭ರಲ್ಲಿ ಮಂಡಿಸಲಾದ ವಿವಾಹಿತ ಮಹಿಳೆಯ ಸಂದರ್ಭದಲ್ಲಿ ಆಸ್ತಿಯ ಹಕ್ಕಿನ ವಿಚಾರವು ಚರ್ಚೆಗೊಳಗಾಗಿ ೧೯೯೪ರಲ್ಲಿ ತಿದ್ದುಪಡಿಗೊಂಡು ಮದುವೆಯಾದ ಮಹಿಳೆಗೂ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಪಾಲು ದೊರೆಯುವಂತಾಯಿತು. ಪಿತ್ರಾರ್ಜಿತ ಆಸ್ತಿ ಇದ್ದಲ್ಲಿ ಅದು ಪೀಳಿಗೆಯಿಂದ ಪೀಳಿಗೆ ಸಂಬಂಧಿಸಿದ್ದಾಗಿರುತ್ತದೆ.

ವಿಶೇಷವೆಂದರೆ, ಆಸ್ತಿ ಹಕ್ಕನ್ನು ಕಾನೂನು ಬದ್ಧ ಹೆಂಡತಿ ಮಾತ್ರ ಪಡೆಯಬಹುದಾಗಿದೆ. ಆದರೆ ಕಾನೂನು ಬದ್ಧವಲ್ಲದ ಹೆಂಡತಿಯ ಮಕ್ಕಳು ಈ ಆಸ್ತಿ ಹಕ್ಕಿನಲ್ಲಿ ಕಾನೂನು ಬದ್ಧ ಹೆಂಡತಿಯ ಮಕ್ಕಳಂತೆ ಸಮಪಾಲು ಪಡೆಯಬಹುದಾಗಿದೆ. ಅದು ತಂದೆಯ ಸ್ವಯಾರ್ಜಿತ ಆಸ್ತಿಯಾಗಿರಬಹುದು ಅಥವಾ ಪಿತ್ರಾರ್ಜಿತವಾದ ಆಸ್ತಿಯಾದರೂ ಆಗಿರಬಹುದಾಗಿದೆ.

೪.೧.೧೨. ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ (೨೦೦೫)

ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸುರಕ್ಷಿತೆ ಕಾಯ್ದೆ ೨೦೦೫ರಲ್ಲಿ ೫ ಅಧ್ಯಾಯಗಳು ಮತ್ತು ೩೭ ಪರಿಚ್ಛೇದಗಳು ಇವೆ. ಕೌಟುಂಬಿಕ ದೌರ್ಜನ್ಯಕ್ಕೆ ಈ ಕಾಯ್ದೆಯಲ್ಲಿ ಅತ್ಯಂತ ವಿಶಾಲವಾದ ಅರ್ಥ ವ್ಯಾಪ್ತಿಯನ್ನು ನೀಡಲಾಗಿದೆ. ದೈಹಿಕ ಹಿಂಸೆ, ಲೈಂಗಿಕ ಹಿಂಸೆ, ಶಾಬ್ದಿಕ ಹಿಂಸೆ, ಆರ್ಥಿಕ ಹಿಂಸೆ, ಸಾಮಾಜಿಕ ಹಿಂಸೆ, ಭಾವನಾತ್ಮಕ ಹಿಂಸೆ ಮತ್ತು ಮಹಿಳೆಯೊಬ್ಬಳು ಕುಟುಂಬದಲ್ಲಿ ಅನುಭವಿಸುವ ಇನ್ನಿತರ ಎಲ್ಲಾ ರೀತಿಯ ಹಿಂಸೆಗಳ ಬಗ್ಗೆ ವ್ಯಾಖ್ಯಾನ ನೀಡಿರುವ ಈ ಕಾಯ್ದೆಯು ಮಹಿಳೆಯ ಆರೋಗ್ಯ, ಜೀವನ, ಸುರಕ್ಷತೆ ಅಲ್ಲದೇ ಮಾನಸಿಕವಾಗಿ ಹಾಗೂ ದೈಹಿಕವಾಗಿ ಸುಸ್ಥಿತಿಯಲ್ಲಿರುವುದಕ್ಕೆ ವಿರುದ್ಧವಾದ ಯಾವುದೇ ಕೃತ್ಯ ಅಥವಾ ನಡುವಳಿಕೆಯ ವಿರುದ್ಧ ಮಹಿಳೆಗೆ ರಕ್ಷಣೆ ನೀಡುವುದಾಗಿದೆ.

ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾದ ವ್ಯಕ್ತಿ ಎಂಬುವುದು ಕೂಡಾ ಬಹಳ ವಿಶಾಲ ಅರ್ಥವನ್ನು ಪಡೆದುಕೊಂಡಿದೆ. ಕುಟುಂಬದೊಳಗೆ ವಾಸಿಸುವವಳು ತಾಯಿ, ಅತ್ತೆ, ಅಕ್ಕ, ತಂಗಿ, ನಾದಿನಿ, ಅಜ್ಜಿ, ಹೆಂಡತಿ ಅಥವಾ ಬಹಳದಿನಗಳಿಂದ ಒಂದು ಕುಟುಂಬದಲ್ಲಿ ಆ ಕುಟುಂಬದ ಸದಸ್ಯರಂತೆ ವಾಸವಾಗಿರುವ ಹೆಣ್ಣಾಗಿರಬಹುದು ಅಥವಾ ಹೆಂಡತಿಯಂತೆ ಬಾಳಿದವಳು ಹಾಗೂ ಕಾನೂನು ಬಾಹಿರ ಹೆಂಡತಿ ಕೂಡಾ ಈ ಕಾಯ್ದೆಯಡಿ ದೂರು ದಾಖಲು ಮಾಡಬಹುದಾಗಿದೆ.

ಈ ಕಾನೂನು ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯವನ್ನು ಹೀಗೆ ವ್ಯಾಖ್ಯಾನಿಸುತ್ತದೆ. ಕುಟುಂಬದೊಳಗೆ ಮಹಿಳೆಯರ ಮೇಲೆ ಆಗುವ ದೈಹಿಕ, ಮಾನಸಿಕ, ಭಾವನಾತ್ಮಕ, ಲೈಂಗಿಕ,

ಶಾಬ್ದಿಕ ಹಾಗೂ ಆರ್ಥಿಕವಾಗಿ ಆಗುವ ಒಟ್ಟು ಹಿಂಸೆಯನ್ನು ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ ಎಂದು ಹೇಳುತ್ತದೆ.

ಈ ಕಾಯ್ದೆಯಡಿ ದಾಖಲಾದ ಪ್ರಕರಣದಲ್ಲಿ ತಪ್ಪು ಸಾಬೀತಾದರೆ, ಪ್ರಕರಣ ನೀಡಿದವರು ಇಚ್ಚಿಸಿದಲ್ಲಿ ೬ ತಿಂಗಳವರೆಗೂ ವಿಸ್ತರಿಸಬಹುದಾದ ಕಾರಾಗೃಹವಾಸದ ಶಿಕ್ಷೆಯನ್ನು ತಪ್ಪಿತಸ್ಥರಿಗೆ ನೀಡಬಹುದಾಗಿದೆ.

೪.೧.೧೩. ಮಹಿಳೆಯ ಗಂಡ ಅಥವಾ ಆತನ ಸಂಬಂಧಿಗಳು ಆಕೆಯನ್ನು ಕ್ರೌರ್ಯಕ್ಕೊಳಪಡಿಸುವುದು

ಕಲಂ ೪೯೮ ಎ. ಮಹಿಳೆಯ ಪತಿ ಅಥವಾ ಸಂಬಂಧಿಯಾದ ಯಾವ ವ್ಯಕ್ತಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಸೆರೆಮನೆ ವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೆ ಗುರಿಯಾಗತಕ್ಕದ್ದು.[೩]

ಈ ಕಲಂನಡಿ ಕ್ರೌರ್ಯ ಎಂದರೆ, ಮಹಿಳೆಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ತೀವ್ರ ಸ್ವರೂಪದ ಅಪಾಯವನ್ನುಂಟು ಮಾಡುವುದಾಗಿದೆ. ಹಾಗೂ ಆಕೆಗೆ ಕಾನೂನು ಸಮ್ಮತವಲ್ಲದ ಆರ್ಥಿಕ ಗಳಿಕೆಯನ್ನು ತರುವಂತೆ ಒತ್ತಾಯಿಸುವುದಾದರೂ ಆಗಿರಬಹುದಾಗಿದೆ.

೪.೧.೧೪. ಸಿಡಾ (ಅಂತರಾಷ್ಟ್ರೀಯ ಮಟ್ಟದಲ್ಲಿ)

ಎರಡನೇ ಮಹಾಯುದ್ಧದಲ್ಲಿ ಆದ ನರಹತ್ಯೆ ಹಾಗೂ ನಾಶದಿಂದ ಅಮೇರಿಕ, ಸೋವಿಯತ್ ಯುನಿಯನ್ ಮತ್ತು ಬ್ರಿಟನ್‌ಗಳು ಒಟ್ಟಾಗಿ ಅಂತರ್ ರಾಷ್ಟ್ರೀಯ ಸಂದಿಗ್ಧ ಪರಿಸ್ಥಿತಿಯನ್ನು ನಿವಾರಿಸಲು ಮತ್ತು ಮಾತುಕತೆಗಾಗಿ ಒಂದು ವೇದಿಕೆಯನ್ನು ನಿರ್ಮಾಣ ಮಾಡಿದವು. ಹಾಗೂ ಇವುಗಳೆಲ್ಲವು ಒಂದಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಸಂಘಟನೆಯೊಂದನ್ನು ರಚಿಸಿದವು, ಈ ಸಂಘಟನೆಯೇ ವಿಶ್ವಸಂಸ್ಥೆಯಾಗಿದೆ. ಈ ವಿಶ್ವಸಂಸ್ಥೆ ಕಾಯ್ದೆಯೊಂದನ್ನು ೧೯೪೫ ಅಕ್ಟೋಬರ್ ೨೪ ರಂದು ಜಾರಿಗೆ ತಂದಿದೆ. ಇದರ ಉದ್ದೇಶ ವಿಶ್ವ ಸಂಸ್ಥೆಯ ಸದಸ್ಯತ್ವ ಪಡೆದ ಎಲ್ಲಾ ರಾಷ್ಟ್ರಗಳಲ್ಲಿಯ ಮಾನವರಿಗೆ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಮಾನವತಾವಾದದ ಆಧಾರದ ಮೇಲೆ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಮಾನವ ಹಕ್ಕುಗಳಿಗೆ ಗೌರವ ತಂದು ಕೊಡಲು ಹಾಗೂ ಜನಾಂಗ, ಲಿಂಗ, ಭಾಷೆ ಅಥವಾ ಧರ್ಮದ ತಾರತಮ್ಯವಿಲ್ಲದೇ ಎಲ್ಲರಿಗೂ ಮೂಲಭೂತ ಸ್ವಾತಂತ್ರ್ಯಗಳನ್ನು ದೊರಕಿಸಿಕೊಡಲು ಅಂತರ ರಾಷ್ಟ್ರೀಯ ಸಹಕಾರವನ್ನ ನೀಡುವುದಾಗಿದೆ. ಈ ಸದಸ್ಯ ರಾಷ್ಟ್ರಗಳಲ್ಲಿ ಭಾರತವೂ ಕೂಡಾ ಒಂದಾಗಿದೆ.

ವಿಶ್ವ ಸಂಸ್ಥೆಯು ನೀಡಲಾದ ರಕ್ಷಣಾ ಕಾರ್ಯದಲ್ಲಿ ಮಹಿಳೆಯರಿಗೆ ವಿಶೇಷವಾದ ಹಕ್ಕುಗಳನ್ನು ನೀಡಿದೆ. ಅವುಗಳ ಉಲ್ಲಂಘನೆಯಾದಲ್ಲಿ ಶಿಕ್ಷೆಯನ್ನು ಸಹ ನೀಡುತ್ತದೆ. ಇದನ್ನು ಗಮನಿಸಿದಾಗ ಮಹಿಳೆಯರ ಬಗೆಗೆ ಭಿನ್ನ ನಿಲುವುಗಳನ್ನು ತಳೆದಿರುವುದು ಕೇವಲ ಒಂದೆರಡು ರಾಷ್ಟ್ರಗಳಾಗಿರದೇ, ಇದು ವಿಶ್ವವ್ಯಾಪಿ ಸಮಸ್ಯೆ ಎಂದು ಕಂಡುಬರುತ್ತದೆ. ಮಹಿಳೆಯ ಬಗೆಗಿನ ಸಮಸ್ಯೆಗಳಿಗಾಗಿ ಅವುಗಳ ಪರಿಹಾರಕ್ಕಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ವಿಶೇಷ ಕಾನೂನುಗಳನ್ನು ರಚಿಸಿದರು. ಇದರ ಫಲವಾಗಿ "ಮಹಿಳೆಯರ ವಿರುದ್ಧದ ಎಲ್ಲ ಬಗೆಯ ತಾರತಮ್ಯಗಳ ನಿವಾರಣಾ ಒಡಂಬಡಿಕೆ" ರೂಪುಗೊಂಡಿತು.

ಈ ಒಡಂಬಡಿಕೆ ೧೯೭೯ ಡಿಸೆಂಬರ್ ೧೮ ರಂದು ಮಹಾ ಅಧಿವೇಶನದಲ್ಲಿ ಅಂಗೀಕರಿಸಲ್ಪಟ್ಟಿತು. ಹಾಗೂ ೧೯೮೧ರ ಸೆಪ್ಟಂಬರ್ ೩ ರಿಂದ ಜಾರಿಗೊಂಡಿತು. ಇದು ಜಾರಿಗೊಂಡು ೧೦ ವರ್ಷಗಳು ಕಳೆಯುವ ಹೊತ್ತಿಗೆ ಸುಮಾರು ಒಂದು ನೂರು ರಾಷ್ಟ್ರಗಳು ಈ ಒಪ್ಪಂದಕ್ಕೆ ಬದ್ಧರಾಗಲು ಒಪ್ಪಿದವು. ಇವುಗಳಲ್ಲಿ ಮಹಿಳೆಯರನ್ನು ಎರಡನೇ ದರ್ಜೆಯ ಪ್ರಜೆಯಾಗಿ ಕಾಣುತ್ತಿರುವ ಭಾರತವು ಕೂಡಾ ಒಂದಾಗಿದೆ.

ಈ ಕಾನೂನಿನ್ವಯ ಮಹಿಳೆಯರಿಗೆ ಲಿಂಗ ತಾರತಮ್ಯದ ಹಿನ್ನಲೆಯಲ್ಲಿ ಶೋಷಣೆಯಾದದ್ದೇ ಆದಲ್ಲಿ, ಅಂತರ್ ರಾಷ್ಟ್ರೀಯ ಮಟ್ಟದಲ್ಲೂ ಸಹ ಮಹಿಳೆಯರಿಗೆ ನ್ಯಾಯ ತೀರ್ಮಾನಗಳು ಲಭ್ಯವಾಗುತ್ತವೆ.

೪.೧.೧೫. ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) ಅಧಿನಿಯಮ (೧೯೮೨)

ಈ ಕಾಯ್ದೆ ಇಡೀ ಕರ್ನಾಟಕದಾದ್ಯಂತ ಕಾರ್ಯ ನಿರ್ವಹಿಸುತ್ತಿದೆ. ಈ ಕಾಯ್ದೆಯಡಿ ಯಾವುದೇ ವಯಸ್ಸಿನ ಒಬ್ಬ ಮಹಿಳೆ ತನ್ನನ್ನು ಗುಡಿ ಅಥವಾ ಯಾವುದೇ ಪೂಜೆ ಮಾಡುವ ಸ್ಥಳಕ್ಕೆ ಸೇವೆಗಾಗಿ ತನ್ನನ್ನು ಅರ್ಪಿಸಿಕೊಳ್ಳುವುದು ಕಾನೂನುಬಾಹಿರ ಕೆಲಸವಾಗಿರುತ್ತದೆ. ಪೂಜಾರಿಕೆ ಹೆಸರಿನಲ್ಲಿ ದೇವರೊಟ್ಟಿಗೆ ಒಪ್ಪಂದ ಮಾಡಿ ಮಹಿಳೆ ತಾಳಿ ಕಟ್ಟಿಕ್ಕೊಳ್ಳುವುದು ಕಾನೂನು ಬಾಹಿರವಾಗಿರುತ್ತದೆ. ಈ ಕಾಯ್ದೆ ಬಂದ ನಂತರ ದೇವದಾಸಿ ಆದಂತಹ ಮಹಿಳೆಯರು ಅದರಿಂದ ಮುಕ್ತಿ ಹೊಂದಬೇಕು, ಹಾಗೂ ಯಾವೊಬ್ಬ ಮಹಿಳೆಯೂ ದೇವದಾಸಿ ಆಗಕೂಡದು.

ಒಂದು ವೇಳೆ ದೇವದಾಸಿ ಆದದ್ದೇ ಆದಲ್ಲಿ, ಅಂತವಳಿಗೆ ೩ ವರ್ಷಗಳವರೆಗೆ ಕಾರಾಗೃಹ ವಾಸ ಹಾಗೂ ರೂ.೨೦೦೦ ವರೆಗಿನ ದಂಡಕ್ಕೆ ಗುರಿ ಮಾಡಲಾಗುತ್ತದೆ. ಇದಕ್ಕೆ ಉತ್ತೇಜನ ನೀಡಿದ ತಂದೆ-ತಾಯಿ ಅಥವಾ ಪೋಷಕರು ಅಥವಾ ಸಂಬಂಧಿಕರಿಗೆ ೫ ವರ್ಷದವರೆಗೂ ವಿಸ್ತರಿಸಬಹುದಾದ ಕಠಿಣ ಕಾರಾಗೃಹ ವಾಸಕ್ಕೆ ಗುರಿ ಮಾಡಲಾಗುತ್ತದೆ.

೪.೨. ಕೊಪ್ಪಳ ತಾಲ್ಲೂಕು ನ್ಯಾಯಾಲಯಗಳಲ್ಲಿ ದಾಖಲಾದಂತಹ ಅಂಕಿ-ಅಂಶಗಳ ಪಟ್ಟಿ

ಮಾನ್ಯ ವ್ಯವಹಾರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕೊಪ್ಪಳ.[೪]

ಕ್ರ.ಸಂ.	ಪ್ರಕರಣಗಳ ವಿವರ (೨೦೧೨-೨೦೧೩)	ಪ್ರಕರಣಗಳ ಸಂಖ್ಯೆ
೧.	ಗರ್ಭಪಾತ ಕಲಂ ೩೧೨, ೩೧೪	ದಾಖಲಾಗಿರುವುದಿಲ್ಲ
೨.	ಜನನ ಪೂರ್ವ ಪರೀಕ್ಷೆ ತಂತ್ರಜ್ಞಾನ ನಿಯಂತ್ರಣ ಮತ್ತು ದುರ್ಬಳಕೆ ತಡೆ ಕಾಯ್ದೆ ೧೯೯೪	ದಾಖಲಾಗಿರುವುದಿಲ್ಲ
೩.	ಹೆಣ್ಣು ಶಿಶು ಹತ್ಯಾ ನಿಷೇಧ ಕಾಯ್ದೆ	ದಾಖಲಾಗಿರುವುದಿಲ್ಲ
೪.	ಬಾಲ್ಯ ವಿವಾಹ ನಿಷೇಧ ಕಾಯ್ದೆ ೧೯೭೮	ದಾಖಲಾಗಿರುವುದಿಲ್ಲ
೫.	ಅನೈತಿಕ ವ್ಯವಹಾರಗಳಿಗಾಗಿ ಮಹಿಳೆಯ ಸಾಗಣೆ ಕಾಯ್ದೆ ೩೭೧	ದಾಖಲಾಗಿರುವುದಿಲ್ಲ

೬.	ಬಾಲ ಕಾರ್ಮಿಕ ತಡೆ ಕಾಯ್ದೆ ೧೯೮೬	ದಾಖಲಾಗಿರುವುದಿಲ್ಲ
೭.	ವರದಕ್ಷಿಣೆ ನಿಷೇಧ ಕಾಯ್ದೆ ೧೯೧೬	೭
೮.	ಜೀವನಾಂಶ ಕಲಂ ೧೨೫	೧೦೧
೯.	ಆಸ್ತಿ ಹಕ್ಕು ೧೯೫೬	೧೮೯
೧೦.	ಅತ್ಯಾಚಾರ ಕಾಯ್ದೆ (ಕುಟುಂಬದ ಸದಸ್ಯರಿಂದ ಅತ್ಯಾಚಾರಗಳಾದ ಪ್ರಕರಣಗಳು)	ದಾಖಲಾಗಿರುವುದಿಲ್ಲ

ಮಾನ್ಯ ಹಿರಿಯ ಸಿವಿಲ್ ವ್ಯವಹಾರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು, ಕೊಪ್ಪಳ.[೫]

ಕ್ರ.ಸಂ.	ಪ್ರಕರಣಗಳ ವಿವರ (೨೦೧೨ ಮತ್ತು ೨೦೧೩)	ಪ್ರಕರಣಗಳ ಸಂಖ್ಯೆ
೧.	ಗರ್ಭಪಾತ ಕಲಂ ೩೧೨, ೩೧೪	ದಾಖಲಾಗಿರುವುದಿಲ್ಲ
೨.	ಜನನ ಪೂರ್ವ ಪರೀಕ್ಷೆ ತಂತ್ರಜ್ಞಾನ ನಿಯಂತ್ರಣ ಮತ್ತು ದುರ್ಬಳಕೆ ತಡೆ ಕಾಯ್ದೆ ೧೯೯೪	ದಾಖಲಾಗಿರುವುದಿಲ್ಲ
೩.	ಹೆಣ್ಣು ಶಿಶು ಹತ್ಯಾ ನಿಷೇಧ ಕಾಯ್ದೆ	ದಾಖಲಾಗಿರುವುದಿಲ್ಲ
೪.	ಬಾಲ್ಯ ವಿವಾಹ ನಿಷೇಧ ಕಾಯ್ದೆ ೧೯೭೮	ದಾಖಲಾಗಿರುವುದಿಲ್ಲ
೫.	ಅನೈತಿಕ ವ್ಯವಹಾರಗಳಿಗಾಗಿ ಮಹಿಳೆಯ ಸಾಗಣೆ ಕಾಯ್ದೆ ೩೭೧	ದಾಖಲಾಗಿರುವುದಿಲ್ಲ
೬.	ಬಾಲ ಕಾರ್ಮಿಕ ತಡೆ ಕಾಯ್ದೆ ೧೯೮೬	ದಾಖಲಾಗಿರುವುದಿಲ್ಲ
೭.	ವರದಕ್ಷಿಣೆ ನಿಷೇಧ ಕಾಯ್ದೆ ೧೯೧೬	೦೮
೮.	ಜೀವನಾಂಶ ಕಲಂ ೧೨೫	ದಾಖಲಾಗಿರುವುದಿಲ್ಲ
೯.	ಆಸ್ತಿ ಹಕ್ಕು ೧೯೫೬	೯೦
೧೦.	ಅತ್ಯಾಚಾರ ಕಾಯ್ದೆ (ಕುಟುಂಬದ ಸದಸ್ಯರಿಂದ ಅತ್ಯಾಚಾರಗಳಾದ ಪ್ರಕರಣಗಳು)	ದಾಖಲಾಗಿರುವುದಿಲ್ಲ

ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ.[೬]

ಕ್ರ.ಸಂ.	ಪ್ರಕರಣಗಳ ವಿವರ (೨೦೧೨-೨೦೧೩)	ಪ್ರಕರಣಗಳ ಸಂಖ್ಯೆ
೧.	ವರದಕ್ಷಿಣೆ ನಿಷೇಧ ಕಾಯ್ದೆ ೧೯೧೬	೧೩
೨.	ಜೀವನಾಂಶ ಕಲಂ ೧೨೫	೧೨
೩.	ಅತ್ಯಾಚಾರ ಕಾಯ್ದೆ (ಕುಟುಂಬದ ಸದಸ್ಯ ರಿಂದ ಅತ್ಯಾಚಾರಗಳಾದ ಪ್ರಕರಣಗಳು)	ದಾಖಲಾಗಿರುವುದಿಲ್ಲ

ಕಾನೂನುಗಳ ಕಾರ್ಯ ಹಾಗೂ ದಾಖಲಾದ ಪ್ರಕರಣಗಳ ಅಂಕಿ-ಅಂಶಗಳ ಸಂಕ್ಷಿಪ್ತ ವಿಶ್ಲೇಷಣೆ

ಸಮಾಜದಲ್ಲಿ ನಡೆಯುವ ದುಷ್ಕೃತ್ಯಗಳನ್ನು ತಡೆಯುವ ಜೊತೆಗೆ ಅನ್ಯಾಯದ ವಿರುದ್ಧ ನ್ಯಾಯ ಒದಗಿಸುವ ಕಾರ್ಯವನ್ನು ಕಾನೂನು ನಿರ್ವಹಿಸುತ್ತದೆ ಹಾಗೂ ಸಮಾಜವನ್ನು ಸದಾ ಸುವ್ಯವಸ್ಥೆಯಲ್ಲಿಡುವಂತೆ ನೋಡಿಕೊಳ್ಳುತ್ತದೆ. ಸಮಾಜದ ಜನರ ಹಿತರಕ್ಷಣೆ ಮತ್ತು ತಪ್ಪಿತಸ್ಥರಿಗೆ ಶಿಕ್ಷೆ ಕೊಡುವ ಕಾರ್ಯವನ್ನು ನಿಷ್ಪಕ್ಷಪಾತವಾಗಿ ಕಾನೂನು ವ್ಯವಸ್ಥೆ ಮಾಡುತ್ತದೆ. ಇಲ್ಲಿ ಬಡವರು, ಶ್ರೀಮಂತರು, ಶಿಕ್ಷಿತರು, ಅಶಿಕ್ಷಿತರು, ಹೆಣ್ಣು-ಗಂಡುಗಳೆಂಬ ಭೇದ ಭಾವವಿರುವುದಿಲ್ಲ. ಕಾನೂನಿನಡಿಯಲ್ಲಿ ಎಲ್ಲರೂ ಸರಿಸಮಾನರಾಗಿರುತ್ತಾರೆ.

ಕಾನೂನು ಇಷ್ಟೆಲ್ಲಾ ಕಾರ್ಯ ನಿರ್ವಹಿಸಿದಾಗಲೂ ಮಹಿಳೆಯರ ಮೇಲೆ ಅನೇಕ ರೀತಿಯ ಕೌಟುಂಬಿಕ ದೌರ್ಜನ್ಯಗಳು ಜರುಗುತ್ತಲಿವೆ. ಇವುಗಳನ್ನು ನ್ಯಾಯಾಂಗ ವ್ಯವಸ್ಥೆ ತಡೆಗಟ್ಟಲು ಏಕೆ ಸಾಧ್ಯವಾಗಿಲ್ಲ ಎಂಬ ಪ್ರಶ್ನೆ ಮೂಡುತ್ತದೆ. ಇಲ್ಲಿ ಕಾನೂನಿಗೂ ತನ್ನದೇ ಆದ ಕಾರ್ಯ ವ್ಯಾಪ್ತಿ ಇದೆ. ತನ್ನ ವ್ಯಾಪ್ತಿಗೆ ಪ್ರಕರಣಗಳು ಬರದೇ ಹೋದರೆ ಏನನ್ನು ಮಾಡಲು ಸಾಧ್ಯವಿಲ್ಲ. ತನ್ನ ಕಕ್ಷೆಗೆ ಬಂದಾಗ ಮಾತ್ರ ನ್ಯಾಯ-ನಿರ್ಣಯಗಳನ್ನು ದೊರಕಿಸಿಕೊಡುತ್ತದೆ. ಹೀಗೆಂದ ಮಾತ್ರದಲ್ಲಿ ಕಾನೂನುಗಳು ನಿಷ್ಪ್ರಯೋಜಕ ಎಂದಲ್ಲ. ಕಾನೂನು ಇಂತಿಂತಹ ನಡುವಳಿಕೆಗಳು ಸಾಮಾಜಿಕವಾಗಿ ಬಹಿಷ್ಕೃತ ಗೊಂಡವುಗಳಾಗಿವೆ, ಬಹಿಷ್ಕೃತಗೊಂಡ ನಡಾವಳಿಗಳು ಜರುಗಿಸಿದಲ್ಲಿ ಅಂತವರು ಶಿಕ್ಷೆಗೆ ಗುರಿಯಾಗುತ್ತಾರೆ ಎಂದು ನಿರ್ದೇಶಿಸಿರುತ್ತದೆ. ಇಷ್ಟಿದ್ದರೂ ಸಹ ಜನರು ಕಾನೂನನ್ನು ಗೌರವಿಸದೇ ಸಮಾಜ ಬಾಹಿರ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಅದು ಕುಟುಂಬದ ಒಳಗೆ ನಡೆಯುವಂತವುಗಳಾಗಿರಬಹುದು ಅಥವಾ ಕುಟುಂಬದ ಹೊರಗೆ ಜರುಗುವಂತವುಗಳಾಗಿರಬಹುದು. ಅವು ಒಟ್ಟಾರೆಯಾಗಿ ಕಾನೂನಿನ ವ್ಯಾಪ್ತಿಯಲ್ಲಿ ತಪ್ಪುಗಳಾಗಿರುತ್ತವೆ. ಇದೆಲ್ಲಾ ಗೊತ್ತಿದ್ದು ಸಮಾಜದಲ್ಲಿ ತಪ್ಪುಗಳು ಜರುಗುತ್ತಲೇ ಇವೆ. ಇವುಗಳ ನಿಯಂತ್ರಣಕ್ಕೆ ನ್ಯಾಯಾಂಗ ವ್ಯವಸ್ಥೆ ಸದಾ ಶ್ರಮಿಸುತ್ತಲಿರುತ್ತದೆ. ವಿಶೇಷವೆಂದರೆ ಅದು ನ್ಯಾಯ ನಿರ್ಣಯಗಳ ಸಂದರ್ಭದಲ್ಲಿ ಮುಖ್ಯವಾಗಿ ಸಾಕ್ಷಿಗಳಿಗೆ ಹೆಚ್ಚು ಪ್ರಾಧಾನ್ಯತೆ ಕೊಡುತ್ತದೆ. ಇದರಿಂದ ಕೆಲವು ಸಂದರ್ಭಗಳಲ್ಲಿ ಅನ್ಯಾಯ ಜರುಗಿದಾಗಲೂ ಸಹ ಸಾಕ್ಷಿಗಳಿಲ್ಲದ ಕಾರಣ ಸರಿಯಾದ ನ್ಯಾಯ ಸಿಗದೆ ಕಾನೂನಿನ ಬಗ್ಗೆ ಕೊಂಚ ಬೇಸರ ಉಂಟಾಗಬಹುದಾಗಿದೆ. ಕಾನೂನಿನ ಕಾರ್ಯ ತುಂಬ ವಿಳಂಬ ನೀತಿಯದ್ದಾಗಿದೆ. ಜೊತೆಗೆ ವೆಚ್ಚದಾಯಕ ಕೂಡಾ ಆಗಿದೆ. ನ್ಯಾಯಾಂಗ ವ್ಯವಸ್ಥೆಯಲ್ಲಿ ಇಷ್ಟೆಲ್ಲಾ ಕ್ಲಿಷ್ಟತೆ ಇರುವುದರಿಂದ ಸಮಾಜದಲ್ಲಿ ಅಸಹಾಯಕರೆನಿಸಿಕೊಂಡ ಮಹಿಳೆಯರು ಕಾನೂನಿನ ಮೊರೆ ಹೋಗುವುದು ತುಂಬಾ ವಿರಳವಾಗಿದೆ. ಜೊತೆಗೆ ಕಾನೂನಿನ ಅರಿವಿಲ್ಲದ ಕಾರಣ ಅವರಿಗೆ ಸೂಕ್ತ ನ್ಯಾಯ ದೊರಕದಂತಾಗಿದೆ.

ಇನ್ನು ಕುಟುಂಬದೊಳಗಡೆ ಮಹಿಳೆಯರ ಮೇಲೆ ನಡೆಯುತ್ತಿರುವ ಕೌಟುಂಬಿಕ ದೌರ್ಜನ್ಯಗಳ ವಿಚಾರಕ್ಕೆ ಬಂದಾಗ ಕಾನೂನು ಬಹಳಷ್ಟು ನೆರವಾಗಿದೆ ಎಂದು ಹೇಳಬಹುದು. ಮಹಿಳೆಯರ ಮೇಲೆ ಆಗುತ್ತಿರುವ ದೌರ್ಜನ್ಯಗಳನ್ನು ಗಮನಿಸಿ ಅವುಗಳ ನಿವಾರಣೆಗೆ ಅನೇಕ ಕಾಯ್ದೆ - ಕಾನೂನುಗಳನ್ನು ಶಾಸಕಾಂಗ ಜಾರಿಗೊಳಿಸಿದೆ. ಉದಾಹರಣೆಗೆ ಗರ್ಭಪಾತ ಕಲಂ ೩೧೨, ೩೧೪,

ಜನನ ಪೂರ್ವ ಪರೀಕ್ಷೆ ತಂತ್ರಜ್ಞಾನ ನಿಯಂತ್ರಣ ಮತ್ತು ದುರ್ಬಳಕೆ ತಡೆ ಕಾಯ್ದೆ ೧೯೯೪, ಹೆಣ್ಣು ಶಿಶು ಹತ್ಯಾ ನಿಷೇಧ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ ೧೯೭೮, ಅನೈತಿಕ ವ್ಯವಹಾರಗಳಿಗಾಗಿ ಮಹಿಳೆಯ ಸಾಗಣೆ ಕಾಯ್ದೆ ೩೭೧, ವರದಕ್ಷಿಣೆ ನಿಷೇಧ ಕಾಯ್ದೆ ೧೯೧೬, ಜೀವನಾಂಶ ಕಲಂ ೧೨೫, ಆಸ್ತಿ ಹಕ್ಕು ೧೯೫೬ ಮುಂತಾದವುಗಳು. ಹೀಗೆ ಹಲವಾರು ಕಾನೂನುಗಳು ಮಹಿಳೆಯರು ಕೌಟುಂಬಿಕ ಹಿಂಸೆಗಳಿಂದ ಪಾರಾಗಲು ಇರುವಂತವುಗಳಾಗಿವೆ. ಇವುಗಳ ಸಂಕ್ಷಿಪ್ತ ವಿವರಣೆಯನ್ನೂ ಸಹ ಈ ಮೇಲೆ ನೀಡಲಾಗಿದೆ. ಇಷ್ಟೆಲ್ಲಾ ಕಾನೂನುಗಳು ಮಹಿಳೆಯರ ಪರವಾಗಿ ಇವೆ ಎಂದು ಹೇಳುವುದು ಹೆಮ್ಮೆಪಡಬೇಕಾದಂತಹ ಸಂಗತಿ ಏನಲ್ಲ. ಬದಲಾಗಿ ಇಷ್ಟೊಂದು ಸಂಕಷ್ಟಗಳಲ್ಲಿ ಇಂದು ಮಹಿಳೆಯರು ಜೀವನ ನಡೆಸುವಂತಾಗಿದೆಯಲ್ಲ ಎಂದು ಸುಸಂಸ್ಕೃತ ಸಮಾಜ ನಾಚಿಕೆ ಪಡಬೇಕಾಗಿದೆ.

ಇಂತಹ ಸುಸಂಸ್ಕೃತ ಸಮಾಜದಲ್ಲಿ ಮಹಿಳೆಯರು ಅನುಭವಿಸುತ್ತಿರುವ ಕೌಟುಂಬಿಕ ದೌರ್ಜನ್ಯಗಳನ್ನು ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸಿದಾಗ ಅಲ್ಲಿ ರಾಶಿ ರಾಶಿಯಷ್ಟು ಪ್ರಕರಣಗಳು ಕಾಣಬರುತ್ತವೆ. ಅಂತೆಯೇ ನ್ಯಾಯಾಲಯಗಳನ್ನು ಸಂದರ್ಶಿಸಿದಾಗ ಅಲ್ಲಿ ದಾಖಲಾದ ಪ್ರಕರಣಗಳು ಮಾತ್ರ ತೀರಾ ವಿರಳವಾಗಿವೆ. ಇದಕ್ಕೆ ಪೂರಕವಾಗಿ ಕೊಪ್ಪಳ ತಾಲ್ಲೂಕಿಗೆ ಸಂಬಂಧಿಸಿದಂತಹ ನ್ಯಾಯಾಲಯಗಳಲ್ಲಿನ ಪ್ರಕರಣಗಳ ದಾಖಲಾತಿಯನ್ನು ತೆಗೆದುಕೊಂಡಾಗ, ಮಾನ್ಯ ವ್ಯವಹಾರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕೊಪ್ಪಳ ಇಲ್ಲಿ ೨೦೧೨ ಮತ್ತು ೨೦೧೩ ಈ ಎರಡು ವರ್ಷಗಳಲ್ಲಿದಾಖಲಾದ ಪ್ರಕರಣಗಳ ಸಂಖ್ಯೆ ಹೀಗಿದೆ. ವರದಕ್ಷಿಣೆ ನಿಷೇಧ ಕಾಯ್ದೆಯಡಿ ಕೇವಲ ೭ ಪ್ರಕರಣಗಳು, ಜೀವನಾಂಶ ಕಲಮಿ (೧೨೫) ನಡಿ ೧೦೧ ಪ್ರಕರಣಗಳು ಹಾಗೂ ಆಸ್ತಿ ಹಕ್ಕು ೧೯೫೬ ರಡಿಯಲ್ಲಿ ೧೮೯ ಪ್ರಕರಣಗಳು ದಾಖಲಾಗಿವೆ. ಹಾಗೂ ಮಾನ್ಯ ಹಿರಿಯ ಸಿವಿಲ್ ವ್ಯವಹಾರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು, ಕೊಪ್ಪಳ ಇಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ, ವರದಕ್ಷಿಣೆ ನಿಷೇಧ ಕಾಯ್ದೆ ೧೯೧೬ರಡಿ ೦೮ ಪ್ರಕರಣಗಳು ಮತ್ತು ಆಸ್ತಿ ಹಕ್ಕು ೧೯೫೬ರಡಿ ೬೦ ಪ್ರಕರಣಗಳು ದಾಖಲಾಗಿರುವುದು ಕಂಡುಬರುತ್ತದೆ. ಇನ್ನು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ ಇಲ್ಲಿ ವರದಕ್ಷಿಣೆ ನಿಷೇಧ ಕಾಯ್ದೆ ೧೯೧೬ರಡಿಯಲ್ಲಿ ೧೩ ಪ್ರಕರಣಗಳು, ಜೀವನಾಂಶ ಕಲಂ ೧೨೫ ರಡಿಯಲ್ಲಿ ೧೨ ಪ್ರಕರಣಗಳು ಹಾಗೂ ಅತ್ಯಾಚಾರ ಕಾಯ್ದೆ (ಕುಟುಂಬದ ಸದಸ್ಯರಿಂದ ಅತ್ಯಾಚಾರಗಳಾದ ಪ್ರಕರಣಗಳು) ಯಡಿ ೦೯ ಪ್ರಕರಣಗಳು ದಾಖಲಾಗಿರುವುದನ್ನು ಕಾಣಬಹುದಾಗಿದೆ.

ಈ ಮೂರು ನ್ಯಾಯಾಲಯಗಳ ನಡುವಿನ ಭಿನ್ನತೆಗಳೆಂದರೆ, ಅವು ಪ್ರಕರಣಗಳು ಹೊಂದಿದ ಸ್ವರೂಪವನ್ನಾಧರಿಸಿದೆ. ಅಂದರೆ, ಉದಾಹರಣೆಗೆ ವರದಕ್ಷಿಣೆ ಪ್ರಕರಣವನ್ನು ತೆಗೆದುಕೊಂಡಾಗ ರೂ.೩೦,೦೦೦ ಒಳಗಿನ ವರದಕ್ಷಿಣೆ ಪ್ರಕರಣ ಮಾನ್ಯ ವ್ಯವಹಾರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕೊಪ್ಪಳ ಇಲ್ಲಿ ದಾಖಲಾಗುತ್ತವೆ. ಇನ್ನು ೩೦,೦೦೦ ದಿಂದ ರೂ.೫೦,೦೦೦ ವರೆಗಿನ ವರದಕ್ಷಿಣೆ ಹಣದ ಪ್ರಕರಣ ಮಾನ್ಯ ಹಿರಿಯ ಸಿವಿಲ್

ವ್ಯವಹಾರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು, ಕೊಪ್ಪಳ ಇಲ್ಲಿ ದಾಖಲಾಗುತ್ತವೆ. ಇನ್ನು ರೂ.೫೦,೦೦೦ ಗಿಂತ ಮೇಲ್ಪಟ್ಟ ಹಣದ ವರದಕ್ಷಿಣೆ ಪ್ರಕರಣಗಳು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳರವರಲ್ಲಿ ದಾಖಲಾಗುತ್ತವೆ. ಈ ರೀತಿಯಾಗಿ ಪ್ರಕರಣಗಳ ಸ್ವರೂಪದ ತೀವ್ರತೆಗನುಸಾರವಾಗಿ ಅವು ಆಯಾ ನಿಗದಿತ ನ್ಯಾಯಾಲಯಗಳಲ್ಲಿ ದಾಖಲಾಗಿರುತ್ತವೆ. ಇನ್ನು ಅತ್ಯಾಚಾರದ ಪ್ರಕರಣಗಳೇನೇ ಇದ್ದರೂ ಅವು ಮಾನ್ಯ ಜಿಲ್ಲಾ ಮತ್ತು ಸತ್ರನ್ಯಾಯಾಲಯದಲ್ಲಿ ಮಾತ್ರ ದಾಖಲಾಗಿರುತ್ತವೆ.

ಅಧ್ಯಯನಕ್ಕೆ ಸಂಬಂಧಿಸಿದಂತ ಕ್ಷೇತ್ರದಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆಯನ್ನು ಅವುಗಳು ಹೊಂದಿದ ಸ್ವರೂಪಕ್ಕನುಗುಣವಾಗಿ ಈಗಾಗಲೇ ಈ ಮೇಲೆ ಪಟ್ಟಿಯೊಂದರ ಮೂಲಕ ದಾಖಲಿಸಲಾಗಿದೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ, ಸಮಾಜದಲ್ಲಿ ಮಹಿಳೆಯರು ಹಲವಾರು ಬಗೆಗಳಲ್ಲಿ ಹಿಂಸೆಯನ್ನು ಅನುಭವಿಸುತ್ತಿದ್ದು, ನ್ಯಾಯಾಲಯಗಳಲ್ಲಿ ಏಕೆ ಕಡಿಮೆ ಪ್ರಮಾಣದಲ್ಲಿ ಪ್ರಕರಣಗಳು ದಾಖಲಾಗಿವೆ ಎಂಬುವುದನ್ನು ಅರಿಯಬೇಕಾಗುತ್ತದೆ. ಅನೇಕ ವರದಿಗಳು ಅದೆಷ್ಟೋ ಹೆಣ್ಣು ಭ್ರೂಣ ಹತ್ಯೆಗಳಾಗಿವೆ ಎಂದು ದಾಖಲಿಸುತ್ತವೆ ಹಾಗೂ ಹೆಣ್ಣು ಮಗುವನ್ನು ಬೀದಿಗೆಸೆದಿದ್ದಾರೆ ಎಂದು ಹೇಳುತ್ತವೆ. ಆದರೆ ಅವು ಯಾವುವು ಕೂಡಾ ನ್ಯಾಯಾಲಯಗಳಲ್ಲಿ ದಾಖಲಾಗಿಲ್ಲ. ೨೦೧೩ ಮತ್ತು ೨೦೧೪ರಲ್ಲಿ ಗರ್ಭಪಾತ ಕಲಂ ೩೧೨, ೩೧೪, ಜನನ ಪೂರ್ವ ಪರೀಕ್ಷೆ, ತಂತ್ರಜ್ಞಾನ ನಿಯಂತ್ರಣ ಮತ್ತು ದುರ್ಬಳಕೆ ತಡೆ ಕಾಯ್ದೆ ೧೯೯೪, ಹೆಣ್ಣು ಶಿಶು ಹತ್ಯಾ ನಿಷೇಧ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ ೧೯೭೮, ಅನೈತಿಕ ವ್ಯವಹಾರಗಳಿಗಾಗಿ ಮಹಿಳೆಯ ಸಾಗಣೆ ಕಾಯ್ದೆ ೩೭೧, ಬಾಲ ಕಾರ್ಮಿಕ ತಡೆ ಕಾಯ್ದೆ ೧೯೮೬ ರ ಕಾಯ್ದೆಗಳಡಿಯಲ್ಲಿ ಒಂದೂ ಪ್ರಕರಣ ದಾಖಲಾಗದಿರುವುದು ಈ ಬಗೆಯ ಕೃತ್ಯಗಳು ಸಮಾಜದಲ್ಲಿ ನಡೆದಿಲ್ಲವೇನೋ ಎಂಬುವುದನ್ನು ಸೂಚಿಸುತ್ತದೆ. ಆದರೆ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಹತ್ತು ಹಲವಾರು ಪ್ರಕರಣಗಳು ಲಭ್ಯವಾಗುತ್ತವೆ. ಇಂತಹ ದ್ವಂದ್ವಗಳನ್ನು ಗಮನಿಸಿದಾಗ ಭಾಗಶಃ ಅನ್ಯಾಯಕ್ಕೊಳಗಾದ ಪ್ರಕರಣಗಳೆಲ್ಲವು ವ್ಯವಸ್ಥೆಯ ಹುನ್ನಾರದ ಭಾಗವಾಗಿ ಮುಚ್ಚಿಹೋಗುತ್ತಲಿವೆ ಎಂಬುದು ಗಮನಕ್ಕೆ ಬರುತ್ತದೆ. ಇನ್ನು ಹೆಣ್ಣು ಗಂಡೆಂಬ ಭೇದ ಭಾವ ಜಗತ್ ಜನಿತವಾಗಿದೆ. ಈ ಬಗೆಯ ಭಿನ್ನ ಧೋರಣೆಯ ನಡುವಳಿಕೆಗಳು ಸಮಾಜ ಒಪ್ಪಿತವಾಗಿ ನಡೆದುಕೊಂಡು ಹೋಗುತ್ತಿರುವುದರಿಂದ ಹೆಣ್ಣು ತನಗಾದ ನೋವನ್ನು ಪ್ರತಿಭಟಿಸದಿರಲು ಮುಖ್ಯ ಕಾರಣವಾಗಿದೆ.

೪.೩. ಕಾನೂನಿನ ಸೂಕ್ಷ್ಮಾವಲೋಕನ

ಪ್ರಜಾಪ್ರಭುತ್ವ ವ್ಯವಸ್ಥೆ ಎಲ್ಲಾ ಜೀವಿಗಳಿಗೂ ಸಮಾನವಾಗಿ ಬದುಕುವ ಅವಕಾಶ ಕಲ್ಪಿಸಿದೆ. ಅದೇ ರೀತಿಯಾಗಿ ಎಲ್ಲಾ ಜೀವಿಗಳಿಗೂ ನೆಮ್ಮದಿಯಿಂದ ಜೀವಿಸುವಂತೆ ಕಾನೂನು ವ್ಯವಸ್ಥೆಯೊಂದನ್ನು ರೂಪಿಸಿದೆ. ಬದಲಾದ ಸಾಮಾಜಿಕ ಪಲ್ಲಟಗಳನ್ನು ಗಮನದಲ್ಲಿರಿಸಿಕೊಂಡು ಕಾನೂನುಗಳನ್ನು ನಿರಂತರವಾಗಿ ರಚಿಸುತ್ತಾ, ಬದಲಾವಣೆಗೊಳಿಸುತ್ತ ಹೊರಟಿದೆ. ಅದರಲ್ಲೂ ವಿಶೇಷವಾಗಿ ಮಹಿಳೆಯರಿಗೆ ಸಂಬಂಧ ಪಟ್ಟಂತೆ ಅವರ ರಕ್ಷಣೆಗಾಗಿ ಹಲವಾರು ಕಾನೂನುಗಳನ್ನು ರಚಿಸುತ್ತಲೇ ಹೊರಟಿದೆ.

ಜೊತೆಗೆ ಸಂಕಷ್ಟದಲ್ಲಿರುವ ಮಹಿಳೆಯರು ಉಚಿತವಾಗಿ ಕಾನೂನಿನ ಸೇವೆ, ಸಲಹೆಗಳನ್ನು ಸಹ ಸುಲಭವಾಗಿ ದೊರಕಿಸಿಕೊಳ್ಳುವಂತೆ ಮಾಡಿದೆ. ಇಷ್ಟಿದ್ದರೂ ಸಹ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳು ಮಾತ್ರ ಕಡಿಮೆ ಆಗಿಲ್ಲ.

ಯಾವುದೇ ಒಂದು ವ್ಯವಸ್ಥೆ ಅಥವಾ ವಿಧಾನ ಅಥವಾ ಸಿದ್ಧಾಂತ ಎಲ್ಲದಕ್ಕೂ ಅದರದ್ದೇ ಆದ ಬದ್ಧತೆ, ಕ್ರಮ, ಚೌಕಟ್ಟು ನಿರ್ಮಾಣಗೊಂಡಿರುತ್ತದೆ. ಅದರಂತೆ ಕಾನೂನು ವ್ಯವಸ್ಥೆ ಸಹ ಅದರದ್ದೇ ಆದ ಚೌಕಟ್ಟಿಗೊಳಪಟ್ಟು ಕಾರ್ಯ ನಿರ್ವಹಿಸುತ್ತಿರುವುದು ಕಾಣಬರುತ್ತಿದೆ. ಆಧುನಿಕ ಭಾರತದ ಸ್ತ್ರೀವಾದದಲ್ಲಿ ಮಹಿಳಾ ಸಮಸ್ಯೆಗಳಿಗೆ ಕಾನೂನುಗಳೇ ಸಹಾಯಕವೆಂದು ಪರಿಗಣಿಸಿದ್ದರೂ ಸಹ, ಅವು ಮಹಿಳೆಯರಿಗೆ ಪರಿಪೂರ್ಣವಾಗಿ ಸಹಾಯಕವಾಗಿಲ್ಲ ಎಂಬುದು ಗೋಚರವಾಗುತ್ತದೆ. ಕಾರಣ ಮಹಿಳೆಯರ ಮೇಲಿನ ಕೌಟುಂಬಿಕ ಹಿಂಸೆಯ ಸಂಗತಿಯನ್ನ ಗಮನಿಸಿದಾಗ ನ್ಯಾಯಾಲಯಗಳಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ತೀರಾ ವಿರಳ ಎಂದೆನಿಸುತ್ತದೆ. ಅದು ಕ್ಷೇತ್ರ ಕಾರ್ಯದಲ್ಲಿ ದೊರೆತ ಪ್ರಕರಣಗಳಿಗೆ ಹೋಲಿಸಿದಾಗ ಸ್ಪಷ್ಟವಾಗುತ್ತದೆ. ಈ ಮೂಲಕ ನ್ಯಾಯಾಂಗ ಹಾಗೂ ಕಾನೂನುಗಳ ಕಾರ್ಯ ಎಷ್ಟೆಂಬುದು ಗೋಚರವಾಗುತ್ತದೆ. ಕಾನೂನು ತನ್ನ ವ್ಯಾಪ್ತಿಗೆ ಬರದ ಮಹಿಳಾ ಸಮಸ್ಯೆಗಳನ್ನು ನಿವಾರಿಸುವಲ್ಲಿ ಅಥವಾ ಮಹಿಳಾ ದೌರ್ಜನ್ಯಗಳನ್ನು ತಡೆಯುವಲ್ಲಿ ಯಶಸ್ವಿಯಾಗದಿದ್ದರೆ ಅದು ನಿಷ್ಪ್ರಯೋಜಕ ಎಂದು ಹೇಳಬಹುದು. ಹಾಗೆಂದ ಮಾತ್ರದಲ್ಲಿ ಇವುಗಳ ಉಪಯುಕ್ತತೆ ಇಲ್ಲ ಎಂದೇನಲ್ಲ. ನ್ಯಾಯ ಅನ್ಯಾಯಗಳನ್ನು ಸರಿಯಾಗಿ ಗಮನಿಸಿದಾಗ ನ್ಯಾಯಾಲಯಗಳಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ಬಹಳ ಕಡಿಮೆ ಎಂದೆನಿಸುತ್ತದೆ. ಅದು ಕ್ಷೇತ್ರ ಕಾರ್ಯದಲ್ಲಿ ದೊರೆತ ಪ್ರಕರಣಗಳಿಗೆ ಹೋಲಿಸಿದಾಗ ಸ್ಪಷ್ಟವಾಗುತ್ತದೆ. ಈ ಮೂಲಕ ನ್ಯಾಯಾಂಗ ಹಾಗೂ ಕಾನೂನುಗಳ ಸೀಮಿತತೆ ಎಷ್ಟೆಂಬುದು ಗೋಚರವಾಗುತ್ತದೆ. ನ್ಯಾಯಾಂಗ ಪ್ರಕರಣಗಳ ಇತ್ಯರ್ಥ ಸಂದರ್ಭಗಳಲ್ಲಿ ನ್ಯಾಯ ಅನ್ಯಾಯಗಳನ್ನು ಸೂಕ್ಷ್ಮಾವಲೋಕನ ಮಾಡಿ ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳುತ್ತದೆ.

ಕಾನೂನಿನ ಬಹುದೊಡ್ಡ ಸಮಸ್ಯೆ ಎಂದರೆ, ಅದರ ಕುರಿತಾದ ತಿಳುವಳಿಕೆ ಎಲ್ಲರಿಗೂ ತಲುಪದಿರುವುದಾಗಿದೆ. ಕಾನೂನು ವ್ಯಾಸಂಗ ಮಾಡಿದವರಿಗೆ ಮಾತ್ರ ಅದರ ಸಂಪೂರ್ಣ ಅರಿವು ಸಾಧ್ಯ ಎಂಬಂತಾಗಿದೆ. ಅಕ್ಷರಸ್ಥರಿಗೂ ಸಹ ಕಾನೂನಿನ ಅರಿವು ಇಲ್ಲದಂತಾಗಿದೆ. ಕಾನೂನನ್ನು ರಚಿಸಿದರೆ ಸಾಲದು ಅದರ ಉಪಯೋಗಗಳ ಬಗ್ಗೆ ಜನರಿಗೆ ತಲುಪಿಸುವಲ್ಲಿ ಸರ್ಕಾರ ಸ್ವಲ್ಪ ಹಿಂದುಳಿದಿದೆ ಎಂದು ಹೇಳಬಹುದು. ಕೆಲವೊಂದು ಯೋಜನೆಯಡಿಯಲ್ಲಿ ಮಹಿಳೆಯರಿಗೆ ಕಾನೂನು ಅರಿವಿನ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕ್ಕೊಳ್ಳುತ್ತದೆನೋ ನಿಜ. ಆದರೆ ಇದು ಸಮಾಜದ ಎಲ್ಲಾ ವರ್ಗದ ಮಹಿಳೆಯರಿಗೆ ತಲುಪಿಸಲು ವಿಫಲವಾಗಿದೆ. ಶಿಕ್ಷಣ ಸಂಸ್ಥೆಗಳಲ್ಲಿ ನಡೆಯುವ ಕಾನೂನಿನ ಅರಿವು ಕೇವಲ ಅಲ್ಲಿಯ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಾಗಿರಿಸುತ್ತದೆ. ಇನ್ನು ಕೆಲವೊಂದು ಸರ್ಕಾರಿ ಯೋಜನೆಗಳಲ್ಲಿ ಕೊಡುವ ಕಾನೂನಿನ ಅರಿವು ಯಾವುದೋ ಒಂದು ಸಂಘ ಅಥವಾ ಗುಂಪು ಅಥವಾ ಸಮುದಾಯಕ್ಕೆ ಸೀಮಿತವಾಗಿರುತ್ತದೆ.

ಸಮಾಜದಲ್ಲಿ ಬಹುತೇಕ ಮಹಿಳೆಯರು ಕೌಟುಂಬಿಕ ಹಿಂಸೆಯಿಂದ ಬಳಲುತ್ತಿದ್ದು ಎಲ್ಲಾ ವರ್ಗ, ಜಾತಿ, ಭಿನ್ನ ಭಿನ್ನ ಗುಂಪುಗಳಿಗೂ ಕಾನೂನಿನ ಅರಿವು ಮೂಡಿಸಬೇಕಾಗುತ್ತದೆ. ವಿಪರ್ಯಾಸವೆಂದರೆ ಎಷ್ಟೋ ಹೆಣ್ಣು ಮಕ್ಕಳಿಗೆ ತಮ್ಮ ಮೇಲಾಗುತ್ತಿರುವುದು ದೌರ್ಜನ್ಯ ಎಂಬುವುದೂ ಸಹ ಅವರ ಅರಿವಿಗೆ ಬಾರದಾಗಿದೆ. ಹೀಗಿರುವಾಗ ಮಹಿಳೆಯರಿಗಾಗಿ ಯಾವ್ಯಾವ ಕಾನೂನುಗಳಿವೆ. ಅವುಗಳ ಬಳಕೆ ಹೇಗೆ, ಅವುಗಳ ಕಾರ್ಯ ಏನಾಗಿರುತ್ತದೆ ಎಂದು ತಿಳಿಯುವುದು ದೂರದ ಮಾತಾಗಿದೆ.

ಮಹಿಳೆಯರು ಇಂದು ಅದೆಷ್ಟೋ ದೌರ್ಜನ್ಯಗಳನ್ನು ಒಪ್ಪಿತವಾಗಿಯೇ ಅನುಭವಿಸುತ್ತಿದ್ದು, ಕಾನೂನು ರೀತಿಯಲ್ಲಿ ಅವು ಅಪರಾಧ ಎಂಬ ಪ್ರಜ್ಞೆಯೂ ಕೂಡಾ ಅವರಿಗೆ ಇಲ್ಲದಾಗಿದೆ. ಹೀಗಿರುವಾಗ ಇನ್ನು ಹೇಗೆ ತಾನೆ ಮಹಿಳೆಯರು ತಾವು ಅನುಭವಿಸುತ್ತಿರುವ ದೌರ್ಜನ್ಯಗಳಿಂದ ಹೊರಬರಲು ಸಾಧ್ಯವಾಗುತ್ತದೆ ಎಂಬುವುದು ಒಂದೊಮ್ಮೆ ಮೂಲ ಪ್ರಶ್ನೆಯಾಗುತ್ತದೆ. ಭಾರತೀಯ ಸ್ತ್ರೀವಾದದ ನೆಲೆಯನ್ನು ಗಮನಿಸಿದಾಗ ಅಲ್ಲಿ ಕಾನೂನುಗಳನ್ನೇ ಮಹಿಳೆಯರ ಮೇಲಿನ ದೌರ್ಜನ್ಯಗಳ ಮುಕ್ತಿಗೆ ಪರಿಹಾರ .ಎಂದು ಸೂಚಿಸಿದೆ. ಈ ನೆಲೆಯಲ್ಲಿ ಕಾನೂನಿನ ಮಾಹಿತಿ ಸಮಾಜದ ಪ್ರತಿಯೊಬ್ಬ ಮಾನವರಿಗೂ ತಲುಪುವಂತಾಗಬೇಕಿದೆ. ಹೀಗಾದಾಗ ಮಾತ್ರ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳಿಗೆ ಕೊಂಚ ವಿರಾಮ ಹಾಕಿದಂತಾಗುತ್ತದೆ. ಇದರ ಬೆನ್ನಲ್ಲೆ ಚರ್ಚೆಗೊಳಪಡಿಸಬೇಕಾದಂತ ವಿಷಯವೆಂದರೆ, ಕಾನೂನುಗಳ ಬಗ್ಗೆ ಮಾಹಿತಿ ಇರುವವರೂ ಸಹ ದೌರ್ಜನ್ಯಗಳನ್ನು ನಡೆಸುವ ಮತ್ತು ಅನುಭವಿಸುವ ಚಿತ್ರಣ ಕಂಡುಬರುತ್ತದೆ. ಹೀಗೆ ದೌರ್ಜನ್ಯ ನೀಡುವವರು ಮತ್ತು ಅನುಭವಿಸುವವರ ಮೌನ ಪುರುಷ ಪ್ರಧಾನ ವ್ಯವಸ್ಥೆಯ ಹಿಡಿತವನ್ನ ತೋರ್ಪಡಿಸುತ್ತದೆ ಎಂಬುವುದರಲ್ಲಿ ಎರಡು ಮಾತಿಲ್ಲ.

ಅಡಿಟಿಪ್ಪಣಿಗಳು

೧. ಭಾರತ ದಂಡ ಸಂಹಿತೆ, ಮಾನ್ಯ ನ್ಯಾ. ವೈ.ವಿ. ಚಂದ್ರಚೂಡ್, ಪು.ಸಂ.೮೭೬.

೨. ಮಹಿಳಾ ಹಕ್ಕುಗಳು (ಮಾನವ ಹಕ್ಕುಗಳ ನೆಲೆಯಲ್ಲಿ), ಡಾ. ಗೀತಾ ಕೃಷ್ಣಮೂರ್ತಿ, ಪು.ಸಂ.೯೯.

೩. ಭಾರತ ದಂಡ ಸಂಹಿತೆ, ಮಾನ್ಯ ನ್ಯಾ. ವೈ.ವಿ. ಚಂದ್ರಚೂಡ್, ಪು.ಸಂ.೧೩.

೪. ಮಾನ್ಯ ವ್ಯವಹಾರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕೊಪ್ಪಳ.

೫. ಮಾನ್ಯ ಹಿರಿಯ ಸಿವಿಲ್ ವ್ಯವಹಾರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು, ಕೊಪ್ಪಳ.

೬. ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ.

ಅಧ್ಯಾಯ : ಐದು

ಮಾದರಿ ಪ್ರಕರಣಗಳ ನಿರೂಪಣೆ ಹಾಗೂ ಅವುಗಳ ವಿಶ್ಲೇಷಣೆ

೫.೧. ಮಾದರಿ ಪ್ರಕರಣಗಳು

- ೫.೧.೧. ದೈಹಿಕ ಹಿಂಸೆ
- ೫.೧.೨. ಲೈಂಗಿಕ ಹಿಂಸೆ
- ೫.೧.೩. ಶಾಬ್ಧಿಕ ಹಿಂಸೆ
- ೫.೧.೪. ಭಾವನಾತ್ಮಕ ಹಿಂಸೆ
- ೫.೧.೫. ಆರ್ಥಿಕ ಹಿಂಸೆ
- ೫.೧.೬. ಸಾಮಾಜಿಕ ಹಿಂಸೆ

೫.೨. ಮಾದರಿ ಪ್ರಕರಣಗಳ ಸ್ತ್ರೀವಾದಿ ವಿಶ್ಲೇಷಣೆ

೫.

ಮಾದರಿ ಪ್ರಕರಣಗಳ ನಿರೂಪಣೆ ಹಾಗೂ ಅವುಗಳ ವಿಶ್ಲೇಷಣೆ

೫.೧. ಪ್ರಕರಣಗಳ ದಾಖಲೆ

ಕ್ಷೇತ್ರ ಕಾರ್ಯದಿಂದ ಆಯ್ದ ಪ್ರಕರಣಗಳನ್ನು ಅಧ್ಯಯನಕ್ಕೆ ಅನುಕೂಲವಾಗುವಂತೆ ಹಾಗೂ ವಿಶ್ಲೇಷಣೆಗೆ ಸೂಕ್ತವಾಗುವಂತೆ ವ್ಯವಸ್ಥಿತವಾಗಿ ವಿಭಾಗಿಸಿಕೊಂಡು ಇಲ್ಲಿ ದಾಖಲು ಮಾಡಲಾಗಿದೆ. ಒಟ್ಟು ಪ್ರಕರಣಗಳನ್ನು ದೈಹಿಕ ಹಿಂಸೆ, ಲೈಂಗಿಕ ಹಿಂಸೆ, ಶಾಬ್ದಿಕ ಹಿಂಸೆ, ಭಾವನಾತ್ಮಕ ಹಿಂಸೆ, ಆರ್ಥಿಕ ಹಿಂಸೆ, ಸಾಮಾಜಿಕ ಹಿಂಸೆ ಎಂದು ಪ್ರಕರಣಗಳು ಹೊಂದಿದ ಮೂಲ ಹಿಂಸೆಗನುಗುಣವಾಗಿ ವಕ್ತೃಗಳು ಹೇಳಿದ ಮಾದರಿಯಲ್ಲೇ ಯಥಾವತ್ತಾಗಿ ದಾಖಲಿಸಲಾಗಿದೆ.

೫.೧.೧. ದೈಹಿಕ ಹಿಂಸೆ

ಪ್ರಕರಣ – ೧

ಹೆಸರು – ಪಾಲಾಕ್ಷಮ್ಮ

ವಯಸ್ಸು – ೭೮

ಜಾತಿ – ಗಾಣಿಗೇರ

ಊರು – ಚಿಕ್ಕ ಸಿಂದೋಗಿ

ನನ್‌ದೇನ್ ಕೇಳಿಯ ನೀನು (ಸಂಶೋಧಕಿ). ಕೂಳ ಬಂಗಾರಾಗ್ಯದ ನನಗ. ಹೊಲದಾಗ ದುಡದ ಮಂದಿ ನಾವು. ಗಟ್ಟಿ ಇವತ್ತಿಗೂ. ಈಗ ಕಾಲ್ ಬಿದ್ದವು ಅಷ್ಟ. ನಡಿಯಾಕಾಗಲ್ಲ. ಆಗಿದ್ರ ನಂದ ನಾ ಅಡಗಿ ಮಾಡಕೊಂಡು ತಿಂತಿದ್ಯಾ ಮೂವಾರ ಗಣ್‌ಮಕ್ಕು, ನಾಕ ಹೆಣ್‌ಮಕ್ಕು ನನಗ. ಹೆಣ್‌ಮಕ್ಕು ಕೊಟ್ ಮನ್ಸ್ಯಾಗ ಅದಾರ. ಗಣ್‌ಮಕ್ಕು ದಿಕ್ಕಿಗೆ ಒಬ್ರು ಅದಾರ. ನಾ ಹೀರೆಮಗನ ಹಂತ್ಯಾಕ ಅದಿನಿ. ಮಗ ಬೇಸಿ. ಆದ್ರು ಒಮ್ಮೊಮ್ಮೆ ಹೆಂಡ್ತಿ ಮಾತ ಕೇಳತಾನ. ರಿಟೆರ್ಡ್ ಕಂಡಕ್ಟರ್. ಸೊಸಿ ಮೂರು ಹೆಣ್ ಹಡಕೊಂಡು ಕುಂತಾಳ. ನನ್ನ ಮಗಗ ವಜ್ಜ ಮಾಡಿ. ನನ್ ಗಂಡ ಸತ್ ಹೊಗ್ಯಾನ ೩೦ ವರ್ಷ ಮ್ಯಾಲೆ ಆತು ಅತ ಸತ್. ಕುಡುದು, ಸುಳ್ಯಾರ ಮಾಡಿ ಜಡ್ ಹಚಕೊಂಡು ಸತ್ತ. ಅವ ಏನು ಸ್ವಲ್ಪ ಉರಸ್ಕೊಂಡಿಲ್ ನನ್ನ. ಹೊಡಿಯದೆನೂ ಬಡಿಯದೆನೂ ಸಾಯತನ ತೋ... ತೊತೊತೋ. ಅವ ಸತ್ತಿಂದನ ನಾ ಬೇಸಿ ಇರದು. ಹೈನ ಮಾಡಿ, ಹೊಲ್ದಾಗ ದುಡುದು

ಮಕ್ಕ ಸಾಕಿದ್ಯಾ. ಆದ್ರ ಇವಾಗ ಬಂದ್ ಸುಳ್ಯಾರು (ಸೊಸೆಯಂದಿರಿಗೆ ಸಹಜವಾಗೆ ಆಡುವ ಮಾತು) ಮಾಡ್ಯಾರನು ನನ್ ಅಷ್ಟ್. ಇಷ್ಟ ದುಡದ ನನಗ ಚೆಳ್ ಹಣ್ಣು ತಿನಸತಾರ. ಆದ್ರ ನನ್ ಮಕ್ಳು ಅವ್ರಿಗೆ ಕುಂದ್ರಿಸಿ ಕೂಳು ಹಾಕತಾರ. ತಿಂದ್ ತಿಂದ್ ಬುರುಗ್ಯಾರ ಈ ಸುಳ್ಯಾರು.

ಇಷ್ಟ ದುಡುದ ನನಗಾ ತಿವುದು ಕೂಳಾಕತಾರ ಈ ಬೊಸುಡ್ಯಾರು. ನಾನು ದೊಡ್ಡ ಮಗನ ಹಂತ್ಯಾಕ ಇರದು. ಈ ಸುಳ್ಯರ (ಹಿರಿ ಸೊಸೆ) ಇಷ್ಟ ಅದಳಾ. ತನ್ ಮಕ್ಳಿಗೂ ಅದ ಬುದ್ದಿ ಕಲಿಸ್ಯಾಳ. ಅವು ಅರ ಉರಿತಾವು ಮಾರಿ ಮಣ್ಣಾಗ ಅಡಗ್ಲಿ. ಯಮ್ಮ ಉಂತಿಯನು ಅನ್ನಲ್ಲ. ಎಷ್ಟೋತ್ತಿದ್ರು ನನ್ ಮಗನ ಕೇಳಬೇಕು ನನಗ. ನನ್ ಮಗಗ ಮೂಲಾಮಾಡಿ ಹಡಕೊಂಡು ಕುಂತಾಳ್ರಿ ನಾಕ ಹೆಣ್ಣ್ನ. ಇಕಿ ತೌವ್ರಮನ್ಯಾರ ಖರ್ಚ್ ಮಾಡತರನು ಈಗ ಬಂದು. ನಮಗ ಮೂಲ ಎಷ್ಟೋತ್ತಿದ್ರು.

ಒಂದು ಹೆಣ್ ಕೊಟ್ಟಿವಿ ತಂಗಿ (ಸಂಶೋಧಕಿ). ಇನ್ನ ಯಾಡ ಉಳದಾವು. ನನ್ ಮಗ ಎಷ್ಟಂತ ದುಡಿಬೇಕು. ಅದಕ ತೌವ್ರಮನಿಗೆ ಹೋಗಿ ರೊಕ್ಕ ತಂದು ಲಗೂನ ಇವೆರಡನ್ನ ದಬ್ಬಿ ಹಾಕು ಅಂತಿನಿ. ಏನ್ ತಪ್ಪೈತಿ ನಾ ಅನ್ನದ್ರಾಗ. ಈಗ ಕಾಲಮಾನ ಬಾಳ ಸೂಕ್ಷ್ಮ ಆಗ್ಯಾವು. ನಮ್ ಕಾಲಿದ್ದಂಗಿಲ್ಲ. ಅದಕ ಅಂದ್ರ ಇವ್ರ ಉರಮಾಣಕ ಬೆಂಕಿ ಹತ್ತುತ್ತ. ನನಗ ಬೈಕೋತ ಅಡ್ಯಾಡತಾವು ಎಲ್ಲಾ. ಯಾಡ ಸೀರಿ ತಂದ್‌ಕೊಡು ಅನ್ನಲ್ಲ ಮಗಗ ಮೂರ್‌ಹೆಣ್ ಅಂತ. ನನ್ನ ಹೆಣ್‌ಮಕ್ಳಾ ಕೊಡಸತಾವು ವರ್ಷ. ಇವ್ರು ತುತ್ತು ಕೂಳು ಹಾಕಕ ಅನಬಾರದ ಅಂದ ಹಾಕತಾರ. ಆ ದೇವ್ರ ನನ್ ಕಣ್ಣರ ಮುಚ್ಚವಲ್ಲ. ನನ್ನ ಸೀರಿ ಸತೆ ಸರಿಗೆ ಒಗಿಯಲ್ ತಂಗಿ. ಸೀರಿಗೆ ನೀರ ತೋರಿಸಿ ಇಟ್‌ಬಿಡತಾರ. ಬಾಳೆ ಮಾಡಕೊಂಡು ತಿನ್ನಾವನು ಇವು. ಅವ್ರ ಅವ್ವನ ಬುದ್ದಿ ಎಲ್ಲೂ ಬಿಟ್ಟಿಲ್ ಇವು. ಅತ್ಯಾರ... ಅಂತ ಅಂದಿದ್ ನಾ ಆಕಿ ನಡಿಯಾಕ ಬಂದಾಗಿಂದ ಕೇಳಿಲ್ ನೋಡವ್ವ ಅಂತಾ ಚಿನಾಲಿ ಸೊಸಿ ಅದಾಳ ಇಕಿ. ಇಕಿ ನಡಿಯಾಕ ಬಂದಾಗ ಹೆದಿರಿ ಸಾಯತಿದ್ಲು. ಸತಗೋತ ಎಲ್ಲಾ ಕೆಲಸ ಮಾಡತಿದ್ಲು. ಈಗ ಎಲ್ಲಾ ಅಲ್ಲಿದಲ್ಲೆ ಕೆಲಸ. ವಾಡ್ಣ ಇಲ್ಲ ವಾಗತ್ಯ ಇಲ್ಲ. ನಾನರ ಏನ್ ಮಾಡ್ಲೆವ್ವ ನಾ ಇವತ್ತು ಮನ್ಯಾಗ ನಾಳೆ ಕುಣ್ಯಾಗ. ಅವ್ರ ಬಾಳೆ ಅವ್ರ ಬದುಕು. ನನಗ ಸರಿಗೆ ಕೂಳಾಕ್ಲಿಕ್ರೂ ನಾ ತಲಿ ಕೆಡಸ್ಕೊಂಡಿಲ್ಲಾ. ನನ್ ಮಗ ಅರ ಸಣ್ಣಾದ ಇವ್ರು ಕೈಯಾಗ. ಅದ ತ್ರಾಸಾಗ್ಯದವ್ವ ನನಗ ಬಾಳ್ ಅಂದ್ರ ಬಾಳ.

ಪ್ರಕರಣ – ೨

ಹೆಸರು – ಬಾಗಮ್ಮ

ವಯಸ್ಸು – ೨೬

ಜಾತಿ – ಕುರುಬರು

ಊರು – ಇಂದರಗಿ

ನಾ ಸಣ್ಣಕಿರಗಿಂದ ನೋಡಕತ್ತಿನ್ರಿ ನಮ್ ಅಪ್ಪಂದ ಒಂದಲ್ಲ ಒಂದು ವಿಷ್ಯಾಕ ಜಗ್ಳ ಇರದರಿ. ಕುಡ್ದು ಬರದು ಮನ್ಯಾಗ ನಮ್ ಅವ್ವಗ ಹೊಡಿಯದು. ನಾವ್ ಇಬ್ರು ಮಕ್ಳರಿ ನಮ್ ಅಪ್ಪ–

ಅವ್ವಗ. ಇಬ್ರು ಹೆಣ್‌ಮಕ್ಕು. ನಮ್ ಅವ್ವಗ ಅದ ವಿಷ್ಯಾಕ ಬಾಳ ಕಾಡತಿದ್ದ ನಮ್ ಅಪ್ಪ. ಬ್ಯಾರೆ ಮದ್ವಿ ಅಕ್ಕಿನಿ ಅಂತಿದ್ದ. ನಮ್ ಅವ್ವ ಜಗ್ ಅಳತಿದ್ಲುರಿ ಅತನ ಸಲವಾಗಿ. ನಮಗ ಅಕಿ ಅವಾಗ ಯಾಕ ಅಳತಾಳ ಅಂತಾನ ಗೊತ್ತಾಕ್ಕಿದ್ದಿಲ್ಲ. ಅಕಿ ಅಳದಕ್ಕ ನಾವು ಅಳತಿದ್ವಿ. ನಮ್ ಅಪ್ಪಗ ಯಾರ ಹೆಣ್ ಕೊಡಬೇಕ್ರಿ. ಸೀಮಾ ಕುಡುಕ. ಮೇಲಾಗಿ ಸರಿಗೆ ದುಡಿಯದು ಇಲ್ಲ. ಹಮಾಲಿ ಕೆಲಸ ಮಾಡತಾನ. ಇವತ್ತೂ ಹಮಾಲಿನ ಮಾಡತಾನ. ಆತ ಮಾಡಿರ ಕೆಲಸಕ್ಕ ಅಪ್ಪ ಅಂತ ಹೇಳಕೊಳ್ಳಕೂ ನಾಚಿಗ್ಯಾಗುತ್ತ. ಆದ್ರ ಸಮಾಜ ಕೇಳಬೇಕಲ್ರಿ, ತಂದಿ ಇಲ್ಲ ಅಂದ್ರ ಹೆಂಗ್ ನೊಡತಾರ ಇಗಿನ ಮಂದಿ ಅಂತ ನಿಮಗೂ ಗೊತ್ತಿರಬೇಕಲ್‌ರೀ. ನಮ್ ಅಪ್ಪ ನಮಗ ಬಿಸಿ ತುಪ್ಪ ಆಗ್ಯಾನ್ರಿ ಉಗಳಕು ಬಾರ್ದು ನುಂಗಕು ಬಾರ್ದು. ಒಂದಾ ಎರಡಾರೀ ಆತ ಮಾಡಿದ್ದ ನಮಗ. ಅತನ ಕೊಂದ್ರು ಪಾಪ ಬರದಿಲ್ಲ. ಹೆಸರು ಹೊನ್ನಪ್ಪ ರೀ. ಆದ್ರ ಹೆಸರಿಗೆ ತಕ್ಕ ಇಲ್ರಿ ಅವ. ಬಿಕಾರ್ಯಪ್ಪ ಅದಾನ್ರಿ, ಬಿಕಾರ್ಯಪ್ಪ. ವಯಸ್ಸಾಗ್ಯದ ಬುದ್ಧಿ ಇಲ್ರಿ ಅವನ ಹಂತ್ಯಾಗ. ಅವನ್‌ಲಾಸಿ ನಾವು ನಮ್ ಅವ್ವನ ಕಳಕೊಂಡಿವಿರಿ. ಪರದೇಸಿ ಆಗಿವಿ ನಾನು ನಮ್ ತಂಗಿ ಇಬ್ರೂ, ನಮ್ದ್ ಸೇಮ್ ಕರ್ಪೂರದ ಗೊಂಬೆ ಸಿನಮಾದ ಸ್ಟೋರಿ ಆಗ್ಯದ್ರಿ ಜೀವನ. ಅಲ್ಲಿ ಶೃತಿ ಅಪ್ಪ ಜೈಲಿಗೆ ಹೊಕ್ಕಾನ, ಆದ್ರ ಇಲ್ಲಿ ನಮ್ ಅಪ್ಪ ಜೈಲಿಗೆ ಹೊಗ್ಲಿಲ್ಲ ಅಷ್ಟರೀ ವ್ಯತ್ಯಾಸ.

ನಾವು ಎಲ್ಲಾ ರೀತಿಲೂ ಕುಗ್ಗಿ ಹೋಗಿವ್ರಿ ಮೆಡಂಅರ. ನಮ್ ಅವ್ವ ಅತನ ಕಾಟ ತಾಳಲಾರದ ಬೆಂಕಿ ಹಚಕೊಂಡು ಸತ್ಲು. ಐದ್ ವರ್ಷ ಆತ್ರಿ ಇಗ ನಾವು ನಮ್ ಅವ್ವನ ಕಳಕೊಂಡು. ಗೌಂಡಿ ಕೆಲಸಕ್ಕ ಹೊಕ್ಕಿದ್ಲುರೀ ನಮ್ ಅವ್ವ, ಕೂಲಿ ಮಾಡೆ ನನ್ನ ಎಸ್. ಎಸ್. ಎಲ್. ಸಿ ಮಟ ನನ್ ತಂಗಿನ ಎಂಟನೇತ್ ಮಟ ಓದಿಸಿದ್ಲು. ನಾನು ಮುಂದ ಕಲಿಲಿಲ್ರಿ, ಈಗ ನೋಡ್ರಿ ನಾವು ಮಂದಿ ಮನಿ ಅಡಗಿ, ಕಸ, ಮುಸುರಿ ಮಾಡ ಕೆಲಸಕ್ಕ ಹೊಕ್ಕಿವಿ. ಅಪ್ಪ ಅನ್ನವುಗೂ ನಾವ ದುಡುದು ಹಾಕದು. ಅದು ನಮ್ ಕರ್ಮ ಅತನ ಪುಣ್ಯ. ಹೆಂಡ್ತಿ ಸತ್ಲಂತ ಈಗ ನಮಗ ಕಿರಿಕಿರಿ ಎಬಿಸ್ಯಾನ. ಕುಡಿಯದು ಬಂದು ನಮಗ ಹೊಡಿಯದು, ಬಾಯಿಗೆ ಬಂದಂಗ ಹೊಲಸ ಹೊಲಸ ಬೈಯ್ಯದು. ಬೈಯದಂದ್ರ ಅಂತಿತಾ ಪದ ಅಲ್‌ರೀ ಅವು. ಹೇಳಕ ಹಸಯ್ಯ ಅಕೈತಿ. ಹೊಡಿಯದಂದ್ರ ಅಂತಿಂತ ಹೊಡತಲ್ರಿ ಅದಕ ನಮ್ ಎದಿ ನಡಿಗಿ ಹೊಗ್ಯದ. ಕೈಗೆ ಸಿಕ್ಕಿದ್ದೆಲ್ಲಾ ತಗೊಂಡು ಬಿಸತಾನ ನಮ್ ಮ್ಯಾಲೆ. ಸಾಕಾಗ್ಯದ್ರಿ ಖರೆಗ್ಲೂ.

ನಾ ಸಾಲಿಗೆ ಹೊಗಬೇಕಾದ್ರ ನಮ್ ಗೆಳತ್ಯಾರೆದ್ರಿಗೆಲ್ಲಾ ಇಂತಾ ಬೈಗ್ಳ ಬೈಯನ ಅವಮಾನ ಅಕ್ಕಿತ್ತು. ನಮ್ ಅಪ್ಪ ಹಗಲು ರಾತ್ರಿ ಕೂಡೆ ಕುಡಿತಾನ್ರಿ, ಕುಡಿಯದು, ನಮ್ ಗೆಳತ್ಯಾರ ಎದುರಿಗೆ ನನಗ ನಮ್ ಅವ್ವಗ ಹೊಡಿಯದು. ಇಂತ ಪ್ರಸಂಗ ರಗಡಸಲಿ ಆಗಿದ್ವುರಿ. ಒಂದ್‌ದಿನಾ ನಾ ಮಧ್ಯಾನದಾಗ ಮುಸುರಿ ತಿಕ್ಕಕತಿದ್ಯಾ. ನಮ್ ಅಪ್ಪ ಕುಡಿಯಾಕ ರೊಕ್ಕ ಕೊಡು ಇಲ್ಲ ಅಂದ್ರ ಚಿಮ್ಣೆದೆಣ್ಣಿ ಹಾಕಿ ಸಾಯಿಸ್ತಿನಿ ಅಂತ ಕೂಗಾಡಕತ್ತ. ಜಗಳ ಆಡಕೋತ ಆಡಕೋತ ನಮ್ ಅವ್ವನ ಚಿಮ್ಣೆದೆಣ್ಣಿ ಹಾಕೊಂಡು ಬೆಂಕಿ ಹಚಕೊಂಡ್‌ಬಿಟ್ಲು. ಅವತ್ ಅಕಿ ದುಡಕ್ಲಿಕ್ರ ನಾವು ಇವತ್ ಪರದೇಸಿ ಅಕ್ಕಿದಿಲ್‌ರೀ. ಅವತ್ ನಾನು ನಮ್ ಅಪ್ಪ, ಓಣ್ಯಾನ ಮಂದಿ ಎಲ್ಲಾ ನಮ್ ಅವ್ವ

ಹಚಕೊಂಡಿದ್ ಬೆಂಕಿ ಆರಿಸಿದ್ವಿ, ನಾ ಹೊಯ್ಕ್, ಬಡಕ ಮಾಡಕತ್ಯಾ ಹಿಂದಲೆ ಸರ್ಕಾರಿ ದವಾಖಾನಿಗೆ ಕರಕೊಂಡು ಓದ್ರು, ಅಕಿ ಅಲ್ಲೆ ಪ್ರಾಣ ಬಿಟ್ಲು. ಅವತ್ ನಮ್ ತಂಗಿ ಸಾಲಿಗೆ ರಜೆ ಇತ್ತು ಅಂತ ನಮ್ ಅಜ್ಜಿ ಊರಿಗೆ ಹೊಗಿದ್ಲು. ಅಕಿ ಬರದ್ರಗ ನಮ್ ಅವ್ವ ಹೆಣಾ ಆಗಿದ್ಲು. ದವಾಖಾನ್ಯಾಗ ಪೊಲೀಸ್ ಕೆಸ್ ಮಾಡಿದ್ರು, ನಮ್ ಮಂದಿ ಸಮಸ್ಸೆ ಆಗುತ್ತಂತ ಸ್ಟೋ ಬರ್ಸ್ಟ ಆಗಿ ಬೆಂಕಿ ಹತ್ತಿತು ಅಂತಾ ಹೇಳಿ ನಮ್ ಅಪ್ಪನ ಊಳಿಸಿದ್ರು ಅವತ್ತು. ಅದ ಅವತ್ ಮಾಡಿದ ತಪ್ಪಾಗ್ಯದ್ರಿ. ನಮಗ ಮುಳ್ಳಾಗ್ಯನ ಇವತ್ತು. ನಮ್ ಅವ್ವ ಸತ್ರು ಅವ ಏನು ಬುದ್ದಿ ಕಲಿಲಿಲ್ರಿ, ನಮ್ ಕೊಡ ತ್ರಾಸಗೆ ಅತ್‌ಅತ್ ಕಣ್ಣಿನ ನೀರ ಬತ್ತಿಹೊಗ್ಯಾವ್ರಿ, ನಮ್ ಅವ್ವನ ಪುಣ್ಯ ಮಾಡ್ಯಾಳ ಇಂಥತನ ಕೈಯಾಗ ಇರಕಿಂತ ಸತ್ ಸ್ವರ್ಗನರ ಸೇರಿದ್ಲು. ನಮಗೂ ಎಲ್ಲಿ ಅದ ಗತಿ ತರತಾನೇನ ನಮ್ ಅಪ್ಪ ಅನಿಸ್ಯದ್ರಿ, ವಯಸ್ಸಾಗಕತ್ತಿದ್ರು ಅವನ ಉರುಣಗಿನ ತಗ್‌ಒಲ್ದಾಗ್ಯದ.

ನಮ್ ಅವ್ವ ಸತ್ತಾಗ ನನಗ ೧೫ ವಯಸ್‌ರೀ. ಆಕಿ ಸತ್ತಿಂದ ನಮ್ ಅವ್ವಾರ ತೌವ್ರ ಮನ್ಯಾರ ನಮನ ಕರಕೊಂಡು ಹೊಗ್ಲಿಲ್. ಅವ್ರು ಬಡುರದಾರ. ಅವರರ ಏನ್ ಮಾಡ್ಯಾರು. ನಮಗ ಆಸ್ತಿ ಅಂದ್ರ ಈ ಮನಿ ಒಂದರೀ. ನಮಗ ಮದ್ವಿಯರ ಯಾರ ಅಕ್ಕಾರ್ರಿ, ಹಿಂದಿಲ್ಲ ಮುಂದಿಲ್ಲ. ದುಡಿಯದು ತಿನ್ನದು ಅಷ್ಟ ಈಗ ನಮ್ ಜೀವನ ಆಗ್ಯದ. ಮನಿನ ನಮ್ ಜಾತಿ ಮಂದೇಲ್ಲಾ ಕಲತು ನಮ್ ಅಪ್ಪನ ಹೆಸರ್ಲೆ ಇದ್ದಿದ್ದನ್ನ ನನ್ ಹೆಸರ್ಲೆ ಮಾಡಿಸಿ ಕೊಟ್ಟಾರ್ರಿ ಈಗ. ಅದ ನಮ್ ಅಪ್ಪಗ ಸೇರಿಕಿಲ್ಲ. ನಾವೇನ ಮಾಡಿದ್ರು ನಮ್ ಕಷ್ಟನ ತೀರವಲ್ವಾಗ್ಯವು. ದಿನಾ ಸಾಲ ಮಾಡತಾನ ಕುಡಿತಾನ. ನಾನು ನಮ್ ತಂಗಿ ದುಡುದು ಆತ ಕುಡಿಯಾಕ ಮಾಡಿದ್ ಸಾಲ ಹರಕೊತ ಹೊಂಟಿವ್ರಿ, ಇಲ್ಲ ಅಂದ್ರ ಮೈ ಮುಪ್ ಮಾಡತಾನ ನಮ್ದು.

ದಿನಾ ನಾವು ಕೆಲಸಕ ಹೊಂಟಾಗ ಸುಳ್ಯಾರ ಹೊಂಟ್ರು ನೋಡ್ರ್ಯಪ್ಪಾ ತಯಾರಾಗಿ ಅಂತಾನ. ಅತನ ಬಾಯಿಗೆ ಹೆದರಿ ರೊಕ್ಕಾ ಕೊಟ್ರ ಕುಡುದು ಬಂದು ಒದರ್ಯಾಡತಾನ. ನನ್ ಮನಿ ಬರಸ್ಕೊಂಡ್ರು ಹಾದ್ರಗಿತ್ಯಾರು ಅಂತೆಲ್ಲಾ ಬೈಕೊತ ಕುಡತಾನ. ಇನ್ನ ಅಂತ ಕೆಲಸ ಮಾಡಿದ್ರ ನಮ್ಮನ ಎಲ್ಲಿ ಇಡತಿದ್ನೆನ ನಮ್ ಅಪ್ಪ. ರೊಕ್ಕ ಇಲ್ಲ ಅಂದ್ರ ಮನ್ಯಾಗಿನ ಗಂಗಾಳ ಚರಗಿ ಮಾರಿ ಕುಡದ ಬರತಾನ. ಅಂತವನ್ನ ವಿಷ ಹಾಕಿ ಸಾಯಿಸಿದ್ರು ತಪ್ಪಾಗಲ್ರಿ, ಅದಕ ಅವ ಕುಡುದು ಕುಡುದು ಲಗೂ ಸಾಯ್ಲಿ ಅಂತನ ರೊಕ್ಕ ಕೊಡತಿವಿ ಈಗ. ಅವ ಸತ್ರು ನಮ್ ಚಿಂತಿ ತಗ್ಗಿದ್ದಲ್ರಿ, ಅವಾಗ ಇಬ್ರ ಹೆಣ್ ಮಕ್ಕಳ್ಕಿವಿ ಹೆಂಗಿರದು ಅಂತಾ ಚಿಂತಿ. ಸುಡಗಾಡ ಮಂದಿ ಈಗ ಹೊರಾಗ. ನಮ್ ಜೀವನನ ಅಡಕೊತ್ಯಾಗ ಅಡಕಿ ಸಿಕ್ಕಂಗ ಆಗ್ಯದ. ಸುತಮುತ್ತು ನಮ್ ಮಂದಿನ ಅದಾರಂತ ನಾವು ಉಳದಿವ್ರಿ, ಸುತಮುತ್ತಿನ ಸಂಬಂಧಿಕರ ಈಗ ಆಸ್ರರೀ. ಆದ್ರ ಅವ್ರಿಗೆ ನಮ್ ಮದ್ವಿ ಮಾಡಸ್ರಿ ಅನ್ನಕಕ್ಕತ್ತೇನ್ರಿ, ಮದುವ್ಯಂದ್ರ ಖರ್ಚಿನ ಮಾರಿ. ನಮಗ ಯಾರ ಮದ್ವಿ ಮಾಡತಾರ. ನಾವು ದುಡಿಯದು ತಿನ್ನಕ ಸರಿ ಹೋಗ್ಯಾದ. ಇನ್ನ ಉಳಸಕ ಆಗ್ಲಾರ್ದ ಮಾತ್ರಿ, ನನಗ ನಮ್ ತಂಗಿ ನಮ್ ತಂಗಿಗೆ ನಾನು ನೋಡಕೊತ ಹಿಂಗ ಜೀವನ ಕಳೆಕತ್ತಿವ್ರಿ.

ನಮ್ ತಂಗಿಗೆ ಎಲ್ಲಾ ತಿಳಿಯುತ್ತರೀ. ಗೆಳತಿದಂಗ್ರಿ ಆಕಿ ನನಗ. ಆದ್ರೂ ತಾಯಿ ಕಳಕೊಂಡಿಂದ ಎಲ್ಲಾ ಮುಗಿತ್ರಿ, ಮೈ ತುಂಬಾ ಚಿಂತಿ ನೊಡ್ರಿ ಈ ವಯಸ್ಸ್‌ನ್ಯಾಗ. ಮಂದ್ಯಂತ ಮಂದಿ ಮರಗತಾರ

ನಮ್ಮನ ನೋಡಿ. ಈ ಅಪ್ಪ ಅನ್ನತಗ ಬುದ್ದಿ ಬರವಲ್ದಾಗ್ಯದ. ಕುಡುದು ಎಲ್ಲಿ ಬಿದ್ದಾನೇನ್ರಿ ಇವಾಗ. ಇವುನ್ನೆಲ್ಲಾ ಯಾರ ಮುಂದ್ ಹೇಳಿದ್ರು ನಮ್ ಕಷ್ಟ ತೀರ್‌ಲಾರ್ದು. ನೀವರ ಏನ ಮಾಡಿರಿ ಬಿಡ್ರಿ ಮೇಡಂಅರ.

ಪ್ರಕರಣ - ೩

ಹೆಸರು – ಭಾಗ್ಯ

ವಯಸ್ಸು – ೧೩

ಜಾತಿ – ಬ್ಯಾಡು

ಊರು – ಇರಕಲ್ಲಗಡ

ನಮ್ ಅವ್ವ ಸತ್ತಾಳ ಟೀಚರಿ (ಸಂಶೋಧಕಿ) . ನಮ್ ಅವ್ವ ಸತ್ತಿದ್ ಎಲ್ಲಾ ನನಗ ನೆನಪೈತಿ. ನಮ್ ಅಪ್ಪ ಕುಡಿತಾನ ಬಾಳ. ಬದಕ್ಯಾನ. ನಮ್ ಅಜ್ಜಿ ಇದ್ಲು, ಸತ್ಲು. ಅಕಿ ಈ ಹೊಟ್ಲದಾಗ ಮುಸರಿ ತಿಕ್‌ತಿದ್ಲು. ನಾ ತಿಕ್ಕಕತ್ತಿನಿ ಈಗ. ಅಜ್ಜ (ಹೋಟೆಲ್ ಮಾಲಿಕ) ಹೇಳಿದ ಕೆಲಸ ಮಾಡ್ತಿನಿ. ಒಳ್ಳೆವದನ ಅಜ್ಜ. ಉಣ್ಣಾಕ ಕೊಡತಾನ, ಬಟ್ಟಿ ಕೊಡಸ್ತಾನ. ರಾತ್ರಿ ನಮ್ ಮನಿಗೆ ಹೋಗಿ ಮಲಗತಿನಿ ಮುಂಜೆನೆ ಮತ ಹೊಟ್ಲ ಕೆಲಸಕ್ ಬರತಿನಿ. ಅಷ್ಟ ಗೊತ್ ನನಗ. ಅರಾಮದಿನಿ. ನಮ್ ಅಪ್ಪ ರಾತ್ರಿ ಬರತಾನ ಉಣ್‌ತಾನ ಮಲಗತಾನ. ದಿನ ಬೆಳತನ ಆತ ಏನ್ ಮಾಡ್‌ತಾನ ಅನ್ನದ ಗೊತ್ತಿಲ್ಲ ನನಗ.

ಕೇರ್‍ಯಾಗ ಗೆಳತ್ಯಾರದಾರ ಅವ್ರ ಜೋಡಿ ಆಡತಿನಿ. ನಮ್ ಅಜ್ಜಿ ಮನ್ಮನ್ನೆ ಸತ್ಲು. ಆಕಿದ್ದಾಗ ಚೆಂದಿತ್. ಬ್ಯಾರೆ ಊರಿಗೆ ಜಾತ್ರಿಗೆಲ್ಲ ಕರ್‌ಕೊಂಡು ಹೊಕ್ಕಿದ್ಲು. ಈಗ ಒಬ್ಬಾಕೆ ಆಗಿನಿ. ತಲಿ ಭಾದಕೂ ಯಾರಿಲ್ಲ. ಅದಕ ಯಾವಾಗರ ಒಮ್ಮೆ ಭಾದಕೊತಿನಿ. ನಮ್ ಅಪ್ಪ ಕುಡಿಲಾರ್‌ದಾಗ ಬಾಳ ಜೀವ ಮಾಡತಾನ. ತಿನ್ನಾಕ ಏನರ ತಂದಿರತಾನ. ನಿನಗ ಲಗೂನ ಲಗ್ನ ಮಾಡತಿನಿ ಅಂತಾನ. ಚೆಂದ ಮಾತಾಡತಾನ. ಕುಡುದ್ರು ಆ ದೇವಕ್ಕನರ ಅಪ್ಪನಂಗ ಹೊಡಿಯಲ್ ನಮ್ ಅಪ್ಪ, ಜೀವ ಮಾಡತಾನ ಬಾಳ ನನಗ. ಹೊಟ್ಲಿಗೂ ಒಮ್ಮೊಮ್ಮೆ ಬರತಾನ ನಾ ಕೆಲಸ ಮಾಡಲ್ಲಿ. ಅಜ್ಜನ ಜೋಡಿ ಮಾತಾಡಿ ಒಮ್ಮೊಮ್ಮೆ ನನ್ನ ತಾನ ಮನಿಗೆ ಕರಕೊಂಡು ಬರ್ತಾನ. ಬಾಳ ಒಳ್ಳೆತ ನಮ್ ಅಪ್ಪ. ನಮ್ ಸಣ್ಣವ್ವನರು (ಚಿಕ್ಕಮ್ಮ) ದೊಡ್ಡವ್ವ ಎಲ್ಲಾ ಅದರಾ. ನಮ್ ಅಪ್ಪ ಎಲ್ಲೂ ಕರಕೊಂಡು ಹೊಗಲ್ಲ. ಕೇಳಿದ್ರ ಮದ್ವಿ ಮಾಡತಿನಿ ಒಮ್ಮೆಲೆ ಹೋಗಿಬಿಡವಂತಿ ತಡಿ ಅಂತ ನಗಚಾಟಗಿ ಮಾಡತಾನ. ನನಗ ಅಳುನ ಬಂದಿರುತ್ತ ಒಮ್ಮೊಮ್ಮೆ. ನಮ್ ಸಣ್ಣವ್ವನರ ಮನ್ಯಾಗ ಮಲಗದು ನಾ. ನಮ್ ಅಪ್ಪ ಜಗ್ಳ ಮಾಡ್ಯಾನ ಅವ್ರ ಜೋಡಿ ಯಾಕ. ಈಗ ಅವ್ರ ಮನಿಗೆ ಮಲಗಕ ಕಳಸವಲ್ಲ. ನನಗ ಒಬ್ಬಕಿಗೆ ಮಲಗಕ ಹೆದ್ರಿಕಿ ಆಗುತ್ರಿ, ನಮ್ ಅಪ್ಪಗ ಹೇಳಿದ್ರ ಕೇಳವಲ್ಲ ನನಗ ಬೈಯಾಕತ್ತಾನ. ಯಾವಾಗ್ಲು ಹಗಲ ಇರ್ಲಿ ಅನುಸುತ್ ನನಗ. ರಾತ್ರಿಯಾದ್ರ ಹೆದ್ರಿಕಿ ಸುರು ಅಕೈತಿ.

ಪ್ರಕರಣ – ೪

ಹೆಸರು – ಮಮತಾ

ವಯಸು – ೩೨

ಜಾತಿ – ಗುಜ್ಜರು

ಊರು – ಕೊಪ್ಪಳ

ನಮ್ ಕಾಸ್ಟದಾಗ ಗಂಡಸ ಮಕ್ಳಿಗೆ ಬಾಳ ಇಂಪಾರ್‌ಟೆನ್ಸ್ ಏತ್ರಿ. ಒಟ್ ಗಂಡಸ ಮಕ್ಕ ಬೇಕ. ಅವ್ರಿಂದನ ಮನಿ. ನಾವ್ ಹೆಣ್‌ಮಕ್ಕು ತಲೆ ಮೇಲೆ ಗೂಂಗಟ್ ಹಕೊಂಡ ಇರಬೇಕು. ಗಂಡಸ ಮಕ್ಳಿಗೆ, ಹೆಣ್‌ಮಕ್ಳಿಗೆ ಇಬ್ರಿಗೂ ಸ್ಕೂಲ್ ಕಲಸತಾರ. ಗಂಡಸ ಮಕ್ಳ ಹೆಚ್ಚು ಬಿಜಿನೆಸ್ ಮಾಡತಾರ. ಹೆಣ್‌ಮಕ್ಕು ಮನೆಲೇ ಇರತಿವಿ. ನಮ್ ಮಂದಿ ಹೆಚ್ಚಿಗೆ ಏನು ಇಲ್ಲ ಇಲ್ಲಿ. ೧೫ ೧೬ ಮನೆಗಳಿದಾವೆ ಅಷ್ಟೇ. ನಮ್ ಬಾ (ಅಜ್ಜಿ) ಎಲ್ಲಾ ಗುಜರಾತದಲ್ಲೇ ಇದಾರೆ ಇವತ್ತಿಗೂ. ನಮ್ ಬಾಬಾರು ಹುಬ್ಬಳ್ಳಿದಲ್ಲೆ ಸೆಟ್ಲ ಆಗಿದಾರೆ. ನಮ್ಮ ಹಜಬೆಂಡ್ ಊರು ಕೊಪ್ಪಳ. ಅದಕ ನಾನು ಇಲ್ಲೆ ಇರೋದು.

ನನಗೆ ಎರಡು ಡೆಲೆವರಿ ಆಗಿದಾವೆ. ಎರಡೂ ಹೆಣ್‌ಮಕ್ಕು. ಸಿಜರಿಯನ್ ಆಗಿರೋದು ಎರಡೂ. ಎರಡಕ್ಕಿಂತ ಹೆಚ್ಚ್ ಮಕ್ಕು ಒಳ್ಳೆದಲ್ಲ ಆರೋಗ್ಯದ ದೃಷ್ಟಿಯಿಂದ ಅಂತ ಹೇಳಿದಾರೆ ಡಾಕ್ಟರ್. ನಮ್ಮಲ್ಲಿ ಗಂಡಸ ಮಕ್ಕು ಬೇಕು. ಖಾಂದಾನ್ ಹೆಸರು ಉಳುಸೊಕ. ನನಗೆ ಎರಡನೇಯದ್ದು ಹೆಣ್ಣು ಮಗು ಆಗಿದೆ ಅಂತ ನಮ್ಮ ಸಸುರಾಲದೊರು ನನಗ ಇಷ್ಟ ಪಡತಿಲ್. ನಾನೇನು ಮಾಡಬೇಕು. ಅದಕೆ ನನಗ ಮನೆಲೇಲ್ಲಾ ದೂರ ಇಡತಿದಾರೆ. ಬೇಗ ಮತ್ತೊಂದು ಮಗು ಮಾಡ್ಕೋ. ಈ ಬಾರಿ ಆದ್ರೂ ಗಂಡು ಮಗು ಆಗುತ್ತೇನೊ ಅಂತ ಫೋರ್ಸ್ ಮಾಡತಿದಾರೆ. ಮಕ್ಕ ಆಗದಿರೊ ಆಪ್ರೇಶನ್ ಮಾಡಿಸಿ ಸಾಕು ಎರಡ ಮಕ್ಕು ಅಂದ್ರೆ ಕೇಳದೆ ಗಂಡು ಮಗು ಆಗೊವರೆಗೂ ಮಾಡಸೊದಿಲ್ಲ. ಹೀಗೆ ಹೆರತಿರಬೇಕು ನೀನು ಅಂತ ಮನೆಯವರೆಲ್ಲ ಹೇಳತಾರೆ. ರಿಸೆಂಟ್ ಆಗಿ ಗುಜರಾತದಲ್ಲಿ ನಮ್ ರೀಲೆಟಿವ್ಸ್‌ದು ಮ್ಯಾರೇಜ್ ಇತ್ತು. ಅದಕ್ಕೆ ನನ್ ಒಬ್ಬಳನ್ನೆ ಬಿಟ್ಟು ಎಲ್ಲರೂ ಹೋಗಿದಾರೆ. ನಮ್ ಹಜಬೆಂಡ್ ಇದ್ರು, ಆದ್ರೆ ಅವ್ರು ಶಾಪ್‌ಗೆ ಹೋಗತಾರೆ. ನನ್ದು ಡೆಲೆವರಿ ಆಗಿ ಜಷ್ಟ್ ೧ ೧/೨ ತಿಂಗಳು ಆಗಿದೆ ಅಷ್ಟೇ. ನಮ್ ಅಲ್ಲಿ ಡೆಲೆವರಿಗೆ ತಾಯಿ ಮನೆಗೆ ಹೋಗೊದಿಲ್ಲ. ಗಂಡನ ಮನೆಲೆ ಡೆಲೆವರಿ ಮಾಡಕೊಂಡು ಸ್ವಲ್ಪ ದಿನ ಆದ ಮೇಲೆ ಹೊಗ್‌ತಿವಿ. ನನ್ನ ನನ್ ತಾಯಿ ಹತ್ರನೂ ಕಳಸ್ದೆ ಹೋಗಿದಾರೆ. ಇಗ ಎಷ್ಟ ಕಷ್ಟ ಆಗಿದೆ ನನಗೆ ಮನೆಲಿ.

ಕೆಲಸದೊರು ಸರಿಯಾಗಿ ಬರಲ್ಲ. ದೊಡ್ ಮಗ್ಳು ಸ್ಕೂಲ್‌ಗೆ ಹೋಗತಿದಾಳೆ. ಅವಳನ ಬಿಟ್ಟು ಹೇಗ್ ಹೋಗೊದು ನಾನು ಊರಿಗೆ. ತುಂಬಾ ಬೇಜಾರಾಗಿಬಿಟ್ಟಿದೆ ನನಗೆ. ಏನ ಮಾಡೊದಂತ ತಿಳಿತಿಲ್ಲ. ಗಂಡು ಮಗು ಆಗಿದ್ರೆ ಹೀಗಾಗತಿದ್ದಿಲ್ಲಾ. ಹೇಳತಾರೆ ಅದನ್ನ ಬಾಯಿ ಬಿಟ್ಟು. ನಮ್ಮಲ್ಲಿ ದೊಡ್ಡೊರಿಗೆ ಮುಂದೆ ನಿಂತು ಸಹ ಮಾತಾಡೊ ಹಾಗಿಲ್ಲ. ನಾನೆನ್ ಮಾಡಕಾಗುತ್ತೆ. ಹೆಣ್ ಆಗಿ ಹುಟ್ಟೆಬಾರದು ಅಂತ ಫಿಲ್ ಆಗುತ್ತೆ. ನನಗೂ ಎರಡೂ ಹೆಣ್‌ಮಕ್ಕು. ಮುಂದೆ ಅವರ ಲೈಫ್ ಹೇಗೆ ಅಂಥಾ ಇಗಿಂದಲೆ ಚಿಂತೆ ಆಗತಿದೆ. ನಮ್ ಹಜಬೆಂಡ್ ಅವರ ತಂದೆ ತಾಯಿ ಹೇಳಿದಾಗೆ ಕೇಳತಾರೆ. ನನಗಂತೂ ತುಂಬಾ ಬೇಜಾರಾಗಿಬಿಟ್ಟಿದೆ ರೀ.

೫.೧.೨. ಲೈಂಗಿಕ ಹಿಂಸೆ

ಪ್ರಕರಣ – ೫

ಹೆಸರು – ಸಾಕಮ್ಮ

ವಯಸ್ಸು – ೧೫

ಜಾತಿ – ತಳವಾರ

ಊರು – ಕಿನ್ನಾಳ

ನಮ್ಮ ಸ್ವಂತ ಊರು ಬೇವೂರ್ ಯಕ್ಕ (ಸಂಶೋಧಕರು). ನಮ್ ಸ್ವಾದ್ರತ್ತಿ ಸಂಬಂಧಿಕರ ಮನ್ಯಾಗ (ಅತ್ತೆಯ ಗಂಡನ ಅಕ್ಕ) ಅದಿನಿ ಯಕ್ಕ ಈಗ ನಾನು. ನಾವು ಬಡೂರ್ರಿ, ಆರ್ ಜನ ಮಕ್ಳು, ನಾಕ್‌ಮಂದಿ ಹೆಣ್ ಮಕ್ಳದಿವ್ರಿ, ನಮ್ಮ ಅಪ್ಪ-ಅವ್ವ ಹೋಲ್ದಾಗ ದುಡಿತಾರ್ರಿ, ಎಲ್ಲಾರ್ಗೂ ಸಾಕಕಾಗ್ದ ನನ್ ಒಬ್ಬಕಿನ್ನ ಇಲ್ಲಿ ತಂದು ಬಿಟ್ಟಾರ. ಮತ್ತ ನನ್ ತಮ್ಮ, ಒಬ್ಬಾಕಿ ತಂಗಿನ ನಮ್ಮ ಅತ್ತಿ ಹಂತ್ಯಾಗ ಬಿಟ್ಟಾರ. ನಮ್ ಇಬ್ರು ಮಂದಿ ಅಕ್ಕರದು ಮದ್ವಿ ಆಗ್ಯೆತಿ. ನಮ್ ಗಣ್ಯಾ (ಗಣೇಶ) ತಮ್ ಒಬ್ಬಾತ್ನ ನಮ್ಮ ಅಪ್ಪ, ಅವ್ವನ ಹಂತ್ಯಾಗ ಅದಾನ್ರಿ. ಯಾಕಂದ್ರ ಆತ ಸಣ್ಣಾತ ಅದಾನ ಇನ್ನೂ ಅದಕ. ಹೋಲ್ದಾಗ ದುಡಿಮಿಲ್ದಾಗ ಗುಳೆ ಹೊಕ್ಕಾರ್ರಿ ನಮ್ ಅಪ್ಪ, ಅವ್ವ ಅತನ್ನು ಕರಕೊಂಡು.

ನನಗ ನಮ್ ಅವ್ವನ್ ಅಪ್ಪನ್ನ ನೋಡಂಗಾಗ್ಯದ. ಯ್ಯಾಡ ವರ್ಷ ಆತಂತ್ರಿ ನನ್ ಇಲ್ಲಿ ಬಿಟ್ಟು, ನೋಡಾಕ ಬಂದಿಲ್ಲಾ. ನನ್ಗ ಇಲ್ಲಿರಾಕ ಒಲ್ಯಾಗ್ಯದ್ರಿ, ಸಾಲಿಗೂ ಹೋಗಲ್ಲ ಏನಿಲ್ಲಾ. ಮನ್ಯಾಗ ನಮ್ಮ ಚಿನ್ನು (ಚಿಕ್ಕಮ್ಮನ ಮಗಳು) ಜೊತಿ ಆಡದ ಬಿಟ್ರ ಬ್ಯಾರೆ ಏನು ಹ್ವಾರೆನ ಇಲ್ಲ. ಬ್ಯಾಸರಕ್ಕತಿ. ನಮ್ ಅಪ್ಪನ ಸಾಲಿ ಬಿಡಿಸಿದ್ನರಿ. ನಾಕ್ನೆತ್ತ ಕಲತು ಬಿಟ್‌ಬಿಟ್ಯಾ ನಮ್ ತಮ್ಮನ ಆಡಸಾಕ ಯಾರಿಲ್ಲಂತ ನನ್ ಸಾಲಿ ಬಿಡಿಸಿಬಿಟ್ರು, ಒಂದು ವರ್ಷಾಗಿತ್ತು ಸಾಲಿ ಬಿಟ್, ಇಲ್ಲಿ ಕರಕೊಂಡು ಬಂದ್ರು. ನಾ ಎಂತ ಚೆಂದ ನಮ್ಮ ಮನ್ಯಾಗ ಇದ್ಯ. ನಮ್ಮ ಚಿಕ್ಕಪ್ಪ, ಚಿಕ್ಕಮ್ಮ ಕನ್ನಡ ಸಾಲಿಗೆ ಹೊಕ್ಕಾರ. ಅಜ್ಜಿ ಐತ್ರಿ ಮನ್ಯಾಗ. ಆಕಿ ಒಟಒಟ ಅಂತಿರತಾಳ ಯಾವಾಗ್ಲೂ. ಅಡ್ಯಾಡಕರ ಬರಲ್ಲ ಆ ಅಜ್ಜಿಗೆ. ಆ ಅಜ್ಜಿ ನಾನು ನಮ್ಮ ಚಿನ್ನು ಮೂವರ ಇರತಿವಿ ಮನ್ಯಾಗ. ನಮ್ ಚಿನ್ನು ಇಂಗ್ಲಿಸ್ ಸಾಲಿಗೆ ಹೊಕ್ಕಾಳ್ರಿ, ಆಕಿ ಯಾಡಕ್ಕ ಬಂದಬಿಡತಾಳ. ಅಕಿ ಕರಕೊಂಡು ಆಡಕೋತ ಇರತಿನಿ ನಮ್ಮ ಚಿಕ್ಕಪ್ಪ-ಚಿಕ್ಕಮ್ಮ ಬರಮಟ.

ಕೆಲಸ ಏನಿಲ್ಲ. ಅಂದ್ರು ನನಗ ಇಲ್ಲಿ ಒಲ್ಯಾಗ್ಯದ ಇರಕ. ನಮ್ ಚಿಕ್ಕಮ್ಮನ ತಮ್ಮೊಬ್ಬಾತ ಅದನ್ರಿ, ಅತಗ ನಾ ಅಣ್ಣ ಅಂತಿನಿ. ಆತ ಇಲಕಲ್ಲಾತ್ರಿ, ಯಾವಾಗರ ಬರತಿರತಾನ ನಮ್ಮ ಮನಿಗೆ. ಬಾಳದಿನ ಇರತಾನ ಬಂದ್ರ, ಬಂದಾಗ ನನ್ಗ ತಿನಸ್ ಕೊಡಸದು, ಹೊರಗ ಕರಕೊಂಡು ಅಡ್ಯಾಡದು ಮಾಡತಾನ ಕಳವಿಲೆ. ಹಬ್ಬದಾಗ ಅಂಗಿನೂ ಕೊಡಿಸಿದ್ದ ನನ್ಗ. ಚಿಕ್ಕಮ್ಮಗ ಹೇಳಿನಿ ಅಂದ. ಹೊಸ ಅಂಗಿ ನಾನಾ ಹಾಕತಿನಿ ಅಂದ ಅವತ್ತು. ಅಣ್ಣ ಹೌದಲ್ಲ ಅಂತ ಹಾಕಸಕೊಂಡ್ಯ. ನಮ್ ತಂಗಿ ಚೆಂದ ಅದಾಳ ಅಂತೆಲ್ಲಾ ಮುತ್ತು ಕೊಡತಿದ್ದ. ಎಲ್ಲಾ ಕಡೆ. ನಾ ಹ್ವಾದ ವರ್ಷ ದೊಡ್ಡಕ್ಯಾದ್ಯ. ದೊಡ್ಡರಾದರು ಗಣ್ ಮಕ್ಳು ಹತ್ರ ಮುಟಸ್ಕೊಬಾರ್ದು ಅಂತ ನಮ್ ಅಕ್ಕ ಹೇಳತಿದ್ಲು.

ಆತ ಅಣ್ಣ ನಾ ದೊಡ್ಡಕ್ಯಾಗಿಂದ ಒಮ್ಮೆ ಮುಟ್ಟಕ ಬಂದ. ಎಷ್ಟ ಚೆಂದ ಆಗ್ಯಾಳ ನನ್ ತಂಗಿ ಅಂತ ತೆಕ್ಕಿ ಬಡದ. ನಾ ಸರದು ಅಣ್ಣಾ ನೀ ಮುಟ್ಟಬ್ಯಾಡ. ನಾ ದೊಡ್ಡಕ್ಯಾಗಿನಿ ಈಗ ಅಂದ್ಯ. ಅದಕ ಆತ ಎಲಿ ತೋರ್ಸು ಎಲ್ಲಿ ದೊಡ್ಡಕ್ಯಾಗಿ ನೋಡತಿನಿ ಅಂದ.

ನಮ್ಮ ಅಜ್ಜಿ ಮನ್ಯಾಗ ಇರತಿದ್ಲು. ಆದ್ರ ಅಕಿ ಮಂಚದ ಮ್ಯಾಲಿದ್ದಾಕಿ ಒಟ್ಟಾ ಇಳಿತಿದ್ದಿಲ್ಲ. ಮುದುಕಿ ಆಗ್ಯಾಳ ಬಾಳ. ನಮ್ಮ ಅಜ್ಜಿ ಚಿನ್ನು ನಾನು ಇದ್ದಾಗ ಹಿಂಗ ಮಾಡತಿದ್ದ. ಚಿಕ್ಕಮ್ಮ ಚಿಕ್ಕಪ್ಪಗ ಹೇಳಬ್ಯಾಡ ತಿನಸ ಕೊಡಸ್ತಿನಿ ಅಂತ ಎಲ್ಲಾ ತಂದ ಕೊಡತಿದ್ದ. ಅವರು ಬರದ್ರಾಗ ಎಲ್ಲಾ ತಿಂದು ಖಾಲಿ ಮಾಡು ಬೈತಾರ ಇಲ್ಲಂದ್ರ ಅಂತಿದ್ದ. ಅದಕ ನಾನು ಏನು ಹೇಳತಿದ್ದಿಲ್ಲ ನಮ್ಮ ಚಿಕ್ಕಮ್ಮನ ಮುಂದ. ಯಾಕಂದ್ರ ಅವರ ಕಳವಿಲೆ ಆತ ತಂದ ಕೊಟ್ಟಿದ್ದೆಲ್ಲಾ ತಿಂತಿದ್ಯಾ. ಆ ಅಣ್ಣ ಹಗ್ಗಲ್ಲ ಬರತಿದ್ದ ಹಿಂಗ ಮಾಡತಿದ್ದ. ನಾ ಒಬ್ಬಾಕೆ ಇದ್ನೇರಿ. ಚಿನ್ನು ಸಾಲಿಲೆ ಬಂದಿರಲಿಲ್ಲ. ಬಟ್ಟಿ ಮಡಚಕತಿದ್ಯಾ ಒಗದಿದ್ದು ಆ ಅಣ್ಣ ಬಂದ. ಬಂದಾವ್ನ ಬಟ್ಟಿ ಬಿಚ್ಚು ಅಂದ ಸುಮ್‌ಸುಮ್ನ. ನಾ ಮುಟ್ ಆಗಿದ್ಯ. ಅದಕ ಒಲ್ಯಾ ಅಂದ್ಯ. ಅದೆಂಗಾಗಿ ಮುಟ್ಟು ತಗಿ ನೋಡಾನ ಅಂತ ಕಾಡಸಕತ್ತ. ನಾ ಅಳಕ ಸುರು ಮಾಡಿದ್ಯಾ. ನಮ್ ಅಜ್ಜಿ ಏನಾತು ಅಂತ ಕೂಗ್ಯಾಡಕತಿದ್ಲು. ಆ ಅಣ್ಣ ಹೋಗಿ ಬಿಟ್ಟ ಅವಾಗ. ನಮ್ಮ ಅಜ್ಜಿ ಮುಂದ ಹಿಂಗ ಮಾಡಿದ ಅಂತ ಹೇಳಿದ್ಯಾ ಅಷ್ಟ. ಅವತ್ತು ಹೋದಾವ ಇವತ್ತಿಗೂ (ಸುಮಾರು ೯, ೧೦ ತಿಂಗಳು) ಹೊಳ್ಳಿ ಬಂದಿಲ್ಲಾ.

ಅವತ್ ರಾತ್ರಿ ನಮ್ ಚಿಕ್ಕಮ್ಮ ಫೋನ್ಯಾಗ ಆತನ ಹೆಸರು ಹಿಡದು ಬೈತಿದ್ಲು ಯ್ಯಾರಿಗೆ. ಎಷ್ಟೋತ್ತನ ಮಾತಾಡಿದ್ಲು. ಹೊಲಸೆಲ್ಲಾ ಬೈತಿದ್ಲು ಯ್ಯಾರಿಗೆ. ಬಂದಗಿಂದಾನ ನಮ್ ಮನಿಗೆ, ಬಂದ್ರ ಪೊಲೀಸ್ ಕಪ್ಲೆಟ (ಕಂಪ್ಲೆಂಟ್) ಮಾಡತಿನಿ ಅಂತಿದ್ಲು. ಅಯ್ಯ ಹೊಡಿತಿವಿ ನೋಡ್ಯರ ನೋಡು ಅಂದ್ಲು. ಅದಕ ಅವತ್ ಹೊದಾವ ಹೊಳ್ಳಿ ಬಂದಿಲ್ಲ ಅನಸತ್ತ. ಬಾಳ ಹೊಲಸದಾನ್ರಿ ಅವ ಅಣ್ಣ. ಆದ್ರ ಆತ ಕೊಡಸಿದ್ದೆಲ್ಲಾ ತಿಂದಿನ್ರಿ, ಅದೆನರ ಗೊತ್ತಾದ್ರ ನಮ್ಮ ಚಿಕ್ಕಮ್ಮ ಹಿಂಗ ಬೈತಾಳ್ರಿ ನನಗೂ ಮತ. ಯಾಕಂದ್ರ ಅವ್ರ ಕಳವಿಲೆ ತಿಂದಿನಿ. ಒಂದಾ ಎರಡಾ ಆತ ಬಂದಾಗ್ಲೆಲ್ಲಾ ಕೊಡಸ್‌ತಿದ್ದ. ಎಲ್ಲ ತಿಂದಿನಿ. ಎಲ್ಲ ಗೊತ್ತಾದ್ರ ಹೊಡಿತಾರ್ರಿ ನಮ್ ಚಿಕ್ಕಮ್ಮ. ಮನ್ಯಾಗ ಏನು ಕಳುವು ಮಾಡಬಾರದು, ತಿನ್ನಕೆನರ ಬೇಕಂದ್ರ ನಮನ್ ಕೇಳು ಕೊಡಸ್ತಿವಿ ಅಂದಿದ್ರು ನನ್ ಕರಕೊಂಡು ಬಂದಾಗ. ಈಗ ನಾ ತಿಂದಿದ್ದೆಲ್ಲಾ ಗೊತ್ತಾದ್ರ ಯಾವಾಗ ಹೊಡಿತಾರ ಗೊತ್ತಿಲ್ರಿ, ಅದಕ ನನಗ ಇಲ್ಲಿ ಇರಕ ಒಲ್ಯಾಗ್ಯದ್ರಿ, ನಮ್ ಅಪ್ಪ ಯಾವಾಗ ಕರಕೊಂಡು ಹೊಗ್‌ತಾನೇನ ಗೊತ್ತಿಲ್ಲಾ. ನೀವ ನಮ್ಮ ಊರಿಗೆ ಹೋಗಿ ಹೇಳ್ರಿ ನಮ್ ಅಪ್ಪಗ ಸ್ವಲ್ಪ. ಕರಕೊಂಡ್‌ಹೊಗಕ.

ಪ್ರಕರಣ – ೬

ಹೆಸರು – ದೇವಕ್ಕ

ವಯಸ್ಸು – ೨೭

ಜಾತಿ – ಉಪ್ಪಾರ

ಊರು – ಹಲಗೇರಿ

ದೇವಕ್ಕರಿ ನನ್ ಹೆಸರು. ನಾ ಮಾಡಿದ ತಪ್ಪಿಗೆ ಇವತ್ತು ನಾ ಶಿಕ್ಷೆ ಉಣ್ಣಾಕತ್ತಿನಿ. ನನ್ ಗಂಡನ ಪ್ರೀತಿ ಮಾಡಿದ್ಯ. ನನ್ ಊರು ಹುಲಗೇರಿ ರಿ. ಹನುಮಸಾಗರದಂತ್ಯಾಕ. ನನ್ ಗಂಡ ಇಲ್ಲಿಯವ್ನ. ಅವ್ರ ಸಂಬಂಧಿಕ್ರು ನಮ್ ಊರಾನಾರ್‍ರಿ. ಅಲ್ಲಿಗೆ ಬರತಿದ್ದ ನನ್ನ ಗಂಡ. ನೀರ ತರಕ ಒಂದ ಕಡೆ ಇಬ್ರೂ ಹೊಕ್ಕಿದ್ವಿ, ಅಲ್ಲೆ ಪ್ರೀತಿ ಮಾಡಿದ್ವಿ, ನನ್ನ ಗಂಡನ ಜಾತಿ ಬ್ಯಾರೇರಿ. ಆದ್ರು ಪ್ರೀತಿ ಮಾಡಿದ್ವಿ, ನಾವು ಹೊಲಕ್ಕ ಮನಿಗೆ ಅಡ್ಯಾಡರು. ಹಂಗ ಕದ್ದು ಮುಚ್ಚಿ ಬೆಟ್ಟಿ ಅಕಿದ್ವಿ ಹೊಲ್ದಾರ್‍ಯಾಗ. ಫೋನ್ ಮಾಡತಿದ್ದ. ನಾನು ಮಾಡತಿದ್ಯ. ಆದ್ರ ಅವರ ಮನಿ ಕೇರ್‍ಯಾಗ್ರಿ, ನಮ್ ಮನಿ ಊರಾಗ ಇರದು. ಅದಕ ಊರ ಹೊರಗೆ ಬೆಟ್ಟಿ ಅಕಿದ್ವಿ, ಮದ್ವಿ ಆಗನ ಅಂತ ನಂಬೀಸಿದ್ದ. ಕೂಡಿನು ಕೂಡಕೊಂಡ್ ಬಿಟ್ವಿ, ನಾ ಬಸುರುನೂ ಆಗಿಬಿಟ್ಯಾ. ೨೩, ೨೪ ವಯಸ್ಸಿರಬೇಕ್ರಿ ನನಗ ಅವಾಗ. ನಾ ಕಪ್ ಇರದಕ್ಕ ನನಗ ಗಂಡುನೂ ಹತ್ತಿರಲಿಲ್ರಿ, ನನಗೂ ವಯಸ್ಸಾಗಿತ್ತು. ಸಾಲಿನು ಕಲತಿದ್ದಿಲ್ಲ. ನನ್ನು ಯಾರರ ಪ್ರೀತಿಸತಾರ ಅನ್ನನ ಜಾತಿಗೀತಿನು ನೋಡ್ಲಿಲ್ ನಾ. ನಮ್ ಮನ್ಯಾಗ ಯ್ಯಾರಿಗೂ ಅನುಮಾನನು ಇದ್ದಿಲ್ಲ. ನಾನು, ನಮ್ ಅಣ್ಣ, ಅವ್ವ, ತಂಗಿ ಇರದ್ರಿ, ಅಪ್ಪ ಸತ್ತಾನ. ಬಸರಾದ್ ಮ್ಯಾಲೆ ನನಗೂ ಗೊತ್ತ ಆಗ್ಲಿಲ್ಲ ಹಿಂಗಂತ. ನನಗ ವಾಂತಿ ಆಗದು. ಜ್ವರ ಬರಕತ್ರಿ, ದವಾಖಾನಿಗೆ ಹೋಗಿ ಬಂದ್ವಿ ಗುಳಗಿ ಕೊಟ್ಟಿದ್ರು, ಆದ್ರು ಕಮ್ ಆಗ್ಲಿಲ್ಲ. ಸಾಕಾತು ಮತ್ ಇಲಕಲ್ಲಾಗ ದೊಡ್ಡ ದವಾಖಾನಿಗೆ ಹೊದ್ವಿ, ಅಲ್ಲಿ ಎಲ್ಲಾ ನೋಡಿ ನೀ ಬಸರದಿ ಅಂತ ಹೇಳಿಬಿಟ್ರು, ನಾಸತ್ಯ ಅಂತನ ಅನಕೊಂಡ್ಯಾ. ತಗೋರಿ ನಮ್ ಮನ್ಯಾಗ ಅಳದೂ ಕರ್‍ಯಾದೂ ಎಲ್ಲಾ ಶುರು ಮಾಡಿದ್ರು, ನಾನು ಎಲ್ಲಾ ಇರ ವಿಷ್ಯಾ ಹೇಳಿದ್ಯಾ

ಊರ ದೈವದಾಗ ನ್ಯಾಯ ಹಾಕಿದ್ರು ನಮ್ ಮನ್ಯಾಗ. ನನ್ ಗಂಡನ್ನು ಕರಿಸಿದ್ರು ಅವ್ರ ಊರಲಾಸಿ. ಕೇಳಿದ್ರ ಹೌದು ನಾ ಪ್ರೀತಿ ಮಾಡಿದ್ಯ ಆದ್ರ ಮದ್ವಿ ಆಕ್ಕಿನಿ ಅಂದಿದ್ದಿಲ್ಲ ಅಂದ. ನಮ್ ಅವ್ವ ಚಪ್ಲಿಲೆ ಹೊಡ್ಯಾಕತ್ಲು ನಮ್ ಹಿರ್‍ಯಾನ. ಎಲ್ಲರೂ ಬಿಡಿಸಿ ಹೌದಪ್ಪ ಮದ್ವಿ ಅಕ್ಕಿ ಅಂತ ಅಂದಿದ್ದಿಲ್ಲ ಕರೆ, ಅಕಿ ಮೂರೇನ ನಾಕತಿಂಗ್ಳು ಬಸರದಾಳ ನಿನಗ ಈಗ ಏನ್ ಮಾಡಂತಿ ಅದಕ. ನೀನ ಹೇಳು ಅಂದ್ರು ದೈವದಾರು. ನನಗ ಅದಕ ಸಂಬಂಧನ ಇಲ್ಲ ಅಂದಬಿಟ್ಟಾ ಕೊನಿಗೆ. ಪೊಲೀಸರಿಗೆ ಹಿಡದಕೊಡತಿವಿ ಅಲ್ಲಿ ಹೇಳು ಇದನ್ನ ಅಂದಿಂದ ಮದುವಿ ಆದ. ಅವ್ರ ಮನ್ಯಾಗ್ಲಾಸಿ ಯಾರು ಬಂದಿದ್ದಿಲ್ಲ. ದೈವದಾಗ ತಾಳಿ ಕಟ್ಟಿಸಿಬಿಟ್ರು ಕಾಲ ಮಿಂಚೈತಿ ಅಂತ. ಅವ್ರಿಗೆ ಊರಿಗೆ ಕರಕೊಂಡು ಹೊಗಂದ್ರ, ಬ್ಯಾಡ ಸದ್ಯಕ ಇಲ್ಲೆ ಇರ್‍ಲಿ. ನಾ ನಮ್ ಮನ್ಯಾಗ ಒಪ್ಪಸಬೇಕು. ಅವರು ಬ್ಯಾಡ ಅಂದ್ರ ಅಕಿ ಇಲ್ಲೆ ಇರ್‍ಲಿ ಬರದು ಹೊಗದು ಮಾಡತಿನಿ ಅಂದ. ದೈವ ಒಪ್ಲಿಲ್ಲ. ನೀ ನಿಮ್ ಊರಾಗ ವೈದು ಇಟ್ಕೋ ಬ್ಯಾರೆ ಮನಿ ಮಾಡಿ ಅಂದ್ರು, ತಿಂಗ್ಳದಿನ ಟೈಮ್ ತಗೊಂಡು ಹೊದವ ಬರ್‍ಲೆ ಇಲ್ಲ. ನಾ ಎಂಟ ತಿಂಗಳದಾಗ ಹಡದುನು ಬಿಟ್ಯಾ. ಗಂಡ್ ಹಡದೆರಿ. ಈಗ ಬದಕಿನಂದ್ರ ಅದ್ರ ಮಾರಿ ನೋಡಿ. ಗಂಡ ಇಲ್ದನ ಹಡದ್ಲಂತ ಮಂದಿ ಅನಬಾರದೆಲ್ಲಾ ಅದ್ರು, ಮಾಡಿದ್ ತಪ್ಪಿಗೆ ಎಲ್ಲಾನು ನುಂಗಿದ್ಯಾ. ಹಡದ ಎರಡ ತಿಂಗ್ಳಕ್ ನನ್ ಗಂಡ ಇದ್ದಕಿದ್ದಂಗ ಬಂದರಿ. ಅವ್ರ ಸಂಬಂಧಿಕ್ರು ನಮ್ ಊರಾಗ ಇದ್ರಲ್‌ರಿ ಅವ್ರು ಗಂಡ ಹಡದಾಳ ಅಂತ ಸುದ್ದಿ ಮುಟ್ಟಿಸಿದ್ರಂತ.

ನಾನು ನಮ್ ಹಿರ್‍ಯಾನ ಹುಡಕಾನಂದ್ರ ನಮ್ ಅಣ್ಣ ಸಿಮಾ ಕುಡಕ್ರಿ. ಉಪಯೋಗಿಲ್ಲದಾವ. ಇನ್ ನಾವು ಹೆಣ್ ಮಕ್ಕಳ ಏನ್ ಮಾಡಿವಿ. ಆದ್ರ ಆತನಾಗ್ಯ ಬಂದಿದಕ್ ನನಗ ಸ್ವರ್ಗನ ಸಿಕ್ಕಂಗ ಆಗಿತ್ತು. ಆದ್ರ ಒಂದು ವಿಷ್ಯಾ ಹೇಳಿದ ಎದಿನ ಒಡದಂಗಾತು. ಅವ್ಗ ಮದ್ವಿ ಆಗಿ ಮೂರು ಹೆಣ್ ಮಕ್ಕಿದ್ವುರಿ. ನಿನ್ನು ಅದ ಮನ್ಯಾಗ ಒಯ್ದು ಇಡತಿನಂದರಿ. ಇದನ್ನೆಲ್ಲಾ ಕೇಳಿಂದ ಅಳದು ಕರ್‍ಯಾದು ಎಲ್ಲಾ ಮಾಡಿದ್ಯಾ. ಆದ್ರ ಕಾಲ ಮಿಂಚಿ ಹೊಗಿತ್ತು. ನನಗ ಅತನ ಹಿಂದ ಹೊಗದ ಬಿಟ್ರ ಬ್ಯಾರೆ ದಾರಿನ ಇದ್ದಿಲ್ರಿ.

ನಾ ಬ್ಯಾರೆ ಮನಿ ಮಾಡಿದ್ರ ಬರತಿನಂತ ಹೇಳಿಬಂದ್ಯಾ. ಹಂಗ ಬ್ಯಾರೆ ಮನಿನ ಮಾಡಿ ಇಟ್ಟಾರ್ರಿ. ಇಲ್ಲಿ ಬಂದಿಂದನ ತಿಳಿತ್ರಿ ನನ್ ಹಿರಿಯಾ ಮುನ್ಸಿಪಲ್‌ಟ್ಯಾಗ ನೀರಿನ್ ಟ್ರ್ಯಾಕ್ಟರ್ ಓಡಸತಾನಂತ. ಚೊಲ ಎಲ್ಲ ದುಡಿತಾನ. ಆದ್ರ ಒಂದು ವಿಷ್ಯಾ ಇನ್ನು ಗೊತ್ತಾಗವಲ್ದು. ಅತನ ಹೆಂಡ್ತಿಗೆ ಹೇಳ್ಯಾನಂತ ನನ್ ವಿಚಾರ, ಆದ್ರ ಅವ್ರು ಯಾಕಂತ ಕೇಳಕ ಬಂದಿಲ್ಲ ನನಗ. ಅವ್ರ ಎಂಥಾರದರಂತಾನು ಗೊತ್ತಿಲ್ಲ ನನಗ. ಆದ್ರ ಹುಡುಗುರ್ದು ಪೊಟ (ಫೋಟೊ) ತಂದು ತೋರಿಸ್ಯಾನ. ಯಾಡ್ ಎಕರೆ ಹೊಲ ಐತಂತ್ರಿ ಅವರ ಊರಾಗ. ನಮ್ ಹಿರ್‍ಯಾನವ್ವ ದೇವ್ರಿಗೆ ಬಿಟ್ಟಾಕ್ಯಂತ. ಅಕಿ ಯಾರ್ದು ತಲಿಗೆ ಹಕ್ಕೊಳದಿಲ್ ಅಂತ.

ನಾ ಈ ಊರಿಗೆ ಬಂದು ನಾಕ್ ವರ್ಸಾತು ಅವ ಮನಿ ಮಾಡಿ ಇಟ್ಟಾನನ್ನದು ಬಿಟ್ರ ಬ್ಯಾರೇನು ಮಾಡಿಲ್ರಿ, ಎಲ್ಲಾ ನಮ್ ಅವ್ವ ಅಣ್ಣ ತಂದ್ ಹಾಕತಾರ ಊರಿನಲಾಸಿ. ನಮ್‌ದ ೧೫ ಎಕರೆ ಭೂಮಿ, ಒಕ್ಕಲತನ, ಹೈನ ಎಲ್ಲಾ ಐತ್ರಿ ತೌವ್ರಮನಿದು. ತಂದ ಹಾಕತಾರ ಅದಕ್ಕ. ಮುಂದ ಹೆಂಗೆನ ನನ್ ಜೀವನ ಅನಿಸೈತ್ರಿ, ನಾನು ಇನ್ ಎಲ್ಲರ ದುಡದು ತಿನಬೇಕ್ರಿ ಅಷ್ಟ. ಮಗನ ಮ್ಯಾಲೆ ಜೀವದನ. ಎಲ್ಲಾ ತಂದ್ ಕೊಡತಾನ ತಿನ್ನಾಕ. ಆದ್ರ ನನಗ ಏನು ತಂದ್ ಹಾಕಲ್ಲ. ಕೇಳಿದ್ರ ಎಲ್ಯಂತ ತಂದ್ ಕೊಡ್ಲಿ ಅಂತಾನ. ಇವತ್ತಿನ ತನ ೧೦ರ ನೋಟ್ ಕೈಯಾಗ ಇಟ್ಟಿಲ್ರಿ ಅವ. ತಮ್ ಊರಾಗ ಒಂದಿನ ಇಲ್ಲಿ ಒಂದಿನ ಇರತಾನ್ರಿ, ಒಮ್ಮೆ ಅವ್ರ ಅವ್ವನ್ ಮಗನ ನೋಡಾಕ ಕರಕೊಂಡ ಬಂದಿದ್ದ. ಅವ್ರದೇನು ಕಿರಿಕಿರಿನ ಇಲ್ರಿ, ಇವ್ನ ಏನು ತಂದ ಹಾಕವಲ್ಲ. ಒಮ್ಮೊಮ್ಮೆ ಉಪಾಸನ ಇರತಿನಿ. ದುಡಿತಿನಂದ್ರ ಬ್ಯಾಡ ಅಂತಾನ. ಅನುಮಾನ ಮಾಡತಾನ ಅನುಸುತ್ರಿ ನನ್ ಮ್ಯಾಲೆ. ಜೀವನ ಬ್ಯಾಡ ಅನಿಸಿಬಿಡುತ್ರಿ ಒಮ್ಮೊಮ್ಮೆ. ಮಯ್ಯಾಗ ರಕ್ತ ಇಲ್ಲದಕ್ಕ ಹೊಳ್ಳಿ ಬಸರಸೈತ ಆಗವಲ್ಯರಿ. ಇಷ್ಟ ಕೆಟ್ ಐತಿ ನನ್ ಪರಿಸ್ಥಿತಿ. ನಮ್ ಊರಿಗೆ ಹೊಳ್ಳಿ ಹೋಗಬಾರ್ದು ಅಂತ ಅನಕೊಂಡ ಬಂದಿದ್ಯಾ. ಅದಕ ಒಟ್ಟ ಊರಿಗೂ ಹೊಗಲ್ರಿ, ಇದನ ತಿಳದ ನಮ್ ಹಿರಿಯಾ ಹೆಂಗಿದ್ರು ಇಕಿ ನನ್ನ ಬಿಟ್ ಹೊಗಲ್ಲ ಅಂತ ಅತೀ ಮಾಡಕತ್‌ಬಿಟ್ಟಾನ್ರಿ, ಗಂಡ್ ಹಡದಿನಿ ಅಂತ ಕರಕೊಂಡು ಬಂದಿನಿ ಅಂತಾನ್ರಿ ಈಗ ಮಾತೆತ್ತಿದ್ರ, ಜೀವನನ ಬ್ಯಾಸರಾಗಿಬಿಟ್ಟದ್ರಿ ಯವ್ವ, ಯಾವಾಗ ಇತಗ ಬುದ್ದಿ ಬರತದ ಅಂತ ಕಾಯಕತ್ತಿನ್ರಿ.

ಪ್ರಕರಣ – ೭

ಹೆಸರು – ತಸ್ಲಿಮಾಬಾನು

ವಯಸ್ಸು – ೩೬

ಜಾತಿ – ಮುಸ್ಲಿಂ

ಊರು – ಹೊಸಳ್ಳಿ

ತಸ್ಲಿಮಾ ಬಾನು ಹೇ ಮೆಡಂ ಮೇರಾ ನಾಮ್. ಮೇರೆ ಕಹಾನಿ ಸುನಾತೆ ಸುನಾತೆ ಆಪ್ ಯಹಾ ಸೇ ಉಟ ಜಾಯೇಂಗೆ. ಕ್ಯೊಂಕಿ ಮೆರೆ ಸಾತ್ ಅಲ್ಲಾನೆ ಐಸಾ ಕೆಲ್ ಕೇಲಾ. ಅಲ್ಲಾ ಅಷ್ಟ ಅಲ್ ರಿ ಯಾರಗೂ ಕರುಣೆನೆ ಅನ್ನದೆ ಇಲ್ ನನ್ ಮ್ಯಾಲೆ. ಪಡಬಾರ್ದ ಪಾಡ್ ಪಟ್ಟಿನ್ರಿ.

ಹಮ್ ಪಡಿ ಲಿಕಿ ಹೂ. ಆದ್ರೂ ಇಷ್ಟ ಹಿಂಸೆ ಅನುಬೋಸಿನಂದ್ರ ಗಂಡನ ಕೈಯಾಗ ಅದನ ನಾ ಹೇಳಕ ಒಲ್ಯಾಗಿನ್ರಿ, ನಾ ಉಂಡ ಕಷ್ಟ ನೆನಸ್ಕೊಂಡ್ರ ತಲಿನ ತಿರಿಗತ್ರಿ. ನಿಮಗಿಗ ಹೇಳಕತ್ತಿನಿ ಅಂದ್ರ ಎಲ್ಲೆ ಇದಿನಿ ಅಂತ ಅನಸತ್ತ. ಲಗೂನ ಮದ್ವಿ ಮಾಡಿಬಿಟ್ರು ನಮ್ ಅಬ್ಬೂ ನನಗ. ಎಸ್. ಎಸ್. ಎಲ್. ಸಿ ಮುಗಿಸಿದ್ಯಾ. ಮುಂದ ಓದತಿನಿ ಅಂದ್ರು ಬಿಟ್ಟಿಲ್ಲ. ನಾವು ಗೊಂಡಬಾಳರು ನನಗ ಈ ಊರಿಗೆ ಕೊಟ್ರು, ಮದ್ವಿ ಆಗಿ ೩೦ ವರ್ಷದಾಗ ನಾಕ ಮಕ್ಳ ಹಡದಿನ್ರಿ, ೩ ಹೆಣ್, ೧ ಗಂಡು. ಒಂದು ಹೆಣ್ ಕೂಸು ಹುಟ್ಟತ್ಲೆ ಸತ್ ಹೊತ್ರಿ. ಪೆಹ್ಲಾ (ಮೊದಲನೆ) ಬಚ್ಚೆರಿ. ಮದ್ವಿ ಆಗಿ ೨ ವರ್ಷನೂ ಚೆಂದ ಇಟಕೊಂಡಿಲ್ ನನ್ ಸಸುರಾಲದಾರು. ನಮ್ ಅತ್ತಿ ಸತ್ ಹೊಗ್ಯಾಳ. ೫, ೬ ವರ್ಷಾತನ ಅವಾಗ ಸತ್. ಅವ್ರಿರ ತನ ಒಂದು ಕಷ್ಟ, ಅವ್ರ ಸತ್ತಿಂದ ಮತ್ತೊಂದತರದ ಕಷ್ಟ.

ಮೆರಾ ಪತಿ ಹೈನಾ ಮೆಡಂ ಉಸಕಾ ಜೈಸಾ ಬದ್ಮಾಸ್ ಕಹಿ ಬೀ ನಹಿ ಮಿಲತಾ ಆಪಕೊ. ಇಷ್ಟ ಕಷ್ಟ ಕೊಟ್ಟಾನ್ರಿ ಅವ, ಬ್ಯಾರೆ ಯಾರರ ಆಗಿದ್ರ ಸತ್ತೊಕಿದ್ರು ಆತನ ಕೈಯಾಗ. ಮಕ್ಳ ಮಾರಿ ನೋಡಿ ನಮ್ದ್ ಜೀವ ಬದಕ್ಯದ್ರಿ, ನಮ್ ಸಾಸ ಇರತನ ಆಕಿ ಮಗ ಮಾಡಿದಕ್ಕೆಲ್ಲಾ ಸಾತ್ ಕೊಡುತಿದ್ಲು. ಅದಕ ಅವ ಅಷ್ಟ ಹೆಚಕೊಂಡ್ ಬಿಟ್ಟ. ಒಬ್ಬೆ ಮಗ ನನ್ ಗಂಡ. ಹೆಣ್ ಮಕ್ಳು ಕೊಟ್ ಮನಿಗೆ ಹೋಗ್ಯಾರ ಅವ್ರದೇನ್ ಚಿಂತಿಲ್ಲ. ನನ್ ಗಂಡ ಅದನಲ್ರಿ ವಿಷದ ಹಾವು ರಿ ಅವ. ಒಂದಾ ಯರಡಾ ಎಲ್ಲಾ ತರದ ಹಿಂಸೆ ಕೊಟ್ಟಾನ. ಕೊಡಕತ್ತಾನ್ರಿ ಇನ್ನ. ಅವ ಸತ್ರನ ನೆಮ್ದಿ ಜಿ ಹಮಾರೆಕೊ. ಲೌಡೆ ರಿ ಟೀಚರ (ಸಂಶೋಧಕಿ) ಅವ. ಅತಗ ಎಷ್ಟ ಬೈದ್ರು ನನ್ ಸಂಗ್ಟ ಕಮ್ ಆಗಲ್ಲ. ಹೊಗ್ಯಾನ್ರಿ ಈಗ ಅವ. ಒಂದು ತಿಂಗ್ಳ ಆತು ಎಲ್ಲೆ ದುಡಿಯಾಕ. ಲಾರಿಗೆ ಹೊಂಟಾನ ಅನುಸುತ್ತ.

ಸರಿಗೆ ದುಡದ ತಂದಾಕಲ್ರಿ ಅವ ಕಾಮ್ ಚೋರ. ಯಾರ್ ಕರದ ಕೊಡತಾರ್ರಿ ಇಂತಾರಿಗೆ ಕೆಲಸ. ಮೂರು ಹಡದಿನಿ ಈಗ, ತೌವ್ರಮನಿಗೆ ಹೊಗದ್ರಗ ಅರ್ಥ ಇಲ್ಲ ಅಂತ ಇಲ್ಲೆ ಅದಿನ್ರಿ ಮಕ್ಳ ಮಾರಿ ನೋಡಿ. ನನ್ ಯಾಡ್ನೆ ಮಗ್ಳ ೧ ವರ್ಷದಾಕಿದ್ಲು ಪೆಂಟಿಂಗ್ ಕೆಲಸ ಮಾಡತ್ತಿದ್ದ. ಗುತಗಿ ಮ್ಯಾಲೆ. ಯಲ್ಯರ ದುಡಿಯಕ ಹೊದ್ರ ೨–೩ ತಿಂಗ್ಳನ ಹೊಕ್ಕಿದ್ದ. ನಮ್ ಅತ್ತಿ ಇದ್ಲು ಇನ್ನ ಅವಾಗ. ನಾ ಹೊರಾಗ ಕುಡಂಗಿದ್ದಿಲ್ಲಾ. ಈಗ ೩ ಹಡದಿಂದ ಬರಕತ್ತಿನಿ ನೋಡ್ರಿ ಹೊರಾಗ. ಅಷ್ಟ್ ಅನುಮಾನದಾವ. ಇದ್ರ ತಿನಬೇಕು ಇಲ್ಲ ಒಳಗ ಸಾಯಬೇಕು. ಮಕ್ಳೆಲ್ಯರ ಹೊದ್ರ ಹುಡುಕಕ ಹೊಗಂಗಿದ್ದಿಲ್ಲ. ಕಿಸ್ಕೊ ದುಂಡಕರ್ ಗಯಿತಿ. ಕೊನ್ ಹೇ ಓ ಅಂತಿದ್ದ. ಹರಾಮ್‌ಕೋರ್. ಉಸರ ಹಿಡಕೊಂಡ ಬದಕಿನ್ರಿ ಅವನ ಜೊತಿ ಇನ್ನ. ನನ್ ನಂಬ್‌ತಿರ್ಯಾ ಬಿಡತಿರ್ಯಾ ನಾ ೩ ಹಡ್ಯತನ

ಗಂಡನ ಮನಿ ಬಿಟ್ ಹೊರಗ ಹೊಗಿಲ್ಲ. ಬಾಣೆತನಕ್ಕೂ ಹೊಗಿಲ್ಲ. ಇಲ್ಲೆ ಹಡದಿನ್ರಿ ಎಲ್ಲಾ. ಅಷ್ಟ ಅನುಮಾನದಾವ.

ನಾ ಒಂದು ಚೂರು ಬೆಳ್ಳಗ ಚೆಂದ ಇದ್ನೆರಿ ಇದ್ರಕಿಂತ ಅವಾಗ. ನನ್ ಗಂಡ ಕಾಲಾ ಅದಾನ್ರಿ, ಅವಗ ನಾ ಎಲ್ಲಿ ಯಾರ್‌ಜೋಡಿನರ ಸಂಬಂಧ ಇಟ್‌ಕೊಂಡ್ರ, ಅವ ಹೊರಗ ದುಡಿಯಾಕ ಹೋದಾಗ ಅಂತ ಅನುಮಾನ. ನಾನೇಷ್ಟ ಪಾಡ ಪಟ್ಟನಿ ಕೇಳ್ರಿ ಹೇಳತಿನಿ. ನಿಮಗ ಜೀವ ಚುರ್ ಅನ್ನುತ್ತ. ಹೇಳಬಾರ್ದು ಇಂತವೇಲ್ಲಾ. ಹೊಟ್ಟಿ ಉರಿತೈತಿ ಅವನ ಮ್ಯಾಲೆ. ಅದಕ ಹೇಳಬೇಕನುಸುತ್‌ರಿ. ಒಮ್ಮೆ ಗೊವಾಕ ಹೊಗದಿತ್ ೪ ತಿಂಗ್ಳ ಪೆಂಟಿಂಗ್ ಕೆಲಸಕ್. ಎರಡ ಹಡದಿದ್ಯಾ ಸತ್ ಕೂಸ ಬಿಟ್. ಅವಾಗ ಅವ ನಾ ಇಲ್ಲದಾಗ ಯಾರ್ ಜೊತಿಗ್ಯರ ಮಲಗಿದ್ರ ಇಕಿ ಅಂತ ಬಾಳ ಅನುಮಾನ ಮಾಡತಿದ್ದ. ಸಿಗರೇಟ್ ಹಚ್ಚಿ ತೋಡಿ ಎಲ್ಲಾ ಸುಟ್ ಬಿಟ್ಟಿದ್ದಾ. ರಿಜರ್ಲೆ ಒಂದಾಕ ಮಾಡ ಜಗಾನು ಕೊಯ್ದ್ ಬಿಟ್ಟಾ ಸ್ವಲ್ಪ, ನಾ ಮಕ್ಕೊಂಡಾಗ. ಇಂತಾ ಕೆಲಸ ಮಾಡಿಬಿಟ್ಟಾ. ನಾ ಸತ್ನ್ಯೋ ಬದಕಿದ್ನ್ಯೋ ಅಂತ ಎದ್ದು ಚಿರಕತ್ಯ. ಅವಾಗ ಊರು ಮಂದಿಗೆಲ್ಲಾ ಗೊತ್ತಾತು. ಎಲ್ಲಾರು ಚಿ, ತೂ... ಅಂತ ಉಗಳಿದ್ರು, ಅಷ್ಟಾದ್ರೂ ಅವಯೆನ್ ತನ್ ಚಾಳಿ ಬಿಡ್ಲಿಲ್‌ರಿ. ಹೊಡಿಯದು ಬಡಿಯದಂತು ದಿನ ಇರದ ನೋಡ್ರಿ, ಜೀವನ ಬಾಳ ನೋವುಂಡಬಿಟ್ಟದ್ರಿ ಆ ಲೌಡೆ ಲಾಸಿ. ಇಷ್ಟೆಲ್ಲಾ ಮಾಡಿ ೪ ತಿಂಗ್ಳ ಕೆಲಸಕ್ ಹೋಗಿ ಬಂದ. ಇಷ್ಟೆಲ್ಲಾ ಕಷ್ಟ ಉಂಡ್ ಮ್ಯಾಲೂ ಮತ್ ಒಂದು ಹಡದಿದ್ ನಾ. ನನಗ ನಾಚಿಗಿ ಇಲ್ಲ ಅಂತಿರ್ಯಾ, ಇಲ್ಲ ಅವಗ ನಾಚಿಗಿ ಇಲ್ಲ ಅನ್‌ತಿರ್ಯಾ ನಿಮಗ ಬಿಟ್ಟಿದ್ದು ಅದು.

ಇಷ್ಟ ಹೊಡಿತಿದ್ನಂದ್ರ ಆವಾಗ ತಲಿಗೇಲ್ಲಾ ಹೊಡದಿದ್ದು ಇವಾಗ ನೋವು ಕಿತ್ತಕತ್ತದ್ರಿ, ತಲಿ ಬಾಳ ಹೊಡಿತದ್ರಿ, ಎಲ್ಲಾ ದವಾಖಾನಿನೂ ಮುಗದ್ವು ತೊರಸಕ. ಬಾಳ ನೋವು ಬಂದಾಗ ಈ ಗುಳಿಗಿ ನುಂಗ್ರಿ ಅಂತ ಗುಳಿಗಿ ಕೊಟ್ಟಾರ್ರಿ ಹೊಸಪೇಟಿ ಡಾಕ್ಟ್ರು. ನೆತ್ತಿ ಮ್ಯಾಲಿ ಕುದ್ಲೇಲ್ಲಾ ಹಿಡದ ಜಗ್ಯಾಡ್ಯಾನ್ರಿ ಅವಾಗ. ನೆತ್ತಿ ಕುದ್ಲೆಲ್ಲಾ ಕಿತ್ತಿದ್ವು ಅವು ಹೊಳ್ಳಿ ಬರ್ಲೆ ಇಲ್ರಿ, ಒಂದಾ ಎರಡ್ರ್ಯಾ ಅವ ಮಾಡಿದ ಹಲ್ಕಾ ಕೆಲಸ. ಅವ ಲಗೂನ ಸಾಯ್ಲಿ ಅಂತಿನಿ ನೋಡ್ರಿ, ದುಡಕೊಂಡು ತಿಂದ್ರು ಚಿಂತಿಲ್ಲ ನಾ. ಅಲ್ಲಾ ಕೀ ಕಸಂ ಹೇಳಕತ್ತಿನ್ರಿ ಅವ ಸತ್ರ ನನಗ ಕಣ್ಣಾಗ ಹನಿ ನೀರ ಬರದಿಲ್ಲ ನೋಡ್ರಿ, ಇಂತರಿಗ್ಯಾಕ ಹೆಂಡ್ರು ಮಕ್ಳು ಬೇಕ್ರಿ, ಸುಳ್ಯಾರ ಮಾಡಕೋತ ಹೊಗಬೇಕಿತ್ತು ಚಟಕ ಬೇಕಾದ್ರ. ಈಗ ಊರಾಗ ಇರತಾನ್ರಿ, ಟ್ರ್ಯಾಕ್ಟರ್ ಓಡಸಕತ್ತಾನ ಬಾಡಗಿ. ಇದನೇಷ್ಟದಿನ ಮಾಡತಾನ ಗೊತ್ತಿಲ್ಲ. ಮಕ್ಳನ ಕನ್ನಡ ಸಾಲಿಗೆ ಹಾಕಿನ್ರಿ ಓದಿ ಅವ್ರು ಅರ ಸ್ಯಾಣೆ ಆಗ್ಲಿ ಅಂತ. ಅವ ಮಕ್ಳನ್ನು ಸೇರಲ್ರಿ, ಒಂದ ದಿನಾ ಉಂಡ್ರ್ಯನು ಅಂತ ಕೇಳಲ್ ಮಕ್ಳನ್.

ಅವಗ ಒಂದು ಚಟ ಇಲ್‌ರೀ. ಹೆಡ್ತಿ ಮ್ಯಾಲೆ ಅನುಮಾನ ಮಾಡದೊಂದ ಅತನ ಚಟ ಆಗ್ಯಾದ. ಮನಿಗೆ ಬಂದ್ರ ಯಾಕರ ಬಂದ ಅಂತ ಅನಸಕ ಸುರುವಕೈತ್ರಿ ಕರೆಗ್ಲೂ. ಹಿಂಗ ಯಾರ ಮುಂದರ, ನಿಮ್ ಅಂತ ತಿಳದರ ಮುಂದರ ಹೇಳಕೊತಿನ್ರಿ ನನ್ನ ಕಷ್ಟ. ಅವಾಗ ಮನಸ ಸ್ವಲ್ಪ ಹಗುರಾಗುತ್ತ. ಆಮ್ಯಾಲೆ ಅದ ಚಿಂತಿ. ಮೇರೆ ನಸಿಬ್ ಮೆ ಹಿ ಐಸಾ ಲಿಕಿತೊ ಆಪ್ ಕ್ಯಾ ಕರಸಕ್ತೆ ಹೇ ಮೆಡಂ. ಹಮಾರೆಕೊ ಸಂಬಾಲ್ನಾ ಪಡೆಗಾ. ಕ್ಯಾ ಮೆಡಂ.

೫.೧.೩. ಶಾಬ್ಧಿಕ ಹಿಂಸೆ

ಪ್ರಕರಣ – ೮

ಹೆಸರು – ಪಾರ್ವತಿ

ವಯಸ್ಸು – ೩೪

ಜಾತಿ – ಅಗಸರು

ಊರು – ಹೊಸ ಲಿಂಗಾಪುರ

ನನಗ ೨೩ ವಯಸ್ಸಿನ್ಯಾಗ ಸಂಗಮೇಶ ಅನ್ನೊರ ಜೋಡಿ ಲಗ್ನ ಆಗಿತ್ತು. ಅವ್ರು ಲಗ್ನ ಆಗಿ ಒಂದ್ ವರ್ಷಕ್ ತೀರಿಹೊದ್ರು, ಬಿಳಿ ಕಾಮ್ಲಿ ಆಗಿತ್ರಿ, ನಾ ಅವ್ರನ ಮದ್ವಿ ಆದಾಗಿಂದ ಅವ್ರಿಗೆ ಅರಾಮಾ ಇರಲಿಲ್ಲ. ಯಾ ಸುಖನೂ ಕಾಣ್ಲೆಲ್ಲ ನಾ. ಬರಿ ಅವ್ರ ಚಾಕರಿನ ಆತು. ಅವ್ರ ಸಾಯನ ನಮ್ ಮನ್ಯಾಗ ನನ್ನ ಗಂಡನ ಮನ್ಯಾರ ಜೋಡಿ ಜಗ್ಳ ಮಾಡಿ ತೌವ್ರಮನಿಗೆ ಕರಕೊಂಡು ಬಂದ್‌ಬಿಟ್ರು, ನಂದಿನ್ನ ಸಣ್ ವಯಸ್ಸಂತ ಯಾಡ್ನೆ ಮದ್ವಿ ಮಾಡಿದ್ರು, ನಮ್ ಮನ್ಯಾಗ. ನನ್ ಗಂಡ ಪ್ರೈಮರಿ ಸ್ಕೂಲ್ ಟೀಚರ್‌ರಿ. ಬಸವನ ಬಾಗೇವಾಡಿರಿ ನಮ್ ಊರು. ತೌವ್ರಮನಿ ಇದರಿ ಮೆಡಂಅರ. ಯೊಳ್ ವರ್ಷ ಆತ್ರಿ ನನ್ ಲಗ್ನಾಗಿ. ೫ ವರ್ಷದ ಮಗ ಇದಾನ್ರಿ, ಒನ್ನೆದ್ದು ಹಂಗಾದ್ರ ಯಾಡ್ನೆ ಲಗ್ನ ಬ್ಯಾರೆನ ಆಗ್ಯದ್ರಿ, ಯಾಕರ ಲಗ್ನ ಆಗಿನ ಅಂತ ನಂದ್ ಮನಸು ಒಳಗೊಳಾಗ ಕುದ್ ಬಿಟ್ಟದ್ರಿ, ನನ್ ಗಂಡ ಬಾಳ ಕಿರಿಕಿರಿ ಮನಸ್ಯಾರಿ. ಸಾಕಾಗ್ಯದ್ರಿ ಕರೆಗೂ. ಪಿಯುಸಿ ಮಟ ಓದಿದ್ಯಾ, ಮದ್ವಿ ಮಾಡಿಬಿಟ್ರು, ಮುಂದ ಓದಬೇಕಿತ್ ಅಂತ ಇವಾಗ ಅನುಸುತ್ರಿ, ಏನರ ನೌಕ್ರಿ ಮಾಡಿದ್ರ ಇಂತಾರ ಕೈಯಾಗ ಸಿಗತಿದ್ದಿಲ್ಲ ಅನುಸುತ್ರಿ, ಕರೆಗ್ಲೂ ಮಗನ ಮಾರಿ ನೋಡಿ ಬದಕಿನ್ರಿ,

ನಮ್ ಮನ್ಯಾರ ಮೊದಲ್ನೆ ಹೆಂಡ್ತಿ ಮದ್ವಿ ಆಗಿ ಎರಡ ವರ್ಷದಾಗ ನೇಣ ಹಕ್ಕೊಂಡು ಸತ್ ಹೊದ್ರಂತ್ರಿ, ನಮ್ ಮನ್ಯಾಗ ಅದನ್ನೆನು ವಿಚಾರ ಮಾಡ್ಲಾರದ ಗಂಡ ಸತ್ತಕಿ, ಹುಡುಗುಂದು ಗೌವರನಮೆಂಟ್ ನೌಕರಿಬ್ಯಾರೆ ಅಂತ ಕೊಟ್ಟು ಮದ್ವಿ ಮಾಡಿಬಿಟ್ರುರಿ ಅವಾಗ. ಈಗ ಪೆಚಾಡತಾರ. ಯದಕ ಬಂತ್ರಿ ಈಗ. ನಾನು ಯೊಳು ವರ್ಷದಿಂದ ಒನ್ನೆದಾಕಿ ಯೆದಕ ಉರ್ಲ ಹಕ್ಕೊಂಡ್ಲು ಅಂತ ಬಾಯಿಬಿಡಸಕ ಪ್ರಯತ್ನ ಮಾಡತನ ಅದಿನ್ರಿ. ಏನು ಹೇಳವಲ್ರು, ಮಂದಿನ ಹೇಳಿದ್ರು, ರೊಕ್ ರೊಕ್ ಅಂತ ಸಾಯಿತಿದ್ರು, ಅದಕ ಆ ಹುಡುಗಿ ಸತ್ಲು ಅಂತ. ಆದ್ರ ನನಗೆಂದು ರೊಕ್ಕ ತಂಬಾ ಅಂತ ಕಾಡ್ಲಿಲ್ಲ. ಆದ್ರ ರೊಕ್ಕದ ಹಲಬ್ಯೆತಿ ಅವ್ರಿಗೆ ಅಂತ ಗೊತ್ತು. ಯಲ್ಲಾರಿಗಿರದ್ರಕಿಂತ ಚೂರು ಜಾಸ್ತಿನ ಐತಿ ನಮ್ ಅತ್ತಿಗೆ ಮತ್ ನನ್‌ಗಂಡಗ. ನಮ್ ಮಾವ ಹಂಗೆನಿದ್ದಿಲ್ಲರಿ. ಮೊನ್ನೆ ಮೊನ್ನೆ ಸತ್ರು ಪಾಪ. ನಮ್ ಮಾವನು ಮಾಸ್ತಾರ ಇದ್ರು, ಈಗ ನಮ್ ಅತ್ತಿಗೆ ಪಿಂಚಣಿ ರೊಕ್ಕ ಬರುತ್ತ ತಿಂಗ್ಳ. ಏನ ಮಾಡತಾಳ ದೇವ್ರಿಗೆ ಗೊತ್ತು. ಇರದ ನಮ್ ಮನ್ಯಾಗ ನಾಕ ಮಂದಿ ನಾವು. ನಾನು, ನನ್ ಮಗ, ಗಂಡ, ಅತ್ತಿ. ನಾವನಾವಿದ್ರು ನೆಮ್ದಿ ಇಲ್ರಿ. ಯಾವಾಗೂ ನನಗ ಹೊಲಸ ಹೊಲಸ ಬೈಕೊತನ ಇರತಾರ ಮನ್ಯಾಗ. ಎಲ್ಲಿ ಸಮಸ್ಯೆ ಐತಿ ಅಂತ ತಿಳಿತಿಲ್ಲ. ಆದ್ರ ಕಿರಿಕಿರಿ ಅನುಸುತ. ನನ್ ಗಂಡಗ ಬರಿ ಆಸ್ತಿ ಮಾಡ ಹುಚ್ಚು, ಇದ್‌ಬದ್ದಿದ್ದೆಲ್ಲಾ ಲೊನ್ ಮಾಡಿಸಿ ಸಂಬಳ ಸಾವಿರ

ರೂಪಾಯಿ ಬರುತ್ತ ಕೈಗೆ. ಮನಿ ಹೆಂಗ ನಡಸ್ತರಂತ ಗೊತ್ತಿಲ್ಲ. ಯಾವಾಗ ನೋಡಿದ್ರು ರೊಕ್ಕ ಇಲ್ಲ ಅಂತಾರ. ಕಿರಾಣಿ ತಂಬರ್ರಿ ಅಂತ ಹೇಳಾಕ ಹೆದ್ರಿಕಿ. ಹುಡುಗುಗ ೧ ರೂಪಾಯಿ ಕೊಟ್ಟು ತಿನಸ ಕೊಡಸಲ್ಲರಿ, ಅಂತಾ ಜನ. ನಾ ಜಗ್ಯ ಮಾಡಿದ್ರ ತೌವ್ರಮನಿಲೆ ತಂದು ತಿನ್ನು, ಏನ್‌ಕೊಟ್ಟಾರ ಅಂತಾರ ಗಂಡ ಅತ್ತಿ ಅನಬಾರದೆಲ್ಲಾ ಅಂದ್ ಕಟಗೊತಾರಾ. ಅದೆಷ್ಟ ಹೊಲಸ ಬೈಗ್ಯ ಅಂದ್ರ ನನಗ ಹೇಳಕ ನಾಚಿಗಾಗುತ್ರಿ ಅಂತಂತಾ ಮಾತ ಹೇಳತಾರ.

ಏಳು ವರ್ಷದಾಗ ೧ ಸೀರೆ ಕೊಡಿಸಿಲ್ಲ, ಹುಡುಗುಗ ಒಂದು ಅಂಗಿ ತಂದಿಲ್ಲರಿ. ಎಲ್ಲಾ ನನ್ ತೌವ್ರಮನ್ಯಾರ ಮಾಡತಾರ. ಗಂಡನ ಮನಿದು ಆಸ್ತಿ ಚೊಲೊ ಐತ್ರಿ, ೨ ಮನಿ, ೮ ಎಕರೆ ನಿರಾವರಿ ಭೂಮಿ ಐತಿ. ಇದ್ರು ಗತಿಗೆಟ್ಟರತರ ಬದಕತಾರ. ಚೆಂದಂದು ಕೂಳ ಸ್ಯೆತ ಮಾಡಕೊಂಡು ತಿನ್ನಂಗಿಲ್ಲ. ಅದ ರೊಟ್ಟಿ ಬ್ಯಾಳಿ. ಕಾಯಿಪಲ್ಲೆನೂ ಕೊಳ್ಳಂಗಿಲ್ಲ. ಹೊಲದಾಗ ಬಂದಿದ್ದ ಕಾಳು ಕಡಿನ ತಿನ್ಬೆಕು ವರ್ಷ ಈಡಿ. ನಾ ಏನರ ಜಗಳ ಮಾಡಿದ್ರ ಯಾಕ ಒನ್ನೆ ಗಂಡನ ಸಾಯಿಸಿದ್ಯಲ ಹಂಗ ನನ್ನು ಸಾಯಸಬೇಕಂತಿಯನು ಅಂತಾರ. ಜೀವ ಕೈಗೆ ಬಂದಿರುತ್ತ. ಹಗ್ಗಲ ಅಂತಾರ ಈ ಮಾತು. ನನಗೆನೂ ಅನ್ನಕ ಬಿಡಲ್ಲ. ನಾ ತಿರಿಗಿ ಮಾತಾಡಿ ನಿನ್ ಹೆಂಡ್ತಿ ಯಾಕ ಸತ್ಲು ಅಂದ್ರ ಮುಕಳಿ ತುಂಬಿ ಸತ್ತಾಳ ಅಂತ ನನ್ ಬಾಯಿನ ಮುಚ್ಚಿಸಿ ಬಿಡತಾರ ಹೊಲಸಹೊಲಸು ಬೈದು. ದಿನಾ ನಾ ನೆಮ್‌ದಿಲೆ ಇರಂಗ ಇಲ್ಲ. ಉಂಡ್ರು ಆ ಅಡಗಿ ಹಂಗ್ಯೆತಿ ಈ ಅಡಗಿ ಹಿಂಗ್ಯೆತಿ ಅಂತ ತಾಯಿ ಮಗ ಹೆಸರಿಡತಾರ. ತಂದ ಹಾಕ್ರಿ ಎಲ್ಲಾ ನೋಡನ ಅಂದ್ರ ನಿಮ್ ಅಪ್ಪನ ಮನಿಲೆ ತಂಬಾ ನೋಡಣಾ ಅಂತಾರ. ಇಲ್ಲಿ ಹಡಿಸಿ ಗಳಿಸಿಟ್ಟಿಲ್ಲ ನೀ ತಿಂದ್ ತೆಗ್ಗಿ ಅನ್ನಕ ಅಂತಾರ. ವರದಕ್ಷಿಣೆ ತಗೊಂಡಿಲ್ರಿ ಅದನಂತೂ ಕುಂತ್ರು, ನಿಂತ್ರು ಹಂಗಸ್ತಾರ್ರಿ, ನನ್ ತೌವ್ರ ಮನ್ಯಾರು ವರದಕ್ಷಿಣೆ ಕೊಟ್ಟಿಲ್ಲ ಅನದ ಆಟ ಕರೆ ರಿ. ಬಟ್ಟಿ, ದವಾಖಾನಿ, ಊಣಸದ ತಿನಸದು ಇವತ್ತಿಗೂ ಎಲ್ಲಾ ಖರ್ಚು ಅವರ ಮಾಡತಾರ್ರಿ ನನ್ನು ನನ್ ಮಗನ್ನು.

ಈಗ ಎರಡ ವರ್ಷದ ಹಿಂದ ರೊಕ್ಕ ಹರಕತ್ ಆಗ್ಯಾದ ಅಂತ ನಮ್ ಅಣ್ಣನ ಹತ್ರ ಕೇಳಿ ಎರಡ ಲಕ್ಷ ರೂಪಾಯಿ ಇಸ್ಕೊಂಡಾರ, ನಾಕ್ ತಿಂಳದಾಗ ಹೊಳ್ಳಿ ಕೊಡತಿನಂತ. ಇವತ್ತಿಗೂ ಕೊಡಕ ತಯಾರಿಲ್ಲ. ನಮ್ ಅಣ್ಣ ನನಗ ಕೇಳವ್ವ ನಿನ್ ಗಂಡಗ ಅಂತ ಹಚ್ಚಿದ. ನಾ ಕೇಳಿದ್ರ ಎಲ್ಯದಾವು ಕೊಡಕ ನಿನ್ ಹತ್ರ ಇದ್ರ ಕೊಡು ಅಂತಾರ. ನಾ ಎಲ್ಲಿಂದ ತರ್ಲಿ ಅಂದ್ರ ನಾನೆನ್ ಮಾಡ್ಲಿ ಅದಕ್ಕ. ಎಲ್ಯರ ಹಡಸ್ಕೊಂಡು ಬಂದು ಕೊಡು ಅಂತಾರ. ನಮ್ ಅಣ್ಣಗ ಇದನ ಹೇಳಿದಕ್ಕ ರೊಕ್ಕ ಹೊದ್ರ ಹೊತು ಕೇಳಕ ಹೋಗಬ್ಯಾಡ ಆ ಸೂಳಿ ಮಗಗ ಬಿಟ್ ಬಿಡು ಅಂದ. ನನಗ ನಮ್ ಅಣ್ಣನ ತ್ರಾಸ ನೋಡಕಾಗವಲ್ದುರಿ. ಅಂತದ್ರಾಗ ಈ ಸಲಿ ನನ್ ಮಗನ್ನು ಇಲ್ಲೆ ಬಿಡಕ ಬಂದಿನಿ. ಅಲ್ಲಿ ಹುಡುಗ ಎಳಗಿನ ಆಗವಲ್ಲ. ಸರಿಗೆ ಕುಳಿಲ್ಲ. ಇರದೊಬ್ ಮಗ. ಚೆಂದ ಇರ್ಲಿ ಅವನರ ಅನ್ನದು ನನ್ ಮನಸ್‌ರ್ರಿ, ನಮ್ ಅಣ್ಣನು ನನಗ ತ್ರಾಸಾದ್ರ ಯಾಕಾಗವಲ್‌ದಾಕ ಇಲ್ಲೆ ಬಿಟ್ಟು ಹೋಗು ಅಂದಾನ್ರಿ, ಅದಕ ಬಂದಿನ್ರಿ, ನನ್ ಬಾಳೆ ಹೆಂಗಾಗ್ಯದಂದ್ರಿ ಸಾಯಕು ಆಗ್ಲಾರ್ದು, ಬದಕಕು ಆಗ್ಲಾರದಂಗಾಗ್ಯದ್ರಿ. ಆ ಶ್ಯಟಿಗ್ಯವ್ವ (ಹುಟ್ಟಿದಾಗ ಹಣೆಬರಹವನ್ನು ಬರೆದು ಹೋಗುವ

ದೈವ) ನನ್ನ ಹಣ್ಯಾಗ ಕೊನಿಮಟ ಇಷ್ಟ ಅನಬೋಸಕೊತ ಹೊಗದು ಬರದಿದ್ರ ಯಾರೇನ ಮಾಡಕಾಗುತ್ರಿ ಅನುಬೋಸಬೇಕಾಗುತ್ತ.

ಪ್ರಕರಣ – ೬

ಹೆಸರು – ಲಕ್ಷಮ್ಮ

ವಯಸ್ಸು – ೩೮

ಜಾತಿ – ವಾಲ್ಮಿಕಿ

ಊರು – ಚುಕ್ಕನಕಲ್

ನಾವು ಚುಕ್ಕನಕಲ್ಲರಮ. ಇಲ್ಲಿ ದುಡಕೊಂಡು ತಿನ್ನಾಕ ಬಂದಿವಿ. ೩ ಮಕ್ಳದಾವು. ಊರಾಗ ಬಿಟ್ಟನಿ. ಸಾಲಿಗೆ ಹೊಗತಾರ ಮೂವರು. ಸೂಟಿಗೆ ಬರತಾವು ಇಲ್ಲಿ. ಇಲ್ಲಿ ಕಟ್ಟ ಬಿಲ್ಡಿಂಗ್ ಹಿಡದು ಕಾಯದು ಮತ್ತ ದಿನಾ ಅದಕ್ಕ ನೀರ ಬಿಡ ಕೆಸಲ ಮಾಡತಿವಿ. ನಾಲ್ಕ್ ಸಾವ್ರ ಕೊಡತಾರ. ಆ ರೊಕ್ಕ ಎಲ್ಲಿ ಸಾಲತ್ತಮ. ಅದಕ್ಕ ಬೆಳಿಗ್ಗೆ ಒಂದ್ ಟೈಮ್ ಮನೆ ಕೆಲಸಕ್ಕ ಹೊಕ್ಕಿನಿ. ದುಡುದು ದುಡುದು ಈ ವಯಸ್ಸಿಗೆ ಮದುಕಿ ಆದಂಗಾಗಿನಿ. ಕೈಕಾಲೆಲ್ಲ ಸೋತ್ ಹೋಗ್ಯಾವು. ೧೪ ವಯಸ್ಸಿಗೆ ಮದ್ವಿ ಮಾಡಿದ್ರು, ಅವತ್ತಿಂದ ದುಡಿಯಕತ್ತಾಕಿ ಇನ್ನು ಬಿಟ್ಟಿಲ್ಲ. ಒಂದ್ ದಿನ ಬಿಟ್ರ ಅವತ್ತು ಕೂಳಿಲ್ಲ ಅಂತ ಹೊತ್ತ ನನ್ದು. ೧ ಎಕರೆ ಭೂಮಿ ಬಿಟ್ರ ಏನಿಲ್ಲ. ಎಲ್ಲಾ ಖರ್ಚ ತಗದು ವರ್ಷ ೩ ಸಾವರ ಬರಬೇಕಂದ್ರು ಹೆಚ್ಚಾತ ಅದು. ಅದಕ ಹೊರಗ ದುಡಕೊಂಡ ತಿನ್ನಾಕ ಬಂದಿವಿ.

ಗಂಡ ಅನ್ನವ ಇದ್ರು ಇಲ್ದಂಗ ನನ್ ಪಾಲಿಗೆ. ಹಾಸಿಗೆ ಒಂದ ನೊಡಮ್ಮ ಅತನ ಬಾಳೆ. ಒಂದ್ ದಿನ ದುಡಿಯಲ್ಲ. ಅಂದ್ರು ಗಣಮಕ್ಳನ್ನದು ಹೆಚ್ಚಿನ್‌ದು. ಪರಸ್ಥಳದಾಗ ಒಬ್ಬಾಕಿರಕಾಗಲ್ ಅಂತ ಎಲ್ಲೆಲ್ಲಿ ಹೋಗತಿನಿ ಅಲ್ಲಿ ಕಟಗೊಂಡ್ ಅಡ್ಡಾಡತಿನಿ. ಅತನ ಕೆಲಸ ಕುಡಿಯದು ಹೊಲಸೊಲುಸು ಬೈಯದು, ಬಿಳದು ಇಷ್ಟ ಆಗೈತಿ ಕಟಗೊಂಡಾಗಿಂದ. ದಾವಣಗೆರಿ, ಬೆಂಗಳೂರು ಎಲ್ಲಾ ಕಡೆ ಹೊಕ್ಕಿವಿ ದುಡಿಮಿ ಇದ್ದಲ್ಲಿ. ಜೋಡ್ ಅಕ್ಕನಂತಾನಾನ ಒಂದು ಹೊತ್ತು ದುಡುದು ಕೂಳ ಹಾಕತಿನಿ. ನನಗ ಹೊಲದನ್ ಕಸ ಆಗಿಬರಲಮ್ಮ. ಅಲರ್ಜಿ ಅಂತ. ಮೈ ತುಂಬಾ ಗುಳ್ಳಿ. ತುರಸಕ ಶುರು ಅಕ್ಕೈತಿ. ದುಡದಿದ್ ಓಟು ದವಾಖಾನಿಗೆ ಬಡಿಯದಾದಿತು ಅಂತ ಹೊಲದ ಕೆಲಸನ ಮಾಡಲ್ಲ. ಇದೆಲ್ಲ ಗಂಡಗ ಗೊತ್ತಿದ್ರು ಅರವಿಲ್ದಂಗ ಇರತಾನ ಏನ್ ಹೇಳದು. ಯಾವಗರ ಒಮ್ಮೆ ಹಮಾಲಿ ಮಾಡತಾನ ತನಗ ಕುಡಿಯಕ ರೊಕ್ಕ ಆಗತ್ಲೆ ಬಿಟ್ ಬಿಡತಾನ. ಇಲ್ಲ ರೊಕ್ಕಕ ನನ್ ಜೀವ ತಿಂತಾನ. ಕುಡುದು ಬಂದು ಸುಮ್‌ನಿರತಾನೆನ್ರಿ ಅದು ಇಲ್ಲ. ಬಂದು ಬಾಯಿ ಬಂದಿದೆಲ್ಲಾ ಒದ್ರಾಡಕೊತ ಕುಂತಬಿಡತಾನ. ಕರೆ ಹೇಳಬೇಕಂದ್ರ ನಮ್ ಅವ್ವ ದೇವದಾಸಿ. ಹಗರಿಬೊಮ್ಮನ ಹಳ್ಳಿ ನನ್ ತೌವ್ರಮನಿ. ಆಗಿನ ಕಾಲ ಹಂಗಿತ್ತು ಏನ ಆತು. ಅದಕ ನಾವೇನ್ ಮಾಡಕಾದಿತು. ಹಾದ್ರಗಿತ್ತಿ, ಮಿಂಡ್ರಿಗೆ ಹುಟ್ಟಿದಾಕಿ, ಬೊಸುಡಿ, ಲವ್‌ಡಿ, ಚಿನಾಲಿ ಒಂದ ಎರಡ ಅವ ಬೈಯದು. ನನಗಂತೂ ಮರ್ಯಾದಿಲ್‌ದಂಗ ಆಗೈತ್ರಿ, ಹೊಲಸ ಮಾತಾಡಕಂತೂ ಲೆಕ್ಕನ ಇಲ್ಲ. ಇಲ್ಲಿ ಬರೆ ದೊಡ್‌ದೊಡ್ ಮಂದಿ ಏನ್ ಅನಕೊಂಡಾರೆನ ಅಂತ ಒಳಗೊಳಗ ಕುದಿತಿರತೈತಿ. ನನಗಂತೂ ಬೈಗಳ ತಿಂದು

ರೂಡ ಆಗ್ಯೆತಿ. ಆದ್ರ ಮಂದಿ ಏನ್ ಅನಕೊಂಡಾರು. ಅನುಮಾನ ಮಾಡ್ಲಿಲ್ಲ, ಹೊಡಿಲಿಲ್ಲ ಯಾಕಂದ್ರ ತನ್ ಕೈಲೆ ಏನು ನಿಗಲ್ಲಂತ ಗೊತ್ತು. ಅದಕ ಬೈಕೊತ ಕೂಡತಾನ ನನ್ ಮಾನಸಿಕ ಮಾಡದಕ್ಕ. ರೊಕ್ಕ ಇಲ್ಲ ಅಂದ್ರಂತೂ ಇನ್ನ ಹೆಚ್ಚಕ್ಕವು ಬೆಗ್ಳ. ಒಂದ್ ಕಡೆ ದುಡದ ದುಡದು ಸಾಯಬೇಕು. ಇನ್ನೊಂದು ಕಡಿ ಇತ ಅನ್ನ ಮಾತಿಗೆ ಸಾಯಬೇಕು. ಸಾಯದು ಸುಖ ಅನಿಸಿಬಿಟ್ಟಿರುತ್ತ ಒಮ್ಮೊಮ್ಮೆ. ಮಕ್ಳ ಮಾರಿ ನೋಡಿ ಬದಕಿನಿ. ದೈವ, ಯಾರ ಏನ್‌ಮಾಡಕಾದಿತು.

ಪ್ರಕರಣ – ೧೦

ಹೆಸರು – ಭೂಮಿಕಾ

ವಯಸ್ಸು – ೧೫

ಜಾತಿ – ಲಿಂಗಾಯತ

ಊರು – ಅಳವಂಡಿ

ಇದ ಊರಾನೊರು ಟೀಚರ ನಾವು. ನಮ್ ಅಪ್ಪ ಅವ್ವ ಹೊಲದಾಗ ದುಡಿತಾರ. ೧೦ ಎಕರೆ ನೀರಾವರಿ ಹೊಲ ಐತ್ರಿ ನಮ್ದು. ಯಾಡ ಮನಿ ಎಲ್ಲಾ ಅದಾವ್ರಿ, ನಮ್ ಅವ್ವ ದೇವ್ರಂತಾಕಿ. ನಾವು ೪ ಮಂದಿ ಅಕ್ಕತಂಗ್ಯಾರು. ನಾನು ೩ ನೇದಕಿ. ದೊಡ್ ಅಕ್ಕ ೭ನೆತ್ತ ಕಲತು ಸಾಲಿ ಬಿಟ್ಳು. ಯಾಡ್ನೆದಾಕಿ ಪಿಯುಸಿ ಹಚ್ಚಾಳ್ರಿ ಈಗ. ನಾನು ಈ ವರ್ಷ ಒಂಬತ್ನೆತ್ತ. ನನ್ ತಂಗಿ ಎಂಟನೆತ್ತ ಈ ಸಲಿ. ನಾವು ಎಂತ ಚೆಂದದಿವಿ. ಆದ್ರ ನಮ್ ಅಪ್ಪ ಆಡ ಮಾತಿಗೆ ನಮ್ ಅವ್ವ ಒಮ್ಮೊಮ್ಮೆ, ಎಲ್ಲಾರೂ ಕೂಡಿ ಬಾಯಿಗೆ ಹಾರಕೊಂಡ್ ಬಿಡನ ಅಂತಾಳ್ರಿ, ನಮ್ ಅಪ್ಪ ಕುಡಿಯದಿಲ್ಲ ಏನಿಲ್ರಿ ಅಂದ್ರೂ ಇಷ್ಟ ಒದ್ರ್ಯಾಡತಾನ ಅಂದ್ರ ನಾ ಹೇಳಕವಲ್ಯರಿ ಟೀಚರ.

ನಮ್ ಅವ್ವಗ, ನಮಗ ಏಳತ್ಲೆ ಸುಪ್ರಭಾತ ಸುರು ಮಾಡಿರತಾನ ನಮ್ ಅಪ್ಪ. ನಾವು ಲಘುನ ಏಳ್ಳಿಲ್ಲ ಅಂದ್ರ ಮಾರಿ ಮಣ್ಣಾಗಡಗ್ಲಿ. ದುಡಿಲಿಲ್ಲ ದುಕ್ ಬಡಿಲಿಲ್ಲ. ಮನಿಗೆ ಜೊಡಾಗ್ಯವು. ಎದ್ದು ಹ್ವಾರೆ ಗಿರೆ ಮಾಡದಬಿಟ್ಟು ದನ ಬಿದ್ದಂಗ ಬಿದ್ದವು. ನನಗ ಹೆಗಲೇರಿ ಕುಂತಾವು ದೆವ್ವಗಳು ಅಂತಾ ಬೈತಾನ. ನಾವು ಯದಕ ಬೈತಿ ಅಂದ್ರ ಸುಮ್ ಅಕ್ಕನ. ನಮ್ ಅವ್ವಗುನು ಹಂಗ ಬೈತಾನ. ೪ ಹೆಣ್ ಹಡದು ನನಗ ಜೊಡ್‌ಮಾಡಿ ಕುಂತಾಳ ಹಾದ್ರಗಿತ್ತಿ ಅಂತಾನ. ಮಾತೆತ್ತಿದ್ರ ಇವ ಬೈಗ್ಳ. ಕೇಳಿ ಕೇಳಿ ಸಾಕಾಗಿರುತ್ರಿ ಟೀಚರ. ಅವ ಆಡ ಮಾತಿಗೆ ನಮ್ ಅವ್ವ ಯಾಕರ ಹುಟ್ಟಿದ್ರಿ ನನ್ ಜೀವ ತಿನ್ನಕ ಅಂತ ನಮಗ ಹೊಡ್ಯಾಕ ಸುರು ಮಾಡತಾಳ. ನಮ್ ದೊಡ್ ಅಕ್ಕಗ ಬಿಟ್ಟು ಎಲ್ಲಾರಿಗೂ ಹೊಡಿತಾಳ ನಮ್ ಅವ್ವ, ಸತ್ತರ ಹೊಗ್ರಿ ಅಂತ. ಆಮ್ಯಾಲೆ ತಾನ ಎಲ್ಲಾರನೂ ತೊಡಿಮ್ಯಾಲೆ ಹಕ್ಕೊಂಡು ಅಳಕ ಸುರು ಮಾಡತಾಳ. ಪಾಪ ಅನುಸುತ ನಮ್ ಅವ್ವಗ ನೋಡಾಕ. ನಾವ ಹುಟ್ಲಿಲ್ಲ ಅಂದಿದ್ರ ನಮ್ ಅವ್ವ ಚೆಂದಿರತಿದ್ಲಲ್ಲಾ ಅನುಸುತ್ತ. ನನಕೂ ದೊಡ್ ಅಕ್ಕ, ನನಗ ಓದಕ ಮನಸಾಗಲ್ಲ ಹಿಂಗೇಲ್ಲಾ ಆದ್ರ ಅಂತ ಅಳತಾಳ. ನನಗೇನ್ ಹಂಗಿಲ್ಲ. ಎಷ್ಟರ ಯಾಕ ಬೈಯವಲ್ನಕ ತಲಿಗೆ ಹಕ್ಕೊಳಲ್ಲ. ಯಾಕಂದ್ರ ನಮ್ ಅಪ್ಪ ನಮ್ ಅವ್ವಗ ಬಿಟ್ರ ನಮಗ್ಯಾರಿಗೂ ಹೊಡಿಯಲ್ಲ. ಬೈತಾನ ಅಷ್ಟ. ಬೈಕೋತ ಹೊಲದ ಕಡೆ ಮ್ಯಾಲೆ ಮಾರಿ ಮಾಡಕೊಂಡು ಹೊಗಿನ್ನ ಸಾಕು ಅಂತ ಹೇಳತಿನಿ. ಅವಾಗ ತಾನ ಸುಮ್ನಕ್ಯಾನ. ಒಮ್ಮೊಮ್ಮೆ ನಾನ ಕಾಡಸ್ತಿನಿ ನಮ್ ಅಪ್ಪಗ.

ಯಪ್ಪಾ ದಿನಾ ಬೈದಿದ್ದ ಬೈತಿ. ಒಂದ ತರ ಮಂತ್ರ ಕೇಳಿ ಬ್ಯಾಸರಾಗ್ಯದ ಬ್ಯಾರೆ ಏನರ ಬೈಯಿ ಹೊಸಾವು ಅಂತಿನಿ. ಅವಾಗ ನಮ್ ಅಪ್ಪ ಇದಿ, ಇದಿ ಆಗಿರಿ ನನಗ ಹಿಂಗ ಕಾಡಕ ಅಂತಾ ಹೊಡಿಯಕ ಬಂದಂಗ ಮಾಡತಾನ. ನಮ್‌ದ ಇಷ್ಟು ಹೊಲ ಇದ್ರೂ ನಮ್ ಅಪ್ಪ ನಮಗ ಏನು ಕೊಡಸಲ್ಲ. ಎಲ್ಲಾ ನಮ್ ಅವ್ವನ ಅಣ್ಣಾರು ಕೊಡಸತಾರ. ಗಂಡ್ ಹಡದ್ರ ಬೇಕು ಮುಂದ ಈಡು (ಆಸ್ತಿ) ಅಂತಾನ ಕೇಳಿದ್ರ, ಹೆಣ್ ಮಕ್ಕಿಗೆ ಮಾಡಿದ್ರ ಏನ ಬರುತ್ತ ಶ್ಯಂಟಾ. ಗಂಡ ಮಗಾ ಆದ್ರ ದುಡುದರ ಹಾಕತಾನ ಅಂತಾನ. ನಾನು ದುಡುದು ಜ್ವಾಪಾನ ಮಾಡತಿನಾಳ್ಯಪ್ಪಾ ಅಂದ್ರ ಉಸು ಬಿಡ ಮಾತಾಡಬ್ಯಾಡ ಅಂತಾನ ಹೊಲಸು. ಅವ ಬೈಯ್ಯ ಬೆಗಳದ ಒಂದ ಅರ್ಥನೂ ಗೊತ್ತಿಲ್ಲ ನನಗ. ಆದ್ರ ಅವು ಹೊಲಸ ಬೈಗ್ಳ ಅನ್ನದಾಟ ಗೊತ್ತು.

ಮನ್ನೆ ಜನಗಣತಿ ಮಾಡಾಕಾ ಬಂದಿದ್ರು, ಅದು ನಮ್ ಸರ‍್ರ ಬಂದಿದ್ರು ಮಾಹಿತಿ ತಗೊಳಕ. ಅವ್ರು ಎಷ್ಟ ಮಂದಿ ಮಕ್ಕು ಅಂತ ಕೇಳಿದ್ರ ೪ ಅದಾವು ನೋಡ್ರಿ ಹೆಣ್ಣು, ದೆವ್ವಿದ್ದಂಗ ಅಂದ. ನಮ್ ಅಕ್ಕ ಕಾಲೇಜಿಗೆ ಹೊಗಾಕಿ, ಅಕಿ ನಮ್ ಅಪ್ಪ ಅಂದಿದ್ದನ್ನ ಮನಸಿಗೆ ತಗೊಂಡು ಎಲ್ಲಾರ ಜೊಡ್ ಮಾತಾಡದ ಬಿಟ್ ಬಿಟ್ಲು ಮನ್ಯಾಗ. ಹಸಯ್ಯ, ಬಂದಾರ ಮುಂದ ಅದು ಕಲಿಸಿದ ಮಾಸ್ತಾರ ಮುಂದ ಹಂಗಂದ್ರ ಹೆಂಗಾಗಲ್ರಿ, ಮಾಹಿತಿ ಕೇಳಕ ಬಂದಾರು ಆಮ್ಯಾಲೆ ಮನಿ ಮಾಲಕ ನೀನಅನಪ ಅಂದ್ರು, ಅದಕ್ಕ ನಾನು ಸುಮ್ನಿರಲಿಲ್ರಿ, ಹೂ... ರಿ ಇವ್ನ ದೆವ್ವ ಹುಟ್ಟಸಿದ ದೊಡ್ಡ ದೆವ್ವ ಅಂತ ಹೇಳಿದ್ಯಾ. ಅವ್ರು ಅಪ್ಪಗ ತಕ್ಕ ಮಗ್ಳು. ಹೆಣ್ ಮಕ್ಕು ಹಿಂಗ ಬೊಲ್ಡ ಆಗಿ ಇರಬೇಕು ಅಂತ ಹೇಳಿ ಹೊದ್ರು, ಓದದ್ರಾಗ ನಾನು, ನಮ್ ಅಕ್ಕ, ತಂಗಿ ಎಲ್ಲಾರೂ ಫಸ್ಟ್ ಅದಿವಿ. ಯಾರರ ಟೀಚರ್ಸ್ ನಮ್ ಅಪ್ಪಗ ನಿಮ್ ಮಕ್ಕು ಬಾಳ ಹುಶಾರದಾರ‍್ರಿ ಅಂತ ಹೇಳಿದ್ರ, ಅದರದರ ಗಂಗಾಳದ ಮುಂದ ಅಂತ ಅವ್ರಿಗೆ ಮುಖದ ಮ್ಯಾಲೆ ಹೇಳಿಬಿಡತಾನ. ಹಿಂಗ್ ನಮ್ ಟೀಚರ್ ಮುಂದ ಮರ್ಯಾದಿ ತಗಿಯದಕ್ಕ ನನಗ ಜಗ್ಗ ಸಿಟ್ ಬಂದಿರುತ್ತ. ಏನ್ ಮಾಡದು. ಹೋಗಿ ನಮ್ ಅವ್ವನ ಮುಂದ ಒದ್ರ್ಯಾಡತಿನಿ ಸುಮ್ ಅಕ್ಕಿನಿ. ನಮ್ ಅಪ್ಪಗ ಎದುರು ಮಾತಾಡಕ್ಯಂದ್ರ ನಾನೊಬಾಕಿನರಿ ಟೀಚರ. ನಮ್ ಅಕ್ಕದಿರು, ತಂಗಿ ಬೈಸ್ಕೊಂಡು ಸುಮ್‌ನಿದ್ ಬಿಡತಾರ. ಮತ್ ಅವ ನಮ್ ಅವ್ವಗ ತ್ರಾಸ ಮಾಡತಾನಂತ. ಪಾಪ, ದಿನಾ ಇದ ನೋಡ್ರಿ ನಮ್ ಮನ್ಯಾಗ. ಇವತ್ತು ಚಾ ತುಸು ಆರಿದ್ ಕೊಟ್ಟೆ ಅಂತ ಹೆಂಗ್ಸಾಗಿ ಬಿಸಿ ಚಾ ಕೊಡಬೇಕನ್ನದು ಗೊತ್ತಿಲ್ಲನು. ಉಚ್ಚಿ ಅಂತ ಚಾ ಕೊಟ್ಟಿ ಅಂತ ಬೈದ. ಅದನ್ ಕುಡಿಯಕ ಲಾಯಕ್ಕು ನೀ ಅಂತ ಹೇಳಿದೆ. ಅದಕ ಸಿಟ್ಟಿಗೆ ಬಂದು ಚಾ ವಾಟೆನ ನಮ್ಮ ಅವ್ವಗ ಬೀಸಿ ಒಗದ ಬಿಟ್ಟಾ. ನಾನ್ ಮಾಡಿದ ತಪ್ಪಿಗೆ ನಮ್ ಅವ್ವಗ ಹೆಟ್ ಬಿತ್ತು. ಅದಕ ಅವ ಏನಂದ್ರು ಅನಸ್ಕೊಂಡು ಸುಮ್ನಿದ್ ಬಿಡತಿನ್ರಿ ಟೀಚರ ಇನ್ನ. ಎಲ್ಲಾರ ಮನ್ಯಾಗೂ ಹೆಣ್ ಮಕ್ಳ ಮ್ಯಾಲೆ ತಂದಿ ಆದಾರು ಎಷ್ಟ ಜೀವ ಇರತಾರಂತ. ನಮ್ ನಸಿಬ ನೋಡ್ರಿ ಹೆಂಗೈತಿ. ತಂದಿ ಪ್ರೀತಿ ಪಡಕೊಂಡು ಬಂದಿಲ್ರಿ ನಾವು. ಪಾಪ ನೀವರ ಏನ್ ಮಾಡಿರಿ.

ಪ್ರಕರಣ – ೧೧

ಹೆಸರು – ಸರ್ವೇಶ್ವರಿ

ವಯಸ್ಸು – ೨೯

ಜಾತಿ – ಕುರುಬರು

ಊರು – ಹಿಟ್ನಾಳ್

ಬಾಗಲಕೋಟೆ ನಮ್ ಊರು. ನಾನು ಓದ್ ಕೊಂಡಿದ್ದೇಲ್ಲಾ ಬೆಂಗಳೂರಲ್ಲಿ. ನಮ್ದು ಲವ್ ಮ್ಯಾರೇಜ್. ಎಮ್.ಬಿ.ಎ ಮಾಡಕೊಂಡಿದಿನಿ. ೧ಂದು ಪ್ರತಿಷ್ಠಿತ ಕಂಪನಿಯೊಳಗೆ ಜಾಬ್ ಮಾಡತಿದ್ದೆ. ಆಗ ನನಗೆ ನಮ್ ಮನೆವ್ರ ಸ್ನೇಹ ಆತು. ಅವ್ರು ಅದೇ ಕಂಪನಿಯಲ್ಲಿ ಜಾಬ್ ಮಾಡತಿದ್ರು, ಅಸಿಸ್ಟಂಟ್ ಇಂಜಿನೀಯರ್ ಆಗಿ ಕೆಲಸ ಮಾಡತಿದ್ರು, ನಾವು ಪವಾರ, ಅವುರು ಕುರುಬ. ಮನೆಲಿ ನಮ್ ಮದ್ವೆಗೆ ಒಪ್ಪಿದ್ದಿಲ್ಲ ಅಂತ ನಾವೆ ಮದ್ವೆ ಆದ್ವಿ, ಫ್ರೇಂಡ್ಸ್ ಸಮ್ಮುಖದಲ್ಲಿ. ಅದಕ್ಕೆ ನಮ್ ತಂದೆ, ತಾಯಿ ಮಾತಾಡೊದನ್ನೆ ಬಿಟ್ರು, ಆದರೆ ನಮ್ ಯಜಮಾನು ಮನೆವ್ರು ಮನೆಗೆ ಕರಕೊಂಡು ಚೆನ್ನಾಗೆ ನೋಡಕೊಂಡ್ರು, ಇಬ್ರೆ ಗಂಡ್‌ಮಕ್ಳು ನಮ್ ಅತ್ತೆ, ಮಾವರಿಗೆ. ನಮ್ ಮನೆವ್ರೆ ಹಿರಿಯೊರು. ಅವ್ರು ಕಡೆ ಎಲ್ಲಾ ತುಂಬಾ ಚೆನ್ನಾಗೆ ಟ್ರಿಟ್ ಮಾಡತಾರೆ ನಮ್ಮನ್ನ. ಈಗ ಹಿಟ್ನಾಳ್‌ದಲ್ಲೆ ಇದಿವಿ ೨ ವರ್ಷ ಆಯ್ತು. ನಮ್ ಯಜಮಾನ್ರು ತುಂಬಾ ಒಳ್ಳೆವ್ರು ಆದ್ರೆ ಬಾಯಿ ಮಾತ್ರ ತುಂಬಾನೆ ಹಗುರ. ಕೆಟ್ ಪದಗಳನ್ನೆಲ್ಲಾ ತಪ್ಪೇ ಅಲ್ವೆನೋ ಎಂಬಂತೆ ಮಾತಾಡಿಬಿಡತಾರೆ. ನನಗೆ ಮಾತ್ರ ಹಾಗೆ ಮಾಡತಾಡೊದು ಅನಕೊಂಡಿದ್ದೆ. ಆದ್ರೆ ಅವ್ರು ಮನೆಲೆಲ್ಲಾ ಹೀಗೆ ಮಾತಾಡೊದು. ಮದ್ವೆಕೂ ಮುಂಚೆ ಈ ತರ ಒಂದು ಮಾಡು ಆಡಿರ್‍ಲಿಲ್ಲ. ಮದ್ವೆ ಆದ ಮೇಲೆ ದಿನ ಕಳದಾಗೆ ಶುರು ಮಾಡಿದಾರೆ. ತುಂಬಾ ಹಿಂಸೆ ಅನುಸುತ್ತೆ ಅವ್ರು ಮಾತಾಡೊ ಮಾತಗಳನ್ನ ಕೇಳಿದ್ರೆ, ಮನೆ ಕೆಲಸದಲ್ಲಿ ಸಣ್ಣ ಪುಟ್ಟ ತಪ್ಪು ಮಾಡಿದ್ರು ಮೈಗಳ್ಳಿ, ಕೆಲಸ ನಿಟಾಗಿ ಮಾಡಕಾಗೊಲ್ವಾ ಅಂತಾರೆ. ಮದ್ವೆ ಆದ ವರ್ಷನೆ ಒಂದು ಮಗು ಆಯ್ತು. ನನಗೆ ಅಭ್ಯಾಸ ಇಲ್ಲದಕ್ಕೆ ನೋಡಕೊಳದು ಕಷ್ಟ ಆಗತಿತ್ತು. ಅದಕ್ಕೆಲ್ಲಾ ತುಂಬಾ ಕೆಟ್ಟದಾಗಿ ಮಾತಾಡೊರು. ನನಗೆ ಅವುಗಳನ್ನ ಅರಗಿಸಕೊಳೊಕೆ ಆಗತಿರಲಿಲ್ಲ. ಕೊನೆಗೆ ಹೆಗಾಗಿದೆ ಅಂದ್ರೆ, ಅವ್ರು ಬೈಯ್ಯೊ ಮಾತಗಳನ್ನ ಡಿಕ್ಷನರಿನಲ್ಲಿ ಹುಡುಕೊಕೆ ಶುರು ಮಾಡಿದೆ. ಅವು ಎಷ್ಟ ಕೆಟ್ಟದಾಗಿದ್ವು ಅಂದ್ರೆ ಹೇಳಕಾಗಲ್ಲ. ಇಷ್ಟ ಓದಕೊಂಡು, ಒಳ್ಳೆ ಕೆಲಸದಲ್ಲಿದ್ದು ಇಂತ ಮಾತಾಡೊಕೆ ಮನಸಾದ್ರು ಹೇಗೆ ಒಪ್ಪುತ್ತೆ ಅಂತಾ ಕೇಳಿದೆ. ಅದಕ್ಕೆ ಅವರು 'ನೀನು ನಡಕೊಳೊ ರೀತಿಗೆ, ನೀನು ಹೇಳಿದ್ಯಲ್ಲಾ ಈಗ ಅದೆನೋ ಮನಸಂತ, ಆ ಮನಸಿಂದಾನ ಬರತಾವು ನಾನಾದ್ರು ಏನ್ ಮಾಡ್ಲಿ ಅಂತಾರೆ.

ನನಗೆ ಮನೆ ಕೆಲಸ, ಮಗು ಜವಾಬ್ದಾರಿ ಹೆಚ್ಚಾಗಿ ಸರಿಯಾಗಿ ನಿಬಾಯಿಸೊಕೆ ಆಗ್ದೆ ಬೈಸ್ಕೊಳೊದು ಹೆಚ್ಚಾಯ್ತು. ಅದಕೆ ಜಾಬ್‌ನು ಬಿಟ್ಟೆ. ಮಗನಿಗೆ ಈಗ ೪ ವರ್ಷ. ಇಲ್ಲೆ ಸೆಟ್ಲ ಆಗಿಬಿಟ್ವಿ, ಕಾರಣ ನಮ್ ಮನೆಯವರಿಗೆ ರಾಜಕಾರಣದಲ್ಲಿ ಬೇರಿಬೇಕು ಅನ್ನೊ ಹುಚ್ಚು. ನಮ್ ಮಾವನೂ ರಾಜಕೀಯದಲ್ಲಿದಾರೆ. ಆ ನಂಟು ನಮ್ ಮನೆಯವರಿಗೂ ಇದೆ. ನಾನು ಮಗೂನ ಕರಕೊಂಡು ಜಾಬ್ ಮಾಡಕೊಂಡು ಬೆಂಗಳೂರಲ್ಲಿ ಒಬ್ಬೆ ಇರೊದೆನು ಅಂತ ಅವ್ರ ಹಿಂದೆ ಬಂದೆ. ಇಲ್ಲಿ ಏನು ತೊಂದ್ರೆ ಇಲ್ಲ. ಅತ್ತೆ ಮನೆ ಅಂದ್ರೆ ಹಾಗಿರುತ್ತೆ, ಹೀಗಿರುತ್ತೆ ಅಂತ ಕೇಳಿದ್ದೆಲ್ಲಾ ನನ್ನ ಜೀವನದಲ್ಲಿ ಸುಳ್ಳಾಗಿವೆ. ಅವ್ರಿಗೊಸ್ಕರ ಬಂದಿದಿನಿ ಅಂತ ತುಂಬಾ ಪ್ರೀತಿಲೆ ಕಾಣತಾರೆ ಮನೆಲಿ ಎಲ್ಲಾ. ಆದ್ರೆ ಆ ಕೆಟ್ಟ ಪದಗಳಿಂದ ಬೈಯೊದ ಮಾತ್ರ ಸಹಿಸೊಕಾಗತಿಲ್ಲ. ಎಲ್ಲಾ ಎಲ್ಲಾರಿಗೂ

ಬೈತಾನೆ ಅಡ್ಡಾಡತಾರೆ. ನನಗೆ ಅದನ್ನ ಕೇಳಿಸ್ಕೊಳ್ಳೊಕೆ ಹಿಂಸೆ ಆಗಿರುತ್ತೆ. ಮಗಾನೂ ಇದನ್ನೆಲ್ಲಾ ಕಲತ್ರೆ ಅಂತ ಆತಂಕ ಆಗತಿರುತ್ತೆ. ಕುಡಿಯೊಕೆ ನೀರು ಕೊಡೊದು ಸ್ವಲ್ಪ ಲೆಟಾದ್ರು ನಮ್ ಮನೆವ್ರು ಬೈತಾರೆ. ಮನೆವ್ರೇಲ್ಲಾ ಇರತಾರೆ ಬೈಬೇಕಾದ್ರೆ ನನಗಂತೂ ಮುಜುಗರ ಆಗ್‌ತಿರುತ್ತೆ. ನಮ್ ಮನೆವ್ರ ತಮ್ಮನ್ನು ಹಾಗೆ. ಅವ್ರ ವೈಫ್‌ಗೆ ಹೀಗೆ ಬೈತಿರತಾರೆ. ಅವ್ರು ಅದ್ವೆಗ್ ಸಹಿಸಕೊತಾರೊ ಗೊತ್ತಿಲ್ಲ. ನಿಮಗೆನು ಅನುಸೊದಿಲ್ವೆ ಅಂತ ಕೇಳಿದ್ರೆ ನಮ್ ಓರಗಿತ್ತಿ ಗಂಡ ಅಂದ್ರೆನಾತು. ಆಶಿರ್ವಾದ ಇದ್ದಂಗ ಅದೆಲ್ಲಾ ಒಂದುತರ ಅಂತಾಳೆ. ಏನ್ ಹೇಳ್‌ಬೇಕೊ ಅಂತಾರಿಗೆ. ನನಗಂತು ಸಹಿಸೊಕೆ ಆಗತಿಲ್ಲಾ. ತುಂಬಾ ಪ್ರೀತಿ ಮಾಡತಾರೆ ನಮ್ ಮನೆವ್ರು ತುಂಬಾ ಕೆರ್ ತಗೊತಾರೆ. ಅವ್ರನ್ನ ಬಿಟ್ಟು ಇರೊಕು ಆಗೊಲ್ಲಾ. ಹಾಗಂತ ಕೆಟ್ಟ ಪದಗಳನ್ನ ಉಪಯೋಗಿಸಿ ಬೈಯ್ಯೊದನ್ನ ಸಹಿಸ್ಕೊಳಕೂ ಆಗತಿಲ್ಲ. ಆ ಬೈಗುಳಗಳ ಅರ್ಥ ಕೇಳಿದ್ರೆ ತುಂಬಾ ಅವಮಾನ ಅನುಸುತ್ತೆ. ನನ್ ಸ್ವಾಭಿಮಾನ ಇದನ್ನೆಲ್ಲಾ ಸಹಿಸ್ಕೊಂಡು ಬದುಕಬೇಡಾ ಅಂತಿರುತ್ತೆ. ಟೊಟಲಿ ತುಂಬಾ ಕಂನ್‌ಪ್ಯೂಷನ್‌ನಲ್ಲಿ ಬದಕತಿದಿನಿ ನಾನು.

೫.೧.೪. ಭಾವನಾತ್ಮಕ ಹಿಂಸೆ

ಪ್ರಕರಣ – ೧೨

ಹೆಸರು – ಸುಮಲತಾ

ವಯಸ್ಸು – ೩೭

ಜಾತಿ – ಲಿಂಗಾಯತ

ಊರು – ಕೊಪ್ಪಳ

ನಮ್‌ದು ಲವ್ ಮ್ಯಾರೇಜ್ ಮೆಡಂ. ನಾನು ನಮ್ ಮನೆವ್ರು ಕ್ಲಾಸ್‌ಮೆಟ್ಸ್. ಎಲ್‌ಎಲ್‌ಬಿ ಓದುಬೇಕಾದ್ರೆ ಧಾರವಾಡದಲ್ಲೇ ಲವ್ ಮಾಡಿದ್ವಿ ನಮ್ ಮನೆಯವರ ಊರು ಕೊಪ್ಪಳ. ನನ್‌ದು ಗದಗ. ಕಾಸ್ಟ್ ಪ್ರಾಬ್ಲಮ್ ಇಂದ ಯಾರು ನಮ್ ಮದ್ವೆಗೆ ಒಪ್ಲಿಲ್ರಿ. ನಮ್ ಮನೆವ್ರು ನೇವಾರ ಜಾತಿಯೊರು. ನಾವು ಲಿಂಗಾಯತ. ಅದಕ ನಾವೇನ್ ಮಾಡಿದ್ವಿ ಫ್ರೆಂಡ್ಸ್ ಕರಕೊಂಡು ಹೋಗಿ ದೇವಸ್ಥಾನದಾಗ ಮದ್ವೆ ಆಗಿಬಿಟ್ವಿ ಸ್ಪಡಿ ಕಂಪ್ಲಿಟ್ ಆದ್ ಮೇಲೆನೆ ಮದ್ವೆ ಆಗಿದ್ದು. ಮದ್ವೆ ಆದನಂತರ ನಾ ಜ್ವಾಬ್‌ಗೆ ಹೊಗ್ಲಿಲ್‌ರಿ. ನಮ್ ಮನೆವ್ರು ಕಟ್ಟಿಮನಿ ಸರ್ ಹತ್ರ ಜೂನಿಯರ್ ಆಗಿ ಪ್ರಾಕ್ಟಿಸ್‌ಗೆ ಹೊದ್ರು, ನೋಟ್ರಿಗಳನ್ನ ಮಾಡಸದು, ಟ್ಯಾಕ್ಸ ಪೇಪರ್‌ಗಳನ್ನ ರೆಡಿ ಮಾಡಸದು ಹಿಂಗ ಸಣ್ಣಪುಟ್ ಕೆಲಸ ಮಾಡಕೋತ ಹೊದ್ರು, ನಾವು ಮದ್ವೆ ಆಗಿಂದ ಬೇರೆ ಮನೆನೆ ಮಾಡಿದ್ವಿ. ಯಾವದನ್ನು ತಲೆಗೆ ಹಚ್‌ಕೊಲಿಲ್ಲ. ನಾವು ತಪ್ ಮಾಡಿಲ್ಲ ಅನ್ನ ವಿಶ್ವಾಸ ಇತ್ತು. ಮೇಲಾಗಿ ಇಬ್ರು ಚೆನ್ನಾಗೆ ಇದ್ವಿ. ಶುರುವಿಗೆ ಜೀವನ ಹೇಗೊ ನಡಿತು.

ಅಷ್ಟೋತ್ತಿಗಾಗ್ಲೆ ನಮ್ ಮನೆವ್ರು ತಾವೆ ಕೆಸ್‌ಗಳನ್ನ ಡಿಲ್ ಮಾಡೊಕೆ ಪ್ರಾರಂಭ ಮಾಡಿದ್ರು. ನಮಗೆ ಅವಳಿ ಜವಳಿ ಮಕ್ಳಾದ್ವು ಈಗ ಮಕ್ಳಿಗೆ ೪ ವರ್ಷ. ಹೆಸರು ಸತಿಶ್, ನಿತಿಶ್ ಅಂತ. ನಮಗೆ ಮಕ್ಳಾದ ಕಷ್ಟಾನೊ, ಸುಖಾನೊ ಸಣ್ಣ ಪುಟ್ಟ ಮನಸ್ತಾಪಗಳ ಮಧ್ಯೆ ಜೀವನ ಕಳದ್ವಿ, ನಮಗೆ ಮಕ್ಳಾದ

ನಂತರ ನನ್ ಗಂಡನ ಮನೆಯವರೊಟ್ಟಿಗೆ ಸಂಪರ್ಕ ಬೆಳಿತು. ಆದ್ರೆ ನಮ್ ತಂದೆ-ತಾಯಿ ಮಾತ್ರ ಇವತ್ತಿಗೂ ನನ್ ಮಕ್ಳ ಮುಖ ನೋಡಿಲ್ಲ. ಅದ್ರೆ ಇತ್ತೀಚೆಗೆ ಅಪ್ಪ ನಮ್ ತಾಯಿ ಫೋನ್‌ನಲ್ಲಿ ಮಾತಾಡಕತ್ತಾರ.

ಕಳೆದ ಎರಡು ವರ್ಷಗಳಿಂದ ಯಾಕೊ ನನ್ ಮನಸ್ಥಿತಿ ಬಾಳ ಹದಗೆಟ್ ಹೊಗ್ಯದ. ನಮ್ ಮನೆವ್ರು ಮಾತುಗಳೆ ನನಗೆ ಹೇಳಕಾಗ್‌ದಿರಷ್ಟು ನೋವು ತರತ್ತಿವೆ. ಆರ್ಥಿಕವಾಗಿ ಬಿಕ್ಕಟ್ಟು ಇದ್ದಾಗೆಲ್ಲಾ ನಾವಿಬ್ರು ಜಗ್ಳಾ ಆಡತಿದ್ವಿ ಮತ್ತೆ ಒಂದಾಗತಿದ್ವಿ, ನನಗ ನಿನ್ ದಿಕ್ಕು, ನಿನಗ ನಾನ ದಿಕ್ಕು ಅಂತ ರಾಜ್‌ಕುಮಾರ್ ಫಿಲ್ಮ್‌ದು 'ಪ್ರೀತಿನೆ ಆ ಆದ್ಯಾವ್ರು ತಂದ ಆಸ್ತಿ ನಮ್ಮ ಬಾಳ್ವೆಗೆ..........' ಅಂತ ಇಬ್ರು ಹಾಡ್ತಾ ಹಾಡ್ತಾ ಒಂದಾಗತಿದ್ವಿ, ಅಷ್ಟ ಕಷ್ಟದಾಗ ಜೋಕ್ ಮಾಡ್ತಾ ಒಂದಾಗತಿದ್ವಿ, ಆದ್ರ ಯಾವಾಗ ನಮ್ ಮಾವ, ಅವ್ರ ಮನೆ ಕಡೆವ್ರೆಲ್ಲಾ ನಮ್ ಮನಿಗೆ ಬರೋಕೆ ಶುರುಮಾಡಿದ್ರೊ ಅವತ್ತಿಂದ ನಮ್ ನೆಮ್ಮದಿನ ಹಾಳಾಗಿ ಹೊಗ್ಯದ. ನಮ್ ಅತ್ತಿ ಸತ್ತು ೫ ವರ್ಷ ಆಯ್ತು. ನಮ್ ಮದ್ವೆ ಆಗಿ ಎರಡ ವರ್ಷಕ್ಕ ತೀರಕೊಂಡ್ರು ಆರಾಮಿಲ್‌ದಂಗಾಗಿ.

ನಮ್ ಅತ್ತಿ ಸತ್ತಾಗ ಬೈದೆ ಇರೊರು, ಈಗ ನಮ್ ಅವ್ವ (ತಾಯಿ) ಸಾಯಕ ನೀನ ಕಾರಣ ಅಂತೆಲ್ಲಾ ಸುಮ್‌ಸುಮ್‌ನೆ ಬೈತಾರ. ನಮ್ ಅತ್ತೆ ಸತ್ತಾಗ ಅವ್ರ ಅಣ್ಣ ತಮ್ಮಂದಿರು ಮಣ್ ಹಾಕೊಕೆ ಬಿಟ್ಟಿದ್ದಿಲ್ಲ. ನೀ ಮನಿ ಬಿಟ್ ಹೊದಾವ ಅಂತ. ಅವಾಗ ಸುಮ್‌ನಿದ್ದೊರು ಈಗ ನಿನ್‌ಲಿಂದನ ನಾ ನಮ್ ಅವ್ವಗ ಮಣ್ ಹಾಕ್ಲಿಲ ಅಂತಾರ. ನನಗ ಅವ್ರು ಇಂತ ಮಾತು ಅನಬೇಕಾದ್ರ ಜೀವ ಕುತಗಿಗೆ ಬಂದು ಕುಂತಗಾಗಿರುತ್ತ. ನಮ್ ಮಾವ ಬರ್ತಾರೆ ಆವಗವಗ ಮನೆಗೆ. ನನ್ ಹತ್ರಾನು ಮಾತಾಡ್ತಾರೆ. ಆದ್ರೆ ಅವರ ಮನೆಗೆ ಸಂಬಂಧ ಪಟ್ಟ ಯಾವ ವಿಚಾರನೂ ಮಾತಾಡಿಲ್ಲ ಇವತ್ತಿನ ತನ. ನಮ್ ಮನೆವ್ರನ್ನ ಮಾತ್ರ ಹೊರಗಡೆ ಕರಕೊಂಡು ಹೋಗಿ ಮಾತಾಡ್‌ಕೊಂಡು ಬರ್ತಾರೆ. ನಮ್ ಮನೆವ್ರಿಗೆ ಏನ್ ಮಾತಾಡಿದ್ರಿ, ವಿಷ್ಯ ಏನು ಅಂದ್ರ ನಿನಗ್ಯಾಕೆ ನಮ್ ಮನಿ ವಿಚಾರ ಅಂತರ. ನನಗ ಅವಾಗ ಕಣ್ಣಾಗ ನೀರು ಬಂದಬಿಟ್ಟಿರತಾವು. ಹಾಗಾದ್ರೆ ನಾನೇನು ಸಂಬಂಧನ ಇಲ್ವಾ ಇವ್ರಿಗೆ ಅಂತಾ. ಇಂತವೆಲ್ಲಾ ವಿಚಾರ ಬಾಳಾ ಮಾನಸಿಕ ಆಗಂಗ ಮಾಡ್ಯಾವ್ರಿ. ನನ್ ಜೊತೆಗೆ ನನ್ ತಂದಿ, ತಾಯಿ ಇದ್ದಿದ್ರ ಹಿಂಗಾಗ್ತಿದ್ದಿಲ್ಲೆನೋ ಅಂತನೋವಾಗುತ್ತ ಒಮ್ಮೊಮ್ಮೆ. ಕೊನೆ ಪಕ್ಷ ನೌಕ್ರಿಗಾದ್ರು ಹೊಗ್‌ಬೇಕಂದ್ರೆ ಎರಡು ಮಕ್ಳು ಕಟಗೊಂಡು ಹೇಗ್ ಮಾಡೊದು. ನೌಕ್ರಿಗಾದ್ರು ಹೋಗಿದ್ರೆ ಮನಿ ಟೆನ್‌ಷನ್ ಆದ್ರು ಮರಿಬೊದಿತ್ತೆನೊ ಅವಾಗ. ಅದುಕು ದಾರಿ ಇಲ್ದಂಗ ಆಗ್ಯಾದ. ನನಗ ಏನ ಮಾಡಬೇಕು ಅಂತ ತಿಳಿದೆ ಒಮ್ಮೊಮ್ಮೆ ಮೈಂಡ್ ಸ್ಟ್ರಕ್ ಆಗಿಬಿಟ್ಟಿರುತ್ತೆ. ಕಲುತು ಕಲಿಲಾರ್‌ದಂಗ ಆಗ್ಯಾದ ನನ್ ಜೀವ್ನ. ಇಂತ ಮಾನಸಿಕದಿಂದ ಹೊರಗ ಬರಕ ಯಾವ್ ದಾರಿನೂ ಕಾಣತಿಲ್ಲ ಮೆಡಂ ನನಗ.

ಇಂತದರ ಮಧ್ಯ ಮತ್ತಷ್ಟು ನಮ್ ಮನಿಯವ್ರ ನಡವಳಿಕೆ ದಿನದಿಂದ ದಿನಕ್ಕೆ ಬದ್ಲಾಗತಿದೆ. ನಮ್ ಮಾವರ ಮನೆಲಿ ಏನಾದ್ರು ಫಂಗ್‌ಶನ್ ಇದ್ರೆ ನಮ್ ಮಾವಾ ನಮ್ ಮನೆಯವರಿಗೆ ಹೇಳ್ತಾರೆ. ಅವ್ರು ನನಗೆ ಹೇಳ್ತಾರೆ. ನನಗೆ ನೇರವಾಗಿ ಯಾರು ಕರಿಯೋದಿಲ್ಲ. ನಮ್ ಮನೆವ್ರು (ಗಂಡ) ಯಾವುದೇ ಕಾರಣಗಳಿದ್ರು (ಫಂಗ್‌ಶನ್ಸ್) ೫, ೬ ದಿನದಿಂದ್ಲೆ ಹೋಗಿ ಬಂದು ಎಲ್ಲಾ

ಕೆಲಸ ಮಾಡ್ತಾರೆ ಓಡಾಡಿ. ನಮನ್ ಮಾತ್ರ ಕಾರಣದ ದಿನ ಕರಕೊಂಡು ಹೊಗ್ತಾರೆ. ಯಾಕೆ ಹೀಗೆ ಅಂತ ಪ್ರಶ್ನೆ ಏನಾದ್ರು ಮಾಡಿದ್ರೆ ನಮ್‌ದು ಲವ್ ಮ್ಯಾರೇಜ್ ನೆನಪಿಲ್ವ ಅಂತಾರೆ. ನಮ್‌ದು ಅನ್ನೊದ್ರಲ್ಲಿ ನೀವು ಇದಿರಿ ಮರಿಬೇಡಿ ಅಂದ್ರೆ, ನಾನು ಈಗ್ಲೂ ಬೇಕಾದ್ರೆ ಅರೇಂಜ್ ಮ್ಯಾರೇಜ್ ಆಗ್‌ಬೋದು ಅಂತಾರೆ. ಆಗಿ ನೋಡೋಣ ಅಂದ್ರೆ ನೀ ಹೂ ಅನ್ನು ಈಗ್ಲೆ ಆಗ್ತಿನಿ ಅಂತಾರೆ. ನಾನು ಅತಂತ್ರ ಆಗಿಬಿಟ್ಟರ್‍ತಿನಿ ಅಂತ ಹೊತ್ನಾಗ. ಮುಂದ ಮಾತ ಇರದಿಲ್ಲ ಅವ್ರ ಆತರ ಅಂದಾಗ. ಎರಡ್ಮೂರ್ ಸರಿ ಆಗ್ಯದ್ರಿ ಹಿಂಗ.

ಬಹುಷ ಅವರ ಜಾತಿನಲ್ಲಿ ಮತ್ತೊಂದು ಮದುವೆ ಮಾಡ ವಿಚಾರ ಐತೆನೊ ಅವ್ರ ಮನೆಯವ್ರಿಗೆ. ಒಂದ ವೇಳೆ ಬೇರೆ ಮದ್ವೆ ಆದ್ರೆ ಬಾಳಾ ಕಷ್ಟ ಆಗುತ್ತೆ. ಕಾನೂನು ತಿಳಿದಿದ್ರು, ಅದ್ರಿಂದ ನ್ಯಾಯ ಪಡದ್ರೂ ಕಳಕೊಂಡ ಮಾನಸಿಕ ನೆಮ್ಮದಿ ಹೊಳ್ಳಿ ಬರದಿಲ್ಲ. ನಾ ಹೆಣ್ಣು, ಏನು ಮಾಡಕಾಗಲ್ಲ ಅಂತ ತಿಳಿದಾರ ಅವ್ರು. ನಾ ಕಾನೂನಿಂದ ಏನಾದ್ರೂ ಪರಿಹಾರ ಕಂಡುಕೊಬೋದು. ಆದ್ರ ಅದು ಸಮಸ್ಯೆಗೆ ಸರಿಯಾದ ಪರಿಹಾರ ಅನಸದಿಲ್ಲ. ಅದಕ ಹೆದರಿ ಅವ್ರೆನ್ ಮಾಡಿದ್ರು ನಾನ ಎಲ್ಲಾ ನುಂಗ್‌ಕೊಂಡು ಸುಮ್ನಾಗಿ ಬಿಟ್ಟಿದ್ದಿನಿ. ಆದ್ರ ಇಂತವೆಲ್ಲಾ ವಿಚಾರ ಮಾಡಿ ಮಾಡಿ ಡಿಪ್ರೆಶನ್‌ಗೆ ಹೋಗಿಬಿಟ್ಟಿನಿ. ಇದೆಲ್ಲಾದ್ರಿಂದ ನಾ ತಿಳುಕೊಂಡಿದ್ದು ಒಂದರಿ ಮೆಡಂ ಏನಾದ್ರು ತಪ್ಪು ಅಂತ ಮಾಡಿದ್ರೆ ಅವಾಗ ಸಮಾಜದಾಗ ಕ್ಷಮೆ ಇರದು ಗಂಡಿಗೆ ಮಾತ್ರರಿ, ಹೆಣ್ಣಿಗಲ್ಲ. ಯಾಕಂತ ಗೊತ್ತಿಲ್ಲ. ಜನಾನು ಅಕಿದೆನು ಲವ್ ಮ್ಯಾರೇಜ್ ಅಂತಾರೆ ನನ್ ಕಡೆ ಬೆಟ್ ಮಾಡಿ. ಇಷ್ಟು ಓದಕೊಂಡಿದ್ರು ಅಂತ ಮಾತು ಕೇಳಿದಾಗ ಮನಸು ಅಳುಕುತ್ತೆ. ಈ ಜನ ಯಾಕ್‌ಹಿಂಗ ಅಂತ. ಅದೆ ನಮ್ ಯಜಮಾನ್ರು ಮಾತ್ರ ತಲೆಗೆ ಹಾಕೊಳಲ್ಲ. ಅವ್ರಿಗೆ ಈ ತರಹದ ಮಾತುಗಳನ್ನ ಯಾರು ಆಡಿಲ್ಲ. ಗಂಡಿಗೆ ಇಲ್ಲದ ಅಂಜಿಕಿ, ಅಳುಕು ಯಾಕೆ ಹೆಣ್ಣಿಗೆ ಮಾತ್ರ ಇರೋದು ಅಂತ ಅರ್ಥಾನೆ ಆಗಿಲ್ಲ ಇವತ್ತಿನವರೆಗೂ.

ಗಂಡ್‌ನಿಂದ ಬಿಡುಗಡೆ ಆಗಕಂತೂ ಸಾಧ್ಯ ಇಲ್ಲ. ಇನ್ನ ಹೊಂದಕೊಂಡು ಹೊಗದೊಂದ ಬಾಕಿ ಮೆಡಂ. ಗಂಡನ ಜೊತೆ ಮೊದುಲು ಪ್ರೀತಿಲೆ ಇದ್ದಂಗೆ ಇರಕ ಪ್ರಯತ್ನ ಮಾಡತಿನಿ. ನಮ್ ಮನೆವ್ರು ಹೇಗೆ ಸಹಕಾರ ಕೊಡುತಾರೊ ಗೊತ್ತಿಲ್ಲ. ಬಾಳ ದಿನ ನಮ್ ಸಂಬಂಧ ಉಲಿಯುತ್ತೊ ಇಲ್ವೋ ಅದು ಗೊತ್ತಿಲ್ಲ. ಮಕ್ಳಿಗೋಸ್ಕರ ಬದುಕಿರೊದು ಮೆಡಂ. ಇಲ್ಲ ಅಂದ್ರೆ ಇಷ್ಟೋತ್ತಿಗೆ ನನ್ ಜೀವನ ಎಲ್ಲಿಗೆ ಹೋಗಿ ನಿಂತಿರತಿತ್ತೊ ಗೊತ್ತಿಲ್ಲ.

ಪ್ರಕರಣ – ೧೩

ಹೆಸರು – ಶಾರದಾ

ವಯಸ್ಸು – ೨೦

ಜಾತಿ – ಬಡಿಗೇರ

ಊರು – ಕಿನ್ನಾಳ

ನನ್‌ದು ಚೈಲ್ಡ್ ಮ್ಯಾರೇಜ್ ಮೇಡಂ. ಬಿ.ಎಸ್ಸಿ ಓದತಿರೋದು. ಗಂಡನ ಮನೆಗೆ ಕಳಿಸಿಲ್ಲ ಇನ್ನು. ನಮ್ ಮನೆಯವರು ಸೊದರ ಅತ್ತೆ ಮಗ. ಇಂಜನಿಯರ್ ಇದಾರೆ ಬೆಂಗಳೂರಲ್ಲಿ.

ಅವರದೆನು ಚೈಲ್ಡ್ ಮ್ಯಾರೇಜ್ ಅಲ್ರಿ. ಅವ್ರಿಗಿಗ ೩೨ ಎಜ್ ಇದಾವು. ನನಗ ೧೪ ವರ್ಷ ಇದ್ದಾಗ ಮದ್ವಿ ಮಾಡಿದಾರೆ. ನಮ್ ಅತ್ತಿ ಅತ್ತೆ ತೀರಿಹೊದ್ರಂತೆ. ವರ್ಷದೊಳಗೆ ಒಂದು ಕಾರ್ಯ ಮಾಡಬೇಕು ಅಂತ ನಮ್ ಮದ್ವಿ ಮಾಡಿದಾರೆ. ನಾವ್ ಚಿಕ್ಕೊರಿದ್ದಾಗ್ಲೆ ಮುಂದೆ ನಿಮ್ಮಿಬ್ರಿಗೂ ಮದ್ವೆ ಮಾಡತಿವಿ ಅಂತಿದ್ರು. ಅನಿವಾರ್ಯ ಬಂದಿದ್ದಕ್ಕ ಲಘುನ ಮದ್ವಿ ಮಾಡಿದ್ರು. ನನಗ ನಮ್ಮ ಮಾಮಾರಿಗೆ ೭, ೮ ವರ್ಷ ವ್ಯತ್ಯಾಸ ಇರಬೇಕು. ಇಬ್ರೂ ಕೂಡಿ ಬೆಳದಿದಿವಿ. ನಾವಿಬ್ರೂ ಗಂಡ-ಹೆಂಡತಿ ಅನ್ನೊ ಫಿಲಿಂಗ್ ಇತ್ತು ಇಬ್ರಿಗೂ. ನಾಚಿಗಿ, ಚೆಲ್ಲಾಟ ಎಲ್ಲಾ ಇದ್ವು ಇಬ್ರು ಮದ್ದೆ. ಒಂದ ಊರಾಗ ಬೇರೆ ಬೇರೆ ಮನೆ ನಮ್ದ್.

ಈಗ ನನ್ ಟೈಮ್ ಬಾಳನೆ ಸುಮಾರೈತ್ರಿ ಮೆಡಂ. ಯಾಕಾದ್ರು ಮದ್ವೆ ಮಾಡಿಸಿದ್ರೊ ಅನಿಸಿದೆ. ನಮ್ ಮಾಮ (ಗಂಡ) ಕಂಪ್ಯೂಟರ್ ಇಂಜನಿಯರ್ ಆಗಿ ೫ ವರ್ಷ ಆತ್ರಿ ಬೆಂಗಳೂರಗ ಜಾಬ್ ಮಾಡತಾರ. ಫೋನ್‌ದಾಗೆಲ್ಲಾ ಮಾತಾಡತಿದ್ವಿ. ಅವಾಗಿನ್ನು ಮದ್ವೆ ಅಂದ್ರೆನು, ಸಂಸಾರಂದ್ರೆನು ಗೊತ್ತಿದ್ದಿಲ್ಲ. ಬರಿ ಚೆಲ್ಲಾಟ ಅಷ್ಟ. ಈಗ ಅರ್ಥ ಆಗಕತ್ತೈತ್ರಿ ನಮ್ ಮಾಮ ಬೆಂಗಳೂರಗ ಜೊತಿಗೆ ಕೆಲಸ ಮಾಡ ಬೇರೆ ಜಾತಿ ಹುಡುಗಿನ ಮದ್ವೆ ಆಗ್ಯಾರಂತ. ಈಗ ೩ ವರ್ಷ ಆಗಿದೆ ಅಂತಾರ. ಆ ಹುಡುಗಿ ಮಧ್ಯ ಪ್ರದೇಶದಾಕ್ಯಂತ. ಮಾತು ತಿಳಿಯಲಂತ್ರಿ ನಮುವು. ಮದ್ವಿ ಆದ್ರು ಅದನ್ನ ಮುಚ್ಚಿಟ್ಟು ನನ್ ಜೊತಿ ಮಾತಾಡತಿದ್ರು. ಆದ್ರ ಇತ್ತೀಚೆಗೆ ಪೂರ್ತಿ ಮಾತಾಡದನ್ನ ನಿಲ್ಲಿಸಿ ಬಿಟ್ಟಿದ್ರು. ಈಗ ಒಂದು ವರ್ಷದ ಕೆಳಗ ಯಾವಾಗ ನಮ್ ಅತ್ತಿ ನನ್ ಮನಿಗೆ ತುಂಬಸ್ಕೊಳ ಮಾತಾಡಿದ್ಲು ಅವಾಗ ಎಲ್ಲಾ ಹೊರಗ ಬಿದ್ದಿದ್ರಿ. ಎಲ್ಲಾರಿಗೂ ಶಾಕ್. ಯಾರು ನಂಬಕ ತಯಾರಿಲ್ಲ. ನಮ್ ಮಾಮನ ಹೇಳಿದ್ರಂತ. ನಾ ಬ್ಯಾರೆ ಮದ್ವಿ ಆಗಿನಿ. ಅಕಿಗೆ ಬೇರೆ ಗಂಡ ಹುಡುಕಿ ಮದ್ವಿ ಮಾಡಿಬಿಡ್ರಿ, ನಾ ಏನು ಸಂಸಾರ ಮಾಡಿಲ್ಲ ಅಕಿ ಜೊತಿ ಅಂತ ಹೇಳಿದ್ರಂತ. ನಮ್ ಅತ್ತಿ, ಮಾವ ಬಾಳ ಕೂಗಾಡ್ಯಾರ. ಕೊನಿಗೆ ಅವ್ರ ಹೇಳಿದ್ದು ನಿಜನೊ ಸುಳ್ಳೊ ಅಂತ ತಿಳಿಯಕ ನಮ್ ಮಾವ ನಮ್ ತಂದೆ ಬೆಂಗಳೂರಿಗೆ ಹೋಗಿ ಖುದ್ ನೋಡಿ ಬಂದ್ರೂ. ಅವ್ರು ಬ್ಯಾರೆ ಮದ್ವಿ ಆಗಿದ್ದು ಖರೆಅಂತ. ನಮ್ ಅತ್ತಿಗೆ ನಮ್ ಮಾಮ ಒಬ್ಬಾತ್ನ ಮಗ. ಇಬ್ರೂ ಹೆಣ್ ಮಕ್ಳು. ಹೋಗ್ಲಿ ಬೀಡು ಅಂತ ಬಿಡಕೂ ದಾರಿಲ್ ಅವ್ರಿಗೆ.

ನನಗಂತೂ ಬಾಳ ತ್ರಾಸಾಗ್ಯದ್ರಿ. ಎಲ್ಲಾ ಹಳೆ ನೆನಪ ಬರತಾವು. ಉಂಡಿದ್ದು, ಕಾಡಿದ್ದು ಎಲ್ಲಾ. ಬಿ.ಕಾಂ. ೫ನೇ ಸೆಮಿಸ್ಟರ್ ಈಗ ಓದಕೂ ಮನಸಿಲ್‌ದಂಗ ಆಗ್ಯದ. ನಮ್ ಮಾಮಗ ಹೋಗಿ ಹೊಡಿಲನು ಅನಂಗ ಆಗಿರುತ ಒಮ್ಮೊಮ್ಮೆ. ನನ್ ಜೀವನ ಅತಂತ್ರ ಆಗಿಬಿಟ್ಟದ್ರಿ. ಫ್ರೆಂಡ್ಸ್ ಸರ್ಕಲ್ ನ್ಯಾಗ ನಾ ಇದನ್ನ ಮರಿತಿನಿ ಸ್ವಲ್ಪ. ನಮ್ ತಾಯಿ ನನ್ ಮುಖ ನೋಡನ ಅಳಕ ಶುರು ಮಾಡಿಬಿಡತಾಳ. ನನಗೂ ದುಖಃ ತಡಿಯದಿಲ್ಲ. ನಾವು ಅಳನ ನಮ್ ತಂದಿ ಅಳಕ ಶುರು ಮಾಡತಾರ. ನನಗ ಇಬ್ರೂ ತಮ್ಮಾರ ರೀ ಇರದು. ಅವ್ರು ಸುಮ್ನೆ ಕುಂತ್ ಬಿಡತಾರ ನಮನ ನೋಡಿ. ಸತ್ತಾರ ಮನಿ ಆಗಿರುತ ಒಮ್ಮೊಮ್ಮೆ ನಮ್ ಮನಿ. ಇದನ್ನೆಲ್ಲಾ ನೋಡಿ ಗಟ್ಟಿ ನಿರ್ಧಾರ ಮಾಡಿಬಿಟ್ಟಿನ್ರಿ, ನನಗ ನಮ್ಮ ಮಾಮನ ಗಂಡ. ಬ್ಯಾರೆ ಮದ್ವಿ ಆಗ ವಿಚಾರನ ಬ್ಯಾಡ ಅಂತ ಮನಸಮಾಡಿನಿ. ಇಸ್ ದಿನ ಆತನ ಹೆಸರ್ಲೆ ತಾಳಿ ಹಕ್ಕೊಂಡು ಅಡ್ಯಾಡಿನಿ. ಗಂಡನ ಹೆಸರಂತ

ಅತನ್ನಾ ಹೇಳಿನಿ ಇಷ್ಟ ದಿನ. ಊರಿಗೆಲ್ಲಾ ಗೊತ್ತು ನಾವಿಬ್ರೂ ಗಂಡ-ಹೆಂಡತಿ ಅಂತ. ಈಗೆಂಗ ಬ್ಯಾರೆ ಮದ್ವಿ ಮಾತು ಆಡದು ಅಂತಾರ ನಮ್ ತಂದಿನೂ. ಅವ್ರ ಒಪ್ಪಿದ್ರು ನಾ ಒಪ್ಪಲ್‌ರೀ. ಅತನ್ನಾ ಗಂಡ ಅಂತ ಅನಕೊಂಡಿದ್ ಅತನ ಜೊತಿನ ಇರತೇನಿ. ಅತನ ಕಣ್ಣೆದುರ ಇನ್ನೊಬ್ರನ ಗಂಡ ಅಂತ ಬಾವಿಸಕೊಳ್ಳಕೂ ಸಾಧ್ಯ ಇಲ್ರಿ. ಹೊರಗ್ಲಾರಾಗಿದ್ರ ಜಗ್ಳ ಮಾಡ್ಯೊ, ಹೊಡದೊ ಮನಸ್ಸು ಹಗುರ ಮಾಡಕೊತಿದ್ವಿ, ಈಗ ಯಾವದಕ್ಕೂ ದಾರಿ ಇಲ್ಲ. ನಮ್ ಅತ್ತಿ ಬ್ಯಾರೆ ಕುಲದಕಿನ ಮದ್ವಿ ಆದ ಮಗ. ಇರದ್ದೊಬ್ಬಾತ ನಮ್ ಮನಿ ಹೆಸರ ಉಳಸದೆಂಗ ಅಂತ ಚಿಂತಿ ಮಾಡತಾರ. ನಮಗ ಒಟ್ಟ ಚಿಂತಿ ಅನ್ನದ ಇದ್ದಿಲ್ಲ. ದೇವ್ರು ಇದೊಂದು ಯಸನ ಇಟ್ ಬಿಟ್ಟಾನ್ರಿ ನಮ್ ಬಾಳಿಗೆ. ಕಾಲೇಜ್‌ನ್ಯಾಗ ಗೆಳತ್ಯಾರಗೆ ಹೇಳಕೊಂಡು ಅಳತಿನ್ರಿ, ಅವ್ರು ಬೈತಾರ. ಓದು ಜಾಬ್ ಮಾಡು ಅಂತಾರ. ಆದ್ರ ಗಂಡ ಇಲ್ದ ಜೀವನ ಹೆಂಗ್ರಿ. ಇವತ್ತಿಗೂ ತಾಳಿ ಐತ್ರಿ ನನ್ ಕೊಳ್ಳಾಗ, ಹೆಂಗ್ ತಗಿಲಿ. ಏನು ತಿಳಿವಲ್ದು ಅಳದಬಿಟ್ರ,

ಖರೆಗ್ಲೂ ಹೆಣ್ ಮಕ್ಳಾಗಿ ಹುಟ್ಟಾಬಾರದು ರೀ. ಗಂಡಸರಾದ್ರ ಏನರ ಮಾಡಬೊದು. ಹೇಗಾದ್ರೂ ಬದಕಬೋದು. ಮುಂದಿನ ನನ್ ಜೀವನ ನೆನಸಕೊಂಡ್ರ ಎದಿ ಜಲ್ ಅನ್ನತ್ರಿ. ಏನ ಸುಖ ಇದ್ರೆನ್ ಇನ್ನ ಎಲ್ಲ ಮುಗದ ಹೊಗ್ಯಾದ ಅನುಸುತ್ತ. ಏನರ ಆಗ್ಲಿ ಅಕಿ ಕೈ ಕಾಲು ಬಿದ್ದ ಆದ್ರು ಸರಿ ನಮ್ ಮಾಮ ನಮ್ ಜೊತಿ ನಾನು ಬಾಳೆ ಮಾಡಿದ್ರಾತು ಅನುಸುತ್ರಿ ಒಮ್ಮೊಮ್ಮೆ. ಸದ್ಯಕ್ಕಂತೂ ಅಷ್ಟ ಇಟಕೊಂಡಿನ್ರಿ ತಲ್ಯಾಗ ವಿಚಾರ. ಮುಂದ ಏನಾಗುತ್ತ ಆಗ್ಲಿ. ಎಲ್ಲಾ ಆ ಗೌಸಿದ್ದಪ್ಪಜ್ಜ (ಊರ ದೇವ್ರು)ಗ ಬಿಟ್ಟಿನಿ.

ಪ್ರಕರಣ – ೧೪

ಹೆಸರು – ದೇವಕ್ಕವ್ವ

ವಯಸ್ಸು – ೨೩

ಜಾತಿ – ಕುರುಬರು

ಊರು – ಕೋಳೂರು

ದೇವಕ್ಕವ್ವ ರಿ ನನ್ ಹೆಸರು. ೧೯ ವಯಸ್‌ನ್ಯಾಗ ಮದ್ವಿ ಮಾಡಿಬಿಟ್ರು, ನನ್ ಗಂಡಗ ೩೦ ವಯಸ್ರಿ ಅವಾಗ. ನನ್ ಗಂಡಗ ಮದ್ಲ ಮದ್ವಿ ಆಗಿ ಯಾಡ ಮಕ್ಳಿದ್ವಂತ. ಮೋಸ ಮಾಡಿ ಮದ್ವಿ ಆಗ್ಯನ ನನ್ ಜೊಡ್. ನಾಕ ವರ್ಷ ಚೋಲನ ಇದ್ದ. ಆಮ್ಯಾಲೆ ಮತ ಮದ್ಲಿನ ಹೆಂಡ್ತಿ ಹತ್ರ ಹೊಗದು ಬರದು ನಡಿಸ್ಯಾನ. ನನಗ ಗೊತ್ತ ಆಗಿಲ್ಲ ಏನು. ಈಗ ಆರ್‌ತಿಂಗ್ಳಾತಾಯ್ಯವ್ವ ವಿಷ್ಯ ತಿಳುದು. ನಾನು ಯಾಡ್ನೆದಕ್ಯಂತ. ನನಗ ಹಿಂದ ಮುಂದ ಯಾರಿಲ್ಲ, ನಮ್ ಸ್ವಾದ್ರಮಾವ ಒಬ್ಬಾತ್ನ ಇರದು ನನಗ. ನಾವು ಗುಲ್ಬರ್ಗಾ ಕಡೆಗ್ಲಾರು, ಯಾರಿಲ್ಲದ್ದಕ್ಕ ಇತ್ತಾಗ ಬಂದಿವಂತ ತಿಳಿಸಿ ಮದ್ವಿ ಆದ್ನ ನನ್ ಗಂಡ ನನಗ. ಮದ್ವಿ ಆಗಿಂದ ನಮ್ ಅಪ್ಪ ನಮ್ ಊರಾಗ ಮನಿ ಮಾಡಿ ಇಟ್ಟ. ಇಬ್ರೂ ಕೂಲಿಮಾಡಿ ತಿಂತಿದ್ವಿ, ಆಮ್ಯಾಲೆ ಏನಾತನ್ರಿ ನನಗ ಇಲ್ಲಿ ಇರಕ ಮನಸಾಗವಲ್ದು ನಾ ಬ್ಯಾರೆ ಕಡೆ ದುಡಿಯಕ ಹೊಕ್ಕಿನಿ ಅಂದ. ನಾ ಬ್ಯಾಡ ಅಂದ್ಯ. ಅದಕ ದಿನಾ ಜಗ್ಳ ತಗ್ಯಾದು, ಕುಡಿಯದು

ಬಂದ್ ಹೊಡ್ಯಾದು ಮಾಡಕತ್ತ ನುಗ್‌ವಳ. ಹೊಡಸ್ಕೊಳಕ್ಕಿಂತ ಹಾಳಗಿ ಹೊಗವಲ್ನಕ ಬೀಡು ಅಂತ ಹೋಗು ಅಂದ್ಯ. ಯಾಡ ತಿಂಗ್ಳ ಗೋವಾಕ ಹೊಕ್ಕಿನಿ ಅಂತ ಹೋಗಿ ಮದಲ್ನೆ ಹೆಂಡ್ತಿ ಹಂತ್ಯಾಕ ಹೊಗ್ಯಾನ್ರಿ. ಯಾಡ ತಿಂಗ್ಳ ಆಗನ ಬಂದ. ರೊಕ್ಕ ಏನು ತಂದಿರಲಿಲ್ಲ. ದುಡಿಯಕ ಹೋಗಿ ಕಾಲಿ ಕೈಯಾಗ ಬಂದಿಯಲ್ಲ ಅಂದ್ರ ಜಗ್ಳ ತಗದ.

ಕುಡಿತಾನ ಹಾಳ್ ಮಾಡಿರಬೇಕು ಅಂತ ಸುಮ್ನಾದ್ವಿ. ಒಂದು ಹದಿನೈದ ದಿನ ಆಗಿದ್ದಿಲ್ಲ ಮತ ಹೊಕ್ಕಿನಂದ. ನಮ್ ಅಪ್ಪಗ ಹೇಳಿದ್ಯಾ. ಆತನು ಹೊಗನ್ನು ಅಂದ. ನಾನ ಮತ ಜಗ್ಳ ತಗದು ಮೈ ಮುಪ್ಪ ಮಾಡಿಸ್ಕೊಂಡ್ಯಾ. ಹೊಂಟ ನಿಂತ. ನಮ್ ಅಪ್ಪನ ಹಂತ್ಯಾಕ ದೂರದ ಊರಿಗೆ ಹೊಂಟಿನಿ ಖರ್ಚಿಗೆ ರೊಕ್ಕ ಎಷ್ಟಿದ್ರೂ ಸಾಲಲ್ಲ ಅಂತ ರೂ. ೫,೦೦೦ ಇಸ್ಕೊಂಡತ್ನ ಜಾಗ ಖಾಲಿ ಮಾಡಿದ. ನನಗ ಗೊತ್ತ ಆಗಿಲ್ಲ. ಬಿರ್ರನ ನಮ್ ಅಪ್ಪ ಆತನ ಬೆನ್ನ ಹತ್ಯಾನ. ಬಿದರ್ ಜಿಲ್ಲೆ ಮೂಡ್ಲಹಳ್ಳಿಗೆ ಹೋಗ್ಯಾನ. ಆತನ ಹಿಂದ ನಮ್ ಅಪ್ಪ, ಅತನ ದೊಸ್ತ ಹೋಗ್ಯಾರ. ಅಲ್ಲಿ ಆತ ಸೀದ ಒನ್ನೆ ಹೆಂಡ್ತಿ ಹಂತ್ಯಾಕ ಹೋಗಿದ್ ನೋಡ್ಯಾರ್ರಿ ಇವ್ರು. ಇವ್ರಿಗೆ ಗೊತ್ತಿಲ್ಲ ಆತ ಮದ್ಲ ಮದ್ವಿ ಆಗ್ಯಾನಂತ. ಇವ್ರು ಆತ ಮನ್ಯಾಗ ಹೊಗನ ಸುಮ್ನಾಗಿ. ಅವತ್ ಒಂದಿನ ಆ ಊರ ಗುಡ್ಯಾಗ ವಸ್ತಿ ಹೋಗ್ಯಾರ. ಮುಂಜಾನೆ ನನ್ ಗಂಡನ ನೋಡ್ಯಾರ. ಹುಡ್ರ ಕರಕೊಂಡು ಆಡಕತಿದ್ನಂತ. ಆಗಲೆ ೭-೮ ವರ್ಷದ ಹುಡ್ರಂತ. ನಾ ನೋಡಿಲ್ರಿ, ಇವ್ರಿಗೆ ಅನುಮಾನ ಬಂದಿದ್ದ ಮನಿ ಹೊಕ್ಕರ. ಆತ ಗಾಬ್ರಿಲೆ ಯಾರ್! ಯಾರ್ ಬೇಕಾಗಿತ್ ಅಂದ್‌ನಂತ. ನಮ್ ಅಪ್ಪಗ ಸಿಟ್ ತಡದಿಲ್ಲ ಹೊಡ್ಯಕಾ ಸುರುಮಾಡ್ಯಾರ. ಅವಗಾ ಊರನ ಮಂದಿ ಕಲತು ಜಗ್ಳ ಬಿಡಿಸ ಹೊತ್ತಿಗೆ ಹೆಂಡ್ತಿ ಆದಾಕಿ ನನ್ನ ಗಂಡನ ಹಿಡಕೊಂಡು ಅಳಕತ್ಲಂತ. ನಮ್ ಅಪ್ಪಗ, ನಮ್ ಅಪ್ಪನ ದೊಸ್ತಗ ಊರನ ಮಂದಿ ಹೊಡ್ಯಾಕ ಬಂದ್ರಂತ. ಬರತ್ಲೆ ನಮ್ ಅಪ್ಪ ನಾ ಮಾತಾಡತಿನಿ ಆಮ್ಯಾಲೆ ಹೊಡಿರಿ ಅಂದ್ನಂತ. ಅನತ್ಲೆ ಊರ ಮಂದಿ ಎಲ್ಲಾ ಕಲತ್‌ಬಿಟ್ಟಿದ್ರಂತ.

ನನ್ನ ಗಂಡನ ಒನ್ನೆ ಹೆಂಡ್ತಿ ಯಾಕ ಹೊಡದಿರಿನನ್ ಗಂಡನ್ನ, ಏನ್ ತಪ್ಪ ಮಾಡಿದ ಅಂತ ಅಟ್ಟಿದ್ರಿ ಅಂದ್ಲಂತ. ನಮ್ ಅಪ್ಪಗ ಒಂದು ಅನುಮಾನ ಅವಾಗ ಖರೆ ಆತಂತ. ನಮ್ ಅಪ್ಪ ಸಿದಾಸಿದಾ ಇದ ವಿಷ್ಯಾ ಎಲ್ಲಾ ದೈವ್ದಾಗ ಇಟ್ನಂತ. ಅಂತವಲ್ಲ ಫಕಿರೇಶ. ನಾಕ ವರ್ಷ ದುಡಿಯಾಕ ಹೋಗಿದ್ದ ಗೊವಾಕ. ಈಗ ಹೊಳ್ಳಿ ಬಂದಾನ ಅಂತಾ ಮಂದಿ ಹೇಳನನಮ್ ಅಪ್ಪ ಇದ್ದದ ಎಲ್ಲಾ ಹಕಿಕತ್ ಹೇಳ್ಯಾನ. ಆದ್ರ ಒನ್ನೆ ಹೆಂಡ್ತಿ ಇದನ ಸುತಾರಾಮ್ ಒಪ್ಲಿಲ್ಲಂತ. ನನ್ ಗಂಡ ದುಡಿಯಾಕ ಹೋಗಿದ್ದ ದುಡುದಿದ್ದ ೫೦೦೦ ನನಗ ತಂದ ಕೊಟ್ಟಾನ, ಅಂತಾವಲ್ಲ ನನ್ ಗಂಡ ಅಂದ್ಲಂತ. ನಮ್ ಅಪ್ಪ ನಾನಾ ಆ ರೊಕ್ಕ ಕೊಟ್ಟಿದ್ದು ಬೇಕಾದ್ರ ಅದ್ರಾಗ ಒಂದು ನೋಟಿನ ಮ್ಯಾಲೆ ೨೫೦ ಅಂತ ನಂಬರ್ ಬರದಿದ್ ಐತಿ ನೋಡಕೊರಿ ಅಂದ್ನಂತ. ಆಕಿ ನನ್ನ ಗಂಡ ಕೊಟ್ಟಿದ್ ರೊಕ್ಕ ತಂದು ಹಿರ್ಯಾರಿಗೆ ತೋರಿಸಿದ್ಲಂತ, ಅದ್ರ ಮ್ಯಾಲೆ ೨೫೦ ರದ ಅಂಕಿ ಬರದಿದ್ ಇತ್ತಂತ. ಅದನ ನೋಡಿ ಅಲ್ಲಿ ಮಂದಿಗೂ ಅನುಮಾನ ಬಂತಂತ ನನ್ ಗಂಡನ ಮ್ಯಾಲೆ. ಎಲ್ಲಾ ಮಾತಾಡಿಂದ ದೈವದಾಗ ನನ್ ಗಂಡ ನನ್ ಮದ್ವಿ ಆಗಿ ಯಾಡ ಹಡದಿದ ನಿಜ ಅಂತ ಒಪ್ಪ್‌ಕೊಂಡ್ನಂತ. ಅಷ್ಟಾಗಾತ್ಲೆ ನನ್ ಗಂಡನ ಒನ್ನೆ ಹೆಂಡ್ತಿ ಮಣ್ಣಾಗೆಲ್ಲಾ ಬಿದ್ದು ಅಳಕತ್ಲಂತ.

ಅಕಿಗೂ ಚೆಂದ್ ಇಟ್ಟಲ್ರಿ ನಮ್ ಹಿರಿಯಾ. ಕುಡದ ಬಂದು ಹೊಡ್ಯಾದು ಬಡ್ಯಾದು, ಅಕಿ ಸಾಮಾನ ಎಲ್ಲಾ ಮಾರಕೊಂಡು ತಿನ್ನದೆಲ್ಲಾ ಮಾಡೆ ಊರು ಬಿಟ್ಟಿದ್ನಂತ. ನನ್ ಗಂಡ ಮಾತಾಡದು ಬ್ಯಾರೇನ ಇತ್ತು. ಆದ್ರ ನಮಗೆಂಗ್ ತಿಳಿತದ್ರಿ ಅದು ಬೀದರಕಡೆಗದ್ಲೂ ಅಂತ. ಗುಲಬರ್ಗಾ ಕಡೆಗ್ಲಾರು ಅಂದಿದ್ನಲ್ಲ ಅದಕ ಬಾಸೆ ಬದ್ಲು ಇದ್ರು ಇರಬೋದು ಅಂತ ಸುಮ್ನಿದ್ವಿ, ಬ್ಯಾರೆ ಬ್ಯಾರೆ ಕಡೆ ದುಡಕೊಂಡು ತಿನ್ನಕ ಅಡ್ಯಾಡರು ಬಾಸೆ ಬದ್ಲಾಗಿರತ್ ಮತ ಅಂತ ಹಿಂಗ್ ತಿಳಿದಿದ್ವಿ. ನನ್ ಗಂಡನ ತಂದಿ ತಾಯಿ ಇಲ್ಲ ಅಂತ. ಅಣ್ಣ-ಅಣ್ಣನ ಹೆಂಡ್ತಿ ಮಕ್ಳೆಲ್ಲಾ ಅದರಂತ. ಯಾಡೆಕ್ರೆ ಭೂಮಿ ಐತಂತ ಅಷ್ಟ.

ನಮ್‌ಅಪ್ಪ ಹೊಳ್ಳಿ ಊರಿಗೆ ಬಂದು ಎಲ್ಲಾ ವಿಷ್ಯಾ ತಿಳಿಸಿದ. ನನಗ ಜೀವನ ಹೊದಂಗಾತು. ಮಕ್ಳು ಕರಕೊಂಡು ಅತಗೊತ ಕೂಳು ನೀರು ಬಿಟ್ ಕುಂತ್ಯಾ. ನಮ್ ಅಪ್ಪ ಊರನ ಹಿರ‍್ಯಾರು ಕರಕೊಂಡು ನನ್ ಗಂಡ ಇರ ಊರಿಗೆ ಹೋದ. ಆ ಊರನ ಹಿರ‍್ಯಾರನ ಕಲಿಸಿ ಮಾತಾಡಿದ್ನಂತ. ಮತ್ ಯಾಡ ಮಕ್ಳು ಕರಕೊಂಡು ನನ್ ಮಗ್ಳ ಜೀವನ ಹೆಂಗ ಅಂತ ಕೇಳಿದ್ನಂತ. ನನ್ ಕರಕೊಂಡು ಹೊದ್ರ ಅಳದು ಕರ‍್ಯಾದು ಮಾಡಿ ಏನರ ಹೆಚ್ಚುಕಮ್ಮಿ ಆದಿತಂತ ಬಿಟ್ ಹೊಗಿದ್ನರಿ. ನನ್ ಮದಲ್ನೆ ಮಗ್ಳ ಕರಕೊಂಡು ಹೋಗಿದ್ದ. ನನ್ ಮಗಳು ಅವ್ರಪ್ಪನ ನೋಡನ ಯ್ಯಪ್ಪಾ ಅಂತ ಓಡಿಹೊತಂತ. ಆತ್ನು ಕರಕೊಂಡ್‌ನಂತ ಮಗಳ್ನ. ಹುಡ್ರ ಮ್ಯಾಲೆ ಜೀವದಾನ್ರಿ, ಅದನೋಡಿ ಒನ್ನೆ ಹೆಂಡ್ತಿ ಅಳಕತ್ಲಂತ ಪಾಪ. ಹಿರ‍್ಯಾರದಾಗ ಎಲ್ಲಾ ಮಾತಾಡಿ ಎರಡೂ ಕಡೆ ಇದ್ದು ಬಾಳೆ ಮಾಡ್ಲಿ. ನನ್ ಮಗ್ಳಿಗೆ ಇಲ್ಲಿ ಆಸ್ತಿ ಏನು ಬ್ಯಾಡ. ನಾನು ಅಕಿ ಜೀವನಕ್ಕೆನರ ಮಾಡತೀನಿ ಅಂತ ಮಾತಾಡಿದ್ನಂತ. ಎಲ್ಲರು ಇದಕ್ಕ ಒಪ್ಪಿದ್ರ ಹೆಂಡ್ತಿ ಆದಾಕಿ ಒಪ್ಲಿಲಂತ್ರಿ, ಎಲ್ಲೂ ಹೊಗಲ್ಲ ನನ್ ಗಂಡ. ನಾನ ದುಡದು ಹಾಕತಿನಿ. ಮನ್ಯಾಗ ಇರ‍್ಲಿ ಅವ ಬೇಕಾದ್ರ, ಬ್ಯಾರೆದಕಿನ ಹೆಂಡ್ತಿ ಅಂತ ಒಪ್ಪದ ಬ್ಯಾಡ. ಬೇಕಾದ್ರ ಬ್ಯಾರೆ ಮದ್ವಿ ಮಾಡ್ರಿ ಆಕಿಗೆ ಅಂದ್ಲಂತ. ಯಾಡ ಮಕ್ಳದಾವು ಅದು ಆಗ್ಲಾರದ ಮಾತು. ಆಗಲ್ಲ ಅಂದ್ರ ಪೊಲೀಸ್ ಕಂಪ್ಲೆಂಟ್ ಮಾಡತಿವಿ ಒಳಾಗ ಬಿದ್ದಿರ‍್ಲಿ ಅವ. ಯಾರ ಹಂತ್ಯಗು ಇರದ ಬ್ಯಾಡ ಅಂತ ನಮ್ ಊರು ಹಿರೇರ ಅನ್ನನ ಸರಳ ದಾರಿಗೆ ಬಂದ್ಲಂತ. ನಾ ಮದಲ್ನೆದಾಕಿ ಇದ್ದಲ್ಲಿ ಹೋಗಲ್ಲ ಇಲ್ಲೆ ಇರಂಗ ಮಾತಾಡ್ರಿ ಅಂತ ಹೇಳಿ ಕಳಿಸಿದ್ಯಾ. ಹೆಂಗ ಮಾತು ಕತಿ ಮಾಡಿ ಕಾಗದ ಪತ್ರ ಬರಿಸಿ ಸೈ ತಗೊಂಡ ಬಂದ್ರು, ಆ ಮೇಲೆ ೨ ತಿಂಗ್ಳಾಗಿಂದ ಬಂದ ನನ್ ಗಂಡ. ನನಗ ಆತ ಮಾಡಿದ್ ತಪ್ಪಂತ ಅನಸ್ಲಿಲ್‌ರಿ. ಎರಡ ತಿಂಗ್ಳದಾಗ ಎಲ್ಲಾ ನೋವ್ನ ಮರತಬಿಟ್ಟಿದ್ಯಾ. ಬಿಟ್ ಹೊದ್ರ ಹೆಂಗ ಅಂತ ಇವತ್ತಿನ ತನ ಅವ್ರ ಸುದ್ದಿನ ಮಾತಾಡಿಲ್ರಿ, ಮದ್ಲರ ಜಗ್ಳ ಮಾಡತಿದ್ಯಾ. ಈಗ ಬಿಟ್ ಹೊದ್ರ ಅನ್ನ ಹೆದ್ರಿಕಿಗೆ ಆತ ಏನ್ ಮಾಡಿದ್ರು ಸುಮ್ನೆನ ಇರತಿನಿ. ಆತನು ಒಳೆವ್ನರಿ. ಚೋಲನ ಅದಾನ ನನ್ ಕೂಡ. ಅಲ್ಲಿ ಇಲ್ಲಿ ಅಡ್ಯಾಡಕೊತ ಇರತಾನ. ನಾನು ಕೂಲಿ ಹೊಕ್ಕಿನಿ. ನಮ್ ಅಪ್ಪ ಕೊಟ್ ಇಟ್ ನೆಡಸ್ತಾನ ಎಲ್ಲಾ. ಮನಿತನದ್ಲ ಚೋಲ ಅದಾರ ನಮ್ ಅಪ್ಪಾರು. ಒಬ್ಬಾಕೆ ಹೆಣ್‌ಮಗ್ಳಂತ ಚೆಂದ ಸಾಕ್ಯಾನ ನಮ್ ಅಪ್ಪ. ಎಲ್ಲಿ ನನ್ ಗಂಡಗ ಅತ್ತಾಗ ಸೆಳತ ಜಾಸ್ತಿ ಆಗಿ ಬಿಟ್‌ಹೊದ್ರ ನನ್‌ಗತಿ ಹೆಂಗ ಮುಂದ ಅಂತ ಒಂದಸಮ್ನೆ ಚಿಂತಿ ಅಕೈತಿ. ಊಂಡ್ರು ಒಮ್ಮೊಮ್ಮೆ ತುತ್ತು ಗಂಟ್ಲದಾಗ ಇರತ್ರಿ ಒಳಾಕ ಹೋಗಲ್ಲಾ ಆ ಹೆದ್ರಿಕಿಗೆ.

ಪ್ರತಿದಿನ ಪ್ರತಿಕ್ಷಣ ನನ್ ಬಿಟ್ರ ಹೆಂಗ್ ಗಂಡ, ಆಕಿ ಬ್ಯಾರೆ ಒನ್ನೆದಾಕಿ ಹೆಂಡ್ತಿ ಅಂತ ಚಿಂತಿರಿ ಅಷ್ಟು. ನನ್ ಗಂಡ ದುಡಿಯವಲ್‌ರಿ ಮೈ ಬಗ್ಗಿಸಿ. ಅದಕ ನನ್ ಮದ್ವಿ ಆಗ್ಯಾನ ರೊಕ್ಕದ ಆಸ್ಯಾಕ. ಇಲ್ಲೂ ಸಿಗ್ಲಿಲ್ ಅಂದ್ರ ಇನ್ನೊಂದು ಮದ್ವಿ ಆಗತನ್ರಿ ಅವ. ಮಾವ ಅಂತ ಹೇಳಕೊಂಡು ಬಂದು ಮದ್ವಿ ಮಾಡಿಸಿದವ್ನಂತೂ ಅವಾಗ ನೋಡಿದ್ರಿ, ಮತ್ ನೋಡೆಯಿಲ್ಲ. ಹೊಗ್ಯಾನ್ರಿ ಈಗ ಒನ್ನೆ ಹೆಂಡ್ತಿ ಹಂತ್ಯಾಕ. ಅಕಿಗೂ ನನ್ ಹಂಗ ಆಗಿರಬೇಕು. ಪಾಪ, ಅಕಿನು ತಂದ್ ತಾ ದುಡುಕೊಂಡು ತಿಂತಾಳಂತ್ರಿ, ಇವಯೆಂದ್ ದುಡುದು ಹಾಕಬೇಕು. ಎಲ್ಲಾ ಹೆಣ್ ಮಕ್ಳ ಬಾಳೆ ಇಷ್ಟ ಇರುತ್ತೆನಂತ ಅನುಸುತ್ರಿ ಒಮ್ಮೊಮ್ಮೆ.

ಪ್ರಕರಣ – ೧೫

ಹೆಸರು – ತ್ರಿವೇಣಿ

ವಯಸ್ಸು – ೨೭

ಜಾತಿ – ಲಿಂಗಾಯತ

ಊರು – ಬಸಾಪುರ

ನನ್‌ದೆನು ಸಣ್ ಪುಟ್ ಸಮಸ್ಯೆ ಇಲ್ಲರಿ ಮೆಡಂ. ತೀರಲಾರದಂತದ ಐತ್ರಿ, ಜಗ್ ಅನುಮಾನದ ಹಾಟ್ಯಾರಿ ನನ್ ಗಂಡ. ಮನ್ಯಾರು ನ್ಯಾಯ ಬಗಿಹರಸದಾತು, ಊರು ದೈವ ನ್ಯಾಯ ಬಗಿಹರಸದಾತು, ಕೊನಿಗೆ ಪೊಲೀಸನರೂ ನ್ಯಾಯ ಬಗಿಹರಸದಾತು. ಅದು ಸಾಲದಂತ ಕೌಟುಂಬಿಕ ಸಲಹಾ ಕೇಂದ್ರದಾಗನು ಕೆಸ್ ಮಾಡಿನಿ. ಏನ್ ಮಾಡಿದ್ರೂ ನಮ್ ಜಗ್ಳ ಮುಗಿವಲ್ದು. ಮದ್ಲೆಲ್ಲ ಅಂತಾವುನ್ನ (ವಿಷಯ) ಹೇಗ ಹೇಳದ ಅಂತ ಅಸಯ್ಯ ಅಕ್ಕಿತ್ತು. ಈಗ ಹೇಳಲಾರದ ವಿಧಿನ ಇಲ್ರಿ, ಎಲ್ಲಾ ಕಡೆ ಹೇಳಿ ಹೇಳಿ ಕಾಮನ್ ಆದಂಗ ಆಗೈತ್ರಿ ನನ್ ಗಂಡನ ಚಾಳಿ ಹೇಳದು. ಸಿಮಾ ಅನುಮಾನದಾವ, ಸಿಮಾ ಕುಡುಕಾ, ಸಿಮಾ ಹೆಂಡತಿಗೆ ಹೊಡಿಯುವ. ಆದ್ರ ಊರ ಮಂದಿಗೆಲ್ಲಾ ಬಾಳ ಒಳ್ಳೆವ. ನಮ್ದು ಇಲ್ಲೆ ಬಸಾಪುರ್ ರ್ರಿ, ಪಿ.ಯು.ಸಿ ಓದಿನಿ. ಕಂಪ್ಯೂಟರ್ ಕೊರ್ಸ ಆಗೈತ್ರಿ, ನನ್ ಗಂಡನ ಮನಿ ಕುಷ್ಟಗಿ ರ್ರಿ, ಮದ್ವಿ ಆಗಿಂದ ೧, ೨ ವರ್ಷ ಅಷ್ಟ ನೋಡ್ರಿ ಅಲ್ಲಿ ಇದಿದ್ದು. ೬ ವರ್ಷ ಆತು ತೌವ್ರ ಮನ್ಯಾಗ ಇರಕತ್ತು. ಇಲ್ಲಿದ್ರು ಇದಿ ನನ್ ಬಿಡಲ್ರಿ, ಇಲ್ಲೆ ಬಂದ ಕಾಡತಾನ ಗಂಡ ಅನ್ನವ. ಚೆಂದಿದ್ದಂಗ ಮಾಡದು ಊರಿಗೆ ಕರಕೊಂಡು ಹೊಗದು, ಚಟ ತೀರನ ಹೊಡಿಯದು ಬಡಿಯದು, ಅನುಮಾನದ ಮಾತಾಡದು. ನಾ ಅಷ್ಟ ಆಗನ ಹೆದರಿ ನಮ್ ಊರಿಗೆ ಓಡಿ ಬರದು ಇಷ್ಟ ಆಗೈತ್ರಿ ನಂದು. ರಾತ್ರಿ ಕಾಲ್‌ಮಡಿಯಕ ಹೊದ್ರ ಅನುಮಾನ ಮಾಡತಾನ ಅಂತವುಗ ಏನ್ ಮಾಡಬೇಕು ನೀವ ಹೇಳ್ರಿ,

ಮೂವರ್ ಅಣ್ಣ ತಮ್‌ದಿರು. ನಡುಲರ ನನ್ ಗಂಡ್‌ರ್ರಿ, ಮಿಕ್ಕಿದರಿಬ್ರೂ ಹೆಂಡ್ರ ಜೋಡಿ ಚೋಲ ಅದಾರ್ರಿ, ಇವ್ನ ಹಿಂಗ. ನಾ ಮದ್ವಿ ಆಗದ್ರಾಗ ಅತ್ತಿ–ಮಾವ ಸತ್ತಿದ್ರು, ಒಬ್ಬೆಕೆ ಅಕ್ಕ ಇವ್ರಿಗೆ. ಅಕಿದು ಗಂಡನ ಮನ್ಯಾಗ ಬಾಳೆ ಸರಿ ಇಲ್ಲ್‌ದಕ್ಕ ಇಲ್ಲೆ ಬಂದ ಅದಳ್ರಿ, ಮನ್ನೆ ಮನ್ನೆ ಅಕಿ ಗಂಡ ಅರಾಮಿಲದ ಸತ್ನ. ನನ್ ಮದ್ವಿ ಮಾಡಿ ಸೋ... ಅಂತ ಕಳಿಸ್ಯಾರ್ರಿ ಸುರು ಮಾಡೆ ಬಿಟ್ಟಾನ ತನ್

ಚಾಳಿ. ಮದ್ವಿಕೂ ಮುಂಚೆ ಹೊಗದು ಬರದು ಮಾಡತಿದ್ರು ಯಾವಾಗೊ ಒಮ್ಮೆ. ಅವಾಗ ಚೋಲನ ಇದ್ರು. ಮದ್ವಿ ಆದ ಫಸ್ಟ ನೈಟ್ ಮುಗದ ಮರದಿನ ನಮದ ನಮಗ ಆಗಿರುತ್ತ. ಎಲ್ಲಾಕಿಂತ ಗಂಡನ ಮನ್ಯಾಗ ಎಲ್ಲರು ಹೊಸಬ್ರು ಹೆಂಗಪ್ಪಾ ಇರದಿಲ್ಲಿ ಅಂತ ಚಿಂತಿರುತ್ತ. ನನ್ ಗಂಡ ಎದ್ದತ್ನ ನಿನಗ ಈ ಮದ್ಲ ಗಂಡ ಹೆಂಡತ್ಯಾರದು ಅನುಭವ ಇತ್ತನು. ಎಷ್ಟ ಚೆಂದ ಕೋ ಆಪರೆಟ್ ಮಾಡಿದಿ ಅಂತ ಕೇಳಿದ. ನನ್ ಎದಿ ಅಲ್ಲೆ ಜಲ್ ಅಂತು. ಯಾರಮುಂದು ಹೇಳಕಾಗ್ಲಾರದನ ಸುಮ್ನೆ ಆಗಿ ೩ ದಿನ ಆಗಿಂದ ತೌರಮನಿಗೆ ಕಳಿಸಿದ್ರು, ಬಂದಾಕ್ಯಾ ನಮ್ ಮನ್ಯಾಗ ಎಲ್ಲಾ ಹೇಳಿಬಿಟ್ಯಾ. ಅಲ್ಲಿಂದ ಶುರು ಆದ ನ್ಯಾಯ ಇನ್ನ ಬಗಿಹರದಿಲ್ಲರ್ರಿ. ನಾ ಈ ಏಳ ವರ್ಷದಾಗ ಒಂದೆರಡಲ್ರಿ ಅನುಭವಿಸಿದ್ದು. ನಿವೇನರ ಕೇಳಿದ್ರ ಇಲ್ಲಿ ನಿಲ್ಲಕಾಗಲ್ಲ ಅಷ್ಟ ಕ್ರೂರವಾಗಿ ನಡಸ್ಕೊಂಡಾನ ನನ್ನ. ನಾ ಎರಡ ಗುಂಡಿಗಿ ಇರಕಿರಿ ಅಂದಲ್ಲೆ ಉಳದಿನಿ. ಒಂದ ಗುಂಡಿಗಿ ಇರಕಿ ಯಾವಕ್ಯರ ಆಗಿದ್ರ ಸತ್ ಹೊಕ್ಕಿದ್ದುರ್ರಿ ಇತ್ನ ಕೈಯಾಗ.

ನಾ ನನ್ನ ತೌವ್ರಮನಿಗೆ ಬಂದಿಂದ ಅಳಿತನಕ್ಕ ಬಂದ್ರು, ಅವಾಗ ಹಂಗಲ್ಲಪ್ಪ ಜೀವನ ಅಂದ್ರ ಅಂತ ತಿಳಿ ಹೇಳಿದ್ರು ಹಿರ್‍ಯಾರು. ಅವರ ಮುಂದ ಗೋಣು ಅಲ್ಲಾಡಿಸಿದ. ಮತ್ ಅವರ ಊರಿಗೆ ಕರಕೊಂಡು ಹೊದ್ರು, ಹೊದ ದಿನ ರಾತ್ರಿ ಅವ್ರ ಜೊತಿ ಮಲಗಕ ಹೆದ್ರಿಕಿ ಅಕ್ಕಿತ್ತು. ಹೆದರಿ ಸುಮ್ನೆ ಮಲಗಿಬಿಟ್ಯಾ. ಮದ್ಲಿನಂಗ ಏನರ ಅಂದಾರಂತ. ಅದಕೂ ಆ ಮನಷ್ಯಾಗ ಸಮಾದಾನ ಆಗಿಲ್ಲ. ಯಾಕ ನನ್ ಜೋಡಿ ಒಲ್ಯ ಅಂತದೇನು ಮನಸು ಅಂದ. ಅನತ್ಲೆ ನನ್ ಕಣ್ಣಾಗ ನೀರ ಬರಕತ್ವು ನಾ ಯಾರ ಮುಂದ ಹೇಳಕೊಲಿರಿ ಅವಾಗ. ಈವಾಗಿನಷ್ಟ್ ಫೋನಿನ ಸೌಲಭ್ಯ ಇರಲಿಲ್‌ರ್ರಿ ೭ ೮ ವರ್ಷದ ಹಿಂದ ಮನಿಗೆ ಫೋನ್ ಮಾಡಿ ತಿಳಸನ ಅಂದ್ರ, ಒಳಗ ಕೊರಗತಿದ್ಯಾ. ಆತನ ಇಂಥಾ ಮಾತಿಗೆ ಅತನ ಮುಖ ನೋಡಕೂ ಮನಸಕ್ಕಿದ್ದಿಲ್ಲರ್ರಿ. ನಿರ್‍ವ ಇಲ್ದ ಕೂಡತಿದ್ಯಾ ಅವನ ಜೊತಿ. ಅವಾಗ ನಾನೇಷ್ಟ ಹಿಂಸೆ ಅನುಭವಿಸಿನಿ ನನಗ ಗೊತ್ತು. ಯಂತ ಹೊಲಸ ಚಾಳಿ ಅಂದ್ರ ಅತನ್ದು ಐ ನಮ್ ಅಣ್ಣ ಇದ್ದಾಗ ನೀ ಹೊರಗ ಬರಬಾಡ ಆತ ನಿನ್ನ ನೋಡತಿರತಾನ ಅಂತಿದ್ದ. ಉರ್‍ಲ ಹಕ್ಕೊಳಂಗ ಆಗತಿತ್ತು. ಅವ್ರಿಗೆ ೧ ಮಗು ಇತ್ತು ಆವಾಗ್ಲೆ. ಅಂತಾರ್‍ಗೆ ಅಣ್ಣ ಅಂಥಾ ವಿಶ್ವಾಸ ಇಲ್ದ ಮಾತಾಡತಿದ್ದ. ಆಮೆಲಾಮೇಲೆ ಸಣ್ಣಾಗಿ ಕುಡುದು ಬರಕ ಸುರು ಮಾಡಿದ. ವರ್ಷತನ ಬರಿ ಇದ ಆಗಿತ್ತು. ನನಗೂ ಅಲ್ಲಿದ್ದು ಸ್ವಲ್ಪು ಹಿಡತ ಸಿಕ್ಕಿತ್ತು. ನನ್ ಗಂಡ ಏನರ ಅಂದ್ರ ಎದುರು ಮಾತಾಡಕ ಸುರು ಮಾಡಿದ್ಯಾ. ಕುಡುದು ಬರದು ಓಣ್ಯಾಗೆಲ್ಲಾ ಎಳದಾಡಿ ಹೊಡಿತಿದ್ದ ನನ್ನ. ಮಂದಿ ಬಿಡಸ್ಕೊಳಾರು. ನಮಗೂ ಏನರ ಅಂದಾನು ಅನ್ನ ಹೆದರಿಕಿಗೆ ಅವರ ಅಣ್ ತಮ್ದಿರು ನಿಂತ್ ನೋಡಾರು ಮಂದ್ಯಾಗ. ನನ್ಗ ಸಕಾಗಿ ತೌವ್ರಮನಿಗೆ ಬರತಿದ್ಯಾ ಹಿಂಗಾದಾಗೆಲ್ಲಾ. ಆತನೂ ಹಿಂದಲೆ ಬರತಿದ್ದ. ರಮಿಸಿ ಕರಕೊಂಡು ಹೊಗಾದು ಮತ್ತೆ ಹೊಡಿಯದು ನಾ ತೌವ್ರ ಮನಿಗೆ ಬರದು ಇಷ್ಟ ಆಗಿ ಹೊತ್ರಿ ಮದ್ವಿ ಆದ ಎರಡನೇ ವರ್ಷ. ನಮ್ ಮನ್ಯಾಗ ನನ್ನ ಹೊಳ್ಳಿ ಒಮ್ಮೆ ಕಳಸ್ಲೆ ಇಲ್ರಿ, ನನ್ ಗಂಡನು ಕರಿಯಕ ಬರ್‍ಲಿಲ್.

ಹಿರೇರ ಮುಂದ ಏನಂತಾ ಹೇಳದ್ರಿ, ಎಲ್ಲಾ ಮುಗದಿತ್ತು ಹೇಳದು ಕೇಳದು. ಎಷ್ಟದಿನ ಖಾಲಿ ಕೂಡ್ಲಿ ಅಂತ ಕೊಪ್ಪಳದ ಕೆ.ಎಸ್.ಆರ್.ಟಿ.ಸಿ. ಡಿಪೋದಾಗ ಕಂಪ್ಯೂಟರ್ ಆಪರೆಟರ್ ಆಗಿ ಕೆಲಸಕ್ಕ

ಹೊಂಟ್ಯಾ. ಶುರುವಿಗೆ ೨೦೦೦ ಕೊಡತಿದ್ರು. ನನ್ ಗಂಡನ್ನು ಜೆಪ್ ಇತ್ರಿ, ಅದ್ರ ಹಿಂದ ಹೊಕ್ಕಿದ್ದ. ಅದ ಅತನ ದುಡಿಮಿ ಅಂದ್ರ, ಗೋವಾ ಟ್ರಿಪ್ಪೆಲ್ಲಾ ಹೊಗತಿದ್ನಂತ. ಅಲ್ಲಿ ಹುಡಿಗ್ಯಾರ್ಲಿಂದ ಹಿಡುದು ಎಲ್ಲಾತರದ್ ಚಟ ಕಲತಿದ್ನಂತ ಆಮ್ಯಾಲೆ ತಿಳಿತ್ರಿ, ಅಷ್ಟೊತ್ತಿಗಾಗ್ಲೆ ಕಾಲ ಮಿಂಚಿ ಹೊಗಿತ್ತು. ನಾ ದುಡಿಯಕತ್ತಿನಿ ಎಲ್ಲೆ ಅಂತ ಅತಗ ಗೊತ್ತಾಗ್ಯದ್ರಿ, ನಮ್ ಮನ್ಯಾಗ ಎಲ್ಲಿ ಮತ್ ನನಗ ಬ್ಯಾರೆ ಮದ್ವಿ ಮಾಡತಾರ ಅಂತ ಒಮ್ಮೆ ನಾ ಇರ ಅಡ್ರಸ್ ಅದೆಂಗ ತಿಳಕೊಂಡು ನಾ ಇರ ಜಾಗಕ್ಕ ಬಂದನರ್ರಿ, ಊರಿಗೆ ಕರದ. ನಾ ಒಲ್ಯಾ ಅಂದ್ಯಾ. ಹೊರಗ ಮಾತಾಡನ ಬಾ ಅಂತಾ ಕರಕೊಂಡು ಬಂದ್ನರ್ರಿ, ಅಲ್ಲೆ ಮುಂದಕತ ಪೊಲೀಸ್ ಸ್ಟೆಷನ್ ಐತ್ರಿ, ಅದಕ ಹತ್ರ ಇದ್ವಿ ಮಾತಿಗೆ ಮಾತು ಬೆಳದು ಕೂದ್ಲ ಎಲ್ಲಾ ಹಿಡುದು ಹೊಡ್ಯಾಕ ಶುರುಮಾಡಿಬಿಟ್ಟಾ. ಬಟ್ಟೆ ಎಲ್ಲಾ ಮರ್ಯಾದಿ ಹೊಗಂಗ ಎಳದಾಡಿಬಿಟ್ಟ. ಹೆಂಡ್ತಿ ಅನ್ನ ಕಬುರು ಇಲ್ಲ. ನನಗೂ ಮಿಕ್ಕಿತ್ತು. ಮಂದಿನು ಕಲತಿತ್. ಏನ್ ಆಗದಾಗ್ಲಿ ಅಂತಪೊಲೀಸ್ ಸ್ಟೆಷನ್‌ಗೆ ಹೋಗಿ ಕಂಪ್ಲೆಂಟ್ ಮಾಡೆಬಿಟ್ಯಾ. ನನ್ ಗಂಡನು ಅಲ್ಲೆ ಇದ್ನಲ್ಲ ಪೊಲೀಸರು ಹಿಡದು ಕುಂದ್ರಿಸಿದ್ರು, ಕೆಸ್ ಮಾಡದ ಬ್ಯಾಡ ಅಂದ್ರು, ನಾ ನಮ್ ಅಪ್ಪನ ಕರಸ್ಕೊಂಡ್ಯಾ. ೩-೪ ದಿನ ಠಾಣಾದಾಗ ಹಾಕ್ರಿ ಆ ಮೇಲೆ ನೋಡನ ಅಂತ ಹಾಕಿಸಿ ಮನಿ ಸೇರಿದ್ವಿ.

ಅವ್ರ ಮನ್ಯಾರೇಲ್ಲಾ ಬಂದು ತಪ್ಪಾಗ್ಯದಂದು ನನ್ ಗಂಡನ ಕಡೆಲಾಸಿ ಕಾಲ್ ಬಿಳಿಸಿ ಕೆಸ್ ಮಾಡಿಸಿಕೊಡ್ಲಿಲ್ಲ. ೨-೩ ತಿಂಗ್ಳಾಗಿದ್ದಿಲ್ಲ ಮತ್ ಹಂಗ ಹೊಗದು ಬರದು ಶುರು ಮಾಡಿದ. ಲಜ್ಜೆಗೆಟ್ ಜನರಿ ಅವ್ರೇಲ್ಲಾ. ಅಮ್ ಅಪ್ಪ ಬೈಯಕತ್ತ ಬಿಗುವಿರ್ಲಿ ಅಂತ. ಮತ್ ಹೊಸ ಚಾಳಿ ಶುರು ಮಾಡಿದ ಕುಷ್ಟಗಿಯಿಂದ ಸಿದಾ ನಾ ಕೆಲಸ ಮಾಡ ಡಿಪೋಕ ಬರದು ಮಾತಾಡಸದು ಹೊಗದು ಮಾಡಕತ್ತ. ಗಂಡಲ್ರಿ ಎಷ್ಟ ಮಾಡಿದ್ರು ಅಂತ ಮನಿಗೂ ಕರಕೊಂಡು ಹೊಗಕತ್ಯಾ. ನನಗ ದುಡಿಮಿಲ್ಲ ತಿಂಗ್ಳಾ ನನಗ ಸಾವಿರಾ ಕೊಡು ನಿಮ್ಮ ಮನ್ಯಾಗ ಸಾವಿರ ಕೊಡು ಅಂತ ಇಸಕೊಂಡು ಹೊಗತಿದ್ದ. ಒಂದು ೪ ತಿಂಗ್ಳು ತಗೊಂಡು ಹೊಗ್ಯಾನ್ರಿ ಹಿಂಗ. ಆ ಕೌಟುಂಬಿಕ ಸಲಹಾ ಕೇಂದ್ರದಾಗ ಕೇಸ್ ಮಾಡಿದ್ದು ಅಲ್ಲೆ ಬಿದ್ದಿತ್ರಿ, ಏನು ಪ್ರಯೊಜನನ ಆಗ್ಲಿಲ್ ಅದ್ರಿಂದ. ಹಿಂಗ ೪ ವರ್ಷ ಕಳಿತ್ರಿ, ನಾ ವಾಪಾಸ ಕುಷ್ಟಗಿಗೆ ಹೊಗ್ಲೆ ಇಲ್ಲ ಅವರ ಹೊಗದು ಬರದು ಮಾಡತಿದ್ರು, ನಾ ಬಸರಾದ್ನೆರ್ರಿ, ನನ್ ತೌವ್ರ ಮನ್ಯಾರು ಗಂಡನ ಮನ್ಯಾರಿಗೆ ಫೋನ್ ಮಾಡಿದ್ರು, ಹಿಂಗ ಬಸರಾಗ್ಯಾಳ. ಕೌಳಕುಬುಸ ಮಾಡಬೇಕು ಆ ಶಾಸ್ತ್ರ ಗಂಡನ ಮನ್ಯಾಗ ಮಾಡಬೇಕು ಅದಕ ಬಂದು ಕರಕೊಂಡು ಹೊಗ್ರಿ, ನಾವ್ ಅಲ್ಲೆ ಬಂದು ಶಾಸ್ತ್ರ ಮಾಡತಿವಿ ಅಂದ್ರು, ನನ್ ಗಂಡ ಯಾರಿಗೆ ಬಸರಾಗ್ಯಾಳೆನ ನನಗ ಗೊತ್ತಿಲ್ಲ ನಾ ಕರಿಯಕ ಬರಲ್ಲ ಅಂದ ಬಿಟ್ಟಾ. ಅವ್ರ ಅಣ್ಣತಂದಿರು ಸುಮ್‌ನಿದ್ರು ಅವಾಗ. ನಮ್ ಮನ್ಯಾಗ ಎಲ್ಲಾರ್ಗೂ ಅವರವರ ಜೀವ ಬಾಯಿಗೆ ಬಂದ್ ಕುಂತಂಗ್ ಆಗಿತ್ ಅವಾಗ. ಅವಾಗ ನಮ್ ಅಪ್ಪಗ ಎದಿ ಒಡದು ಹಾರ್ಟ ಆಗಿತ್ತು. ಹಿಂದಲೆ ದವಾಖಾನಿಗೆ ಒಯ್ದು ೮-೧೦ ದಿನಾ ಅಡ್ಮಿಟ್ ಮಾಡಿದ್ವಿ, ಹೆಣ್ ಹಡಿಬಾರ್ದುರಿ ಯಾರು. ನನ್ ದುರಾದೃಷ್ಟಕ್ಕ ನನಗೂ ಹೆಣ್ ಮಗಳ ಹುಟ್ಟಿದ್ದು. ನಮ್ ಅಪ್ಪಗ ಅರಾಮಾಗಿಂದ ಹಿರಿಯಾರ್ನ ಕಲಿಸಿದ್ವಿ ಬಗಿಹರಸಕ. ಅವ್ರೆಲ್ಲಾ ನಾವು ಬಿಗಿ ಮಾಡತನ ಅಳಿಯಾನ ಕರಕೊಬ್ಯಾಡಂದಿದ್ವಿ ಮನ್ಯಾಗ ನಿವ್ ಹೆಂಗ್ ಕರಕೊಂಡ್ರಿ, ಯಾವಾಗ ಬಂದ ಹೊಗ್ಯಾನನ್ನದ ನಮಗ ಗೊತ್ತಿಲ್ಲ. ಏನಂತ ಕೇಳನ ನಾವು ಅಂತ ಅಂದ್ರು, ನಮಗ ನೆಲನ

ಕುಸದಂಗಾತು. ತಿಳವಳಿಕಿದ್ ಮಂದೆಲ್ಲಾ ನಮ್ ಹಂಗ ಮತಾಡಿದ್ರು, ಇಲ್ಲದಾರು ಅವ್ರಂಗ ಮಾತಾಡಿದ್ರು ಜನ ಹಂಗು ಹಿಂಗೂ ಇರತಾರ. ನನ್ ಟೈಮ್ ಸುಮಾರು ಅವ್ರಂಗ ಮಾತಾಡಿದಕ್ಕ. ನನಗ ಒಬ್ಬ ತಮ್ಮ, ಒಬ್ಬೆಕಿ ತಂಗಿ ಅದಾರ್ರಿ, ಅವ್ರ ಭವಿಷ್ಯ ಮುಂದ ಹೆಂಗ ಅಂತ ಚಿಂತ್ಯಾಗಿತ್ತು. ಆ ಟೈಮ್‌ದಾಗ ಮತ್ತೆನು ಮಾಡಕಾಗ್ದ ಸುಮ್ನಾದ್ವಿ, ಹುಟ್ಟ ಮಗು ಆದ್ರು ಆಸರಾಗ್ಲಿ ಜೀವನಕ್ಕ ಅಂತ ಸುಮ್ನಾದ್ವಿ.

ಅಲ್ಲೆ ಬಸ್ ಡಿಪೋದಾಗ ಕೆಲಸಕ್ಕ ಹೊಕ್ಕಿದ್ಯಾ ಮತ್ ಪಗಾರ ಹೆಚ್ ಮಾಡಿದ್ರು, ಮುಂದ ಪರಮನೆಂಟ್ ಅಕ್ಕಾವು ನೌಕ್ರಿ ಅಂದ್ರು, ಅದು ಹೆಂಗ ನನ್ ಗಂಡನ ಕಿವಿಗೆ ಬಡದು ಮತ್ ಮನಿಗೆ ಬಂದ. ನಾಚಿಗೆಟ್ಟಾವ ಅದಾನ್ರಿ ಅವ. ನಮ್ ಅಪ್ಪ ಕರಕೊಲಿಲ್ಲ ಮನ್ಯಾಗ. ಅತ್ತು, ನಾಟಕ ಮಾಡಿ ಹಿರೇರ ಮುಂದ ನನ್ ಕಾಲಹಿಡಕೊಂಡು ತಮ್ ಅಕ್ಕ, ಮನ್ಯಾರನ ಕರಕೊಂಡು ಬಂದು ನನ್ನ ಮಾತಾಡಿಸಿಕೊಂಡು ಹೊದ್ರು, ನಾ ಕೆಸ ಬಿಟ್ಟು ಕುಪ್ಪಗಿಗೆ ಬರಲ್ಲ ಅಂದ್ಯ. ಬೇಕಾದ್ರ ನೀವ ಬಂದು ಹೋಗಿ ಮಾಡ್ರಿ ಅಂದ್ಯಾ. ಯಾ ಸೀರಿ ಕಾರಣಾನೂ ಮಾಡ್ಲಿಲ್ಲ ಏನಿಲ್ಲ ಹೆಣ್ ಮಗ್ಳನ ಹಡದೆರಿ. ಹಡದ ಸ್ವಲ್ಪ ದಿನಕ್ಕೆ ಕೆ.ಎಸ್.ಆರ್.ಟಿ.ಸಿ ದಾಗ ಕಂಪ್ಯೂಟರ್ ಆಪರೆಟರ್ ಆಗಿ ಜಾಬ್ ಪರಮನೆಂಟ್ ಆಯ್ತು. ನನ್ ತಂಗಿ ಮದ್ವಿ ಮಾಡಿದ್ಯಾ. ನನ್ ಗಂಡ ಜಿಪ್ ಓಡಸದು ಬಿಟ್ಟು ನನ್ ತಿಂಗ್ಳ ಪಗಾರಕ್ಕ ಗಂಟಬಿದ್ದ. ತಿಂಗ್ಳಾದ್ರ ಡಿಪೋದಾಗ ಬಂದ ಕುಡವ. ಜಗ್ಳ ಮಾಡವ ಕೊಡ್ಲಿಕ್ರ, ನಾಯಿ ಬಾಲ ಡೊಂಕರಿ ಯಾವತ್ತಿದ್ರು, ಯಾರ ಚಿ ತೂ ಅಂದ್ರು ಬುದ್ದಿ ಬರಲಿಲ್ಲ ನನ್ ಗಂಡಗ. ಅವ್ರ ಮನ್ಯಾರಂತು ಯಾಕ ಅನ್ನಲ್ಲ. ಇವ್ನ ಕೈಯ ಬಿಟ್ಟಾರ. ಡಿಪೋದಾಗ ಒಂದಿನ ಕುಡುದು ಬಂದು ಹೊಡದ ಸುಮ್ ಸುಮ್ನೆ. ಅವತ್ತಿಂದ ಆತ ಬ್ಯಾಡ ಬ್ಯಾಡ ಅನ್ನ ನಿರ್ಧಾರ ತಗೊಂಡಿನಿ. ಡ್ರೈವರ್ಸ್‌ಗೆ ಹಾಕಿನಿ ನಾನ. ಇತನ ಕಾಟಕ್ಕ. ಬೆಂಗಳೂರಿಗೆ ಟ್ರಾನ್ಸ್‌ಫರ್ ತಗೊಂಡಿನಿ. ಅದುಕು ಆತೆನ ಸುಮ್ನೆ ಬಿಟ್ಟಿಲ್ರಿ, ಅಲ್ಲಿ ಯಾರ್ನ ಇಟ್‌ಗೊಂಡಾಳಂತ ಹೇಳಕೊಂತ ಅಡ್ಯಾಡತಾನಂತ. ಇದನ್ನೆಲ್ಲಾ ಕೇಳಿ ನನಗ ಜೀವನನ ಬ್ಯಾಸರಾಗಿಬಿಟ್ಟದ್ರಿ, ಮದ್ಲೆಲ್ಲಾ ಅಳತಿದ್ಯಾ. ಈಗ ಅತನ ಯಾ ಮಾತು ನೋವ್ ತರವಲ್ಲು, ನಿಜ ಹೇಳಬೇಕಂದ್ರ ಮತ್ತಷ್ಟು ನನ್ ಗಟ್ಟಿ ಮಾಡಕತ್ತಾವು ಅತನ ಮಾತು.

ಇಂತ ಗಂಡನ ಹೆಸರು ಹೇಳಕೊಂಡು ಬಾಳದ ತಪ್ರಿ ನನ್ ದೃಷ್ಟಿಲೆ. ನಾನೆನಂತ ನನಗ ಗೊತ್ತು. ನನ್ ತಂದಿ ತಾಯಿ ಸರದ ನಿಲ್ಲು ಅಂದಿಲ್ಲ. ಅಂತ ಗುಣ ನಂದು. ಇಂತ ಬಂಡ್‌ಗೆಟ್ಟರಲಿಂದ ಇಷ್ಟೆಲ್ಲಾ ಅನಸ್ಕೊಳಂಗಾಗ್ಯದ. ಅದಕ ನಾನು ಡೈವರ್ಸ್‌ಗೆ ಹಾಕಿನಿ. ನನಗ ಬ್ಯಾರೆ ಮದ್ವಿ ಆಗ್ದಿದ್ರೂ ಚಿಂತಿಲ್ಲ, ನನಗ ಇಂತ ಗಂಡನಿಂದ ಮುಕ್ತಿ ಸಿಕ್ರ ಸಾಕಾಗ್ಯದ. ಹೆಂಗೊ ಬದಕೊತಿನಿ. ನಮ್ ಅಪ್ಪ-ಅವ್ವ ಮದ್ಲ ಕೊರಗತಿದ್ರು, ಈಗ ನೌಕ್ರಿ ಆಗಿಂದ ಅವ್ರಿಗೂ ಸ್ವಲ್ಪು ನಿರಾಳಾಗ್ಯದ ಅಕಿದಾಕಿ ದುಡುದು ತಿಂತಾಳಂತ. ನಮ್ ಅಪ್ಪರು ಸರ್ ಇದ್ರು, ಪ್ರೈಮರಿಗೆ. ಈಗ ರಿಟೈರ್ಡ್ ಆಗ್ಯಾರ. ಮನ್ಯಾಗ ಮೊಮ್ಮಗ್ಳನ ಆಡಸ್ಕೊತ ಕುಡತಾರ. ಅದ ನೆಮ್ದಿ. ನನ್ ಮಗ್ಳ ಅವ್ರದು ಅರ್ಧ ಚಿಂತಿ ದುರ ಮಾಡ್ಯಾಳ. ನನ್ ಗಂಡ ಡೈವರ್ಸ್‌ಗೆ ಒಪ್ಪವಲ್ಲ. ಕಿರಿಕ್ ಮಾಡಕೊಂಡು ಕುಂತಾನ. ನಾ ಸತ್ತಿಂದನ ನನ್ ಕೈ ಬಿಟ್ಟಂಗ ಕಾಣತಾನ ಅನುಸುತ್ರ್ರಿ ಅವ. ಇಂತಾರ ಇರದಕಿಂತ ಸಾಯದ ಮೇಲ್ ಅಂತಿನಿ ನೋಡ್ರಿ ನೀವೆನರ ಯಾಕ ಅನಕೊಳವಲ್ಯಾಕ.

೫.೧.೫. ಆರ್ಥಿಕ ಹಿಂಸೆ

ಪ್ರಕರಣ – ೧೬

ಹೆಸರು – ಪ್ರಜ್ಞಾವತಿ

ವಯಸ್ಸು – ೪೮

ಜಾತಿ – ಕುಡೊಕ್ಕಗ

ಊರು – ಗಿಣಿಗೇರಾ

ನಮ್ಮ ಮದ್ವೆಯಾಗಿ ೧೫ ವರ್ಷ ಆಗಿತ್ತು. ಅಷ್ಟೋತ್ತಿಗೆ ಒಬ್ಬ ಮಗ್ಳು ಇದ್ಲು. ಕರಿಷ್ಮಾ ಅಂತ ಹೆಸರು. ಬಿಜಿನೆಸ್ ಮಾಡತಿದ್ರು ನಮ್ ಮನೆಯವ್ರು. ಕಾರ ಆಕ್ಸಿಡೆಂಟ್ ನಲ್ಲಿ ತೀರಿ ಹೊದ್ರು. ಆಗ ನನ್ ಮಗ್ಳಿಗೆ ಒಬಂತ್ತು ವರ್ಷ. ನಮ್ದು ಪ್ರಾಪರ ಚಾಮರಾಜನಗರ ಮೆಡಂ. ನಾನು ಬಿ. ಎಸ್ಸಿ ಮಾಡಿದಿನಿ. ನಮ್ ಯಜಮಾನ್ರು ಇರೊವರೆಗೂ ಸುಖಾನೇ ಸುಖಾ. ಅವ್ರು ತೀರಿಕೊಂಡ್ ಮೇಲೆ ಕಷ್ಟದ ಮೇಲೆ ಕಷ್ಟ ನನಗೆ ಮತ್ತು ನನ್ ಮಗಳಿಗೆ. ನನ್ ತಾಯಿ ಮನೆಕಡೆನೂ ಯಾರಿದ್ದಿಲ್ಲ ಮೆಡಂ ನಮಗೆ ಸಪೊರ್ಟ ಮಾಡೊಕೆ. ನಮ್ ದುರ್ದೈವ ಅಷ್ಟೇ.

ನಮ್ ಯಜಮಾನ್ರಿಗೆ ಇಬ್ರು ತಮ್ದಿರು. ನಮ್ ಮನೆವರೆ ಮಧ್ಯದೊರು ಎಲ್ಲರೂ ಬೇರೆ ಬೇರೆ ಮನೆಲಿದ್ವಿ ಆದ್ರೆ ಬಿಜನೆಸ ಒಂದೆ ಇತ್ತು. ಸಾಕಷ್ಟು ಪ್ರಾಪರ್ಟಿ ಬೇರೆ ಇತ್ತು. ೬ ತಿಂಗಳು ನಮ್ ಮೈದುನರೆಲ್ಲ ನನ್ ಮತ್ತು ನನ್ ಮಗ್ಳನ ಚೆನ್ನಾಗೆ ನೋಡಕೊಂಡ್ರು. ಆಮೇಲೆ ಸರಿಗೆ ಕೇರ್ ತಗೊಲಿಲ್ಲ. ಅದಕೆ ನಾನು ನಮ್ ಯಜಮಾನ್ರು ಪಾಲಿನ ಪ್ರಾಪರ್ಟಿ ಕೇಳಿದೆ. ಅದಕೆ ಅವ್ರು ನಿಮಗ್ಯಾಕೆ ಆಸ್ತಿ ಇರೊದೊಬ್ಳು ಮಗ್ಳು ಓದಿಸಿ, ನಾವೆ ಮದ್ವೆ ಮಾಡತಿವಿ. ಆಮೇಲೆ ನೀವು ನಮ್ ಒಟ್ಟಿಗೆ ಇರಿ. ಅಂತೆಲ್ಲಾ ಹೇಳಿದ್ರು. ಮಗ್ಳಿಗೆನು ಆಸ್ತಿ ಬೇಡ್ವಾ ಹಾಗಾದ್ರೆ. ತಂದೆ ಇಂದ ಅಂತ ಕೇಳಿದಕ್ಕೆ ಜೀವನಕ್ಕೆ ಏನೇನ್ ಬೇಕು ಅದನಷ್ಟು ಮಾಡತಿವಿ ಅಂದ್ರು ಹೂ ಅಂತ ಸುಮ್ನೆನೂ ಆದೆ. ಆದ್ರೆ ಯಾಕೊ ಅವುರು ನಮಗೆ ಸರಿಗೆ ಸ್ಪಂದಿಸ್ಲೆ ಇಲ್ಲ. ಸ್ವಂತ ಮನಿ ಏನೋ ಇತ್ತು. ಆದ್ರೆ ಖರ್ಚಿನ ದುಡ್ಡಿಗೂ ಅವ್ರಿಗೆ ಬೇಡಬೆಕಿತ್ತು. ಅದ್ಕೆ ಮತ್ತೆ ಪ್ರಾಪರ್ಟಿ ಕೇಳಿದೆ. ಅವ್ರು ಕೊಡೊಕೆ ಆಗಲ್ಲ ಅಂದ್ರು. ಸಂಬಂಧ ಅಂತ ಕೂತ್ರೆ ನನ್ ಮಗ್ಳ ಭವಿಷ್ಯ ಏನು ಅಂತ ಕಾಡೊಕೆ ಶುರುವಾಯ್ತು. ನಮ್ ಸಂಬಂಧಿಕ್ರ ಸಹಾಯದಿಂದ ಕೋರ್ಟಗೆ ಕೆಸ್ ಮಾಡಿದೆ ಆಗ ನನ್ ಮೈದುನರು ಅನ್ಬಾರದ್ದೇಲ್ಲಾ ಅಂದ್ ಬಿಟ್ರು ನನಗೆ. ಹೇಳೊಕು ನೋವಾಗುತ್ತೆ. ಅಷ್ಟು ನೋಯಿಸಿ ಬಿಟ್ರು ಅತ್ತಿಗೆ ಅಂತಾನು ನೋಡ್ದೆ.

ಕೆಸ್ ಮಾಡಿ ನಾಲ್ಕು ವರ್ಷದ ನಂತರ ನಮ್ ಆಸ್ತಿ ನಮ್ ಕೈಗೆ ಬಂತು. ಆ ನಾಲ್ಕು ವರ್ಷ ನನ್ ಪರಿಸ್ಥಿತಿ ತುಂಬಾ ಕೆಟ್ಟದಾಗಿತ್ತು. ನಾ ಏನೂ ಜಾಬ್ ಮಾಡ್ತಿರಲಿಲ್ಲ. ಊಟಕ್ಕೂ ಕೂಡ ಒಂದು ಸಂದರ್ಭದಲ್ಲಿ ಕಾಸಿರಲಿಲ್ಲ. ಅಷ್ಟೊಂದು ಕಷ್ಟ ಬಿದ್ವಿ ನಾನು ನನ್ ಮಗ್ಳು. ತಂದೆ ತಾಯಿ ಮೊದ್ಲೆ ತೀರಕೊಂಡಿದ್ರು. ಅಣ್ಣ ಒಬ್ನೆ ಇದ್ದ ಅವ್ನು ತೀರಿಹೊಗಿದ್ದ. ಅತ್ತಿಗೆ ಮಕ್ಕಳಿದ್ರು ತಾಯಿ ಮನೆಯವ್ರು ಅಂತ. ಆದರೆ ಅವ್ರೆನೂ ಮಾಡಾಕಾಗ್ಲಿಲ್ಲ ನಮಗೆ ನಾಲ್ಕು ವರ್ಷದ ನಂತರ ಪ್ರಾಪರ್ಟಿ

ಬಂತು. ಚಾಮರಾಜನಗರದಲ್ಲಿ. ಎರಡು ಕಾಂಪ್ಲೆಕ್ಸ್, ಎರಡು ಸೈಟ್ ಮತ್ತು ನಮ್ದು ದೊಡ್ಡ ಬಟ್ಟೆ ಅಂಗಡಿ ಇತ್ತು. ಅದ್ರಿಂದ ನಮ್ ಪಾಲಿನ ಹಣ ಕೊಟ್ರು. ಅಲ್ಲಿಗೆ ನಮ್ ಸಂಬಂಧನೂ ಕಡದು ಬಿತ್ತು. ನಮ್ ಪಾಲಿನ್ದು ನಮಗೆ ಕೊಡೊಕು ಜನ ಸಿಟ್ಟು ಆಗ್ತಾರೆ ಈಗಿನ ಕಾಲದಲ್ಲಿ. ಎಲ್ಲದು ಅನುಭವಕ್ಕೆ ಬಂದ್ ಹೊಯ್ತು. ೩೦ ಲಕ್ಷ ಹಣ ಬಂದಿತ್ತು. ಅದನ್ನೆ ಬ್ಯಾಂಕಲ್ಲಿಟ್ಟು ಬಡ್ಡಿನಲ್ಲೆ ಜೀವನ ಸಾಗಿಸಿದ್ವಿ ನಾನು ನನ್ ಮಗ್ಳು. ಕಾಂಪ್ಲೆಕ್ಸ್ ಎಲ್ಲಾ ಬಾಡಿಗೆಗೆ ಬಿಟ್ಟದಿನಿ.

ಇದೇಲ್ಲಾ ಕಷ್ಟ ಮುಗಿತು ಸುಖವಾಗಿ ಇದಿವಿ ಒಂದೇರಡವರ್ಷ ಅನ್ನೊದ್ರೊಳಗೆ ಮತ್ತೆ ನನಗ ಕಷ್ಟ ಬಂತು ಸೇರಿಕೊಂತು. ನನ್ ಮಗ್ಳು ಇಲ್ಲಿ ಚಾಮರಾಜನಗರದಲ್ಲಿ ಎಂ.ಬಿ.ಎ. ಓದತಿದ್ಲು ಫಸ್ಟ್ ಇಯರ್‌ನಲ್ಲೆ ಪ್ರೀತಿ ಪ್ರೇಮ ಅಂತ ಸುರೇಶ್ ಅನ್ನೊ ಹುಡುಗನ್ ಹಿಂದೆ ಸುತ್ತಾಡೋಕೆ ಶುರುಮಾಡಿದ್ಲು. ಕೊಪ್ಪಳದ ಹತ್ರ ಇರಕಲ್ಲಗಡ ಅವ್ರು ಊರು. ಅವನನ್ನೆ ಮದುವೆ ಆಗ್ತಿನಿ ಅಂದ್ಲು. ವಿಧಿ ಇಲ್ಲದೆ ಹೂ ಅಂದೆ. ಓದಾದು ಮುಗುಸ್ರಿ ಅಂದ್ರು ಕೇಳಲಿಲ್ಲ. ಸುರೇಶನ ಮನೆ ಕಡೆಗೂ ಒಪ್ಪಿದ್ರು. ಜಾತಿ ಬೇರೆ ಆದ್ರು ಒಬ್ಬೆ ಮಗ್ಳು ಕೈ ತಪ್ಪೋದ್ರೆ ಅಂತ ವಿಚಾರ ಬಂತು. ಗಂಡನ ಮನೆಯವರು ಬೇರೆ ನಮ್ ಸಪೋರ್ಟಗೆ ಇರಲಿಲ್ಲ ಅದಕಂತ ಮದ್ವೆ ಮಾಡಿ ಬಿಟ್ವೆ. ನನ್ ಮಗ್ಳು ಸರಿಗೆ ಓದಲೆ ಇಲ್ಲ. ಸಬ್ಜೆಕ್ಟ್ ಉಳಿದುಬಿಟ್ವು. ನನ್ ಅಳಿಯ ತುಂಬಾ ಹುಷಾರು ಕಾಲೇಜ್‌ಗೆ ಫಸ್ಟ್ ಬಂದ್ರು. ಅವ್ರು ಎಲ್ಲಾದ್ರಲ್ಲೂ ಹುಷಾರ್ ಅಂತ ಆ ಮೇಲೆ ತಿಳಿತು ನೋಡಿ ನನಗೆ.

ಓದು ಮುಗಿದ ನಂತರ ಇಲ್ಲೆ ಬೆಂಗಳೂರಲ್ಲೆ ಕೆಲಸ ಮಾಡೊದಾಗಿ ಹೇಳಿದ್ರು ಸುರೇಶ್. ಆ ನಂತರ ನನ್ ಊರು ದೂರ, ಆದ್ದರಿಂದ ಊರಿಗೆ ಹತ್ರದಲ್ಲೆ ಕೆಲಸ ನೋಡಕೊತಿನಿ ಅಂದ್ರು. ಏನು ಅನ್ನೊಕಾಗ್ದೆ ಆಯ್ತು ಅಂದೆ. ಕೊಪ್ಪಳದ ಹತ್ರ ಕಿರ್ಲೋಸ್ಕರ್ ಫ್ಯಾಕ್ಟರಿನಲ್ಲಿ ಜಾಬ್ ಸಿಕ್ತು. ಅತ್ತೆ ಅಲ್ಲೆ ಗಿಣಿಗೇರಾ ಇದೆ ಹತ್ರದ ಊರು ಅಲ್ಲೆ ಮನೆ ಮಾಡ್ತಿನಿ. ನಾನು, ನೀವು ಕರೀಷ್ಮಾ ಅಲ್ಲೆ ಇರೊಣ. ನನಗೂ ಊರಿಗೆ ಹೋಗಿ ಬಂದು ಮಾಡೊಕೆ ಅನುಕೂಲ ಆಗುತ್ತೆ ಅಂದ್ರು. ನನಗಾದ್ರು ಯಾರಿದಾರೆ ಇವರನ್ನ ಬಿಟ್ಟು ಅಂತ ಹೂ ಅಂದೆ. ಇವರು ಮದುವೆ ಆಗಿ ಮೂರು ವರ್ಷ ಆಗಿತ್ತು ಅಷ್ಟೋತ್ತಿಗಾಗ್ಲೆ. ನಮಗೆ ಹೊಸ ಜಾಗ ಇದು. ಸುತ್ತು ಮುತ್ತೆಲ್ಲಾ ಒಳ್ಳೆ ಜನ ಇದಾರೆ. ಹಾಗಾಗಿ ಬೇಗ ಹೊಂದಕೊಂಡೂ ಬಿಟ್ವಿ. ನಮ್ ಕಡೆಗಿಂತ ಈ ಭಾಗದ ಜನ ಬಾಳ ಹಾರ್ಟ್ಲಿ ಇದಾರ್ರಿ ಮೇಡಂ. ನಮ್ ಅಲ್ಲಿ ಆದ್ರೆ ಹಾಗಲ್ಲಾ ನಾಟಕೀಯ ಜೀವನ.

ಎಲ್ಲಾ ಚಂದ ಇದ್ವಿ. ನನ್ ಮಗ್ಳು ಗರ್ಭಿಣಿ ಆದ್ಲು. ಗಂಡನ ಮನೆವ್ರು ಹೇಳಿದಾಗೆಲ್ಲಾ ಶಾಸ್ತ್ರ ಮಾಡಿದ್ವಿ, ಇರೊದೊಬ್ಳು ಮಗಳು ಅಂತ. ಹೆಂಡ್ತಿನ ಆವಾಗಾವಾಗ ಊರಿಗೆ ಕರಕೊಂಡು ಹೋಗಿ ಬಂದು ಮಾಡತಿದ್ರು. ನನ್ ಮಗ್ಳನಂತೂ ಅತ್ತೆ ಮನೆವ್ರು ತುಂಬಾ ಚಂದ ನೋಡಕೊತಾರೆ. ಇವತ್ತಿಗೂ ಚೆಂದ ನೋಡಕೊತಾರೆ. ಆದ್ರೆ ಅವ್ರಿಗೆ ಟಾರಗೆಟ್ ನಾನಾದೆ. ಮದ್ವೆ ಟೈಮಲ್ಲಿ ವರದಕ್ಷಿಣೆ ತಗೊಂಡಿರಲಿಲ್ಲ. ನಾನು ಒಬ್ಬೆ ಮಗ್ಳು ಮುಂದೆ ಎಲ್ಲಾ ಅವರದೆ ಅಂತ ತಿಳಿದು ಏನು ಕೊಟ್ಟಿರ್ಲೂ ಇಲ್ಲ. ಕ್ರಮೇಣ ಎಷ್ಟ ದಿನಾ ಹೀಗೆ ಇರೊದಂತಾ ನನ್ ಗಂಡನ ಮನೆಯರ ಜೊತೆ ಸಂಪರ್ಕ ಬೆಳಸಿಕೊಂಡೆ. ಮದ್ವೆ, ಮುಂಜಿ ಅಂತೆಲ್ಲಾ ನಾನು ಹೊಗೊದು ಬರೊದು ಮಾಡೊಕೆ ಶುರು ಮಾಡಿದೆ. ನಮ್ ಮೈದುನನ ಮಕ್ಳೆಲ್ಲಾ ಫ್ರಿ ಇದ್ದಾಗಲೆಲ್ಲಾ ಇಲ್ಲಿಗೆ ಬರೊದು ಹೊಗೊದು ಶುರು

ಮಾಡಿದಾರೆ. ಅದು ನನ್ ಅಳಿಯನಿಗೆ ಸಹಿಸೊಕಾಗ್ತಿಲ್ಲ. ಇಷ್ಟದಿನಾ ಇಲ್‌ದೆ ಇರೊರು ಈಗ್ಯಾಕ್ ಬಂದ್ರು ಅಂತ ಕಿರಿಕಿರಿ ಶುರುಮಾಡಿದಾರೆ. ನನ್ ಮಗ್ಳು ಗಂಡು ಮಗು ಹೆತ್ಲು. ಎಲ್ಲಾ ಖುಷಿ ಆಗಿದ್ವಿ, ಆದ್ರೆ ನನ್ ಅಳಿಯ ಇಗ ನನಗೆ ಜಾಬ್ ಬೇಡವಾಗಿದೆ ಬಿಜನೆಸ್ ಮಾಡತಿನಿ, ಬೈಕ್ ಶೊರೂಮ್ ಮಾಡತಿನಿ. ನಿಮ್ ಹತ್ರ ಇರೊ ಹಣ ಕೊಡಿ. ೨೦ ಲಕ್ಷ ಮೇಲೆ ಲೊನ್ ಮಾಡತಿನಿ ಅಂದ್ರು, ನಾ ಹೇಗ್ ಕೊಡ್ಲಿ ಇವ್ರೆ ಅಷ್ಟ್ ಹಣಾನ. ಮನೆನೂ ನಾನೆ ನಡಸ್ಕೊಂಡು ಹೊಗ್‌ತಿದ್ದಿನಿ ಅಂದೆ.

ಬ್ಯಾಂಕ್‌ನಲ್ಲಿ ಇಟ್ಟಿರೊ ಹಣದ ಇಂಟ್ರಸ್ಟ್ ಹಾಗೂ ಊರಲ್ಲಿರೊ ಕಾಂಪ್ಲೆಕ್ಸ್ ಬಾಡಿಗೆನಲ್ಲಿ ಜೀವನ ಸಾಗತಿತ್ತು. ಈಗ ಹಣ ಎಲ್ಲಾ ಕೊಟ್ರೆ ಮುಂದೆ ಜೀವನ ಹೇಗೆ ಅಂತ ನನ್ ಮೈದುನರಿಗೆ ಕೇಳಿದೆ. ಅದಕೆ ನನ್ ಅಳಿಯ ಜಗ್ಳ ಎಲ್ಲಾ ಮಾಡಿ ನನ್ ಜೊತೆ ಮಾತಾಡೊದೆ ಬಿಟ್ಟಿದಾನೆ. ಮನೆಲಿ ಅವರ ವರ್ತನೆ ತುಂಬಾ ನೊವು ತರೊಕೆ ಶುರುಮಾಡಿದೆ. ನಾ ವಾಪಸ್ ಚಾಮರಾಜ ಪೇಟೆಗೆ ಹೋಗತಿನಿ. ನಿಮಗೆ ಅಷ್ಟ್ ದುಡ್ ಕೊಡೊಕಾಗೊದಿಲ್ಲಾ. ಬೇಕಾದ್ರೆ ಐದಾರ ಲಕ್ಷ ಕೊಡತಿನಿ ಅಂದೆ. ಅದಕೆ ಅವ್ಳು ಒಬ್ರೆ ಹೊಗಬೇಡಿ ಜೊತೆಗೆ ನಿಮ್ ಮಗ್ಳನೂ ಕರಕೊಂಡು ಹೋಗಿ. ನಾ ಬೇರೆ ಮದ್ವೆ ಆಗತಿನಿ ಅಂದ್‌ಬಿಟ್ರು, ಅಷ್ಟದಿನ ಅಳಿಯನ ಬಗ್ಗೆ ಕಟ್ಟಿದ ಕನಸು ಒಡೆದು ಹೊದ್ವು ಮೆಡಂ. ಒಂದು ಮಗು ಇದ್ದು ಅದು ಹೇಗೆ ಮನಸಾತೊಅಂತ ಮಾತಾಡ್ಲಿಕ್ಕೆ. ಅವ್ರ ತಾಯಿ-ತಂದೆ ತುಂಬಾ ಇನೊಸೆಂಟ್ ಅವ್ರಿಗೆ ಏನು ಮಾಡೋಕಾಗತಿಲ್ಲ. ನನ್ ಮಗ್ಳ ಮುಂದೆ ಹೇಳತಾರಂತೆ ಸುರೇಶ್ ನಿಮ್ ಮಮ್ಮಿ ಎಲ್ಲಾ ಪ್ರಾಪರ್ಟಿನು ನಿಮ್ ಚಿಕ್ಕಪ್ಪನ ಮಕ್ಳಿಗೆ ಕೊಡತಾರೆ. ಇಷ್ಟದಿನ ಇಲ್ದೊರು ಇಗೆಕೆ ಬರೊದು ಹೊಗೊದು ಮಾಡತಿದಾರೆ ಅಂತೆಲ್ಲಾ ತಲೆಗೆ ತುಂಬಿ ನನ್ ಮಗ್ಳನೆ ನನ್ ವಿರುದ್ಧ ಮಾಡಿ ಜಗ್ಳ ಆಡೊ ಹಾಗೆ ಮಾಡಿದಾರೆ. ಮಗ್ಳ ಹೆಸರಿಗೆ ಎಲ್ಲಾ ಪ್ರಾಪರ್ಟಿ, ಹಣ ಮಾಡೊ ಮಾತು ಮಾತಾಡತಾರೆ. ಈವಾಗ್ಲೆ ಈ ಬುದ್ದಿ ಬಂದಿದೆ ಮುಂದೆ ಹೇಗೆ ನನ್ ಜೀವನ ನೊಡತಾರೆ ಇವ್ರು, ನಿಜಕ್ಕೂ ನಮ್ ಮನೆವ್ರು ತೀರಿಹೊದ ನಂತರ ನನ್ ಬದುಕು ದುರಂತ ಆಗಿದೆ.

ಮಗ್ಳು ಸರಿಗೆ ಮಾತಾಡೊದಿಲ್ಲ ಈಗ ನನ್ನೊಟ್ಟಿಗೆ. ನನ್ ಹೆಸರಿಗೆ ಏನು ಇರಬಾರದಂತೆ. ನಾ ಸತ್ ನಂತರ ಆಸ್ತಿ ತಮ್ಮ ಹೆಸರಿಗೆ ಮಾಡಕೊಳೊಕೆ ತೊಂದ್ರೆ ಅಂತೆ. ಈಗ್ಲೆ ಎಲ್ಲಾ ಕೊಟ್ಟಬಿಡು ಮಮ್ಮಿ, ಸುರೇಶ್ ಅವರು ಮುಂದುವರೆಯೊ ಮನಸಿಲ್ವಾ ನಿನಗೆ ಅಂತಾಳೆ ಮಗ್ಳು. ಮುಂದೆ ನನ್ ಮಗ್ಳಿಗೆ ಮೋಸ ಮಾಡೊಲ್ಲಾ ಅಂತ ಏನ ಗ್ಯಾರಂಟಿ. ಅದಕೆ ವಿಚಾರ ಮಾಡಿತಿದಿನಿ ಮೆಡಂ. ಇರೊದೊಬ್ಳು ಅವ್ಳು ನೋವಾಗೊ ಹಾಗೆ ನಡಕೊತಿದಾಳೆ. ಯಾರು ನಂಬಿಕೆಗೆ ಯೋಗ್ಯ ಅಂತ ತಿಳಿತಿಲ್ಲಾ. ನಮ್ ಯಜಮನ್ರು ಬದುಕಿದ್ರೆ ಈ ನೋವು ಇರತಾನೆ ಇದ್ದಿಲ್ಲಾ ಮೆಡಂ. ಈ ಮಗ್ಳು ಇದ್ದಿಲ್ಲಾ ಅಂದ್ರೆ ನನ್ ಮೈದುನರಾದ್ರು ನೊಡತಿದ್ರು, ಮಗ್ಳಿಗೊಸ್ಕರ ಅವರ ಜೊತೆನು ಮನಸ್ತಾಪ ಮಾಡಕೊಂಡೆ. ವಾಪಸ್ ಹೊದ್ರ ಮಗ್ಳ ಗತಿ ಏನು ಅನ್ನೊ ಚಿಂತೆಗೆ ಇಲ್ಲೆ ನೋವು ಅನುಭವಿಸ್ತಾ ಕುತಿದಿನಿ. ಮಗ್ಳ ನನ್ ಜೊತೆಗೆ ಚೆನ್ನಾಗಿಲ್ಲಾ ಅಂದ್ರೆ ಹೇಗಿರೊದು ದಿನಾ ಮುಖ ನೋಡತಾ. ಅದ್ರಕ್ಕಿಂತಾ ಬೇರೆ ಹಿಂಸೆಬೇಕಾ ಮೆಡಂ.

ಪ್ರಕರಣ - ೧೭

ಹೆಸರು - ಸ್ಯಾವಮ್ಮ

ವಯಸ್ಸು - ೪೬

ಜಾತಿ - ಜಂಗಮರು

ಊರು - ಕೊಪ್ಪಳ

ನಮ್ ಊರು ಇಲ್ಲೆ ಕೊಪ್ಪಳದ ಹತ್ರ ಹಳ್ಳಿ. ನಮ್ ಯಜಮಾನ್ರು ಮಿಲಟರಿನಲ್ಲಿ ಇದ್ರು, ಜೀವನ ಬಾಳ ಚೆಂದ ಇತ್ ಅವ್ವಿ (ಸಂಶೋಧಕಿ). ನಮ್ ಮನೆವ್ರು ಕಾರ್ಗಿಲ್ ಯುದ್ಧದಲ್ಲಿ ತೀರಿಕೊಂಡ್ರು, ಅವಾಗ ಸಾಕಷ್ಟು ಹಣ ಬಂದಿತ್ತು. ಲಕ್ಷಾಂತರ ರೂಪಾಯಿ. ನನಗ ಇಬ್ರು ಗಣ್ ಮಕ್ಳು ಬಾಳ ಚಿಕ್ಕೋರಿದ್ರು ಅವ್ರ ಅಪ್ಪ ತೀರಕೊಂಡಾಗ. ಅತ್ತಿ ಮಾವನು ಇದ್ರು, ನನಗ ಲಕ್ಷಾಂತರ ರೂಪಾಯಿ ಹಣ ಕೈಗೆ ಬರತ್ಲೆ ತಲೆ ಕೆಡತು. ನಮ್ ಯಜಮಾನ್ರು ಸತ್ತಾಗ ಅವ್ರಿವ್ರಂತ ಮನೆಗೆ ಜನ ಬರತಿದ್ರು ಮಾತಾಡಿಸ್ಲಿಕ್ಕೆ. ಅಂತದ್ರಲ್ಲಿ ರಾಜಕೀಯದಾಗ ಓಡಾಡಕೊಂಡು ಇರ ಸದಸ್ಯರೊಬ್ರದು ಬಾಳ ಪರಿಚಯ ಆಗಿತ್ತು. ಶರಣಪ್ಪ ಅವ್ವಿ ಅವ್ರ ಹೆಸರು. ಎರಡ ವರ್ಷದ ನಂತರ ಅದು ಪ್ರೇಮವಾಗಿ ಬೆಳಿತು. ಅವ್ರಿಗೆ ನನಗ ದೈಹಿಕವಾಗಿ ಏನು ಸಂಬಂಧ ಇರಲಿಲ್ಲ. ಆದ್ರ ನಾನೂ ಒಂದು ಹೆಣ್ಣು, ನನಗೂ ಆಸೆ ಅನ್ನದು ಇರುತ್ತ. ಅದಕ ಅವ್ರ ಜೊತೆ ಕೂಡ ನಿರ್ಧಾರ ಮಾಡಿದೆ. ನನಗ ಆವಾಗ್ಲೆ ಎರಡ ಮಕ್ಳಿದ್ವು, ಅದಕ ಮದ್ವಿ ಬೇಡ ಅಂದ್ರಂತೆ ಅವ್ರ ಮನೇಲಿ. ನಾವು ಹಾಗೆ ಮದ್ವೆ ಆಗದೆನೆ ಒಟ್ಟಿಗೆ ಇರೊಕೆ ಶುರು ಮಾಡಿದ್ವಿ, ನಮ್ ಹಳ್ಳಿ ಊರಾಗ ಇಂತದಕ್ಕೆಲ್ಲಾ ಅವಕಾಶ ಇರದಿಲ್ಲ. ಅದಕ್ಕ ಅತ್ತಿ, ಮಾವನತ್ರ ಜಗಳ ಮಾಡಿ, ಮಕ್ಳ ಸಾಲಿ ನೆಪ ಮಾಡಿ ಕೊಪ್ಪಳ ಸೇರಕೊಂಡೆ.

ಸರ್ಕಾರದೊರು ಪೆಟ್ರೋಲ್ ಬಂಕ್ ತೆಗಿಲಿಕ್ಕೆ ಅನುಮತಿ ಕೊಟ್ಟಿದ್ರು, ಅದನ್ನ ನಮ್ ಮನೆವ್ರ ಹೆಸರಲ್ಲೆ ಶುರು ಮಾಡಿದ್ವಿ, ನಾನು ಶರಣಪ್ಪ ಕೂಡೆ ಅದ್ರಲ್ಲಿ ಕೆಲಸ ಮಾಡತಿದ್ವಿ, ಶರಣಪ್ಪರದು ಕೊಪ್ಪಳದ ಹತ್ರ ಒಂದು ಹಳ್ಳಿ, ಅವ್ರು ಮನೆಗೆ ಹೊಗೊದು ಬರೊದು ಮಾಡತಿದ್ರು, ಕ್ರಮೇಣ ಇಬ್ರು ಕೂಡೆ ಇರೊಕೆ ಶುರು ಮಾಡಿದ್ವಿ, ಆಜು ಬಾಜು ಜನ ಏನಾದ್ರು ಅಂತಾರ ಅಂತ ಗೊತ್ತಿದ್ದು ಇರತಿದ್ವಿ, ಜನಕ್ಕೊಸ್ಕರ ಎಲ್ಲಾ ಟೈಮ್ ಬಾಳೊಕಾಗಲ್ಲ ಅಂತ. ನನ್ ಮಕ್ಳು ಅವ್ರಿಗೆ ಅಪ್ಪ ಅಂತ ಕರಿಯೋಕೆ ಶುರು ಮಾಡಿದ್ರು, ಯಾಕಂದ್ರಅವ್ರಿಗೆ ಅವ್ರ ಅಪ್ಪನ್‌ದು ಜಾಸ್ತಿ ಟಚ್‌ಅ ಇರಲಿಲ್ಲ.

ನಮ್ಮಿಬ್ರ ಸಂಬಂಧಕ್ಕ ನನ್ನ ಮನೆವ್ರ ಕಡೆಯಿಂದ, ನನ್ನ ಗಂಡನ ಮನೆರಿಂದ ಏನು ಪ್ರಾಬ್ಲಮ್ ಬರ್ಲಿಲ್. ಯಾಕಂದ್ರ ನನ್ ಹತ್ರ ಹಣ ಇತ್ತು ಲಕ್ಷಗಟಲೆ. ನಮ್ ಯಜಮಾನ್ರು ಸತ್ತಾಗ ಬಂದಿದ್ದು. ಅವ್ರಿಗೆಲ್ಲಾ ಸ್ವಲ್ಪಸ್ವಲ್ಪ ಕೊಟ್ಟು ಬಾಯಿ ಮುಚ್ಚಿಸಿದ್ಯಾ. ನನ್ ಮಕ್ಳು ಏನು ಕೇಳಲ್ಲ ಈ ವಿಚಾರವಾಗಿ. ಈಗ ದೊಡ್ ಮಗ ಇಂಜಿನಿಯರ್ ಮಾಡಕತ್ತಾನವ್ವಿ, ಶರಣಪ್ಪನರನ ಅಪ್ಪ ಅಂತಾವು. ಇದಕ್ಕೆಲ್ಲಾ ಸಮಾಜ ಸಾಕಷ್ಟ ಮಾತಾಡಿಕೊಳ್ಳುತಂತ ಗೊತ್ತು. ಆದ್ರ ಅದಕ್ಕೆಲ್ಲಾ ಕೇರೆ ಮಾಡಲ್. ಆದ್ರ ಇವಾಗ ಬ್ಯಾರೆನ ಸಮಸ್ಯೆ ಶುರುವಾಗ್ಯವು. ಅದ ನನಗ ದಿನಾ ಚಿಂತಿ ಮಾಡಂಗ ಆಗೈತಿ. ಶರಣಪ್ಪರ ಮನೆಕಡೆವ್ರು ನನ್ ಮಾತಾಡಸದಿಲ್ಲ. ಆದ್ರ ನಾ ಅವ್ರಿಗಂತ ಎಲ್ಲಾ ಮಾಡಿದೆ. ಪೆಟ್ರೋಲ್ ಬಂಕ್

ಇಡೀ ಜವಾಬ್ದಾರಿ ಶರಣಪ್ಪರಿಗೆ ಕೊಟ್ಟಿದ್ದೆ. ಈಗ ಬಂಕ್ ಮುಚ್ಚೊ ಪರಿಸ್ಥಿತಿ ಬಂದಿದೆ. ಲಾಸ್‌ನ್ಯಾಗ ಐತಿ ಈಗ ಅದು.

ನನ್ನ ಹಣದಲ್ಲೆ ಶರಣಪ್ಪರ ಮನೆಯವರೆಲ್ಲಾ ಇಷ್ಟದಿನಾ ಬದಕಿದ್ದು. ಅಷ್ಟಾದ್ರೂ ನಾನು ಏನು ಅನ್ನಲ್ಲ. ನನಗಾಗಿ ನಾನು ಬಂಗಾರ ಒಂದನ್ನ ಬಿಟ್ರೆ ಬೇರೆನು ಮಾಡಕೊಲಿಲ್ಲ. ಎಲ್ಲಾಹಣಕಾಸಿನ ವಿಚಾರ ಅವ್ರಿಗೆ ಬಿಟ್ಟಿದ್ದೆ. ಶಾಮಿಯಾನ್ದು ಅಂಗಡಿನೂ ತೆಗದಿದ್ವಿ ಇಲ್ಲೆ ಕೊಪ್ಪಳದಲ್ಲೆ. ಅದು ನಡಿಲಿಲ್ಲಾ ಸರಿಗೆ. ಸಾಕಷ್ಟು ಹಣ ಕಳಕೊಂಡಿದಿನಿ. ಶರಣಪ್ಪರು ನನ್ನ ಬಾಳ ಇಷ್ಟ ಪಡತಾರ. ಆದ್ರ ಈಗ ಬೇರೆ ಮದ್ವೆ ಆಗೊ ವಿಚಾರ ಮಾಡತಿದಾರೆ ಮನೆವ್ರ ಒತ್ತಾಯಕ್ಕೆ. ಹಣನೂ ಕಳಕೊಂಡಿದಿನಿ ಈಗಾಗಲೇ. ಈಗ ಅವ್ರನ್ನು ಕಳಕೊಬೇಕಾಗುತ್ತೆನೋ ಅಂತ ಭಯ. ಅಷ್ಟ ಅಲ್ಲ ಶರಣಪ್ಪರು ನನಗೆ ಕುಡಿಯೊ ಚಟ ಬೇರೆ ಕಲಿಸಿದಾರೆ. ಈಗ ಅವ್ರ ಚಿಂತಿದಾಗ ಬಾಳ ಡ್ರಿಂಕ್ಸ್ ಮಾಡತಿದಿನಿ. ಮೊನ್ನೆ ರಸ್ತೆದಲ್ಲೆ ಬಿದ್‌ಬಿಟ್ಟಿದ್ದೆ. ಹಣನೂ ಹೊತು, ಗುಣನೂ ಕಳಕೊಂಡೆ.

ನನ್ ಸಣ್ ಮಗ ಡಿಪ್ಲೋಮಾ ಪೈನಲ್ ಇಯರ್. ಅವನಂತೂ ನನ್ ಕಂಡ್ರೆ ಸೆರೋದಿಲ್ಲ. ದೊಡ್ಡ ಮಗ ಸಣ್ಣವಿರಾದ್ರಾಗಿಂದ ಯಾವಾಗ್ಲೂ ಹಾಸ್ಟೆಲ್‌ದಲ್ಲೇ ಇದ್ದು ಓದಿದ. ಹಾಗಾಗಿ ಅವನಿಗೆ ಸ್ವಲ್ಪ ಪ್ರೀತಿ ನಾನಂದ್ರ, ನಾ ಮಾಡಿದ ತಪ್ಪಿಗೆ ಈ ಶಿಕ್ಷೆ ಏನೋ ತಿಳಿತಿಲ್ಲ, ಶರಣಪ್ಪರು ಬರಿ ಸಾಲನ ತೋರಿಸಿದ್ರು ನನಗ, ಅದಕ್ಕೊಸ್ಕರ ಬಂಕ್‌ನ ಲೀಜ್‌ಗೆ ಹಾಕಿದಿನಿ. ಈಗ ನನ್ನ ಹತ್ರ ಸ್ವಲ್ಪ ಹಣ, ಸ್ವಲ್ಪ ಬಂಗಾರ ಬಿಟ್ರೆ ಬೇರೆನೂ ಇಲ್ಲ. ಎಲ್ಲಾ ನನ್ನ ಹೆಸರಲ್ಲೇ ವ್ಯವಹಾರ ಇದ್ದಿದ್ರಿಂದ ನಾನ ಎಲ್ಲದಕ್ಕೂ ಜವಾಬ್ದಾರಿ ಆದೆ. ಶರಣಪ್ಪರು ಸ್ವಂತಕ್ಕ ತಾವೆನಾದ್ರು ಹಣ ಮಾಡಕೊಂಡಾರೆನ ಅಂತಾನೂ ತಿಳಿತಿಲ್ಲ. ಆದ್ರ ಯಾವಾಗ್ಲೂ ದುಡ್ಡಿಲ್ಲಾಅಂತಾನ ಅಂತಿರತಾರ. ಅದ್ಯಾವ್ದು ನನಗ ಚಿಂತೆ ಆಗಿಲ್ಲ. ಇಷ್ಟು ವರ್ಷ ಬೇರೆ ಮದ್ವೆ ಆಗಲ್ಲ ಅಂತಿದ್ರು, ಈಗ ಮದ್ವೆ ಆಗತಿನಿ ಅಂತಿದಾರೆ, ಬದ್ಲಾಗಿದಾರೆ. ಮದ್ವೆ ಆದ್ರ ಏನಾತು ನಿನ್ ಹತ್ರನೂ ಬರತಿರತಿನಿ ಬಿಡು ಅಂತಾರೆ. ಹೇಗಾಗ್ ಬಾರ್ದವ್ವಿ ನನಗ. ನನ್ನ ಈಡಿ ಸರ್ವಸ್ವನೂ ಅವ್ರ ಅಂತ ತಿಳದಿದ್ಯಾ. ನನ್ನ ಎಲ್ಲಿ ಬಿಟ್ ಹೋಗತಾರೆನಂತ, ನನ್ನ ಹತ್ರ ಇರೊದೆಲ್ಲಾ ಕೊಟ್ಟೆ, ನಾನು ಎರಡ ಮಕ್ಕು ಆಗಿಂದ ಆಪ್ರೇಷನ್ ಮಾಡಸ್ಕೊಂಡಿದ್ಯಾ. ಹಾಗಾಗಿ ಶರಣಪ್ಪರ ಹೆಸರಿಗೆ ಮಕ್ಕು ಆಗ್ಲಿಲ್.

ಈ ವಿಚಾರಕ್ಕ ಜಗ್ಳ ಬಂದಾಗ ಸೀರಿ ಬಿಚ್ಚೊಹಾಗೆ ಹೊಡಿತಿದ್ರು, ಕೆಟ್ಟ್‌ಕೆಟ್ಟ್‌ದಾಗೆಲ್ಲಾ ಬೈತಿದ್ರು ಆದ್ರು ನಾ ಬೇಜಾರಾಗಿರಲಿಲ್ಲ. ಆದ್ರ ಈಗ ಅವ್ರು ಬೇರೆ ಮದ್ವೆ ಆಗೊ ವಿಚಾರ ನೆನಸ್ಕೊಂಡ್ರೆ ಬೇಜಾರಾಗಿಬಿಡುತ್ತವ್ವಿ, ಇಷ್ಟ್ ವರ್ಷದಾಗ ನಾ ಒಬ್ರ ಮನಿಗೆ ಹೋಗಿಲ್ಲಾ. ನನಗ ಅವ್ರ ಪ್ರಪಂಚ ಆಗಿದ್ರು ಅಷ್ಟ ಹಚಕೊಂಡಿನಿ. ಆದ್ರ ಈಗ ನನಗೆ ದ್ರೊಹ ಮಾಡಕತ್ತಾರ. ಅವ್ರನ್ನ ಬಿಟ್ ಇರೊ ಶಕ್ತಿನೂ ನನಗಿಲ್ಲ. ನೀನೂ ಮನೆಯವ್ರು ಆದಂಗೆ ಆಗಿದಿ ಅಂತ ನಿನಗ ಇದನ್ನೆಲ್ಲಾ ಹೇಳಕೊಂಡಿನಿ. ಆಂಟಿ ಎಂಥಾರಂತ ಬೈದ್ರೂ ಚಿಂತಿಲ್ಲ ನನ್ನ. ನನಗ ಬಾಳ ನೋವಾಗೈತಿ ಅದಕೆ ಎಲ್ಲಾ ಹೇಳಕೊಂಡಿನಿ. ಏನು ಅನಕೊಬೇಡ.

ಪ್ರಕರಣ – ೧೮

ಹೆಸರು – ಗಾಳೆವ್ವ ದೊಡ್ಡಮನಿ

ವಯಸ್ಸು – ೪೭

ಜಾತಿ – ಮಾದರ

ಊರು – ಹಿರೇಸಿಂದೋಗಿ

ನಮ್‌ದೇನ್ ಕೇಳತಿರ್ಯವ್ವ, ಬದಕಿದ್ದು ಸತ್ ಜನ ನಾವು. ನಾವು ಸಣ್ಣರಿದ್ದಾಗ ಏನು ತಿಳಿತಿರಲಿಲ್ಲ ಇಗ ಮಂದಿ ನೋಡಿ ಜೀವನ ಅಂದ್ರ ಏನಂತ ತಿಳಿತದ. ಮಕ್ಳ ದೊಡ್ಡವಾದಂಗ್ಯಲ್ಲ ಜೀವನ ಪಾಠ ಕಲಸಕತ್ತದ. ಅಪ್ಪ ಅವ್ವ ಮಾಡಿದ ತಪ್ಪಿಗೆ ನಾನು, ನನ್ ಮಕ್ಳ ಜೀವನದಾಗ ಪಡಬಾರ್ದ ಪಾಡ ಪಡಂಗಾಗೈತಿ. ನಾ ೧೨ ವರ್ಷದಾಕಿದ್ದಾಗ ನನ್ ದೇವದಾಸಿ ಮಾಡಿಬಿಟ್ಟಾರಾ. ಅವಾಗೆನೂ ತಿಳಿದಿದ್ದಿಲ್ಲ, ಹಂಗ ಜೀವನ ಕಳದಬಿಡ್ತು. ಇವಾಗ ತ್ರಾಸ ಅಕೈತ್ಯವ್ವ, ನಾವು ಯಾರ ಜೋಡಿನರ ಇದ್ರ ಅದು ನಮ್ಮ ಸಂಸಾರ ಅಂತನಾ ತಿಳಿತಿವಿ. ನನ್ ಮಕ್ಕು ಅವ್ರಿಗೆ ಅಪ್ಪ ಅಂತನಾ ಅಂತಾವು. ಹಿಂಗ ೩, ೪ ಗಂಡಸರ ಜೊಡ್ ಇದ್ಬಾಕ್ರಿ, ಅದ್ರಾಗೆನೈತಿ ಹೇಳಕ ನಮ್ಗ ದೇವ್ರ ಹಂಗ ಇಟ್ಟಾನ್ಯವ್ವ, ನಾ ಹಂಗ್ ನಡಿಲಿಕ್ರ ದೇವ್ರ ಮೆಚ್ಚ್‌ಲಿಕಿಲ್ ನನ್ನ. ಆದ್ರ ಜನ ಬರೊಬರಿ ಇಲ್ರಿ, ನನ್ ಮಕ್ಕಿಗೆ ಇಂತಾಕಿ ಮಗಳು, ಮಗ ಅಂತಾರಂತ. ಮೂವಾರ ಮಕ್ಕಅರ ಯವ್ವ ನನಗ. ಯಾಡ ಹೆಣ್, ಒಂದು ಗಂಡು. ದೊಡ್ ಮಗ್ಳ ಜಾಸ್ತಿ ಕಲಿಲಿಲ್ ಯವ್ವ, ಯಾಡ್ನೆದಾಕಿ ೧೦ ನೇತ್ತ ಅದಾಳ. ಮಗ ಒಂಬತ್ನೆತ್ ಅದಾನ. ಅವ್ರಿಗೆ ಶ್ಯಾಲ್ಯಾಗ ನನ್ನ ಹೆಸರು ಹಚ್ಯದ್ರಿ, ನಿಮ್ ಅಪ್ಪ ಇಲ್ಲನು ಅಂತಾರಂತ ಹುಡುಗುರು. ನನ್ ಮಕ್ಕು ಬಂದು ಅಳತಾವ್ಯವ್ವ, ನಾ ಏನ್ ಮಾಡ್ಲಿ ನಂದೇನ್ ತಪ್ಪೈತಿ. ಅವ್ರು ಅನ್ನಾದ್ರಾಗೂ ತಪ್ಪೆನಿಲ್ಲ. ಇರದನ ಹೇಳ್ಯಾರ. ಜಗ್ಳ ಮಾಡಕ ಹೊದ್ರ ನದ್ ನಾನ ತಕೊಂಡಂಗಕೈತಿ ಯಾಕ ಯ್ಯವ್ವ?.

ಇಂಥಾ ಟೆಮ್ ನನಗ ಬರ್ತ ಅಂತ ಕನಸ್ ಮನಸನ್ಯಾಗ ನೆನಸಿರಲಿಲ್. ನಾ ದೇವದಾಸಿ ಅಂತ ನನಗೆನು ತ್ರಾಸಿಲ್ಲ ಇವತ್ತಿನ ತನ. ಆದ್ರ ನನಗ ಒಬ್ಬವ ದೊಡ್ ಮೋಸ ಮಾಡಿಬಿಟ್ಟಯವ್ವ ಹಾದರಗಿತ್ತಿ ಮಗ. ೮ ೧೦ ವರ್ಷದಿಂದ ನನ್ ಜೋಡಿನ ಇದ್ದ. ನಂಬಿದ್ಯಾ ಅವನ. ಚಿಲವಾಡಿಗ್ಯಾತ. ನನ್ ಮನಿ ಏನ್ ನಡಸತಿದ್ದಿಲ್ಲ ಆ ಬೋಳಿಮಗ. ನನ್ನ ದೇವಿಗೆ ಬಿಟ್ಟಾಕ್ಯಂತ ನಾನು ಎಂದು ಏನು ಕೇಳಿಲ್ಲ. ಅವನ ತಿಳದ್ರ ೧೦, ೨೦ ರೂಪಾಯಿ ಮಾಡದಾಗ ಇಟ್ಟ ಹೊಕ್ಕಿದ್ದಾ. ಬಾಳ ನಂಬಿದ್ಯಾ ಆ ಹಾದ್ರಗಿತ್ತಿ ಮಗನ. ಮನ್ಯಾಗ ಬಾಳ ಕಷ್ಟ ಐತಿ, ಹೊಲ್ದಾಗೂ ಏನಿಲ್ಲ ಮಳಿ ಇಲ್ಲದಕ್ಕ ಅಂತ ಗೊಳಾಡತಿದ್ದ. ಒಕ್ಕಲತನ ಮಾಡತಾನ. ಅತಗ ಮದ್ವಿ ಆಗಿ ೩ ಮಕ್ಕಿದ್ವು ಯಾಡ್ ಹೆಣ್ಣು, ಒಂದು ಗಂಡು. ಮಗಳ ಮದ್ವಿಗೆ ರೊಕ್ಕ ಇಲ್ಲ ಅಂತ ಅಳಕತ್‌ಯ್ಯವ್ವ, ನಾ ಗಾಳ್ಯವ್ವನ ಆಣಿ ಮಾಡಿ ಹೇಳತಿನ್ಯವ್ವ, ಅತ ಅಷ್ಟ ಅನ್ನನ ನಾ ಆಕಿ ನನಗೂ ಮಗ್ಳ ಅಂತ ಅಂದಾಕ್ಯ ನನ್ ಮನಿ ಕಾಗದ ಪತ್ರ ಅತನ ಕೈಗಿಟ್ಟು ಖುದ್ ನಾನ ೪ ಬಡ್ಡಿಯಂಗ ಸಾಲ ತಕ್ಕೊಟ್ಯಾ. ೫೦,೦೦೦ ತಗದಿವಿ ಸಾಲ. ಬಾಳ ನಂಬಿದ್ನೆವ್ವ್ ಆ ಹಡಬಿಟ್ಟಿ ಮಗನ್ನ.

ನಾ ದೇವರಿಗೆ ಬಿಟ್ಟಾಕ್ಯಂತ ಗುಡಿ ಪೂಜಾರಿ ಮಾಡ್ಯಾರ ಅದ್ರಾಗ ಬಂದಿದ್ದ ತಿನಬೇಕು. ನಾ ಒಬ್ಬಾಕಿ ಮಗ್ಳು, ೪ ಮನಿ ಅದಾವ ನನ್ ಹೆಸರ್ಲೆ ಸಣ್ಣು, ನಮ್ ಏರ್ಯಾದಾಗ. ೩ ಮನಿ ೧೦೦೦ ದಂಗ ಬಾಡಗಿ ಕೊಟ್ಟಿನಿ ಮದ್ಲ ೨೦೦ ರೂಪಾಯಿಗೆ ಕೊಟ್ಟಿದ್ಯಾರಿ. ಅಷ್ಟ್ರಾಗ ಜೀವನ ನಡಸ್ಕೊಂಡು ಹೊಕ್ಕಿದ್ಯಾ. ಈ ಬೊಳಿ ಮಗನ ಸಲವಾಗಿ ೧ ಮನಿದ ಕಾಗದ ಪತ್ರ ಇಟ್ವಿ, ೩-೪ ತಿಂಗಳ ಬಡ್ಡಿ ತುಂಬಿದಂಗ ಮಾಡ್ದ. ಅತ್ತಾಗ ಪತ್ತೆನ ಇಲ್ರಿ. ಬಾಳ ಹಚಕೊಂಡಿದ್ಯಾ ವರ್ಷದಿನಾ ಆತು ಇತ್ತಾಗ ಬಂದಿಲ್ಲಾ. ನಾನ ಬಡ್ಡಿ ತುಂಬಕತ್ತಿನಿ. ಅಸಲ ಕುಂತ್ರೈತ್ರಿ ದೆವ್ವಾಗಿ. ನಾಳೆ ನನ್ ಮಕ್ಳ ಕೈಗೆ ಬಂದಿಂದ ಕೇಳಿದ್ರ ನಾ ಏನ್ ಹೇಳ್ಳಿ. ಆ ಮನಿ ಕೈ ತಪ್ಪತ್ತೇನ ಅಂತ ಹೊಟ್ಟಿ ರುಮ್ ಅನ್ನುತ್ಯೇವ್ವ. ನಾ ಏನ್ ಬಿಟ್ಟಿಲ್‌ಯವ್ವ, ಅವನ ಊರಿಗೆ ನಮ್ ಹುಡುಗುರನ ಕಳಿಸಿದ್ಯಾ. ಸಿಗವಲ್ಲಾಗ್ಯನ ಕೈಗೆ ಅಂತ ಬರತಾರ ಹಗ್ಲಲ್ಲ. ಅಲ್ಲಿ ಹೋಗ್ಯಾನ ಇಲ್ಲಿ ಹೋಗ್ಯಾನ ಅಂತಾರಂತ. ನಾ ಹೋಗಕ ಮಾರಿನ ಇಲ್ರಿ. ಊರ ಮಂದಿ ಏನರ ಮಾಡ್ಯಾರ ನನ್ನ ಅಂತ ಹೆದ್ರಿಕಿ. ನನ್ ನಂಬಿಕಿಗೆ ದ್ರೋಹ ಮಾಡಿಬಿಟ್ಟ, ನಾ ಅವನ ಸಲವಾಗಿ ಆ ಮನಿ ಮಾರಂದ್ರು ಮಾರಕ ತಯಾರಿದ್ಯಾ ಇನ್ ನಂಬ್ಲಾರದಂಗಾತು. ಕುದಿತ್ರೈತ್ರಿ ಯಾರ್ಗೆ ಹೇಳ್ಕೊಲಿ. ನನ್ ಮಕ್ಳು ಕೇಳ್ಯಾವ ಯವ್ವ ಅಪ್ಪ ಯಾಕ ಒಟ್ಟ ಬಂದಿಲಲ್‌ಬೇ ಅಂತ. ಏನ್ ಹೇಳ್ಳಿ

ನಿಮ್ ಅಂತಾರು ಹೇಳ್ಯಾರವ್ವ ಆ ಊರು ದೈವದಾಗ ನ್ಯಾಯ ಹಾಕು ಪರಿಹಾರ ಸಿಗುತ್ತಂತ. ಆ ರೊಕ್ಕ ಬರಬೊದ್ ಇವತ್ತಿಲ್ಲ ನಾಳೆ ಆದ್ರ ಅವ ಬರಬೇಕಲ್ಲ. ಆ ಬೋಳಿ ಮಗನ ಬಾಳ ಹಚಕೊಂಡಿದ್ಯಾ. ಎಲ್ಲಿ ಹೊಗ್ಯಾನಂತ ತಿಳಿವಲ್ದು. ಊರಾಗ ಅದಾನಂತಾರ ಮಂದಿ, ನಮ್ ಕೈಗೆ ಸಿಗವಲ್ಲ ಯವ್ವ, ನಾ ೫೦,೦೦೦ ಎಲ್ಲಿಂದ ತರ್ಲಿ ೨೦೦೦ ದಂಗ ತಿಂಗ್ಳಾಗನ ಬಡ್ಡಿ ತುಂಬತಿನಿ ಹೆದರಿ. ಎಲ್ಲಿ ನನ್ ಮನಿ ಮುಳಗತಿಯಾಗುತ್ತೆನಂತ. ಅಸಲು ಹಂಗ ಕುಂತ್ರೈತಿ ಯವ್ವ ದೆವ್ವ ಕುಂತಂಗ. ೧೫, ೧೬ ತಿಂಗ್ಳನ ಆತು ಸಾಲ ತಗುದು. ನಾ ಹೆಣ್ ಹೆಂಗ್ಸ ಆಗಿ ದುಡುದು ಆ ಬೋಳಿಮಗನ ಹೆಣಕ್ಕ ಬಡ್ಡಿ ಹರಿಯಂಗ ಆಗ್ಯೆತಿ. ಅಸಲ ಹೆಂಗ ತಿರಸದಂತ ತಿಳಿವಲ್‌ದಾಗ್ಯದ. ಇಲ್ಲ ಆ ಮನಿನ ಮಾರಿ ಸಾಲ ತುಂಬಿ ಉಳದಟ ಉಳಿಲಿ ಇಟ್‌ಗೊಂಡು ಕುಡತಿನಿ. ಏನ ಮಾಡಕಾಗುತ್ಯವ್ವ, ಹಿಂಗಾತಂದ್ರ ಅವನ ಮಾತ್ರ ಸುಮ್ನೆ ಬಿಡಲ್ಲ. ಖೈಮನ ಮಾಡಿ ಒಗಿತಿನಿ ಆ ಹಾದರಗಿತ್ತಿ ಮಗನ್ನ. ಆಗದಾಗ್ಲಿ. ನನ್ ಅಂತಾರ್ನು ಬಿಡಲ್ರಿ ಈ ಗಂಡಸರು ರೊಕ್ಕಕ್. ದೇವದಾಸಿ ಆಗಿ ಅಸಯ್ಯ ಪಡಲ ಯವ್ವ ನಾ. ಗಂಡ್ಸ ಆಗಿ ಹುಟ್ಟಿ ಇಂತ ಹರಾಮಿ ಕೆಲಸ ಮಾಡಿದ್ನಲ್ಲ ಅವನ ಮಾತ್ರ ಸುಮ್ನೆಬಿಡಕ್ಕಿಲ್ಲ. ನೋಡತಿರ್ಯವ್ವ

ಪ್ರಕರಣ – ೧೯

ಹೆಸರು – ಕಲಾವತಿ

ವಯಸ್ಸು – ೪೩

ಜಾತಿ – ಕುಡೊಕ್ಕಲಿಗ

ಊರು – ಶಾಹಪುರ

ನಾವು ಅವಳಿ ಜವಳಿ ಮಕ್ಳು ರಿ ಮೆಡಂ. ನಾನು ನಮ್ ತಮ್ಮ. ತಮ್ಮ ಒಂದು ತಾಸು ಚಿಕ್ಕೊನು ಅಷ್ಟೇ. ನಮ್ ತಂದೆ ಮೊದ್ಲು ಹರಿಹರದಲ್ಲಿ ಪೋಸ್ಟಮ್ಯಾನ್ ಕೆಲಸ ಮಾಡತಿದ್ರು, ನಮ್ದು ಪ್ರಾಪರ ಶಾಪುರ ಅದಕ್ಕೊಸ್ಕರ ಇಲ್ಲೇ ಮನೆ ಕಟ್ಟಿಸಿದ್ರು. ಈಗ ರಿಟೈರ್ಡ ಆಗಿದಾರೆ. ಅದಕೆ ಇಲ್ಲೇ ಬಂದು ಸೆಟ್ಲ ಆಗಿದಾರೆ. ನಾನು ಈಗ ಅವರ ಜೊತೆನೆ ಇದಿನಿ ಒಂದು ಗಂಡು ಮಗು ಜೊತೆಲಿ.

ಪಿಯುಸಿ ವರೆಗೂ ಜೊತೆಲಿ ಕಲತಿದ್ದು ನಾನು ನಮ್ ಬ್ರದರ್. ನಮ್ ತಂದೆ ಪೋಸ್ಟ ಆಫಿಸಲ್ಲಿ ಜಾಬ್ ಮಾಡತಿದ್ರು, ನನ್ದು ನನ್ ತಮ್ಮಂದು ಪಿಯುಸಿ ರಿಜಲ್ಟ್ ಚೆನ್ನಾಗಾತು. ಮೆಡಿಕಲ್ ಸಿಟ್ ಸಿಕ್ಕಿತ್ತು ಇಬ್ರಿಗೂ. ನಮ್ಮ ತಮ್ಮನಿಗಿಂತ ನಂದೆ ರ್‍ಯಾಂಕಿಂಗ್ ಚೆನ್ನಾಗಿತ್ತು. ನನ್ ತಂದೆ ಇಬ್ರಿಗೂ ಓದ್‌ಸೋಕಾಗಲ್ಲ ಅಂದ್ರು, ನಾವು ಅವಾಗ ಹರಿಹರದಲ್ಲಿದ್ವಿ, ನಮ್ ಮಮ್ಮಿ ತಮ್ಮನಿಗೆ ಓದಿಸಿದ್ರಾತು, ಮಗಳು ಕೊಟ್‌ಮನೆಗೆ ಹೊಗೊಳು ಅಂತ ಅಂದ್ರು, ನಾನಾಗ ಬಿ.ಎಸ್ಸಿ. ಮಾಡಿದೆ. ತಮ್ಮ ಎಮ್‌ಬಿಬಿಎಸ್ ಓದಕೊಂಡ. ಎಮ್.ಡಿ. ಮಾಡಿದಾನೆ ಈಗ. ದಾವಣಗೆರೆನಲ್ಲಿ ಗೌರಮೆಂಟ್ ಆಸ್ಪತ್ರೆಯಲ್ಲಿ ಡಾಕ್ಟರ್ ಇದಾನೆ. ತಾನೇ ಇಷ್ಟ ಪಟ್ಟು ಮದ್ವೆಕೂಡ ಆಗಿದಾನೆ. ನಾನು ಬಿಎಸ್ಸಿ ಮುಗಸ್ಕೊಂಡೆ. ಮದ್ವೆ ಆತು, ಒಂದು ಮಗು ಇದೆ. ನಮ್ ಗಂಡನ ಮನೆಲಿ ತುಂಬಾ ಕಿರಿಕಿರಿ. ನಮ್ ಮನೆಯವ್ರಿಗೆ ಬೇರೆ ಕಡೆ ಅಫೆರ್ಸ್ ಇದ್ವು, ಬೆಂಗಳೂರು ನನ್ ಗಂಡನ ಮನೆ. ನನ್ನ ಚೆನ್ನಾಗಿ ಬಾಳಸ್ಕೊಳ್ಳಿಲ್ಲ. ಡೈವರ್ಸ್ ಮಾಡಕೊಂಡಿದಿವಿ. ೭ ವರ್ಷ ಆಯ್ತು ನನ್ ತಂದೆ-ತಾಯಿ ಜೊತೆಲೆ ಇರೊದು. ಮಕ್ಳು ಕರಕೊಂಡು ಜೀವನ ನಡಸೋದು ತುಂಬಾ ಕಷ್ಟ ಅದು ಗಂಡ ಇಲ್ದೆನೆ.

ನಮ್ ತಂದೆ ಹೆಸರಿಗೆ ೪ ಎಕರೆ ಭೂಮಿ ಮನೆ ಇದೆ. ನಮ್ ತಂದೆ ಎಲ್ಲಿ ಆಸ್ತಿ ನನಗೆ ಮಾಡತಾರೆ ಅಂತ ನಮ್ಮ ತಮ್ಮನ ಮಿಸ್ಸಸ್ ಕಜ್ಜಾಡತಿದಾಳೆ ಅವರ ಜೊತೆ. ನನ್ ಗಂಡನ ಮನೆ ಇಂದ ಏನು ಜಾಸ್ತಿ ಪ್ರಾಪರ್ಟಿ ಬಂದಿಲ್ಲ. ನನಗೆ ಮಗ ಬೇರೆ ಇದಾನೆ. ತಮ್ಮ ಡಾಕ್ಟರ್ ಬೇರೆ, ಹಣ ಸಂಪಾದಸ್ಕೊತಾನೆ ಅದಕೆ ನನ್ನ ಹೆಸರಿಗೆ ಈ ಪಾಪರ್ಟಿ ಮಾಡತಿನಂತಿದಾರೆ ನಮ್ ತಂದೆ. ಇದ್ರಿಂದಾ ತುಂಬಾ ಮನಸ್ತಾಪಗಳು ಆಗ್‌ತ್ತಿವೆ. ನನಗೆ ನಮ್ ತಂದೆ ತಾಯಿ ತೀರಿಹೊದ್ರೆ ಯಾರು ದಿಕ್ಕು ಅಂತ ಚಿಂತೆ ಆಗತಿದೆ. ಆಸ್ತಿ ಮುಖ್ಯ ಅಲ್ಲ. ಜೀವನದಲ್ಲಿ ಕಷ್ಟ ಅಂತಾ ಬಂದ್ರೆ ಯಾರಪ್ಪಾ ಅಂತ ಯೋಚನೆ ಆಗತಿದೆ. ತಮ್ಮ ಇಗ್ಲೆ ಹೀಗೆ. ನಮ್ ತಂದೆಗೆ ಈಗ ಅನಿಸ್ತಿದೆ ನನಗೂ ಓದಸಬೇಕಿತ್ತು ಅಂತ. ಮಾಡಿರೊ ಡಿಗ್ರಿಗೆ ಮಗನ ಕರಕೊಂಡು ಹೊರಗಡೆ ಹೋಗಿ ಹೇಗೆ ತಾನೆ ಜೀವನ ನಡಸೋಕಾಗುತ್ತೆ. ಗಂಡನ ಮನೆದು ನೋಡಿದ್ರೆ ಅದು ಆ ತರ ಆಯ್ತು. ನಿಜಕ್ಕೂ ಮೆಡಂ ನನ್ನ ಬದುಕು ಹೀಗಾಗುತ್ತೆ ಅಂತ ಅನ್‌ಕೊಂಡಿದ್ದೆ ಇಲ್ಲ. ಇನ್ನು ಜೀವನ ಮುಂದೆ ತುಂಬಾ ಇದೆ. ಹೇಗೆ ಕಳಿಯೋದಂತಾ ಚಿಂತೆ ಆಗತಿದೆ. ಮಗನ ಮುಖ ನೋಡಿ ಹೀಗೆ ಬದುಕು ಸಾಗಿಸ್ತಿದಿನಿ.

೫.೧.೬. ಸಾಮಾಜಿಕ ಹಿಂಸೆ

ಪ್ರಕರಣ – ೨೦

ಹೆಸರು – ನೇತ್ರಾ

ವಯಸ್ಸು – ೨೪

ಜಾತಿ – ವಿರಶೈವ

ಊರು – ಕೊಪ್ಪಳ

ನನಗ ಬಂದ ಸ್ಥಿತಿ ಯಾ ಹೆಣ್‌ಮಕ್ಕಳಿಗೂ ಬರಬಾರ್ದುರಿ ಮೆಡಂ. ಸಾಯಕೂ ಆಗ್ದೆ ಬದಕಕೂ ಆಗ್ದೆ ನರಕದಾಗ ದಿನಾ ಜೀವನ ಕಳಿಯಕತ್ತಿನಿ. ಈಗ ಸದ್ಯಕ್ಕೆ ತೌವರ ಮನೆಲಿ ಇದಿನಿ. ನಾನೂ ಬಿ.ಬಿ.ಎಮ್ ಮಾಡಬೇಕಾದ್ರೆ ಪ್ರಕಾಶ ಅನ್ನೊರನ್ನ ಪ್ರೀತಿಸ್‌ತಿದ್ದೆ. ಅವುರು ನನ್ನ ಕ್ಲಾಸ್‌ಮೆಟ್ ಅಣ್ಣ. ಬಿಜಿನೆಸ್ ಮಾಡತಿದ್ರು, ಬೇರೆ ಜಾತಿ ಅವ್‌ರ್ದು. ಈ ವಿಷ್ಯನ ನನ್ನ ಬಿಬಿಎಮ್ ಮುಗದ ಕೂಡ್ಲೆ ನಾನೆ ನಮ್ ತಂದೆ ತಾಯಿ ಹತ್ರ ಹೇಳಿದೆ. ಯಾಕಂದ್ರೆ ಪ್ರಕಾಶನೆ ವಿಷ್ಯ ತಿಳಿಸು ಹೂ ಅಂದ್ರೆ ನಾನೆ ಬರತಿನಿ ನಮ್ಮ ಮನೆಯವರ ಕರಕೊಂಡು ಅಂದಿದ್ರು, ಅವ್ರಮನೆಲಿ ಒಪ್ಪಿದ್ರು, ನಾ ಈ ವಿಷ್ಯಾ ಹೇಳತ್ಲೆ ನಮ್ಮ ಮನ್ಯಾಗ ನನ್ನ ಬೈಲಿಲ್ಲ. ಬದ್ಲಾಗಿ ನಮ್ಮ ಅಣ್ಣಂದಿರು ಹೋಗಿ ಪ್ರಕಾಶನ್ನ ಚೆನ್ನಾಗಿ ಹೊಡದ್‌ಬಂದ್ರು, ನಾ ಸದ್ಯಕ್ಕೆ ಏನಾದ್ರೂ ದುಡಕಿದ್ರೆ ಯಾರ ಜೀವಕ್ಕಾದ್ರೂ ಅಪಾಯ ಆಗಬೊದು ಅಂತ ೨, ೩ ತಿಂಗ್ಳು ಸುಮ್‌ನಿದ್‌ಬಿಟ್ಟೆ, ಪ್ರಕಾಶನು ಈ ವಿಚಾರಾನ ಮನಸಿಗೆ ಹಚಕೊಂಡಿರಲಿಲ್ಲ. ನಿಮ್ ಮನೆಯವರು ಸಿಟ್ಟಾಗಿದ್ರಲ್ಲಿ ಅರ್ಥಐತಿ, ಈಗ ಸುಮ್‌ನಿರಣ ಸ್ವಲ್ಪದಿನಾ ಅಂತ ಅಂದ್ರು, ಅಷ್ಟ ದೊಡ್ ಗುಣದೊರು ಅವ್ರು.

ಒಂದು ದಿನಾ ನಮ್ ಮನೆಲಿ ಇದ್ಕಿದ್ದಾಗೆ ನನ್ನ ರೆಡಿ ಮಾಡಿಸಿದ್ರು, ನೋಡಿದ್ರೆ ಗಂಡಿನೊರು ಬಂದು ನನ್ ನೋಡ್‌ಕೊಂಡು ಹೊದ್ರು, ೧೫ ದಿನದಲ್ಲೇ ಮದುವೆ ನಿಶ್ಚಯ ಮಾಡಿಬಿಟ್ರು, ನಮ್ ಅಣ್ಣರು ನಾವು ಜೈಲಿಗೆ ಹೊದ್ರು ಪರವಿಲ್ಲ ಪ್ರಕಾಶನ ಕತೆ ಮುಗಸ್ತಿವಿ ನೀನಿಗ ಮುಚಕೊಂಡು ಮದ್ವೆ ಮಾಡಕೊಲಿಕ್ರೆ ಅಂತ ಹೆದ್ರಿಸಿದ್ರು, ಫೀಲ್ಮ್‌ದಲ್ಲಿ ಆದಂಗ ಆಗೊಯ್ತು ನನ್ನ ಜೀವನ. ಹೆದ್ರಿ ನಾನು ಮದ್ವೆಗೆ ಒಪ್ಪಿಬಿಟ್ಟೆ. ನನಗ ಪ್ರಕಾಶನ ಜೊತೆ ಮಾತಾಡಕೂ ಆಗ್ಲಿಲ್ಲ. ೧೫ ದಿನದಲ್ಲಿ ಮದ್ವೆ ಆಗಿ ಹೊಯ್ತು. ಮದ್ವೆ ಆದ ಮೇಲೆ ಪ್ರಕಾಶ್‌ಗೆ ಫೋನ್ ಮಾಡಿ ಎಲ್ಲಾ ವಿಷ್ಯ ಹೇಳಿದೆ. ಆಗಿದ್ ಆಗಿ ಹೊತು ಮದ್ವೆ ಆಗು ನೀನು ನನ್ನ ಮರತು ಅಂತ ಹೇಳಿದೆ. ಪ್ರಕಾಶ ನನ್ ಮಾತ ಕೇಳಿ ಶಾಕ್ ಆಗಿ ಸುಸೈಡ್ ಮಾಡ್‌ಕೊಂಡ್‌ಬಿಟ್ಟ. ಗಾಳಿ ಸುದ್ದಿ ಹಬ್ಬಿ ನನ್ನ ಗಂಡನ ಮನೆಯವರಿಗೂ ವಿಷ್ಯ ತಿಳದೊತು. ಮದ್ವೆ ಆಗಿ ಎರಡ ತಿಂಗ್ಳು ಈಗ. ನಾ ಮತ್ತೆ ತೌವ್ರಮನಿ ಸೆರಂಗಾಗೊತು. ನನ್ನ ಗಂಡನ ಮನೆಯವರು ನಮಗೆ ಈಗ ಈ ಮದ್ವೆಯಿಂದ ಬಿಡುಗಡೆ ಮಾಡಿಬಿಡಿ ಬೇರೆ ಕಡೆ ಹೆಣ್ ನೋಡಕೊತಿವಿ ಅಂತಿದಾರೆ. ನನಗೆನೂ ಅವ್ರ ಜೊತೆ ಬಾಳೊ ಮನಸಿಲ್ಲ. ನನಗೂ ಕೂಡಾ ಅದು ಒತ್ತಾಯದ ಮದ್ವೆನೆ. ಆದ್ರೆ ಪ್ರಕಾಶನ ಇಲ್ಲ ಈಗ ಭೂಮಿ ಮೇಲೆ. ಮುಂದೆ ಹೇಗೆ ನನ್ನ ಜೀವನ ಅಂತ ದಿಗಿಲು ಬಡದಂಗಾಗಿಗೆ. ನನ್ನ ತಂದಿ ತಾಯಿ ನನ್ ಗಂಡನ ಮನೆವ್ರನ್ನ ಆಗಿದ್ ಆಗಿದೆ ಮಗಳನ್ನ ಬಾಳೆ ಮಾಡಸ್ಕೊಳಿ ಅಂತ ಹೇಳತಿದಾರೆ. ಏನಾಗುತ್ತೊ ಗೊತ್ತಿಲ್ಲಾ. ಅವ್ರ ಜೊತಿ ಜೀವನ ನಡಸದಾದ್ರ ಬದಿಕಿದ್ದು ಸತ್ತಂಗ್ರಿ ನಾ.

ನಮ್ ತಾಯಿ ಮಾತಾಡೊದನ್ನೆ ಬಿಟ್ಟಿದಾರೆ. ಮನೆಲಿ ಒಬ್ಬನ್ನೆ ಮಾಡಿ ಹಿಂಸೆ ಮಾಡತಿದಾರೆ. ನನ್ ಬದುಕಿನಲ್ಲಿ ಇಷ್ಟೆಲ್ಲಾ ಆಗಿಹೊಯ್‌ತಾ ಅಂತ ಭ್ರಮೆ ಆದಂಗ ಆಗುತ್ತೆ. ಈಗ ನಾ ಗಂಡನ

ಮನೆಗೆ ಹೊದ್ರು ಅಲ್ಲಿ ನನಗ ಹಿಂಸೆ ತಪ್ಪಿದ್ದಲ್ಲ. ಇಷ್ಟೆಲ್ಲಾ ಅನುಭವಿಸೊಕ್ಕಿಂತ ಸಾಯದ್ರಲ್ಲಿ ಸುಖ ಐತಿ ಅನಸ್ತಿದೆ. ಸರಿಗೆ ಊಟ ನಿದ್ದೆ ಇಲ್ದೆ ಎರಡು ತಿಂಗ್ಳದಿನಾ ಆತು. ಉಸರಾಡಕೂ ಆಗತಿಲ್ಲ. ತಂದಿ ತಾಯಿ ಅಂತೂ ನನ್ ಪಾಲಿಗೆ ಸತ್ತಹೊಗಿದಾರೆ. ಅಣ್ಣರಂತೂ ನನಗ ಲೆಕ್ಕಕ್ಕೆ ಇಲ್ಲ. ಪ್ರಕಾಶನ ಜೊತಿ ಮದ್ವೆ ಬೇಡ ಅಂದಿದ್ರೂ ನಾವಿಬ್ರೂ ಹಾಗೆ ಜೀವನ ಕಳಿತಿದ್ವಿ. ಈಗ ಇಷ್ಟೆಲ್ಲಾ ರಾದಾಂತಾ ಆಗೊಯ್ತು. ಸಾಯೊಂದೆ ಪರಿಹಾರ ಅಂತ ಪ್ರತಿ ಕ್ಷಣ ನನಗೆ ಅನಿಸತಿದೆ. ಬದಕೊ ಆಸೆ ಅಂತು ಪ್ರಕಾಶ ಸತ್ತದಿನಾನೆ ಕಳಕೊಂಡಿದಿನಿ. ಏನಾಗಬಾರ್ದು ಅಂತ ಮದ್ವೆ ಆದ್ನೊ ಅದೆ ಆಗಿ ಹೋಗಿದೆ. ಇದಕ್ಕೆಲ್ಲಾ ಕಾರಣ ನನ್ನ ಮನೆಯವರೆ. ಏನು ತಪ್ ಮಾಡದಿರೊ ಪ್ರಕಾಶನ ತಂದೆ, ತಾಯಿ, ತಂಗಿ ಅವನನ್ನ ಕಳಕೊಳೊ ಹಾಗಾಯ್ತು. ಅದಕ್ಕ ನಾನ ಕಾರಣ ಆದೆ. ಇಂತ ಪರಿಸ್ಥಿತಿ ಯಾ ಹೆಣ್ ಮಕ್ಳಿಗೂ ಬರಬಾರ್ದುರಿ.

ಪ್ರಕರಣ – ೨೧

ಹೆಸರು – ರಾಣಿ

ವಯಸ್ಸು – ೩೪

ಜಾತಿ – ಗೌಡಾಸ್

ಊರು – ಕೊಪ್ಪಳ

ನಮ್ ಹಳ್ಳಿ ಶ್ಯಾನೆ ದೂರ ಐತ್ರಿ ಬೆಂಗಳೂರ ಹತ್ರ. ಮನಸಿಗೆ ವಸಿ ಬೇಜಾರಾಗಿ ಇಲ್ಲಿಗೆ ಬಂದು ಮೆಟ್ಟ ಆಗಿವಿ. ನಮ್ ಗಂಡ ಸರ್ ಅದಾರ. ವಸಿ ಟ್ರಾನ್ಸಫರ್ ತಗೊಂಡು ಇಕಡೆ ಬಂದು ಮೆಟ್ ಆಗಿವಿ. ನಮ್ ಅತ್ತಿ, ನಾದಿನಿಯೊರು ಮಾಡ ಕೆಲಸಕ್ಕ. ನಮ್ ಹಳ್ಳಿ ಜನಗಳು ನನ್ನ ಜೋಡಿ ನಡಕೊಳ ರೀತಿಗೆ ಬೇಜಾರಾಗಿ ನಾನು ಮಾನಸಿಕ ರೋಗಿ ಆಗಿಬಿಟ್ಟಿದ್ಯಾ ಈಗ್ ಯಾಡ ವರ್ಷದ ಕೆಳಗ. ನನ್ ಗಂಡ ದೇವರಂತವ ಅದಕ ನನ್ನ ಇತ್ತಕಡೆ ಕರಕೊಂಡ ಬಂದ್‌ಬಿಟ್ರು. ಏನಿಲ್‌ರಿ ಸಮಸ್ಯೆ. ನನಗ ಮಕ್ಳ ಆಗ್ಲಿಲ್ಲ ಅನ್ನದ ವಸಿ ದೊಡ್ಡ ವಿಷ್ಯಾ ಆತು ನನ್ನ ಅತ್ತಿ, ನಾದಿನಿಯರಿಗೆ. ನನ್ನ ಗಂಡಗ ಇನ್ನೊಂದು ಮದ್ವಿ ಮಾಡಕ ಹೊಂಟಿದ್ರು, ಮಕ್ಳ ಆಗ್ಲಿಲ್ಲ ಅಂದ್ರ ನಾನೇನ್ ಮಾಡಕಾದಿತು. ನಾ ಇಸ್ಕೂಲ್ ಬೇರೆ ಕಲತಿಲ್ಲ. ೩ನೇ ಕ್ಲಾಸ್ ಓದಿ ಬಿಟ್ ಬಿಟ್ಯಾ. ಸಂಬಂಧಿಕರದಾಗ ಅಂತ ನೋಡಿ ನಮ್ ಗಂಡ ಇಷ್ಟ ಪಟ್ಟು ಲಗ್ನ ಆದ್ರು ನನ್ನ. ಈಗ ನನ್ನಿಂದ ಅವರಿಗೆ ಸುಖನ ಇಲ್‌ದಂಗ ಆಗೈತೆ. ಬುಟ್‌ಬುಡು ನನ್ನ. ಬ್ಯಾರೆ ಲಗ್ನ ಆಗು ಅಂದ್ರ ಕೇಳತಿಲ್ಲ.

ನನಗೂ ಶ್ಯಾನೆ ಆಸೆ ಐತಿ ಮಕ್ಳನ್ನ ಎತ್ತಿ ಆಡಸಬೇಕಂತ ಆದ್ರ ದೈವ ಬ್ಯಾರೆನ ಬರದೈತಿ. ನಾ ಏನ್ ಮಾಡಕಾದಿತು ಅಲ್ವೆ, ನಮ್ ಅತ್ತೆ ದಿನಾ ಗೊಡ್ಡು ಗೊಡ್ಡು ಅಂತಾನೆ ಕರಿಯೊಳು. ನನ್ನ ನಾದಿನಿಯರಿಗೆ ಶ್ಯಾನೆ ಮಕ್ಳ ಕೊಟ್ಟಾನ ಆ ದೇವ್ರು, ಅವನ್ನ ಎತಕೊಳಕ ಹೊದ್ರ ನನಗ ಮುಟ್ಲಿಕ್ಕೂ ಬಿಡತಿದ್ದಿಲ್ಲ. ನನ್ನ ಮದ್ವಿ ಆಗಿ ೧೨, ೧೩ ವರ್ಷ ಆತು. ನನ್ನ ಲಗ್ನ ಆಗಿಂದನ ನನ್ನ ನಾದಿನಿಯೊರದಿಬ್ಬರದು ಲಗ್ನ ಆಗಿದ್ದು. ಅವುರು ಹಡದಾಗ, ಮನ್ಯಾಗ ಕಾರ್ಯ ಇದ್ದಾಗ ನನ್ನ ಹಿಂದುಕ್ಕೆ ತಳ್ಳಿಬಿಡರು. ಶುಭ ಕಾರ್ಯಕ್ಕೆ ಗೊಡ್ಡು ಎಮ್ಮೆ ಮುಂದ ಬರಭಾದು ಅನ್ನೊರು. ನನಗ

ತಾಯಿ ಇಲ್ಲ. ನಾ ಹುಟ್ಟತ್ಲೆ ಸ್ವರ್ಗ ಸೇರ್ಯಾಳ. ಅಪ್ಪ, ಅಣ್ಣ ಅವ್ರ, ಆದ್ರ ಅವ್ರು ಅವ್ರ ಹೆಂಡ್ರೂ ಮಕ್ಳು ಅಂತ ಚೆಂದಾಗವ್ರೆ. ನನ್ನ ಕಷ್ಟ ನೋಡಲ್ಲ. ನನಗ ನನ್ನ ಗಂಡ ಬಿಟ್ರ ಬ್ಯಾರೆ ಯಾರು ಇಲ್ಲ. ಇಷ್ಟ ವರ್ಷದಾಗ ಒಂದು ದಿವಸನುವೆ ಬೈದಿಲ್ಲ. ಹಾಸ್ಪಟಲ್‌ಗೆಲ್ಲಾ ಶ್ಯಾನೆ ತೋರಿಸಿ ದುಡ್ಡೆಲ್ಲಾ ಖರ್ಚ ಮಾಡಕೊಂಡಾವ್ರೆ. ನನ್ನ ಗರ್ಭಕೊಸ ಸಣ್‌ದೈತಿ ಕೂಸ್ ಬೆಳೆಯಲ್ಲ ಆಟ ಜಾಗದಾಗ ಅಂತ ಹೇಳ್ಯಾರ. ಬ್ಯಾರೆ ಮದ್ವಿ ಆಗಿ ಬಿಡ್ರಿ ಅಂದ್ರ ಅವಾಗೂ ಮಕ್ಕಾಗ್ಲಿಕ್ರ ಅಂತ ನನಗ ವಾಪಾಸ ಕೇಳತಾರ. ದ್ಯಾವ್ರ ಮಾಡದಂತೂ ಒಂದೂ ಬಿಟ್ಟಿಲ್ಲ. ನನ್ನ ಹಣ್ಯಾಗ ಒಳ್ಳೆದ ಬರದಿಲ್ಲ.

ಜನನೂ ಸರಿ ಇಲ್ಲ. ಯಾವದರ ಕಾರ್ಯಕ್ಕ ಕರದ್ರೆ ನಿಮ್ಮ ಸೊಸೆನ ಮುಂದ ಕಳಸಬೇಡಿ. ಮಕ್ಳ ಇಲ್‌ದಿರೊಳು ಅಂತ ಹೇಳೊರು. ನನ್ನ ಅಂತೂ ಕರಿತಾನೆ ಇರಲಿಲ್ಲ. ನಮ್ ಅತ್ತೆ ನೋಡು ನಿನ್‌ನಿಂದಾಗಿ ಕೆಟ್ಟದ ಕೇಳೊಂಗಾತು ಅಂತ ಹಿಯಾಳಸೂರು. ನನ್ ಹೆಣ್ಣು ಮಕ್ಳ ಕಾಲಗುಣ ಹೇಗಿದೆ ನೋಡು. ಅವ್ರು ಕೊಟ್ಟ ಮನೆಲಿ ಫಸಲು ತುಂಬಿ ತುಳಕುತ್ತ. ಇರೊದೊಬ್ಬ ಮಗ. ನಿನ್‌ನಿಂದ ನನ್ನ ಕೂಸಿನ ಬದಕ ಹಾಳಾತು ಅಂತ ಊಣ್ಣಕೆ ಬರತಿರಲಿಲ್ಲ. ಅಳತಾ ಕುಂತ್‌ಕೊಂಡಬಿಡಾರು. ನನಗೂ ಶ್ಯಾನೆ ನೋವಾಗತಿತ್ತು. ಅವ್ರು ಬಯಸದ್ರಗೂ ಏನ್ ತಪ್ಪೈತಿ ಅಂತ ಅನಕೊಳಕಿ. ನನಗೇನ್ ಅವುರು ಹೊಡಿಲಿಲ್ಲ, ಬಡಿಲಿಲ್ಲ. ಆದ್ರೂ ನನಗ ಕೂಸಾಗ್ಲಿಲ್ಲ ಅನ್ನೊ ಕಾರಣಕ್ಕ ನನಗ ನೋವು ಆಗೊ ಹಾಗೆ ಮಾತಾಡರು. ನಮ್ ಗಂಡ ತಾಯಿಗೆ ಬೈಯೋರು. ನಮ್ ಅತ್ತೆನು ಮಾನಸಿಕ ನಾನು ಮಾನಸಿಕ ಆಗಿದ್ವಿ, ಅದಕ ದೂರ ಇದ್ರ ವಸಿ ಅವ್ರಿಗೆ ನೋವು ಕಮ್ ಆಗ್‌ಬೊದಂತ ನಮ್ ಗಂಡ ನಾವು ಈ ಕಡೆ ಬಂದ್ ಕೂತ್ವಿ ನನಗ ಕೂಸ ಮ್ಯಾಲೆ ವ್ಯಾಮೋಹ ಏನ್ ಇಲ್ಲ. ಆದ್ರ ಜನ ಆಡಕೊಳ್ಳದೆ ಇರೊಕಾದ್ರು ಒಂದು ಕೂಸರ ಇರಬೇಕಿತ್ತು ಅನಸುತ್ತೆ. ಅಲ್ಲಿದ್ರು ಇಲ್ಲಿದ್ರು ಜನದಂತೂ ಒಂದೆ ಮಾತು ಎಷ್ಟ ಹೈಕ್ಳು, ಎಷ್ಟ ಕೂಸು, ಎಷ್ಟ ಮಕ್ಳು ಅಂತ. ಅವ್ರು ಕೇಳಿದಾಗೆಲ್ಲಾ ಮನಸನ್ಯಾಗ ಚುಚ್ಚುತ್ತ. ಒಮ್ಮೊಮ್ಮೆ ಸತ್ತ ಬಿಡದು ವಾಸಿ ಅಂತ ಅನಕೊತಿನಿ. ಆದ್ರ ನನ್ನ ಗಂಡ ಸಾಯದಾದ್ರ ಇಬ್ರೂನುವೆ ಸಾಯನ ಅಂತಾರೆ. ನನಗ ನಿಜಕ್ಕೂ ಈ ಬದುಕು ಯಾವಾಗ ಮುಗಿತೈತೊ ಏನೋ ಅಂತ ಅನಸೈತೆ.

ಪ್ರಕರಣ – ೨೨

ಹೆಸರು – ಅಶ್ವಿನಿ

ವಯಸ್ಸು – ೩೩

ಜಾತಿ – ಬಡಿಗೇರ

ಊರು – ಕಿನ್ನಾಳ

ನಮ್ದು ಜ್ವಾಯಿಂಟ್ ಫ್ಯಾಮಿಲಿ. ನಮ್ ಅಪ್ಪಗ ನಾವು ಮೂರ್‌ಮಂದಿ ಹೆಣ್ ಮಕ್ಳು. ನಮ್ ಕಾಕಾಗ ಇಬ್ರು ಹೆಣ್‌ಮಕ್ಳು. ಇಬ್ರು ಗಂಡಸಮಕ್ಳು. ಗಂಡಸತ್ ಸೊದರತ್ತಿನೂ ನಮ್ ಜೊತೆನೆ ಇರೊದು. ಅವ್ರಿಗೆ ಗಂಡ್ ಮಗ ಅದಾನ ಒಬ್ನು. ಎಲ್ಲಾರು ಚೆನ್ನಾಗೆ ಇದ್ವಿ, ಅಕ್ಕರದು ಇಬ್ಬರ್ದು ಮದ್ವೆ ಆಗಿ ಸುಖವಾಗಿ ಇದಾರ. ಅವ್ರು ಹೆಚ್ಚಿಗಿ ಕಲಿಲಿಲ್ಲ. ನನ್ನ ಮಾತ್ರ ಓದಿಸಿದ್ರು, ಬಿ. ಕಾಂ

ಮುಗಸಿದಿನಿ. ದುರಂತ ಏನ್ ಅಂದ್ರ ೨೨ ವಯಸಿಗೆ ನನಗೂ ಲಗ್ನ ಆಯ್ತು. ಗಂಡನ ಮನೆಗೆ ಹೊದೆ. ೨೪ ವಯಸಿಗೆ ಗಂಡನ ಕಳಕೊಂಡು ಬಂದು ತೌವ್ರಮನಿ ಸೇರಿದೆ. ಆಮೇಲೆ ನನ್ನ ಜೀವನ ಬಣ್ಣನೆ ಇಲ್ಲದ್‌ಕನಸಿನ ಹಾಗೆ ಆಯ್ತು. ನನ್ನ ಗಂಡ ನಮ್ ವೃತ್ತಿನಲ್ಲೇ ಗುತ್ತಿಗೆದಾರ ಇದ್ದ. ಒಳ್ಳೆ ಬಿಜಿನೆಸ್ ಇತ್ತು. ದೇವ್ರಿಗೆ ಅದನ್ನ ನೋಡಕಾಗ್ದೆ ಕರಕೊಂಡ್ ಬಿಟ್ಟಾ. ಬೈಕ್ ಆಕ್ಸಿಡೆಂಟ್ ಆಗಿ ಸ್ಪಾರ್ಟ್ ಔಟ್ ಆದ್ರು, ಮಕ್ಕಿಲ್ಲ ಮರಿ ಇಲ್ಲ. ಎಂತಾ ದೈವ ನೋಡ್ರಿ ಮೆಡಂ ನನ್ದು. ಅವಾಗಿನ್ನು ಅಷ್ಟು ತಿಳಿತಿದ್ದಿಲ್ಲ ನನಗ ಜೀವನ ಅಂದ್ರ ಏನು ಅಂತ. ನನ್ನ ಗಂಡ ಸತ್ತಾಗ ನನಗ ನೀರ್ ಹಾಕಿ, ಹೊಸ ಸೀರೆ ಉಡಿಸಿ, ಬಳೆ ಹಾಕಿ, ಹೂ ಮುಡಿಸಿ ಆಮೇಲೆ ಎಲ್ಲಾ ತಗದ ಬಿಡತಾರ. ಕುಂಕಮನೂ ತಗುದ್ರು, ನಮ್ ತಾಯಿ ಕಾಲ ಬದ್ಲಾಗೈತಿ ಹಿಂಗ್ ಮಾಡಬ್ಯಾಡ್ರಿ ಅಂದ್ರು ಕೇಳಿಲ್ಲ ನನ್ ಗಂಡನ ಮನೆವ್ರು, ನನ್ನ ಗಂಡನ್ನ ಮಣ್ಣಾಗ ಇಡಬೇಕಾದಾಗ ಅತ್ತಿದ್ದೆ. ನೆಲದ ಮೇಲೆ ಎಲ್ಲಾ ಬಿದ್ದು ಬಿದ್ದು ಅತ್ತೆ. ಆದ್ರ ಯಾಕ ಅತ್ತೆ ಅಂತಾ ತಿಳಿಲಿಲ್ಲ. ಗಂಡ ಸತ್ನಲ್ಲಾ ಅಂತ ಅತ್ತಿರಬೊದು ಅಷ್ಟೇ. ಆದ್ರ ನನಗ ಕುಂಕುಮ ತಗಿಬೇಕಾದ್ರ, ಹೂ..ರಿ ತಗಿಬೇಕಾದ್ರ ನಿಜವಾಗ್ಲೂ ಮನಸಿಗೆ ನೋವಾಗಿ ಅತ್ತೆ. ಯಾ ತಪ್ಪಿಗೆ ಈ ಶಿಕ್ಷೆ ಅಂತ. ನಿಜಕ್ಕೂ ಯಾ ಹೆಣ್ ಮಕ್ಳಿಗೂ ಇಂತ ಕಾರ್ಯ ಮಾಡಬಾರದು.

ನೆಸಕೊಂಡ್ರೆಈಗ್ಲೂ ಮೈಯೆಲ್ಲಾ ಉರಿಯುತ್ತೆ. ಪಾಪ ಅವ್ರಾದ್ರೂ ಏನ್ ಮಾಡತಾರ. ನಮ್ ಸಂಪ್ರದಾಯನ ಹಿಂಗ್ ಇರಬೇಕಾದ್ರ, ಇದೆಲ್ಲಾ ಒಂದ್ ಕಡೆ ಮುಗಿತಂದ್ರ, ಮತ್ತೊಂದು ಕಡೆ ನನಗ ಅನುಭವಿಸಕೂ ಆಗದಿರೊವಷ್ಟು ಹಿಂಸೆ ನನ್ನ ಮನೆಲೆ ಆತು. ಇಗ್ಲೂ ಆಗಕತ್ತೈತಿ. ಗಂಡ ಸತ್ತಾಗ ನನಗಿನ್ನು ಚಿಕ್ಕ ವಯಸ್ಸು. ತಾಯಿ ಹಳೆ ಕಾಲದೊರು ಆದ್ರೂ ಬಾಳ ವೈಚಾರಿಕ ಮನೋಭಾವದೊರು. ಬೇರೆ ಮದ್ವೆ ಮಾಡೋಣ ಅಂತ ಹೇಳಿದ್ರು. ಆದ್ರೆ ನಮ್ ಸೋದ್ರತ್ತೆ ಅದಕ್ಕೆ ಒಪ್ಲಿಲ್ಲಾ. ಇನ್ನು ಕಾಕಾನ ಇಬ್ರು ಹೆಣ್ ಮಕ್ಳು ಕೊಡೊರಿದ್ರು (ಮದ್ವೆ ಆಗೊರು). ಗಂಡ ಸತ್ತಾರಗೆಲ್ಲಾ ಮದ್ವೆ ಮಾಡಿದ್ರೆ ನಮ್ ಮನೆತನದ ಬಗ್ಗೆ ಏನ ಮಾತಾಡಕೊಂಡಾರು. ಹೆಣ್ಣ ತಗೊಳರು ಎಲ್ಲಾದನ್ನು ವಿಚಾರ ಮಾಡತಾರ. ಈಕಿ ಒಬ್ಬಾಕಿಯಿಂದ ಇಬ್ರು ಹೆಣ್ ಮಕ್ಳು ಜೀವನ ಹಾಳಾಗದು ಬ್ಯಾಡ ಅಂತ ನಮ್ಮ ಅಪ್ಪಗ ಕಾಕಾರಿಗೆ ತಲೆ ತುಂಬಿದ್ರು ನಮ್ ಸೋದ್ರತ್ತೆ. ನಾನಿಲ್ಲನು ಗಂಡ ಸತ್ತಕಿ, ನನಗೆನ್ ದೊಡ್ ವಯಸ್ಸನು. ಬದಕ್‌ತಿಲ್ಲಾ ನಾನು ಅಂತ ಪ್ರತಿ ಗಳಿಗೆನು ತಮ್‌ದೆ ಉದಾಹರಣೆ ಕೊಡತಾ ಬಂದ್ರು. ಇದೆಲ್ಲಾ ನನಗ ಮಾನಸಿಕ ಆಗಿ ನಾನು ಹೊರಗ ಎಲ್ಲಾದ್ರು ಜಾಬ್ ಮಾಡಕ ಹೊಕ್ಕಿನಿ ಅಂದೆ. ಅದಕ್ಕ ಇನ್ನು ಸಣ್ಣ ವಯಸ್ಸು ಹೊರಗೆ ಏನಾದ್ರು ಹೆಚ್ಚು ಕಮ್ಮಿ ಆದಿತು ಅಂತ ಕೆಲಸಕ್ಕೂ ಕಳಸ್ಲಿಲ್ಲ. ಹೈಯರ್ ಎಜುಕೇಶನ್ ಮಾಡಕೊಳಕೂ ಬಿಡ್ಲಿಲ್ಲ ಯಾರು. ಹೀಗೆ ಮಾಡ್ತಾ ಮಡ್ತಾ ನನ್ ಜೀವನ ಹಾಳ ಮಾಡಿದ್ರು.

ನಮ್ ತಂಗಿರ್‌ದಿಬ್ರದು ಮದ್ವೆ ಮಾಡಿದ್ರು, ನಾನು ಕಂಪ್ಯೂಟರ್ ಕ್ಲಾಸ್ ಹೇಳಕ ಹೊಕ್ಕಿನಿ ಈಗ ನಮ್ ಊರಾಗ. ೧೫೦೦ ಕೊಡತಾರ. ದುಡ್ ಮುಖ್ಯ ಅಲ್ಲ. ಹೊರಗ ಹೊದ್ರ ನಾಕ ಜನದ ಜೊತೆ ಬೆರತು ನನ್ನ ಕಷ್ಟ ಮರಿಬೊದು ಅನ್ನದಿತ್ತು ನನಗ. ನಮ್ಮ ತಾಯಿ ಸುಮ್‌ನಿರಲಿಲ್ಲ. ಇಗ್ಲಾದ್ರೂ ಅವಳಿಗೆ ಮದ್ವೆ ಮಾಡಿ ಅಂತ ಕೇಳಿದ್ರು, ನಾ ಅವ್ರ ಹತ್ರ ಏನು ಹೇಳಕೊತಿರಲಿಲ್ಲ. ಆದ್ರೂ ನನ್ನ

ಮನಸಿನ ಭಾವನೆಗಳನ್ನ, ಆಸೆ-ಆಕಾಂಕ್ಷೆಗಳನ್ನ ಅರ್ಥ ಮಾಡಕೊಳ್ಳೊರು. ನಮ್ ಮನೆಲಿ ಇನ್ನೆನು ೩೦ ದಾಟಿತು. ಇನ್ನ ಅರ್ಧ ವಯಸ್ಸು ದೇವ್ರು ದಿಂಡ್ರೂ ಅಂತ ಕಳಿಲಿ ಬೀಡು ಅನ್ನೊತರದಲ್ಲಿ ಅತ್ತೆ, ಅಪ್ಪ ಮಾತಾಡಿಬಿಟ್ರು, ನನಗೂ ಸಾಕಷ್ಟು ಫೀಲಿಂಗ್ಸ್ ಇದ್ವು ಆದ್ರ ಯಾರತ್ರ ಹೇಳಕೊಬೇಕಿತ್ತು. ಹೇಳ್ ಕೊಂಡ್ರೆ ಎಲ್ಲಿ ನನ್ನ ಬಗ್ಗೆ ತಪ್ಪ ತಿಳಿತಾರೆ ಅಂತ ಸುಮ್‌ನಿದ್‌ಬಿಡತಿದ್ದೆ. ಒಳಗೊಳಗೆ ಅದೆಷ್ಟು ಹಿಂಸೆ ಅನುಭವಿಸಿನಿ ನನಗ ಗೊತ್ತು. ಹೆಣ್ಣಿನ ಜೀವನ ಹೀಗೂ ಇರುತ್ತಾ ಅಂತಾ ಒಳಗೊಳಗ ಮರಗದು ಜೀವ. ಹೆಣ್ಣಿನ ಜೀವನ ಯಾರಿಗೂ ಕೊಡಬೇಡಪ್ಪ ದೇವ್ರೆ, ಕೊಟ್ರು ನನಗ ತಂದಂತ ಪರಿಸ್ಥಿತಿ ಯಾರಿಗೂ ತರಬೇಡ ಅಂತ ಬೇಡಕೊತಿನಿ. ಆದ್ರೆ ಒಂದು ವಿಚಾರ ಹೇಳಬೇಕು ನಮ್ ತಾಯಿ ನಿಜಕ್ಕೂ ಒಬ್ಬ ಒಳ್ಳೆ ರೊಲ್ ಮಾಡೆಲ್. ನನ್ನ ಬಯಕೆಗಳನ್ನ ಅರ್ಥ ಮಾಡಕೊಂಡ್ರು, ನಾನೆಷ್ಟೇ ಪ್ರಯತ್ನ ಪಟ್ರು ಮದ್ವೆಗೆ ಯಾರು ಒಪ್‌ತಿಲ್ಲ, ಅದಕ್ಕ ನೀನು ನಿನ್ನ ಇಷ್ಟ ಬಂದೊರ ಜೊತೆ ಕುಡುಕೊ, ಮಕ್ಳ ಮಾಡಕೊಳಕಾಗದಿದ್ರು ಗಂಡನ ಸುಖನರ ಪಡಿ ಅಂದ್ರು, ಕಣ್ಣ ಮುಂದೆ ಎಲ್ಲಾರೂ ಗಂಡನ ಜೊತೆ ಸುಖವಾಗಿದ್ದಾಗ ನಿನ್ ಬಗ್ಗೆ ನೆನಸಕೊಂಡ್ರ ನೋವಾಗುತ್ತ, ಏನ ಮಾಡದು. ಎಲ್ಲಾ ದಾರಿ ನಿನ್ನ ಪಾಲಿಗೆ ಮುಚ್ಚಿ ಹೋಗ್ಯಾವು. ಈಗ ಇರದು ಇದೊಂದ ದಾರಿ ನಿನಗ ಅಂತ ಹೇಳಿದ್ರು, ಎಲ್ಯರ ಓಡಿ ಹೋಗು ಅನ್ನಕ ಕರಕೊಂಡು ಹೊದೊನು ಚೆಂದ್ ಇಟಕೊಲಿಲ್ಲ ಅಂದ್ರ ಬಾಂಡ್ಲಿಯಿಂದ ಬೆಂಕಿಗೆ ಹಾರಿ ಬಿದ್ದಂಗಾಗುತ್ತ ಮತ್ ನಿನ್ನ ಜೀವನ. ಅದಕ ನಾ ಹೇಳಿದಂಗ ಮಾಡು ಅಂದ್ರು, ಹೆತ್ತ ತಾಯಿ ಅನ್ನೊಕಿಂತ ಒಂದು ಹೆಣ್ಣಾಗಿ ಆಕಿ ನನ್ನ ಅರ್ಥ ಮಾಡಕೊಂಡ್ಲು. ಅಂತ ತಾಯಿ ಸಿಕ್ಕಿದ್ದು ನಿಜಕ್ಕೂ ನನ್ನ ದೈವ ಅನಕೊಂಡಿನಿ. ಅಕಿ ಆಡಿದ್ ಮಾತ್ನೆಲ್ಲಾ ಕೇಳಿದಾಗಿಂದ ನಾ ಹಿಂದ ಅನುಭವಿಸಿದ್ ಎಲ್ಲಾ ನೋವು ಮಾಯ ಆಗಿ, ನನ್ನೊಳಗೆ ನನಗೆ ಉಲ್ಲಾಸದ ಅನುಭವ ಆಗಿದೆ. ಏನ್ ಹೇಳಕೊಳೋಕೆ ಆಗ್‌ತಿಲ್ಲ ಅಂತ ಚಡಪಡಸ್ತಿದ್ನೊ ಅದನ್ನ ತಾಯಿ ಹೇಳದೆನೆ ಅರ್ಥ ಮಾಡಕೊಂಡ್ಲು. ಇದಕ್ಕಿಂತ ಸಮಾಧಾನ ಜೀವನಕ್ಕೆ ಮತ್ತೊಂದು ಬೇಡ ಅನಿಸಿದೆ ಈಗ.

೫.೨. ಮಾದರಿ ಪ್ರಕರಣಗಳ ಸ್ತ್ರೀವಾದಿ ವಿಶ್ಲೇಷಣೆ

ಪ್ರಕರಣಗಳ ವಿಶ್ಲೇಷಣೆಯ ಪ್ರಾರಂಭದಲ್ಲಿ ಹೇಳುವುದಾದರೆ, ಇಲ್ಲಿ ವಕ್ತೃಗಳು ಸಂಶೋಧಕರನ್ನು ತಮ್ಮ ತಮ್ಮ ಬದುಕಿನ ವಾತಾವರಣದ ಹಿನ್ನೆಲೆಯಲ್ಲಿ ಭಿನ್ನ ಭಿನ್ನವಾಗಿ ಗುರುತಿಸಿ ಸಂಭೋದಿಸಿರುವುದನ್ನು ಕಾಣಬಹುದಾಗಿದೆ. ಕೆಲವೊಬ್ಬರು ಮೆಡಂ, ಯಕ್ಕ, ಅಕ್ಕ, ಟೀಚರ, ತಂಗಿ ಅಂತೆಲ್ಲಾ ಕರೆದರೆ, ಕೆಲವರು ರಿ ಕಾರ ಹಾಕಿ, ಇನ್ನೂ ಕೆಲವರು ಏಕವಚನದಲ್ಲಿ ಸಂಭೋದಿಸಿ ಸಂಶೋಧಕರಲ್ಲಿ ತಮ್ಮ ಕಹಿ ಅನುಭವಗಳನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ಇಲ್ಲಿ ಮಹಿಳೆಯರು ತಮಗಾದ ನೋವು, ದುಗುಡ-ದುಮ್ಮಾನಗಳನ್ನು ಹೆದರಿಕೆಯಿಂದ, ಕೆಲವೊಬ್ಬರು ದುಃಖದಿಂದ, ಇನ್ನು ಕೆಲವರು ಬದುಕಿನ ಬಗ್ಗೆ ಅತಿಯಾಗಿ ಜಿಗುಪ್ಸೆ ಹೊಂದಿ ತಮ್ಮ ಕಹಿ ಅನುಭವಗಳನ್ನು ಹೇಳಿಕೊಂಡಿದ್ದಾರೆ. ಅಲ್ಲದೆ ಇನ್ನೂ ಕೆಲ ಮಹಿಳೆಯರು ಯಾವುದೇ ಅಂಜಿಕೆ ಅಳುಕಿಲ್ಲದೇ ತಮ್ಮ ಕಹಿ ಅನುಭವಗಳನ್ನು ಹೇಳಿಕೊಂಡಿರುವುದು ಅವಲೋಕನದ ಹಿನ್ನೆಲೆಯಿಂದ ತಿಳಿದುಬರುತ್ತದೆ. ಈ ರೀತಿ ಸಂಕಷ್ಟಕ್ಕೊಳಗಾದ ಮಹಿಳೆಯರ ಸ್ಥಿತಿ ಕೇವಲ ಅವರದ್ದಾಗಿರದೇ ಸಮಾಜದ ಅದೆಷ್ಟೋ ಮಹಿಳೆಯರ ವ್ಯಥೆಯಾಗಿದೆ.

ಈ ಪ್ರಸ್ತುತ ಪ್ರಕರಣಗಳಲ್ಲಿ ಮಹಿಳೆಯರ ಅಂತರಾಳದಲ್ಲಿನ ಪ್ರತಿಭಟನೆಯನ್ನು ಮತ್ತು ಬಹಿರಂಗವಾಗಿ ಪ್ರತಿಭಟಿಸಿರುವ ಧೋರಣೆಗಳನ್ನು ಸೂಕ್ಷ್ಮಾವಲೋಕನದಿಂದ ಅರಿತು, ಅವುಗಳನ್ನು ವಿಶ್ಲೇಷಣೆಗೊಳಪಡಿಸಿ ಸ್ತ್ರೀವಾದದ ಹಿನ್ನೆಲೆಯಲ್ಲಿ ಚರ್ಚೆಗೊಳಪಡಿಸಲಾಗಿದೆ.

ದೈಹಿಕ ಹಿಂಸೆ– ಮಹಿಳೆಯರು ಹೆಣ್ಣಾಗಿರುವ ಕಾರಣದಿಂದಾಗಿಯೇ ಕೆಲವೊಂದು ಬಗೆಯ ದೈಹಿಕ ಹಿಂಸೆಗೆ ಒಳಗಾಗುತ್ತಿದ್ದು, ಅವುಗಳು ಯಾವೆಲ್ಲಾ ಬಗೆಯ ಸ್ವರೂಪದ ಮೂಲಕ ಪ್ರಕಟಗೊಳ್ಳುತ್ತಿವೆ ಎಂಬುದನ್ನು ಈ ಪ್ರಕರಣಗಳ ಮೂಲಕ ಗಮನಿಸಬಹುದಾಗಿದೆ. ಪ್ರಕರಣ–೧ರಲ್ಲಿ ಪಾಲಾಕ್ಷಮ್ಮ ಎಂಬ ಹಿರಿಯರು ವ್ಯವಸ್ಥೆಯ ಭಾಗವಾಗಿ ಹಿಂಸೆಯನ್ನು ಅನುಭವಿಸುವ ಹಾಗೂ ಸ್ವತಃ ಅವರೇ ಹಿಂಸೆಯನ್ನು ಸ್ಥಾಪಿಸುವ ಮಾದರಿಯಾಗಿ ಕಂಡುಬರುತ್ತಾರೆ. ಇವರು ಸೊಸೆ ಮತ್ತು ಮೊಮ್ಮಕ್ಕಳಿಂದ ನಿರ್ಲಕ್ಷಕ್ಕೊಳಗಾಗುತ್ತಿದ್ದು, ಅವರು ತಮಗೆ ಸರಿಯಾಗಿ ಊಟ ಕೊಡುತ್ತಿಲ್ಲ, ನನ್ನನ್ನು ಹಿರಿಯಳಂತೆ ಗಮನಿಸುತ್ತಿಲ್ಲ ಎಂದು ಹೇಳುತ್ತಾರೆ. ಇದರಿಂದ ತಮಗೆ ತುಂಬಾ ನೋವಾಗಿರುವುದಾಗಿ ಹೇಳಿಕೊಳ್ಳುತ್ತಾರೆ. ಜೊತೆಗೆ ತಾವು ಸೊಸೆಯನ್ನು ಹಿಂಸಿಸಿರುವುದನ್ನೂ ಸಹ ತಮಗೆ ಗೊತ್ತಿಲ್ಲದಂತೆ (ತಾವು ನೀಡಿರುವುದು ಹಿಂಸೆ ಎಂಬುದು ಅರಿವಿಗೆ ಬಾರದೆ) ಪ್ರಸ್ತಾಪಿಸುತ್ತಾರೆ. ಸೊಸೆ ಹೆಣ್ಣು ಹೆತ್ತದ್ದಕ್ಕಾಗಿ ದೂಷಿಸಿ ಆಡುವ ಪಾಲಾಕ್ಷಮ್ಮನವರ ಮಾತುಗಳು ಅವರ ಸೊಸೆಗೂ ಕೂಡಾ ನೋವು ತಂದಿರಬಹುದು ಎಂಬ ಸಂಗತಿಯನ್ನು ಸಹ ಇಲ್ಲಿ ತಳ್ಳಿಹಾಕುವಂತಿಲ್ಲ. ಇದೆಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಈ ಪ್ರಕರಣದಲ್ಲಿ ಪಾಲಾಕ್ಷಮ್ಮ ಹಾಗೂ ಅವರ ಸೊಸೆ ಇಬ್ಬರೂ ಕುಟುಂಬದಲ್ಲಿಯ ಸಿದ್ಧ ಮಾದರಿ ಪಾತ್ರಗಳಾಗಿ ಕಾರ್ಯನಿರ್ವಹಿಸುತ್ತಾ, ಹಿಂಸೆ ನೀಡುವ ಹಾಗೂ ಹಿಂಸೆ ಅನುಭವಿಸುವ ದೃಷ್ಟಾಂತಗಳಾಗಿ ಕಂಡುಬರುತ್ತಾರೆ.

ಮುಖ್ಯ ವಕ್ತೃ ಪಾಲಾಕ್ಷಮ್ಮನವರು ವೃದ್ಧರಾಗಿ ಅವರ ಸೊಸೆಯಿಂದ ಸರಿಯಾಗಿ ಊಟ ದೊರಕಿಸಿಕೊಳ್ಳಲಾಗದೆ ದೈಹಿಕವಾಗಿ ನೋವನ್ನು ಅನುಭವಿಸಿದ ಹಾಗೆ ಇನ್ನೂ ಅನೇಕ ಕುಟುಂಬಗಳಲ್ಲಿ ವೃದ್ಧರು ಈ ಬಗೆಯ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಪಾಲಾಕ್ಷಮ್ಮನವರ ಸೊಸೆ ನಡೆದು ಕೊಳ್ಳುತ್ತಿರುವಂತೆ ಅದೆಷ್ಟೋ ಸೊಸೆಯಂದಿರು ಅವರ ಅತ್ತೆಯೊಂದಿಗೆ ನಡೆದುಕೊಳ್ಳುತ್ತಿದ್ದಾರೆ. ಇಂತಹ ಸಂದರ್ಭಗಳು ಕೂಡಾ ವ್ಯವಸ್ಥೆಯ ಹುನ್ನಾರದ ಭಾಗವಾಗಿ ರೂಪಿತಗೊಂಡವುಗಳಾಗಿವೆ ಎಂದು ಹೇಳಬಹುದು. ಒಂದು ಕಾಲದಲ್ಲಿ ಅತ್ತೆಯಾದವಳು (ವೃದ್ಧರಾದಾಗ) ಸೊಸೆಯ ಕೈಯಲ್ಲಿ ಜೀವನ ಸವಿಸಲೇಬೇಕಾಗುತ್ತದೆ. ಆಗ ಆಕೆ ತಾನು ಸೊಸೆಯಾಗಿದ್ದಾಗ ಅನುಭವಿಸಿದ ಎಲ್ಲಾ ನೋವುಗಳನ್ನು ಪ್ರತೀಕಾರವಾಗಿ ಅತ್ತೆಗೆ ತೀರಿಸಿಕೊಳ್ಳುವುದು ಕಂಡುಬರುತ್ತದೆ. ಇದನ್ನು ಸಾಮಾಜಿಕ ಸಂದರ್ಭದಲ್ಲಿ ಅತ್ಯಂತ ಚೊಕ್ಕಟವಾಗಿ ಹೇಳುವುದು ಕಂಡುಬರುತ್ತದೆ. 'ಇವತ್ತು ನಿನ್ನ ಕೈಯಾಗ ನಾನು, ನಾಳೆ ನನ್ನ ಕೈಯಾಗ ನೀನು' ಎಂದು ಸೊಸೆಯಾದವಳು ಅತ್ತೆಗೆ ಹೇಳುವುದು ಕಂಡುಬರುತ್ತದೆ. ಹೊಸದಾಗಿ ಬಾಳುವೆ ಮಾಡಲು ಬಂದಾಗ ಸೊಸೆಯಾದವಳು ಅತ್ತೆಯ ಅಧೀನದಲ್ಲಿ ಇರಬೇಕಾಗುತ್ತದೆ. ಹಾಗು ಅತ್ತೆಗೆ ವಯಸ್ಸಾದಾಗ ಆಕೆ ಸೊಸೆಯ ಅಧೀನದಲ್ಲಿ ಇರಬೇಕಾಗುತ್ತದೆ. ಆಗ ಅತ್ತೆಯಾದವಳು ಸೊಸೆಗೆ ನಡೆಸಿಕೊಂಡಷ್ಟೇ ಕೆಟ್ಟದಾಗಿ ಸೊಸೆಯಾದವಳು ಅತ್ತೆಗೆ ವಯಸ್ಸಾದಾಗ ನೋಡಿಕೊಳ್ಳುವುದು ಈ ಪ್ರಕರಣದಿಂದ ಸಾಬೀತಾಗುತ್ತದೆ.

ಇನ್ನು ಪ್ರಕರಣ-೨ರಲ್ಲಿ ಬಾಗಮ್ಮ ಅಕ್ಷರಸ್ಥ ಮಹಿಳೆ ಆದರೂ ಆಕೆ ಎಷ್ಟೊಂದು ಅಸಹಾಯಕಳಾಗಿದ್ದಾಳೆ ಎಂಬುದು ಅವಳ ಮಾತುಗಳಲ್ಲೇ ಕಾಣಬರುತ್ತದೆ. ಕಾರಣ ತಂದೆ ಅವಳಿಗೆ, ಅವಳ ತಂಗಿ, ತಾಯಿಗೆ ಮುಖ್ಯವಾಗಿ ದೈಹಿಕ, ಭಾವನಾತ್ಮಕ ಹಾಗೂ ಆರ್ಥಿಕವಾಗಿ ನೀಡಿದ ದೌರ್ಜನ್ಯ ಅವರನ್ನು ಜೀವನದಲ್ಲಿ ತಾವು ಅಸಹಾಯಕರು ಎಂಬಂತಹ ಅಭಿಪ್ರಾಯ ಮೂಡಲು ಕಾರಣವಾಗಿದೆ. ತಂದೆ ಹೆಚ್ಚಿನ ಕುಡುಕ. ತನ್ನ ಕುಡಿತದ ಚಟಕ್ಕೆ ಹಣ ಇಲ್ಲದಾಗ ಬಾಗಮ್ಮಳು ಅವರ ತಾಯಿಯನ್ನು ಜೊತೆಗೆ ತನ್ನನ್ನು ಚೆನ್ನಾಗಿ ತಳಿಸುತ್ತಿದ್ದದ್ದನ್ನು ನೆನಪಿಸಿಕೊಳ್ಳುತ್ತಾಳೆ. ತಂದೆ ನೀಡಿದ ಅತಿರೇಖದ ಹಿಂಸೆಯನ್ನು ತಾಳಲಾರದೇ ಅವರ ತಾಯಿ ಬೆಂಕಿಯಲ್ಲಿ ಕಣ್ಣೆದುರೇ ಬೆಂದು ಹೋದ ಅತ್ಯಂತ ಕರುಣಾಜನಕ ಕಥೆಯನ್ನು ಸಂಕಟದಿಂದ ಹೇಳಿಕೊಳ್ಳುತ್ತಾಳೆ. ತಾಯಿ ತೀರಿಕೊಂಡ ಬಳಿಕವೂ ತಂದೆ ನಡೆಸುವ ದೌರ್ಜನ್ಯದಿಂದ ತಾವು ಹೊರಬರಲಾಗಿಲ್ಲ ಎಂದು ತಮ್ಮ ಕಷ್ಟವನ್ನು ತೋಡಿಕೊಳ್ಳುತ್ತಾರೆ. ಶಾಬ್ಧಿಕವಾಗಿ, ಆರ್ಥಿಕವಾಗಿ, ಭಾವನಾತ್ಮಕವಾಗಿ ಅದರಲ್ಲೂ ಮುಖ್ಯವಾಗಿ ದೈಹಿಕವಾಗಿ ತಂದೆಯಿಂದ ದಿನನಿತ್ಯ ಹಿಂಸೆಗೆ ಒಳಗಾಗುತ್ತಿರುವುದನ್ನು ವ್ಯಕ್ತಪಡಿಸುತ್ತಾರೆ. ತಂದೆಯಿಂದ ಅನುಭವಿಸುತ್ತಿರುವ ಹಿಂಸೆಯಿಂದ ಅವರು ಮುಕ್ತಿ ಹೊಂದಲು ಸಾಧ್ಯವೇ ಇಲ್ಲ ಎಂಬುದು ಅವರ ಮಾತಿನ ದಾಟಿಯ ಮೂಲಕ ತಿಳಿದುಬರುತ್ತದೆ. ತಾಯಿಯ ಆತ್ಮಹತ್ಯೆಗೆ ತಂದೆ ಕಾರಣನೆಂದು ತಿಳಿದಿದ್ದರೂ ಸಹ ಏನು ಮಾಡಲಾಗದಷ್ಟು ಅಸಹಾಯಕ ಸ್ಥಿತಿ ಬಾಗಮ್ಮನವರದ್ದಾಗಿದೆ. ಸಮಾಜದ ಕಣ್ಣೆದುರೇ ಇಂತಹ ಅನೇಕ ಆತ್ಮಹತ್ಯೆ ಪ್ರಕರಣಗಳು ಜರುಗುತ್ತಿದ್ದಾಗಲೂ ಅವುಗಳಿಗೆ ಕಾರಣರಾದವರಿಗೆ ಶಿಕ್ಷೆ ಆಗದೇ ಹೋಗುತ್ತವೆ. ನ್ಯಾಯಾಂಗ ವ್ಯವಸ್ಥೆ ತನ್ನ ವ್ಯಾಪ್ತಿಗೆ ಬರದಂತಹ ಪ್ರಕರಣಗಳಿಗೆ ನ್ಯಾಯ ದೊರಕಿಸಲಾರದು. ಇದರ ಸತ್ಯ ಅಸತ್ಯತೆಗಳನ್ನು ತಿಳಿಯುವುದು ಆರಕ್ಷಕರ ಕಾರ್ಯ ನಿರ್ವಹಣೆಯಾಗಿರುತ್ತದೆ. ಆರಕ್ಷಕರ ಗಮನಕ್ಕೆ ಅದೆಷ್ಟೋ ಇಂತಹ ಪ್ರಕರಣಗಳು ಬಂದಾಗಲೂ ಸಹ ಅವರಿಗೆ ಹೇಗೆ ಸತ್ಯವನ್ನು ಮರೆಮಾಚಲಾಗುತ್ತದೆ ಎಂಬುವುದು ಬಾಗಮ್ಮನವರ ತಾಯಿ ತೀರಿಕೊಂಡ ಪ್ರಕರಣದ ಮೂಲಕ ತಿಳಿದುಬರುತ್ತದೆ.

ಬಾಗಮ್ಮ ಹಾಗೂ ಅವರ ತಂಗಿಯ ಪರಿಸ್ಥಿತಿ ಅಂತ್ಯಂತ ಕರುಣಾಜನಕವಾಗಿದ್ದು, ಕೆಟ್ಟ ಚಟಕ್ಕೆ ಬಲಿಯಾದ ತಂದೆಯಿಂದ ಜೀವನದಲ್ಲಿ ಬರಿ ನೋವನ್ನೇ ಅನುಭವಿಸುವಂತಾಗಿದೆ. ಈ ಪ್ರಕರಣದ ಮೂಲಕ ತಿಳಿಯುವುದೇನೆಂದರೆ, ಕುಟುಂದಲ್ಲಿ ತಂದೆಯ ಪಾತ್ರ ನಿರ್ವಹಣೆ ಅತೀ ಮುಖ್ಯವಾದದ್ದು. ತಂದೆಯಾದವನು ಕೆಟ್ಟವನಾಗಿದ್ದರೂ ಸಹ ಅವನನ್ನು ಸಹಿಸಿಕೊಳ್ಳಬೇಕು ಎಂದು ಪಿತೃಪ್ರಧಾನತೆಯನ್ನು ಸ್ಥಾಪಿಸುವ ಕಾರ್ಯವನ್ನು ಸಮಾಜ ಹುಟ್ಟುಹಾಕುತ್ತಾ ಹೊರಟಿರುವುದು ಈ ಪ್ರಕರಣದ ಮೂಲಕ ತಿಳಿದು ಬರುತ್ತದೆ. ವ್ಯವಸ್ಥೆ ತಂದೆಯ ಸ್ಥಾನಕ್ಕೆ ನೀಡಿದ ಮಾನ್ಯತೆ ಎಷ್ಟಿದೆ ಎಂದರೆ, ಆತ ಹೆಂಡತಿ ಸಾಯುವ ಹಾಗೆ ವರ್ತಿಸಿದಾಗಲೂ ಕೂಡಾ ಆತನ ಪಾತ್ರಕ್ಕೆ (ಮಾದರಿ) ಕುಂದು ಬರದಂತೆ ನೋಡಿಕೊಳ್ಳುತ್ತದೆ. ಬಾಗಮ್ಮನವರು ಮತ್ತು ಆಕೆಯ ತಂಗಿ ಇಂದಿಗೂ ತಮ್ಮ ತಂದೆಯಿಂದ ದೈಹಿಕ ಮತ್ತು ಭಾವನಾತ್ಮಕ ಹಿಂಸೆಗೊಳಗಾಗುತ್ತಿದ್ದು, ಅದು ತಂದೆಯ ಸಾವಿನಲ್ಲಿಯೇ ಅಂತ್ಯಗೊಳ್ಳುತ್ತದೆ ವಿನಃ ತಮ್ಮ ಸಮಸ್ಯೆಗೆ ಬೇರೆ ಪರಿಹಾರವೇ ಇಲ್ಲ ಎಂಬಂತಹ ನೊಂದ ಮಾತುಗಳು ಅವರಿಂದ ಕೇಳಿಬರುತ್ತವೆ.

ಇನ್ನು ಪ್ರಕರಣ-೩ರಲ್ಲಿ ಭಾಗ್ಯ ಎಂಬ ಹುಡುಗಿ ಬಾಲ ಕಾರ್ಮಿಕಳಾಗಿರುವುದು ಕಾಣಬರುತ್ತದೆ. ಬಾಲ ಕಾರ್ಮಿಕರ ತಡೆ ಕಾನೂನು ಅತ್ಯಂತ ಕ್ರಿಯಾಶೀಲವಾಗಿ ತನ್ನ ಕಾರ್ಯ ನಿರ್ವಹಿಸುತ್ತಿದ್ದಾಗಲೂ ಸಹ ಅಲ್ಲೊಂದು ಇಲ್ಲೊಂದು ಇಂತಹ ಪ್ರಕರಣಗಳು ಕಾಣಬರುತ್ತವೆ. ಭಾಗ್ಯ ಚಿಕ್ಕ ವಯಸ್ಸಿನಲ್ಲಿಯೇ ದುಡಿಮೆಗೆ ತೊಡಗಿಕೊಂಡಿರುವುದು ಆಕೆಯ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯ ಮೇಲೆ ದುಷ್ ಪರಿಣಾಮವನ್ನುಂಟು ಮಾಡುತ್ತಿದೆ. ಜೊತೆಗೆ ಆಕೆ ಕಡ್ಡಾಯ ಶಿಕ್ಷಣದಿಂದ ವಂಚಿತಳಾಗುತ್ತಿದ್ದಾಳೆ. ತಂದೆ ಇದ್ದಾಗ್ಯೂ ಕೂಡಾ ಅವರು ಭಾಗ್ಯಾಳ ಪೋಷಣೆಯ ಜವಾಬ್ದಾರಿ ಹೊರದೇ ದುಡಿಮೆಗೆ ದೂಡಿರುವುದು ಆಕೆಯ ವ್ಯಕ್ತಿತ್ವ ವಿಕಸನಕ್ಕೆ ಅಡೆತಡೆಯಾಗಿದೆ. ಇಷ್ಟಲ್ಲದೇ ಭಾಗ್ಯಾಳನ್ನು ದುಡಿಮೆಗೆ ದೂಡಿ ಅದರಿಂದ ಬಂದ ಪ್ರತಿಫಲವನ್ನೆಲ್ಲಾ ಅವಳ ತಂದೆ ಪಡೆಯುತ್ತಿದ್ದು ಆಕೆಯನ್ನು ದುರುಪಯೋಗ ಮಾಡಿಕೊಳ್ಳುತ್ತಿರುವುದು ಇಲ್ಲಿ ಸ್ಪಷ್ಟವಾಗುತ್ತದೆ. ಇದು ಭಾಗ್ಯಾಳ ಅರಿವಿಗೆ ಬಾರದೇ ನಿರಂತರವಾಗಿ ದೈಹಿಕ, ಆರ್ಥಿಕ, ಭಾವನಾತ್ಮಕ ಹಿಂಸೆಗೆ ಒಳಗಾಗುತ್ತಿರುವುದು ಕಂಡುಬರುತ್ತದೆ.

ಪ್ರಕರಣ-೪ರಲ್ಲಿ ಕುಟುಂಬಕ್ಕೆ ಗಂಡು ಮಗು ಬೇಕೇ ಬೇಕೆಂಬ ಅಪೇಕ್ಷೆಯಿಂದಾಗಿ ಮಮತಾರವರು ಮನೆಯ ಸದಸ್ಯರಿಂದ ನಿರ್ಲಕ್ಷ್ಯಕ್ಕೊಳಗಾಗಿರುವುದು ಕಂಡುಬರುತ್ತದೆ. ಇವರು ಮೂಲತಃ ಗುಜರಾತದವರು. ಇದನ್ನು ಪ್ರಸ್ತಾಪಿಸಲು ಕಾರಣ ಪುರುಷ ಪ್ರಧಾನ ವ್ಯವಸ್ಥೆ ಭಾರತದ ಎಲ್ಲಾ ಕಡೆ ಹರಡಿದೆ ಎಂದು ಹೇಳುವುದಾಗಿದೆ. ಈ ಪ್ರಕರಣದಲ್ಲಿ ದೌರ್ಜನ್ಯಕ್ಕೊಳಗಾಗುತ್ತಿರುವ ಮಮತಾರವರು ಎರಡು ಹೆಣ್ಣು ಮಕ್ಕಳನ್ನು ಹೆತ್ತಿದ್ದಾರೆ. ಆದಕಾರಣ ಅವರ ಅತ್ತೆಯು ಮನೆತನದ ಹೆಸರಿಗೆ ಒಂದು ಗಂಡು ಮಗುವನ್ನೂ ಹೆರಲಿಲ್ಲ ಎಂದು ದೂಷಿಸುತ್ತಾರೆ. ಇದರೊಟ್ಟಿಗೆ ಗಂಡನಿಂದ ಹಿಡಿದು ಮನೆಯ ಇತರೆ ಎಲ್ಲಾ ಸದ್ಯರಿಂದಲೂ ನಿರ್ಲಕ್ಷ್ಯಕ್ಕೊಳಗಾಗುವುದು ಕಂಡುಬರುತ್ತದೆ. ಈ ಸಂಗತಿ ಮಮತಾರ ಮನಸ್ಸಿನ ಮೇಲೆ ಸಾಕಷ್ಟು ಕೆಟ್ಟ ಪರಿಣಾಮವನ್ನುಂಟು ಮಾಡಿದೆ. ಇದರಿಂದಾಗಿ ಅವರು ಮಾನಸಿಕವಾಗಿ ಹಿಂಸೆಗೊಳಗಾಗುತ್ತಿದ್ದಾರೆ ಎನ್ನುವುದಕ್ಕಿಂತಲೂ ಮುಖ್ಯವಾದ ಸಂಗತಿ ಎಂದರೆ ಆಕೆಗೆ ಗಂಡು ಮಗು ಹೆರುವವರೆಗೆ ಮತ್ತೆ ಮತ್ತೆ ಹೆರುವಂತೆ ಸೂಚಿಸುತ್ತಿರುವುದಾಗಿದೆ. ಶಸ್ತ್ರಚಿಕಿತ್ಸೆಯ ಮೂಲಕ ಮಗುವನ್ನು ಹೆತ್ತ ಮಮತಾರಿಗೆ ಮತ್ತೊಂದು ಮಗು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ ಎಂದು ವೈದ್ಯರು ಸೂಚಿಸಿದ್ದು, ಅದನ್ನು ಗಣನೆಗೆ ತೆಗೆದುಕೊಳ್ಳದೇ ಗಂಡು ಹೆರುವವರೆಗೂ ಸಂತಾನಹರಣ ಚಿಕಿತ್ಸೆ ಮಾಡಿಸುವುದಿಲ್ಲ ಎಂದು ಅವರ ಗಂಡನ ಮನೆಯವರು ಪಟ್ಟು ಹಿಡಿದಿದ್ದಾರೆ. ಇದರಿಂದ ಮಮತಾರವರು ಅನಾವಶ್ಯಕವಾಗಿ ದೈಹಿಕ ಹಿಂಸೆಗೆ ಒಳಗಾಗುವಂತಾಗಿದೆ. ಇಂತಹ ಸನ್ನಿವೇಶಗಳು ಕೇವಲ ಮಮತಾರೊಬ್ಬರದ್ದಾಗಿರದೇ ಇತರೆ ಬಹುತೇಕ ಹೆಣ್ಣು ಮಕ್ಕಳು ಅನುಭವಿಸುತ್ತಿದ್ದಾರೆ. ಹೆಣ್ಣು-ಗಂಡಿನ ಬಗೆಗಿನ ಇಬ್ಬಗೆಯ ನೀತಿಗಳು ಮಹಿಳೆಯರಿಗೆ ಈ ರೀತಿಯ ಹಿಂಸೆಯನ್ನು ತಂದೊಡ್ಡುತ್ತವೆ. ಈ ಪ್ರಕರಣ ಕುಟುಂಬಗಳು ಹೊಂದಿರುವ ಲಿಂಗ ಅಸಮಾನತೆಯ ಧೋರಣೆಯನ್ನು ಎತ್ತಿ ತೋರಿಸುತ್ತದೆ.

ಹೆಣ್ಣು-ಗಂಡುಗಳ ಹುಟ್ಟನ್ನು ವೈಜ್ಞಾನಿಕವಾಗಿ ಗಮನಿಸಿದ್ದೇ ಆದರೆ, ಅದು ಮಾನವ ದೇಹದಲ್ಲಿಯ ವರ್ಣತಂತುಗಳಿಗೆ ಸಂಬಂಧಿಸಿದ್ದಾಗಿರುತ್ತದೆ. ಇದರ ಆಧಾರದಿಂದಾಗಿ ಗಂಡು-ಹೆಣ್ಣುಗಳ ಹುಟ್ಟಿಗೆ ಮೂಲ ಕಾರಣ ಪುರುಷನಾಗಿರುತ್ತಾನೆ. ಇದನ್ನು ಅರಿತಿದ್ದರೂ ಪುರುಷ ಪ್ರಧಾನ

ಸಮಾಜ ತನಗೆ ಬೇಡವಾದ ಎಲ್ಲಾ ಸಂಗತಿಗಳಿಗೆ ಹೆಣ್ಣನ್ನೇ ಹೊಣೆಯಾಗಿಸುತ್ತಾ ಬಂದಿದೆ. ಯಾವ ಸಂದರ್ಭದಲ್ಲೂ ಸಹ ಗಂಡನ್ನು ದೂರದಿರುವುದು ಕಂಡುಬರುತ್ತದೆ. ಇಂತಹ ಸಂಗತಿಗಳಿಗೆ ಮಮತಾರ ಪ್ರಕರಣ ಒಂದು ಉತ್ತಮ ಉದಾಹರಣೆಯಾಗಿದೆ.

ಲೈಂಗಿಕ ಹಿಂಸೆ– ಪುರುಷ ಪ್ರಧಾನ ಸಮಾಜದಲ್ಲಿ ಪುರುಷ ಹೆಣ್ಣನ್ನು ತನ್ನ ಅಧೀನವಾಗಿಸಿಕೊಂಡಿದ್ದಾನೆಂದರೆ ಅದಕ್ಕೆ ಮೂಲವಾಗಿ ಬಳಸಿರುವ ತಂತ್ರ ಹೆಣ್ಣಿನ ಲೈಂಗಿಕತೆಯನ್ನಾಧರಿಸಿದ್ದಾಗಿದೆ. ಹೆಣ್ಣಿನ ವಿಶೇಷತೆ ಇರುವುದು ಆಕೆಯ ಲೈಂಗಿಕತೆಯಲ್ಲಿ ಹಾಗೂ ಲೈಂಗಿಕತೆಯನ್ನಾಧರಿಸಿದ ಸಂತಾನೋತ್ಪತ್ತಿ ಕ್ರಿಯೆಯಲ್ಲಿ. ಇದರಿಂದಾಗಿ ಆಕೆಯನ್ನು ದಮನಗೊಳಿಸಲು ಲೈಂಗಿಕತೆಯನ್ನಾಧರಿಸಿದ ಹಿಂಸಾತಂತ್ರಗಳನ್ನು ರೂಪಿಸಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಅನೇಕ ಪ್ರಕರಣಗಳು ದೊರೆತಿದ್ದು, ಅವುಗಳ ವಿಶ್ಲೇಷಣೆ ಇಂತಿದೆ.

ಪ್ರಕರಣ–೫ ಸಾಕಮ್ಮ ಎಂಬ ಹುಡುಗಿ ತಂದೆ–ತಾಯಿಗಳ ಅನಿವಾರ್ಯದ ಪರಿಸ್ಥಿತಿಯಿಂದಾಗಿ ಬಾಲ ಕಾರ್ಮಿಕಳಾಗಿದ್ದು, ಮೂಲವಾಗಿ ಶಿಕ್ಷಣದಿಂದ ವಂಚಿತಳಾಗಿದ್ದಾಳೆ. ಮೇಲಾಗಿ ಆಕೆಯನ್ನು ತಮ್ಮ ಕೆಲಸಕ್ಕಾಗಿ ಸಾಕಮ್ಮರ ತಂದೆ–ತಾಯಿಗಳಿಗೆ ಹಣ ನೀಡಿ ಇಟ್ಟುಕೊಂಡವರು ಸಮಾಜವನ್ನು ಸುಧಾರಣೆಗೆ ತರುವ ಜವಾಬ್ದಾರಿ ಹೊತ್ತಂಥಹ ಶಿಕ್ಷಕರೇ ಆಗಿರುವುದು ನಿಜಕ್ಕೂ ವಿಪರ್ಯಾಸವಾಗಿದೆ. ಸಾಕಮ್ಮಳು ಹೇಳುವ ಪ್ರಕಾರ ಆಕೆ ಆಶ್ರಯ ಪಡೆದಿರುವ ಮನೆಗೆ ಸಂಬಂಧಿಸಿದ ಸಂಬಂಧಿಯಿಂದ ಲೈಂಗಿಕ ಕಿರುಕುಳಕ್ಕೆ ಒಳಗಾಗಿರುವುದು ಕಂಡುಬರುತ್ತದೆ. ಇದರಿಂದಾಗಿ ಆಕೆ ಮಾನಸಿಕವಾಗಿ ಕಸಿವಿಸಿಗೊಂಡಿರುವುದನ್ನು ಕಾಣಬಹುದಾಗಿದೆ. ಸಾಕಮ್ಮಳು ಹೇಳುವುದೆಲ್ಲವನ್ನು ಸೂಕ್ಷ್ಮಾವಲೋಕನಕ್ಕೊಳಪಡಿಸಿದಾಗ ಅಲ್ಲಿ ಕೇವಲ ಲೈಂಗಿಕ ಕಿರುಕುಳ ನಡೆದಿರುವುದು ಮಾತ್ರವಲ್ಲದೇ, ಇತ್ತೀಚೆಗೆ ಬಂದ ಫೋಸ್ಕೊ (posco) ಕಾಯ್ದೆ ಹೇಳಿದಂತೆ ಆ ಬಾಲಕಿ ಮೇಲೆ ಅತ್ಯಾಚಾರವಾಗಿರುವ ಸಾಧ್ಯತೆಗಳೂ ಸಹ ಕಂಡುಬರುತ್ತವೆ. ಈ ಕೃತ್ಯದಿಂದ ಕುಟುಂಬದಲ್ಲಿ ಹೆಣ್ಣನ್ನು ಯಾವ ವಯಸ್ಸಿನಲ್ಲಿ ಬೇಕಾದರೂ ಲೈಂಗಿಕ ತೃಷೆಗಾಗಿ ಬಳಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ಸಾಕಮ್ಮ ಬಾಲ ಕಾರ್ಮಿಕಳಾಗಿರುವುದನ್ನು ಕಂಡೂ ಸಹ ಆಸುಪಾಸಿನ ಜನ ಸಂಬಂಧಿಸಿದಂತಹ ಅಧಿಕಾರಿಗಳ ಗಮನಕ್ಕೆ ತರದಿರುವುದು ನಾಗರಿಕ ಸಮಾಜದ ಅನಾಗರಿಕ ಮನಸ್ಥಿತಿಗಳನ್ನು ತೋರ್ಪಡಿಸುತ್ತದೆ.

ಇನ್ನು **ಪ್ರಕರಣ–೬**ರಲ್ಲಿ ದೇವಕ್ಕನವರು ಪ್ರೀತಿ ಪ್ರೇಮ ಎಂದು ಗಂಡನ ಮೋಸಕ್ಕೆ ಬಲಿಯಾಗಿ ಸಮಾಜದಿಂದ, ಗಂಡನಿಂದ ಬಹಳಷ್ಟು ಹಿಂಸೆಗೆ ಒಳಗಾಗಿರುವುದು ಕಂಡುಬರುತ್ತದೆ. ಸಮಾಜ ಪುರುಷನಿಗೆ ಏನು ತಕರಾರಿಲ್ಲದೇ ಬಹುಪತ್ನಿತ್ವವನ್ನು ಮಾನ್ಯ ಮಾಡುತ್ತದೆ ಎಂಬುದಕ್ಕೆ ಈ ಪ್ರಕರಣ ಸಾಕ್ಷಿಯಾಗಿದೆ. ಇಲ್ಲಿ ಪ್ರೀತಿ ಪ್ರೇಮ ಮದುವೆ ಎಂಬ ನಂಬಿಕೆಗೊಳಗಾಗಿ, ದೇವಕ್ಕ ಮದುವೆಗೂ ಮುನ್ನ ಪ್ರೀತಿಸಿದವನೊಂದಿಗೆ ಲೈಂಗಿಕ ಸಂಪರ್ಕ ಹೊಂದಿರುವುದು ಕಂಡುಬರುತ್ತದೆ. ನಂತರ ಆತ ಮದುವೆ ಆಗಲು ನಿರಾಕರಿಸಿದ್ದು, ಅದು ದೇವಕ್ಕನ ಮೇಲೆ ನಡೆಸಿದ ಲೈಂಗಿಕ ದೌರ್ಜನ್ಯವಾಗುತ್ತದೆ. ಅಲ್ಲದೇ ಇದನ್ನೇ ಕಾನೂನಿನ ವ್ಯಾಪ್ತಿಗೊಳಪಡಿಸಿ ನೋಡಿದಾಗ ದೇವಕ್ಕ ತಾನು ಪ್ರೀತಿಸಿದವನಿಂದ ಅತ್ಯಾಚಾರಕ್ಕೊಳಗಾಗಿರುವುದು ಸ್ಪಷ್ಟವಾಗುತ್ತದೆ. ನಂತರ ದೇವಕ್ಕ ಲೈಂಗಿಕವಾಗಿ ಬಳಕೆಗೊಂಡು

ಬಸಿರಾದಾಗ ಊರಿನ ದೈವದವರು ಪೊಲೀಸರಿಗೆ ಆತನ ವಿರುದ್ಧ ದೂರು ನೀಡುವುದಾಗಿ ಹೆದರಿಸಿ ಮದುವೆ ಮಾಡುತ್ತಾರೆ.

ಈ ಪ್ರಕರಣವನ್ನು ಗಮನಿಸಿದಾಗ ದೇವಕ್ಕ ಮತ್ತು ಅವರ ಗಂಡನ ನಡುವೆ ಪ್ರೀತಿ ಪ್ರೇಮ ಬೆಳೆದಿರುವುದು ತಪ್ಪಾಗಿ ಕಾಣುವುದಿಲ್ಲ. ಆದರೆ ಏಕಪತ್ನಿತ್ವವನ್ನು ಮಾನ್ಯ ಮಾಡಿರುವ ಸಮಾಜ ಈಗಾಗಲೇ ಮದುವೆಯಾಗಿದ್ದ ಆ ಯುವಕನಿಗೆ ದೇವಕ್ಕನವರನ್ನು ಮದುವೆ ಮಾಡಿಸುವುದು ಪುರುಷ ಪ್ರಧಾನ ವ್ಯವಸ್ಥೆ ಒಪ್ಪಿತ ದ್ವಿಪತ್ನಿತ್ವ ವಿವಾಹ ಪದ್ಧತಿಯನ್ನು ತೋರ್ಪಡಿಸುತ್ತದೆ. ಇದೇ ರೀತಿ ಹೆಣ್ಣಿನ ವಿಚಾರಕ್ಕೆ ಬಂದಾಗ, ಸಮಾಜ ಯಾವ ಧೋರಣೆಯನ್ನು ತಳೆಯುತ್ತದೆ? ಎಂಬ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯುತ್ತದೆ. ಹೆಣ್ಣು ಒಂದು ವೇಳೆ ಗಂಡ ಇದ್ದು ಬೇರೆಯವರೊಂದಿಗೆ ಸಂಬಂಧ ಹೊಂದಿದ್ದಾದಲ್ಲಿ, ಅವಳನ್ನು ಸಮಾಜ ಹೀನಾಯವಾಗಿ ನಡುಬೀದಿಗೆ ತಂದು ಎಳೆದಾಡಿ ಹೊಡೆಯುವುದು, ಬಹಿಷ್ಕರಿಸುವುದು ಅಥವಾ ಆ ಸಂಬಂಧದಿಂದ ಹೊರಗೆ ಬರುವಂತೆ ಮಾಡುತ್ತದೆ. ಗಂಡ ಜೀವಂತವಾಗಿದ್ದಾಗ ಹೆಣ್ಣು ಇನ್ನೊಬ್ಬರೊಂದಿಗೆ ಸಂಬಂಧ ಹೊಂದುವುದನ್ನು ಕಟುವಾಗಿ ತಿರಸ್ಕರಿಸುತ್ತದೆ. ಗಂಡ ಸತ್ತಾಗ ಅಥವಾ ವಿಚ್ಛೇದನೆ ಪಡೆದುಕೊಂಡಾಗ ಮಾತ್ರ ಹೆಣ್ಣಿಗೆ ಮತ್ತೊಂದು ವಿವಾಹವಾಗಲು ಕಾನೂನು ಅವಕಾಶ ನೀಡುತ್ತದೆ. ಹೀಗೆ ಹೆಣ್ಣು ಕಾನೂನು ನೀಡಿದ ಅವಕಾಶ ಬಳಸಿಕೊಂಡು ಮದುವೆಯಾದರೂ ಸಹ ಅವಳನ್ನು ಸಮಾಜ ಸದಾ ಅಪಮಾನಗೊಳಿಸುತ್ತಲೇ ಇರುತ್ತದೆ. ಇದರಿಂದಾಗಿ ಸಮಾಜದಲ್ಲಿ ಬಹುಪತಿತ್ವದಂತಹ ಪ್ರಕರಣಗಳು ತೀರಾ ವಿರಳವಾಗಿರುವುದು ಕಂಡುಬರುತ್ತದೆ. ಇದನ್ನು ಇಲ್ಲಿ ಹೇಳವ ಉದ್ದೇಶ ಬಹುಪತ್ನಿತ್ವವನ್ನು ಮಾನ್ಯ ಮಾಡುವ ಸಮಾಜ, ಬಹುಪತಿತ್ವಕ್ಕೆ ಯಾಕೆ ಅವಕಾಶ ಮಾಡುವುದಿಲ್ಲ ಎಂಬುದನ್ನ ಅರಿಯುವುದಾಗಿದೆ.

ಇಷ್ಟಲ್ಲದೇ ವಿವಾಹವಿಲ್ಲದೆ ಮಕ್ಕಳಿಗೆ ಜನ್ಮ ನೀಡಿದರೆ ಅಂತಹ ಮಹಿಳೆಯನ್ನು ಸಮಾಜ ಬಹಳಷ್ಟು ಕೆಟ್ಟದ್ದಾಗಿ ನಡೆಸಿಕೊಳ್ಳುತ್ತದೆ. ಇಂತಹ ಕೆಟ್ಟಸ್ಥಿತಿಯನ್ನು ದೇವಕ್ಕನವರು ಅನುಭವಿಸಿರುವುದು ಕಂಡುಬರುತ್ತದೆ. ಇಂತಹ ಸಂದರ್ಭದಲ್ಲಿ ಅವರು ಅದೆಷ್ಟು ಹಿಂಸೆ ಅನುಭವಿಸಿದ್ದಾರೆಂದರೆ ಅದನ್ನು ಮಾತಿನಲ್ಲಿ ವ್ಯಕ್ತಪಡಿಸಲು ಅಸಾಧ್ಯವಾಗಿದೆ. ದೇವಕ್ಕನವರು ಇಂತಹ ಕೆಟ್ಟ ಸಂದರ್ಭಗಳನ್ನು ಎದುರಿಸಿ, ನಂತರ ಗಂಡನೊಂದಿಗೆ ಜೀವನ ನಡೆಸಿದಾಗಲೂ ಸಹ ಅವರು ಗಂಡನಿಂದ ಸದಾ ಆರ್ಥಿಕ ಬಿಕ್ಕಟ್ಟಿಗೆ ಒಳಗಾಗುತ್ತಿದ್ದಾರೆ. ಅಲ್ಲದೇ ದೇವಕ್ಕನವರು ಗಂಡನಿಂದ ಅನುಮಾನಕ್ಕೊಳಗಾಗುವ ಕೃತ್ಯಕ್ಕೂ ಸಹ ಒಳಗಾಗುತ್ತಿರುವುದು ಕಂಡುಬರುತ್ತದೆ. ದೇವಕ್ಕನವರು ಈ ಎಲ್ಲಾ ಬಗೆಯ ಹಿಂಸೆಗಳಿಂದಾಗಿ ದಿನಾ ಸಾಯುವುದಕ್ಕಿಂತ ಒಮ್ಮೆಲೇ ಸಾಯುವುದು ಲೇಸು ಎಂದು ತಿಳಿಸುತ್ತಾರೆ. ಇವರ ಈ ಪರಿಯ ಮಾತುಗಳು ಅವರಿಗಾದ ಮಾನಸಿಕ ಹಿಂಸೆ ಎಷ್ಟೆಂಬುವುದನ್ನು ಬಿಂಬಿಸುತ್ತದೆ.

ಲೈಂಗಿಕವಾಗಿ ದೌರ್ಜನ್ಯಕ್ಕೊಳಗಾದ ದೇವಕ್ಕನವರ ಸ್ಥಿತಿ ಹೀಗಾದರೆ ಇನ್ನು ಗಂಡನಿಂದ ಬೇರೆಯದೇ ಆದ ರೀತಿಯಲ್ಲಿ ಲೈಂಗಿಕ ಹಿಂಸೆಗೊಳಗಾಗಿರುವ ತಸ್ಲಿಮಾರ ಪ್ರಕರಣ ಪುರುಷ ಪ್ರಧಾನ ವ್ಯವಸ್ಥೆಯ ಕ್ರೌರ್ಯತೆ ಎಷ್ಟಿದೆ ಎಂಬುವುದನ್ನು ಬಿಚ್ಚಿಡುತ್ತದೆ. **ಪ್ರಕರಣ–೭**ರಲ್ಲಿ ತಸ್ಲಿಮಾ ಬಾನು ಎಂಬ ಮಹಿಳೆ ತನ್ನ ಗಂಡನಿಂದ ಆರ್ಥಿಕ, ದೈಹಿಕ, ಭಾವನಾತ್ಮಕ, ಶಾಬ್ಧಿಕ ಹಿಂಸಿಗೆ ಒಳಗಾಗಿರುವುದನ್ನು ಕಾಣಬಹುದಾಗಿದೆ. ಅದರಲ್ಲೂ ಮುಖ್ಯವಾಗಿ ಗಂಡನಿಂದ ಲೈಂಗಿಕ

ಹಿಂಸೆಗೊಳಗಿರುವುದು ಕಂಡುಬರುತ್ತದೆ. ಸರಿಯಾಗಿ ದುಡಿದು ಹಾಕದೇ ತಸ್ಲಿಮಾರನ್ನು ಆರ್ಥಿಕ ಸಂಕಷ್ಟಕ್ಕೀಡು ಮಾಡುವುದು ಮಾತ್ರವಲ್ಲದೇ, ಹೆಂಡತಿಯ ಬಗ್ಗೆ ಅಪನಂಬಿಕೆ ವ್ಯಕ್ತಪಡಿಸಿ ತಸ್ಲಿಮಾರನ್ನು ಹಿಂಸಿಸುವ ಪರಿ ಅತ್ಯಂತ ಕರುಣಾಜನಕವಾಗಿದೆ. ಲೈಂಗಿಕವಾದ ಅಪನಂಬಿಕೆ ಕೃತ್ಯ ದೈಹಿಕವಾಗಿ ದಂಡಿಸುವುದರ ಮೂಲಕ ವ್ಯಕ್ತಗೊಂಡಿರುವುದು ಗೋಚರವಾಗುತ್ತದೆ. ಹೆಂಡತಿಯು ತನ್ನ ಖಾಸಗಿ ಆಸ್ತಿ ಎಂಬ ಮನೋಭಾವದಿಂದ ಆಕೆಯ ಪ್ರತಿಯೊಂದು ನಡುವಳಿಕೆಗಳನ್ನು ನಿಯಂತ್ರಿಸಲಿಚ್ಚಿಸುವ ತಸ್ಲಿಮಾರ ಗಂಡ ತಸ್ಲಿಮಾರನ್ನು ಅತಿಯಾಗಿ ಹಿಂಸೆಗೊಳಪಡಿಸಿರುವುದು ಗೋಚರವಾಗುತ್ತದೆ. ಪತ್ನಿಯನ್ನ ಹಿಡಿತದಲ್ಲಿಟ್ಟುಕೊಳ್ಳಲು ಆಕೆಯನ್ನು ಸದಾ ಅನುಮಾನದಿಂದ ಕಾಣುವ ನೆಲೆ ಹೆಣ್ಣಿನ ದೇಹದ ಮೇಲೆ ಪುರುಷ ಹೊಂದಿರುವ ಅಧಿಕಾರದ ಹಿನ್ನೆಲೆಯನ್ನು ಸೂಚಿಸುತ್ತದೆ. ಪುರುಷ ಪ್ರಧಾನ ವ್ಯವಸ್ಥೆ ಹೆಣ್ಣಿಗೆ 'ಶೀಲ', 'ಪಾತಿವೃತ್ಯ'ದ ಕಲ್ಪನೆ ನೀಡಿದ್ದು, ಆ ನೆಲೆಯಲ್ಲಿ ಹಿಂಸೆಗೊಳಪಡಿಸಿ ಹೆಣ್ಣನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಹವಣಿಸುತ್ತದೆ. ಇಂತಹ ಕೃತ್ಯಕ್ಕೆ ತಸ್ಲಿಮಾರ ಗಂಡ ಕೈ ಜೋಡಿಸಿರುವುದು ಕಂಡುಬರುತ್ತದೆ.

ಶಾಬ್ಧಿಕ ಹಿಂಸೆ – ಪುರುಷ ಪ್ರಧಾನ ವ್ಯವಸ್ಥೆ ಶಾಬ್ಧಿಕ ಹಿಂಸೆಯಂತಹ ಅಸ್ತ್ರವನ್ನು ಮಹಿಳೆಯರನ್ನು ಹಿಡಿತದಲ್ಲಿಟ್ಟುಕೊಳ್ಳಲು ಬಳಸಿಕೊಳ್ಳುತ್ತಿದೆ. ಅದರಲ್ಲೂ ಮಹಿಳೆಯರ ಚಾರಿತ್ರ್ಯವಧೆ ಮಾಡುವಂತಹ ಪದಗಳನ್ನೇ ಹೆಚ್ಚೆಚ್ಚು ಪ್ರಯೋಗಿಸಲಾಗುತ್ತಿದೆ. ಇದರಿಂದ ಮಹಿಳೆಯರು ಮಾನಸಿಕವಾಗಿ ಕುಗ್ಗಿ ನಲುಗುವಂತಾಗಿದೆ. ಹೆಣ್ಣು ಮಾಡದಿರುವ ತಪ್ಪಿಗೆ, ಹೆಣ್ಣಾಗಿರುವ ಕಾರಣದಿಂದಾಗಿ ಎಷ್ಟೋ ಸಂದರ್ಭದಲ್ಲಿ ಶಾಬ್ಧಿಕವಾಗಿ ಹಿಂಸೆ ಅನುಭವಿಸುವಂತಾಗಿದೆ. ಮಹಿಳೆಯರಿಗೆ ಈ ರೀತಿಯಾಗಿ ಹಿಂಸೆ ನೀಡುವ ಮೂಲಕ ಹಿಂಸೆಗೊಳಪಡಿಸುವವರು ತಮ್ಮ ಕಾರ್ಯ ಸಾಧನೆ ಮಾಡಿಕೊಳ್ಳುತ್ತಾರೆ. ಮಹಿಳೆಯರನ್ನು ಅಂಕಿತದಲ್ಲಿಟ್ಟು ಕೊಳ್ಳಲು ಈ ಬಗೆಯ ಹಿಂಸೆಯನ್ನು ಬಹುತೇಕವಾಗಿ ಬಳಸಿ ಕೊಳ್ಳುತ್ತಿದ್ದಾರೆ. ಇದನ್ನು ಆಧರಿಸಿದ ಕೆಲವೊಂದು ಪ್ರಕರಣಗಳ ವಿಶ್ಲೇಷಣೆ ಇಂತಿದೆ. ಪ್ರಕರಣ–೮ ರಲ್ಲಿ ಪಾರ್ವತಿಯವರು ಮದುವೆಯಾದ ಕೂಡಲೇ ಗಂಡನನ್ನು ಕಳೆದುಕೊಂಡು ನಂತರ ಬೇರೆ ಮದುವೆಯಾಗಿ ಅಲ್ಲಾದರೂ ಸುಖ ಸಂಸಾರ ನಡೆಸಬಹುದೆಂದು ಅಂದುಕೊಂಡಿರುತ್ತಾರೆ. ಆದರೆ ಅವರಿಗೆ ಅಲ್ಲಿಯೂ ಕೂಡ ನೋವುಂಟಾಗಿರುವುದಾಗಿ ಹೇಳಿಕೊಳ್ಳುತ್ತಾರೆ. ಇಲ್ಲಿ ಪಾರ್ವತಿಯವರ ಗಂಡನದು ಪಾರ್ವತಿ ಯವರೊಟ್ಟಿಗಿನ ವಿವಾಹ ಎರಡನೇ ವಿವಾಹವಾಗಿದ್ದು, ಅವರ ಮೊದಲನೇ ಹೆಂಡತಿ ಅವರ ಮನೆಯಲ್ಲೇ ಸತ್ತಿರುವುದಾಗಿ ಹೇಳುತ್ತಾರೆ. ಪಾರ್ವತಿಯವರು ತಮಗೆ ಗಂಡನಿಂದ ಹಾಗೂ ಅವರ ಅತ್ತೆಯಿಂದ ಶಾಬ್ಧಿಕವಾಗಿ, ಭಾವನಾತ್ಮಕವಾಗಿ ಹಾಗೂ ಆರ್ಥಿಕವಾಗಿ ಹಿಂಸೆಗೊಳಗಾಗಿರುವುದನ್ನು ಹೇಳಿಕೊಂಡಿದ್ದಾರೆ. ಪಾರ್ವತಿಯವರ ಗಂಡ ಮತ್ತು ಅತ್ತೆ ತುಂಬ ಧನದಾಹಿಗಳಿದ್ದು, ಆಸ್ತಿಗಳಿಕೆಗಾಗಿ ಊಟವನ್ನೂ ಸಹ ಅವರು ಸರಿಯಾಗಿ ಮಾಡದಿರುವುದು ಹಾಗೂ ಪಾರ್ವತಿ ಮತ್ತು ಆಕೆಯ ಮಗನಿಗೆ ಸರಿಯಾಗಿ ಏನನ್ನೂ ತಂದು ಹಾಕದಿರುವುದು ವ್ಯಕ್ತವಾಗುತ್ತದೆ. ಇದನ್ನು ಪ್ರಶ್ನಿಸಿದರೆ ಪಾರ್ವತಿಯುವರಿಗೆ ಶಾಬ್ಧಿಕವಾಗಿ ಹಿಂಸೆಗೊಳಪಡಿಸುತ್ತಾರೆ. ಜೊತೆಗೆ ಪಾರ್ವತಿಯವರ ತವರುಮನೆಯವರಿಂದ ಅವರ ಗಂಡ ಹಣವನ್ನು ಪಡೆದಿದ್ದು ಅದನ್ನು ಹಿಂದಿರುಗಿಸದೇ, ಪಾರ್ವತಿಯವರಿಗೆ ಸದಾ ಶಾಬ್ಧಿಕವಾಗಿ ನಿಂದಿಸುವ ಮೂಲಕ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುವುದು ಕಂಡುಬರುತ್ತದೆ.

ಶಾಬ್ಧಿಕವಾಗಿ ನಿಂದಿಸುವ ಮೂಲಕ ಹೆಣ್ಣನ್ನು ಬಲಹೀನಳಂತೆ ಮಾಡಿ, ಆಕೆಯನ್ನು ಕುಗ್ಗಿಸುವ ಮತ್ತು ಹಿಡಿತದಲ್ಲಿಟ್ಟುಕೊಳ್ಳುವ ಕೃತ್ಯವನ್ನು ಬಹುತೇಕ ಕುಟುಂಬಗಳಲ್ಲಿ ಅಸ್ತ್ರವಾಗಿ ಬಳಸಿಕೊಳ್ಳುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಮಹಿಳೆಯರು ಏನನ್ನು ಮಾಡಲಾಗದೇ, ಅದೆಷ್ಟೋ ಮಹಿಳೆಯರು ಇಂತಹ ಶಾಬ್ಧಿಕ ಹಿಂಸೆಯನ್ನು ಮೌನವಾಗಿ ಅನುಭವಿಸುತ್ತಿರುವುದು ಕಾಣಬಹುದಾಗಿದೆ. ಇಂತಹ ಕೃತ್ಯಕ್ಕೆ ಮತ್ತೊಂದು ಉದಾಹರಣೆ ಎಂದರೆ, ಪ್ರಕರಣ-೯ರಲ್ಲಿ ಲಕ್ಷ್ಮಮ್ಮ ಎಂಬುವವರೂ ಸಹ ಗಂಡನಿಂದ ದಿನನಿತ್ಯ ಶಾಬ್ಧಿಕ ಹಿಂಸೆಗೆ ಒಳಗಾಗುತ್ತಿರುವುದು ಕಂಡುಬರುತ್ತದೆ. ಕುಡಿತದ ಚಟಕ್ಕೆ ಬಲಿಯಾದ ಲಕ್ಷ್ಮಮ್ಮರ ಗಂಡ ದಿನನಿತ್ಯ ಹಣಕ್ಕಾಗಿ ಲಕ್ಷ್ಮಮ್ಮನವರನ್ನು ಶಾಬ್ಧಿಕವಾಗಿ ಅಪಮಾನಗೊಳಿಸುತ್ತಾರೆ. ಆ ಮೂಲಕ ತಮ್ಮ ಕಾರ್ಯ ಸಾಧನೆ ಮಾಡಿಕೊಳ್ಳುತ್ತಾರೆ. ದುಡಿಯಲು ಅಸಾಯಕರಾಗಿರುವ ಲಕ್ಷ್ಮಮ್ಮರ ಗಂಡ ತಮ್ಮ ಪೌರುಷವನ್ನು ಬೈಗುಳಗಳ ಮೂಲಕ ತೋರ್ಪಡಿಸುವುದು ಕಾಣಬರುತ್ತದೆ. ಹೆಣ್ಣನ್ನು ಅಂಕಿತದಲ್ಲಿ ಇಟ್ಟುಕೊಳ್ಳಲೆಂದೇ ಹಲವಾರು ಅವಾಚ್ಯ ಪದಗಳನ್ನು ಸಮಾಜ ಹುಟ್ಟುಹಾಕಿದ್ದು, ಅವುಗಳನ್ನು ಕೇಳಿದರೆ ಸಾಕು ಮಾನಸಿಕವಾಗಿ ಕುಗ್ಗಿ ಹೋಗುವ ಸ್ವರೂಪದ ಬೈಗುಳಗಳು ಅವುಗಳಾಗಿರುತ್ತವೆ. ಇಂತಹ ಪದಗಳನ್ನು ಸಹಿಸಲಾಗದೇ ಲಕ್ಷ್ಮಮ್ಮನವರು ತಮ್ಮ ತಪ್ಪಿಲ್ಲದಿದ್ದರೂ ಗಂಡನನ್ನು ಸಹಿಸಿಕೊಳ್ಳಬೇಕಾಗಿದೆ. ಅಧಿಕಾರದ ಹಿನ್ನಲೆಯಲ್ಲಿ ಗಂಡನಿಗೆ ಸಮಾಜವು ವಿಶೇಷ ಸ್ಥಾನ ನೀಡಿದ್ದರಿಂದಾಗಿ ಲಕ್ಷ್ಮಮ್ಮನವರು ಅವರ ಗಂಡನ ವರ್ತನೆಯನ್ನು ಸಹಿಸಿಕೊಳ್ಳುವಂತೆ ಮಾಡಿದೆ. ಇನ್ನು ಪ್ರಕರಣ-೧೦ರಲ್ಲಿ ಭೂಮಿಕಾ ಎಂಬ ೧೫ ವರ್ಷದ ಹುಡುಗಿ ತನ್ನ ತಂದೆಯಿಂದಲೇ ಶಾಬ್ಧಿಕ ಹಿಂಸೆಗೆ ಒಳಗಾಗುತ್ತಿರುವುದಾಗಿ ತಿಳಿಸುತ್ತಾಳೆ. ಭೂಮಿಕಾಳ ಈ ಪ್ರಕರಣವನ್ನು ಗಮನಿಸಿದಾಗ ಅವರ ತಂದೆಯ ಕೃತ್ಯದಿಂದ ಮನೆಯಲ್ಲಿಯ ಎಲ್ಲಾ ಮಕ್ಕಳು ಹಿಂಸೆಗೊಳಗಾಗಿರುವುದು ಗೋಚರವಾಗುತ್ತದೆ. ಭೂಮಿಕಾಳ ತಂದೆ ಬೈದು ನಿಂದಿಸುವುದನ್ನು ತಾಳಲಾರದೇ ಅವರ ತಾಯಿ ಮಕ್ಕಳೊಂದಿಗೆ ಒಮ್ಮೊಮ್ಮೆ ಸಾಯುವ ನಿರ್ಧಾರ ತೆಗೆದುಕೊಳ್ಳುವುದು ಅವರ ಹದಗೆಟ್ಟ ಮನಸ್ಥಿತಿಯನ್ನು ತೋರ್ಪಡಿಸುತ್ತದೆ. ಭೂಮಿಕಾಳ ತಂದೆಯ ಈ ಬಗೆಯ ಹಿಂಸೆಗೆ ಮೂಲ ಕಾರಣ ಅವರ ತಾಯಿ ಗಂಡು ಮಗು ಹೆರಲಿಲ್ಲ ಎಂಬುವುದಾಗಿದೆ. ಭೂಮಿಕಾಳು ಅವರ ತಂದೆಯ ಎಲ್ಲಾ ದುಷ್ಕೃತ್ಯಗಳನ್ನ ನೇರವಾಗಿ ಎದುರಿಸುವ ಧೈರ್ಯವನ್ನು ಹೊಂದಿದ್ದಾಳೆ. ಇಂತಹ ಮಾದರಿಗಳು ಸಮಾಜದಲ್ಲಿ ಅಲ್ಲೊಂದು ಇಲ್ಲೊಂದು ಮಾತ್ರ ಗೋಚರವಾಗುತ್ತವೆ. ಭೂಮಿಕಾ ಪಾತ್ರ ಮಾದರಿಯು ಅನ್ಯಾಯವನ್ನು ಪ್ರತಿಭಟಿಸುವ ನಿಟ್ಟಿನಲ್ಲಿ ಸಾಗಿದ್ದರೆ, ಅದೇ ಅವರ ಅಕ್ಕಂದಿರ ಸಿದ್ಧಮಾದರಿಗಳು ತಂದೆಗೆ ಎದುರು ಮಾತನಾಡದೇ ತಂದೆಯ ಬೈಗುಳಗಳನ್ನು ಸ್ವೀಕರಿಸುತ್ತಿದ್ದಾರೆ. ಇದು ಹೆಣ್ಣು ಮಕ್ಕಳು ಕುಟುಂಬದಲ್ಲಾಗುವ ಶಾಬ್ಧಿಕ ಹಿಂಸೆಯನ್ನು ಹೇಗೆ ಮೌನವಾಗಿ ಅನುಭವಿಸುತ್ತಿದ್ದಾರೆ ಎಂಬುವುದಕ್ಕೆ ಸಾಕ್ಷಿಯಾಗಿದೆ. ಅವರ ತಾಯಿಯ ಸ್ಥಿತಿ ಕೂಡಾ ಹೀಗೆ ಇರುವುದು ಕಂಡುಬರುತ್ತಿದೆ.

ಭೂಮಿಕಾಳಂತೆ ಇತರೆ ಹೆಣ್ಣು ಮಕ್ಕಳು ತಮ್ಮ ಮೇಲಾಗುವ ಅನ್ಯಾಯವನ್ನು ಪ್ರತಿಭಟಿಸಿದ್ದೇ ಆದಲ್ಲಿ ಸಮಾಜ ಅಂತವರನ್ನು ಗಂಡುಬೀರಿ, ಎದುರು ಮಾತನಾಡುವವಳು, ಸಂಸ್ಕೃತಿ ಇಲ್ಲದವಳು ಎಂಬ ಹಣೆ ಪಟ್ಟಿಯನ್ನು ನೀಡುತ್ತದೆ. ಇಂತಹ ನಿಂದನೆಗಳಿಗೆ ಹೆದರಿ ಅದೆಷ್ಟೋ ಮಹಿಳೆಯರು ತಮ್ಮ ಮೇಲಾಗುತ್ತಿರುವ ಹಿಂಸೆಯನ್ನು ಮೌನವಾಗಿ ಅನುಭವಿಸುತ್ತಿದ್ದಾರೆ. ಇಷ್ಟಿದ್ದರೂ ಸಹ ಭೂಮಿಕಾಳಂತೆ

ಅನ್ಯಾಯವನ್ನು ಎದುರಿಸಿ ನಿಲ್ಲುವ ಮಾದರಿಗಳು ಅಪರೂಪವಾಗಿ ಹುಟ್ಟುತ್ತಲಿವೆ. ಹಾಗೂ ಸಮಾಜ ಅಂತಹ ವ್ಯಕ್ತಿತ್ವದವರನ್ನು ವ್ಯವಸ್ಥಿತವಾಗಿ ತುಳಿಯುತ್ತಲಿರುವುದನ್ನೂ ಸಹ ಕಾಣಬಹುದಾಗಿದೆ. ಇದೇ ರೀತಿಯ ಶಾಬ್ದಿಕ ಹಿಂಸೆಗೆ ಒಳಗಾಗಿರುವ ಮತ್ತೊಂದು ಪ್ರಕರಣ ಇಲ್ಲಿದೆ. **ಪ್ರಕರಣ-೧೧**ರಲ್ಲಿ ಸರ್ವೇಶ್ವರಿಯವರು ತಮ್ಮ ಸಂಗಾತಿಯಿಂದ ಮುಖ್ಯವಾಗಿ ಶಾಬ್ದಿಕ ಹಿಂಸೆಗೊಳಗಾಗುತ್ತಿರುವುದು ಕಂಡುಬರುತ್ತದೆ. ಅಷ್ಟೇ ಅಲ್ಲದೆ ದೈಹಿಕ ಮತ್ತು ಭಾವನಾತ್ಮಕ ಹಿಂಸೆಗೂ ಸಹ ಒಳಗಾಗಿರುವುದನ್ನು ಕಾಣಬಹುದಾಗಿದೆ. ತಮ್ಮ ಇಚ್ಛೆಯಂತೆ ಸಂಗಾತಿಯನ್ನು ಆಯ್ದುಕೊಂಡು ಬಾಳಲಿಚ್ಛಿಸಿದ ಸರ್ವೇಶ್ವರಿಯವರ ಬದುಕು ಈಗ ನಿಜಕ್ಕೂ ನರಕ ಯಾತನೆಯಾಗಿದೆ. ತಮ್ಮ ಇಚ್ಛೆಯಂತೆ ಬಾಳ ಸಂಗಾತಿಯನ್ನು ಆಯ್ದುಕೊಂಡಿದ್ದರೂ ಸಹ ಅಲ್ಲಿ ಪುರುಷ ಪ್ರಧಾನ ವ್ಯವಸ್ಥೆಯ ನಡುವಳಿಕೆಗಳೇ ಕಾರ್ಯನಿರ್ವಹಿಸುತ್ತಿರುವುದು ಫಕೀರಸಾಬರ ಕೃತ್ಯದಿಂದ ಸಾಬೀತಾಗುತ್ತದೆ. ಸರ್ವೇಶ್ವರಿಯವರು ಬೆಂಗಳೂರಿನಲ್ಲಿದ್ದಾಗ ಅವರ ಗಂಡ ತಮ್ಮ ಊರಿಗೆ ಹೋಗಿ ಬರುತ್ತಿದ್ದು, ಅಂತಹ ಸಂದರ್ಭದಲ್ಲಿ ಸರ್ವೇಶ್ವರಿ ಬೇರೆ ಸಂಬಂಧ ಹೊಂದಬಹುದೆಂಬ ಅನುಮಾನದಿಂದ ಅವರನ್ನು ಶಾಬ್ದಿಕವಾಗಿ ನಿಂದಿಸಿರುವುದು ಕಂಡುಬರುತ್ತದೆ. ಈ ಬಗೆಯ ಹಿಂಸೆಯ ಮೂಲಕ ಹೆಂಡತಿಯನ್ನು ಘಾಸಿಗೊಳಿಸಿ ಅವರನ್ನು ಮಾನಸಿಕವಾಗಿ ಕುಗ್ಗುವಂತೆ ಮಾಡಿ ಆ ಮೂಲಕ ಹೆಂಡತಿಯನ್ನು ಅಂಕಿತದಲ್ಲಿಟ್ಟುಕೊಳ್ಳುವ ಪ್ರಯತ್ನ ಫಕೀರಸಾಬರದ್ದಾಗಿದೆ. ಇಷ್ಟಲ್ಲದೇ ಹೊಡೆಯುವ ಮೂಲಕ ಸರ್ವೇಶ್ವರಿಯವರನ್ನು ದೈಹಿಕ ಹಿಂಸೆಗೊಳಪಡಿಸಿರುವುದು ಕಂಡುಬರುತ್ತದೆ. ಇದರಿಂದಾಗಿ ಸರ್ವೇಶ್ವರಿಯವರು ಮನನೊಂದು ಗಂಡನೊಂದಿಗೆ ಬಾಳಲಾಗದೆ, ಬಿಡಲಾಗದೆ ತಾವು ಇರುವ ಸ್ಥಳದಿಂದ ಫಲಾಯನ ಮಾಡಿರುವುದು ಕಂಡುಬರುತ್ತದೆ. ಇವರ ಸಂಬಂಧ ಈಗಾಗಲೇ ನ್ಯಾಯಾಲಯದಿಂದ ಹೊರಬಿದ್ದ ತೀರ್ಪಿನನ್ವಯ ಸಹಚರ ಜೀವನ ಸಾಂಗತ್ಯದ ವ್ಯಾಪ್ತಿಯೊಳಗೆ ಬರುತ್ತಿದ್ದು, ನ್ಯಾಯಕ್ಕಾಗಿ ನ್ಯಾಯಾಲಯದ ಮೊರೆ ಹೋಗಬಹುದಾಗಿದೆ. ಆದರೆ ಇದರ ಬಗ್ಗೆ ಅರಿವಿರದ ಅವರು ಊರಿಂದೂರಿಗೆ ಸಂಗಾತಿಯ ಕಣ್ತಪ್ಪಿಸಿ ತಿರುಗಾಡುತ್ತಿರುವುದು ಕಂಡುಬರುತ್ತದೆ.

ಭಾವನಾತ್ಮಕ ಹಿಂಸೆ – ಹೆಣ್ಣಿಗೆ ಅವರದೇ ಆದ ಭಾವನಾತ್ಮಕ ವಲಯವೊಂದನ್ನು ಸಮಾಜವು ನಿರ್ಮಾಣ ಮಾಡಿಕೊಟ್ಟಿದ್ದು, ಕುಟುಂಬದಲ್ಲಿ ಹೆಣ್ಣನ್ನು ಹಿಡಿತಕ್ಕೆ ತಂದುಕೊಳ್ಳಲು ಆ ಭಾವನೆಗಳಿಗೆ ಆಗಾಗ ಧಕ್ಕೆಯನ್ನುಂಟು ಮಾಡುತ್ತಿರುತ್ತದೆ. ಇದರಿಂದಾಗಿ ಮಹಿಳೆಯರು ಕುಗ್ಗಿ ಪುರುಷ ಪ್ರಧಾನ ವ್ಯವಸ್ಥೆಯ ಹಿಂಬಾಲಕರಾಗಿದ್ದಾರೆ. ವಿಶೇಷವೆಂದರೆ ಮಹಿಳೆಯರು ತಮ್ಮ ಸ್ಥಾನಮಾನಗಳನ್ನು ಅರಿತು, ಅದರಂತೆ ಬದುಕಲು ಇಚ್ಛಿಸಿದಾಗ ಅವರ ಸ್ವಾತಂತ್ರ್ಯಕ್ಕೆ ಬೆಲೆ ಕೊಡದ ಸಮಾಜ ಅಥವಾ ಕುಟುಂಬದಿಂದ ಸಾಕಷ್ಟು ಬಗೆಯ ಭಾವನಾತ್ಮಕ ಹಿಂಸೆಗಳಿಗೆ ಒಳಗಾಗಬೇಕಾದ ಪ್ರಸಂಗಗಳು ಉಂಟಾಗುತ್ತವೆ. ಅಂತಹ ಕೆಲವೊಂದು ಪ್ರಕರಣಗಳು ಇಲ್ಲಿವೆ.

ಪ್ರಕರಣ-೧೨ರಲ್ಲಿ ಸುಮಲತಾರವರು ಗಂಡನಿಂದ, ಗಂಡನ ಮನೆಯವರಿಂದ, ಸಮಾಜದಿಂದ ತಮಗಾಗುತ್ತಿರುವ ಅವಮಾನ, ನೋವನ್ನು ವ್ಯಕ್ತಪಡಿಸುತ್ತಾರೆ. ಹೆಣ್ಣಾದ ಕಾರಣದಿಂದ ನಿರ್ಲಕ್ಷ ಕ್ಕೊಳಗುತ್ತಿದ್ದೇನೆ ಎಂದು ತಮಗಾಗುತ್ತಿರುವ ಭಾವನಾತ್ಮಕ ಹಿಂಸೆಯನ್ನು ವ್ಯಕ್ತಪಡಿಸುತ್ತಾರೆ. ಕಾನೂನು

ಪದವಿಧರಳಾಗಿರುವುದರಿಂದ ಸಮಸ್ಯೆಯ ಪರಿಹಾರಕ್ಕೆ ಕಾನೂನಿನ ಮೊರೆ ಹೋಗಬಹುದಾಗಿದೆ. ಆದರೆ ಅದರಿಂದಾಗಿ ಸಂಬಂಧಗಳಲ್ಲಿ ಬಿರುಕುಂಟಾಗುತ್ತವೆ ಎಂದು ಕಾನೂನಿನ ಸಹಾಯ ಪಡೆಯಲು ಹಿಂಜರಿದಿದ್ದಾರೆ. ಇದರಿಂದ ತಮಗಾಗುತ್ತಿರುವ ನೋವನ್ನು ಮಂದಗತಿಯಲ್ಲಿ ಪ್ರತಿಭಟಿಸುತ್ತಾ, ಅದರೊಟ್ಟಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಾ ಬದುಕು ಸಾಗಿಸುವುದಾಗಿ ಹೇಳುತ್ತಾರೆ. ಸುಮಲತಾರ ಗಂಡನ ಮನೆಯಲ್ಲಿ ಇವರ ಪ್ರೇಮವಿವಾಹ ಸಮ್ಮತಿ ಇಲ್ಲದಾಗಿದ್ದು ಅದನ್ನು ಸ್ವೀಕರಿಸಲು ತಯಾರಿರುವುದಿಲ್ಲ. ಆದರೆ ಮಗನನ್ನು ಮಾತ್ರ ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು, ಆ ಮೂಲಕ ಸುಮಲತಾರನ್ನು ಗಂಡನ ಮನೆಯವರು ಭಾವನಾತ್ಮಕವಾಗಿ ಕುಗ್ಗಿಸುವಂತಹ ಕಾರ್ಯ ಮಾಡುತ್ತಿದ್ದಾರೆ. ಜೊತೆಗೆ ಗಂಡನು ಕೂಡಾ ಸುಮಲತಾರ ಪ್ರತಿಯೊಂದು ಮಾತಿಗೂ ವಿರುದ್ಧವಾಗಿದ್ದು, ಮದುವೆಗೂ ಮುಂಚೆ ಕೊಟ್ಟ ಮಾತಿನಂತೆ ನಡೆದುಕೊಳ್ಳದೇ ಸುಮಲತಾರನ್ನು ಹೀಯಾಳಿಸಿ ಮಾತನಾಡುವುದು ಅವರ ಭಾವನೆಗಳಿಗೆ ಧಕ್ಕೆಯನ್ನುಂಟು ಮಾಡಿದೆ. ಕಾನೂನು ಬಲ್ಲ ಸುಮಲತಾರವರ ಸ್ಥಿತಿಯೇ ಹೀಗಿರುವಾಗ ಇನ್ನು ಕಾನೂನಿನ ಅರಿವೇ ಇಲ್ಲದ ಅತೀ ದೊಡ್ಡ ಮಹಿಳಾ ವರ್ಗದ ಗತಿ ಇನ್ನೆಷ್ಟು ಕರಾಳತೆಯಿಂದ ನರಳುತ್ತಿದೆ ಎಂಬುದನ್ನು ಊಹಿಸಲು ಅಸಾಧ್ಯವಾಗಿದೆ.

ಇನ್ನು ಪ್ರಕರಣ-೧೩ರಲ್ಲಿ ಸುಮಲತಾರವರ ಪ್ರಕರಣಕ್ಕಿಂತಲೂ ಭಿನ್ನವಾಗಿ, ಸಾಮಾಜಿಕ ನಡಾವಳಿಯ ಭಾಗವಾಗಿ ಶಾರದಾ ಎಂಬ ಯುವತಿ ಭಾವನಾತ್ಮಕವಾಗಿ ಹಿಂಸೆಗೊಳಗಾಗಿರುವುದು ಕಂಡುಬರುತ್ತದೆ. ಬಾಲ್ಯವಿವಾಹದ ಆಚರಣೆಯು ಈ ಯುವತಿಯ ಬಾಳನ್ನೇ ತಲ್ಲಣಗೊಳಿಸಿದೆ. ಮನೆಯಲ್ಲಿ ಯಾರಾದರೂ ಸತ್ತ ನಂತರ ಒಂದು ವರ್ಷದೊಳಗೆ ಶುಭಕಾರ್ಯ ಮಾಡಬೇಕೆಂಬ ಸಂಪ್ರದಾಯ ಮತ್ತು ಹಿರಿಯರ ಆಸೆಯ ಹಿನ್ನೆಲೆಯಲ್ಲಿ ಬಲಿಪಶುವಾದ ಯುವತಿ ಶಾರದಾ ಆಗಿದ್ದಾಳೆ.

ಕಾನೂನಿನ ದೃಷ್ಟಿಯಲ್ಲಿ ಇದೊಂದು ಅನೂರ್ಜಿತ ಮದುವೆಯಾದರೂ ಕೂಡಾ ಆ ಯುವತಿ ಇಚ್ಛಿಸಿದಲ್ಲಿ ವಯಸ್ಸಿಗೆ ಬಂದ (೧೮) ನಂತರ ಬಾಲ್ಯ ವಿವಾಹವಾದ ಪತಿಯೊಂದಿಗೆ ವೈವಾಹಿಕ ಸಂಬಂಧವನ್ನು ಸ್ಥಾಪಿಸಿಕೊಳ್ಳಬಹುದಿತ್ತು. ಆದರೆ ಇಲ್ಲಿ ಶಾರದಾಳ ಪತಿ ಬೇರೆ ಯುವತಿಯೊಂದಿಗೆ ಕಾನೂನುಬದ್ಧವಾಗಿಯೇ ವಿವಾಹವಾಗಿದ್ದು, ಶಾರದಾಳೊಂದಿಗೆ ಆಗಿರುವುದು ಬಾಲ್ಯ ವಿವಾಹ ಅದನ್ನು ನಾನು ಸ್ವಿಕರಿಸುವುದಿಲ್ಲ ಎಂದು ಹೇಳಿದ್ದಾನೆ. ಇದರಿಂದಾಗಿ ಶಾರದಾಳು ಭಾವನಾತ್ಮಕ ಹಿಂಸೆಗೊಳಗಾಗಿದ್ದು, ಸಮಾಜ ಮಹಿಳೆಗೆ ನಿರಾಕರಿಸುವ ಎರಡನೇ ಮದುವೆಗೆ ಸಿದ್ಧಳನ್ನಾಗಿಸಿದೆ. ಆದರೆ ಶಾರದಾ ಇದಕ್ಕೆ ಸಿದ್ಧಳಿಲ್ಲ. ಬದಲಾಗಿ ತಾನು ಪತಿಯೊಂದಿಗೆ ಬಾಳುವೆ ಮಾಡುವುದಾಗಿ ಹೇಳುತ್ತಿದ್ದಾಳೆ. ಬಾಲ್ಯ ವಿವಾಹದಂತಹ ಅನಿಷ್ಟ ಪದ್ಧತಿಯಿಂದಾಗಿ ಶಾರದಾಳಂತೆ ಇನ್ನೂ ಅದೆಷ್ಟೋ ಹೆಣ್ಣು ಮಕ್ಕಳ ಬದುಕು ನಲುಗುವಂತಾಗಿದೆ. ನೊಂದ ಶಾರದಾಳಿಗೆ ಬಹುಷಃ ಕಾನೂನಿನ ನೆರವು ಕೂಡಾ ಸಿಗುವ ಸಾಧ್ಯತೆಗಳಿಲ್ಲ. ಇಂತಹ ಅತಂತ್ರ ಪರಿಸ್ಥಿತಿಯಿಂದ ಆಕೆಯ ಬಾಳು ನಿಜಕ್ಕೂ ನರಕ ಸದೃಶವಾಗಿದೆ. ಶಾರದ ಅಕ್ಷರಸ್ಥೆಯಾಗಿದ್ದು ಇಂತಹ ಮೌಢ್ಯತೆಗಳಿಂದ ಹೊರಬರಬಹುದಾದರೂ ಸದ್ಯಕ್ಕೆ ಆ ನೋವಿನಿಂದ ಹೊರಬರುವಂತೆ ಕಾಣುತ್ತಿಲ್ಲ. ಆಕೆಯ ಭಾವನೆಗಳ ಮೇಲೆ ನಡೆದಿರುವ ದೌರ್ಜನ್ಯ ನಿಜಕ್ಕೂ ಹೆಣ್ಣಿನ ಬಾಳನ್ನು ತಲ್ಲಣಗೊಳಿಸುವಂತದ್ದಾಗಿದೆ.

ಇನ್ನು ಪ್ರಕರಣ-೧೪ರಲ್ಲಿ ದೇವಕ್ಕವ್ವನವರು ಗಂಡನಿಂದ ಮೋಸಕ್ಕೊಳಗಾಗಿ ಎರಡನೇ ಹೆಂಡತಿಯಾಗಿ ಮದುವೆಯಾಗಿರುವುದು ಕಂಡುಬರುತ್ತದೆ. ಇದರಿಂದಾಗಿ ಅವರು ಬಹಳಷ್ಟು ನೊಂದಿದ್ದು ತಮ್ಮ ಸ್ಥಿತಿ ಅತಂತ್ರವಾಗಿದೆ ಎಂದು ಹೇಳಿಕೊಳ್ಳುತ್ತಾರೆ. ಅವರ ಗಂಡನಿಗೆ ಈ ಮೊದಲೇ ಮದುವೆಯಾಗಿದ್ದು ಮೋಸದಿಂದ ತಮ್ಮನ್ನು ಮದುವೆಯಾಗಿರುವುದಾಗಿ ತಿಳಿಸುತ್ತಾರೆ. ಇವರಿಗೆ ತಮ್ಮ ಗಂಡನ ಮೊದಲನೇ ಮದುವೆಯ ವಿಷಯ ಗೊತ್ತಾದಾಗಿನಿಂದ ಎಲ್ಲಿ ನನ್ನನ್ನು ತೊರೆದು ಮೊದಲನೇ ಹೆಂಡತಿ ಬಳಿ ಹೋಗುತ್ತಾರೋ ಎಂಬ ಭಯ ಇವರನ್ನು ಆವರಿಸಿದೆ. ತಪ್ಪು ಮಾಡಿದವನು ಗಂಡ, ಆದರೂ ಸಮಾಜದಲ್ಲಿ ಆತನಿಗೆ ಮಾನ್ಯತೆ ಇದೆ. ಕಾರಣ ಬಹುಪತ್ನಿತ್ವವನ್ನು ಸಮಾಜ ಒಪ್ಪಿದ್ದರಿಂದಾಗಿದೆ. ಆದರೆ ಇಲ್ಲಿ ಅತಂತ್ರರಾಗಿ ಬದುಕುತ್ತಿರುವವರು ಮಾತ್ರ ಇಬ್ಬರು ಮಹಿಳೆಯರಾಗಿದ್ದಾರೆ. ದೇವಕ್ಕವ್ವನವರು ಇದರಿಂದಾಗಿ ಭಾವನಾತ್ಮಕ ಹಿಂಸೆಗೊಳಗಾಗಿದ್ದು ಮಾತ್ರವಲ್ಲದೇಪತಿಯಿಂದ ಆಗಾಗ್ಗೆ ದೈಹಿಕ ಹಿಂಸೆಗೂ ಸಹ ಒಳಗಾಗುತ್ತಿದ್ದಾರೆ.

ದೇವಕ್ಕವ್ವನವರ ಗಂಡ ಮೊದಲೇ ಮದುವೆಯಾಗಿ ಎರಡು ಮಕ್ಕಳನ್ನು ಹೊಂದಿಯೂ ಮತ್ತೊಂದು ಮದುವೆಯಾದ ಸಂಗತಿ ಪುರುಷ ಪ್ರಧಾನ ಸಮಾಜದಲ್ಲಿ ಮಾನ್ಯವಾಗುತ್ತದೆ. ಜೊತೆಗೆ ಗಂಡನಿಂದ ಮೋಸಕ್ಕೊಳಗಾಗಿದ್ದನ್ನು ಅರಿತಾಗಲೂ ಆತನಿಂದ ಬಿಡುಗಡೆ ಹೊಂದಿ ಸ್ವತಂತ್ರವಾಗಿ ಬಾಳಲಿಚ್ಛಿಸದೇ ಮೋಸಮಾಡಿದ ಗಂಡನೊಂದಿಗೆ ಬದುಕು ಸಾಗಿಸುವ ಬಯಕೆಯನ್ನು ವ್ಯಕ್ತಪಡಿಸುತ್ತಾರೆ. ದೇವಕ್ಕವ್ವನವರು ಹೆಣ್ಣಾಗಿ ತೆಗೆದುಕೊಳ್ಳುವ ಈ ನಿರ್ಧಾರ ಪುರುಷ ಪ್ರಧಾನ ವ್ಯವಸ್ಥೆಯ ನಿರ್ಮಿತ ಸಂಗತಿಯಾಗಿದ್ದು, ಸ್ತ್ರೀಗೆ ಒಂದು ಮದುವೆಯೇ ಅಂತ್ಯ ಎಂಬ ಕಟ್ಟಳೆಯನ್ನು ಸಾದರಪಡಿಸುತ್ತದೆ. ದೇವಕ್ಕವನವರ ಈ ನಿಲುವು ಸಮಾಜ ಪ್ರೇರೇಪಿತವಾದದ್ದಾಗಿದೆ ಎಂಬುವುದರಲ್ಲಿ ಎರಡು ಮಾತಿಲ್ಲ. ಹೀಗಿರುವ ಸಂದರ್ಭವೇ ದೇವಕ್ಕವ್ವನವರು ಗಂಡನನ್ನು ಒಪ್ಪಿಕೊಳ್ಳುವ ಹಾಗೂ ಗಂಡನಿಗಾಗಿ ಪರಿತಪಿಸುವ ಅನಿವಾರ್ಯತೆಯನ್ನು ನಿರ್ಮಾಣ ಮಾಡಿದೆ. ಜೊತೆಗೆ ದೇವಕ್ಕವ್ವನವರ ಗಂಡ ಮಾಡಿರುವುದು ಕಾನೂನು ರೀತಿಯಲ್ಲಿ ಅಪರಾಧವಾಗಿದ್ದರೂ ಸಹ ಸಮಾಜ ಅದನ್ನು ಮಾನ್ಯ ಮಾಡಿದ್ದು, ಅದರಿಂದುಂಟಾಗುವ ಎಲ್ಲಾ ಬಗೆಯ ಹಿಂಸೆಗಳನ್ನು ಹೆಣ್ಣು ಮಕ್ಕಳಿಗೆ ಉಚಿತ ಎಂಬಂತೆ ನೀಡಿರುವುದು ಕಂಡುಬರುತ್ತದೆ.

ಇನ್ನು ಪ್ರಕರಣ-೧೫ರಲ್ಲಿ ತ್ರಿವೇಣಿಯವರು ಗಂಡನಿಂದ ಭಾವನಾತ್ಮಕ ಹಿಂಸೆಗೊಳಗಾಗುವುದರ ಜೊತೆ ಜೊತೆಯಲ್ಲಿ ದೈಹಿಕ ಹಿಂಸೆಗೊಳಗಾಗಿರುವುದೂ ಸಹ ಕಂಡುಬರುತ್ತದೆ. ತ್ರಿವೇಣಿಯವರು, ದೈಹಿಕ ಹಿಂಸೆಯನ್ನು ಬೇಕಾದರೆ ಸಹಿಸಬಲ್ಲೆ, ಆದರೆ ಭಾವನಾತ್ಮಕವಾಗಿ ಅಪಮಾನ ಗೊಳಿಸುವಂತಹ ಗಂಡನ ನಡುವಳಿಕೆಗಳನ್ನು ನನ್ನಿಂದ ಸಹಿಸಲು ಸಾಧ್ಯವಾಗುತ್ತಿಲ್ಲ ಎಂದು ಹೇಳುತ್ತಾರೆ. ಈ ಕಾರಣಕ್ಕಾಗಿಯೇ ಅವರು ಗಂಡನ ಮನೆ ತೊರೆದಿರುವುದಾಗಿ ಹೇಳುತ್ತಾರೆ. ಗಂಡನ ಮನೆ ತೊರೆದರೂ ಗಂಡ ನಡೆಸುತ್ತಿರುವ ದೌರ್ಜನ್ಯದಿಂದ ಹೊರಬರಲಾಗಿಲ್ಲ ಎಂದು ಹೇಳುತ್ತಾರೆ. ಅತಿಯಾಗಿ ಶೀಲದ ಬಗ್ಗೆ ಅನುಮಾನ ಪಡುವ ರೀತಿ ತ್ರಿವೇಣಿಯವರನ್ನು ಜರ್ಝರಿತರನ್ನಾಗಿಸಿದೆ. ಹೆಣ್ಣಿನ ಲೈಂಗಿಕತೆಯ ಮೇಲೆ ಹಿಡಿತ ಸಾಧಿಸಲು ಬಾಲ್ಯವಿವಾಹ, ವೈದವ್ಯ ಪರಿಪಾಲನೆ ಹಾಗೂ ಇನ್ನು ಅದೆಷ್ಟೋ ಮಾರ್ಗಗಳನ್ನು ಕಂಡುಕೊಂಡ ವ್ಯವಸ್ಥೆ, ವ್ಯರ್ಥವಾಗಿ ಶೀಲದ ಬಗ್ಗೆ ಸಂಶಯಿಸುವ ಮಾರ್ಗವನ್ನು ಸಹ ಕಂಡುಕೊಂಡಿದೆ.

ಮಹಿಳೆಯರಿಗೆ ಮಡಿವಂತಿಕೆ ಪ್ರಶ್ನೆಯನ್ನು ಹುಟ್ಟುಹಾಕಿ ಅದರ ಬಗ್ಗೆ ಯಾರಾದರು ಮಾತನಾಡಿದಾಗ ಅವರಿಗೆ ಸಹಿಸಲಾರದಷ್ಟು ನೋವನ್ನುಂಟು ಮಾಡುವಂತಹ ಸಂದರ್ಭವನ್ನು ಪುರುಷ ಪ್ರಧಾನ ವ್ಯವಸ್ಥೆ ನಿರ್ಮಾಣ ಮಾಡಿದೆ. ಹೆಣ್ಣಿಗೆ ಇರುವ ಈ ಬಗೆಯ ಶೀಲದ ಕಲ್ಪನೆ ಗಂಡಿನ ವಿಷಯಕ್ಕೆ ಬಂದಾಗ ಅನ್ವಯವಾಗುವುದಿಲ್ಲ. ಗಂಡಿನ ಲೈಂಗಿಕತೆಗೆ ಸಂಬಂಧಿಸಿದಂತೆ ಮಾತನಾಡಿದರೆ ಸಾಮಾಜಿಕವಾಗಿ ಅಲ್ಲಿ ಸಿಗುವ ಉತ್ತರವೇ ಬೇರೆಯಾಗಿರುತ್ತದೆ. ನಾನು ಗಂಡು, ಎಷ್ಟು ಹೆಣ್ಣಿನೊಂದಿಗೆ ಬೇಕಾದರೂ ಇರಬಹುದು ಎಂದು ಗಂಡಸು ಅಧಿಕಾರದ ನೆಲೆಯಲ್ಲಿ ಮಾತನಾಡುವುದು ಕಾಣಬರುತ್ತದೆ. ಮಡಿವಂತಿಕೆ ಪ್ರಶ್ನೆ ಏನೇ ಇದ್ದರೂ ಅದು ಕೇವಲ ಮಹಿಳೆಯರಿಗೆ ಮಾತ್ರ ಸೀಮಿತವಾಗಿರುತ್ತದೆ. ಈ ಹಿನ್ನೆಲೆಯಲ್ಲಿಯೇ ಮಹಿಳೆಯರನ್ನು ಅನುಮಾನದಿಂದ ಕಾಣುವಂತಹ, ಶೀಲದ ಬಗ್ಗೆ ಕ್ಷುಲ್ಲಕವಾಗಿ ಮಾತನಾಡುವಂತಹ ಹೀನ ನಡುವಳಿಕೆಗಳು ಕಂಡುಬರುತ್ತಿದ್ದು, ಅದಕ್ಕೆ ತ್ರಿವೇಣಿಯವರ ಬದುಕು ಒಂದು ಉದಾಹರಣೆಯಾಗಿದೆ.

ಆರ್ಥಿಕ ಹಿಂಸೆ– ಸದ್ಯದ ಸಂದರ್ಭದಲ್ಲಿ ಮಾನವರ ಬದುಕು ಆರ್ಥಿಕತೆಗೆ ತಳುಕು ಹಾಕಿಕೊಂಡಿದ್ದು, ಈ ಪ್ರಪಂಚದಿಂದ ಮಹಿಳೆಯರನ್ನು ದೂರವಿಡುವ ಹುನ್ನಾರದ ಭಾಗವಾಗಿ ಅವರಿಗೆ ಆರ್ಥಿಕ ಸಂಕಷ್ಟಗಳನ್ನು ತಂದೊಡ್ಡುತ್ತಿದ್ದಾರೆ. ಹೆಣ್ಣು ಮಕ್ಕಳಿಗೆ ಆಸ್ತಿಯ ನಿರಾಕರಣೆ, ಒಂದು ವೇಳೆ ಮಹಿಳೆಯರು ದುಡಿದು ತಂದರೂ ಗಂಡಸರು ಹೇಗಾದರು ಮಾಡಿ ಅದರ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸುವುದು, ಈ ಉದ್ದೇಶದಿಂದ ಮಹಿಳೆಯರಿಗೆ ಹೆಚ್ಚಿನ ಶಿಕ್ಷಣ ಕೊಡದಿರುವುದು ಕಂಡುಬರುತ್ತದೆ. ಜೊತೆಗೆ ಮಹಿಳೆಯರನ್ನು ಆರ್ಥಿಕವಾಗಿ ಸಂಕಷ್ಟದಲ್ಲಿ ಸಿಲುಕಿಸುವ ಮೂಲಕ ಅವರನ್ನು ಅತಂತ್ರರನ್ನಾಗಿಸಿ, ಆ ಮೂಲಕ ಪುರುಷ ಪ್ರಧಾನ ವ್ಯವಸ್ಥೆ ತನ್ನ ಕಾರ್ಯ ಸಾಧನೆ ಮಾಡಿಕೊಳ್ಳುತ್ತಿದೆ. ಈ ಹುನ್ನಾರ ಮಹಿಳೆಯರನ್ನು ಆರ್ಥಿಕ ಹಿಂಸೆಗೆ ಒಳಗಾಗುವಂತೆ ಮಾಡಿದೆ. ಇದಕ್ಕೆ ಪುಷ್ಠಿ ಕೊಡುವ ಮಾದರಿಗಳಾಗಿ ಕೆಲವು ಪ್ರಕರಣಗಳು ಇಂತಿವೆ.

ಪ್ರಕರಣ– ೧೬ರಲ್ಲಿ ಪ್ರಜ್ಞಾವತಿಯವರು ಮೊದಲು ತಮ್ಮ ಗಂಡನ ಸಹೋದರರಿಂದ ಆರ್ಥಿಕ ಮತ್ತು ಭಾವನಾತ್ಮಕ ಹಿಂಸೆಗೆ ಒಳಗಾದರೆ, ನಂತರ ತಮ್ಮ ಮಗಳು ಮತ್ತು ಅಳಿಯನಿಂದಲೂ ಆರ್ಥಿಕ ಮತ್ತು ಭಾವನಾತ್ಮಕ ದೌರ್ಜನ್ಯಕ್ಕೆ ಒಳಗಾಗುವುದು ಕಂಡುಬರುತ್ತದೆ.

ಗಂಡನನ್ನು ಕಳೆದುಕೊಂಡು ಏಕಾಂಗಿಯಾದ ಪ್ರಜ್ಞಾವತಿಯವರ ಬಾಳಿಗೆ ಇರುವುದು ಕೂಡಾ ಒಂದು ಹೆಣ್ಣು ಮಗು. ಆದ್ದರಿಂದ ಅವರಿಗೇಕೆ ಆರ್ಥಿಕ ನಿರ್ವಹಣೆಯ ಸ್ವಾತಂತ್ರ್ಯ ಎಂಬ ನಿಲುವು ಪ್ರಜ್ಞಾವತಿಯವರ ಗಂಡನ ಸಹೋದರರದ್ದಾಗಿರುವುದು ಕಂಡುಬರುತ್ತದೆ. ಇದನ್ನು ಮೀರಿ ತಮಗೆ ಸೇರಿದ ಆಸ್ತಿ–ಪಾಸ್ತಿಗಳನ್ನು ತೆಗೆದುಕೊಂಡಾಗ ಅವರನ್ನು ಸಂಬಂಧಗಳಿಂದ ದೂರ ಇಡುತ್ತಾರೆ. ಹೀಗೆ ಪಡೆದುಕೊಂಡ ಆಸ್ತಿಯ ಮೇಲೆ ಅಳಿಯನ ಕಣ್ಣೂ ಸಹ ಬೀಳುತ್ತದೆ. ಅದನ್ನು ಪ್ರಜ್ಞಾವತಿಯವರು ಕೊಡಲು ನಿರಾಕರಿಸಿದಾಗ, ಅಳಿಯ ಅವರ ಮಗಳಿಗೂ ಪ್ರಚೋದಿಸಿ ಆಸ್ತಿ ಕೇಳುವಂತೆ ಮಾಡುತ್ತಾರೆ. ಆಸ್ತಿಯನ್ನು ನೀಡದಿರುವ ಪ್ರಜ್ಞಾವತಿಯವರ ಧೋರಣೆ ಅವರ ಮಗಳಿಂದ ಹಾಗೂ ಅಳಿಯನಿಂದ ಭಾವನಾತ್ಮಕ ಹಿಂಸೆಗೆ ಒಳಗಾಗುವಂತೆ ಮಾಡುತ್ತದೆ.

ಪ್ರಕರಣ-೧೭ರಲ್ಲಿ ಸಹಚರ ಜೀವನ ಸಾಂಗತ್ಯ ಬಯಸಿ ವಾಸಿಸುವವರಲ್ಲಿಯೂ ಮಹಿಳೆಯರ ಮೇಲೆ ದೌರ್ಜನ್ಯಗಳಾಗುತ್ತಿರುವುದಕ್ಕೆ ಸ್ಯಾವಮ್ಮನವರ ಪ್ರಕರಣ ಒಂದು ಉತ್ತಮ ಉದಾಹರಣೆಯಾಗಿದೆ. ಈ ಪ್ರಕರಣದಲ್ಲಿ ಸ್ಯಾವಮ್ಮನವರು ವ್ಯವಸ್ಥೆಯ ನಿಯಮಗಳನ್ನು ಕೊಂಚ ಧಿಕ್ಕರಿಸಿ ಬದುಕಿದ್ದಾರಾದರೂ, ವ್ಯವಸ್ಥೆಯ ಬೇರೊಂದು ಬಲೆಯಲ್ಲಿ ಅವರು ಸಿಲುಕಿ ದೌರ್ಜನ್ಯಕ್ಕೊಳಗಾಗಿರುವುದು ಕಂಡುಬರುತ್ತದೆ. ಆರ್ಥಿಕವಾಗಿ ಸ್ವಾವಲಂಬಿಯಾಗಿರುವ ಮಹಿಳೆಯರೇ ಈ ಬಗೆಯ ಕುಟುಂಬಗಳನ್ನು ಸ್ಥಾಪಿಸಿಕೊಳ್ಳುತ್ತಿದ್ದು, ಆರ್ಥಿಕ ಸಂಪತ್ತು ಸ್ಯಾವಮ್ಮನವರನ್ನು ಹಿಂಸೆಗೊಳಗಾಗುವಂತೆ ಮಾಡಿದೆ. ಸಂಗಾತಿಯೇ ಜೀವನ ಎಂದು ಬಾಳಿದರೂ ಸಹ, ಅಲ್ಲಿ ಸ್ಯಾವಮ್ಮನವರ ಸಂಗಾತಿ ಪುರುಷ ಪ್ರಧಾನ ವ್ಯವಸ್ಥೆಯ ಮಾರ್ಗದರ್ಶನದಂತೆ ತಮ್ಮ ವರ್ತನೆಯನ್ನು ತೋರಿರುವುದು ಕಂಡುಬರುತ್ತದೆ. ಅವರು ದೈಹಿಕವಾಗಿ, ಭಾವನಾತ್ಮಕವಾಗಿ ಸ್ಯಾವಮ್ಮನವರನ್ನು ಹಿಂಸಿಸಿರುವುದು ಕಂಡುಬರುತ್ತದೆ.

ಸ್ಯಾವಮ್ಮನವರು ಹೇಳುವಂತೆ, ಸ್ಯಾವಮ್ಮನವರ ಆರ್ಥಿಕ ವಹಿವಾಟನ್ನು ದಿವಾಳಿಗೊಳಿಸಿ, ನಂತರ ಬೇರೊಂದು ಮದುವೆಗೆ ಸನ್ನದ್ಧವಾಗಿರುವ ವಿಷಯವನ್ನು ಅವರ ಸಂಗಾತಿ ಪ್ರಸ್ತಾಪಿಸುತ್ತಾರೆ. ಅಂದರೆ ಸ್ಯಾವಮ್ಮನವರಲ್ಲಿನ ಹಣ್ಣಕ್ಕಾಗಿಯೇ ಅವರ ಸಂಗಾತಿ ಅವರೊಟ್ಟಿಗೆ ಸಂಬಂಧ ಹೊಂದಿರ ಬಹುದೆಂದು ತಿಳಿದುಬರುತ್ತದೆ. ಇದು ಮಹಿಳೆಯರು ಯಾವುದೇ ಬಗೆಯಲ್ಲಿ ಕುಟುಂಬಗಳನ್ನು ರಚನೆ ಮಾಡಿಕೊಂಡರೂ ಸಹ ಅಲ್ಲಿ ಪುರುಷರು ತಾವು ಹೊಂದಿದ ಅಧಿಕಾರದ ಹಿನ್ನೆಲೆಯಲ್ಲಿಯೇ ಕಾರ್ಯನಿರ್ವಹಿಸುವುದು ಕಂಡುಬರುತ್ತದೆ.

ಪ್ರಕರಣ-೧೮ರಲ್ಲಿ ಸಮಾಜದ ನೀತಿ ನಿಯಮಾವಳಿಗಳಿಂದ ಕೆಟ್ಟ ಪರಿಸ್ಥಿತಿಯಲ್ಲಿರುವ ಹೆಣ್ಣು ಮಕ್ಕಳನ್ನು ಪ್ರತಿನಿಧಿಸುವಂತಹ ದೇವದಾಸಿ ಮಹಿಳೆ ಗಾಳ್ಯವ್ವನವರ ಅಸಹಾಯಕ ಸ್ಥಿತಿ ಪ್ರಕಟಗೊಂಡಿದೆ. ತಿಳುವಳಿಕೆ ಬರುವ ಮುಂಚೆಯೇ ದೇವದಾಸಿಯನ್ನಾಗಿಸಿದ್ದನ್ನು ಇವರು ತಮ್ಮ ಮನಸ್ಸಿಗೆ ಒಪ್ಪಿತವಾಗಿಸಿಕೊಂಡಿದ್ದಾರೆ. ಆದರೆ ತನ್ನ ಮಕ್ಕಳನ್ನು ಶಾಲೆಯಲ್ಲಿ ಗುರುತಿಸುವ ಬಗೆಯಿಂದ ಬಹಳಷ್ಟು ನೊಂದಿದ್ದಾರೆ. ಸಮಾಜದಲ್ಲಿ ತನ್ನ ಮಕ್ಕಳನ್ನು ಗುರುತಿಸುವ ಬಗೆಯಿಂದ ಒಂದೊಮ್ಮೆ ನೊಂದು ಮಾತನಾಡುತ್ತಾರೆ, ಮತ್ತೊಮ್ಮೆ ಅದು ಸತ್ಯ ತಾನೇ? ಎಂದು ತಮ್ಮನ್ನು ತಾವೇ ಸಮಾಧಾನಪಡಿಸಿಕೊಳ್ಳುವುದು ಕಂಡುಬರುತ್ತದೆ. ಜೊತೆಗೆ ಇವರೊಟ್ಟಿಗೆ ಸಂಬಂಧ ಹೊಂದಿದ್ದ ಪುರುಷನೊಬ್ಬ ಆರ್ಥಿಕವಾಗಿ ಸಂಕಷ್ಟ ತಂದೊಡ್ಡಿರುವುದಾಗಿ ಹೇಳುತ್ತಾರೆ. ಅದು ಅವರ ಜೀವನದ ಆರ್ಥಿಕ ಬಿಕ್ಕಟ್ಟಿಗೆ ಕಾರಣವಾಗಿದೆ. ಹಾಗೂ ಸಂಬಂಧ ಇರಿಸಿಕೊಂಡವರು ಹಣ ಕೊಡಬೇಕಾಗುತ್ತದೆಂದು ಕಣ್ಮರೆಯಾಗಿದ್ದು, ಅದು ಗಾಳ್ಯವ್ವನವರ ಭಾವನೆಗಳಿಗೆ ತುಂಬಾ ನೋವನ್ನುಂಟು ಮಾಡಿದೆ. ಗಾಳ್ಯವ್ವನವರು ಯಾರೊಟ್ಟಿಗಾದರೂ ಸಂಬಂಧ ಇರಿಸಿಕೊಳ್ಳುತ್ತಾರೆಂದರೆ ಅವರನ್ನು ತಮ್ಮ ಗಂಡನೆಂದೇ ಭಾವಿಸಿರುತ್ತಾರೆ. ಹೀಗೆ ನಂಬಿ ಗಾಳ್ಯವ್ವನವರು ಸಂಬಂಧ ಇರಿಸಿಕೊಂಡಿದ್ದ ಪುರುಷ ಅವರನ್ನು ಆರ್ಥಿಕ ಸಂಕಷ್ಟಕ್ಕೆ ಸಿಲುಕಿಸಿರುವುದು ಗಾಳ್ಯವ್ವನವರನ್ನು ದಿನೇ ದಿನೇ ಕುಗ್ಗುವಂತೆ ಮಾಡಿದೆ. ಹಣಕ್ಕಾಗಿ ಇಂತಹ ಅಸಾಯಕ ಹೆಣ್ಣುಮಕ್ಕಳನ್ನು ಬೇರೆ ಬೇರೆ ರೀತಿಯಲ್ಲಿ ಬಳಸಿಕೊಳ್ಳುವ ಪ್ರಕರಣಗಳು ಸಮಾಜದಲ್ಲಿ ಸಾಕಷ್ಟು ಕಂಡುಬರುತ್ತಿದ್ದು, ಅಂತವುಗಳಲ್ಲಿ ಗಾಳ್ಯವ್ವನವರ ಪ್ರಕರಣವೂ ಕೂಡಾ ಒಂದಾಗಿದೆ.

ಈ ತೆರನಾಗಿ ಹೆಣ್ಣುಮಗಳೊಬ್ಬಳ ಆಸ್ತಿಯನ್ನು ದುರ್ಬಳಕೆ ಮಾಡಿಕೊಂಡು, ಆಕೆಯನ್ನು ಇಕ್ಕಟ್ಟಿನ ಪರಿಸ್ಥಿತಿಗೆ ತಂದಿರುವ ಪ್ರಕರಣ ಒಂದೆಡೆಯಾದರೆ, ಮತ್ತೊಂದು ಬಗೆಯಲ್ಲಿ ಆರ್ಥಿಕ ದೌರ್ಜನ್ಯಕ್ಕೊಳಗಾದ ಕಲಾವತಿಯವರ ಪ್ರಕರಣ ಇಂತಿದೆ.

ಪ್ರಕರಣ-೧೯ರಲ್ಲಿ ಕಲಾವತಿಯವರ ಪ್ರಕರಣವನ್ನು ಗಮನಿಸಿದಾಗ ವಿದ್ಯಾಭ್ಯಾಸಕ್ಕಾಗಿ ತಂದೆ-ತಾಯಿಯರಿಂದ ತಾರತಮ್ಯಕ್ಕೊಳಗಾಗಿರುವುದು ಕಂಡುಬರುತ್ತದೆ. ಇದು ಕಲಾವತಿಯವರ ಬದುಕಿನ ಮೊದಲ ದುರಂತವಾದರೆ, ಮದುವೆಯಾದ ಮೇಲೆ ಗಂಡನಿಂದ ಮತ್ತು ಆತನ ಮನೆಯವರಿಂದ ದೌರ್ಜನ್ಯಕ್ಕೊಳಗಾಗಿ ಕಾನೂನು ರೀತಿಯಲ್ಲಿ ವಿಚ್ಛೇದನ ಪಡೆದುಕೊಂಡಿರುವುದು ಅವರ ಬದುಕಿನ ಎರಡನೇ ದುರಂತವಾಗಿದೆ. ಹಾಗೂ ಮೂರನೇ ದುರಂತವೆಂದರೆ, ಆಸ್ತಿಗಾಗಿ ತಮ್ಮನಿಂದ ಹಾಗೂ ತಮ್ಮನ ಹೆಂಡತಿಯಿಂದ ಮನಸ್ತಾಪಗಳಿಗೆ ಒಳಗಾಗುತ್ತಿದ್ದುದು. ಇದರಿಂದ ಕಲಾವತಿಯವರು ಆರ್ಥಿಕ ಸಂಕಷ್ಟಕ್ಕೊಳಗಾಗುವ ಸಂದರ್ಭ ನಿರ್ಮಾಣಗೊಂಡಿದೆ. ಕಲಾವತಿಯವರ ಜೀವನದ ವೈಖರಿಯನ್ನು ಗಮನಿಸಿದಾಗ ಅವರ ಬದುಕಿನ ಪ್ರತಿ ತಿರುವಿನಲ್ಲೂ ಕುಟುಂಬದವರಿಂದಲೇ ದೌರ್ಜನ್ಯಕ್ಕೊಳಗಾಗಿರುವುದು ಕಂಡುಬರುತ್ತದೆ. ಇದರಿಂದಾಗಿ ಅವರ ಮಾನಸಿಕ ನೆಮ್ಮದಿ ಪ್ರತಿನಿತ್ಯ ಹಾಳಾಗುತ್ತಿದೆ. ಇದು ಕೇವಲ ಕಲಾವತಿಯವರ ಪ್ರಕರಣ ಮಾತ್ರವಲ್ಲ, ಇಂತಹ ಪರಿಸ್ಥಿತಿಯಲ್ಲಿ ಇಂದು ಸಾವಿರಾರು ಹೆಣ್ಣುಮಕ್ಕಳು ದಿನ ಕಳೆಯುತ್ತಿರುವುದು ಕಂಡುಬರುತ್ತದೆ.

ಸದ್ಯ ಕಲಾವತಿಯವರು ಆರ್ಥಿಕ ಸಂಕಷ್ಟಕ್ಕೊಳಗಾಗಿದ್ದು, ಅದಕ್ಕೆ ಕಾರಣ ಅವರ ತಮ್ಮ ಹಾಗೂ ತಮ್ಮನ ಹೆಂಡತಿಯಾಗಿದ್ದಾಳೆ. ಸಮಾಜವು ಹೆಣ್ಣುಮಕ್ಕಳಿಗೆ ಆಸ್ತಿಯನ್ನು ನೀಡಲು ನಿರಾಕರಿಸಿರುವ ಪ್ರಶ್ನೆಯೇ ಇಂದು ಕಲಾವತಿಯವರನ್ನು ಆರ್ಥಿಕ ಸಂಕಷ್ಟಕ್ಕೊಳಗಾಗುವಂತೆ ಮಾಡಿರುವುದು ಕಂಡುಬರುತ್ತದೆ.

ಸಾಮಾಜಿಕ ಹಿಂಸೆ - ಮಹಿಳೆಯರ ಮೇಲೆ ಕುಟುಂಬದಲ್ಲಿ ನಡೆಯುವ ಕೆಲವೊಂದು ಹಿಂಸಾತ್ಮಕ ಘಟನೆಗಳು ಸಾಮಾಜ ಒಪ್ಪಿತವಾದವುಗಳಾಗಿರುತ್ತವೆ. ಉದಾಹರಣೆಗೆ, ಕುಟುಂಬದಲ್ಲಿ ಗಂಡ ಸತ್ತ ನಂತರ ವೈದವ್ಯ ಪರಿಪಾಲನೆ ಕಡ್ಡಾಯವಾಗಿರುತ್ತದೆ. ಇದನ್ನು ಧಿಕ್ಕರಿಸಿದವರು ಸಮಾಜದ ಕೆಂಗಣ್ಣಿಗೆ ಗುರಿಯಾಗುತ್ತಾರೆ. ವೈದವ್ಯ ಪರಿಪಾಲನೆ ನಿರಾಕರಿಸಿದ ಮಹಿಳೆಗೆ ಸಾಮಾಜಿಕವಾಗಿ ಹಾಗೂ ಕೌಟುಂಬಿಕವಾಗಿ ಯಾವುದೇ ಬೆಂಬಲ ಸಿಗದೇ ಅನೇಕ ಬಗೆಯ ಹಿಂಸೆಗಳನ್ನು ನೀಡಲು ಕುಟುಂಬದ ಸದಸ್ಯರು ಮುಂದಾಗುತ್ತಾರೆ. ಅನೇಕ ಕುಟುಂಬಗಳಲ್ಲಿ ಇಂತಹ ಪ್ರಕರಣಗಳು ಕಂಡುಬರುತ್ತಿದ್ದು, ಇದರಿಂದಾಗಿ ಮಹಿಳೆಯರ ಬದುಕು ನಲುಗಿ ಹೋಗುತ್ತಿದೆ. ಇಷ್ಟಲ್ಲದೇ ಇನ್ನೂ ಅನೇಕ ಬಗೆಯಲ್ಲಿ ಮಹಿಳೆಯರು ಸಾಮಾಜಿಕ ಹಿಂಸೆಗೆ ಒಳಗಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ದಾಖಲಿಸಿದಂತಹ ಪ್ರಕರಣಗಳ ವಿಶ್ಲೇಷಣೆ ಇಂತಿದೆ.

ಪ್ರಕರಣ-೨೦ರಲ್ಲಿ ನೇತ್ರಾರವರು ಕುಟುಂಬದಲ್ಲಿ ಸಾಮಾಜಿಕ ಹಿಂಸೆಗೊಳಗಾಗಿರುವುದು ಕಂಡುಬರುತ್ತದೆ. ನೇತ್ರಾರವರು ದೌರ್ಜನ್ಯಕ್ಕೊಳಗಾಗಲು ನೇರವಾಗಿ ಅವರ ಮನೆಯವರೇ ಕಾರಣರಾದರೂ ಸಹ ಸಾಮಾಜಿಕ ಹಿನ್ನೆಲೆಯಲ್ಲಿ ಜಾತಿ ರಾಜಕಾರಣ ಮತ್ತು ಪುರುಷ ಪ್ರಧಾನ

ವ್ಯವಸ್ಥೆಯ ಕೈವಾಡ ಇಲ್ಲಿ ಬಹುವಾಗಿ ಕೆಲಸ ಮಾಡಿರುವುದು ಕಂಡುಬರುತ್ತದೆ. ಸಮಾಜ ಹೆಣ್ಣಿಗೆ ಎಲ್ಲಾ ಬಗೆಯ ಆಯ್ಕೆಯ ಸ್ವಾತಂತ್ರ್ಯವನ್ನು ನಿರಾಕರಸಿದ್ದು, ಅದರಲ್ಲೂ ವಿವಾಹದಂತಹ ಸಂದರ್ಭದಲ್ಲಿ ಇನ್ನೂ ಹೆಚ್ಚು ಕಾರ್ಯಗತಗೊಂಡಿರುತ್ತದೆ ಎಂಬುವುದಕ್ಕೆ ನೇತ್ರಾರವರ ಪ್ರಕರಣ ಮಾದರಿಯಾಗಿದೆ. ನೇತ್ರಾಳು ಪ್ರಕಾಶ ಎಂಬುವರನ್ನ ಪ್ರೀತಿಸಿ ಅವರನ್ನೇ ಮದುವೆ ಆಗುವುದಾಗಿ ತಿಳಿಸಿದಾಗ ಅವರ ಮನೆಯವರು ಅದಕ್ಕೆ ಒಪ್ಪದೇ, ಅವರಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ದೌರ್ಜನ್ಯಕ್ಕೊಳ ಪಡಿಸಿರುವುದು ಕಂಡುಬರುತ್ತದೆ. ಅಲ್ಲದೇ ಪ್ರಕಾಶರನ್ನು ಕೊಲ್ಲುವುದಾಗಿಯೂ ಸಹ ಬೆದರಿಕೆ ಹಾಕಿದ್ದಾರೆ. ಇದರಿಂದ ಭಯಗೊಂಡ ನೇತ್ರಾಳು ತಂದೆ–ತಾಯಿ ತೋರಿಸಿದ ಹುಡುಗನನ್ನೇ ಮದುವೆ ಆಗಲು ಒಪ್ಪಿ ಮದುವೆಯೂ ಕೂಡಾ ಆಗಿದ್ದಾಳೆ. ಮದುವೆ ಆದ ನಂತರ ಈ ಸಂಗತಿಯನ್ನು ತಿಳಿದ ನೇತ್ರಾರ ಗಂಡನ ಮನೆಯವರು ನೇತ್ರಾಳನ್ನು ನಿರಾಕರಿಸಿದ್ದಾರೆ. ಒಂದು ಹೆಣ್ಣು ಒಬ್ಬನನ್ನು ಮಾತ್ರ ಆರಾಧಿಸಬೇಕು ಎಂಬ ಸಾಮಾಜಿಕ ಧೋರಣೆ ನೇತ್ರಾರ ಮದುವೆ ಮುರಿದು ಬೀಳುವುದಕ್ಕೆ ಕಾರಣವಾಗುತ್ತದೆ. ನೇತ್ರಾ ಈಗಾಗಲೇ ಒಬ್ಬನನ್ನು ಪ್ರೀತಿಸಿದ್ದು ಆಕೆ ಮದುವೆ ಆದವನೊಂದಿಗೆ ಬಾಳಲು ಅನರ್ಹಳೆಂಬಂತೆ ಕಾಣುವ ಅವಳ ಗಂಡನ ಮನೆಯವರ ನಡುವಳಿಕೆ ಹೆಣ್ಣಿನ ಲೈಂಗಿಕತೆಯ ಬಗ್ಗೆ ಸಮಾಜ ತಳೆದಿರುವ ನಿಲುವನ್ನು ಸ್ಪಷ್ಟಪಡಿಸುತ್ತದೆ. ಇವುಗಳೆಲ್ಲದರ ಮಧ್ಯೆ ನೇತ್ರಾರವರು ಭಾವನಾತ್ಮಕವಾಗಿ ಬಹಳಷ್ಟು ಹಿಂಸೆಗೊಳಗಾಗಿರುವುದು ಕಂಡುಬರುತ್ತದೆ. ಹೆಣ್ಣುಮಕ್ಕಳು ಆಯ್ಕೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇ ಆದಲ್ಲಿ ಅದನ್ನು ವ್ಯವಸ್ಥೆಯು ಹಿಂಸೆಯ ಮೂಲಕ ಹೇಗೆ ಮೊಟಕುಗೊಳಿಸುತ್ತದೆ ಎಂಬುವುದಕ್ಕೆ ಈ ಪ್ರಕರಣ ಒಂದು ಉತ್ತಮ ಉದಾಹರಣೆಯಾಗಿದೆ.

ಇನ್ನು ಪ್ರಕರಣ–೨೧ರಲ್ಲಿ ರಾಣಿಯವರು ಮಕ್ಕಳನ್ನು ಹೆರಲಿಲ್ಲ ಎಂಬ ಕಾರಣಕ್ಕೆ ಮನೆಯವರಿಂದ, ಸಮಾಜದಿಂದ ಹಿಂಸೆಗೊಳಗಾಗುತ್ತಿರುವುದು ಕಂಡುಬರುತ್ತದೆ. ಹೆಣ್ಣಾದವಳು ಹೆರಲೇಬೇಕೆಂಬುವುದು ಸಾಮಾಜಿಕ ನಿಯಮವಾಗಿದೆ. ಒಂದು ವೇಳೆ ಮಕ್ಕಳನ್ನು ಹೆರದಿದ್ದ ಪಕ್ಷದಲ್ಲಿ ಅಂತವರನ್ನು ಸಮಾಜ ಮತ್ತು ಕುಟುಂಬ ಎರಡು ಕೆಟ್ಟ ರೀತಿಯಲ್ಲಿ ನಡೆಸಿಕೊಳ್ಳುತ್ತವೆ. ಕೆಲ ಸಂದರ್ಭಗಳಲ್ಲಿ ಪುರುಷರು ಮಕ್ಕಳಾಗದಿರುವಂತಹ ದೈಹಿಕ ನ್ಯೂನ್ಯತೆಗಳಿಗೆ ಒಳಗಾಗಿದ್ದರೂ ಕೂಡಾ, ಅದನ್ನು ಮರೆ ಮಾಚಿ ಹೆಣ್ಣಿನಲ್ಲಿಯೇ ಏನೋ ನ್ಯೂನ್ಯತೆ ಇದೆ ಎಂದುಅದನ್ನು ಹೆಣ್ಣಿನ ತಲೆಗೇ ಕಟ್ಟುವ ಕೆಲಸ ಮಾಡುತ್ತಾರೆ. ಈ ಪ್ರಕರಣದಲ್ಲಿ ರಾಣಿಯವರು ಮಕ್ಕಳನ್ನು ಹೆತ್ತಿಲ್ಲ ಎಂಬ ಕಾರಣಕ್ಕೆ ಅವರ ಅತ್ತೆ ಮತ್ತು ಸಮಾಜವು ಅವರನ್ನು ಸಮಾರಂಭಗಳಲ್ಲಿ ಮುಖ್ಯವಾಗಿ ಭಾಗವಹಿಸದಂತೆ ನಿರ್ದೇಶನ ನೀಡುತ್ತಾರೆ. ಮಕ್ಕಳನ್ನು ಹೆರದವರು ಬೇರೆ ಮಕ್ಕಳನ್ನು ಎತ್ತಿಕೊಳ್ಳಲು ಅನರ್ಹರು ಎಂದು ಹೇಳಿ ರಾಣಿಯವರನ್ನು ಭಾವನಾತ್ಮಕವಾಗಿ ಹಿಂಸೆಗೊಳಗಾಗುವಂತೆ ಮಾಡುವುದು ಕಂಡುಬರುತ್ತದೆ. ಇದರಿಂದಾಗಿ ರಾಣಿಯವರು ಮಾನಸಿಕವಾಗಿ ಜರ್ಝರಿತಗೊಂಡು ಸದ್ಯ ಸುಧಾರಿಸಿಕೊಂಡಿರುವುದಾಗಿ ಹೇಳುತ್ತಾರೆ. ಪುರುಷ ಪ್ರಧಾನ ಸಮಾಜ ಈ ರೀತಿಯಾಗಿ ಕಾರ್ಯನಿರ್ವಹಿಸುವ ಮೂಲಕ ಹೆಣ್ಣನ್ನು ಸದಾ ಹೆರುವ ಕಾರ್ಯದಲ್ಲಿ ನಿರತರಾಗುವಂತೆ ಮಾಡಿ ತನ್ನ ಕಾರ್ಯ ಸಾಧಿಸಿಕೊಳ್ಳುತ್ತದೆ. ಒಂದು ಮಗುವನ್ನು

ಹೆತ್ತ ಹೆಣ್ಣುಮಕ್ಕಳನ್ನೂ ಸಹ ಸಮಾಜವು ಮಕ್ಕಳನ್ನು ಹೆರದಿರದವಳಂತೆಯೇ ಕಾಣುತ್ತದೆ. ಈ ಮೂಲಕ ಹೆಣ್ಣನ್ನು ಸದಾ ಹೆರುವ ಕ್ರಿಯೆಯಲ್ಲಿಯೆ ತೊಡಗಿಸುವ ಹುನ್ನಾರ ಪುರುಷ ಪ್ರಧಾನ ವ್ಯವಸ್ಥೆಯದ್ದಾಗಿದೆ ಎಂಬುವುದು ಸ್ಪಷ್ಟವಾಗುತ್ತದೆ.

ಇನ್ನು **ಪ್ರಕರಣ-೨೨**ರಲ್ಲಿ ಅಶ್ವಿನಿಯವರು ಚಿಕ್ಕ ವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡು ವ್ಯಕ್ತಪಡಿಸಲಾಗದಂತಹ ಹಿಂಸೆಗೆ ಒಳಗಾಗಿರುವುದು ಕಂಡುಬರುತ್ತದೆ. ಅವರ ಸೋದರ ಅತ್ತೆಯೂ ಇದೇ ತೆರನಾಗಿ ಗಂಡನನ್ನು ಕಳೆದುಕೊಂಡು ಹಿಂಸೆ ಅನುಭವಿಸಿದ್ದು, ಅಶ್ವಿನಿಯೂ ಕೂಡಾ ತನ್ನಂತೆ ಬಾಳಬೇಕೆಂದು ಸೂಚಿಸುತ್ತಾರೆ. ಈ ಕ್ರಿಯೆ ಹೆಣ್ಣಿನ ಅಸ್ತಿತ್ವವನ್ನು ಹೇಗೆ ಇನ್ನೊಂದು ಹೆಣ್ಣಿನ ಮೂಲಕ ಅಳಿಸಿ ಹಾಕುವ ಪ್ರಯತ್ನ ಮಾಡುತ್ತದೆ ಎಂಬುವುದಕ್ಕೆ ನಿದರ್ಶನವಾಗಿದೆ. ಸಾಮಾಜಿಕ ಕಟ್ಟಲೆಗಳಿಂದಾಗಿ ಅಶ್ವಿನಿಯವರು ಅನುಭವಿಸುವ ನರಕಯಾತನೆ ನಿಜಕ್ಕೂ ಮಹಿಳಾ ಬದುಕಿನ ನೆಲೆಯನ್ನೇ ತಲ್ಲಣಗೊಳಿಸುವಂತದ್ದಾಗಿದೆ. ಸಮಾಜದಲ್ಲಿ ಇಂತಹ ಪ್ರಕರಣಗಳು ಸಾಕಷ್ಟು ಅರಿವಿಗೆ ಬಂದರೂ ಬಾರದಂತೆ ವ್ಯವಸ್ಥೆ ಸೂಚಿಸಿದ ನಿಯಮಾವಳಿಗಳಂತೆ ನಡೆದುಕೊಂಡು ಹೊರಟಿರುವುದು ಕಂಡುಬರುತ್ತದೆ. ಅಶ್ವಿನಿಯವರ ಈ ಪ್ರಕರಣ ನಿಜಕ್ಕೂ ಒಂದು ವಿಶೇಷವಾದಂತಹ ಪ್ರಕರಣವಾಗಿದೆ. ಈ ಪ್ರಕರಣದಲ್ಲಿ ಬರುವ ತಾಯಿಯ ಪಾತ್ರ ವಿಭಿನ್ನವೆನಿಸಿದರೂ ಸಹ ಅದು ವ್ಯವಸ್ಥೆಯ ಕಟ್ಟಳೆಗಳನ್ನು ಕಟುವಾಗಿ ಧಿಕ್ಕರಿಸುವ ಕಾರ್ಯ ಮಾಡುವುದಿಲ್ಲ. ಅಶ್ವಿನಿಯವರ ಮನೆಯವರೆಲ್ಲರಿಂದ ಪದೇ ಪದೇ ಅಶ್ವಿನಿಯವರ ಮರು ಅಥವಾ ವಿಧವಾ ವಿವಾಹಕ್ಕೆ ಅಡ್ಡಿಯುಂಟಾಗುತ್ತಿದ್ದು, ಅದೆಲ್ಲವನ್ನೂ ಎದುರಿಸಿನಿಂತು ಮಗಳಿಗೆ ಮರು ಮದುವೆ ಮಾಡಿಸುವ ಕಾರ್ಯಕ್ಕೆ ಅವರ ತಾಯಿ ಮುಂದಾಗುವುದಿಲ್ಲ. ಬದಲಾಗಿ ಆಕೆ ಮಗಳಿಗೆ ವಿವಾಹ ಬಾಹಿರ ಸಂಬಂಧ ಏರ್ಪಡಿಸಿಕೊಳ್ಳಲು ಹೇಳುತ್ತಾಳೆ. ಇಲ್ಲಿ ಅಶ್ವಿನಿಯವರ ತಾಯಿ ಒಂದು ಹೆಣ್ಣಾಗಿ ಹೆಣ್ಣನ್ನು ಅರಿತುಕೊಳ್ಳುವ ಪರಿ ನಿಜಕ್ಕೂ ಪ್ರಶಂಸನೀಯವಾಗಿದೆ. ಇವರು ಮನೆಯಲ್ಲಿಯ ಜನರಿಗೆ ವ್ಯವಸ್ಥೆಯನ್ನು ಮೀರುವ ಹಾಗೆ ಹೇಳಿದಾಗಲೂ ಸಹ ಕುಟುಂಬದ ಜನ ಒಪ್ಪಿಕೊಳ್ಳದಿದ್ದಾಗ ಅನಿವಾರ್ಯ ಕಾರಣದಿಂದಾಗಿ ಮಗಳಿಗೆ ತನ್ನದೇ ಆದ ವಿಚಾರಧಾರೆಯಲ್ಲಿ ಪರಿಹಾರವೊಂದನ್ನು ಸೂಚಿಸುತ್ತಾಳೆ. ಮಹಿಳೆಯರು ಸಮಾಜ ಬಾಹಿರವಾದ, ವಿವಾಹ ಬಾಹಿರವಾದ ಸಂಬಂಧವನ್ನು ಹೊಂದುವಂತೆ ಪ್ರೇರೇಪಿಸುವುದು ಪುರುಷ ಪ್ರಧಾನ ವ್ಯವಸ್ಥೆಯೇ ಆಗಿರುತ್ತದೆ ಎಂಬುವುದಕ್ಕೆ ಈ ಪ್ರಕರಣ ಒಂದು ಉತ್ತಮ ಉದಾಹರಣೆಯಾಗಿದೆ.

ಈ ಮೇಲಿನ ಎಲ್ಲಾ ಪ್ರಕರಣಗಳನ್ನು ಅವುಗಳದ್ದೇ ಆದ ಸಮಸ್ಯೆಯ ಹಿನ್ನೆಲೆಯಲ್ಲಿ ಗಮನಿಸಿದಾಗ, ವ್ಯವಸ್ಥೆ ನೀಡುತ್ತಿರುವ ದೌರ್ಜನ್ಯಕ್ಕೆ ಎಲ್ಲಾ ವರ್ಗ, ಜಾತಿ, ವಯಸ್ಸಿನ, ಅನಕ್ಷರಸ್ಥ, ಅಕ್ಷರಸ್ಥ, ಆರ್ಥಿಕ ಗಳಿಕೆ ತರುವ ಹಾಗೂ ತರದಿರುವ ಎಲ್ಲಾ ಮಹಿಳೆಯರು ಒಳಗಾಗುತ್ತಿದ್ದಾರೆ. ಜೊತೆಗೆ ವ್ಯವಸ್ಥೆಯು ತನ್ನ ಅಸ್ತಿತ್ವಕ್ಕಾಗಿ ಮಗಳು, ಅತ್ತೆ, ನಾದಿನಿ, ಅತ್ತಿಗೆ, ಸೊಸೆ, ಮೊಮ್ಮಕ್ಕಳು ಎಂಬ ಮಹಿಳಾ ಸಿದ್ಧ ಮಾದರಿಗಳನ್ನು ಬಳಸಿಕೊಂಡಿರುವುದು ಕಾಣಬಹುದಾಗಿದೆ. ಇದನ್ನೆಲ್ಲಾ ಗಮನಿಸಿದಾಗ ಪುರುಷ ಪ್ರಧಾನ ವ್ಯವಸ್ಥೆ ತನ್ನ ಉಳಿವಿಗಾಗಿ ಎಂತಹ ತಂತ್ರಗಳನ್ನು ಬಳಸಿಕೊಂಡಿದೆ ಎಂಬುದು ತಿಳಿದುಬರುತ್ತದೆ.

ಈ ಮೇಲಿನ ಬಹುತೇಕ ಪ್ರಕರಣಗಳಲ್ಲಿ ಮಹಿಳೆಯರು ತಾಳಲಾರದಷ್ಟು ಹಿಂಸೆಯನ್ನು ಅನುಭವಿಸಿದ್ದು, ಅವರು ಮಕ್ಕಳ ಮುಖ ನೋಡಿ ಬದುಕಿರುವುದಾಗಿ ತಿಳಿಸುತ್ತಾರೆ. ಇದು ವ್ಯವಸ್ಥೆಯು ಹೆಣ್ಣಿಗೆ ನೀಡಿದ ಅತಿಯಾದ ತಾಯ್ತನದ ಕಲ್ಪನೆಯನ್ನು ಸಾದರಪಡಿಸುತ್ತದೆ. ಮಕ್ಕಳು ತಾಯಿಯ ಅಂತಃಕರಣದಿಂದಲೇ ಬೆಳೆಯಬೇಕು ಎಂಬ ಸಾಮಾಜಿಕ ನಿಯಮದ ಜೊತೆ, ಈ ವಕ್ತೃಗಳ ಹೇಳಿಕೆಯನ್ನು ತಳುಕುಹಾಕಿ ಗಮನಿಸಿದಾಗ, ಇದು ವ್ಯವಸ್ಥೆ ತಾನು ನೀಡುವ ಅದೆಷ್ಟೋ ದೌರ್ಜನ್ಯಗಳನ್ನು ಮಹಿಳೆಯರು ಸಹಿಸಿಕೊಳ್ಳಲು ಹೆಣೆದಿರುವ ಪರ್ಯಾಯ ತಂತ್ರವಾಗಿ ಗೋಚರವಾಗುತ್ತದೆ. ಈ ನಿಟ್ಟಿನಲ್ಲಿ ವ್ಯವಸ್ಥೆಯ ಕುತಂತ್ರಗಳನ್ನು ಇನ್ನೂ ಸೂಕ್ಷ್ಮವಾಗಿ ಸ್ತ್ರೀವಾದದ ಹಿನ್ನೆಲೆಯಲ್ಲಿ ಗಮನಿಸುವ ಅಗತ್ಯತೆ ಹೆಚ್ಚೆನಿಸುತ್ತದೆ. ಹೀಗೆ ಅರಿತಾಗ ಮಾತ್ರ ವ್ಯವಸ್ಥೆ ತನ್ನ ಕಾರ್ಯ ಸಾಧನೆಗಾಗಿ ಯಾವ ಬಗೆಯ ತಂತ್ರಗಳನ್ನು ಹೂಡಿ ಆ ಮೂಲಕ ಮಹಿಳೆಯರನ್ನು ಹಿಂಸಿಸುತ್ತಿದೆ ಎಂಬುದು ತಿಳಿದುಬರುತ್ತದೆ.

ವ್ಯವಸ್ಥೆಯ ಎಲ್ಲಾ ನಡಾವಳಿಗಳು, ನಿಯಮಾವಳಿಗಳು ಪುರುಷ ಪ್ರಧಾನತೆಯಿಂದ ಕೂಡಿದ್ದು, ಇವುಗಳ ಹುಟ್ಟಿನ ಮೂಲದಿಂದ ಮಹಿಳೆಯರು ಅನುಭವಿಸುತ್ತಿರುವ ದೌರ್ಜನ್ಯದ ಬಗ್ಗೆ ಅರಿಯಬೇಕಾಗುತ್ತದೆ. ಇದನ್ನು ಸ್ತ್ರೀವಾದದ ಹಿನ್ನೆಲೆಯಲ್ಲಿ ಗಮನಿಸಿದಾಗ ಮಾತ್ರ ಸಮಸ್ಯೆಯ ನಿಜವಾದ ಮರ್ಮವನ್ನು ತಿಳಿಯಲು ಸಾಧ್ಯವಾಗುತ್ತದೆ. ಹಾಗೂ ಪರಿಹಾರ ಕಂಡುಕೊಳ್ಳಲು ಸಹಾಯಕವಾಗುತ್ತದೆ.

ಈ ಮೇಲೆ ಆಯ್ದ ಪ್ರಕರಣಗಳನ್ನು ಗಮನಿಸಿದಾಗ ಮಹಿಳೆಯರು ಅನೇಕ ಬಗೆಯ ಅಂದರೆ ಆರ್ಥಿಕ, ಭಾವನಾತ್ಮಕ, ಲೈಂಗಿಕ, ಶಾಬ್ದಿಕ, ದೈಹಿಕ ಹಾಗೂ ಹೆಣ್ಣಾದ ಕಾರಣಕ್ಕೆ ಹೆಚ್ಚೆಚ್ಚು ನಿರ್ಲಕ್ಷ್ಯಕ್ಕೊಳಗಾಗುವ ಮೂಲಕ ಹಿಂಸೆಗೊಳಗಾಗುತ್ತಿರುವುದು ಕಂಡುಬರುತ್ತದೆ. ಇವುಗಳನ್ನು ಮಹಿಳೆಯರು ಅನುಭವಿಸುವ ದೌರ್ಜನ್ಯಗಳಿಗನುಸಾರವಾಗಿ ಭಿನ್ನ ಭಿನ್ನವಾಗಿಸಿ, ಅಂದರೆ ಉದಾಹರಣೆಗೆ ಬಾಲ್ಯ ವಿವಾಹ, ವೈದವ್ಯ ಆಚರಣೆ, ದೈಹಿಕ ಹಿಂಸೆ, ಲೈಂಗಿಕ ಹಿಂಸೆ, ನಿರ್ಲಕ್ಷಕ್ಕೊಳಗಾಗುವುದು ಹೀಗೆ ಸಮಸ್ಯೆಗಳನ್ನು ಪ್ರತ್ಯೇಕಗೊಳಿಸಿಕೊಂಡು, ಏತಕ್ಕಾಗಿ ಈ ಬಗೆಯ ಹಿಂಸೆಗಳನ್ನು ಸ್ಥಾಪಿತಗೊಳಿಸಲಾಯಿತೆಂದು ಸ್ತ್ರೀವಾದದ ಹಿನ್ನೆಲೆಯಲ್ಲಿ ಗಮನಿಸಬೇಕಾಗುತ್ತದೆ. ಹಾಗೂ ವ್ಯವಸ್ಥೆ ಬಳಸಿದ ತಂತ್ರವನ್ನು ತಿಳಿದು ಅದನ್ನು ಸಂಪೂರ್ಣವಾಗಿ ಹೊಡೆದು ಹಾಕುವ ಕಾರ್ಯವನ್ನು ಪರಿಹಾರೋಪಾದಿಯಲ್ಲಿ ಕಂಡುಕೊಳ್ಳಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಸಮಾಜವಾದಿ ಸ್ತ್ರೀವಾದಿಗಳ ಹೋರಾಟ ಕೊಂಚ ಮಟ್ಟಿಗೆ ಸಮಂಜಸವೆನಿಸುತ್ತದೆ. ಸಮಾಜವಾದಿ ಸ್ತ್ರೀವಾದಿಗಳು ಪ್ರತಿಯೊಬ್ಬ ಮಹಿಳೆಯ ಅನುಭವವು ಭಿನ್ನವಾದ್ದರಿಂದ ಅವರು ಅನುಭವಿಸುವ ಅನುಭವಗಳ (ಸಮಸ್ಯೆಗಳ) ಹಿನ್ನೆಲೆಯಲ್ಲಿ ಪರಿಹಾರ ಕಂಡುಕೊಳ್ಳಬೇಕಾಗುತ್ತದೆ ಎಂದು ಹೇಳುತ್ತಾರೆ. ಆದರೆ ಇದು ಕಷ್ಟಸಾಧ್ಯ. ಆದ್ದರಿಂದ ಇದಕ್ಕೂ ಸ್ವಲ್ಪ ಮುಂದುವರೆದು, ಮಹಿಳೆಯರು ಅನುಭವಿಸುತ್ತಿರುವ ಹಿಂಸೆಯ ಭಿನ್ನತೆಗಳ ಹಿನ್ನೆಲೆಯಲ್ಲಿ ಸಮಸ್ಯೆಗಳನ್ನು ಗುರುತಿಸಿ ಪರಿಹಾರ ಕಂಡುಕೊಂಡರೆ ಮಹಿಳೆಯರು ಪ್ರಸ್ತುತ ವ್ಯವಸ್ಥೆಯಿಂದ ಹೊರಬರಲು ಸಾಧ್ಯವಾಗುತ್ತದೆ.

ಈ ಹಿನ್ನೆಲೆಯಿಂದ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ವ್ಯವಸ್ಥೆಯ ನೆಲೆಗಟ್ಟಿನಲ್ಲಿ ವಿಶ್ಲೇಷಿಸುವುದಾದಲ್ಲಿ, ಕುಟುಂಬದ ಹುಟ್ಟಿನ ಬಗ್ಗೆ ಈಗಾಗಲೇ ಮೇಲಿನ ಅಧ್ಯಾಯದಲ್ಲಿ ತಿಳಿದಿದ್ದೇವೆ. ಅಲೆಮಾರಿಯಾಗಿ ಅಲೆದಾಡುತ್ತಿದ್ದ ಮಾನವ ಕುಲ ಹೇಗೆ ಸಂಘಟಿತಗೊಂಡು ಒಂದೆಡೆ ನೆಲೆಸಲು

ಪ್ರಾರಂಭಿಸಿತೆಂದು ತಿಳಿದಿದ್ದೇವೆ. ಇದರ ಜೊತೆ ಜೊತೆಗೆ ಪುರುಷರು ಯಾಕೆ ತಮ್ಮ ಪ್ರಧಾನತೆಗಾಗಿ ಹಾತೊರೆದರೆಂದು ಸಹ ಚರ್ಚಿಸಿದ್ದೇವೆ. ಹಾಗೂ ತಮ್ಮ ಪ್ರಾಮುಖ್ಯತೆಗಾಗಿ, ಪ್ರಧಾನತೆಗಾಗಿ ಯಾವೆಲ್ಲಾ ತಂತ್ರಗಳನ್ನು ಬಳಸಿಕೊಂಡಿದ್ದಾರೆ ಎಂಬುವುದನ್ನು ಮಹಿಳೆಯರು ಅನುಭವಿಸುತ್ತಿರುವ ಸಮಸ್ಯೆಗಳ ಹಿನ್ನೆಲೆಯಲ್ಲಿ ತಿಳಿದುಕೊಂಡಿದ್ದೇವೆ. ಆದರೆ ಈ ಬಗೆಯ ಸಮಸ್ಯೆಗಳು ಸಹಜವಾಗಿ ಜರುಗುತ್ತಿದ್ದು, ಇವುಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ತಿಳಿದುಕೊಳ್ಳಬೇಕಾಗುತ್ತದೆ. ಆಗ ಮಾತ್ರ ಪುರುಷ ಪ್ರಧಾನ ವ್ಯವಸ್ಥೆಯ ಚಕ್ರವ್ಯೂಹವನ್ನು ಭೇದಿಸಲು ಸಾಧ್ಯವಾಗುತ್ತದೆ.

ಇದನ್ನೇ ಮೂಲವಾಗಿಸಿಕೊಂಡು ವಿಶ್ಲೇಷಣೆಗೊಳಪಡಿಸಿದಾಗ, ಆದಿಮಾನವರ ಅಥವಾ ಸಮುದಾಯ ರಚನೆಯ ಪೂರ್ವದಲ್ಲಿ ಹೆಣ್ಣು ಗಂಡುಗಳು ತಾವು ಇಚ್ಚಿಸಿದವರೊಂದಿಗೆ ಸಂಭೋಗ ಹೊಂದಬಹುದಿತ್ತು. ಆಗ ಅಣ್ಣ–ತಂಗಿ, ತಂದೆ–ತಾಯಿ, ಅಕ್ಕ–ತಮ್ಮ ಎಂಬ ಯಾವೊಂದು ಕಲ್ಪನೆಗಳೂ ಇರಲಿಲ್ಲ. ಯಾವಾಗ ಕುಟುಂಬದ ಪರಿಕಲ್ಪನೆ ಮೂಡಿ ಅಲ್ಲಿ ಮಾತೃ ಪ್ರಧಾನತೆ ('ಮಾತೃ ಪ್ರಧಾನ' ಎಂದರೆ ಹೆರುವವರು ಶ್ರೇಷ್ಠ ಎಂದರ್ಥ) ತಲೆದೋರಿತೋ ಆಗ ಪುರುಷರಲ್ಲಿ ತಮ್ಮ ಅಸ್ತಿತ್ವದ ಕಲ್ಪನೆಗಳು ಮೂಡತೊಡಗಿದವು. ಆ ಸಂದರ್ಭದಲ್ಲಿ ಗಂಡು ಜನಾಂಗ ಸ್ಥಾಪಿತಗೊಳಿಸಿದ ಸಾಮಾಜಿಕ ವ್ಯವಸ್ಥೆಯೇ 'ಪುರುಷ ಪ್ರಧಾನ ವ್ಯವಸ್ಥೆ' ಯಾಗಿದೆ.

ಹೆಣ್ಣಿನ ಸಂತಾನೋತ್ಪತ್ತಿ ಕ್ರಿಯೆ ಅವರನ್ನು ಪ್ರಮುಖ ಸ್ಥಾನಕ್ಕೇರಿಸಲು ಕಾರಣವಾಯಿತೆಂದು ಅರಿತ ಪುರುಷರು, ತಮ್ಮ ಅಸ್ತಿತ್ವಕ್ಕಾಗಿ ಮೊದಲು ಮಹಿಳೆಯರನ್ನು ತನ್ನ ಅಡಿಯಾಳಾಗಿಸಿಕೊಳ್ಳಲು ಪ್ರಾರಂಭಿಸಿದರು. ನೇರವಾಗಿ ಮಹಿಳೆಯರನ್ನು ವಿರೋಧಿಸಿದ್ದೇ ಆದರೆ ತಮ್ಮ ಅಂತ್ಯ ಖಂಡಿತ ಎಂದು ಅರಿತ ಪುರುಷರು ವಿವಿಧ ತಂತ್ರಗಳನ್ನು ಹುಡುವುದರ ಮೂಲಕ ತಮ್ಮ ಕಾರ್ಯ ಸಾಧನೆ ಮಾಡಿಕೊಳ್ಳ ತೊಡಗಿದರು. ಬೇಟೆ ಆಡುವ ಸಂದರ್ಭದಲ್ಲಿ ಬಳಸುತ್ತಿದ್ದ ತಂತ್ರಗಳನ್ನ ಮಹಿಳೆಯರ ಮೇಲೂ ಬಳಸತೊಡಗಿದರು. ತಾವು ಒಳ್ಳೆಯವರೆನಿಸಿಕೊಳ್ಳುತ್ತಲೇ ಮಹಿಳೆಯರನ್ನು ತಮ್ಮ ಅಡಿಯಾಳಾಗಿಸಿ ಕೊಳ್ಳತೊಡಗಿದರು. ಈ ಪ್ರಕ್ರಿಯೆಯಲ್ಲಿ ಪುರುಷರು ಮೊದಲು ರೂಪಿಸಿಕೊಂಡಿದ್ದೇ ವೈವಾಹಿಕ ವ್ಯವಸ್ಥೆಯಾಗಿದೆ. ವಿಶಾಲ ಮನೋಭಾವದಿಂದ ಕಟ್ಟಿಕೊಂಡ ಗುಂಪುಗಾರಿಕೆ ಅಥವಾ ಕುಟುಂಬ ವ್ಯವಸ್ಥೆಯಲ್ಲಿ ವಿವಾಹವೆಂಬ ಸಂಸ್ಥೆಯನ್ನು ಮೊದಲು ಹೆಣ್ಣುಮಕ್ಕಳ ಲೈಂಗಿಕತೆ ಮೇಲೆ ಹಿಡಿತ ಸಾಧಿಸಲು ಕಂಡುಕೊಂಡರೆಂದು ಹೇಳಬಹುದಾಗಿದೆ.

ಹೀಗೆ ರಚಿಸಿಕೊಂಡ ವೈವಾಹಿಕ ಚೌಕಟ್ಟಿನೊಳಗಡೆ ಪ್ರಾರಂಭದಲ್ಲಿ ಸ್ತ್ರೀ–ಪುರುಷರಿಬ್ಬರಿಗೂ ಸಮಾನ ಮನೋಭಾವ, ನಡಾವಳಿಗಳನ್ನು ಹೇರಿದ್ದರು. ಕಾಲಾನಂತರದಲ್ಲಿ ಪುರುಷರು ತಮ್ಮ ಕುಂದು ಕೊರತೆಗಳ ಈಡೇರಿಕೆಗಾಗಿ ಎಂಬ ನೆಪಗಳನ್ನೊಡ್ಡಿ ಬಹು ಪತ್ನಿತ್ವ, ಪುರುಷರ ಪುನರ್ ವಿವಾಹ ಹಾಗೂ ವ್ಯವಸ್ಥೆಯಲ್ಲಿನ ಬದಲಾವಣೆಗಳಿಗೆ ಅನುಸಾರವಾಗಿ ಕೆಳವರ್ಗ ಎಂದು ಗುರುತಿಸಿಕೊಂಡ ಮಹಿಳೆಯರನ್ನು ತನ್ನ ಲೈಂಗಿಕ ತೃಷೆಗಾಗಿ ಬಳಸಿಕೊಳ್ಳುವುದನ್ನು ಜಾರಿಗೊಳಿಸಿದರು. ಮಹಿಳೆಯರು ಈ ಬಗೆಯ ಅನುಕೂಲತೆಗಳನ್ನು ಪಡೆಯದ ಹಾಗೆ ಇದೇ ಹಂತದಲ್ಲಿ ಅವರಿಗೆ ಪಾತಿವ್ರತ್ಯದ ಕಲ್ಪನೆ, ಶೀಲದ ಕಲ್ಪನೆ, ಸತಿ ಪದ್ಧತಿಗಳ ಆಚರಣೆ, ವೈದವ್ಯದ ಆಚರಣೆಯಂತಹ ನಡಾವಳಿಗಳನ್ನು ಹುಟ್ಟಿಹಾಕುವುದರ ಮೂಲಕ ಲೈಂಗಿಕತೆ ಮೇಲೆ ಸಂಪೂರ್ಣ ನಿಯಂತ್ರಣವನ್ನು ಹೇರಿದರು. ಈ

ಹಿನ್ನೆಲೆಯಲ್ಲಿ ಎರಡನೆಯ ಮದುವೆಗೆ ನಿರಾಕರಣೆ, ಮಹಿಳೆಯರು ಸತಿ ಹೋಗುವುದು, ವೈದವ್ಯ ಪರಿಪಾಲನೆ, ಮಹಿಳೆಯರ ಶೀಲದ ಬಗ್ಗೆ ಅನುಮಾನ ವ್ಯಕ್ತಪಡಿಸುವುದು ಹೀಗೆ ಇನ್ನೂ ಹತ್ತು ಹಲವಾರು ದೌರ್ಜನ್ಯಗಳು ಪುರುಷ ಪ್ರಧಾನತೆಯ ಕುತಂತ್ರದ ಭಾಗವಾಗಿ ಸ್ಥಾಪಿತಗೊಂಡವು.

ಪುರುಷರು ಇಷ್ಟೆಲ್ಲಾ ತಂತ್ರಗಳನ್ನು ಮಹಿಳೆಯರ ವಿರುದ್ಧವಾಗಿ ರೂಪಿಸಿದಾಗಲೂ ಸಹ, ಪುರುಷನಷ್ಟೇ ಚಾಕಚಕ್ಯತೆ ಹೊಂದಿದ ಮಹಿಳೆಯರು ಇದೆಲ್ಲವನ್ನು ಪ್ರತಿಭಟಿಸಲಿಲ್ಲ ಎಂದೇನಿಲ್ಲ. ಈ ಬಗೆಯ ಪ್ರತಿಭಟನೆಗೆ ಪುರುಷರು ಪ್ರತಿಯಾಗಿ ಮಹಿಳೆಯರ ಋತುಚಕ್ರ, ಗರ್ಭ ಧಾರಣೆ, ಹೆರುವ ಸಂದರ್ಭಗಳನ್ನು ನೆಪವಾಗಿಸಿ (ಅಂಥಹ ಸಂದರ್ಭದಲ್ಲಿ ತಮ್ಮ ಲೈಂಗಿಕತೆಯ ಅವಶ್ಯಕತೆಗಾಗಿ) ತಮ್ಮ ತಂತ್ರಗಳು ಫಲಿಸುವಂತೆ ಮಾಡಿಕೊಳ್ಳತೊಡಗಿದರು.

ಈ ಪ್ರಕಾರವಾಗಿ ಮಹಿಳೆಯರ ಮೇಲೆ ಲೈಂಗಿಕ ಹಿಡಿತ ಸಾಧಿಸಿದರೇನೋ ಸರಿ, ಆದರೆ ಅದರಿಂದ ಮಹಿಳೆಯರು ಹೊಂದಿದ ಸ್ವತ್ತುಗಳ ಮೇಲಿನ ಹಿಡಿತವನ್ನು ಕಿತ್ತುಕೊಳ್ಳಲಾಗಲಿಲ್ಲ. ಆಗ ಇದ್ದದ್ದು ಕೇವಲ ಸ್ಥಿರಾಸ್ತಿ ಕಲ್ಪನೆ. ಇದರಿಂದಾಗಿ ಅವರು ಹೇಗಾದರೂ ಮಾಡಿ ಆಸ್ತಿಯ ಮೇಲೆ ಹೆಣ್ಣು ಹೊಂದಿದ್ದ ಒಡೆತನವನ್ನು ತಮ್ಮದಾಗಿಸಿಕೊಳ್ಳಲು ಪ್ರಯತ್ನಿಸಿದರು. ಈ ಹಿನ್ನೆಲೆಯಲ್ಲಿ ಮಹಿಳೆಯರನ್ನೇ ಸ್ಥಳಾಂತರಿಸಿದರೆ ಆ ಸ್ವತ್ತು ತಮ್ಮದಾಗುತ್ತದೆ ಎಂದು ಅರಿತುಕೊಂಡರು. ಇದರಿಂದಾಗಿ ಮೊದಲು ವಿವಾಹಗಳನ್ನು ತಮ್ಮ ಗುಂಪುಗಳಲ್ಲೇ ಏರ್ಪಡಿಸಿಕೊಳ್ಳುತ್ತಿದ್ದದ್ದನ್ನು ಕ್ರಮೇಣ ಬದಲಾವಣೆಗೊಳಪಡಿಸಿ ಬೇರೆ ಗುಂಪಿನವರೊಟ್ಟಿಗೆ ವಿವಾಹ ಸಂಬಂಧಗಳನ್ನು ಏರ್ಪಡಿಸಿ ಕೊಳ್ಳತೊಡಗಿದರು. ಆ ಮೂಲಕ ಗಂಡು ಹೆಣ್ಣಿನ ಸಂತಾನೋತ್ಪತ್ತಿಯ ಸಂದರ್ಭದಲ್ಲಿ ಹೆಣ್ಣಿನ ಹೊಟ್ಟೆ ತುಂಬಿಸುತ್ತಿದ್ದರಿಂದ ಅದನ್ನು ನೆಪವಾಗಿಸಿ, ಆತನು ಇರುವ ಸ್ಥಳಕ್ಕೆ ಸ್ಥಳಾಂತರಿಸುವ ಮಾರ್ಗ ಕಂಡುಕೊಂಡರು. ಆಗ ಮಹಿಳೆಯರು ಹೊಂದಿದ ಭೂಮಿಯನ್ನು ಸ್ಥಳಾಂತರಿಸುವುದು ಅಸಾಧ್ಯವಾದದ್ದರಿಂದ ಭೂಮಿಯ ಮೇಲೆ ಅವರು ಹೊಂದಿದ ಒಡೆತನವನ್ನು ಬಿಟ್ಟು ಹೊರ ನಡೆಯಬೇಕಾಯಿತು. ಇದಕ್ಕೆ ಕಣ್ಣೊರೆಸುವ ನೆಪವಾಗಿ ವ್ಯವಸ್ಥೆ ಜಾಣನತನದಿಂದ ಮಹಿಳೆಯರಿಗೆ ಮದುವೆಯ ಸಂದರ್ಭದಲ್ಲಿ ಸ್ಥಳಾಂತರಿಸಬಹುದಾದ ಜಾನುವಾರಗಳನ್ನು ಅವರ ಸ್ವತ್ತಾಗಿ ನೀಡಿದರು. ಅಂದು ಹೆಣ್ಣಿಗೆ ಮದುವೆಯ ಸಂದರ್ಭದಲ್ಲಿ ಹೀಗೆ ನೀಡುತ್ತಿದ್ದ ಈ ಬಗೆಯ ಸ್ವತ್ತೇ ಇಂದು ಸಮಾಜದ ಬಹು ದೊಡ್ಡ ಪಿಡುಗಾದ ವರದಕ್ಷಿಣೆ ಪದ್ಧತಿಯಾಗಿ ಬೆಳೆದು ಬಂದಿತು. ಈ ತೆರನಾಗಿ ಯಾವಾಗ ಮಹಿಳೆಯರು ಒಂದೊಂದಾಗೆ ತಾವು ನೈಸರ್ಗಿಕವಾಗಿ ಪಡೆದುಕೊಂಡದೆಲ್ಲವನ್ನೂ ಪುರುಷರ ತಂತ್ರಗಾರಿಕೆಯ ಭಾಗವಾಗಿ ಕಳೆದುಕೊಳ್ಳುತ್ತಾ ಬಂದರೋ, ಆಗ ಯಾವುದೂ ಮಹಿಳೆಯರ ಸ್ವತ್ತಾಗಿ ಉಳಿದುಕೊಳ್ಳಲಿಲ್ಲ.

ಕಾಲಾನಂತರದಲ್ಲಿ ಮದುವೆಯ ಸಂದರ್ಭದಲ್ಲಿ ಮಹಿಳೆಯರಿಗೆಂದು ನೀಡುವ ಆಕಳು ಅಥವಾ ಇನ್ನಾವುದೋ ಸ್ವತ್ತುಗಳು ಅವರದ್ದಾಗಿರದೇ ಅವು ಗಂಡಿನ ಕಡೆಯವರಿಗಾಗಿ ನೀಡುವ ಸಂಪತ್ತುಗಳಾಗಿ ಪರಿವರ್ತಿತಗೊಂಡವು. ಇದು ಕೂಡಾ ವ್ಯವಸ್ಥೆಯ ತಂತ್ರಗಾರಿಕೆ ಎಂದು ಹೇಳಬಹುದಾಗಿದೆ. ಹೀಗೆ ವ್ಯವಸ್ಥೆ ಮಹಿಳೆಯರನ್ನು ಸ್ಥಳಾಂತರಿಸುವ ಮೂಲಕ ಮಹಿಳೆಯರನ್ನು ಆಸ್ತಿ ಹಕ್ಕಿನಿಂದ ಸಂಪೂರ್ಣವಾಗಿ ವಂಚಿಸಿತು. ಈ ಹಿನ್ನೆಲೆಯಲ್ಲಿ ಪರ್ಯಾಯವಾಗಿ ರೂಪುಗೊಂಡಿದ್ದು ಮಾತ್ರ ಪುರುಷ ಸ್ಥಾನೀಯ ನೆಲೆ. ಹೀಗೆಲ್ಲಾ ಇರುವಾಗ ಏಕೆ ಮಾತೃ ಸ್ಥಾನೀಯ ಕುಟುಂಬಗಳು

ಇಂದಿಗೂ ಸಮಾಜದಲ್ಲಿ ಜಾರಿಯಲ್ಲಿವೆಯಲ್ಲ ಎಂಬ ಪ್ರಶ್ನೆ ಉದ್ಭವವಾಗದೇ ಇರದು. ಆದರೆ ಅವುಗಳು ಕೂಡಾ ಪುರುಷ ಪ್ರಧಾನತೆಯ ಉಳಿವಿಗಾಗಿಯೇ ಜನ್ಮ ತಳೆದಂತವುಗಳಾಗಿವೆ ಎಂದು ಹೇಳಬಹುದಾಗಿದೆ. ಆಸ್ತಿ ಹಕ್ಕಿನ ಹಿನ್ನೆಲೆಯಲ್ಲಿ ಈ ಮಾತೃ ಸ್ಥಾನೀಯ ಕುಟುಂಬಗಳು ಉಳಿದು ಕೊಂಡಿದ್ದು, ಇದು ಹುಟ್ಟುಹಾಕಿದ ಬಹುದೊಡ್ಡ ಸಮಸ್ಯೆಯೆಂದರೆ ಗಂಡು ಸಂತಾನದ ಕಲ್ಪನೆ. ಗಂಡು ಮಕ್ಕಳಿಲ್ಲದ ಕಾರಣ ಹೆಣ್ಣು ಮಗಳನ್ನು ಮನೆಯಲ್ಲೇ ಉಳಿಸಿಕೊಳ್ಳುವ ಮೂಲಕ ತಮ್ಮ ಸಂತತಿಯ ಅಥವಾ ಮನೆತನದ (ಮಾತೃ ಮೂಲಿಯ ಎಂದು ಹೇಳುವ ಹಿನ್ನೆಲೆಯಲ್ಲಿ, ಪಿತೃ ಮೂಲಿಯತೆಯನ್ನು ಉಳಿಸಲು) ಹೆಸರು ಉಳಿಸುವ ಕಾರ್ಯ ಮಾತೃ ಸ್ಥಾನೀಯ ವ್ಯವಸ್ಥೆಯಲ್ಲಿ ನಡೆಯುತ್ತದೆ. ಗಂಡು ಮಗುವೇ ಶ್ರೇಷ್ಠ ಎಂದು ಪುರುಷ ಪ್ರಧಾನತೆಯನ್ನ ಸ್ಥಾಪಿಸುವ ಕಾರ್ಯ ಈ ಮೂಲದಿಂದ ಮತ್ತೆ ಮತ್ತೆ ಸ್ಥಾಪಿತವಾಗುತ್ತಾ ಹೋಗುತ್ತದೆ. ಈ ತೆರನಾಗಿ ಪುರುಷರು ಹಲವಾರು ಹುನ್ನಾರಗಳನ್ನು ರಚಿಸುತ್ತಾ ಬಂದರು.

ಜಗತ್ತಿಗೆ ಹೊಸದೊಂದನ್ನು ಸೃಷ್ಟಿಸಿ ಕೊಡುವ ಶಕ್ತಿ ಹೊಂದಿದ ಮಹಿಳೆ ತನ್ನ ವಿಚಾರ ಶಕ್ತಿಯಿಂದ ಎಂದಾದರೂ ತಮಗೆ ಧಕ್ಕೆ ತರಬಹುದೆಂದು ಅರಿತು, ಆಕೆಯ ವಿಚಾರ ಶಕ್ತಿಗೆ ಬಿಡುವೇ ಕೊಡದಿದ್ದಾಗ ತನ್ನ ಕೆಲಸ ಸುಲಭ ಎಂದು ತಿಳಿದರು. ಆ ನಿಟ್ಟಿನಲ್ಲಿ ತನ್ನ ಎಲ್ಲಾ ಕಾರ್ಯತಂತ್ರಗಳನ್ನು ರೂಪಿಸಿಕೊಂಡು ಬಂದರು. ಈ ಹಿನ್ನೆಲೆಯಲ್ಲಿ ಹೆಣ್ಣಿನ ಲೈಂಗಿಕತೆ ಮೇಲೆ ಮತ್ತಷ್ಟು ಹಿಡಿತ ಸಾಧಿಸುವುದು ಹಾಗೂ ಆಕೆಯ ಋತುಚಕ್ರ ಪ್ರಾರಂಭವಾದ ಕೂಡಲೇ ಸದಾ ಮಕ್ಕಳನ್ನು ಹೆರುವ ಕ್ರಿಯೆಯಲ್ಲಿ ತೊಡಗಿಸುವ ಮೂಲಕ ಆಕೆ ತನ್ನ ಗಮನವನ್ನು ಹೆಚ್ಚು ಬೇರೆ ಕಡೆ ಹರಿಸಲಾರದಂತೆ ಮಾಡಿದರು. ಇದಕ್ಕಾಗಿ ಅವರು ಕಂಡುಕೊಂಡ ಮಾರ್ಗವೆಂದರೆ ಬಾಲ್ಯ ವಿವಾಹದಂತಹ ಕೆಟ್ಟ ಪದ್ಧತಿಯಾಗಿದೆ. ಹೆಣ್ಣು ಹುಟ್ಟಿದ ಕೂಡಲೇ ಮದುವೆ ಮಾಡಿಬಿಡುವುದರಿಂದ ಆಕೆಯ ಲೈಂಗಿಕತೆ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಬಹುದು ಹಾಗೂ ಇದರೊಟ್ಟಿಗೆ ಮಹಿಳೆಯರು ಸದಾ ಬಸಿರು, ಹೆರಿಗೆ ಸಂದರ್ಭದಲ್ಲೇ ಕಾಲ ಕಳೆಯ ಬೇಕಾಗುವುದರಿಂದ ತಮ್ಮ ಅಸ್ತಿತ್ವಕ್ಕೆ ಧಕ್ಕೆ ತರದಿರಲು ಈ ಒಂದು ಅಂಶ ಸ್ವಲ್ಪ ಮಟ್ಟಿಗೆ ಸಹಾಯವಾಗುತ್ತದೆ ಎಂದು ಅರಿತುಕೊಂಡರು. ಜೊತೆಗೆ ಮಹಿಳೆಯರ ಬಸಿರು, ಹೆರಿಗೆ ಸಂದರ್ಭಗಳಲ್ಲಿ ಅವರನ್ನು ಆರೈಕೆ ಮಾಡಲು ಗುಂಪಿನ ಅಥವಾ ಮನೆಯ ಇತರೆ ಹೆಣ್ಣುಮಕ್ಕಳೇ ಸೂಕ್ತ ಎಂದು ಹೇಳಿ, ಎಲ್ಲಾ ಮಹಿಳೆಯರನ್ನು ಮನೆಗೆ ಸೀಮಿತಗೊಳಿಸುವ ಮೂಲಕ ಹೊರ ಜಗತ್ತಿನ ಸಂಪರ್ಕವನ್ನು ಸಂಪೂರ್ಣವಾಗಿ ಕಡಿತಗೊಳಿಸಿದರು.

ಹೀಗೆ ಮಹಿಳೆಯರನ್ನು ಮನೆಗೆ ಸೀಮಿತಗೊಳಿಸುವ ಮೂಲಕ ಅಧಿಕ ಕೆಲಸದ ಹೊರೆ, ಹಬ್ಬ ಹರಿದಿನ ಮುಂತಾದವುಗಳನ್ನು ಸ್ಥಾಪಿತಗೊಳಿಸಿ ಮಹಿಳೆಯರನ್ನು ಹೊರ ಜಗತ್ತಿನಿಂದ ಸಂಪೂರ್ಣವಾಗಿ ಹೊರಗುಳಿಸುವಲ್ಲಿ ಯಶಸ್ವಿಯಾದರು ಎಂದು ಹೇಳಬಹುದು. ಕಾಲ ಸಂದರ್ಭಕ್ಕನು ಗುಣವಾಗಿ ಎಚ್ಚೆತ್ತುಕೊಂಡು ಮಹಿಳೆಯರು ಸ್ವತಂತ್ರರಾಗಲು ಹೊರಪ್ರಪಂಚಕ್ಕೆ ಬಂದರೆ ಅವರಿಗೆ ಅಲ್ಲಿ ಅತ್ಯಾಚಾರ, ಲೈಂಗಿಕ ಕಿರುಕುಳ, ಆರ್ಥಿಕ ಹಿಂಸೆ, ದ್ವಿಗುಣ ಕೆಲಸದ ಹೊರೆ ಹೀಗೆ ಅನೇಕ ಬಗೆಯ ದೌರ್ಜನ್ಯಗಳಿಗೆ ಒಳಪಡಿಸಿ, ಹೆಣ್ಣಿಗೆ ಹೊರ ಪ್ರಪಂಚವನ್ನು ಭಯದ ವಾತಾವರಣವಾಗಿ

ನಿರ್ಮಾಣ ಮಾಡಿದ್ದಾರೆ. ಈ ರೀತಿ ಮಾಡುವ ಮೂಲಕ ಮಹಿಳೆಯರನ್ನು ಹೊರ ಜಗತ್ತಿನಿಂದ ದೂರವೇ ಉಳಿಯುವಂತೆ ಮಾಡುತ್ತಾ ಬಂದಿದ್ದಾರೆ. ಹಾಗೂ ಇಂದಿಗೂ ಇಂತಹ ಕಾರ್ಯತಂತ್ರಗಳನ್ನು ರೂಪಿಸುತ್ತಲೇ ಇದ್ದಾರೆ.

ಒಟ್ಟಾರೆಯಾಗಿ ಮಹಿಳೆಯರನ್ನು ಎರಡನೇ ದರ್ಜೆಯವರೆಂದು ಹೇಳಿ ಪುರುಷ ಪ್ರಧಾನ ವ್ಯವಸ್ಥೆ ಅವರನ್ನು ಯಾವುದಕ್ಕೂ ಮುಂದುವರೆಯದಂತೆ ಮಾಡಿದೆ. ಹೀಗೆ ಮಹಿಳೆಯರನ್ನು ವ್ಯವಸ್ಥಿತವಾಗಿ ಸೆದೆಬಡಿಯಲು ಅವರ ಮೇಲೆ ಆರ್ಥಿಕವಾದ, ಲೈಂಗಿಕವಾದ, ಶಾಬ್ಧಿಕವಾದ, ಸಾಮಾಜಿಕವಾದ ಹಾಗೂ ಭಾವನಾತ್ಮಕವಾದ ದೌರ್ಜನ್ಯಗಳನ್ನು ನಾಗರಿಕತೆಗಳ ಕಾಲದಿಂದ ಇಂದಿನವರೆಗೂ ನಡೆಸುತ್ತಲಿರುವುದು ಕಾಣಬರುತ್ತಿದೆ.

ಪುರುಷ ಪ್ರಧಾನ ವ್ಯವಸ್ಥೆ ಇಷ್ಟೆಲ್ಲಾ ನಡಾವಳಿಗಳನ್ನು ಸ್ಥಾಪಿಸುವುದರ ಹಿಂದಿನ ಮರ್ಮವನ್ನು ಸ್ತ್ರೀವಾದದ ಹಿನ್ನೆಲೆಯಲ್ಲಿ ಗಮನಿಸಿದಾಗ ಮಾತ್ರ ಸತ್ಯ ಸಂಗತಿಗಳು ಹೊರಬೀಳಲು ಸಾಧ್ಯವಾಗುತ್ತದೆ. ಮಹಿಳೆಯರನ್ನು ದೌರ್ಜನ್ಯಕ್ಕೊಳಪಡಿಸುವುದು ಪುರುಷ ಪ್ರಾಧಾನ್ಯತೆಯ ಸ್ಥಾಪನೆಗಾಗಿ ಹಾಗೂ ಅದರ ಉಳಿವಿಗಾಗಿ ಎಂದು ತಿಳಿದುಬರುತ್ತದೆ. ಈ ಹಿನ್ನೆಲೆಯಲ್ಲಿ ಮಾನವರ ಬದುಕಿನ ಎಲ್ಲಾ ನಡಾವಳಿಗಳು ಪುರುಷ ರೂಪಿತವಾಗಿದ್ದು, ಅವು ಬಹಳ ನಾಜೂಕಿನಿಂದ ತಮ್ಮ ಕಾರ್ಯವನ್ನು ಈಡೇರಿಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ಇಷ್ಟೇ ಅಲ್ಲದೇ ಮಹಿಳೆಯರ ಬದುಕಿನ ಮತ್ತೊಂದು ದುರಂತ ಎಂದರೆ, ವ್ಯವಸ್ಥೆ ತನ್ನ ಉಳಿವಿಗಾಗಿ ಮಹಿಳೆಯರನ್ನೇ ದಾಳವನ್ನಾಗಿ ಬಳಸಿಕೊಂಡಿರುವುದಾಗಿದೆ. ಈ ರೀತಿಯ ಎಲ್ಲಾ ತಂತ್ರಗಳನ್ನು ಅರಿತು ಅವುಗಳನ್ನು ವ್ಯವಸ್ಥಿತವಾಗಿ ಹೊಡೆದುಹಾಕುವ ಮಾರ್ಗವೊಂದೇ ಮಹಿಳೆಯರನ್ನು ಪುರುಷ ಪ್ರಧಾನತೆಯ ಕಪಿಮುಷ್ಠಿಯಿಂದ, ಅಲ್ಲಿ ಅನುಭವಿಸುತ್ತಿರುವ ದೌರ್ಜನ್ಯಗಳಿಂದ ಹೊರತರಲು ಸಾಧ್ಯವಾಗುತ್ತದೆ ಎಂದು ಹೇಳಬಹುದಾಗಿದೆ.

ಅಧ್ಯಾಯ ಆರು

ನ್ಯಾಯಾಲಯದಲ್ಲಿ ದಾಖಲಾದ ಪ್ರಕರಣಗಳು ಹಾಗೂ ಅವುಗಳ ವಿಶ್ಲೇಷಣೆ

೬.

ನ್ಯಾಯಾಲಯದಲ್ಲಿ ದಾಖಲಾದ ಪ್ರಕರಣಗಳು ಹಾಗೂ ಅವುಗಳ ವಿಶ್ಲೇಷಣೆ

೬.೧. ಪ್ರಸ್ತಾವನೆ

ಕೌಟುಂಬಿಕ ಹಿಂಸೆಗೆ ಒಳಗಾದ ಮಹಿಳೆಯರು ತಮಗಾಗುತ್ತಿರುವ ಹಿಂಸೆಯಿಂದ ಹೊರಬರಲು ಕಾನೂನಿನ ಸಹಾಯ ಕೋರಿದ್ದು, ತಮಗೆ ಸೂಕ್ತ ನ್ಯಾಯ ದೊರಕಿಸಿಕೊಡುವುದಾಗಿ ವಿನಂತಿಸಿ ಕೊಂಡಿದ್ದಾರೆ. ಇವುಗಳಲ್ಲಿ ದೌರ್ಜನ್ಯ ಅತಿರೇಖಕ್ಕೆ ಹೋಗಿ ಮಹಿಳೆಯರು ಸಾವು ಸಂಭವಿಸಿದ ಪ್ರಕರಣಗಳೂ ಕೂಡಾ ಸೇರಿಕೊಂಡಿವೆ. ನ್ಯಾಯಕ್ಕಾಗಿ ನ್ಯಾಯಲಯದ ಮೊರೆ ಹೋದ ಮಹಿಳೆಯರ ಪ್ರಕರಣಗಳು ಕೆಲವೊಂದು ನೇರವಾಗಿ, ಕೆಲವೊಂದು ಸಂರಕ್ಷಣಾಧಿಕಾರಿಗಳು ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಕೊಪ್ಪಳ ಇವರಿಂದ ಇನ್ನು ಕೆಲವೊಂದು ಪ್ರಕರಣಗಳು ಆರಕ್ಷಕರ ಠಾಣೆಗಳಿಂದ ದಾಖಲಾದವುಗಳಾಗಿವೆ.

೬.೨. ಮಾದರಿ ಪ್ರಕರಣಗಳು

ಪ್ರಕರಣ– ೧

ಇವರಿಗೆ,

ಮಾನ್ಯ ಸಂರಕ್ಷಣಾಧಿಕಾರಿಗಳು
ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು,
ಕೊಪ್ಪಳ.

ವಿಷಯ : ಹೆಣ್ಣು ಮಕ್ಕಳ ಕೌಟುಂಬಿಕ ಹಿಂಸೆಯಿಂದ ಸಂರಕ್ಷಿಸುವ ಕಾಯ್ದೆ ೨೦೦೫ ರನ್ವಯ ಪಿರ್ಯಾದಿ ಇರುತ್ತದೆ.

ಈ ಪಿರ್ಯಾದಿ ಮೂಲಕ ಸಲ್ಲಿಸುವುದೇನೆಂದರೆ, ನಾನು ಶ್ರೀಮತಿ ರೇಖಾ ಉರ್ಫ್ ಕೀರ್ತಿ ಗಂಡ ಯಲ್ಲಪ್ಪ ಹಿಂದಿನಮನಿ, ವಾಸ : ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಎದುರುಗಡೆ, ರಾಮದುರ್ಗ ತಾಲ್ಲೂಕ: ರಾಮದುರ್ಗ, ಜಿಲ್ಲಾ : ಬೆಳಗಾಂವ, ಸದ್ಯ ವಾಸಸ್ಥಳ, ಮೋಜಿ ಓಣಿ ಕೊಪ್ಪಳ. ನನ್ನ ಮದುವೆಯು ಶ್ರೀ ಯಲ್ಲಪ್ಪ ತಂದಿ ಅಂದಪ್ಪ ಹಿಂದಿನಮನಿ, ಸಾ : ರಾಮದುರ್ಗ ಇವರ ಜೊತೆ ದಿನಾಂಕ: ೨೦.೧೨.೨೦೧೦ ರಂದು ನಮ್ಮ ಜಾತಿ ಕುಲ ಪದ್ಧತಿಯಂತೆ ವಿವಾಹವು ಜರುಗಿದ್ದು, ನಂತರ ನಾನು ನನ್ನ ಗಂಡನ ಮನೆಗೆ ವೈವಾಹಿಕ ಜೀವನ ನಡೆಸಲು ಹೋಗಿ ಸುಮಾರು ಎರಡು ತಿಂಗಳ ಕಾಲ ಚೆನ್ನಾಗಿ ಸಂಸಾರ ಮಾಡಿದ್ದೇನೆ. ಮತ್ತು ನನ್ನ ಗಂಡನಿಗೆ

ಮಧ್ಯಪಾನ ಮತ್ತು ಜೂಜಾಟದ ಚಟಗಳಿರುತ್ತವೆ. ನನ್ನ ಗಂಡನು ನನಗೆ ದಿನಾಲೂ ನಿನ್ನ ತವರು ಮನೆಯಿಂದ ರೂ. ೫೦,೦೦೦-೦೦ ವರದಕ್ಷಿಣೆ ಹಣ ತರಲು ಒತ್ತಾಯಿಸುತ್ತಿದ್ದನು. ನಾನು ನಮ್ಮ ಮದುವೆಯಲ್ಲಿ ನೀವು ಕೇಳಿದ ವರದಕ್ಷಿಣೆ ಹಣ ರೂ. ೫೦,೦೦೦-೦೦ ಹಣವನ್ನು ನನ್ನ ತಂದೆ-ತಾಯಿಗಳು ನೀಡಿದ್ದು, ಯಾಕೆ ಸುಮ್ಮನೆ ಹೀಗೆ ತೊಂದರೆ ನೀಡುತ್ತಿದ್ದೀರಿ ಎಂದು ಕೇಳಲು, ನನಗೆ ದಿನಾಲೂ ಹೊಡಿಯುವುದು, ಬೈಯುವುದು ಹಾಗೂ ಊಟವನ್ನು ನೀಡದೆ ತೊಂದರೆ ನೀಡುತ್ತಿದ್ದರು. ನಂತರ ನನ್ನನ್ನು ನಿನ್ನ ತವರು ಮನೆಯಿಂದ ಹೆಚ್ಚಿನ ವರದಕ್ಷಿಣೆ ಹಣ ೫೦,೦೦೦-೦೦ ರೂಪಾಯಿ ತೆಗೆದುಕೊಂಡು ಬರುವವರೆಗೂ ನಮ್ಮ ಮನೆಗೆ ಬರಬೇಡ ಎಂದು ನನ್ನ ಅತ್ತೆ, ಮಾವ ಮತ್ತು ಗಂಡ ತಮ್ಮ ಮನೆಯಿಂದ ಹೊರ ದೂಡಿದರು. ಮತ್ತು ಮನೆಯೊಳಗೆ ಬಂದರೆ ಸಾಯಿಸುವುದಾಗಿ ಬೆದರಿಕೆ ಹಾಕಿ ಮನೆಯಿಂದ ಹೊರಗೆ ಹಾಕಿರುತ್ತಾರೆ. ನಾನು ಎಷ್ಟು ವಿನಂತಿಸಿದರೂ ನನ್ನನ್ನು ಮನೆಯೊಳಗೆ ಸೇರಿಸಿಕೊಳ್ಳಲಿಲ್ಲ. ಆಗ ನಾನು ನನ್ನ ತಂದೆ-ತಾಯಿಗಳ ಊರಿಗೆ ಬಂದು ನೆಲೆಸಿದ್ದೇನೆ. ನನ್ನ ತಂದೆ-ತಾಯಿಗಳು ಬಹಳ ಬಡವರಿದ್ದು, ಅವರು ತಮ್ಮ ಜೀವನ ನಡೆಸಿಕೊಂಡು ಹೋಗುವುದು ತುಂಬಾ ತೊಂದರೆ ಇದ್ದು, ವಯಸ್ಸಾದವರಾಗಿದ್ದಾರೆ. ನನ್ನನ್ನು ಸಂರಕ್ಷಣೆ ಮಾಡುವುದು ಅವರಿಗೆ ಬಹಳ ತೊಂದರೆಯಾಗಿರುತ್ತದೆ. ನನಗೆ ನನ್ನ ಸಂರಕ್ಷಣೆ ಮತ್ತು ನನ್ನ ಜೀವನ ನಡೆಸಿಕೊಂಡು ಹೋಗುವುದು ಆಗುತ್ತಿಲ್ಲ. ಇದರಿಂದ ತುಂಬಾ ತೊಂದರೆ ಅನುಭವಿಸಿದ್ದೇನೆ, ಹಾಗೂ ಸಾಕಷ್ಟು ಮಾನಸಿಕ ಹಾಗೂ ದೈಹಿಕ ನೋವು ಉಂಟಾಗಿರುತ್ತದೆ.

ಕಾರಣ ನನಗೆ ನನ್ನ ಗಂಡನ ಮನೆಯಲ್ಲಿ ವಾಸಿಸಲು ಮತ್ತು ನನ್ನ ಗಂಡ, ಮಾವ-ಅತ್ತೆ ಇವರಿಂದ ಶಾಂತಿಯುತ ಜೀವನ ನಡೆಸಲು ನನ್ನ ಜೀವನಕ್ಕೆ ಯಾವುದೇ ರೀತಿ ತೊಂದರೆ ಆಗದಂತೆ ಸೂಕ್ತ ಕಾನೂನು ಕ್ರಮಗಳನ್ನು ಜರುಗಿಸಲು ವಿನಂತಿಸಿಕೊಳ್ಳುತ್ತೇನೆ. ಮತ್ತು ನನ್ನ ಗಂಡನಿಗೆ ವಾಸಿಸಲಿಕ್ಕೆ ಮನೆಗಳು ಇದ್ದು, ಅದರಲ್ಲಿ ನನಗ ವಾಸಿಸಲು ಅನುಕೂಲ ಮಾಡಿಕೊಡಲು ಸೂಕ್ತ ಕಾನೂನು ಕ್ರಮ ಜರುಗಿಸಲು ವಿನಂತಿ.

ಸ್ಥಳ: ಕೊಪ್ಪಳ — ತಮ್ಮ ವಿಶ್ವಾಸಿ

ದಿನಾಂಕ: ೭.೧.೨೦೧೩ — ರೇಖಾ

ಪ್ರಕರಣ-೨

ಪ್ರಕರಣದ ಸಂಕ್ಷಿಪ್ತ ಮಾಹಿತಿ,

ಒಂದನೇ ಎದುರುದಾರ - ಗಂಡ

ಎರಡನೇ ಎದುರುದಾರಳು - ಗಂಡನ ತಾಯಿ

ಮೂರನೇ ಎದುರುದಾರ - ಗಂಡನ ತಮ್ಮ

೧. ಅರ್ಜಿದಾರಳ ಮದುವೆಯು ೧ನೇ ಎದುರುದಾರನೊಂದಿಗೆ ದಿನಾಂಕ ೨೬.೬.೧೩ ಮಂಗಳವಾರದಂದು ಗಜೇಂದ್ರಗಡ ಶ್ರೀ ಜಗದಂಬಾ ಕಲ್ಯಾಣ ಮಂಟಪದಲ್ಲಿ ಅವರ

ಕುಲಪದ್ಧತಿಯಂತೆ ಆಗಿರುತ್ತದೆ. ಮದುವೆ ಆದಾಗಿನಿಂದ ೧ನೇ ಎದುರುದಾರನು ದಿನಾಲು ಕುಡಿದು ಬಂದು ಅರ್ಜಿದಾರಳಿಗೆ ರಾತ್ರಿಯಲ್ಲಿ ಮಾನಸಿಕವಾಗಿ, ದೈಹಿಕವಾಗಿ ಕಿರುಕುಳ ನೀಡುತ್ತಾ ಕ್ರೂರಿಯಂತೆ ವರ್ತಿಸುತ್ತಿದ್ದನು. ಇದನ್ನೆಲ್ಲ ಸಹಿಸಿಕೊಂಡು ಅರ್ಜಿದಾರಳು ೧ನೇ ಎದುರುದಾರನೊಂದಿಗೆ ಬಾಳ್ವೆ ಮಾಡುತ್ತಾ ಬಂದಿರುತ್ತಾಳೆ.

೨. ೨ನೇ ಎದುರುದಾರಳು ೧ನೇ ಎದುರುದಾರನ ತಾಯಿ ಇರುತ್ತಾಳೆ. ೩ನೇ ಎದುರುದಾರ ೧ನೇ ಎದುರುದಾರನ ತಮ್ಮನಿರುತ್ತಾನೆ. ಸದ್ರಿಯವರು ಒಂದೇ ಮನೆಯಲ್ಲಿ ವಾಸಿಸುತ್ತಿದ್ದು ಅರ್ಜಿದಾರಳು ತನಗಾದ ಕಿರಿಕುಳವನ್ನು ತೋಡಿಕೊಳ್ಳಲು ಹೋದರೆ ಆಕೆಯೊಂದಿಗೆ ಯಾರು ಮಾತನಾಡುತ್ತಿರಲಿಲ್ಲ. ಮನೆಯಿಂದ ಎಲ್ಲರು ಹೊರಗೆ ಹೋಗುತ್ತಿದ್ದರು. ಅರ್ಜಿದಾರಳ ಕಷ್ಟ ಸುಖವನ್ನು ಕೇಳುತ್ತಿರಲಿಲ್ಲ. ವಿನಾಕಾರಣ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡುತ್ತಾ ಬಂದಿದ್ದಾರೆ. ೧ನೇ ಎದುರುದಾರ ಅರ್ಜಿದಾರಳ ನಡತೆಯ ಬಗ್ಗೆ ಅನುಮಾನಪಡುತ್ತಾ ಬಂದಿರುತ್ತಾನೆ. ಮಾತೆತ್ತಿದರೆ ಡೈವೋರ್ಸ್ ಬೇಕು ಅಂತಾ ಹೇಳುತ್ತಾನೆ. ೨ನೇ ಎದುರುದಾರಳು ಅರ್ಜಿದಾರಳಿಗೆ ನೀನು ನನ್ನ ಮಗನಿಗೆ ಡೈವೋರ್ಸ್ ಕೊಡು ನನ್ನ ಮಗನಿಗೆ ಬಹಳ ವರದಕ್ಷಿಣೆ ತೆಗೆದುಕೊಂಡು ಇನ್ನೊಂದು ಲಗ್ನ ಮಾಡುತ್ತೇನೆ ಅಂತಾ ಹೇಳುತ್ತಾಳೆ.

೩. ೪ನೇ ಎದುರುದಾರನು ಅರ್ಜಿದಾರಳನ್ನು ಕುರಿತು ನೀನು ನಮ್ಮ ಮನೆಗೆ ಬಂದ ನಂತರ ನನ್ನ ತಂದೆಗೆ ಆರಾಮ ಇಲ್ಲದಂತಾತು ಅಂತಾ ಹೀಯಾಳಿಸಿ ಮಾತನಾಡುತ್ತಾನೆ. ಅರ್ಜಿದಾರಳು ಎದುರುದಾರರ ಕಿರುಕುಳ ತಾಳಲಾರದೆ ಜೀವನದಲ್ಲಿ ಜಿಗುಪ್ಸೆ ಹೊಂದಿರುತ್ತಾಳೆ. ಆದರು ಸಹಿತ ೧ನೇ ಎದುರುದಾರನು ತನ್ನ ಸ್ವಭಾವ ಮತ್ತು ನಡವಳಿಕೆಯಲ್ಲಿ ಯಾವುದೇ ರೀತಿಯ ಬದಲಾವಣೆ ಮಾಡಿಕೊಳ್ಳಲಿಲ್ಲ. ೨ನೇ ಎದುರುದಾರಳು ಅರ್ಜಿದಾರಳ ಮದುವೆಯ ಪೋಟೊ ಅಲ್ಬಂ ಸುಟ್ಟಿರುತ್ತಾಳೆ. ಇಷ್ಟೆಲ್ಲಾ ತೊಂದರೆ ಇದ್ದರು ಅರ್ಜಿದಾರಳು ೧ನೇ ಎದುರುದಾರನೊಂದಿಗೆ ಬಾಳ್ವೆ ಮಾಡಿರುತ್ತಾಳೆ.

೪. ೧ನೇ ಎದುರುದಾರನು ಆರ್ಥಿಕವಾಗಿ ಒಳ್ಳೆಯ ಸ್ಥಿತಿಯಲ್ಲಿರುತ್ತಾನೆ. ಆತ ಗಜೇಂದ್ರಗಡದಲ್ಲಿ ಸ್ವಂತ ಗ್ಯಾರೇಜ್ ನಡೆಸುತ್ತಾನೆ. ಅಲ್ಲದೆ ಮನೆಯ ಮುಂದೆ ಕಟ್ಟಿಗೆ ವ್ಯಾಪಾರ ಮಾಡುತ್ತಾನೆ. ಇದರಿಂದ ದಿನಾಲು ರೂ ೨೦೦೦/- ಆದಾಯ ಗಳಿಸುತ್ತಾನೆ. ಆದರೆ ಇತ್ತಿಚೇಗೆ ೧ನೇ ಎದುರುದಾರನು ಸದ್ರಿ ಆಸ್ತಿಗಳಲ್ಲಿ ಅರ್ಜಿದಾರಳಿಗೆ ಏನು ಕೊಡಬಾರದೆಂಬ ಕೆಟ್ಟ ಉದ್ದೇಶದಿಂದ ೨ನೇ ಎದುರುದಾರಳ ಹೆಸರಿನಲ್ಲಿ ಸದ್ರಿ ಆಸ್ತಿಗಳನ್ನು ವರ್ಗಾಯಿಸಿರುತ್ತಾನೆ. ೨ನೇ ಎದುರುದಾರಳು ಅರ್ಜಿದಾರಳಿಗೆ ತೊಂದರೆ ಕೊಡುವ ಉದ್ದೇಶದಿಂದ ಅವಳ ಮೇಲೆ ಗಜೇಂದ್ರಗಡದ ಮಹಿಳಾ ಸಹಾಯವಾಣಿ ಸಾಂತ್ವನ ಕೇಂದ್ರಕ್ಕೆ ದೂರು ಸಲ್ಲಿಸಿರುತ್ತಾರೆ. ಈ ಅರ್ಜಿಯೊಂದಿಗೆ ಅರ್ಜಿದಾರಳು ಮದುವೆಯ ಆಮಂತ್ರಣ ಪತ್ರಿಕೆ, ಮಹಿಳಾ ಸಾಂತ್ವನ ಸಹಾಯವಾಣಿ ಕೇಂದ್ರ, ಗಜೇಂದ್ರಗಡ ಇವರ ನೋಟಿಸಿನ ನಕಲುಗಳನ್ನು ಹಾಜರುಪಡಿಸಿರುತ್ತಾಳೆ.

ಪ್ರಾರ್ಥನೆ

ಆದ್ದರಿಂದ ಅರ್ಜಿದಾರಳು ಮಾನ್ಯ ನ್ಯಾಯಾಲಯಕ್ಕೆ ವಿನಂತಿಸಿಕೊಳ್ಳುವುದೇನೆಂದರೆ, ಎದುರುದಾರರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಿ, ಅರ್ಜಿಯಲ್ಲಿ ಕೋರಿದಂತೆ ಪರಿಹಾರಗಳನ್ನು ಮಂಜೂರು ಮಾಡಬೇಕೆಂದು ವಿನಂತಿಸಿಕೊಳ್ಳುತ್ತಾಳೆ.

ಸ್ಥಳ : ಕೊಪ್ಪಳ ಅರ್ಜಿದಾರಳು

ದಿನಾಂಕ. ೯-೧-೧೪ ಶ್ರೀಮತಿ ಲಕ್ಷ್ಮಿ ಗಂಡ ವೆಂಕಟೇಶ್ ಪಿ.

ಸಾ. ಭಾಗ್ಯನಗರ ಜಿ. ಕೊಪ್ಪಳ

CASE - 3

BETWEEN Smt. Hussainbee W/o Rajasab
Goruvale. Age:- 51 years
Occ:-House hold
R/o Gangavathi ----- Rev-Petitioner AND
Rajasab S/o Daval Sab Goruvale
Age: 54 years
Occ:- Business and Agri
R/o Gangavathi. Respondent.

REVISION PETITION U/s 397 Cr.P.C.

Being aggrieved by the order passed by the learned J.M.F.C. Court Gangavthi in Cri. Misc 02/09 dated 30-08-2012 on his file, this revision petitions is being presented on the following grounds,

FACTS OF THE CASE

Revision-petitioner is the legally wedded wife of the respondent. Their marriage took place about 35 years back and after marriage with revision-petitioner, respondent lead marital life for couple of years, as a result of which revision-petitioners gave birth to two daughters and two sons. Respondent though lead happy married life with revision-petitioner, fewyears later probably from the year 1985 without any reason started ill-treatment her physically and mentally and as such revision-petitioner who was in her youth did coolie work and maintained herself and hers children. Added to this respondent married another lady by name Smt Ashabee and started to live with her. Ornaments which were owned by the revision-petitioner were taken by the respondent. After selling those ornaments and out of the earning from his properties, respondent purchased a tamtam, a splendor motor bike, 8 acres of land in the name of his second wife Smt Ashabee. Respondent was also running a saw mill in a benami name. In doing so his

intention was to see that the revision-petitioner is denied the benefits which she was and is legaly intitled. Unable to sustain the ill treatment rev-petitioner started to live separately with her sons and till to-day she is residing separately.

After her sons were grown up they started living separately. Revision-petitioner who has grown up old by this time is unable to eke out likelihood for herself. Ever since marring with Smt Ashabee respondent has completely neglected to maintain revision-petitioner who is unable to maintain herself and as such she was constrained to seek maintenance by filing Cri. Misc 2/09 on the file Pri Civil Judge and JMFC At Gangavathi. In that case respondent appeared and contested the matter. In order to prove her case revision-petitioner examained herself and another witness, respondent examined himself and another witness for him. After hearing both sides inquiry Court passed impugned order awarding Rs700/- per month as maintenance. The legality of the said order is being challenged in this revision on the following grounds.

GROUNDS FOR REVISION.

1. The impugned order is not only incorrect but it is also illegal and improper.
2. The findings arrived at by the trial Court are not based on the materials on record and the lower Court are not based on the materials on record and the lower Court has founded its order on imagination and conjectures.
3. The rev-petitioner has proved her case to the hilt by her evidence as to her inability to maintain herself and also the fact that she is incapacitated manual labour due to her ill-health and advanced age. These facts have not been siously challenged in cross examination or rebuttal evidence and as such they have to be accepted at there face value.
4 The Enquiry court was right in relying upon her evidence to hold that she is intitled to maintenance and that the respondent is having sufficient means to maintain her. Even otherwise according to law taking a second wife by himself is sufficient to confer right on the first wife to live apart from husband and claim maintenance.
5 The lower Court has committed grave error in fixing the amount of maintenance at Rs 700/- per month on the assumption that the revision-petitioner is drawing old age pension of Rs 500/- P. M but it is wrong. There is no material on record to prove this fact, to the contrary lower Court ought to have noted that the person becomes entitled to old age pension only on the attainment of 65 years of age and not before. Admittedly the revision-petitioner is aged not more than 52 years as she is born out from the records. It appears that the enquiry court assuming that the revision-petitioner is drawing old age pension has awarded maintenance at Rs 700/ - P.M. In this view of the facts and the law the finding in regard to quantum of maintenance is Erroneous and it is liable to beset-aside.

6. It is clear by reading between the lines of the judgment of aenquiry Court that while granting the maintenance at the rate of Rs 700/- per month he has taken into account Rs 500/- as stated above. Otherwise it is clear that there is every reason to presume that the learned trial court would have fixed at least Rs. 3000/-. In thisview of the matter the amount of maintenance granted is quite insufficient and meager.

7. Enquiry coury has failed to note that the respondent has not placed any materials on record to show that the tractor, land etc: which are standing in the name of Smt Ashabee-the tractor, land etc: which are standing in the name of Smt Ashabee-the second wife of the respondent are actually acquired by her out of her own earnings.

8. In these days of high cost of leaving is constantly rising and it is next impossible to manage food and clothing for day to day use with a meager amount of Rs 700 P. P It goes without saying that every person requires medical treatment for one reason or the other due to old age. It is also common knowledge that the costs of treatment and medicines have reached sky high. Therefore the enquiry court ought to have taken these factors into consideration which are absolutely indispensable in fixing the amount of maintenance. Had the enquiry Court taken this into account claimed by the revision-petitioner was not unreasonable, in the back ground of various sources of income of the respondent.

9. The learned Enquiry court has erred in holding that she had not claimed maintenance against her sons. It has lost sight of the provisions of Mohammedan Law in the presence of husband a wife cannot claim maintenance from her children as it is his sole liability to maintain wife and more particularly in this case when the respondent has the luxurious choice of taking a second wife without any rhyme of reason. The principle of Mohammedan Law makes it mandatory for the husband to maintain equality and justice in case he married more than one wife.

10. It is borne out by the record that after marrieing the second wife he has purchased 8 acres of land , one tractor, a one plot, one house in the name of his second wife benami and there is no evidence to show that these properties were purchased for his second wife by her parents whose particulars are not at all onrecord, as to whether they are capable of purchasing that and that to for the daughter who has already being married to well to do person. No witness has been examined from the parents side to prove these factos and as such it was a fit case to draw adverse inference against and respondent and hold that the properties standing in the name of second wife belongs to respondent and the income which it yields ought to have been included in fixing the amount of maintenance.

PRAYERA

Hence it is humbly prayed to allow the revision petition with costs and modify the order directing the respondent to pay Rs 3,000 P.P., In the interest of justice.

Koppal 4th Oct 2012.

ಪ್ರಕರಣದ ಕನ್ನಡ ಸಾರಾಂಶ ರೂಪ– ಸಂಸ್ಕರಣ ಪಿರ್ಯಾದಿ–Cr.P.C 397.

ಮಾನ್ಯ ಜೆ.ಎಮ್.ಎಫ್.ಸಿ ನ್ಯಾಯಾಲಯ, ಗಂಗಾವತಿಯಲ್ಲಿನ ಅಪರಾಧ ಸಂಸ್ಕರಣ ಪ್ರಕರಣ Cri. Misc 02/09 dated 30-08-2012ರ ಆದೇಶ ವಿವರಣೆಯು ಈ ತಳಹದಿಯ ಮೇಲೆ ನೀಡಿದ್ದಾಗಿರುತ್ತದೆ.

ಪ್ರಕರಣದ ವಿವರ–

ಈ ಪ್ರಕರಣದಲ್ಲಿ ಪಿರ್ಯಾದುದಾರಳು ಕಾನೂನುಬದ್ಧವಾಗಿ ಪ್ರತಿವಾದಿಯನ್ನು ಮದುವೆಯಾಗಿರುತ್ತಾಳೆ. ಅವರ ಮದುವೆ ಸುಮಾರು ೩೫ ವರ್ಷಗಳ ಹಿಂದೆ ಜರುಗಿರುತ್ತದೆ. ತದನಂತರ ಕೆಲವು ವರ್ಷಗಳ ಕಾಲ ಆ ಜೋಡಿಯ ಸಂಸಾರವು ಸುಖಮಯವಾಗಿ ಸಾಗಿತ್ತು. ಅದರ ಪರಿಣಾಮ ಅವರಿಗೆ ಇಬ್ಬರು ಗಂಡು ಮಕ್ಕಳು ಇಬ್ಬರು ಹೆಣ್ಣುಮಕ್ಕಳು ಇರುತ್ತಾರೆ. ಕಾಲಾನಂತರ ಪ್ರತಿವಾದಿಯು ಶ್ರೀಮತಿ ಆಶಾಬಾಯಿ ಎಂಬ ಮಹಿಳೆಯನ್ನು ಮದುವೆಯಾಗುತ್ತಾನೆ. ಆನಂತರ ಪಿರ್ಯಾದುದಾರಳ ಎಲ್ಲಾ ಆಭರಣಗಳನ್ನು ಹಾಗೂ ತನ್ನ ಆಸ್ತಿಯನ್ನು ತೆಗೆದುಕೊಂಡು ಅವುಗಳನ್ನು ಮಾರಾಟ ಮಾಡಿ, ತನ್ನ ಎರಡನೆಯ ಹೆಂಡತಿ ಆಶಾಬಾಯಿ ಹೆಸರಲ್ಲಿ ಟಮ್‌ಟಮ್ ಗಾಡಿ, ಸ್ಪ್ಲೆಂಡರ್ ಬೈಕ್, ೮ ಎಕರೆ ಜಮೀನನ್ನು ಖರೀದಿಸುತ್ತಾನೆ. ಪ್ರತಿವಾದಿಯು ಬೇನಾಮಿ ಹೆಸರಿನಲ್ಲಿ ಅಕ್ಕಿ ಮಿಲ್‌ಅನ್ನು ಕೂಡಾ ನಡೆಸುತ್ತಿದ್ದಾನೆ. ಇದನ್ನೆಲ್ಲಾ ಸಹಿಸದೆ ಪಿರ್ಯಾದುದಾರಳು ತನ್ನ ಮಕ್ಕಳೊಂದಿಗೆ ಬೇರೆ ಕಡೆ ವಾಸವಾಗಿದ್ದಾಳೆ.

ಕಾಲಾನಂತರದಲ್ಲಿ ಮಕ್ಕಳು ಬೆಳೆದು ತಮ್ಮ ಸಂಸಾರದೊಂದಿಗೆ ಬೇರೆಡೆ ನೆಲೆಸಲು ಪ್ರಾರಂಭಿಸಿದರು, ಪಿರ್ಯಾದುದಾರಳು ವಯಸ್ಸಾದಂತೆ ತನ್ನಷ್ಟಕ್ಕೆ ತಾನು ದುಡಿದು ಜೀವನ ಸಾಗಿಸುವುದು ಕಷ್ಟವಾಗುತ್ತದೆ. ಇತ್ತ ಕಡೆ ಪ್ರತಿವಾದಿಯು ಈಕೆಯನ್ನು ಸಂಪೂರ್ಣವಾಗಿ ಕಡೆಗಣಿಸುತ್ತಾನೆ. ಜೀವನ ನಿರ್ವಹಣೆ ಅಸಾಧ್ಯವಾಗಿ ಪಿರ್ಯಾದುದಾರಳು ತನ್ನ ಜೀವನಾಂಶಕ್ಕಾಗಿ ಜೆ. ಎಮ್. ಎಫ್. ಸಿ ಗಂಗಾವತಿಯವರಲ್ಲಿ ಪ್ರಕರಣ ದಾಖಲಿಸುತ್ತಿರುತ್ತಾರೆ. ವಾದ ಪ್ರತಿವಾದಗಳನ್ನು ಆಲಿಸಿದ ಮಾನ್ಯ ನ್ಯಾಯಾಲಯವು ಪಿರ್ಯಾದುದಾರಳಿಗೆ ಜೀವನಾಂಶಕ್ಕಾಗಿ ಪ್ರತಿ ತಿಂಗಳು ರೂ. ೭೦೦ ಕೊಡುವಂತೆ ಆದೇಶಿಸಿರುತ್ತದೆ.

ಇದನ್ನು ಒಪ್ಪದ ಹುಸೇನ್‌ಬಿಯವರು ಜಿಲ್ಲಾ ನ್ಯಾಯಾಲಯದಲ್ಲಿ ಮೇಲ್ ಮನವಿಯನ್ನು ಸಲ್ಲಿಸಿರುತ್ತಾರೆ.

ಪ್ರಕರಣ–೪

ಇವರಿಗೆ,

ಮಾನ್ಯ ಪಿ.ಎಸ್.ಐ. ಸಾಹೇಬರು
ತಾವರಗೇರಾ ಪೊಲೀಸ್ ಠಾಣೆ ರವರಿಗೆ,

ತಾವರಗೇರಾ
ದಿ.೬–೫–೨೦೧೨

ನಾನು ಶಾಂತಮ್ಮ ತಂದೆ ಹನುಮಂತ ದೇವದಾಸಿ, ವಯಸ್ಸು ೪೫ ವರ್ಷ, ಜಾ: ಪರಿಶಿಷ್ಟ ಜಾತಿ, ಉ : ಕೂಲಿ ಕೆಲಸ, ಸಾ : ವೀರಾಪುರ, ಸಿಂಧನೂರು ತಾಲ್ಲೂಕು ಈ ಮೂಲಕ ಸಲ್ಲಿಸುವ ಫಿರ್ಯಾದೆ ಏನೆಂದರೆ,

ನನಗೆ ೪ ಜನ ಮಕ್ಕಳಿದ್ದು ಆ ಪೈಕಿ ಹಿರಿಯ ಮಗಳಾದ ರೇಣುಕಮ್ಮ ವಯಸ್ಸು ೨೬ ವರ್ಷ, ಈಕೆಯನ್ನು ೧೦ ವರ್ಷಗಳ ಹಿಂದೆ ಕುಷ್ಟಗಿ ತಾಲ್ಲೂಕಿನ ಮೇಣೆದಾಳ ಗ್ರಾಮದ ಮರಿಯಪ್ಪ ತಂದೆ ಮರಿಸೋಮಪ್ಪ ಪೂಜಾರ ಈತನೊಂದಿಗೆ ಮದುವೆ ಮಾಡಿಕೊಟ್ಟಿದ್ದೆನು. ಅವರಿಗೆ (೧) ಮರಿಸೋಮಪ್ಪ ೮ ವರ್ಷ, (೨) ಅಶ್ವಿನಿ ೫ ವರ್ಷ ಹಾಗೂ (೩) ಪುನೀತ ೪ ವರ್ಷ ಹೀಗೆ ಮೂವರು ಮಕ್ಕಳಿರುತ್ತಾರೆ. ಈಗ ೨ ವರ್ಷಗಳಿಂದ ನನ್ನ ಮಗಳು ತವರು ಮನೆಗೆ ಬಂದಾಗ, ನನ್ನ ಅಳಿಯನಾದ ಮರಿಯಪ್ಪನು ಅವಳಿಗೆ ಕುಡಿದು ಬಂದು ಹೊಡೆ ಬಡೆ ಮಾಡುತ್ತಿದ್ದದ್ದನ್ನು, ಅಲ್ಲದೇ ಗಂಡನ ತಾಯಿಯಾದ ಮರಿಯಮ್ಮ ಹಾಗೂ ಗಂಡನ ಅಕ್ಕ ಮರಿಯಮ್ಮ, ಗಂಡ ಪುಂಡಲೀಕ ತಾಳಕೇರಿ ಇವರೂ ಸಹಾ ಮಾನಸಿಕವಾಗಿ ಹಾಗೂ ದೈಹಿಕವಾಗಿ ಕಿರುಕುಳ ಕೊಡುತ್ತಿರುವುದಾಗಿ ಹೇಳಿದ್ದಳು. ನಾನು ಅವಳಿಗೆ ಸುಧಾರಿಕೊಂಡು ಹೋಗಲು ತಿಳಿಸಿ ಕಳುಹಿಸಿದ್ದೆನು. ಆದಾಗ್ಯೂ ಆಗಾಗ ತವರುಮನೆಗೆ ಬಂದಾಗ ನನ್ನ ಮಗಳು "ನನ್ನ ಗಂಡ ಹಾಗೂ ಅವನ ತಾಯಿ ಮತ್ತು ಅಕ್ಕ ಮಾನಸಿಕವಾಗಿ ಹಾಗೂ ದೈಹಿಕವಾಗಿ ಬಹಳ ಹಿಂಸೆ ಕೊಡುತ್ತಾರೆ. ನನಗೆ ಸಾಕಾಗಿ ಹೋಗಿದೆ, ಹೀಗಾದರೆ ಆದರೆ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ." ಅಂತಾ ಹೇಳುತ್ತಿದ್ದಳು. ನಾನು ನನ್ನ ಮಗಳಿಗೆ "ಈಗ ನೀನು ಹೊಂದಿಕೊಂಡು ಹೋಗು, ನಿಮಗೆ ಮೂವರು ಮಕ್ಕಳಿರುತ್ತಾರೆ ಮುಂದೆ ಸರಿ ಹೋಗುತ್ತದೆ" ಅಂತಾ ಬುದ್ಧಿ ಹೇಳಿ ಕಳುಹಿಸಿದ್ದೆನು.

ನಿನ್ನೆ ದಿನಾಂಕ ೫–೫–೨೦೧೨ರಂದು ಶನಿವಾರ ದಿವಸ ಸಂಜೆ ೭–೩೦ ಗಂಟೆ ಸುಮಾರಿಗೆ ನನ್ನ ಪರಿಚಯದ ರಾಮಪ್ಪ ತಂದೆ ಹುಲಗಪ್ಪ ಮನ್ನಾಪುರ ಸಾ: ಮೇಣೆದಾಳ ಇವನು ನನಗೆ ಫೋನ್ ಮಾಡಿ ರೇಣುಕಮ್ಮಳಿಗೆ ಇಂದು ಸಂಜೆ ೪–೩೦ ಗಂಟೆಗೆ ಬೆಂಕಿ ಹತ್ತಿ ಸುಟ್ಟ ಗಾಯಗಳಾಗಿದ್ದು ತಾವರಗೇರಾ ಆಸ್ಪತ್ರೆಗೆ ದಾಖಲು ಮಾಡಿದ್ದಾರಂತೆ" ಅಂತಾ ತಿಳಿಸಿದರು. ನಂತರ ಬಳ್ಳಾರಿ ಆಸ್ಪತ್ರೆಗೆ ದಾಖಲಿಸಿರುವುದಾಗಿ ತಿಳಿದು ಬಂತು. ಕಾರಣ ನಾನು ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ಹೋಗಿ ನೋಡಲಾಗಿ ನನ್ನ ಮಗಳಿಗೆ ತಲೆಯ ಕೂದಲನ್ನು ಬಿಟ್ಟು ದೇಹದ ಉಳಿದೆಲ್ಲಾ ಕಡೆಗೆ ಸುಟ್ಟ ಗಾಯಗಳಾಗಿದ್ದವು. ನನ್ನ ಮಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಳು. ನಂತರ ನನ್ನ ಮಗಳು ವಿಮ್ಸ್ ಆಸ್ಪತ್ರೆ ಬಳ್ಳಾರಿಯಲ್ಲಿ ಚಿಕಿತ್ಸೆ ಪಡೆಯುತ್ತಾ ಇಂದು ದಿನಾಂಕ ೬–೫–೨೦೧೨ರಂದು ರವಿವಾರ ದಿವಸ ಬೆಳಗಿನ ಜಾವ ೫–೩೦ಗಂಟೆಗೆ ಮೃತಪಟ್ಟಳು. ನಾನು ವಿಮ್ಸ್ ಆಸ್ಪತ್ರೆ ಬಳ್ಳಾರಿಯಿಂದ ಈಗ ತಡವಾಗಿ ಬಂದು ನನ್ನ ಫಿರ್ಯಾದಿಯನ್ನು ನೀಡಿರುತ್ತೇನೆ.

ನನ್ನ ಮಗಳಾದ ರೇಣುಕಮ್ಮ ಗಂಡ ಮರಿಯಪ್ಪ ಪೂಜಾರ, ವಯಸ್ಸು ೨೬ ವರ್ಷ. ಸಾ: ಮೇಣೆದಾಳ ಇವಳಿಗೆ ಆಕೆಯ ಗಂಡ ಮರಿಯಪ್ಪ ಪೂಜಾರ ಇವನು ಮಾನಸಿಕವಾಗಿ ಹಾಗೂ ದೈಹಿಕವಾಗಿ ಕಿರುಕುಳ ನೀಡಿದ್ದರಿಂದ ಅವಳು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು ಇರುತ್ತದೆ. ಕಾರಣ (೧) ಮರಿಯಪ್ಪ ತಂದೆ ಮರಿಸೋಮಪ್ಪ ಪೂಜಾರ (೨) ಮರಿಯಮ್ಮ ಗಂಡ ಮರಿಸೋಮಪ್ಪ ಹಾಗೂ (೩) ಮರಿಯಮ್ಮ ಗಂಡ ಪುಂಡಲೀಕ ತಾಳಕೇರಿ ಎಲ್ಲರೂ ಸಾ: ಮೇಣೆದಾಳ ಇವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಲು ವಿನಂತಿ.

ತಮ್ಮ ವಿಶ್ವಾಸಿ
(ಶಾಂತಮ್ಮ ತಂದೆ ಹನುಮಂತ ದೇವದಾಸಿ)
ಸಾ: ವೀರಾಪುರ, ತಾ: ಸಿಂಧನೂರು

ಪ್ರಕರಣ–೫

ಇವರಿಗೆ,

ಮಾನ್ಯ ಪಿ.ಎಸ್.ಐ ಸಾಹೇಬರು
ಮುನಿರಭಾದ ಪೊಲೀಸ ಠಾಣೆ

ಮಾನ್ಯರೇ,

ಈ ಕೆಳಗೆ ಸಹಿ ಮಾಡಿದ ನಾನು ನಿಂಗಪ್ಪ ತಂ/ಫಕೀರಪ್ಪ ಕೋಣಿ ವಯಸ್ಸು ೬೫ ವರ್ಷ ಜಾತಿ ಗಾಣಿಗೇರ ಉದ್ಯೋಗ ಒಕ್ಕಲುತನ ಸಾಕೀನ ಗೌರಿ ಅಂಗಳ ಕೊಪ್ಪಳ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನನಗೆ ೧) ಯಲ್ಲಮ್ಮ ೨) ಹನುಮವ್ವ ೩) ಶಾಂತಮ್ಮ ೪) ಹನುಮಂತ ೫) ಗವಿಸಿದ್ದಪ್ಪ ಮತ್ತು ೬) ಮಂಜುನಾಥ ಹೀಗೆ ಮೂರು ಜನ ಹೆಣ್ಣು ಮೂರು ಜನ ಗಂಡು ಮಕ್ಕಳು ಇರುತ್ತಾರೆ. ನನ್ನ ಎರಡನೆಯ ಮಗಳು ಹನುಮವ್ವಳು ೧ ೧/೨ ವರ್ಷದ ಹಿಂದೆ ಮೃತಪಟ್ಟಿರುತ್ತಾಳೆ. ನನ್ನ ಮೊದಲನೆಯ ಮಗಳು ಯಲ್ಲಮ್ಮ ಗದಗಿನ ಮಾಗುಂಡಪ್ಪ ಇವರಿಗೆ ಕೊಟ್ಟಿರುತ್ತೇವೆ. ಮೂರನೆಯ ಮಗಳು ಶಾಂತಮ್ಮಳನ್ನು ಹುಲಿಗಿ ಗ್ರಾಮದ ಶಂಕ್ರಪ್ಪ ತಂ/ಮಂಗಳೇಶಪ್ಪ ಕೋರಿ ಯವರಿಗೆ ಎರಡನೆಯ ಸಂಬಂಧ ಮದುವೆ ಮಾಡಿಕೊಟ್ಟಿರುತ್ತೇವೆ. ಅವರ ಮದುವೆಯಾಗಿ ಸುಮಾರು ೨ ವರ್ಷಗಳಾಗಿರುತ್ತವೆ. ಈಗ ಅವರಿಗೆ ಒಂದು ಗಂಡು ಮಗು ಆಗಿರುತ್ತದೆ.

ನನ್ನ ಮಗಳು ಶಾಂತಮ್ಮಳನ್ನು ಗಂಡ ಶಂಕ್ರಪ್ಪ ಮತ್ತು ಅತ್ತೆ ನೀಲಮ್ಮ ಇಬ್ಬರು ಸುಮಾರು ೫ ಮತ್ತು ೬ ತಿಂಗಳು ಚೆನ್ನಾಗಿ ನೋಡಿಕೊಂಡರು. ನಂತರ ನಮ್ಮ ಅಳಿಯ ಶಂಕ್ರಪ್ಪನ ಮೊದಲನೆಯ ಹೆಂಡತಿ ಪರಿಹಾರ ಕೇಳಿದ್ದು ನನ್ನ ಅಳಿಯ ನನ್ನ ಮಗಳಿಗೆ ಮನೆತನದ ವಿಷಯದಲ್ಲಿ ಮಾನಸಿಕವಾಗಿ ಹಾಗೂ ದೈಹಿಕವಾಗಿ ಕಿರುಕುಳ ಕೊಡಲು ಪ್ರಾರಂಭಿಸಿದನು. ನಮ್ಮ ಮಗಳು ಆಗ ನಮ್ಮ ಮನೆಗೆ ಬಂದಾಗ, ನನಗೆ ಮತ್ತು ನನ್ನ ಹೆಂಡತಿಗೆ ತನ್ನ ಗಂಡ ಮತ್ತು ಅತ್ತೆ ಕಿರುಕುಳ ಕೊಡುತ್ತಿರುವ ಬಗ್ಗೆ ಹೇಳುತ್ತಿದ್ದಳು. ನಾವು ಗಂಡ ಹೆಂಡಿರ ಜಗಳ ಇದ್ದೆ ಇರುತ್ತದೆ ಅಂತ ನನ್ನ ಮಗಳಿಗೆ ಸಮಾಧಾನ ಮಾಡಿ ಕಳುಹಿಸುತ್ತಿದ್ದೆವು.

ಹೀಗೆ ಸುಮಾರು ೧೦ ದಿವಸದ ಹಿಂದೆ ನಮ್ಮ ಮಗಳು ಶಾಂತಮ್ಮ ಹುಟ್ಟಿದ ಕುನ್ನಿ ನೋಡಬೇಕೆಂದು ನಮ್ಮ ಮನೆಗೆ ಕರೆದುಕೊಂಡು ಹೋದೆವು. ಆಗ ನಮ್ಮ ಅಳಿಯ ಮತ್ತು ಅವರ ತಾಯಿ ಮೈಯಲ್ಲಿ ಆರಾಮ ಇಲ್ಲವೆಂದು ಹೇಳಿ ಕರೆದುಕೊಂಡು ಬಂದು ಬಿಟ್ಟು ಹೋಗಲು ಹೇಳಿದರಿಂದ ೮ ದಿವಸದ ಹಿಂದೆ ನನ್ನ ಹೆಂಡತಿ ಶಂಕ್ರಮ್ಮ ನನ್ನ ಮಗಳನ್ನು ಗಂಡನ ಮನೆಗೆ ಬಿಟ್ಟು ಹೋಗಿರುತ್ತಾಳೆ. ಆಗ ಕೂಡ ನಮ್ಮ ಮಗಳಿಗೆ ಗಂಡ ಅತ್ತೆ ಕಿರುಕುಳ ಕೊಡುತ್ತಾರೆ ಎಂದು ಹೇಳಿದ್ದಳು. ಆಗ ನನ್ನ ಮಗಳಿಗೆ ನೋಡಲು ಸೊರಗಿದ್ದಳು.

ಇಂದು ದಿನಾಂಕ ೨೧.೦೬.೨೦೧೨ ರಂದು ಮಧ್ಯಾಹ್ನ ೧೨:೩೦ಕ್ಕೆ ಸುಮಾರಿಗೆ ಹುಲಿಗೆ ಗ್ರಾಮದಿಂದ ನನ್ನ ಮಗಳು ಗಂಡ ಶಂಕ್ರಪ್ಪ ನಮಗೆ ಫೋನ್‌ಮಾಡಿ ನಮ್ಮ ಮಗಳು ಶಾಂತಮ್ಮ ಈಕೆಯು ಮನೆಯಲ್ಲಿ ಉರುಲು ಹಾಕಿಕೊಂಡು ಸತ್ತಿರುತ್ತಾಳೆ ಎಂದು ತಿಳಿಸಿದನು. ನಾನು ನನ್ನ ಹೆಂಡತಿ ಮತ್ತು ಮಕ್ಕಳು ನಮ್ಮ ಸಂಬಂಧಿಕರನ್ನು ಕರೆದುಕೊಂಡು ಬಂದು ನೋಡಲು ನಮ್ಮ ಮಗಳು ಗಂಡನ ಮನೆಯಲ್ಲಿ ಉರುಲು ಹಾಕಿಕೊಂಡು ಮೃತಪಟ್ಟಿದು ನಿಜವಿರುತ್ತದೆ.

ನನ್ನ ಮಗಳು ಶಾಂತಮ್ಮಳನ್ನು ಗಂಡ ಮತ್ತು ಅತ್ತೆ ಇಬ್ಬರು ಕೂಡಿಕೊಂಡು ಸುಮಾರು ೧೨ ವರ್ಷದಿಂದ ಮಾನಸಿಕವಾಗಿ ದೈಹಿಕವಾಗಿ ಚಿತ್ರಹಿಂಸೆ ಮಾಡಿ ಕಿರುಕುಳ ನೀಡಿರುವುದರಿಂದ, ಇವರ ಕಿರುಕುಳ ತಾಳಲಾರದೆ ಉರುಲು ಹಾಕುಕೊಂಡು ಮೃತಪಟ್ಟಿರುತ್ತಾಳೆ. ಕಾರಣ ಇವರ ವಿರುದ್ಧ ಕಾನೂನು ಕ್ರಮ ಜರಗಿಸಲು ವಿನಂತಿ.

ನಿಂಗಪ್ಪ.

ಪ್ರಕರಣ– ೬

ಇವರಿಗೆ,

ಮಾನ್ಯ ಪಿ.ಎಸ್.ಐ. ಸಾಹೇಬರು

ತಾವರಗೇರಾ ಪೊಲೀಸ್ ಠಾಣೆ

ಮಾನ್ಯರೇ,

ವಿಷಯ : ನನ್ನ ಮಗಳ ಕೊಲೆ ಮಾಡಿದವರ ಮೇಲೆ ಕ್ರಮ ಜರುಗಿಸುವ ಕುರಿತು

ಮೆಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಾನು ಬಸಪ್ಪ ತಂದೆ ಅಮರಪ್ಪ ನಾಗಪ್ಪ ವಯಸ್ಸು ೮೦ ವರ್ಷ ಜಾ: ಲಿಂಗಾಯತ ಉ: ಒಕ್ಕಲುತನ ಸಾ: ತುಂಬ ಹುನುಗುಂದ ತಾಲ್ಲೂಕು. ಈ ಮೂಲಕ ಸಲ್ಲಿಸುವ ಫಿರ್ಯಾದಿ ಏನೆಂದರೆ ನನಗೆ ೫ ಜನ ಗಂಡು ಮಕ್ಕಳು ೩ ಜನ ಹೆಣ್ಣು ಮಕ್ಕಳು ಇರುತ್ತಾರೆ. ಎಲ್ಲಾ ಮಕ್ಕಳ ಮದುವೆಯಾಗಿದ್ದು ಹೆಣ್ಣುಮಕ್ಕಳ ಪೈಕಿ ಹಿರಿಯವಳಾದ ಅಮರಮ್ಮಳನ್ನು ಕುಷ್ಟಗಿ ತಾಲ್ಲೂಕು ಕೋಡ್ಲೂರು ಗ್ರಾಮದ ಮಲಕಾಜಗೌಡ ತಂದೆ ಬಸಪ್ಪ ಸೊಲ್ಲಾಪುರ ಇವರಿಗೆ ಕೊಟ್ಟು ಮದುವೆ ಮಾಡಿರುತ್ತೇನೆ. ಅದೇ ಗ್ರಾಮದ ಷಣ್ಮುಖಪ್ಪ ತಂದೆ ವೀರಭದ್ರಪ್ಪ ಕರಡಕಲ್ ಇವನಿಗೆ ನನ್ನ ಕಿರಿಯ ಮಗಳು ನಿಂಬಕ್ಕ ಇವಳನ್ನು ಈಗ ೨೨ ವರ್ಷಗಳ

ಹಿಂದೆ ಮದುವೆ ಮಾಡಿಕೊಟ್ಟದ್ದೆನು. ನನ್ನ ಮಗಳು ನಿಂಬಕ್ಕಳನ್ನು ಮದುವೆ ಮಾಡಿ ಕೊಟ್ಟಾಗಿನಿಂದ ಆಕೆಯ ಗಂಡನು ಆಕೆಗೆ ದಿನವೂ ಕುಡಿದು ಬಂದು ಹೊಡೆಬಡೆ ಮಾಡುತ್ತಿದ್ದುದಾಗಿ ತವರು ಮನೆಗೆ ಬಂದಾಗಲೆಲ್ಲಾ ನನ್ನ ಮಗಳು ನನಗೆ ಹಾಗೂ ನನ್ನ ಹೆಂಡತಿ ಸಂಗಮ್ಮಳಿಗೆ ಹೇಳುತ್ತಿದ್ದಳು. ಆದಾಗ್ಯೂ ನಾವು ಆಕೆಗೆ ಗಂಡನೊಂದಿಗೆ ಹಾಗೂ ಅವರ ಮನೆಯವರೊಂದಿಗೆ ಹೊಂದಿ ಕೊಂಡಿರುವಂತೆ ಬುದ್ಧಿ ಹೇಳಿ ಪುನಃ ಗಂಡನ ಮನೆಗೆ ಕಳುಹಿಸುತ್ತಿದ್ದೆವು. ಅವರಿಬ್ಬರಿಗೂ ಮೂವರು ಗಂಡು ಮಕ್ಕಳಿರುತ್ತಾರೆ. ನನ್ನ ಅಳಿಯ ಷಣ್ಮುಖಪ್ಪ ಇವನು ಕುಡಿಯುವ ಚಟ ಹೊಂದಿದ್ದು ಆಗಾಗ ನಾವು ಕೊಟ್ಟ ಬಂಗಾರದ ಆಭರಣಗಳನ್ನು ಹಾಗೂ ದುಡ್ಡನ್ನು ನನ್ನ ಮಗಳಿಂದ ಕಸಿದುಕೊಂಡು ಹೋಗಿ ಕುಡಿದು ಬಂದು ನನ್ನ ಮಗಳಿಗೆ ಹಿಂಸೆ ಕೊಡುತ್ತಿದ್ದನು. ಅಲ್ಲದೇ ಯಾವುದೇ ಕೆಲಸ ಮಾಡದೆ, ದುಡಿದು ತರದೆ, ಕುಡಿದು ಅಡ್ಡಾಡುತ್ತಿದ್ದನು. ಕಾರಣ ಇದೆ ರೀತಿ ಮುಂದುವರೆದಲ್ಲಿ ನನ್ನ ಮಗಳು ಬೀದಿ ಪಾಲಾಗುತ್ತಾಳೆಂದು ತಿಳಿದು ಇವರ ಪಾಲಿಗೆ ಬರುತ್ತಿದ್ದ ಹೊಲ ೮ ಎಕರೆ ಹೊಲದ ಪೈಕಿ ೨ ಎಕರೆ ಹೊಲವನ್ನು ನನ್ನ ಮಗಳ ಹೆಸರಿನಲ್ಲಿ ಉಳಿದ ೬ ಎಕರೆ ಹೊಲವನ್ನು ಮೂರು ಮಕ್ಕಳ ಹೆಸರಿನಲ್ಲಿ ನೊಂದಣಿ ಮಾಡಿದ್ದೆವು. ನನ್ನ ಮಗಳು ತನ್ನ ಪಾಲಿಗೆ ಬಂದ ಹೊಲದಲ್ಲಿ ದುಡಿದು ತನ್ನ ಮನೆಯನ್ನು ನಡೆಸಿಕೊಂಡು ತನ್ನ ಮಕ್ಕಳೊಂದಿಗೆ ಇದ್ದಳು. ನನ್ನ ಮಗಳ ಕಿರಿಯ ಮಗನಾದ ಚಂದ್ರಶೇಖರ ವಯಸ್ಸು ೬ ಇವನನ್ನು ಲಾಲನೆ ಪೋಷಣೆಗಾಗಿ ನಮ್ಮಲ್ಲಿ ಇಟ್ಟುಕೊಂಡಿರುತ್ತೇವೆ. ಈ ಹಿಂದೆ ದೀಪಾವಳಿ ಹಬ್ಬಕ್ಕೆ ತವರು ಮನೆಗೆ ಬಂದಾಗ ನನ್ನ ಮಗಳು ತನ್ನ ಗಂಡ ಹಾಗೂ ಹಿರಿಯ ಮಗ ಅಮರೇಶ ಇವರಿಬ್ಬರೂ ಹೊಲದ ವಿಷಯವಾಗಿ ತನಗೆ ಕಿರಿಕಿರಿ ಕೊಡುತ್ತಿರುವರು, ನಾನು ಈ ಹಿಂದೆ ಹೊಲದಲ್ಲಿ ಬೆಳೆದ ಕಾಳು ಕಡಿಯನ್ನು ಮಾರಿಕೊಂಡು ತಿಂದಿರುತ್ತಾರೆ ಎಂದು ಹೇಳಿದ್ದಳು. ಕಾರಣ ನಾನು ನನ್ನ ಮಗಳಿಗೆ ಅವರ ಬಗ್ಗೆ ತಲೆ ಕೆಡಿಸಿಕೊಳ್ಳಬೇಡ ನಿನ್ನ ಪಾಡಿಗೆ ನೀನು ದುಡಿದು ತಿನ್ನು ಅಂತಾ ಹೇಳಿ ಕಳುಹಿಸಿದ್ದು, ಅವಳು ಗಂಡನ ಮನೆಗೆ ಹೋಗುವಾಗ ಅವಳಿಗೆ ಒಂದು ಮೊಬೈಲ್ ಕೊಡಿಸಿದ್ದೆವು. ಅದರ ನಂಬರ ೮೧೪೭೨೯೧೫೧೩ ಅಂತ ಇರುತ್ತದೆ. ಈ ಮೊಬೈಲ್‌ಗೆ ನಾನು ದಿನವೂ ಫೋನ್ ಮಾಡಿ ಮಾತನಾಡುತ್ತಿದ್ದೆನು. ನನ್ನ ಗಂಡು ಮಕ್ಕಳ ಪೈಕಿ ಸುರೇಶ ಇವನೂ ಕೂಡ ಸದಾ ನನ್ನ ಮಗಳಿಗೆ ಫೋನ್ ಮಾಡಿ ಮಾತನಾಡುತ್ತಿದ್ದನು, ಹಾಗೂ ಅವಳ ಕ್ಷೇಮದ ಬಗ್ಗೆ ವಿಚಾರ ಮಾಡುತ್ತಿದ್ದನು.

ನಿನ್ನೆ ದಿನಾಂಕ ೨೭-೧೧-೧೩ ರಂದು ಸಂಜೆ ೧-೩೦ ಗಂಟೆ ಸುಮಾರಿಗೆ ನನ್ನ ಹಿರಿಯ ಮಗಳಾದ ಅಮರಮ್ಮ ಇವಳ ಮಗ ಸುನೀಲಕುಮಾರ ಇವನು ಕೂಡ್ಲೂರದಿಂದ ಫೋನ್ ಮಾಡಿ ನಿಂಬವ್ವ ಸಣ್ಣವ್ವ ಇಂದು ಬೆಳಿಗ್ಗೆ ೬-೦೦ ಗಂಟೆಗೆ ಹೊಲಕ್ಕೆ ಹೋದವಳು ಮನೆಗೆ ಬಂದಿರುವುದಿಲ್ಲ. ಹುಡುಕಾಡಿದರೆ ಹೊಲದಲ್ಲಿ ಇರುವುದಿಲ್ಲ ಎಂದು ತಿಳಿಸಿದನು. ನಾನು ಆಕೆಯ ಮೊಬೈಲ್‌ಗೆ ಸಾಕಷ್ಟು ಸಾರಿ ಫೋನ್ ಮಾಡಿದ್ದು ರಿಂಗ್ ಆಗಿದ್ದು, ಆದರೆ ಎತ್ತಿ ಮಾತನಾಡಲಿಲ್ಲ. ನನಗೆ ಗಾಬರಿಯಾಗಿ ಕೂಡಲೇ ನನ್ನ ಹೆಂಡತಿ ಹಾಗೂ ನನ್ನ ಹಿರಿಯ ಮಗ ಆದಪ್ಪ ಇವರನ್ನು ಕರೆದುಕೊಂಡು ಕೂಡ್ಲೂರಿಗೆ ಬಂದಿದ್ದು ನನ್ನ ಮಗಳು ಅಮರಮ್ಮ ಇವಳು ಹಾಗೂ ಎಲ್ಲರೂ ಸೇರಿ

ಹೊಲದ ಕಡೆಗೆ ಹೋಗಿ ಇಡೀ ರಾತ್ರಿ ಎಲ್ಲಾ ಕಡೆಗೂ ಹುಡುಕಾಡಿದ್ದು ಎಲ್ಲಿಯೂ ನನ್ನ ಮಗಳು ಪತ್ತೆಯಾಗದೆ ಇದ್ದುದು ಇರುತ್ತದೆ.

ನಂತರ ಇಂದು ದಿನಾಂಕ ೨೮-೧೧-೧೩ ರಂದು ಬೆಳಿಗ್ಗೆ ಪುನಃ ಹುಡುಕಾಡುತ್ತಿರುವಾಗ ೮.೦೦ ಗಂಟೆ ಸುಮಾರಿಗೆ ಕೂಡ್ಲೂರು ಸೀಮಾದ ಕಾಳಮ್ಮ ನಂದವಾಡಗಿ ಮಠ ಸಾ. ಮುದೇನೂರು ಇವರ ಸೂರ್ಯಕಾಂತಿ ಬೆಳೆದಿರುವ ಹೊಲದಲ್ಲಿ ನನ್ನ ಮಗಳ ಮೃತದೇಹ ಪತ್ತೆಯಾಗಿದ್ದು ಇದೆ. ನೋಡಿದರೆ ಆಕೆಯ ಕುತ್ತಿಗೆಗೆ ಆಕೆ ಉಟ್ಟುಕೊಂಡ ಸೀರೆಯ ಸೆರಗಿನಿಂದ ಉರುಲು ಹಾಕಿ ಕೊಲೆ ಮಾಡಲಾಗಿತ್ತು. ಆಕೆಯ ಮೃತದೇಹದ ಹತ್ತಿರ ಆಕೆಯ ಮೊಬೈಲ್, ಆಕೆಯ ಪರ್ಸ್ ಹಾಗೂ ಚಪ್ಪಲಿಗಳಿದ್ದವು. ಕುತ್ತಿಗೆಗೆ ಮುಂಭಾಗದಲ್ಲಿ ಉರುಲು ಹಾಕಿದ ಕಲೆ ಇದ್ದು, ಬೆನ್ನಿಗೆ ಮತ್ತು ಎಡಗೈಗೆ ತರಚಿದ ಗಾಯಗಳಾಗಿದ್ದವು. ಮೈಮೇಲಿದ್ದ ಬಂಗಾರ ಆಭರಣಗಳು ಇರಲಿಲ್ಲ. ನನ್ನ ಮಗಳು ನಿಂಬಕ್ಕ ಮಯಸ್ಸು ೩೮ ವರ್ಷ ಇವಳ ಹೆಸರಿನಲ್ಲಿ ೨ ಎಕರೆ ಹೊಲವನ್ನು ನೊಂದಣಿ ಮಾಡಿಸಿದ್ದು, ಇದೇ ದ್ವೇಷದಿಂದ ನನ್ನ ಅಳಿಯನಾದ ಷಣ್ಮುಖ ತಂದೆ ವೀರಭದ್ರಪ್ಪ ಕರಡಕಲ್ ಹಾಗೂ ಅವನ ಹಿರಿಯ ಮಗನಾದ ಅಮರೇಶ ಇವರಿಬ್ಬರೂ ಸೇರಿ ಹೊಲದ ವಿಷಯವಾಗಿ ಜಗಳವಾಡಿರುತ್ತಾರೆ. ನನ್ನ ಮಗಳು ನಿನ್ನೆ ಹೊಲಕ್ಕೆ ಹೋದಾಗ ಬೆಳಿಗ್ಗೆ ೬ ಗಂಟೆಯಿಂದ ಸಂಜೆ ೭.೩೦ ಗಂಟೆಯ ಮಧ್ಯದ ಅವಧಿಯಲ್ಲಿ ಇವರಿಬ್ಬರೂ ಹೋಲಕ್ಕೆ ಹೊಗಿ ಆಕೆಯನ್ನು ಉಟ್ಟ ಸೀರೆಯ ಸೆರಗಿನಿಂದ ಉರುಲು ಹಾಕಿ ಕೊಲೆ ಮಾಡಿದ್ದು ಇರುತ್ತದೆ. ಈ ವಿಷಯವನ್ನು ನನ್ನ ಮಕ್ಕಳಿಗೆ ಫೋನ್ ಮೂಲಕ ತಿಳಿಸಿದ್ದು, ನನ್ನ ಮಗ ಸುರೇಶ ಇವನು ಬಳ್ಳಾರಿಯಿಂದ ಬಂದ ನಂತರ ಅವನನ್ನು ಕರೆದುಕೊಂಡು ಈಗ ತಡವಾಗಿ ಠಾಣೆಗೆ ಬಂದಿರುತ್ತೇನೆ. ಕಾರಣ ಷಣ್ಮುಖ ತಂದೆ ವೀರಭದ್ರಪ್ಪ ಕರಡಕಲ್ ಹಾಗೂ ಅಮರೇಶ ತಂದೆ ಷಣ್ಮುಖ ಕರಡಕಲ್ ಇವರಿಬ್ಬರ ಮೇಲೆ ಹಾಗೂ ಇದಕ್ಕೆ ಪ್ರಚೋದನೆ ನೀಡಿದ ವೀರಭದ್ರಪ್ಪ ತಂದೆ ಆದಪ್ಪ ಕರಡಕಲ್ ಹಾಗೂ ವೀರಮ್ಮ ಗಂಡ ಶರಣಪ್ಪ ಹೆರೂರ ಇವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಲು ವಿನಂತಿ.

ತಮ್ಮ ವಿಶ್ವಾಸಿ

ಬ.ಅ. ನಾಗೂರ

ಪ್ರಕರಣ-೭

ಇವರಿಗೆ,

ಠಾಣಾಧಿಕಾರಿಗಳು

ಕುಕನೂರ ಪೊಲೀಸ್ ಠಾಣೆ.

ಮಾನ್ಯರೇ,

ವಿಷಯ : ಬಾಲ್ಯ ವಿವಾಹ ನಿಷೇಧ ಕಾಯ್ದೆ-೨೦೦೬ ಹಾಗೂ ಇತರೆ ಕಾಯ್ದೆಗಳನ್ವಯ ಶ್ರೀ ಕಪ್ಪತಪ್ಪ ತಂದೆ ಕರಿಸಿದ್ದಪ್ಪ ಕಿನ್ನಾಳ, ಶ್ರೀಮತಿ ಲಲಿತವ್ವ ಕಪ್ಪತಪ್ಪ ಕಿನ್ನಾಳ, ಬಸಪ್ಪ ಬುಡ್ಡಪ್ಪ ಹಳ್ಳಿಕೇರಿ, ಶ್ರೀಮತಿ ಫಕೀರಪ್ಪ ಗಂಡ ಬಸಪ್ಪ ಹಳ್ಳಿಕೇರಿ ಎಲ್ಲರೂ ಸಾ: ಕೋಮಲಾಪೂರ ಹಾಗೂ ಬಾಲ್ಯ ವಿವಾಹಕ್ಕೆ ಪ್ರೋತ್ಸಾಹ ನೀಡಿದ ಸಂಬಂಧಿಗಳು ಹಾಗೂ ಸಹಕಾರ ನೀಡಿದ ಇತರರ ಮೇಲೆ ಪ್ರಕರಣ ದಾಖಲಿಸಿ ಕ್ರಮಕೈಗೊಳ್ಳುವ ಕುರಿತು.

ನಾನು ಶ್ರೀಮತಿ ಲಲಿತಾ ನಾಯಕ, ಪ್ರಭಾರಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಯಲಬುರ್ಗಾ ಇದ್ದು, ಬಾಲ್ಯ ವಿವಾಹ ನಿಷೇಧ ಕಾಯ್ದೆ-೨೦೦೬ರ ಸೆಕ್ಷನ್-೧೬ ರನ್ವಯ ಪದನಿಮಿತ್ಯ ಬಾಲ್ಯ ವಿವಾಹ ನಿಷೇಧ ಅಧಿಕಾರಿಯಾಗಿರುತ್ತೇನೆ. ಇಂದು ದಿನಾಂಕ: ೨-೯-೨೦೧೩ ರ ಬೆಳಿಗ್ಗೆ ೧೦-೩೦ ಸುಮಾರಿಗೆ ನಿಂಗಪ್ಪ ತಂದಿ ಕಪ್ಪತಪ್ಪ ಕಿನ್ನಾಳ, ಸಾ: ಕೋಮಲಾಪುರ, ತಾ: ಯಲಬುರ್ಗಾ ಇವರ ವಿವಾಹವು ಲಲಿತಾ ತಂದೆ ಬಸಪ್ಪ ಹಳ್ಳಿಕೇರಿ, ವಯಸ್ಸು: ೧೪ ವರ್ಷ, ಸಾ: ಕೋಮಲಾಪುರ, ಇವರೊಂದಿಗೆ ನಡೆಯುತ್ತಿರುವ ಬಗ್ಗೆ ಮಾಹಿತಿ ಬಂದ ಮೇರೆಗೆ, ಸದರಿ ಕುಮಾರಿ ಲಲಿತಾ ಇವರ ವಯಸ್ಸಿನ ಬಗ್ಗೆ ಪರಿಶೀಲಿಸಿದಾಗ ಸದರಿಯವಳು ಕೋಮಲಾಪೂರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ೮ನೇ ತರಗತಿ ಕಲಿಯುತ್ತಿರುವ ಬಗ್ಗೆ ಮುಖ್ಯೋಪಾಧ್ಯಾಯರೂ ಮಾಹಿತಿ ನೀಡಿದ್ದು, ಈ ಮಾಹಿತಿ ಆಧಾರದ ಮೇರೆಗೆ ನಾನು ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ, ಶ್ರೀ ಹೆಚ್.ಪಿ. ಜಗದೀಶ, ಪ್ರಭಾರಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಗಳು ಕೊಪ್ಪಳ, ಶ್ರೀ ಹರೀಶ್ ಜೋಗಿ ಯನಿಸೆಫ್ ಜಿಲ್ಲಾ ಮಕ್ಕಳ ರಕ್ಷಣಾ ಯೋಜನೆಯ ಸಂಯೋಜಕರು ಮತ್ತು ಶ್ರೀ ಶಿವರಾಮ್ ಎಮ್, ಸಹಾಯಕ ತರಬೇತಿ ಸಂಯೋಜಕರು ಯುನಿಸೆಫ್ ಜಿಲ್ಲಾ ಮಕ್ಕಳ ರಕ್ಷಣಾ ಯೋಜನೆ ಕೊಪ್ಪಳ, ಹಾಗೂ ಯಲಬುರ್ಗಾ ಪ್ರಭಾರಿ ತಹಶೀಲ್ದಾರರಾದ ಶ್ರೀ ಶ್ರೀಧರ ಆಚಾರ್, ಉಪತಹಶೀಲ್ದಾರರಾದ ಶ್ರೀ ರಮೇಶ ಆಳವಂಡಿಕರ್, ಕುಕನೂರ ಕಂದಾಯ ನಿರೀಕ್ಷಕರಾದ ಶ್ರೀ ಉಮೇಶಗೌಡ, ಮತ್ತು ಶ್ರೀ ಪ್ರವೀಣಕುಮಾರ, ಗ್ರಾಮ ಲೆಕ್ಕಾಧಿಕಾರಿಗಳು ಲಕಮಾಪೂರ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಶ್ರೀಮತಿ ಸುಮಲತಾ ಆಕಳವಾಡಿ ಮತ್ತು ಶಿವಲೀಲಾ ವನ್ನೂರ, ಮಕ್ಕಳ ವಿಶೇಷ ಪೊಲೀಸ್ ಘಟಕದ ದುಷ್ಪರಿಣಾಮಗಳ ಬಗ್ಗೆ ಮಾಹಿತಿಯನ್ನು ನೀಡಿದ್ದಾಗಿಯೂ ಮದುವೆಯನ್ನು ತಡೆಯಲು ಕುಮಾರಿ ಲಲಿತಾ ಇವರನ್ನು ಮಕ್ಕಳ ಕಲ್ಯಾಣ ಸಮಿತಿಗೆ ಹಾಜರು ಪಡಿಸಲು ಒತ್ತಾಯಿಸಿದಾಗ ಅವರು ವಧು-ವರರನನ್ನು ಹಾಜರು ಪಡಿಸಿದ್ದು, ಸದರಿ ವಧು-ವರರು ದೈಹಿಕವಾಗಿ ಅಪ್ರಾಪ್ತ ವಯಸ್ಕರರು ಅಂತಾ ಕಂಡುಬಂದಿದ್ದು ಅಲ್ಲದೇ ಮದುವೆಯಾಗಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಕುಮಾರ ನಿಂಗಪ್ಪ ಇವರ ತಂದೆಯಾದ ೧) ಕಪ್ಪತಪ್ಪ ತಂದಿ ಕಾರಿಸಿದ್ದಪ್ಪ ಕಿನ್ನಾಳ, ತಾಯಿಯಾದ ೨) ಲಿತೆವ್ವ ಗಂಡ ಕಪ್ಪತಪ್ಪ ಕಿನ್ನಾಳ (ಸದರಿ ಶ್ರೀಮತಿ ಲಲಿತವ್ವರವರು ಬಾನಾಪೂರ ಗ್ರಾಮ ಪಂಚಾಯತಿ ಸದಸ್ಯರಾಗಿರುತ್ತಾರೆ), ಕುಮಾರಿ: ಲಲಿತಾ ಇವರ ತಂದೆಯಾದ ೩) ಬಸಪ್ಪ ತಂದಿ ಬಡ್ಡಪ್ಪ ಹಳ್ಳಿಕೇರಿ, ಕುಮಾರಿ: ಲಲಿತಾಳ ತಾಯಿಯಾದ ೪) ಶ್ರೀಮತಿ ಫಕೀರವ್ವ ಗಂಡ ಬಸಪ್ಪ ಹಳ್ಳಿಕೇರಿ, ಎಲ್ಲರೂ ಸಾ: ಕೋಮಲಾಪೂರ, ಹಾಗೂ ಬಾಲ್ಯ ವಿವಾಹಕ್ಕೆ ಪ್ರೋತ್ಸಾಹ ನೀಡಿದ ಸಂಬಂಧಿಗಳು ಹಾಗೂ ಸಹಕಾರ ನೀಡಿದ ಇತರರ ಮೇಲೆ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳುವಂತೆ ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ
ಶ್ರೀಮತಿ ಲಲಿತಾ ನಾಯಕ
ಪ್ರಭಾರಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಯಲಬುರ್ಗಾ.

ಪ್ರಕರಣ–೮

ಇವರಿಗೆ,

ಮಾನ್ಯ ಪಿಎಸ್ಐ ಸಾಹೇಬರು ದಿನಾಂಕ ೨೩.೪.೧೪

ಕೊಪ್ಪಳ, ಪೊಲೀಸ್ ಠಾಣೆ ಇವರಿಗೆ,

ಮಾನ್ಯರೇ,

ವಿಷಯ : ನನ್ನ ಮಗಳ ಮೇಲೆ ಸೀಮೆ ಎಣ್ಣೆ ಸುರಿದು ಬೆಂಕಿ ಇಟ್ಟು ಕೊಲೆ ಮಾಡಲು ಪ್ರಯತ್ನಿಸಿದ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಾನು ಬಸವಣ್ಣವ್ವ ಮ್ಯಾದಾರ, ಸಾ. ಕೊಪ್ಪಳ, ಮ್ಯಾದಾರ ಓಣಿ. ಈ ಮೂಲಕ ನಾನು ಸಲ್ಲಿಸುವ ಫಿರ್ಯಾದಿ ಏನೆಂದರೆ ನನಗೆ ಮೂವರು ಹೆಣ್ಣು ಮಕ್ಕಳಿದ್ದು ಗಂಡ ತೀರಿಕೊಂಡಿರುತ್ತಾನೆ. ನನ್ನ ದೊಡ್ಡಮಗಳನ್ನು ಚಿಲಕಮುಖಿ ಎಂಬ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿದ್ದು, ಎರಡನೇ ಮಗಳನ್ನು ಕೊಪ್ಪಳದಲ್ಲಿರುವ ಗವಿಸಿದ್ದೇಶ್ವರ ಬಡಾವಣೆಯ ನಿವಾಸಿಯಾದ ಫಕೀರಸಾಬ್ ಎಂಬುವವರಿಗೆ ಮದುವೆ ಮಾಡಿ ಕೊಟ್ಟಿದ್ದೇನೆ. ಮೂರನೇ ಮಗಳಿಗೆ ಇನ್ನು ಮದುವೆ ಆಗಿರುವುದಿಲ್ಲ. ನನ್ನ ಎರಡನೆಯ ಮಗಳಿಗೆ ಈಗ ಜೀವಕ್ಕೆ ಅಪಾಯ ಬಂದೊದಗಿದೆ. ಈಗ ಸುಟ್ಟ ಗಾಯಗಳೊಂದಿಗೆ ಆಕೆಯನ್ನು ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ದಾಖಲು ಮಾಡಿದ್ದೇನೆ. ಆಕೆಯ ಜೀವಕ್ಕೆ ಆಕೆಯ ಗಂಡನಿಂದ ಆಪತ್ತು ಬಂದೊದಗಿದ್ದು, ಆಕೆಗೆ ಸೂಕ್ತ ನ್ಯಾಯ ಒದಗಿಸಿಕೊಡಬೇಕೆಂದು ಈ ಮೂಲಕ ತಮ್ಮಲ್ಲಿ ಕೋರಿಕೊಳ್ಳುತ್ತಿದ್ದೇನೆ.

ನನ್ನ ಎರಡನೇ ಮಗಳಾದ ಸಾವಿತ್ರಿ (ವಯಸ್ಸು ೩೨) ಫಕೀರಸಾಬ್ (ವಯಸ್ಸು ೩೫) ಎಂಬಾತನನ್ನು ಪ್ರೀತಿಸಿ ಮದುವೆ ಆಗಿದ್ದಾಳೆ. ಅದಕ್ಕೆ ನಮ್ಮ ಮನೆಯವರ ಸಮ್ಮತಿ ಇರುತ್ತದೆ. ನನ್ನ ಅಳಿಯನಾದ ಫಕೀರಸಾಬ್ ಅವರ ಮನೆಯಲ್ಲಿ ಈ ಮದುವೆಗೆ ಸಮ್ಮತಿ ಇರುವುದಿಲ್ಲ. ಆದ ಕಾರಣ ನಾವೆ ನಿಂತು ಮದುವೆ ನೆರವೇರಿಸಿದ್ದೇವೆ, ಹಾಗೂ ಅವರ ಜೀವನ ನಿರ್ವಹಣೆಗೆ ಶ್ರೀ ಗವಿಸಿದ್ದೇಶ್ವರ ಬಡಾವಣೆಯಲ್ಲಿ ಬಾಡಿಗೆ ಮನೆಯನ್ನು ಸಹ ಮಾಡಿಕೊಟ್ಟಿದ್ದೆವು. ಅವರು ಗಂಡ ಹೆಂಡತಿ ಇಬ್ಬರು ಕೂಲಿ ಮಾಡಿ ಜೀವನ ನಿರ್ವಹಣೆ ಮಾಡಿಕೊಳ್ಳುತ್ತಿದ್ದರು. ಅವರ ಸುಖ ಸಂಸಾರಕ್ಕೆ ಈಗ ೩ ವರ್ಷದ ಒಂದು ಹೆಣ್ಣು ಮಗು ಕೂಡ ಇರುತ್ತದೆ. ಆದರೆ ಫಕೀರಸಾಬ್ ಇತ್ತೀಚೆಗೆ ನನ್ನ ಮಗಳಿಗೆ ಬಹಳಷ್ಟು ಕಿರಿಕಿರಿ ಕೊಡುತ್ತಿದ್ದ. ನನ್ನ ಮಗಳು ಮನೆಗೆ ಬಂದು ಆತನ ದೌರ್ಜನ್ಯಗಳನ್ನು ವಿವರಿಸುತ್ತಿದ್ದಳು. ಫಕೀರಸಾಬ್ ನನ್ನ ಮಗಳಿಗೆ ಸದಾ ನಿನಗಿಂತಲೂ ನಿನ್ನ ತಂಗಿ ಬಹಳ ಸುಂದರವಾಗಿದ್ದಾಳೆ ಎಂದು ಹೀಯಾಳಿಸಿ ಮಾತನಾಡುತ್ತಿದ್ದನಂತೆ. ಅದರಿಂದ ನನ್ನ ಮಗಳು ಬಹಳಷ್ಟು ಜರ್ಝರಿತಗೊಂಡಿದ್ದಳು. ಏನೂ ತೋಚದ ಸ್ಥಿತಿಯಲ್ಲಿ ಗಂಡನೊಟ್ಟಿಗೆ ಜೀವನ ಕಳೆಯುತ್ತಿದ್ದಳು. ನಾವು ಆತನನ್ನು ನನ್ನ ಕೊನೆಯ ಮಗಳಿಂದ ದೂರ ಇರುವಂತೆ ನೋಡಿಕೊ ಎಂದು ಹೇಳಿ ಕಳುಹಿಸುತ್ತಿದ್ದೆವು. ಅದಕ್ಕಾಗಿ ತರಾತುರಿಯಲ್ಲಿ ನಮ್ಮ ಕೊನೆಯ ಮಗಳಿಗೆ ಮದುವೆಯನ್ನೂ ಸಹ ನಿಶ್ಚಯ ಮಾಡಿದ್ದೆವು. ಅದು ನನ್ನ ಅಳಿಯನಿಗೆ ಸಿಟ್ಟು ತರಿಸಿತ್ತೆಂದು ನನ್ನ ಮಗಳು ಹೇಳಿಕೊಂಡು

ಅಳುತ್ತಿದ್ದಳು. ನಿನ್ನ ತಂಗಿಯನ್ನು ಹಾಳು ಮಾಡುವೆ ಹೇಗೆ ಮದುವೆ ಮಾಡುತ್ತೀರಿ ಮಾಡಿ ಎಂದು ಹೇಳಿದ್ದನಂತೆ. ಅದಕ್ಕಾಗಿ ಒಂದು ತಿಂಗಳಿಂದ ನನ್ನ ಮಗಳು ನನ್ನ ಮನೆಗೆ ಬರುವುದನ್ನೆ ನಿಲ್ಲಿಸಿದ್ದಳು. ಈ ವಿಚಾರವಾಗಿಯೇ ಆಕೆಯೊಂದಿಗೆ ದಿನಾ ಜಗಳವಾಡುತ್ತಿದ್ದನು. ಈ ವಿಚಾರ ನಾಲ್ಕು ಜನದ ಮುಂದೆ ಬಂದರೆ ಕಿರಿಯ ಮಗಳ ಮದುವೆಗೆ ತೊಂದರೆ ಬರಬಹುದೆಂದು ನಾನು ಈ ವಿಚಾರವಾಗಿ ಅಳಿಯನೊಟ್ಟಿಗೆ ಮಾತನಾಡಲು ಹೊಗಿರಲಿಲ್ಲ.

೨೧.೪.೧೪ರಂದು ಇದ್ದಕ್ಕಿದಂತೆ ನನ್ನ ಮಗಳ ಮನೆಯ ಆಸುಪಾಸಿನ ಜನ ನನಗೆ ಫೋನ್ ಮಾಡಿ ನಿಮ್ಮ ಮಗಳು ಬೆಂಕಿ ಹಚ್ಚಿಕೊಂಡಿದ್ದಾಳೆ ಬೇಗ ಬನ್ನಿ ಎಂದು ತಿಳಿಸಿದರು. ನಮ್ಮ ಮನೆಯಿಂದ ಕೂಡಲೇ ಧಾವಿಸಿದ ನಾನು ಹೋಗುವುದರೊಳಗಾಗಿ ನನ್ನ ಮಗಳು ಸುಟ್ಟ ಗಾಯಗಳೊಂದಿಗೆ ನರಳುತ್ತಾ ಮಲಗಿದ್ದಳು. ಆಸುಪಾಸಿನ ಜನ ಆಕೆಗೆ ಹತ್ತಿದ ಬೆಂಕಿಯನ್ನು ಆರಿಸಿ ಮಲಗಿಸಿದ್ದರು. ೨ ತಾಸಿಗೂ ಮುಂಚೆ ಫಕೀರಸಾಬ್ ಮತ್ತು ನನ್ನ ಮಗಳು ಜಗಳವಾಡುತ್ತಿದ್ದರಂತೆ. ನನ್ನ ಮಗಳು ಬೆಂಕಿ ಹಚ್ಚಿಕೊಂಡು ಒಡಾಡುವಾಗ ಫಕೀರಸಾಬ್ ಅಲ್ಲಿಯೇ ಇದ್ದು ನನ್ನ ಮಗಳಿಗೆ ಹತ್ತಿದ ಬೆಂಕಿಯನ್ನು ಆರಿಸುವ ಪ್ರಯತ್ನ ಮಾಡದೆ ಹೊರಟು ಹೋದನಂತೆ ಎಂದು ಸ್ಥಳಿಯ ಜನ ತಿಳಿಸಿದ್ದಾರೆ. ಈಗ ನನ್ನ ಮಗಳು ಕೊಪ್ಪಳ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಮಾತನಾಡದ ಸ್ಥಿತಿಯಲ್ಲಿ ಇಲ್ಲ. ಆತ ಈಗ ತಲೆ ಮರಿಸಿಕೊಂಡಿದ್ದು, ನನ್ನ ಮಗಳನ್ನು ನೋಡಲು ಬಂದಿಲ್ಲ. ದಯವಿಟ್ಟು ತಾವು ಪ್ರಕರಣವನ್ನು ದಾಖಲಿಸಿಕೊಂಡು ನನ್ನ ಮಗಳಿಗೆ, ನಮಗೆ ಸೂಕ್ತ ನ್ಯಾಯ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ತಮ್ಮ ವಿಶ್ವಾಸಿ
ಬಸವಣ್ಣವ್ವ ಮ್ಯಾದಾರ.

೬.೩. ಮಾದರಿ ಪ್ರಕರಣಗಳ ಸ್ತ್ರೀವಾದಿ ವಿಶ್ಲೇಷಣೆ

ನ್ಯಾಯಾಲಯಗಳಲ್ಲಿ ದಾಖಲಾದಂತಹ ಪ್ರಕರಣಗಳನ್ನು ಮಹಿಳೆಯರು ಅನುಭವಿಸುವ ಹಿಂಸೆಯ ಹಿನ್ನೆಲೆಯಲ್ಲಿ ಹಾಗೂ ಕಾನೂನಿನಡಿಯಲ್ಲಿ ಆ ಪ್ರಕರಣಗಳು ಇತ್ಯರ್ಥಗೊಳ್ಳುವ ಬಗೆ ಹೇಗೆ ಎಂಬುವುದನ್ನು ವಿಶ್ಲೇಷಣೆಗೊಳಪಡಿಸಲಾಗಿದೆ.

ಪ್ರಕರಣ–೧ರಲ್ಲಿ ರೇಖಾರವರು ತಮ್ಮ ಗಂಡನ ಮನೆಯಿಂದ ಹೊರಹಾಕಲ್ಪಟ್ಟು, ತಮ್ಮ ಜೀವನವನ್ನು ನಿರ್ವಹಣೆ ಮಾಡಿಕೊಳ್ಳಲಾಗದೆ, ಮತ್ತೆ ಗಂಡನ ಮನೆಯಲ್ಲಿ ನೆಮ್ಮದಿಯುತ ಬದುಕು ನಡೆಸಲು ಅನುಕೂಲ ಮಾಡಿಕೊಡಬೇಕೆಂದು ನ್ಯಾಯಾಲಯಕ್ಕೆ ಮೊರೆ ಹೋಗಿದ್ದಾರೆ. ರೇಖಾರವರು ಅವರ ಗಂಡ, ಅತ್ತೆ, ಮಾವನಿಂದ ದೈಹಿಕ ಮತ್ತು ಮಾನಸಿಕ ಹಿಂಸೆಗೆ ಒಳಗಾಗಿದ್ದು, ಅಲ್ಲಿ ಇರುವವರೆಗೂ ಎಲ್ಲವನ್ನು ಸಹಿಸಿಕೊಂಡು ಬಂದಿದ್ದಾರೆ. ಆದರೆ ಯಾವಾಗ ತವರು ಮನೆಯಿಂದ ಹಣ ತರುವಂತೆ ಒತ್ತಡ ಹೇರಿ, ಗಂಡನ ಮನೆಯಿಂದ ಹೊರಹಾಕಿದ್ದಾರೋ ಆಗ ಅವರು ತವರು ಮನೆಗೆ ಬಂದು ವಾಸವಾಗಿದ್ದಾರೆ. ಮದುವೆ ಆದ ಮಹಿಳೆಗೆ ಗಂಡನ ಮನೆಯೇ ಶಾಶ್ವತ. ಅಲ್ಲಿ

ಏನೇ ತೊಂದರೆ ಬಂದರು ಸಹಿಸಿಕೊಂಡು ಹೋಗಬೇಕು ಎಂಬ ಸಾಮಾಜಿಕ ಕಿವಿಮಾತುಗಳಿಗೆ ಬದ್ಧವಾಗಿ ರೇಖಾರವರು ಮತ್ತೆ ಆ ಮನೆಗೆ ಹೋಗಿ ವಾಸಿಸಲು, ನೆಮ್ಮದಿಯುತ ಜೀವನ ನಡೆಸಲು ಅನುಕೂಲಕರ ವಾತಾವರಣವನ್ನು ನ್ಯಾಯಾಲಯ ಕಲ್ಪಿಸಿಕೊಡಬೇಕೆಂದು ವಿನಂತಿಸಿಕೊಂಡಿದ್ದಾರೆ. ಹೆಣ್ಣು ಮದುವೆ ಆದ ನಂತರ ಗಂಡನ ಮನೆಗೆ ಸಲ್ಲಿದವಳು ಎಂದು ಹೆಣ್ಣನ್ನು ಸ್ಥಾನಪಲ್ಲಟಗೊಳಿಸುವ ಮೂಲಕ, ಸತ್ತರೂ ಆಕೆ ಗಂಡನ ಮನೆಯಲ್ಲಿಯೇ ಸಾಯಬೇಕು ಎಂದು ಮಹಿಳೆಯರಿಗೆ ವಿಶೇಷ ನಿಯಮ ಹೇರಿ ಆ ಮೂಲಕ ಬದುಕಿನಲ್ಲಿ ಹೆಣ್ಣಿನ ಸ್ಥಾನವನ್ನು ಅತಂತ್ರಗೊಳಿಸುವ ವಿಚಾರಗಳು ರೇಖಾರವರ ಪ್ರಕರಣದಲ್ಲಿ ಎದ್ದುಕಾಣುತ್ತವೆ.

ವ್ಯಕ್ತಿ ಆಧಾರಿತ ಮಾಹಿತಿಯಿಂದ ರೇಖಾರವರು ಸರ್ಕಾರ ನಿಯೋಜಿಸಿದ ಮಾನ್ಯ ಸಂರಕ್ಷಣಾಧಿಕಾರಿಗಳು ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಕೊಪ್ಪಳ ಇವರಲ್ಲಿ ಬಂದು ದೂರು ನೀಡಿರುತ್ತಾರೆ. ಇವರು ರೇಖಾರ ದೂರಿನಂತೆ ಪತಿ ಕೀರ್ತಿಯವರಿಗೆ ಕೌಟುಂಬಿಕ ಕಲಹದ ವಿಚಾರವಾಗಿ ಬಂದು ಭೇಟಿಯಾಗುವಂತೆ ನೋಟಿಸ್ಸೊಂದನ್ನು ಜಾರಿ ಮಾಡಿರುತ್ತಾರೆ. ಇದ್ಯಾವುದಕ್ಕೂ ಅವರು ಸ್ಪಂದಿಸದ ಕಾರಣ ರೇಖಾರವರ ಪ್ರಕರಣವನ್ನು ನ್ಯಾಯಾಲಯಕ್ಕೆ ದಾಖಲು ಮಾಡಿರುತ್ತಾರೆ. ರೇಖಾರವರ ಈ ಪ್ರಕರಣ ನ್ಯಾಯಾಲಯಕ್ಕೆ ದಾಖಲಾದ ನಂತರ ಅವರ ಗಂಡ, ಅತ್ತೆ, ಮಾವ ಮೂವರಿಗೆ ನ್ಯಾಯಾಲಯಕ್ಕೆ ಹಾಜರಾಗುವಂತೆ ನೋಟಿಸ್ಸೊಂದನ್ನು ಜಾರಿಗೊಳಿಸಲಾಗಿರುತ್ತದೆ. ಅದಾದ ನಂತರ ಹೆದರದ ರೇಖಾರ ಗಂಡ ಕೀರ್ತಿ ಕೊಪ್ಪಳಕ್ಕೆ ಬಂದು ರೇಖಾರ ಮೇಲೆ ಮತ್ತಷ್ಟು ದೈಹಿಕ ದೌರ್ಜನ್ಯ ಎಸಗಿರುತ್ತಾರೆ. ಅದಕ್ಕೆ ಹೆದರಿದ ರೇಖಾ ಮತ್ತೆ ತಮ್ಮ ಪ್ರಕರಣ ನಡೆಸುತ್ತಿರುವ ವಕೀಲರ ಬಳಿ ಬಂದು ದೂರು ಹೇಳಿರುತ್ತಾರೆ. ಅದನ್ನು ದಾಖಲಿಸಿ ವಕೀಲರು ನ್ಯಾಯಾಂಗದ ಮುಂದೆ ಹಾಜರುಪಡಿಸುತ್ತಾರೆ. ಆಗ ನ್ಯಾಯಾಲಯದಿಂದ ಮತ್ತೊಂದು ನೋಟಿಸನ್ನು ರೇಖಾರ ಗಂಡ ಹಾಗೂ ಮನೆಯವರಿಗೆ ನೀಡುತ್ತಾರೆ. ಹಾಜರಾಗದಿದ್ದ ಪಕ್ಷದಲ್ಲಿ ಬಂಧನಕ್ಕೊಳಪಡಿಸುವುದಾಗಿ ತಿಳಿಸುತ್ತಾರೆ. ಇದಕ್ಕೆ ಹೆದರಿದ ಕೀರ್ತಿ ಹಾಗೂ ಅವನ ಮನೆಯವರು ರೇಖಾರ ಮನೆಗೆ ಹೋಗಿ ಪ್ರಕರಣವನ್ನು ಹಿಂದೆ ಪಡೆಯುವಂತೆ ಮತ್ತು ತಾವು ರಾಜಿ ಮಾಡಿಕೊಂಡು ರೇಖಾರನ್ನು ಮನೆಗೆ ಕರೆದೊಯ್ಯುವುದಾಗಿ ಹೇಳುತ್ತಾರೆ. ಈ ಪ್ರಕಾರವಾಗಿ ವಕೀಲರ ಸಮ್ಮುಖದಲ್ಲಿ ರಾಜಿ ಮಾಡಿಕೊಂಡು ಕರಾರಿಗೆ ಸಹಿ ಹಾಕಿ ರೇಖಾರನ್ನು ಕರೆದುಕೊಂಡುಹೋಗಿ ಪ್ರಕರಣದಿಂದ ಮುಕ್ತಿ ಪಡೆಯುತ್ತಾರೆ.

ರೇಖಾರವರು ಕಾನೂನಿ ನೆರವು ಪಡೆದು, ಗಂಡನ ಮನೆಯವರು ನೀಡುವ ಹಿಂಸೆಯಿಂದ ಮುಕ್ತಗೊಂಡಿದ್ದಾರೆಯೇ ಎಂದು ತಿಳಿದುಕೊಂಡಾಗ 'ಬಾಂಡ್ಲಿಯಿಂದ ಬೆಂಕಿಗೆ ಬಿದ್ದಂಗ ಆಗ್ಯಾದ್ರಿ ನನ್ ಜೀವನ ಈಗ' ಎಂಬ ಮಾತುಗಳು ಅವರ ಕಡೆಯಿಂದ ಕೇಳಿಬರುತ್ತವೆ. ಅಂದರೆ ಕಾನೂನಿನ ಮೊರೆ ಹೋದರೂ ಸಾಮಾಜಿಕ ಜೀವನ ಮತ್ತು ಕೌಟುಂಬಿಕ ಜೀವನ ಹೆಣ್ಣಿಗೆ ಯಥಾಸ್ಥಿತಿಯನ್ನು ಅಥವಾ ಅದಕ್ಕಿಂತಲೂ ಹೊರೆ ಎನಿಸುವ ಪರಿಸ್ಥಿತಿಯನ್ನು ತಂದೊಡ್ಡುತ್ತದೆ ಎಂಬುವುದನ್ನು ಈ ಪ್ರಕರಣ ತಿಳಿಸುತ್ತದೆ.

ಒಟ್ಟು ಈ ಪ್ರಕರಣದಿಂದ ತಿಳಿಯುವ ಅಂಶವೆಂದರೆ, ಹೆಣ್ಣು ತನಗಾದ ಅನ್ಯಾಯದ ವಿರುದ್ಧ ಕಾನೂನಿನ ಮೊರೆ ಹೋದರೆ, ತಪ್ಪಿತಸ್ಥರು ತಮ್ಮ ದುಷ್ಟ ಕೆಲಸಕ್ಕೆ ಶಿಕ್ಷೆ ಆಗಬಹುದೆಂದು ರಾಜಿ

ಮಾಡಿಕೊಳ್ಳುವಂತಹ ಕಾರ್ಯಕ್ಕೆ ಮುಂದಾಗುತ್ತಾರೆ. ಇದು ಕಾನೂನಿನ ಬಲಿಷ್ಠತೆ ಎಷ್ಟೆಂಬುವುದನ್ನು ತೋರ್ಪಡಿಸುತ್ತದೆ. ಕಾನೂನಿನ ಬಗ್ಗೆ ಭಯ ಇರುವವರು, ತಿಳುವಳಿಕೆ ಇರುವವರು ಕುಟುಂಬದೊಳಗಡೆ ಮಹಿಳೆಯರಿಗೆ ಹಿಂಸೆ ನೀಡುವ ಮೊದಲೇ ಎಚ್ಚೆತ್ತುಕೊಳ್ಳುವುದಿಲ್ಲ. ಕಾರಣ ಪುರುಷಶಾಹಿ ಅಧಿಕಾರ ನೆಲೆ ಮಹಿಳೆಯರಿಗೆ ಹಿಂಸೆ ಮಾಡುವುದನ್ನು ಪ್ರಚೋದಿಸುತ್ತಿರುತ್ತದೆ. ಈ ರೀತಿಯ ಅಧಿಕಾರಶಾಹಿ ನೆಲೆಯನ್ನು ಹೊಡೆದುರುಳಿಸುವ ಕಾರ್ಯವನ್ನು ಕಾನೂನು ಮಾತ್ರ ಮಾಡಬಹುದಾಗಿದೆ. ಜೊತೆಗೆ ಕಾನೂನು ಇಷ್ಟೆಲ್ಲಾ ಮಾಡಿದಾಗ್ಯೂ ಸಹ, ಆಳವಾಗಿ ಬೇರೂರಿದ ಪುರುಷ ಪ್ರಧಾನ ವ್ಯವಸ್ಥೆ ತನ್ನ ಗತ್ತು ಬಿಡದೇ ಮತ್ತೆ ಅಧಿಕಾರ ಚಲಾಯಿಸುವುದು ರೇಖಾರ ಪ್ರಕರಣದ ಮೂಲಕ ತಿಳಿದು ಬರುತ್ತದೆ.

ಇನ್ನು **ಪ್ರಕರಣ-೨**ರಲ್ಲಿ ಶ್ರೀಮತಿ ಲಕ್ಷ್ಮೀ ತನ್ನ ಗಂಡನ ಮನೆಯಲ್ಲಿ ಗಂಡ, ಮೈದುನ ಮತ್ತು ಅತ್ತೆಯಿಂದ ಬಹಳಷ್ಟು ಹಿಂಸೆಯನ್ನು ಅನುಭವಿಸಿರುತ್ತಾಳೆ. ಮದುವೆ ಆದಾಗಿನಿಂದಲೂ ಒಂದಲ್ಲ ಒಂದು ಬಗೆಯ ಮಾನಸಿಕ, ದೈಹಿಕ, ಭಾವನಾತ್ಮಕ ಹಿಂಸೆಗೆ ಒಳಗಾಗಿರುತ್ತಾಳೆ. ಹೆಣ್ಣಿಗೆ ಗಂಡನ ಮನೆಯೇ ಶಾಶ್ವತ ಎಂಬ ಸಾಮಾಜಿಕ ನಿಯಮದಂತೆ ಅವರು ಏನೇ ಕಷ್ಟ ಬಂದರೂ ಅದನ್ನು ಸಹಿಸಿಕೊಳ್ಳುತ್ತಾ ಜೀವನ ನಡೆಸಿದ್ದಾರೆ. ಒಟ್ಟಾರೆ ಇವರ ಉದ್ದೇಶ ಲಕ್ಷ್ಮೀಯವರನ್ನು ಮನೆಯಿಂದ ಹೊರ ಹಾಕುವುದಾಗಿರುತ್ತದೆ. ಇದಕ್ಕೆ ಆಕೆಯ ಗಂಡ ಶೀಲದ ಬಗ್ಗೆ ಮಾತನಾಡುವುದು, ಹೀಯಾಳಿಸಿ ಮಾತನಾಡುವುದು ಮಾಡಿರುತ್ತಾರೆ. ಮತ್ತು ಅವರ ಮೈದುನನು ತಮ್ಮ ತಂದೆಯ ಅನಾರೋಗ್ಯಕ್ಕೆ ನಿಮ್ಮ ಕಾಲುಗುಣ ಚೆನ್ನಾಗಿಲ್ಲದಿರುವುದೇ ಕಾರಣ ಎಂದು ಹೀಯಾಳಿಸಿ ಮಾತನಾಡಿರುತ್ತಾನೆ. ಇದನ್ನೆಲ್ಲ ಲಕ್ಷ್ಮೀಯವರು ಸಹಿಸಿಕೊಂಡು ಮಾತಿನ ಮೂಲಕ ತಮ್ಮ ಮೇಲಾಗುತ್ತಿರುವ ಹಿಂಸೆಯ ವಿರುದ್ಧ ಪ್ರತಿಭಟನೆ ಮಾಡುತ್ತಾ ಜೀವನ ನಡೆಸಿದಾಗ ಅವರ ಅತ್ತೆಗೆ ಸಹಿಸಿಕೊಳ್ಳಲಾಗದೆ, ಎಂದಾದರೂ ಈ ಕೃತ್ಯಗಳು ಸಾಮಾಜಿಕವಾಗಿ ಬಹಿರಂಗಗೊಳ್ಳಬಹುದೆಂದು ತಾವೇ ಮೊದಲಿಗರಾಗಿ ಮಹಿಳಾ ಸಾಂತ್ವನದಲ್ಲಿ ಸೊಸೆಯಿಂದ ಹಿಂಸೆಗೊಳಗಾಗುತ್ತಿದ್ದೇನೆ ಎಂದು ದೂರು ದಾಖಲಿಸಿರುತ್ತಾರೆ. ಅಷ್ಟೇ ಅಲ್ಲದೆ ಲಕ್ಷ್ಮೀಯನ್ನು ಬಿಡುಗಡೆ ಮಾಡಿಕೊಂಡರೆ ಆಸ್ತಿ ಕೊಡಬೇಕಾಗಿ ಬರಬಹುದೆಂದು ಲಕ್ಷ್ಮೀ ಗಂಡನ ಹೆಸರಿನಲ್ಲಿದ್ದ ಎಲ್ಲಾ ಆಸ್ತಿಯನ್ನು ಲಕ್ಷ್ಮೀಯವರ ಅತ್ತೆಯು ತಮ್ಮ ಹೆಸರಿಗೆ ವರ್ಗಾಯಿಸಿಕೊಂಡಿದ್ದಾರೆ.

ಲಕ್ಷ್ಮೀಯವರ ಅತ್ತೆ ಅದು ತಮ್ಮ ಸ್ವಯಾರ್ಜಿತ ಆಸ್ತಿ ಆಗಿದ್ದು ಸೊಸೆಗೆ ಕೊಡಲು ಇಚ್ಛಿಸುವುದಿಲ್ಲ ಎಂದು ಹೇಳುವ ತೀರ್ಮಾನಕ್ಕೆ ಬಂದಿದ್ದಾರೆ. ಇದನ್ನು ಗಮನಿಸಿದಾಗ ಲಕ್ಷ್ಮೀಯ ಅತ್ತೆಯ ಮನೆಯವರು ಕಾನೂನಿನ ಬಗ್ಗೆ ಸರಿಯಾಗಿಯಾಗಿಯೇ ಅರಿತವರಾಗಿದ್ದಾರೆ ಎಂದು ತಿಳಿದು ಬರುತ್ತದೆ. ಲಕ್ಷ್ಮೀಯವರನ್ನು ಆರ್ಥಿಕ ಸಂಕಷ್ಟಕ್ಕೊಳಪಡಿಸುವುದು ಸಹ ಅವರ ಉದ್ದೇಶವಾಗಿದೆ.

ಈ ಎಲ್ಲವನ್ನು ಸಹಿಸಿದ ಲಕ್ಷ್ಮೀಯು ಗಂಡನ ಮನೆಯಿಂದ ಹೊರಹಾಕಲ್ಪಟ್ಟಾಗ ತವರು ಮನೆಗೆ ಬಂದು ಸಹಾಯಕ್ಕಾಗಿ ಕಾನೂನಿನ ಮೊರೆ ಹೋಗಿದ್ದಾರೆ. ಆರ್ಥಿಕವಾಗಿ ಸಂಕಷ್ಟದಲ್ಲಿರುವುದರಿಂದ ಸರ್ಕಾರ ಮಹಿಳೆಯರಿಗಾಗಿ ನಿಯೋಜಿಸಿದ ಸಂರಕ್ಷಣಾಧಿಕಾರಿಗಳ ಮೊರೆ ಹೋಗಿದ್ದಾರೆ. ಉಚಿತವಾಗಿ ನ್ಯಾಯಾಲಯದ ಸೇವೆ ಪಡೆಯಲು ಮುಂದಾಗಿದ್ದಾರೆ. ಲಕ್ಷ್ಮೀ ಗಂಡನ ಮನೆಯವರು ಅವರು ನಿರೀಕ್ಷಿಸಿದಂತೆ ಆಗಾಗ ತಂದೆಯ ಮನೆಯಿಂದ ಹಣ ಅಥವಾ ಇತರೆ ವಸ್ತು, ಆಹಾರ ಪದಾರ್ಥಗಳನ್ನು

ಹೇರಳವಾಗಿ ತಂದು ಗಂಡನ ಮನೆಗೆ ಕೊಡದಿರುವುದು ಅವರಿಗೆ ಸಿಟ್ಟು ಬರಿಸಿದೆ. ಏನು ತರದ ಈಕೆ ತಮ್ಮ ಜೊತೆ ಇದ್ದರೆ ನಮಗೆ ಭಾರ ಎಂದು ತಿಳಿದು ಹಿಂಸೆ ನೀಡಲು ಮುಂದಾಗಿದ್ದಾರೆ. ತಾವೇ ಹುಡುಕಿ ತಂದರೂ ಸಹ ತಮ್ಮ ನಿರೀಕ್ಷೆಯಂತೆ ಯಾವುದು ನಡೆಯುತ್ತಿಲ್ಲ ಎಂದು ತಿಳಿದು ಲಕ್ಷ್ಮೀಯವರ ಅತ್ತೆ ಲಕ್ಷ್ಮೀಯವರನ್ನು ಗಂಡನ ಮನೆಯಿಂದ ಹೊರಹಾಕಿ ಅವರ ಗಂಡನಿಗೆ ಬೇರೆ ಮದುವೆ ಮಾಡುವ ವಿಚಾರದಲ್ಲಿದ್ದಾರೆ.

ಈ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿದ ನಂತರ ನ್ಯಾಯಾಲಯ ಲಕ್ಷ್ಮೀಯವರ ಅತ್ತೆ, ಗಂಡ ಮತ್ತು ಮೈದುನನ ಹೆಸರಿನಲ್ಲಿ ಸಮನ್ಸ ಒಂದನ್ನು ಜಾರಿ ಮಾಡಿರುತ್ತದೆ. ಅದರಂತೆ ಲಕ್ಷ್ಮೀ ಗಂಡನ ಮನೆಯವರೆಲ್ಲಾ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ. ನ್ಯಾಯಾಧೀಶರ ಮುಂದೆ ಲಕ್ಷ್ಮೀಯವರ ನಡುವಳಿಕೆ ಸರಿಯಾಗಿ ಇಲ್ಲ, ತಮ್ಮನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ ಎಂದು ಗಂಡ ಹೇಳುತ್ತಾನೆ, ಅಲ್ಲದೇ ಅತ್ತೆಯು ತನಗೆ ಮತ್ತು ತನ್ನ ಗಂಡನಿಗೆ ಸರಿಯಾಗಿ ಅಡುಗೆ ಮಾಡಿ ಹಾಕುವುದಿಲ್ಲ, ಎದುರು ಮಾತನಾಡುತ್ತಾಳೆ ಎಂದು ಹೇಳುತ್ತಾರೆ. ಆಸ್ತಿ ನನ್ನ ಗಂಡ ದುಡಿದು ಸಂಪಾದಿಸಿದ್ದು, ಅದು ನನ್ನ ಹೆಸರಿನಲ್ಲಿದೆ ಏನು ತಪ್ಪು? ಎಂದು ಕೇಳುತ್ತಾರೆ ಲಕ್ಷ್ಮೀಯವರ ಅತ್ತೆ. ಅದಕ್ಕೆ ನ್ಯಾಯಾಧೀಶರು ಆಸ್ತಿ ನಿಮ್ಮ ಹೆಸರಿನಲ್ಲಿರುವುದರಲ್ಲಿ ತಪ್ಪೇನು ಇಲ್ಲ. ಆದರೆ ನೀವು ಲಕ್ಷ್ಮೀಯವರನ್ನು ಹಿಂಸಿಸುವುದು, ಮನೆಯಿಂದ ಹೊರಹಾಕುವುದು ತಪ್ಪು ಎಂದು ಹೇಳುತ್ತಾರೆ. ಸಮಾಜದಲ್ಲಿ ಮದುವೆ ಆಗಿ ಗಂಡನ ಮನೆಗೆ ಬಂದಾಗ ಹೆಣ್ಣಿನ ಬದುಕು ಹೇಗೆ ಪಲ್ಲಟಗೊಳ್ಳುತ್ತದೆ, ಅದಕ್ಕೆ ಹೇಗೆ ಅತ್ತೆ ಮನೆಯವರು ಸಹಕರಿಸಬೇಕು ಎಂದು ತಿಳುವಳಿಕೆ ಹೇಳುತ್ತಾರೆ. ಜೊತೆಗೆ ಲಕ್ಷ್ಮೀಯವರಿಗೆ ಹಾಗೂ ಅವರ ಗಂಡನ ಮನೆಯವರಿಗೆ ಆಪ್ತ ಸಮಾಲೋಚನೆ ಅಗತ್ಯವಿರುವುದಾಗಿ ಹೇಳುತ್ತಾರೆ. ಸದ್ಯಕ್ಕೆ ಲಕ್ಷ್ಮೀಯವರು ಗಂಡನೊಂದಿಗೆ ಆತನ ಮನೆಯಲ್ಲಿ ವಾಸಿಸುವಂತೆ ಸೂಚಿಸುತ್ತಾರೆ. ಹಾಗೂ ಯಾವುದೇ ಬಗೆಯ ಹಿಂಸೆ ನೀಡದಂತೆ ಆದೇಶಿಸುತ್ತಾರೆ. ಲಕ್ಷ್ಮೀಯವರಿಗೂ ಅತ್ತೆ ಮಾವನನ್ನು ಚೆನ್ನಾಗಿ ನೋಡಿಕೊಂಡು ಹೋಗಲು ಸೂಚಿಸುತ್ತಾರೆ. ಪ್ರಕರಣವನ್ನು ವಜಾಗೊಳಿಸದೇ ಪೆಂಡಿಂಗ್ ಇಡುತ್ತಾರೆ. ಇದಾದ ನಂತರ ಲಕ್ಷ್ಮೀಯವರು ಗಂಡನ ಮನೆಗೆ ಹೋಗಿ ವಾಸಿಸುತ್ತಿದ್ದಾರೆ. ನ್ಯಾಯಾಲಯದ ಮೆಟ್ಟಿಲೇರಿದ ನಂತರವೂ ಲಕ್ಷ್ಮೀಯವರಿಗೆ ಹಿಂಸೆ ಇನ್ನೂತಪ್ಪಿಲ್ಲ. ಬದಲಾಗಿ ಅದರ ಸ್ವರೂಪದಲ್ಲಿ ಬದಲಾವಣೆ ಮಾಡಿಕೊಂಡು ಯಾರಿಗೂ ಹೇಳಿಕೊಳ್ಳಲಾಗದಂತಹ ಹಿಂಸೆಯನ್ನು ನೀಡುತ್ತಿದ್ದಾರೆ. ಲಕ್ಷ್ಮೀಯವರ ಲೈಂಗಿಕ ಬಯಕೆಗಳನ್ನು ಈಡೇರಿಸದಿರುವಂತೆ ಅವರ ಅತ್ತೆಯು ಮಗನಿಗೆ ಹೇಳಿ ಆ ಮೂಲಕ ಲೈಂಗಿಕ ಹಿಂಸೆ ಎಸಗುತ್ತಿದ್ದಾರೆ. ಕೇಳಿದರೆ ಅನಾರೋಗ್ಯದ ನೆಪ ಹೇಳುತ್ತಾರೆ. ಇಂತಹ ವಿಚಾರಗಳನ್ನು ಲಕ್ಷ್ಮೀಯವರು ನ್ಯಾಯಾಧೀಶರ ಮುಂದೆ ಹೇಳಲು ಹಿಂದೇಟಾಕುತ್ತಿದ್ದಾರೆ.

ಈ ಪ್ರಕರಣದ ಮೂಲಕ ತಿಳಿಯುವುದೇನೆಂದರೆ ಮಹಿಳೆಯರು ಮನೆಯಲ್ಲಿ ತಮ್ಮ ಮೇಲಾಗುತ್ತಿರುವ ದೌರ್ಜನ್ಯಕ್ಕೆ ನ್ಯಾಯಾಲಯದ ಮೂಲಕ ಪರಿಹಾರ ಕಂಡುಕೊಂಡರೂ ಸಹ ಹೆಣ್ಣು ಮತ್ತೆ ಅದೇ ಮನೆಯಲ್ಲಿ ವಾಸಿಸಬೇಕಾದುದರಿಂದ ಗಂಡನ ಮನೆಯವರು ಮತ್ತೆ ಹಿಂಸೆ ನೀಡಲು ಮುಂದಾಗುತ್ತಾರೆ. ಈ ಮೂಲಕ ತಿಳಿಯುವುದೇನೆಂದರೆ ಮಹಿಳೆಯರು ತಮ್ಮ ಮೇಲಾಗುತ್ತಿರುವ ಕೌಟುಂಬಿಕ ಹಿಂಸೆಗೆ

ಏನೇ ಪರಿಹಾರ ಕಂಡುಕೊಂಡರೂ ಅದು ಪೂರ್ಣ ಪ್ರಮಾಣದ ಪರಿಹಾರ ಆಗಲು ಸಾಧ್ಯವಿಲ್ಲ ಎನ್ನುವುದು ಗೋಚರವಾಗುತ್ತದೆ.

ಇನ್ನು ಪ್ರಕರಣ-೩ರಲ್ಲಿ ಹುಸೇನ್‌ಬಿಯವರ ಪ್ರಕರಣ ನಿಜಕ್ಕೂ ಮನಕಲುಕುವಂತದ್ದಾಗಿದೆ. ಯವ್ವನಾವಸ್ಥೆಯಲ್ಲಿದ್ದಾಗ ಗಂಡನಿಂದ ದೌರ್ಜನ್ಯಕ್ಕೊಳಗಾಗಿ, ಕಷ್ಟದಿಂದ ಜೀವನ ಸಾಗಿಸಿ ಮಕ್ಕಳನ್ನು ಬೆಳೆಸಿ, ಮದುವೆ ಮಾಡಿಸಿ, ತನ್ನ ಕರ್ತವ್ಯ ಈಡೇರಿಸಿದ ನಂತರ ಅದೇ ಮಕ್ಕಳಿಂದ ನಿರ್ಲಕ್ಷಕ್ಕೊಳಗಾಗಿದ್ದು ಆಕೆಯ ಬದುಕಿನ ದುರಂತ ಎಂದು ಹೇಳಬಹುದು. ದೇಹದಲ್ಲಿ ಶಕ್ತಿ ಇರುವವರೆಗೆ ದುಡಿದು ಜೀವನ ಸಾಗಿಸಿದ ಹಸೇನ್‌ಬಿ ಈಗ ದೈಹಿಕವಾಗಿ ಬಲಹೀನರಾಗಿದ್ದು, ಅನಿವಾರ್ಯವಾಗಿ ಗಂಡನಲ್ಲಿ ಜೀವನಾಂಶಕ್ಕೆ ಮೊರೆ ಹೋಗಿದ್ದಾರೆ. ತಾಲ್ಲೂಕು ನ್ಯಾಯಾಲಯದಲ್ಲಿ ಇವರಿಗೆ ನ್ಯಾಯ ದೊರೆತಿದ್ದು, ಅಲ್ಲಿ ಕೇವಲ ರೂ. ೭೦೦ ಜೀವನಾಂಶ ಕೊಡುವಂತೆ ಸೂಚಿಸಿದ್ದಾರೆ. ಇಲ್ಲಿ ನ್ಯಾಯಾಲಯ ತನ್ನ ಗಮನಕ್ಕೆ ಬಂದಂತೆ ಹುಸೇನ್‌ಬಿಯವರ ಗಂಡನ ತಿಂಗಳ ಆದಾಯವನ್ನು ಗಣನೆಗೆ ತೆಗೆದುಕೊಂಡು ಈ ತೀರ್ಪು ನೀಡಿದೆ. ನ್ಯಾಯಾಲಯ ನ್ಯಾಯಿಕವಾಗಿ ಗಮನಿಸಬೇಕಾದ ಅಂಶಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳುತ್ತದೆ ಎಂಬುದು ಈ ಪ್ರಕರಣದ ಮೂಲಕ ಸಾಬೀತಾಗುತ್ತದೆ. ಆದರೆ ಪುರುಷ ಪ್ರಧಾನ ವ್ಯವಸ್ಥೆ ಎಷ್ಟೊಂದು ಚಾಣಾಕ್ಷತನದಿಂದ ತಂತ್ರಗಳನ್ನು ಹೆಣೆದುಕೊಂಡಿದೆ ಎಂದರೆ ಕಾನೂನಿನ ಕಣ್ಣಿಗೂ ಮಣ್ಣೆರೆಚುವ ಕಾರ್ಯ ಮಾಡುತ್ತಿದೆ.

ಹುಸೇನ್‌ಬಿಯವರ ಗಂಡ ಮೊದಲೆ ಇಂತಹ ಸಂದರ್ಭ ಬರಬಹುದೆಂದು ದುಡಿದದ್ದೆಲ್ಲವನ್ನು ಎರಡನೇ ಹೆಂಡತಿಯ ಹೆಸರಿನಲ್ಲಿ ಇರಿಸಿದ್ದು, ಆ ಮೂಲಕ ಹುಸೇನ್‌ಬಿಯವರ ಬದುಕಿಗೆ ಸರಿಯಾದ ರಕ್ಷಣೆ ಇಲ್ಲದಂತೆ ಮಾಡಿದ್ದಾರೆ. ಹುಸೇನ್‌ಬಿಯವರ ಗಂಡನಿಗೆ ಅದು ಎರಡನೇ ಮದುವೆಯಾಗಿರದೇ, ಅವರು ವಿವಾಹಬಾಹಿರ ಸಂಬಂಧವನ್ನು ಹೊಂದಿದ್ದು, ಅದನ್ನು ಹುಸೇನ್‌ಬಿಯವರು ಪ್ರತಿ ಹಂತದಲ್ಲೂ ವಿರೋಧಿಸಿದ ಕಾರಣ ಅವರಿಗೆ ಇಂತಹ ಸ್ಥಿತಿಯನ್ನು ಬೇಕಂತಲೇ ಅವರ ಗಂಡ ನಿರ್ಮಾಣ ಮಾಡಿದ್ದಾರೆ. ಇಲ್ಲಿ ಹುಸೇನ್‌ಬಿಯವರು ತಮ್ಮ ನಾಲ್ಕು ಮಕ್ಕಳ ಹತ್ತಿರವೂ ಜೀವನಾಂಶಕ್ಕಾಗಿ ಮೊರೆ ಹೋಗಬಹುದಾಗಿದೆ. ಆದರೆ ಅವರು ಮಕ್ಕಳ ಮೇಲಿನ ಪ್ರೀತಿಯಿಂದಾಗಿ ಆ ಕಾರ್ಯಕ್ಕೆ ಕೈಹಾಕಿಲ್ಲ. ನ್ಯಾಯಾಲಯ ಇಂತಹ ಯಾವ ಪ್ರಸಂಗಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಕಾರಣ ಕಾನೂನಿನ ವ್ಯಾಪ್ತಿಗೂ ಕೂಡ ಒಂದಷ್ಟು ಇತಿಮಿತಿಗಳಿದ್ದು, ಅದರ ವ್ಯಾಪ್ತಿಯಲ್ಲಿಯೇ ಅದು ತನ್ನ ಕಾರ್ಯ ಕೈಗೊಳ್ಳುತ್ತದೆ. ಇಂತಹ ಪ್ರಕರಣಗಳನ್ನು ಗಮನಿಸಿದಾಗ ಪುರುಷ ಪ್ರಧಾನ ವ್ಯವಸ್ಥೆ ಕಾನೂನಿಗೂ ಕೂಡಾ ತನ್ನ ಹುನ್ನಾರಗಳನ್ನು ಬಿಟ್ಟುಕೊಡದೇ ತನಗೆ ಹೇಗೆ ಬೇಕೋ ಹಾಗೆ ತನ್ನ ಬದುಕನ್ನು ಕಟ್ಟಿಕೊಳ್ಳುತ್ತಿದೆ. ಕಾನೂನಿನ ಕೈಗೆ ಸಿಲುಕಿಕೊಳ್ಳದಂತೆ ತನ್ನ ಚಹರೆಯನ್ನು ಪಸರಿಸುತ್ತಿರುವುದು ಈ ಪ್ರಕರಣದ ಮೂಲಕ ಸಾಬೀತಾಗುತ್ತದೆ.

ಇನ್ನು ಪ್ರಕರಣ-೪ರಲ್ಲಿ ರೇಣುಕಮ್ಮ ಎಂಬ ಮಹಿಳೆಯು ವ್ಯವಸ್ಥೆಯ ಹುನ್ನಾರಕ್ಕೆ ಪ್ರಾಣವನ್ನು ಕಳೆದುಕೊಂಡಿರುವುದು ಕಂಡುಬರುತ್ತದೆ. ಹಿಂಸೆ ಅತಿರೇಕದಲ್ಲಿದ್ದಾಗ ಅದನ್ನು ಸಹಿಸಿಕೊಳ್ಳಲಾಗದೇ ಜೀವವನ್ನು ಕಳೆದುಕೊಳ್ಳುವ ತೀರ್ಮಾನಕ್ಕೆ ಮಹಿಳೆಯರು ಬರಬೇಕಾಗುತ್ತದೆ. ರೇಣುಕಮ್ಮ ತಾಯಿಯ ಬಳಿಯಲ್ಲಿ ತನ್ನ ಮೇಲಾಗುತ್ತಿರುವ ದೌರ್ಜನ್ಯವನ್ನು ತಿಳಿಸಿದಾಗಲೂ ತಾಯಿ ಅದನ್ನು ಮಕ್ಕಳಿಗೋಸ್ಕರ

ಸಹಿಸಿಕೊಳ್ಳುವಂತೆ ಹೇಳುತ್ತಾರೆ. ಇಲ್ಲಿ ರೇಣುಕ್ಕಮ್ಮಳ ತಾಯಿ ಶಾಂತಮ್ಮ ಸಾಮಾಜಿಕ ರೂಢಿ ಪದ್ಧತಿಗಳಂತೆ ಮಗಳಿಗೆ, 'ಹೆಣ್ಣಾದವಳು ಸಹಿಸಿಕೊಳ್ಳಬೇಕು' ಎಂದು ಪುರುಷ ಪ್ರಧಾನ ವ್ಯವಸ್ಥೆಯ ಮಾದರಿಯಲ್ಲಿ ಸಲಹೆ ನೀಡುತ್ತಾಳೆ. ಕೊನೆಗೆ ಅದುವೇ ಅವಳ ಬಾಳಿಗೆ ಮುಳುವಾಗಿ ಪರಿಣಮಿಸುತ್ತದೆ. ಪುರುಷಶಾಹಿ ವ್ಯವಸ್ಥೆ ತನ್ನ ಉಳಿವಿಗಾಗಿ ಈ ತೆರನಾಗಿ ಈಗಾಗಲೇ ಅದೆಷ್ಟೋ ಹೆಣ್ಣು ಮಕ್ಕಳ ಜೀವವನ್ನು ಬಲಿತೆಗೆದುಕೊಂಡಿರುವುದು, ಬಲಿ ತೆಗೆದುಕೊಳ್ಳುತ್ತಿರುವುದು ಕಂಡುಬರುತ್ತದೆ.

ಶಾಂತಮ್ಮನವರ ದೂರಿನಂತೆ ಪ್ರಕರಣವನ್ನು ದಾಖಲು ಮಾಡಿಕೊಂಡಿದ್ದು, ನ್ಯಾಯಾಲಯ ಅದನ್ನು ತನಿಖೆಗೊಳಪಡಿಸುವಂತೆ ಪೊಲೀಸರಿಗೆ ಸೂಚಿಸಿದೆ. ಶಾಂತಮ್ಮನವರ ದೂರಿನಂತೆ ಸಾಕ್ಷಾಧಾರಗಳು ದೊರೆಯುವುದು ಕಷ್ಟವಾಗಿದೆ. ರೇಣುಕಮ್ಮನವರ ಗಂಡನ ಮನೆಯವರು ಆಕೆಗೆ ವಿವಾಹಬಾಹಿರ ಸಂಬಂಧ ಇದ್ದು, ಅದನ್ನು ಪ್ರಶ್ನಿಸಿದಕ್ಕೆ ಹೀಗೆ ಮಾಡಿಕೊಂಡಿರುವುದಾಗ ಹೇಳಿಕೆ ನೀಡಿದ್ದಾರೆ. ಆಕೆಗೆ ಯಾರೊಂದಿಗೆ ಸಂಬಂಧ ಇತ್ತೆಂದು ತಿಳಿದಿಲ್ಲ, ಆದರೆ ಜನರು ಅದನ್ನು ಕಂಡು ಹೇಳಿದ್ದರಿಂದ ಪ್ರಶ್ನಿಸಬೇಕಾಯಿತೆಂದು ಕಾನೂನಿನಿಂದ ತಪ್ಪಿಸಿಕೊಳ್ಳಲು ಈ ರೀತಿಯ ಹೇಳಿಕೆ ನೀಡುವುದು ಕಂಡುಬರುತ್ತದೆ. ತಾಯಿ ದೇವದಾಸಿ, ಮಗಳಿಗೂ ಅಂತಹ ನಡುವಳಿಕೆ ಬಳುವಳಿಯಾಗಿ ಬಂದಿರಬಹುದು ಎಂದು ಆರೋಪಿಸಿದ್ದಾರೆ. ಹೀಗೆ ಎಲ್ಲಾ ಕಡೆಯಿಂದಲೂ ಹೆಣ್ಣಿನ ಚಾರಿತ್ರ್ಯವಧೆ ಮಾಡುತ್ತ ಅವರ ಬದುಕನ್ನು ಸಂಪೂರ್ಣವಾಗಿ ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ವ್ಯವಸ್ಥೆಯು ಸದಾ ಒಂದಲ್ಲ ಒಂದು ರೀತಿಯಲ್ಲಿ ಕಾರ್ಯನಿರ್ವಹಿಸುತ್ತಲೇ ಇರುತ್ತದೆ.

ನ್ಯಾಯಾಲಯದಲ್ಲಿ ನ್ಯಾಯಾಧೀಶರು ಈ ಪ್ರಕರಣದ ಬಗ್ಗೆ ವಿಚಾರಣೆ ನಡೆಸುತ್ತಿದ್ದು, ಅದು ಸಾಕ್ಷಾಧಾರಗಳನ್ನು ನಂಬುತ್ತದೆ. ಇಂತಹ ಸಾಕ್ಷಾಧಾರಗಳನ್ನು ರೇಣುಕ್ಕಮ್ಮಳ ಗಂಡನ ಮನೆಯವರು ತಮಗೆ ಬೇಕಾದಂತೆ ದೊರಕಿಸಿಕೊಳ್ಳುತ್ತಿದ್ದಾರೆ. ಈ ಪ್ರಕರಣದ ನ್ಯಾಯ ತೀರ್ಮಾನ ಇನ್ನೂ ನ್ಯಾಯಾಲಯದಲ್ಲಿದ್ದು ರೇಣುಕಮ್ಮ ಹಾಗೂ ಅವರ ತಾಯಿಗೆ ಸೂಕ್ತ ನ್ಯಾಯ ದೊರಕುತ್ತದೆಯೇ ಎಂದು ಕಾದುನೋಡಬೇಕಿದೆ.

ಇದೇ ರೀತಿಯಾಗಿ **ಪ್ರಕರಣ-೫**ರಲ್ಲಿ ಶಾಂತಮ್ಮ ಎಂಬ ಮಹಿಳೆ ಗಂಡ ಹಾಗೂ ಅತ್ತೆಯ ಕಿರುಕುಳ ತಾಳಲಾರದೇ ನೇಣಿಗೆ ಶರಣಾಗಿದ್ದು, ಅವರ ತಂದೆ ದೂರು ದಾಖಲಿಸಿರುತ್ತಾರೆ. ಈ ಪ್ರಕರಣದಲ್ಲಿ ಶಾಂತಮ್ಮಳು ತನ್ನ ಗಂಡ ಮತ್ತು ಅತ್ತೆ ತನಗೆ ನೀಡುತ್ತಿರುವ ಕಿರುಕುಳವನ್ನು ತಂದೆ-ತಾಯಿಗಳಿಗೆ ತಿಳಿಸಿದಾಗ, ಅವರು ಎಲ್ಲಾ ಸರಿ ಹೋಗುತ್ತದೆ ಎಂದು ಹೇಳಿ ಕಳುಹಿಸಿರುತ್ತಾರೆ. ಸಮಸ್ಯೆ ಸೂಕ್ಷ್ಮವಿರುವಾಗಲೇ ಅದನ್ನು ಬಗೆಹರಿಸುವ ಕೆಲಸ ಯಾರು ಮಾಡುವುದಿಲ್ಲ. ಬದಲಾಗಿ ಕಾಲಮಿಂಚಿ ಹಿಂಸೆಯನ್ನು ತಾಳಲಾರದೇ ಜೀವ ಕಳೆದುಕೊಂಡಾಗ ನ್ಯಾಯಕ್ಕಾಗಿ ಹೋರಾಡುತ್ತಾರೆ. ಇನ್ನು ಅದೆಷ್ಟೋ ಇಂತಹ ಪ್ರಕರಣಗಳಲ್ಲಿ ನ್ಯಾಯಕ್ಕಾಗಿ ಹೋರಾಟವನ್ನೂ ಸಹ ಮಾಡುವುದಿಲ್ಲ. ಬದಲಿಗೆ ಸತ್ತವಳು ಸತ್ತು ಹೋದಳು ಎಂದು ಕೈ ತೊಳೆದುಕೊಂಡು ಬಿಡುತ್ತಾರೆ. ಕಾರಣ ಎಲ್ಲರೂ ಪುರುಷ ಪ್ರಧಾನ ವ್ಯವಸ್ಥೆಯಿಂದ ಪ್ರೇರೇಪಣೆಗೊಂಡವರಾಗಿರುತ್ತಾರೆ. ಹಾಗೂ ಗೊತ್ತಿಲ್ಲದಂತೆ ಅದೇ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವವರಾಗಿರುತ್ತಾರೆ.

ವಿಶೇಷವಾಗಿ ನ್ಯಾಯಾಲಯವು ಇಂತಹ ಪ್ರಕರಣಗಳಲ್ಲಿ ಹೆಚ್ಚು ಸಾಕ್ಷಾಧಾರಗಳಿಗೆ ಮಾನ್ಯತೆ ನೀಡುತ್ತದೆ. ಇಲ್ಲಿ ಶಾಂತಮ್ಮನವರ ತಂದೆ-ತಾಯಿ ಎಲ್ಲರೂ ತಮ್ಮ ಮಗಳಿಗೆ ಹಿಂಸೆ ನೀಡಿದ್ದು ನಿಜವಿರುತ್ತದೆ ಎಂದು ಹೇಳಿದ್ದಾರೆ. ಆದರೆ ಶಾಂತಮ್ಮಳ ಗಂಡನ ಮನೆಯವರು ಯಾವುದೇ ರೀತಿಯ ಹಿಂಸೆ ನೀಡಿರುವುದಿಲ್ಲ ಎಂದು ಮರು ಹೇಳಿಕೆ ಹೇಳಿರುತ್ತಾರೆ. ಯಾಕೆ ಹೀಗೆ ಮಾಡಿಕೊಂಡಳೋ ಗೊತ್ತಿಲ್ಲ. ತವರು ಮನೆಯಿಂದ ಬಂದ ಮೇಲೆ ಹೀಗೆ ಮಾಡಿಕೊಂಡಿದ್ದು, ಅಲ್ಲೆ ಏನೋ ಅಹಿತಕರ ಘಟನೆ ನಡೆದಿರಬಹುದು ಎಂದು ಹೇಳಿಕೆ ನೀಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ಮಾತುಗಳ ಸಾಕ್ಷಾಧಾರಗಳನ್ನು ಇಲ್ಲಿ ಪೂರಕವಾಗಿಟ್ಟು ಕೊಳ್ಳುತ್ತದೆಯೇ ವಿನಃ ಅದೇ ಅಂತಿಮ ಸತ್ಯ ಎಂದು ನಂಬುವುದಿಲ್ಲ. ಇಂತಹ ಪ್ರಕರಣಗಳಲ್ಲಿ ಬಲವಾದ ಸಾಕ್ಷಾಧಾರಗಳನ್ನು ಒದಗಿಸುವಂತೆ ಶಾಂತಮ್ಮಳ ತಂದೆ-ತಾಯಿಗಳಿಗೆ ಸೂಚನೆ ನೀಡಿದೆ, ಹಾಗೂ ಆರಕ್ಷಕರಿಗೂ ಕೂಡಾ ಇದರ ಬಗ್ಗೆ ಸೂಕ್ತ ತನಿಖೆ ಕೈಗೊಳ್ಳುವಂತೆ ಆದೇಶ ನೀಡಿದೆ.

ಕಾನೂನು ಇಲ್ಲಿ ಪ್ರತಿಯೊಂದಕ್ಕೂ ಸಾಕ್ಷಾಧಾರಗಳನ್ನು ಕೇಳುವ ಉದ್ದೇಶವೇನೆಂದರೆ ನಿರಪರಾಧಿಗಳಿಗೆ ಶಿಕ್ಷೆ ಆಗದೇ, ನಿಜವಾದ ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು ಎಂಬುವುದಾಗಿರುತ್ತದೆ. ಆದರೆ ಕುಟುಂಬದೊಳಗೆ ಮಹಿಳೆಯರ ಮೇಲೆ ನಡೆಯುವ ಭಾವನಾತ್ಮಕ ಹಿಂಸೆಗಳಿಗೆ ಸಾಕ್ಷಿಗಳನ್ನು ಒದಗಿಸುವುದು ಕಷ್ಟವಾಗುತ್ತದೆ. ಪುರುಷಶಾಹಿ ವ್ಯವಸ್ಥೆ ಎಲ್ಲೂ ಸುಳಿವು ಬಿಟ್ಟುಕೊಡದೇ ತನ್ನ ಕಾರ್ಯ ನೆರವೇರಿಸಿಕೊಳ್ಳುತ್ತಿರುವುದು ಇಂತಹ ಪ್ರಕರಣಗಳ ಮೂಲಕ ಸಾಬೀತಾಗುತ್ತದೆ.

ಇನ್ನು **ಪ್ರಕರಣ-೬**ರಲ್ಲಿ ನಿಂಬಕ್ಕನವರು ಗಂಡನಿಂದ ಸಾಕಷ್ಟು ಹಿಂಸೆಗೊಳಗಾಗಿದ್ದು, ಆ ಹಿಂಸೆಯ ತೀವ್ರತೆ ಆಕೆಯ ಜೀವವನ್ನೇ ಬಲಿ ಪಡೆದಿರುತ್ತದೆ. ನಿಂಬಕ್ಕ ಗಂಡನಿಂದ ಹಿಂಸೆಗೊಳಗಾಗಿ ತನ್ನ ತಂದೆ ತಾಯಿಯರ ಬಳಿ ವಿಷಯವನ್ನು ಹೇಳಿಕೊಂಡಾಗ ಅವರು ಆಕೆಗೆ ಸಮಾಧಾನ ಹೇಳಿ ಕಳುಹಿಸಿರುತ್ತಾರೆ. ಗಂಡನ ಮನೆಯಲ್ಲಿ ಎಷ್ಟೇ ಹಿಂಸೆ ಕೊಟ್ಟರೂ ಅದನ್ನು ಸಹಿಸಿಕೊಂಡು ಹೋಗುವಂತೆ ಹೇಳುವ ನಿಂಬಕ್ಕನವರ ತಂದೆ-ತಾಯಿಯವರು ಪುರುಷ ಪ್ರಧಾನ ವ್ಯವಸ್ಥೆಯ ನಿರ್ವಾಹಕರಂತೆ ಕಂಡುಬರುತ್ತಾರೆ. ಗಂಡನ ಮನೆಯಲ್ಲಿ ಹೆಣ್ಣು ಎಷ್ಟೇ ಹಿಂಸೆಗೊಳಗಾದರೂ ಅದನ್ನು ಒಪ್ಪಿಕೊಂಡು ಬಾಳುವಂತೆ ಹೆಣ್ಣಿಗೆ ಸೂಚಿಸಲಾಗುತ್ತದೆ. ಅದು ಯಾವ ಹಂತದವರೆಗೆ ಎಂದರೆ, ಸತ್ತರೂ ಅಲ್ಲಿಯೇ ಸಾಯಬೇಕು ಎಂದು ಸೂಚಿಸುವಷ್ಟರ ಮಟ್ಟಿಗೆ ಕಿವಿಮಾತುಗಳನ್ನು ಹೇಳಲಾಗುತ್ತದೆ. ಅಂತೆಯೇ ನಿಂಬಕ್ಕನವರು ಅದರ ಭಾಗವಾಗಿ ಅನ್ಯಾಯದ ಸಾವಿಗೆ ಶರಣಾಗಬೇಕಾಗುತ್ತದೆ. ಇದಾದ ನಂತರ ಆಕೆಯ ತಂದೆ, ಅಳಿಯ ಷಣ್ಮುಖಪ್ಪ ಮತ್ತು ಅವರ ಹಿರಿಯ ಮಗನ ವಿರುದ್ಧ ದೂರು ದಾಖಲಿಸುತ್ತಾರೆ.

ಈ ಪ್ರಕರಣ ಜಿಲ್ಲಾ ನ್ಯಾಯಾಲಯದ ವ್ಯಾಪ್ತಿಗೆ ಬಂದು ನಿಲ್ಲುತ್ತದೆ. ಈ ಪ್ರಕರಣವನ್ನು ದಾಖಲಿಸಿಕೊಂಡ ನಂತರ ಪೊಲೀಸ್ ಅಧಿಕಾರಿಗಳು ತನಿಖೆ ನಡೆಸಿ ಇದು ಕೊಲೆ ಎಂದು ಪರಿಗಣಿಸಿ ಪ್ರಕರಣವನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಾರೆ. ಪೊಲೀಸರು ನಿಂಬಕ್ಕಳ ಗಂಡನನ್ನು ಹಾಗೂ ಆಕೆಯ ಹಿರಿಯ ಮಗನನ್ನು ಕರೆಸಿ ವಿಚಾರಣೆಗೊಳಪಡಿಸಿ ಬಂಧಿಸುತ್ತಾರೆ. ಇವರು

ಶ್ರೀಮಂತ ಕುಟುಂಬಕ್ಕೆ ಸೇರಿದವರಾಗಿದ್ದರಿಂದ ನ್ಯಾಯಾಲಯದಲ್ಲಿ ತಮ್ಮ ಪರವಾಗಿ ವಾದ ಮಂಡಿಸಲು ಪ್ರತ್ಯೇಕ ವಕೀಲರನ್ನು ನೇಮಿಸಿಕೊಳ್ಳುತ್ತಾರೆ. ಬಂಧನದಲ್ಲಿರುವ ಇವರು ೨ ತಿಂಗಳಿನ ನಂತರ ಜಾಮೀನು ಪಡೆದು ಹೊರಗೆ ಬಂದಿರುತ್ತಾರೆ. ಈ ಪ್ರಕರಣ ಹಲವಾರು ಅಂಶಗಳ ಕಾರಣದಿಂದ ಇನ್ನೂ ವಿಚಾರಣೆ, ತನಿಖೆ ಹಂತದಲ್ಲಿರುವುದು ಕಂಡುಬರುತ್ತದೆ.

ಪ್ರಕರಣ-೭ರಲ್ಲಿ ಲಲಿತಾ ಎಂಬ ಅಪ್ರಾಪ್ತ ಯುವತಿಯ ವಿವಾಹವು ಅಪ್ರಾಪ್ತ ವಯಸ್ಸಿನ ಯುವಕ ನಿಂಗಪ್ಪ ಎಂಬ ಯುವಕನೊಂದಿಗೆ ನೆರವೇರಿರುತ್ತದೆ. ಇದರ ಬಗ್ಗೆ ಮಾಹಿತಿ ಹೊಂದಿದ ಸರ್ಕಾರಿ ನಿಯೋಜಿತ ಅಧಿಕಾರಿಗಳು ಹೋಗಿ ಪರಿಶೀಲಿಸಿದಾಗ ಅದು ಬಾಲ್ಯ ವಿವಾಹವಾಗಿರುವುದು ಖಚಿತವಾಗಿರುತ್ತದೆ. ಬಾಲ್ಯ ವಿವಾಹವು ಕಾನೂನುಬಾಹಿರ ಎಂದು ಈಗಾಗಲೇ ಬಹುತೇಕರಿಗೆ ತಿಳಿದಿದ್ದು, ಇಂತಹ ಮದುವೆಗಳನ್ನು ಗೌಪ್ಯವಾಗಿ ಮಾಡಿ ಮುಗಿಸುತ್ತಿದ್ದಾರೆ. ಈ ಬಾಲ್ಯ ವಿವಾಹಕ್ಕೆ ತಮ್ಮದೇ ಆದ ಸಮಸ್ಯೆಗಳನ್ನು ಸಹ ಹೇಳುತ್ತಾರೆ. ಅದೇ ರೀತಿ ನಿಂಗಪ್ಪ ಹಾಗೂ ಲಲಿತಾರವರ ತಂದೆ ತಾಯಿಯರು ತಮ್ಮ ಬಡತನ ಹಾಗೂ ನಾಲ್ಕು ಜನ ಹೆಣ್ಣುಮಕ್ಕಳಿರುವ ಕಾರಣಗಳನ್ನು ನೀಡಿದ್ದಾರೆ.

ಈ ಪ್ರಕರಣ ಸದ್ಯ ವಿಚಾರಣಾ ಹಂತದಲ್ಲಿದ್ದು ಇದರ ಬಗ್ಗೆ ಇನ್ನು ಯಾವುದೇ ತೀರ್ಮಾನ ಹೊರಬಿದ್ದಿಲ್ಲ.

ಪ್ರಕರಣ-೮ರಲ್ಲಿ ಬಸವಣ್ಣೆವ್ವನವರು ತಮ್ಮ ಮಗಳಾದ ಸಾವಿತ್ರಿಗೆ ಫಕೀರ್‌ಸಾಬ್ ಎಂಬುವರೊಂದಿಗೆ ಅಂತರ್‌ಜಾತಿ ವಿವಾಹ ಮಾಡಿಕೊಟ್ಟಿರುತ್ತಾರೆ. ಸಾವಿತ್ರಿಯವರದ್ದು ಪ್ರೇಮ ವಿವಾಹವಾಗಿರುತ್ತದೆ. ಗಂಡನ ಮನೆಯಲ್ಲಿ ವಾಸಿಸಲು ಮನ್ನಣೆ ದೊರೆಯದ ಕಾರಣ ಪ್ರತ್ಯೇಕ ಮನೆ ಮಾಡಿಕೊಂಡು ವಾಸವಿರುತ್ತಾರೆ. ಸಾವಿತ್ರಿಯವರ ಪತಿಗೆ ಸಾವಿತ್ರಿಯ ತಂಗಿಯ ಬಗ್ಗೆ ಮೋಹ ಉಂಟಾಗಿದ್ದು ಆಕೆಯನ್ನು ಒಲಿಸಿಕೊಳ್ಳುವುದಾಗಿ, ಮದುವೆ ಆಗುವುದಾಗಿ ಫಕೀರ್‌ಸಾಬ್ ಹೇಳುತ್ತಾರೆ. ಈ ವಿಷಯ ಸಾವಿತ್ರಿ ಹಾಗೂ ಅವರ ಗಂಡನ ನಡುವಿನ ಜಗಳಕ್ಕೆ ಮೂಲ ಕಾರಣವಾಗುತ್ತದೆ. ಸಾವಿತ್ರಿಯವರ ತಂಗಿಯ ಮದುವೆ ಬೇರೆಯವರೊಂದಿಗೆ ನಿಶ್ಚಯವಾಗಿದ್ದೇ ಫಕೀರ್‌ಸಾಬ್‌ರ ಮನಸ್ಥಿತಿ ಹದಗೆಡಲು ಕಾರಣವಾಗುತ್ತದೆ. ಅಲ್ಲದೇ ಜಗಳ ದೀರ್ಘಕ್ಕೆ ಹೋದಾಗ ಹೆಂಡತಿಯನ್ನು ಕೊಂದು ತಮ್ಮ ಮಗುವಿನ ಆರೈಕೆಗಾಗಿ ಎಂಬ ನೆಪ ಒಡ್ಡಿ ಸಾವಿತ್ರಿಯವರ ತಂಗಿಯನ್ನೇ ಮದುವೆಯಾಗಲು ಹೊಂಚು ಹಾಕುತ್ತಾರೆ. ಇದರಿಂದಾಗಿ ಸಾವಿತ್ರಿಯವರು ಮನನೊಂದು ಬೆಂಕಿ ಹಚ್ಚಿಕೊಳ್ಳುತ್ತಾರೆ. ದುರಾದೃಷ್ಟವಶಾತ್ ಸಾವಿತ್ರಿ ಬದುಕುಳಿಯುತ್ತಾರೆ. ಗಂಡಿನ ಮರು ಮದುವೆಗೆ ಹೆಚ್ಚು ಮಾನ್ಯ ಮಾಡಿರುವ ಸಾಮಾಜಿಕ ವ್ಯವಸ್ಥೆಯೇ ಇಂತಹದ್ದೊಂದು ಘಟನೆಗೆ ಕಾರಣವಾಗಿದೆ ಎಂದು ಹೇಳಬಹುದು.

ಈ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿದಾಗ ಸಾವಿತ್ರಿಯವರು ಹೇಳಿಕೆ ನೀಡಲು ಅಸಮರ್ಥರಾಗಿರುತ್ತಾರೆ. ಅವರ ತಾಯಿಯಾದ ಬಸವಣ್ಣೆವ್ವನವರ ದೂರಿನ ಆಧಾರದ ಮೇಲೆ ಪ್ರಕರಣವನ್ನು ಪೊಲೀಸರು ದಾಖಲಿಸಿರುತ್ತಾರೆ. ಪೊಲೀಸರು ಪ್ರಾಥಮಿಕ ವರದಿಯೊಂದಿಗೆ ಸಾವಿತ್ರಿಯವರ ಗಂಡನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಆಗ ಫಕೀರ್‌ಸಾಬ್ ನ್ಯಾಯಾಧೀಶರ ಮುಂದೆ ತನ್ನದೇನು ತಪ್ಪಿಲ್ಲ ಎಂದು ಹೇಳುತ್ತಾನೆ. ಸಾವಿತ್ರಿಯ ತಂಗಿಯನ್ನು ಮದುವೆಯಾಗಲು ಇಚ್ಛಿಸಿದ್ದು

ನಿಜ, ಆದರೆ ನಾನು ಸಾವಿತ್ರಿಗೆ ಬೆಂಕಿ ಹಚ್ಚಿಲ್ಲ ಎಂದು ಹೇಳುತ್ತಾನೆ. ಪ್ರಕರಣ ವಿಚಾರಣೆ ಹಂತದಲ್ಲಿರುವಾಗಲೇ ಸಾವಿತ್ರಿಯವರ ಆರೋಗ್ಯ ಸುಧಾರಿಸಿಕೊಂಡ ಕಾರಣ ಅವರು ತಮಗೆ ಬೆಂಕಿ ಹತ್ತಿರುವುದಕ್ಕೂ ಗಂಡನಿಗೂ ಯಾವುದೇ ಸಂಬಂಧವಿಲ್ಲ. ಸ್ಟೋ ಬರಸ್ಟ್ ಆಗಿ ಬೆಂಕಿ ಹತ್ತಿಕೊಂಡಿತು ಎಂದು ಹೇಳಿಕೆ ನೀಡುತ್ತಾರೆ. ಇಲ್ಲಿಗೆ ಈ ಪ್ರಕರಣ ನ್ಯಾಯಾಲಯದಿಂದ ಮುಕ್ತಗೊಳ್ಳುತ್ತದೆ.

ಸಾವಿತ್ರಿಯವರನ್ನು ಗೌಪ್ಯವಾಗಿ ವಿಚಾರಿಸಿದಾಗ, 'ಆಗಿದ್ದು ಆಗಿ ಹೋಗ್ಯದ. ಈಗ ಗಂಡನ್ನ ಜೈಲಿಗೆ ಕಳಿಸಿದ್ರ ಮುಂದ ನನ್ ಜೀವನ ಹೆಂಗ ಅನಿಸಿ ಹಿಂಗ್ ಮಾಡಿದ್ಯಾ' ಎಂದು ಹೇಳುತ್ತಾರೆ. ಸಾವಿತ್ರಿ ತಾನು ಸತ್ತಿದ್ದರೆ ಗಂಡನನ್ನು ಜೈಲಿಗೆ ಕಳುಹಿಸಬಹುದಿತ್ತು, ಆದರೆ ತಾನು ಬದುಕುಳಿದಿದ್ದು, ಸಮಾಜದಲ್ಲಿ ಗಂಡನಿಲ್ಲದೇ ಜೀವನ ನಡೆಸುವುದು ಕಷ್ಟ, ಮಗು ಬೇರೆ ಇದೆ, ಅದಕ್ಕೆ ಈ ನಿರ್ಧಾರ ತೆಗೆದುಕೊಂಡಿದ್ದೇನೆ ಎಂದು ಹೇಳುತ್ತಾರೆ. ಈ ಪ್ರಕರಣದಿಂದ ಹೊರಬರಲು ನೀವು ಹುಡುಕಿಕೊಂಡ ಮಾರ್ಗ ಹೇಗೆ ತಿಳಿಯಿತು? ನಿಮಗೆ ಕಾನೂನಿನ ಬಗ್ಗೆ ಅರಿವು ಇದೆಯೇ? ಎಂದು ಕೇಳಿದಾಗ, ಇಲ್ಲಾ ಯಾರೋ ಹೀಗೆ ಸ್ಟೋ ಬರಸ್ಟ್ ಅಂತ ಹೇಳು, ನಿನ್ ಗಂಡ ಬಚಾವ್ ಆಗತಾನ ಅಂತ ಹೇಳಿದ್ರು, ಅದ್ಕ ಹಂಗ್ ಮಾಡಿದೆ ಎಂದು ಯಾವುದೇ ಅಳುಕಿಲ್ಲದೆ ಉತ್ತರಿಸುತ್ತಾರೆ. ಇಲ್ಲಿ ಕಾನೂನು ಸಮರ್ಥವಾಗಿ ಕೆಲಸ ಮಾಡಿದಾಗಲೂಸಹ ವ್ಯವಸ್ಥೆಯು ಹೇಗೆ ಸತ್ಯವನ್ನು ಮರೆಮಾಚಿ ತನ್ನ ಅಸ್ತಿತ್ವವನ್ನು ಸ್ಥಾಪಿಸುತ್ತದೆ ಎಂಬುವುದು ತಿಳಿದುಬರುತ್ತದೆ. ಮಹಿಳೆಯ ಮೇಲೆ ಏನೇ ಹಿಂಸೆಗಳಾದರೂ ಸಹ ಆಕೆ ಅದನ್ನು ಯಾಕಾಗಿ ಸಹಿಸಿಕೊಳ್ಳಬೇಕು ಎಂಬುವುದಕ್ಕೆ ಈ ಪ್ರಕರಣ ಒಂದು ಉತ್ತಮ ಉದಾಹರಣೆಯಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ಬಹುತೇಕ ಪ್ರಕರಣಗಳು ತೀರಾ ದೀರ್ಘಹಂತ ತಲುಪಿದಾಗ ನ್ಯಾಯಾಲಯದಲ್ಲಿ ದಾಖಲುಗೊಂಡಿರುವುದು ಕಂಡುಬರುತ್ತದೆ. ಈ ರೀತಿಯ ಸಮಸ್ಯೆಗಳಿಗೆ ಕಾನೂನು ನ್ಯಾಯ ದೊರಕಿಸಿಕೊಡಬಲ್ಲದೇ ವಿನಃ ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯಗಳನ್ನು ತಡೆಯುವಲ್ಲಿ ವಿಫಲವಾಗಿದೆ. ಕಾನೂನು ಅಪರಾಧಗಳಿಗೆ ಸರಿಯಾದ ನ್ಯಾಯ ಒದಗಿಸಲು ಸಾಕ್ಷಿ ಪುರಾವೆಗಳನ್ನು ಕೇಳುತ್ತದೆ. ಅವು ಪ್ರಕರಣಕ್ಕೆ ಪೂರಕವಾಗಿದ್ದಲ್ಲಿ ಮಾತ್ರ ಮಹಿಳೆಯರಿಗೆ ಸೂಕ್ತ ನ್ಯಾಯ ದೊರಕುತ್ತದೆ. ಈ ಸಾಕ್ಷಿ-ಪುರಾವೆಗಳನ್ನು ಪಡೆಯುವಲ್ಲಿ ಸ್ವಲ್ಪ ವಿಳಂಬವಾಗುವುದರಿಂದ ಪ್ರಕರಣ ಇತ್ಯರ್ಥವಾಗಲು ಕೆಲವೊಮ್ಮೆ ಹೆಚ್ಚು ಸಮಯ ಪಡೆದುಕೊಳ್ಳುತ್ತದೆ ಹಾಗೂ ಸಂಬಂಧಿಸಿದ ವಕೀಲರ ಕಾರ್ಯ ವೈಖರಿಯೂ ಸಹ ಇಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಮಹಿಳೆಯರು ಅಥವಾ ಅವರ ಸಂಬಂಧಿಗಳು ಸಮಸ್ಯೆ ಚಿಕ್ಕದಿರುವಾಗಲೇ ಎಚ್ಚೆತ್ತುಕೊಂಡರೆ ಮಹಿಳೆಯರ ಮೇಲಾಗುವ ದೊಡ್ಡ ಪ್ರಮಾಣದ ಹಿಂಸೆಗಳಿಂದ ತಪ್ಪಿಸಬಹುದಾಗಿದೆ ಎಂಬುವುದು ತಿಳಿದುಬರುತ್ತದೆ.

अध्याय ऐलु

ಸಮಾರೋಪ

೭.೧. ಅಧ್ಯಯನದ ಸಮೀಕ್ಷಾತ್ಮಕ ನೋಟ
೭.೨. ಅಧ್ಯಯನದ ಫಲಿತಗಳು
೭.೩. ಅಧ್ಯಯನದ ಮುಂದಿನ ಸಾಧ್ಯತೆಗಳು.

೭.

ಸಮಾರೋಪ

೭.೧. ಅಧ್ಯಯನದ ಸಮೀಕ್ಷಾತ್ಮಕ ನೋಟ

ಶತ ಶತಮಾನಗಳಿಂದ ಸ್ಥಾಪಿತವಾಗುತ್ತಲೇ ಬಂದ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳನ್ನು ಅವುಗಳು ಹರಡಿಕೊಂಡಿರುವ ಮೂಲಗಳಿಂದ ಈಗಾಗಲೇ ಅರ್ಥೈಸಿಕೊಂಡಿದ್ದೇವೆ. ಈ ಬಗೆಯ ದೌರ್ಜನ್ಯಗಳು ಹೆಣ್ಣನ್ನು ಅಧೀನವಾಗಿಸಿಕೊಳ್ಳುವ ಹಿನ್ನೆಲೆಯಲ್ಲಿ ಜರುಗುತ್ತಿರುವುದನ್ನು ಕಾಣಬಹುದಾಗಿದೆ. ಈ ರೀತಿಯಾಗಿ ಅಧೀನವಾಗಿಸಿಕೊಳ್ಳುವ ಕಾರ್ಯ ಏಕೆ ನಡೆಯುತ್ತಿದೆ ಎಂಬುವುದನ್ನು ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳ ಹಿನ್ನೆಲೆಯಲ್ಲಿ ಗಮನಿಸಿದಾಗ, ಅದು 'ಪುರುಷ ಪ್ರಧಾನತೆ' ಯ ಉಳಿವಿಗಾಗಿ ಎಂದು ತಿಳಿದುಬರುತ್ತದೆ. ಈ ಸತ್ಯವನ್ನು ಅರಿತಾಗಲೂ ಸಹ ಮಹಿಳೆಯರು ಪುರುಷ ಪ್ರಧಾನ ವ್ಯವಸ್ಥೆಯ ಕಪಿಮುಷ್ಠಿಯಿಂದ ಬಿಡಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಕಾರಣ ವ್ಯವಸ್ಥೆ ಅಷ್ಟೊಂದು ನಾಜೂಕಿನಿಂದ ತನ್ನ ತಂತ್ರಗಳನ್ನು ಹೆಣೆದುಕೊಂಡು ಬಂದಿದೆ. ಒಂದು ವೇಳೆ ಯಾರಾದರು ಇದರಿಂದ ಬಿಡುಗಡೆ ಹೊಂದಲು ಸಾಹಸ ಮಾಡಿದ್ದಾದಲ್ಲಿ ಅಂತವರನ್ನು ವ್ಯವಸ್ಥೆ ಒಂದಲ್ಲ ಒಂದು ರೀತಿಯಲ್ಲಿ ತನ್ನ ಬಲೆಗೆ ತಳುಕು ಹಾಕಿಕೊಂಡು ಕಾಡಲಾರಂಭಿಸುತ್ತದೆ.

ವ್ಯವಸ್ಥೆಯ ಈ ಬಗೆಯ ಹುನ್ನಾರಗಳನ್ನು ಸಂಶೋಧನಾ ಅಧ್ಯಯನದ ಮೂಲಕ ಗಮನಿಸಿದಾಗ, ಹೆಣ್ಣು ನೈಸರ್ಗಿಕವಾಗಿ ಪಡೆದುಕೊಂಡ ವಿಶೇಷತೆಯು ಒಂದರ್ಥದಲ್ಲಿ ಕೌಟುಂಬಿಕ ದೌರ್ಜನ್ಯಗಳಿಗೆ ಒಳಗಾಗಲು ಕಾರಣವಾಗಿದೆ ಎಂದೆನಿಸುತ್ತದೆ. ಇದನ್ನರಿತ ಪುರುಷರು ಮಹಿಳೆಯರ ಮೇಲೆ ಹಿಡಿತ ಸಾಧಿಸಲು ಮೊದಲು ಹೆಣ್ಣಿನ ಲೈಂಗಿಕತೆಯ ಮೇಲೆ ಹಿಡಿತ ಸಾಧಿಸಿಕೊಳ್ಳುವ ತಂತ್ರ ಬಳಿಸಿಕೊಂಡಿರುವುದು ಕಂಡುಬರುತ್ತದೆ. ನಂತರ ಸಂಘ ಜೀವಿಯಾದ ಮಾನವರು ತಮ್ಮ ಬದುಕಿನ ನಿರ್ವಹಣೆಗೆ ಆರ್ಥಿಕತೆಯೊಂದನ್ನು ನಿರ್ಮಾಣ ಮಾಡಿಕೊಂಡಿದ್ದು, ಅದರ ಮೇಲೂ ಪುರುಷರು ತಮ್ಮ ಹಿಡಿತವನ್ನು ಸಾಧಿಸಿಕೊಳ್ಳುವ ಮೂಲಕ ಮಹಿಳೆಯರನ್ನು ಆರ್ಥಿಕ ಸಂಕಷ್ಟಕ್ಕೊಳಪಡಿಸಿರುವುದು ಕಂಡುಬರುತ್ತದೆ. ಇವುಗಳಷ್ಟೇ ಅಲ್ಲದೆ ಪುರುಷರು ಸಮಾಜ, ಸಂಸ್ಕೃತಿ, ಸಂಪ್ರದಾಯ, ನಡಾವಳಿಗಳು, ವಿಜ್ಞಾನ, ತಂತ್ರಜ್ಞಾನಗಳೆಲ್ಲವನ್ನು ತಮಗೆ ಪೂರಕವಾಗುವ ರೀತಿಯಲ್ಲಿ ರೂಪಿಸಿಕೊಂಡು, ಆ ನಿಟ್ಟಿನಲ್ಲಿ ಸಮಾಜವನ್ನು ತಮಗೆ ಹೇಗೆ ಬೇಕೋ ಹಾಗೆ ನಿರ್ಮಿಸಿಕೊಳ್ಳುತ್ತಾ ಮಹಿಳೆಯರನ್ನು ಆ

ಮೂಲಕ ಹಿಂಸೆಗೊಳಪಡಿಸಿರುವುದನ್ನು ಕಾಣಬಹುದಾಗಿದೆ. ಜೊತೆಗೆ ಪುರುಷ ಪ್ರಧಾನ ವ್ಯವಸ್ಥೆ ತಮ್ಮ ಕಾರ್ಯಸಾಧನೆಗಾಗಿ ಮಹಿಳೆಯರನ್ನೇ ಖಳನಾಯಕಿಯರನ್ನಾಗಿ ಮಾಡಿರುವುದು ವಿಶೇಷವಾಗಿದೆ.

ಈ ರೀತಿಯಾಗಿ ಅತ್ಯಂತ ನಾಜೂಕಿನಿಂದ ಹೆಣೆಯಲ್ಪಟ್ಟ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರು ದಿನನಿತ್ಯ ಕೌಟುಂಬಿಕ ಹಿಂಸೆಯಂತಹ ಕೃತ್ಯದಿಂದ ನಲುಗಿ ಹೋಗುತ್ತಿದ್ದಾರೆ. ಮಹಿಳೆಯರು ಇಂತಹ ಸಂದರ್ಭಗಳನ್ನು, ಶೋಷಣೆಯ ನೆಲೆಗಳನ್ನು ಕೆಲವೊಮ್ಮೆ ಒಪ್ಪಿಕೊಳ್ಳುತ್ತಾ, ಕೆಲವೊಮ್ಮೆ ಪ್ರತಿಭಟಿಸುತ್ತಾ, ಕೆಲವೊಮ್ಮೆ ಅದೇ ಸಮಾಜದ ಮಾದರಿಗಳಾಗುತ್ತಾ, ಕೊನೆಗೆ ವ್ಯವಸ್ಥೆ ಬೀಸಿದ ಬಲೆಯಿಂದ ಬಿಡಿಸಿಕೊಳ್ಳಲಾಗದೇ ಪುರುಷ ಪ್ರಧಾನ ವ್ಯವಸ್ಥೆಯ ಅವಶೇಷಗಳಾಗುತ್ತಿದ್ದಾರೆ. ಇದು ನಿಜಕ್ಕೂ ಮಹಿಳೆಯರ ಪಾಲಿನ ದುರಂತ ಎಂದು ಹೇಳಬಹುದು. ಪುರುಷರು ಎಷ್ಟೊಂದು ಚಾಣಾಕ್ಷತನದಿಂದ ವ್ಯವಸ್ಥೆಯನ್ನು ನಿರ್ಮಾಣ ಮಾಡಿದ್ದಾರೆಂದರೆ ತಮ್ಮನ್ನೂ ಅದರೊಳಗೆ ಸಿಲುಕಿ ಹಾಕಿಕೊಂಡವರಂತೆ ವರ್ತಿಸುತ್ತಾ, ತಮ್ಮ ಅನುಕೂಲಕ್ಕಾಗಿ ಏನು ಬೇಕೋ ಅದೆಲ್ಲವನ್ನು ವ್ಯವಸ್ಥೆಯಲ್ಲಿ ಪರ್ಯಾಯವಾಗಿ ರೂಪಿಸಿಕೊಂಡಿರುವುದು ಕಂಡುಬರುತ್ತದೆ.

ವ್ಯವಸ್ಥೆ ತನ್ನ ಅಸ್ತಿತ್ವಕ್ಕಾಗಿ ಎಷ್ಟೊಂದು ಕೆಳಮಟ್ಟಕ್ಕಿಳಿದಿದೆ ಎಂದರೆ, ಮಹಿಳೆಯರನ್ನು ಸದಾ ಒಂದಲ್ಲಾ ಒಂದು ಬಗೆಯ ಹಿಂಸೆಗೊಳಪಡಿಸಿ ಅವರು ಪ್ರತಿಭಟಿಸಲಾರದಂತೆ ಪ್ರತಿತಂತ್ರಗಳನ್ನು ರೂಪಿಸಿಕೊಂಡು ಬಂದಿದೆ. ಅವರನ್ನು ಇಂಚಿಂಚಿಗೂ ದೈಹಿಕವಾಗಿ, ಶಾಬ್ದಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಭಾವನಾತ್ಮಕವಾಗಿ, ಲೈಂಗಿಕವಾಗಿ ಹೀಗೆ ಎಲ್ಲಾ ಬಗೆಯಿಂದಲೂ ಹಿಂಸೆಗೊಳಪಡಿಸುತ್ತಾ ಹೊರಟದೆ. ಈ ಹಿಂಸೆಯ ತೀವ್ರತೆ ಎಷ್ಟಿದೆ ಎಂದರೆ, ಹೆಣ್ಣು ಭ್ರೂಣವಾಗಿರುವಾಗಲೇ ಅಥವಾ ಶಿಶುವಾಗಿರುವಾಗಲೇ ಕೊಲೆ ಮಾಡುವಂತಹ ಮಟ್ಟಕ್ಕೆ ತಲುಪಿದೆ. ಅಷ್ಟೇ ಅಲ್ಲದೇ ಅವರನ್ನು ವಯಸ್ಕರಾದ ನಂತರವೂ ವರದಕ್ಷಿಣೆ, ವೈಧವ್ಯ ಪರಿಪಾಲನೆಯಂತಹ ಕಾರಣಗಳಿಗಾಗಿ ಹಿಂಸಿಸುವ ಸಂದರ್ಭಗಳು ಕಾಣಬರುತ್ತವೆ. ಜೊತೆಗೆ ಮರ್ಯಾದೆ ಹತ್ಯೆಗೂ ಸಹ ಹೆಣ್ಣು ಮಕ್ಕಳು ಒಳಗಾಗುತ್ತಿದ್ದಾರೆ.

ಮಹಿಳೆಯರ ಮೇಲಿನ ಇಂತಹ ಅದೆಷ್ಟೋ ದೌರ್ಜನ್ಯಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸ್ತ್ರೀವಾದಿಗಳು ಹೋರಾಟಗಳನ್ನು ನಡೆಸಿದ್ದಾರಾದರೂ, ಅವು ಸಂಪೂರ್ಣವಾಗಿ ಫಲಪ್ರದವಾಗುತ್ತಿಲ್ಲ. ಕಾರಣ ವ್ಯವಸ್ಥೆ ಅಂತಹ ಹೋರಾಟಗಳಿಗೆ ಮತ್ತೇನನ್ನಾದರು ಪ್ರತಿತಂತ್ರಗಳನ್ನು ರೂಪಿಸುತ್ತಲೇ ಇರುತ್ತದೆ. ಉದಾಹರಣೆಗೆ, ಉದಾರವಾದಿ ಸ್ತ್ರೀವಾದಿಗಳು ಹೆಣ್ಣು ಆರ್ಥಿಕವಾಗಿ ಸ್ವತಂತ್ರಳಾಗಬೇಕು. ಹೊರಗೆ ಬಂದು ದುಡಿಯಬೇಕು ಅಂದಾಗ ಮಾತ್ರ ಸಮಾನತೆ ಸಾಧ್ಯ ಎಂದು ಹೇಳುತ್ತಾರೆ. ವ್ಯವಸ್ಥೆ ಇದನ್ನು ಒಪ್ಪಿಕೊಂಡು, ಮಹಿಳೆಯರು ಹೊರಗೆ ಬಂದು ದುಡಿಯುವ ಅವಕಾಶಗಳನ್ನು ನಿರ್ಮಿಸಿತು. ಆದರೆ ಆ ಮೂಲಕ ಹೆಣ್ಣಿಗೆ ಇಬ್ಬಗೆಯ ಜವಾಬ್ದಾರಿಗಳು ಹೆಚ್ಚಾಗಿ ಮತ್ತಷ್ಟು ದೈಹಿಕವಾಗಿ ಕುಗ್ಗುವಂತೆ ಮಾಡಿತು. ಹಾಗೂ ಆಕೆಯ ದುಡಿಮೆಯ ಮೇಲೆ ಆಕೆಗೆ ಹಕ್ಕು ಇಲ್ಲದಂತೆ ಮಾಡಿ ಅದನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಆಕೆಯ ಗಳಿಕೆ ಮೇಲಿನ ಹಕ್ಕನ್ನೂ ಸಹ ಆಕೆಯಿಂದ ಕಬಳಿಸಿತು. ಹೀಗೆ ಹೆಣ್ಣಿನ ಬಂಧನದ ವಿಮೋಚನೆಗಾಗಿ ಏನಾದರು ಮಾಡ ಹೊರಟಿದ್ದಾದರೆ ಅದಕ್ಕೆ ಪುರುಷ ಪ್ರಧಾನ ವ್ಯವಸ್ಥೆ ಪ್ರತಿತಂತ್ರಗಳನ್ನು ರೂಪಿಸುತ್ತಾ ತನ್ನ ವಿರುದ್ಧದ ಎಲ್ಲಾ ನಡಾವಳಿಗಳನ್ನು ನಿಷ್ಕ್ರೀಯಗೊಳಿಸುವುದು ಕಂಡುಬರುತ್ತದೆ.

ಆದರೆ ಕೆಲವು ಸ್ತ್ರೀವಾದಿಗಳು ಮಹಿಳೆಯರು ತಮ್ಮ ಲೈಂಗಿಕತೆ ಮೇಲೆ ತಾವು ಹಿಡಿತ ಸಾಧಿಸಿಕೊಂಡಿದ್ದಾದರೆ ಪುರುಷ ಪ್ರಧಾನ ವ್ಯವಸ್ಥೆಯ ಕಪಿಮುಷ್ಟಿಯಿಂದ ಬಿಡಿಸಿಕೊಳ್ಳಲು ಸಾಧ್ಯ ಎಂದು ಹೇಳುತ್ತಾರೆ. ಜೊತೆಗೆ ತಮ್ಮ ಗರ್ಭ, ಸಂತಾನೋತ್ಪತ್ತಿ ಕ್ರಿಯೆಯನ್ನು ಶ್ರೇಷ್ಠ ಎಂದು ಭಾವಿಸಿಕೊಳ್ಳುವಂತೆ ಹೇಳುತ್ತಾರೆ. ಇದು ನಿಜವಾಗಿಯೂ ಮಹಿಳೆಯರು ದೌರ್ಜನ್ಯಗಳಿಂದ ಮುಕ್ತಿ ಪಡೆದುಕೊಳ್ಳಲು ಒಂದು ಅಂಶವಾಗಬಹುದಾಗಿದೆ. ಆದರೆ ಇದು ಕೊಂಚ ಮಟ್ಟಿಗೆ ತಂದೊಡ್ಡುವ ಅಪಾಯವನ್ನೂ ಸಹ ಅರಿಯಬೇಕಾಗುತ್ತದೆ. ಗರ್ಭವನ್ನು ಶ್ರೇಷ್ಠ ಎಂದು ಭಾವಿಸಿಕೊಳ್ಳುವ, ಹೆಣ್ಣಿನ ಸಂತಾನೋತ್ಪತ್ತಿಯನ್ನು ಗಂಡಿಗಿಂತಲೂ ಶ್ರೇಷ್ಠ ಎಂದು ಭಾವಿಸಿಕೊಳ್ಳುವ ಹಿನ್ನೆಲೆಯಲ್ಲಿ ಸಂತಾನೋತ್ಪತ್ತಿ ಕ್ರಿಯೆ ಸಾಧ್ಯವಾಗದ ಮಹಿಳೆಯರನ್ನು ಆಗ ಕನಿಷ್ಠರು ಎಂದು ಹೇಳಲು ಸಾಧ್ಯವಿಲ್ಲ. ಇದರಿಂದ ಸಂತಾನೋತ್ಪತ್ತಿ ಸಾಧ್ಯವಾಗದ ಹೆಣ್ಣು ಮಕ್ಕಳು ತಮ್ಮಲ್ಲಿ ಕೊರತೆ ಇದೆ ಎಂದು ಭಾವಿಸಿಕೊಂಡು ನರಳುವಂತಾಗುತ್ತದೆ. ಇದರಿಂದ ಮತ್ತೆ ಹೆಣ್ಣುಗಳಲ್ಲಿ ಎರಡು ವರ್ಗಗಳು ನಿರ್ಮಾಣಗೊಂಡು ಅಲ್ಲಿ ಮಹಿಳೆಯರು ಮತ್ತೆ ಹಿಂಸೆಗೊಳಗಾಗುವಂತಾಗುತ್ತದೆ. ಆದ್ದರಿಂದ ಮಹಿಳೆಯರು ಪುರುಷ ಪ್ರಧಾನ ವ್ಯವಸ್ಥೆಯಿಂದ ಅನುಭವಿಸುವಂತಹ ಹಿಂಸೆಗಳಿಗೆ ಇನ್ನೂ ಸೂಕ್ತಮಾರ್ಗ ಕಂಡುಕೊಳ್ಳಬೇಕಾಗಿದೆ.

ಸ್ತ್ರೀವಾದದ ನಿಲುವುಗಳಷ್ಟೇ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ನಿವಾರಿಸುವ ಮಾರ್ಗವಾಗಿರದೇ ಸಾಮಾಜಿಕ ಸಂದರ್ಭದಲ್ಲಿ ಕಾನೂನು ವ್ಯವಸ್ಥೆ ಕೂಡಾ ಮಹಿಳೆಯರಿಗೆ ಪರಿಹಾರ ನೀಡುವ ಹಿನ್ನೆಲೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಆದರೆ ಪ್ರಸ್ತುತ ವ್ಯವಸ್ಥೆ ಇದರ ಮೇಲೂ ತನ್ನ ನೆರಳನ್ನು ವ್ಯಾಪಿಸಿದೆ. ಕಾನೂನು ಬಲಿಷ್ಠವಾಗಿರುವ ಕಾರಣದಿಂದ ಪುರುಷ ಪ್ರಧಾನ ವ್ಯವಸ್ಥೆ ಅದರ ತಂಟೆಗೆ ಹೋಗದೇ, ಕಾನೂನುಗಳನ್ನು ಬಳಸಿಕೊಳ್ಳುವವರ ಮೇಲೆ ತನ್ನ ಹಿಡಿತವನ್ನು ಸಾಧಿಸುವ ತಂತ್ರಗಾರಿಕೆಯನ್ನು ಹೂಡಿದೆ. ಮಹಿಳೆಯರಿಗೆ ಕಾನೂನುಗಳನ್ನು ಬಳಸಿಕೊಳ್ಳದಂತೆ ಅನೇಕ ಹುನ್ನಾರಗಳನ್ನು ರೂಪಿಸುತ್ತಾ ಬಂದಿದೆ. ಇದರಿಂದಾಗಿ ಮಹಿಳೆಯರು ವ್ಯವಸ್ಥೆ ರೂಪಿತ ದೌರ್ಜನ್ಯಗಳಿಂದ ಹೊರಬರಲು ಸದಾ ಕಷ್ಟಪಡುವಂತಾಗಿದೆ.

ಪುರುಷ ಪ್ರಧಾನ ವ್ಯವಸ್ಥೆ ಎಷ್ಟೊಂದು ಜಟಿಲವಾಗಿದೆ ಎಂದರೆ, ಯಾವ ಬಗೆಯಲ್ಲೂ ಮಹಿಳೆಯರನ್ನು ಸಹಜವಾಗಿ ಬದುಕಲು ಬಿಡದಿರುವುದೇ ಸಾಕ್ಷಿಯಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲೂ ಸಮಾನತೆ ಕಾಣದಿರುವುದು ಪ್ರಜಾತತ್ವ ವ್ಯವಸ್ಥೆಯ ವೈಫಲ್ಯತೆಯನ್ನು ಎತ್ತಿ ತೋರಿಸುತ್ತದೆ. ಪುರುಷ ಪ್ರಧಾನ ವ್ಯವಸ್ಥೆ ಕಾನೂನು, ಸಂವಿಧಾನಕ್ಕಿಂತಲೂ ಬಲಿಷ್ಠವಾಗಿ ಬೆಳೆದು ನಿಂತಿರುವುದರಿಂದ ಗಂಡು-ಹೆಣ್ಣಿನ ನಡುವೆ ಸಮಾನತೆ ಸಾಧಿಸದಿರಲು ಕಾರಣವಾಗಿದೆ. ಕಾನೂನು ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತಡೆಯುವಲ್ಲಿ, ಮಹಿಳೆಯರಿಗಾಗುತ್ತಿರುವ ಅನ್ಯಾಯಗಳನ್ನು ಸೆದೆಬಡಿಯುವಲ್ಲಿ ಹೆಚ್ಚು ಅನುಕೂಲವಾಗಿವೆ ಏನೋ ನಿಜ. ಆದರೆ ಇವುಗಳ ಬಳಕೆ ಮಾತ್ರ ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ. ಇದಕ್ಕೆ ಕಾರಣ ಬಲಿಷ್ಠವಾಗಿರುವ ಪುರಷ ಪ್ರಧಾನ ವ್ಯವಸ್ಥೆ ಎಂದು ಮತ್ತೆ ಮತ್ತೆ ಹೇಳಬೇಕಾಗುತ್ತದೆ.

ಇಷ್ಟೆಲ್ಲಾ ಕಾನೂನುಗಳು, ಮಹಿಳಾ ಪರ ವಿಚಾರಧಾರೆಗಳು, ಮಹಿಳಾ ಪರವಾದ ಚಳುವಳಿಗಳು ಇದ್ದಾಗಲೂ ಸಹ ಮಹಿಳೆಯರು ಕೌಟುಂಬಿಕ ದೌರ್ಜನ್ಯಗಳಿಂದ ಹಾಗೂ ಅವುಗಳು ಬೀರಬಹುದಾದ

ಪರಿಣಾಮಗಳಿಂದ ಮಾತ್ರ ಹೊರಬರಲಾಗಿಲ್ಲ. ಮಹಿಳೆಯರು ಈ ರೀತಿಯಾಗಿ ಅನುಭವಿಸುತ್ತಿರುವ ದೌರ್ಜನ್ಯಗಳಿಂದ ದೈಹಿಕವಾಗಿ, ಭಾವನಾತ್ಮಕವಾಗಿ, ಲೈಂಗಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಹೀಗೆ ಇನ್ನೂ ಅನೇಕ ರೀತಿಯಲ್ಲಿ ಜರ್ಝರಿತರಾಗುತ್ತಿದ್ದಾರೆ. ಜೊತೆಗೆ ಇದರಿಂದ ಅನೇಕ ಪರಿಣಾಮಗಳನ್ನೂ ಸಹ ಎದುರಿಸುವಂತಾಗಿದೆ. ಹಿಂಸೆಯ ಪರಿಣಾಮದ ಫಲ ಎಷ್ಟಿದೆ ಎಂದರೆ, ಅದು ಮಹಿಳೆಯರ ಪ್ರಾಣವನ್ನೂ ಸಹ ತೆಗೆದುಕೊಳ್ಳುವಷ್ಟು ಮುಂದುವರೆದಿದೆ. ಇದು ಮನುಷ್ಯರು ನಡೆಸುವ ಅತ್ಯಂತ ಹೇಯ ಕೃತ್ಯವಾಗಿದೆ. ಪುರುಷ ಪ್ರಧಾನ ವ್ಯವಸ್ಥೆ ತನ್ನದೇ ವರ್ಗಕ್ಕೆ ಸೇರಿದ ಮಹಿಳೆಯರನ್ನು ತನ್ನ ಅಸ್ತಿತ್ವಕ್ಕಾಗಿ ಕೊಲ್ಲುತ್ತಿರುವುದು ಇಡೀ ಮಾನವ ಸಂಕುಲ ನಾಚಿಗೆ ಪಟ್ಟುಕೊಳ್ಳಬೇಕಾದ ಸಂಗತಿಯಾಗಿದೆ.

ಕ್ಷೇತ್ರ ಕಾರ್ಯದಿಂದ ದೊರೆತ ಪ್ರಕರಣಗಳನ್ನು ಮಹಿಳೆಯರು ಅನುಭವಿಸುತ್ತಿರುವ ಹಿಂಸೆಯ ಹಿನ್ನೆಲೆಯಲ್ಲಿ ವಿಶ್ಲೇಷಣೆಗೊಳಪಡಿಸಿದಾಗ, ಅಲ್ಲಿ ಪುರುಷಶಾಹಿ ವ್ಯವಸ್ಥೆಯ ತಂತ್ರಗಾರಿಕೆಗಳು ಮನದಟ್ಟಾಗುತ್ತಾ ಹೋಗುತ್ತವೆ. ಅಲ್ಲಿಯ ಮಹಿಳೆಯರ ಸ್ಥಿತಿ ಪ್ರಸ್ತುತ ವ್ಯವಸ್ಥೆಯಿಂದಾಗಿ ಮೂಕವೇದನೆ ಯಾಗಿರುವುದನ್ನು ಗಮನಿಸಬಹುದಾಗಿದೆ. ಹೀಗೆ ಪುರುಷಶಾಹಿ ವ್ಯವಸ್ಥೆಯಿಂದ ಅದೆಷ್ಟೋ ಮಹಿಳೆಯರು ಜರ್ಝರಿತರಾಗುತ್ತಾ ಮೌನರಾಗಿರುವುದು ಕಂಡುಬರುತ್ತದೆ. ಪುರುಷರಿಗೆ ಸಮಾನವಾಗಿ ಸಮಾಜದ ಮುಖ್ಯವಾಹಿನಿಗೆ ಬರುವಲ್ಲಿ ಹಿಂದೆ ಉಳಿದಿದ್ದಾರೆ. ಇದೇ ರೀತಿ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ ಮುಂದುವರೆದಿದ್ದೆ ಆದಲ್ಲಿ ಇಡೀ ಮಾನವ ಸಂಕುಲಕ್ಕೆ ಧಕ್ಕೆ ಉಂಟಾಗುತ್ತದೆ. ಮಹಿಳೆಯರ ಮೇಲೆ ದೌರ್ಜನ್ಯ ನಡೆಸಲು ಶ್ರೀಮಂತರು, ಬಡವರು, ಶಿಕ್ಷಿತರು, ಅಶಿಕ್ಷಿತರು, ಯಾವುದೇ ಜಾತಿ ವರ್ಣದವರೆನ್ನದೇ ಇಡೀ ಮಾನವ ಜನಾಂಗ ಇದಕ್ಕೆ ಕೈ ಜೋಡಿಸಿರುವುದು ಸತ್ಯ ಸಂಗತಿಯಾಗಿದೆ.

ಇದುವರೆಗಿನ ಎಲ್ಲಾ ವಿಷಯಗಳನ್ನು ಗಮನಿಸಿದಾಗ ಮನವರಿಕೆ ಆಗುವ ಮಹಿಳಾ ಬದುಕಿನ ಅತಿ ದೊಡ್ಡ ದುರಂತವೆಂದರೆ, ಅದು ಮಹಿಳೆಯರು ತನ್ನವರೆನಿಸಿಕೊಂಡವರಿಂದಲೇ ದೌರ್ಜನ್ಯಕ್ಕೆ ಒಳಗಾಗುತ್ತಿರುವುದಾಗಿದೆ. ಪ್ರತಿಯೊರ್ವ ಸದಸ್ಯರಿಗೆ ಉತ್ತಮ ಜೀವನ ಕಲ್ಪಿಸುವ ಜವಾಬ್ದಾರಿ ಹೊತ್ತ ಕುಟುಂಬವು ತನ್ನ ಸದಸ್ಯರಿಗೆ ತನ್ನವರೆನಿಸಿಕೊಂಡವರಿಂದಲೇ ಅಪಮಾನಗೊಳಿಸುವ ವಾತಾವರಣ ವೊಂದನ್ನು ನಿರ್ಮಿಸಿರುವುದು ಕುಟುಂಬ ವ್ಯವಸ್ಥೆಯನ್ನೇ ಪ್ರಶ್ನಿಸುವಂತಾಗಿದೆ.

ಇಷ್ಟೇ ಅಲ್ಲದೇ, ಯಾವುದೇ ನಾಗರಿಕತೆಗಳಲ್ಲಿ ಮಹಿಳೆಯರ ಸ್ಥಾನ–ಮಾನಗಳನ್ನು ಗಮನಿಸಿದಾಗ ಅಲ್ಲಿ ಲಿಂಗಾಧಾರಿತ ಅಸಮಾನತೆಗಳಿರುವುದು ಗೋಚರವಾಗುತ್ತದೆ. ಹಾಗೂ ಇದರಿಂದ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಲು ಪುರುಷ ಪ್ರಧಾನ ವ್ಯವಸ್ಥೆ ಮಹಿಳೆಯರ ಸುತ್ತ ಹೇಗೆಲ್ಲಾ ರಾಜಕಾರಣ ಮಾಡುತ್ತಾ ಬಂದಿದೆ ಎಂಬುದು ತಿಳಿದುಬರುತ್ತದೆ. ಮಾನವರ ಕೌಟುಂಬಿಕ ಜೀವನದ ಮೊದಲ ಕುರುಹುಗಳು ದೊರೆಯಬಹುದಾದ ನಾಗರಿಕತೆಗಳಲ್ಲೂ ಸಹ ಸ್ತ್ರೀ–ಪುರುಷರಲ್ಲಿ ಲಿಂಗ ಭೇದಗಳಿದ್ದವು ಎಂಬುದನ್ನು ತೋರ್ಪಡಿಸುತ್ತವೆ. ಜೊತೆಗೆ ಮಹಿಳೆಯರಿಗೆ ಸಾಮಾಜಿಕವಾಗಿ ಹೇಗೆ ಕೌಟುಂಬಿಕ ದೌರ್ಜನ್ಯಗಳನ್ನು ಒಪ್ಪಿತವಾಗಿಸಿ ನಡೆಸಲಾಗುತ್ತಿತ್ತು ಎಂಬುವುದನ್ನು ಮನದಟ್ಟು ಮಾಡುತ್ತವೆ. ಇವೆಲ್ಲವನ್ನು ಗಮನಿಸಿದಾಗ ಸ್ತ್ರೀ–ಪುರುಷರಲ್ಲಿ ಸಮಾನತೆ ಎಂಬುದು ಅನಾಗರಿಕರಾಗಿ ಬದುಕುತ್ತಿದ್ದ ಅಥವಾ

ನಾಗರಿಕರಾಗ ಬಯಸಿ ಬದುಕು ಪ್ರಾರಂಭಿಸಿದ ಮೂಲ ಸಂದರ್ಭದಲ್ಲಿ ಮಾತ್ರ ಇದ್ದಿರಬಹುದು ಎಂದು ಹೇಳಬಹುದಾಗಿದೆ.

ಒಟ್ಟಾರೆಯಾಗಿ ಮಹಿಳೆಯರು ಪುರುಷರಿಗಿಂತ ಶ್ರೇಷ್ಠರೆಂಬ ಅಥವಾ ಪುರುಷರು ಮಹಿಳೆಯರಿಗಿಂತ ಶ್ರೇಷ್ಠರೆಂಬ ವ್ಯವಸ್ಥೆ ನಿರ್ಮಾಣಗೊಳ್ಳದೇ ನಿಸರ್ಗದಲ್ಲಿ ಸ್ತ್ರೀ – ಪುರುಷರಿಬ್ಬರೂ ಸಮಾನರು ಎಂಬಂತಹ ವಾತಾವರಣ ನಿರ್ಮಾಣಗೊಳ್ಳಬೇಕಾಗಿದೆ. ಈ ಕಾರ್ಯ ಸಾಧನೆಗೆ ಕೇವಲ ಮಹಿಳೆಯರಷ್ಟೇ ಮುಂದಾದರೆ ಸಾಧ್ಯವಾಗಲಾರದು. ಬದಲಾಗಿ ಇಡೀ ಸಮಾಜ ಮನುಕುಲದ ಉಳಿವನ್ನು ಅರಿವಾಗಿಸಿಕೊಂಡು ಹೋರಾಟ ನಡೆಸಬೇಕು. ಅಂದಾಗ ಮಾತ್ರ ಮಾನವ ಕುಲದ ಆರೋಗ್ಯಯುತ ಹೊಸ ಜಗತ್ತು ನಿರ್ಮಾಣಗೊಳ್ಳಲು ಸಾಧ್ಯವಾಗುತ್ತದೆ. ಒಟ್ಟು ಅಧಿಕಾರ ಕೇಂದ್ರಿತ ನೆಲೆಗಳನ್ನು ಅಥವಾ ಅವಶೇಷಗಳನ್ನು ಇಲ್ಲದಂತೆ ನಿರ್ನಾಮ ಮಾಡಿದಾಗ ಮಾತ್ರ ಒಂದು ಪರಿಪೂರ್ಣ ಆರೋಗ್ಯಯುತ ಸಮಾಜ ನಿರ್ಮಾಣಗೊಳ್ಳಲು ಸಾಧ್ಯವಾಗುತ್ತದೆ.

೭.೨. ಅಧ್ಯಯನದ ಫಲಿತಗಳು

ಮಹಿಳೆಯರ ಮೇಲಿನ ಕೌಟುಂಬಿಕ ಹಿಂಸೆಗೆ ಕಾರಣ ಪುರುಷ ಪ್ರಧಾನ ವ್ಯವಸ್ಥೆ ಎಂದು ಈಗಾಗಲೇ ತಿಳಿದಿದ್ದೇವೆ. ಆದರೆ ಹಿಂಸೆಯನ್ನು ಯಾವೆಲ್ಲಾ ಅಂಶಗಳಿಂದ ಸ್ಥಿರಗೊಳಿಸುವ ಉದ್ದೇಶವನ್ನು ಪುರುಷಶಾಹಿ ವ್ಯವಸ್ಥೆ ಹೊಂದಿದೆ ಎಂಬುದನ್ನ ಒಂದು ದೀರ್ಘ ಸಂಶೋಧನೆಯ ಮೂಲಕ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಂಶೋಧನಾ ಅಧ್ಯಯನ ಉತ್ತಮ ಕಾರ್ಯನಿರ್ವಹಿಸಿದೆ. ಅಧ್ಯಯನದ ದೃಷ್ಟಿಕೋನದಿಂದ ಪುರುಷಶಾಹಿ ವ್ಯವಸ್ಥೆಯ ಕಾರ್ಯಗಳನ್ನು ಗಮನಿಸಿದಾಗ ಅದು ಅತ್ಯಂತ ನಾಜೂಕಿನಿಂದ ತನ್ನ ಕೆಲಸ ನಿರ್ವಹಿಸುತ್ತಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಮಹಿಳೆಯರ ಮೇಲೆ ಹಿಂಸೆಯನ್ನು ಬಹುತೇಕ ಒಪ್ಪಿತ ನೆಲೆಗೆ ತರುವಲ್ಲಿ ಪುರುಷಶಾಹಿ ವ್ಯವಸ್ಥೆ ಯಶಸ್ವಿಯಾಗಿದೆ. ಆಚರಣೆ, ನಡಾವಳಿಗಳು, ಸಂಪ್ರದಾಯಗಳು ಎಂಬ ಅಂಶಗಳ ಮೂಲಕ ತನ್ನ ಉದ್ದೇಶ ಈಡೇರಿಸಿಕೊಳ್ಳುತ್ತಿರುವುದನ್ನೂ ಸಹ ಕಾಣಬಹುದಾಗಿದೆ. ಇವುಗಳನ್ನೆಲ್ಲವನ್ನು ಬಿಡಿಬಿಡಿಯಾಗಿಸಿದಾಗ ಮಾತ್ರ ಪುರುಷ ಪ್ರಧಾನ ವ್ಯವಸ್ಥೆಯ ತಂತ್ರಗಳು ಹೇಗೆ ಮಹಿಳೆಯರ ಮೇಲೆ ದೌರ್ಜನ್ಯ ನಡೆಸುತ್ತಿವೆ ಎಂಬುದನ್ನು ಮನಗಾಣಲು ಅನುಕೂಲವಾಗುತ್ತದೆ. ಪ್ರಸ್ತುತ ಸಂಶೋಧನಾ ಅಧ್ಯಯನದಿಂದ ಕೆಲವೊಂದು ಅಂಶಗಳು ಕಂಡುಬಂದಿದ್ದು, ಅವು ಇಂತಿವೆ,

೧. ಸಮಾಜದಲ್ಲಿ ಪಿತೃಸ್ಥಾನೀಯ ನೆಲೆಗಳು ರೂಪುಗೊಂಡಿರುವ ಹಿನ್ನೆಲೆಯಲ್ಲಿಯೇ ಹೆಣ್ಣುಮಕ್ಕಳು ಹೆಚ್ಚೆಚ್ಚು ಕೌಟುಂಬಿಕ ದೌರ್ಜನ್ಯಕ್ಕೊಳಗಾಗುತ್ತಿರುವುದು ಕಂಡುಬರುತ್ತದೆ.

೨. ಮನೆಯ ವಿಷಯಗಳಿಗೆ ಸಂಬಂಧಿಸಿದಂತೆ ಸಮಸ್ತ ಅಧಿಕಾರ ಪುರುಷರ ಹಿಡಿತದಲ್ಲಿರುವುದೇ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳಿಗೆ ಕಾರಣವಾಗಿದೆ. ಅಧಿಕಾರದ ನಿರ್ವಹಣೆ, ಮನೆಯ ಆರ್ಥಿಕತೆ, ಹೆಣ್ಣಿನ ಲೈಂಗಿಕತೆ ಯಾವುದರ ಮೇಲಾದರೂ ಅಧಿಕಾರ ಚಲಾಯಿಸುವಂತದ್ದಾಗಿದೆ.

೩. ಸ್ತ್ರೀ ಸಂಕುಲದ ಅಸ್ತಿತ್ವಕ್ಕೆ ಧಕ್ಕೆ ತರುವ ಅಸ್ತ್ರವಾಗಿ ಮಹಿಳೆಯರ ಮೇಲಿನ ಕೌಟುಂಬಿಕ ಹಿಂಸೆ ಸ್ಥಾಪಿತಗೊಂಡಿರುವುದನ್ನು ಕಾಣಬಹುದಾಗಿದೆ.

೪. ಸಾಮಾಜಿಕ ಸಂದರ್ಭದಲ್ಲಿ ತಾಯ್ತನದ ಅತಿಯಾದ ವೈಭವೀಕರಣ ಮಹಿಳೆಯರು ಸ್ವತಃ ಹಿಂಸೆಯನ್ನು ಸಹಿಸಿಕೊಳ್ಳುವಂತೆ ಮಾಡುತ್ತಿದೆ. ಈ ಹಿನ್ನೆಲೆಯಲ್ಲಿಯೇ ಬಹುತೇಕ ಮಹಿಳೆಯರು ಮಕ್ಕಳಿಗಾಗಿ ಎಲ್ಲವನ್ನು ಸಹಿಸಿಕೊಂಡಿರುವುದಾಗಿ ತಿಳಿಸುತ್ತಾರೆ.

೫. ಹೆಣ್ಣು ಹುಟ್ಟಿ ನೆಲೆಗೊಳ್ಳುವ ಪ್ರತಿ ಹಂತದಲ್ಲೂ ಆಕೆಯ ಮೇಲೆ ದೌರ್ಜನ್ಯಗಳು ನಡೆಯುತ್ತಿರುವುದನ್ನು ಕಾಣಬಹುದಾಗಿದೆ. ಅದು ಹುಟ್ಟಿದ ಮನೆಯಲ್ಲಾದರೂ ಅಥವಾ ಗಂಡನ ಮನೆಯಲ್ಲಾದರೂ ಆಗಿರಬಹುದಾಗಿದೆ.

೬. ವಿವಾಹ ವ್ಯವಸ್ಥೆಯನ್ನು ಧಿಕ್ಕರಿಸಿ ಸಂಗಾತಿ ಆಯ್ಕೆಯ ಸ್ವಾತಂತ್ರ್ಯದ ಹಿನ್ನೆಲೆಯಲ್ಲಿ ಕಟ್ಟಿಕೊಂಡ ಕುಟುಂಬ ವ್ಯವಸ್ಥೆಗಳಲ್ಲೂ ಮಹಿಳೆಯರು ಕೌಟುಂಬಿಕ ದೌರ್ಜನ್ಯಗಳಿಗೆ ಒಳಗಾಗುತ್ತಿದ್ದು, ಆ ಬಗೆಯ ವ್ಯವಸ್ಥೆಯಲ್ಲಿ ಬದುಕುವ ಮಹಿಳೆಯರಿಗೂ ನ್ಯಾಯಾಲಯದ ಮೂಲಕ ಪರಿಹಾರ ಇದ್ದು, ಅದನ್ನು ಅವರು ಸರಿಯಾಗಿ ಬಳಸಿಕೊಳ್ಳದೇ ಇರುವುದು ಕಂಡುಬರುತ್ತದೆ.

೭. ಪುರುಷ ಪ್ರಧಾನ ವ್ಯವಸ್ಥೆ ಮಹಿಳೆಯರ ಮೇಲೆ ಕೌಟುಂಬಿಕ ಹಿಂಸೆಯನ್ನು ಸ್ಥಾಪಿತಗೊಳಿಸಲು ಹೆಚ್ಚಾಗಿ ಮಹಿಳೆಯರನ್ನೇ ಬಳಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ಅತ್ತೆ, ನಾದಿನಿ, ತಾಯಿ ಎಂಬ ಮುಂತಾದ ಸಿದ್ಧ ಪಾತ್ರ ಮಾದರಿಗಳ ಮೂಲಕ ತನ್ನ ಕಾರ್ಯವನ್ನು ಸ್ಥಾಪಿಸುತ್ತಿರುವುದು ಕಂಡುಬರುತ್ತದೆ.

೮. ಹೆಣ್ಣಿಗೆ ಅತಿ ಚಿಕ್ಕ ವಯಸ್ಸಿನಲ್ಲಿ ವಿವಾಹ ಏರ್ಪಡಿಸುವ ಮೂಲಕ, ಶೀಲದ ಕಲ್ಪನೆ ನೀಡುವ ಮೂಲಕ ಹಾಗೂ ಹೆಣ್ಣಿನ ಶೀಲದ ಬಗ್ಗೆ ಅನುಮಾನ ವ್ಯಕ್ತಪಡಿಸುವ ಮೂಲಕ ಆಕೆಯ ಲೈಂಗಿಕತೆಯನ್ನು ನಿಯಂತ್ರಿಸಿರುವುದು ಕಂಡುಬರುತ್ತದೆ.

೯. ಮಹಿಳೆಯರಲ್ಲಿನ ವಿಶೇಷವಾದ ಸಂತಾನೋತ್ಪತ್ತಿ ಕ್ರಿಯೆ ಅವರನ್ನು ಯಾವಾಗ ಬೇಕಾದರೂ ಸುಲಭವಾಗಿ ಪ್ರಧಾನವಾಗಿಸಿ ಬಿಡಬಹುದೆಂಬ ಧೋರಣೆ ಹೆಣ್ಣಿನ ಲೈಂಗಿಕತೆಯನ್ನಾಧರಿಸಿದ ದೌರ್ಜನ್ಯಗಳಾಗುತ್ತಿರಲು ಕಾರಣವಾಗಿದೆ.

೧೦. ಮಹಿಳೆಯರಲ್ಲಿ, ಮಹಿಳಾ ಪರ ಕಾಳಜಿ ಉಳ್ಳವರಲ್ಲಿ ಪ್ರತಿಭಟನಾ ಮನೋಭಾವ ಇಲ್ಲದಿರುವುದು ಅವರ ಮೇಲಿನ ಕೌಟುಂಬಿಕ ದೌರ್ಜನ್ಯ ಹೆಚ್ಚುತ್ತಿರಲು ಕಾರಣವಾಗಿದೆ.

೧೧. ಮಹಿಳೆಯರು ಅನುಭವಿಸುತ್ತಿರುವ ದೌರ್ಜನ್ಯಗಳನ್ನು ತಡೆಯುವಲ್ಲಿ ಅನೇಕ ಕಾನೂನಾತ್ಮಕ ಪರಿಹಾರೋಪಾಯಗಳಿದ್ದು, ಅವುಗಳನ್ನು ಬಳಸಿಕೊಳ್ಳುವಲ್ಲಿ ಪುರುಷ ಪ್ರಧಾನ ವ್ಯವಸ್ಥೆ ತೊಡಕಾಗಿ ನಿರ್ಮಾಣಗೊಂಡಿದೆ.

೧೨. ಮಹಿಳೆಯರಲ್ಲಿ ತಮ್ಮ ಅಸ್ತಿತ್ವದ ಬಗ್ಗೆ ಪ್ರಜ್ಞೆ ಇಲ್ಲದಿರುವುದು ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳು ಹೆಚ್ಚುತ್ತಿರಲು ಕಾರಣವಾಗಿದೆ.

೧೩. ಮಹಿಳೆಯರು ಹೆಚ್ಚೆಚ್ಚು ಪರಾವಲಂಬಿಗಳಾಗಿರುವುದು, ಜೊತೆಗೆ ಸಾಮಾಜಿಕ ವ್ಯವಸ್ಥೆ ಅವರನ್ನು ಪರಾವಲಂಬಿಯಾಗುವಂತೆ ಮಾಡಿರುವುದು ಅವರ ಮೇಲೆ ಕೌಟುಂಬಿಕ ದೌರ್ಜನ್ಯಗಳು ಹೆಚ್ಚುತ್ತಿರಲು ಕಾರಣವಾಗಿದೆ.

೧೪. ಮಹಿಳೆಯರ ಮೇಲೆ ಸ್ಥಾಪಿತಗೊಂಡಿರುವ ಕೌಟುಂಬಿಕ ದೌರ್ಜನ್ಯ ಮಾನವ ಜನಾಂಗ ಮಾನವೀಯತೆಯನ್ನೇ ಮರೆತು ಬದುಕುತ್ತಿರುವುದಕ್ಕೆ ಸಾಕ್ಷಿಯಾಗಿದೆ.

೧೫. ಪುರುಷ ಪ್ರಧಾನ ವ್ಯವಸ್ಥೆ ಅತ್ಯಂತ ನಾಜೂಕಿನಿಂದ ಕಾರ್ಯನಿರ್ವಹಿಸುತ್ತಿದ್ದು, ತನ್ನ ಅಸ್ತಿತ್ವಕ್ಕಾಗಿ ಮಹಿಳೆಯರ ಮೇಲೆ ದೌರ್ಜನ್ಯವನ್ನು ಸ್ಥಾಪಿತಗೊಳಿಸಲು ಮಹಿಳೆಯರನ್ನೇ ಹೆಚ್ಚೆಚ್ಚು ಬಳಸಿಕೊಳ್ಳುತ್ತಿದೆ. ಈ ಮೂಲಕ ಮಹಿಳೆಯರು ಕಾನೂನಿನಡಿಯಲ್ಲಿ ಅಪರಾಧಿಗಳಾಗುತ್ತಿರುವುದನ್ನೂ ಸಹ ಗಮನಿಸಬಹುದಾಗಿದೆ.

೧೬. ಸ್ತ್ರೀಯರಂತೆ ತಾವು ವ್ಯವಸ್ಥೆಯ ಕೈಗೊಂಬೆಗಳು ಎಂಬಂತೆ ತೋರ್ಪಡಿಸುತ್ತ ಒಳಗೊಳಗೆ ಇಬ್ಬಗೆಯ ನೀತಿಗಳನ್ನು ಅನುಸರಿಸುವುದು ಕಂಡುಬರುತ್ತದೆ. ಉದಾ. ಸಮಾಜದಲ್ಲಿ ಏಕಪತ್ನಿತ್ವ ಮತ್ತು ಏಕಪತಿತ್ವವನ್ನು ಮಾನ್ಯ ಮಾಡಿದ್ದು, ಹೆಂಡತಿ ಸತ್ತ ನಂತರ ಗಂಡ ಆದವನು ಮಕ್ಕಳ ಆರೈಕೆಗೋಸ್ಕರ ಎಂದು ನೆಪ ಹೇಳಿ ಎರಡನೇ ಮದುವೆಯಾಗಿ ತನ್ನ ಲೈಂಗಿಕ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳುವುದು ಕಂಡುಬರುತ್ತದೆ. ಆದರೆ ಗಂಡ ಸತ್ತರೆ ಹೆಂಡತಿಗೆ ವೈದವ್ಯ ಪರಿಪಾಲನೆ ಮಾಡುವಂತೆ ಹೇಳಿ ಆಕೆಯ ಲೈಂಗಿಕತೆ ಮೇಲೆ ಸಂಪೂರ್ಣ ನಿಯಂತ್ರಣವನ್ನು ಹೇರುತ್ತದೆ.

೧೭. ಮಹಿಳೆಯರು ಯಾವ ಬಗೆಯ ಕೌಟುಂಬಿಕ ಹಿಂಸೆಗೆ ಹೆಚ್ಚು ಒಳಗಾಗುತ್ತಿದ್ದಾರೆ.

ಕ್ರಸಂ.	ದೌರ್ಜನ್ಯದ ಸ್ವರೂಪ	ಮಹಿಳೆಯರ ಸಂಖ್ಯೆ	ಪ್ರತಿಶತ (%)
೧.	ದೈಹಿಕ ಹಿಂಸೆ	೪೫	೧೮
೨.	ಲೈಂಗಿಕ ಹಿಂಸೆ	೩೫	೧೪
೩.	ಶಾಬ್ದಿಕ ಹಿಂಸೆ	೪೫	೧೮
೪.	ಭಾವನಾತ್ಮಕ ಹಿಂಸೆ	೪೫	೧೮
೫.	ಆರ್ಥಿಕ ಹಿಂಸೆ	೪೫	೧೮
೬.	ಸಾಮಾಜಿಕ ಹಿಂಸೆ	೩೫	೧೪
	ಒಟ್ಟು	೨೫೦	೧೦೦

ಈ ಮೇಲಿನ ಕೋಷ್ಟಕ ಸೂಚಿಸುವಂತೆ ಮಹಿಳೆಯರು ಅನೇಕ ಬಗೆಯ ಕೌಟುಂಬಿಕ ದೌರ್ಜನ್ಯಗಳಿಗೆ ಒಳಗಾಗುತ್ತಿದ್ದಾರೆ. ಅದರಲ್ಲಿ ದೈಹಿಕ, ಶಾಬ್ದಿಕ, ಭಾವನಾತ್ಮಕ ಮತ್ತು ಆರ್ಥಿಕ ಹಿಂಸೆಗಳಿಗೆ ಪ್ರತಿಯೊಂದಕ್ಕೂ ಪ್ರತಿಶತ ೧೮ ರಷ್ಟು ಮಹಿಳೆಯರು ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಅಂತೆಯೇ ಲೈಂಗಿಕ ಮತ್ತು ಸಾಮಾಜಿಕ ಹಿಂಸೆ ಇವೆರಡಕ್ಕೂ ತಲಾ ೧೪ ಪ್ರತಿಶತದಷ್ಟು ಮಹಿಳೆಯರು ದೌರ್ಜನ್ಯಗಳಿಗೆ ಒಳಗಾಗುತ್ತಿರುವುದು ಕಂಡುಬರುತ್ತದೆ. ಸಾಮಾಜಿಕ ಸಂದರ್ಭದಲ್ಲಿ ಲೈಂಗಿಕತೆಗೆ ಸಂಬಂಧಿಸಿದಂತೆ ಮಾತನಾಡುವುದನ್ನು ನಿಷೇಧಿಸಿರುವ ಹಿನ್ನೆಲೆಯಲ್ಲಿ ಅದೆಷ್ಟೋ ಮಹಿಳೆಯರು ಲೈಂಗಿಕ ಹಿಂಸೆಗೆ ಒಳಗಾಗುತ್ತಿದ್ದರೂ ಸಹ ಆ ವಿಚಾರವಾಗಿ ಹೆಚ್ಚು ಪ್ರಸ್ತಾಪಿಸದೇ ಇರುವುದು ಕಂಡುಬರುತ್ತದೆ. ವೈದವ್ಯ ಪರಿಪಾಲನೆ, ಬಾಲ್ಯ ವಿವಾಹ ಇಂತಹ ಹಲವಾರು

ಸಮಸ್ಯೆಗಳು ಸಮಾಜ ಒಪ್ಪಿತವಾದವುಗಳಿಂದ ಅವು ಅಪರಾಧ ಎಂದು ಗುರುತಿಸಿಕೊಳ್ಳದೇ ಇರುವ ಹಿನ್ನೆಲೆಯಲ್ಲಿ ಸಾಮಾಜಿಕ ಹಿಂಸೆಯಂತಹ ಪ್ರಕರಣಗಳು ಹೆಚ್ಚು ದೊರೆಯದಿರಲು ಕಾರಣವಾಗಿದೆ.

೧೮. ಕೌಟುಂಬಿಕ ದೌರ್ಜನ್ಯಕ್ಕೊಳಗಾದ ಮಹಿಳೆಯರ ವಯಸ್ಸು

ಕ್ರ.ಸಂ.	ಮಹಿಳೆಯರ ವಯಸ್ಸು	ಮಹಿಳೆಯರ ಸಂಖ್ಯೆ	ಪ್ರತಿಶತ (%)
೧.	೧-೧೦	೦೧	೦.೪೦
೨.	೧೧-೨೦	೨೪	೯.೬೦
೩.	೨೧-೩೦	೫೧	೨೦.೪೦
೪.	೩೧-೪೦	೬೯	೨೭.೬೦
೫.	೪೧-೫೦	೬೧	೨೪.೪೦
೬.	೫೧-೬೦	೨೨	೮.೮೦
೭.	೬೧-೭೦	೧೬	೬.೪೦
೮.	೭೧-೮೦	೫೦	೨.೦೦
೯.	೮೧-೯೦	೦೧	೦.೪೦
	ಒಟ್ಟು	**೨೫೦**	**೧೦೦**

ಈ ಮೇಲಿನ ಕೋಷ್ಟಕ ಸೂಚಿಸುವಂತೆ ಕೌಟುಂಬಿಕ ಹಿಂಸೆಗೆ ಎಲ್ಲಾ ವಯಸ್ಸಿನ ಮಹಿಳೆಯರು ಒಳಗಾಗುತ್ತಿದ್ದು, ೧-೧೦ ರವರೆಗಿನ ಮಕ್ಕಳು ಹಿಂಸೆಗೊಳಗಾಗುವಂತಹ ಸಂಖ್ಯೆ ಪ್ರತಿಶತ ೦.೪೦ ರಷ್ಟಿರುವುದು ಕಂಡುಬರುತ್ತದೆ. ಈ ಪ್ರಕಾರವಾಗಿ ೧೦ ವರ್ಷದೊಳಗಿನ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯಗಳು ಬಹಳಷ್ಟು ಆಗುತ್ತಿಲ್ಲ ಎಂದಲ್ಲ. ಈ ಹಂತದಲ್ಲಿ ಹೆಣ್ಣು ಶಿಶು ಹತ್ಯೆಗಳು, ಲಿಂಗ ಭೇದಗಳು ಹೆಚ್ಚಾಗಿ ನಡೆಯುತ್ತಿದ್ದು ಅವು ಬೆಳಕಿಗೆ ಬಾರದೇ ಹೋಗುತ್ತವೆ. ಗಂಡು ಮತ್ತು ಹೆಣ್ಣು ಮಕ್ಕಳ ನಡುವೆಯಂತೂ ಅನೇಕ ಬಗೆಯ ಲಿಂಗ ತಾರತಮ್ಯಗಳಾಗುತ್ತಿದ್ದು ಅವೆಲ್ಲವೂ ಸಹ ಬಹುತೇಕ ಸಮಾಜ ಒಪ್ಪಿತವಾದವುಗಳಾದ್ದರಿಂದ, ಈ ಹಂತದಲ್ಲಿ ಹೆಣ್ಣಿನ ಮೇಲೆ ನಡೆಯುವ ಹಿಂಸೆ ಹೆಚ್ಚು ಬೆಳಕಿಗೆ ಬಾರದೆ ಹೋಗುತ್ತದೆ. ಈ ವಯಸ್ಸಿನಲ್ಲಿ ಮಕ್ಕಳಿಗೆ ಹೊಡೆಯುವುದು, ಶಾಬ್ಧಿಕವಾಗಿ ನಿಂದಿಸುವುದೊಂದನ್ನು ಹೊರತುಪಡಿಸಿ ಬೇರೆ ಯಾವ ಬಗೆಯ ಹಿಂಸೆಯೂ ಅವರ ಗಮನಕ್ಕೆ ಬಾರದೆ ಹೋಗುತ್ತದೆ. ಜೊತೆಗೆ ಮಕ್ಕಳಿಂದ ಇಂತಹ ಸಂಗತಿಗಳನ್ನ ಕೇಳಿ ಪಡೆಯುವುದು ಕಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ೧ ರಿಂದ ೧೦ ವರ್ಷದೊಳಗಿನ ಮಕ್ಕಳ ಮೇಲಿನ ಕೌಟುಂಬಿಕ ಹಿಂಸೆಯನ್ನು ಗುರುತಿಸುವಲ್ಲಿ ಕೊಂಚ ಅಸಾಧ್ಯವಾದ್ದರಿಂದ ಕೇವಲ ೦.೪೦ ಪ್ರತಿಶತದಷ್ಟು ಮಾತ್ರ ಅಂಕಿ-ಸಂಖ್ಯೆ ಲಭ್ಯವಾಗಿದೆ. ಇನ್ನು ೮೦-೯೦ ವರ್ಷದೊಳಗಿನ ಮಹಿಳೆಯರು ಅಥವಾ ವೃದ್ಧರು ಪ್ರತಿಶತ ೦.೪೦ ರಷ್ಟು ಕೌಟುಂಬಿಕ ದೌರ್ಜನ್ಯಕ್ಕೊಳಗಾಗಿರುವುದು ಕಂಡುಬರುತ್ತದೆ. ಇತ್ತೀಚೆಗೆ ಮಾನವರ ಸಾವಿಗೆ ವಯಸ್ಸಿನ ಮಿತಿ ಕಡಿಮೆ ಆಗಿರುವ ಹಿನ್ನೆಲೆಯಲ್ಲಿ, ಈ ವಯೋಮಿತಿಗೆ ಸಂಬಂಧಿಸಿದ ಮಹಿಳೆಯರು ಕಡಿಮೆ ಲಭ್ಯವಾದ್ದರಿಂದ ಇವರ ಮೇಲಿನ ಕೌಟುಂಬಿಕ ದೌರ್ಜನ್ಯದ ಪ್ರಮಾಣ ಅರಿಯುವಲ್ಲಿ ಪೂರ್ಣ ಪ್ರಮಾಣದಲ್ಲಿ ಸಾಧ್ಯವಾಗಿಲ್ಲ.

ಇನ್ನು ೧೧-೨೦ ರವರೆಗಿನ ಮಹಿಳೆಯರು ಪ್ರತಿಶತ ೯.೬೦ ರಷ್ಟು, ೨೧-೩೦ ರವರೆಗಿನ ಮಹಿಳೆಯರು ಪ್ರತಿಶತ ೨೦.೪೦ ರಷ್ಟು, ೩೧-೪೦ ರವರೆಗಿನ ಮಹಿಳೆಯರು ಪ್ರತಿಶತ ೨೭.೬೦ ರಷ್ಟು, ೪೧-೫೦ ರವರೆಗಿನ ಮಹಿಳೆಯರು ಪ್ರತಿಶತ ೨೪.೪೦ ರಷ್ಟು, ೫೧-೬೦ ರವರೆಗಿನ ಮಹಿಳೆಯರು ಪ್ರತಿಶತ ೮.೮೦ ರಷ್ಟು, ೬೧-೭೦ ರವರೆಗಿನ ಮಹಿಳೆಯರು ಪ್ರತಿಶತ ೬.೪೦ ರಷ್ಟು, ೭೧-೮೦ ರವರೆಗಿನ ಮಹಿಳೆಯರು ಪ್ರತಿಶತ ೨.೦೦ರಷ್ಟು ಕೌಟುಂಬಿಕ ದೌರ್ಜನ್ಯಗಳಿಗೆ ಒಳಗಾಗುತ್ತಿರುವುದು ಕಂಡುಬರುತ್ತದೆ.

೧೯. ಕೌಟುಂಬಿಕ ದೌರ್ಜನ್ಯಕ್ಕೊಳಗಾದ ಅಕ್ಷರಸ್ಥ ಮತ್ತು ಅನಕ್ಷರಸ್ಥ ಮಹಿಳೆಯರ ಅಂಕಿ-ಸಂಖ್ಯೆ.

ಕ್ರಸಂ.	ಶೈಕ್ಷಣಿಕ ಸ್ಥಾನಮಾನ	ಮಹಿಳೆಯರ ಸಂಖ್ಯೆ	ಪ್ರತಿಶತ (%)
೧	ಅಕ್ಷರಸ್ಥರು	೧೪೦	೫೬
೨.	ಅನಕ್ಷರಸ್ಥರು	೧೧೦	೪೪
	ಒಟ್ಟು	೨೫೦	೧೦೦

ಈ ಮೇಲಿನ ಕೋಷ್ಟಕ ಸೂಚಿಸುವಂತೆ ಕೌಟುಂಬಿಕ ದೌರ್ಜನ್ಯಕ್ಕೊಳಗಾದ ಮಹಿಳೆಯರಲ್ಲಿ ಹೆಚ್ಚಿನ ಪ್ರಮಾಣದವರು ಅಕ್ಷರಸ್ಥರೇ ಆಗಿದ್ದಾರೆ. ಇವರ ಪ್ರಮಾಣ ಪ್ರತಿಶತ ೫೬ರಷ್ಟಿದ್ದರೆ, ಅನಕ್ಷರಸ್ಥ ಮಹಿಳೆಯರ ಪ್ರಮಾಣ ೪೪ ಪ್ರತಿಶತದಷ್ಟಿರುವುದು ಕಂಡುಬರುತ್ತದೆ. ಇದರಿಂದ ತಿಳಿದು ಬರುವುದೇನೆಂದರೆ, ಮಹಿಳೆಯರ ಮೇಲಿನ ಹಿಂಸೆ ಅಕ್ಷರಸ್ಥರು ಅಥವಾ ಅನಕ್ಷರಸ್ಥರು ಎನ್ನದೇ ಎಲ್ಲಾ ಮಹಿಳೆಯರಿಗೆ ವ್ಯಾಪಿಸಿಕೊಂಡಿರುವುದು ಗೋಚರವಾಗುತ್ತದೆ.

೨೦. ವೃತ್ತಿ ಮತ್ತು ವೃತ್ತಿಯಲ್ಲಿರದ ಮಹಿಳೆಯರ ಮೇಲಾದ ಕೌಟುಂಬಿಕ ದೌರ್ಜನ್ಯದ ಅಂಕಿ-ಸಂಖ್ಯೆ

ಕ್ರಸಂ.	ಸ್ಥಾನಮಾನ	ಮಹಿಳೆಯರ ಸಂಖ್ಯೆ	ಪ್ರತಿಶತ (%)
೧.	ವೃತ್ತಿಯಲ್ಲಿರುವವರು	೧೪೩	೫೭.೨೦
೨.	ವೃತ್ತಿಯಲ್ಲಿ ಇಲ್ಲದವರು	೯೬	೩೮.೪೦
೩.	ವಿದ್ಯಾಭ್ಯಾಸ	೦೯	೩.೬೦
೪.	ಬಾಲ ಕಾರ್ಮಿಕರು	೦೨	೦.೮೦
	ಒಟ್ಟು	೨೫೦	೧೦೦

ಈ ಮೇಲಿನ ಕೋಷ್ಟಕದ ಪ್ರಕಾರ ಕೌಟುಂಬಿಕ ದೌರ್ಜನ್ಯಕ್ಕೊಳಗಾದ ಮಹಿಳೆಯರಲ್ಲಿ ವೃತ್ತಿ ಕೈಗೊಂಡಿರುವವರು ೫೭.೨೦ ಪ್ರತಿಶತದಷ್ಟಿದ್ದಾರೆ ಹಾಗೂ ವೃತ್ತಿ ಮಾಡದೆ ಇರುವವರು ೩೮.೪೦ ಪ್ರತಿಶತದಷ್ಟಿರುವುದು ಕಂಡುಬರುತ್ತದೆ. ಜೊತೆಗೆ ವಿದ್ಯಾಭ್ಯಾಸ ಕೈಗೊಂಡವರು ೩.೬೦ ಪ್ರತಿಶತದಷ್ಟು, ಬಾಲ ಕಾರ್ಮಿಕರಾಗಿರುವವರು ೦.೮೦ ಪ್ರತಿಶತದಷ್ಟಿರುವುದು ಕಂಡುಬರುತ್ತದೆ. ಈ ಕೋಷ್ಟಕದಿಂದ ಸಾಬೀತಾಗುವುದೇನೆಂದರೆ ಹೆಣ್ಣುಮಕ್ಕಳು ಆರ್ಥಿಕ ಗಳಿಕೆ ಮಾಡಲಿ ಅಥವಾ ಮಾಡದೇ ಇರಲಿ ಅವರ ಮೇಲೆ ಕೌಟುಂಬಿಕ ದೌರ್ಜನ್ಯಗಳು ಸದಾ ಪ್ರಹಾರಮಾಡಲು ಶತಸಿದ್ಧವಾಗಿರುವುದು

ಕಂಡುಬರುತ್ತದೆ. ಉದಾರವಾದಿ ಸ್ತ್ರೀವಾದಿಗಳು ಮಹಿಳೆಯರು ಮನೆಯಿಂದ ಆಚೆಗೆ ಬಂದು ದುಡಿದರೆ ಕೌಟುಂಬಿಕ ದೌರ್ಜನ್ಯಗಳಿಂದ ಮುಕ್ತರಾಗಬಹುದು ಎಂದು ಹೇಳುತ್ತಾರೆ. ಆದರೆ ಇಲ್ಲಿ ವೃತ್ತಿ ಕೈಗೊಂಡ ಮಹಿಳೆಯರ ಮೇಲೆಯೇ ಹೆಚ್ಚು ದೌರ್ಜನ್ಯಗಳಾಗುತ್ತಿರುವುದು ನಿಜಕ್ಕೂ ವಿಪರ್ಯಾಸವಾಗಿದೆ. ಈ ಮೂಲಕ ವೃತ್ತಿ ಬದುಕು ಮಹಿಳೆಯರನ್ನು ಕೌಟುಂಬಿಕ ದೌರ್ಜನ್ಯಗಳಿಂದ ಮುಕ್ತಗೊಳಿಸಲು ಸಹಾಯಕವಾಗಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಇನ್ನು ವಿದ್ಯಾಭ್ಯಾಸ ಮಾಡುತ್ತಿರುವ ಹೆಣ್ಣು ಮಕ್ಕಳ ಮೇಲೆ ೩.೬೦ ಪ್ರತಿಶತದಷ್ಟು, ಬಾಲ ಕಾರ್ಮಿಕರಾಗಿರುವವರ ಮೇಲೆ ೦.೮೦ ಪ್ರತಿಶತದಷ್ಟು ಕೌಟುಂಬಿಕ ದೌರ್ಜನ್ಯಗಳಾಗುತ್ತಿರುವುದು ಕಂಡುಬರುತ್ತಿದೆ. ಬಾಲ ಕಾರ್ಮಿಕರ ಸಂಖ್ಯೆ ಹೆಚ್ಚಿದ್ದು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಅವರು ತಮ್ಮ ವಯಸ್ಸನ್ನು ಮರೆಮಾಚಿರುವುದು ಕಂಡುಬರುತ್ತದೆ. ಕಾರಣ ದುಡಿಸಿಕೊಳ್ಳುವವರು ಅವರನ್ನು ಪೂರ್ವಭಾವಿಯಾಗಿಯೇ ವಯಸ್ಸನ್ನು ೧೪ ವರ್ಷಕ್ಕಿಂತಲೂ ಹೆಚ್ಚು ಹೇಳಲು ಸೂಚಿಸಿರುತ್ತಾರೆ.

೨೧. ಮಹಿಳೆಯರ ವೈವಾಹಿಕ ಸ್ಥಾನಮಾನ

ಕ್ರಸಂ.	ವೈವಾಹಿಕ ಸ್ಥಾನಮಾನ	ಮಹಿಳೆಯರ ಸಂಖ್ಯೆ	ಪ್ರತಿಶತ (%)
೧.	ವಿವಾಹಿತೆ	೧೩೧	೫೨.೪೦
೨.	ಅವಿವಾಹಿತೆ	೪೪	೧೭.೬೦
೩.	ವಿಧವೆ	೪೫	೧೮.೦೦
೪.	ಸಹಚರ ಜೀವನ	೦೩	೧.೨೦
೫.	ದೇವದಾಸಿ	೧೧	೪.೪೦
೬.	ಬಾಲ್ಯ ವಿವಾಹ	೦೯	೩.೬೦
೭.	ವಿಚ್ಛೇದಿತೆ	೦೭	೨.೮೦
	ಒಟ್ಟು	**೨೫೦**	**೧೦೦**

ಈ ಕೋಷ್ಟಕದ ಮೂಲಕ ತಿಳಿದುಬರುವುದೇನೆಂದರೆ ಮಹಿಳೆಯರ ವೈವಾಹಿಕ ಸ್ಥಾನಮಾನಗಳು ಏನೇ ಇರಲಿ ಆ ಎಲ್ಲಾ ಬಗೆಯ ಮಹಿಳೆಯರ ಮೇಲೂ ಕೌಟುಂಬಿಕ ದೌರ್ಜನ್ಯಗಳು ಜರುಗುತ್ತಿದ್ದು, ಸರ್ವ ಮಹಿಳೆಯರ ಮೇಲೆ ಪುರುಷ ಪ್ರಧಾನ ವ್ಯವಸ್ಥೆ ತನ್ನ ಅಸ್ತಿತ್ವವನ್ನು ಸ್ಥಾಪಿತಗೊಳಿಸಲು ಹಿಂಸೆಯಂತಹ ಅಸ್ತ್ರವನ್ನು ಬಳಸುತ್ತಿರುವುದು ಕಂಡುಬರುತ್ತದೆ.

ವಿವಾಹಿತ ಮಹಿಳೆಯರು ೫೨.೪೦ ಪ್ರತಿಶತದಷ್ಟು, ಅವಿವಾಹಿತ ಮಹಿಳೆಯರು ೧೭.೬೦ ಪ್ರತಿಶತದಷ್ಟು, ವಿಧವೆಯರು ೧೮.೦೦ ಪ್ರತಿಶತದಷ್ಟು, ಸಹಚರ ಜೀವನ ನಡೆಸುವವರು ೧.೨೦ ಪ್ರತಿಶತದಷ್ಟು, ದೇವದಾಸಿಯರು ೪.೪೦ ಪ್ರತಿಶತದಷ್ಟು, ಬಾಲ್ಯ ವಿವಾಹವಾದ ಹೆಣ್ಣು ಮಕ್ಕಳು ೩.೬೦ ಪ್ರತಿಶತದಷ್ಟು, ವಿಚ್ಛೇದಿತ ಮಹಿಳೆಯರು ೨.೮೦ ಪ್ರತಿಶತದಷ್ಟು ಕೌಟುಂಬಿಕ ದೌರ್ಜನ್ಯಕ್ಕೊಳಗಾಗುತ್ತಿರುವುದು ಕಂಡುಬರುತ್ತದೆ. ಈ ಅಂಕಿ-ಸಂಖ್ಯೆಗಳನ್ನು ಗಮನಿಸಿದಾಗ ವಿವಾಹಿತ ಮಹಿಳೆಯರೇ ಹೆಚ್ಚು ಕೌಟುಂಬಿಕ ದೌರ್ಜನ್ಯ ಕ್ಕೊಳಗಾಗುತ್ತಿರುವುದು ಕಂಡುಬರುತ್ತದೆ. ಅಲ್ಲದೇ ಹೆಣ್ಣು ಮಕ್ಕಳು ಹುಟ್ಟಿದ ಮನೆಯಲ್ಲಿ ಕಡಿಮೆ ಪ್ರಮಾಣದ ದೌರ್ಜನ್ಯಕ್ಕೆ ಒಳಗಾಗುತ್ತಿರುವುದು ಕಂಡುಬರುತ್ತದೆ.

ಹೀಗೆಂದ ಮಾತ್ರದಲ್ಲಿ ಹುಟ್ಟಿದ ಮನೆಯಲ್ಲಿ ಕಡಿಮೆ ಪ್ರಮಾಣದ ದೌರ್ಜನ್ಯ ಇದೆ ಎಂದು ಅರ್ಥವಲ್ಲ. ಅಲ್ಲಿ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಆರೋಗ್ಯದ ದೃಷ್ಟಿಯಿಂದ ಹಲವಾರು ಬಗೆಗಳಲ್ಲಿ ಲಿಂಗ ತಾರತಮ್ಯಗಳಾಗುತ್ತಿದ್ದು, ಹೆಣ್ಣು ಭ್ರೂಣ ಹತ್ಯೆಗಳಾಗುತ್ತಿದ್ದು, ಹೆಣ್ಣು ಶಿಶು ಹತ್ಯೆಗಳಾಗುತ್ತಿದ್ದು ಅವು ಕಂಡು ಕಾಣದಂತೆ ನಡೆದು ಹೋಗುತ್ತಿವೆ. ಆದ್ದರಿಂದ ಅಲ್ಲಿ ಹೆಣ್ಣು ಮಕ್ಕಳು ದೌರ್ಜನ್ಯಕ್ಕೊಳಗಾಗುತ್ತಿರುವ ಪ್ರಮಾಣ ಕಡಿಮೆಯಾಗಿ ಕಂಡುಬರುತ್ತದೆ. ಇನ್ನು ಬಾಲ್ಯ ವಿವಾಹ ಎಂದು ತೆಗೆದುಕೊಂಡಿದ್ದು, ೧೮ ವರ್ಷದ ಒಳಗಿನ ಹೆಣ್ಣು ಮಕ್ಕಳನ್ನೇ ಸಂದರ್ಶಿಸಲಾಗಿದೆ. ಅವರ ವಿವಾಹ ಕಾನೂನು ದೃಷ್ಟಿಯಲ್ಲಿ ಊರ್ಜಿತವಲ್ಲದಿದ್ದರೂ ಸಹ ಸಾಮಾಜಿಕ ಸಂದರ್ಭದಲ್ಲಿ ಅವರ ವೈವಾಹಿಕ ಜೀವನ ಮಾನ್ಯವಾದದ್ದಾಗಿದೆ.

೨೨. ತಮ್ಮ ಮೇಲಾಗುವ ದೌರ್ಜನ್ಯವನ್ನು ಪ್ರತಿಭಟನೆ ಮಾಡಿದ ಮಹಿಳೆಯರ ಅಂಕಿ-ಸಂಖ್ಯೆ

ಕ್ರಸಂ.	ಪ್ರತಿಭಟನೆ	ಮಹಿಳೆಯರ ಸಂಖ್ಯೆ	ಪ್ರತಿಶತ (%)
೧.	ಮಾಡಿದವರು	೧೧೬	೪೬.೪೦
೨.	ಮಾಡದಿರುವವರು	೧೩೪	೫೩.೬೦
	ಒಟ್ಟು	೨೫೦	೧೦೦

ಈ ಕೋಷ್ಟಕದ ಮೂಲಕ ತಿಳಿಯುವುದೇನೆಂದರೆ, ಮಹಿಳೆಯರು ತಮ್ಮ ಮೇಲಾಗುವ ದೌರ್ಜನ್ಯವನ್ನು ಪ್ರತಿಭಟನೆ ಮಾಡುವುದಿಲ್ಲವೆಂದೇನಿಲ್ಲ. ದೌರ್ಜನ್ಯದಿಂದ ಹೊರಬರಲು ಸಾಧ್ಯವಿಲ್ಲ ಎಂದು ತಿಳಿದಾಗಲೂ ಸಹ ಕೊಂಚಮಟ್ಟಿಗೆ ಅದನ್ನು ಪ್ರತಿಭಟಿಸಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ತಮ್ಮ ಮೇಲಾಗುತ್ತಿರುವ ಕೌಟುಂಬಿಕ ದೌರ್ಜನ್ಯವನ್ನು ಪ್ರತಿಭಟಿಸಿದವರು ೪೬.೪೦ ಪ್ರತಿಶತದಷ್ಟು ಕಂಡುಬರುತ್ತಾರೆ. ಇನ್ನು ತಮ್ಮ ಮೇಲಾಗುತ್ತಿರುವ ದೌರ್ಜನ್ಯವನ್ನು ಸಹಿಸಿಕೊಂಡು ಅದನ್ನು ಪ್ರತಿಭಟಿಸದೇ ಇರುವವರು ೫೩.೬೦ ಪ್ರತಿಶತದಷ್ಟು ಕಂಡುಬರುತ್ತಾರೆ. ಇದು ಮಹಿಳೆಯರು ತಮ್ಮ ಮೇಲಾಗುವ ದೌರ್ಜನ್ಯವನ್ನು ಮೌನವಾಗಿ ಅನುಭವಿಸಬೇಕೆಂದು ಪುರುಷ ಪ್ರಧಾನ ವ್ಯವಸ್ಥೆ ನಿರ್ಮಿಸಿದ ತಂತ್ರದ ಭಾಗವಾಗಿರುವುದಾಗಿ ಕಂಡುಬರುತ್ತದೆ.

೨೩. ದೌರ್ಜನ್ಯದ ವಿರುದ್ಧ ನಡೆಸಿದ ಪ್ರತಿಭಟನೆಗೆ ದೊರೆತ ಫಲಿತಾಂಶ.

ಕ್ರಸಂ.	ಫಲಿತಾಂಶ	ಮಹಿಳೆಯರ ಸಂಖ್ಯೆ	ಪ್ರತಿಶತ (%)
೧.	ಮತ್ತಷ್ಟು ಹಿಂಸೆ	೫೯	೫೦.೮೬
೨.	ನ್ಯಾಯ ದೊರಕಿಲ್ಲ	೪೨	೩೬.೨೧
೩.	ನ್ಯಾಯ ದೊರಕಿದೆ	೧೫	೧೨.೯೩
	ಒಟ್ಟು	೧೧೬	೧೦೦

ತಮ್ಮ ಮೇಲಾಗುತ್ತಿರುವ ದೌರ್ಜನ್ಯವನ್ನು ಪ್ರತಿಭಟಿಸಿದ ಮಹಿಳೆಯರ ಸಂಖ್ಯೆ ೧೧೬ ಇದ್ದು, ಅವರ ಪ್ರತಿಭಟನೆಗೆ ಸಿಕ್ಕ ಪ್ರತಿಫಲ ಈ ಕೋಷ್ಟಕದಲ್ಲಿ ದಾಖಲಿಸಿದಂತಹ ಅಂಕಿ-ಸಂಖ್ಯೆಗಳಂತಿದೆ. ತಮ್ಮ ಮೇಲಾಗುತ್ತಿರುವ ದೌರ್ಜನ್ಯವನ್ನು ಪ್ರತಿಭಟಿಸಿದಾಗ ೫೦.೮೬ ಪ್ರತಿಶತದಷ್ಟು ಮಹಿಳೆಯರು ಮತ್ತಷ್ಟು ಹಿಂಸೆಗೆ ಒಳಗಾಗಿರುವುದು ಕಂಡುಬರುತ್ತದೆ. ಇನ್ನು ೩೬.೨೧ ಪ್ರತಿಶತದಷ್ಟು ಮಹಿಳೆಯರಿಗೆ ನ್ಯಾಯ ಸಿಗದಿರುವುದು ಕಂಡುಬರುತ್ತದೆ. ಅಂತೆಯೇ ೧೨.೯೩ ಪ್ರತಿಶತದಷ್ಟು ಮಹಿಳೆಯರು

ನ್ಯಾಯ ಸಿಕ್ಕಿದೆ ಎಂದು ಹೇಳುತ್ತಾರೆ. ಅಂದರೆ ದೌರ್ಜನ್ಯದಿಂದ ಮುಕ್ತಿ ಪಡೆದುಕೊಂಡಿರುವುದಾಗಿ ತಿಳಿಸುತ್ತಾರೆ.

ಕುಟುಂಬದೊಳಗೆ ದೌರ್ಜನ್ಯಕ್ಕೊಳಗಾದ ಮಹಿಳೆಯರಲ್ಲಿ ಪ್ರತಿಭಟಿಸುವವರ ಸಂಖ್ಯೆ ಕಡಿಮೆ ಇದೆ. ಅದರಲ್ಲೂ ಮಹಿಳೆಯರು ಪ್ರತಿಭಟಿಸಿದಾಗ ಪುರುಷ ಪ್ರಧಾನ ವ್ಯವಸ್ಥೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಮತ್ತಷ್ಟು ಹಿಂಸೆ ನೀಡುವ ಮೂಲಕ ತನ್ನ ಅಸ್ತಿತ್ವವನ್ನು ಮತ್ತೆ ಮತ್ತೆ ಗಟ್ಟಿಗೊಳಿಸುತ್ತಾ ಹೊರಟಿರುವುದು ಕಂಡುಬರುತ್ತದೆ. ಇನ್ನೂ ಕೆಲ ಸಂದರ್ಭಗಳಲ್ಲಿ ಮಹಿಳೆಯರಿಗೆ ಯಾವುದೇ ರೀತಿಯ ಪ್ರತಿಫಲ ದೊರಕದಿರುವುದು ಕಂಡುಬರುತ್ತದೆ. ಅಲ್ಲದೇ ಅತಿ ಕಡಿಮೆ ಪ್ರಮಾಣದಲ್ಲಿ ಮಹಿಳೆಯರು ತಾವು ಅನುಭವಿಸುತ್ತಿರುವ ದೌರ್ಜನ್ಯಗಳಿಂದ ಮುಕ್ತಿ ಪಡೆದು ಕೊಂಡಿರುವುದು ಕಂಡುಬರುತ್ತದೆ. ಅದು ನ್ಯಾಯಾಲಯದ ಮೂಲಕವಾದರೂ ಆಗಿರಬಹುದು ಅಥವಾ ಇತರ ಯಾವ ಬಗೆಯಲ್ಲಾದರೂ ಆಗಿರಬಹುದಾಗಿದೆ.

೭.೩. ಮುಂದಿನ ಅಧ್ಯಯನದ ಸಾಧ್ಯತೆಗಳು

೧. ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯವನ್ನು ಕಥೆ, ಕಾದಂಬರಿಗಳ ಮೂಲದಿಂದಲೂ ಸಹ ಅಧ್ಯಯನ ಮಾಡಬಹುದಾಗಿದೆ. ಕಾರಣ ಅಲ್ಲಿಯ ಮಹಿಳಾ ಪಾತ್ರಗಳ ನಿರ್ವಹಣೆ ನಿಜ ಬದುಕಿನ ಜೀವಂತ ಮುಖಗಳಾಗಿರುತ್ತವೆ.

೨. ಮಹಿಳೆಯರು ಕುಟುಂಬದಲ್ಲಿ ಅನುಭವಿಸುತ್ತಿರುವ ಹಲವಾರು ದೌರ್ಜನ್ಯಗಳನ್ನು ದೈಹಿಕ, ಮಾನಸಿಕ, ಲೈಂಗಿಕ, ಭಾವನಾತ್ಮಕ, ಆರ್ಥಿಕ ಎಂದು ಬಿಡಿಬಿಡಿಯಾಗಿಯೂ ಸಹ ಅಧ್ಯಯನವನ್ನು ಕೈಗೊಳ್ಳಬಹುದಾಗಿದೆ.

೩. ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯವನ್ನು ಮಹಿಳೆಯರಿಂದ ಮಹಿಳೆಯರ ಮೇಲೆ ಸ್ಥಾಪಿಸುವಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಹೇಗೆ ಯಶಸ್ವಿಯಾಗಿದೆ ಎಂಬುದನ್ನು ಪ್ರತ್ಯೇಕವಾಗಿ ಅಧ್ಯಯನಕ್ಕೊಳಪಡಿಸಬಹುದಾಗಿದೆ.

೪. ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ದಾಖಲಾದಂತಹ ಪ್ರಕರಣಗಳ ಸಂಖ್ಯೆ ಹಾಗೂ ಕ್ಷೇತ್ರ ಕಾರ್ಯದಲ್ಲಿ ದೊರೆಯುವ ಪ್ರಕರಣಗಳ ಸಂಖ್ಯೆಯ ಆಧಾರಿತವಾಗಿ ಒಂದು ತೌಲನಿಕ ಅಧ್ಯಯನ ಕೈಗೊಳ್ಳಬಹುದಾಗಿದೆ.

೫. ಮಹಿಳೆಯರ ಮೇಲಿನ ಕೌಟುಂಬಿಕ ಹಿಂಸೆ ತಡೆಯುವಲ್ಲಿ ಇರುವ ಕಾನೂನುಗಳ ಬಗ್ಗೆ, ಅವುಗಳ ಕಾರ್ಯವೈಖರಿಯ ಬಗ್ಗೆ ಮಾತ್ರ ಸುದೀರ್ಘವಾದ ಅಧ್ಯಯನ ಕೈಗೊಳ್ಳಬಹುದಾಗಿದೆ.

೬. ಮಹಿಳೆಯರ ಲೈಂಗಿಕತೆ ಮೇಲೆ ಪಿತೃ ಪ್ರಧಾನತೆಯು ಹೊಂದಿರುವ ಹಿಡಿತದ ಬಗ್ಗೆ ಸ್ತ್ರೀವಾದದ ನೆಲೆಯಲ್ಲಿ ಅಧ್ಯಯನ ನಡೆಸಿದರೆ, ಮಹಿಳೆಯರ ಮೇಲೆ ನಡೆಯುವ ಹಿಂಸೆಗೆ ಸೂಕ್ತ ಕಾರಣ ಅಥವಾ ಉತ್ತರ ದೊರೆಯಬಹುದಾಗಿದೆ.

೭. ಮಹಿಳೆಯರ ಮೇಲೆ ಕೌಟುಂಬಿಕ ಹಿಂಸೆಯನ್ನು ಸ್ಥಾಪಿಸುವಲ್ಲಿ ಧರ್ಮಗಳ ಪಾತ್ರ ಏನು? ಎಂದು ಅರಿಯಲು ಒಂದು ಸುದೀರ್ಘವಾದ ಅಧ್ಯಯನ ಕೈಗೊಳ್ಳಬಹುದಾಗಿದೆ.

ಅನುಬಂಧಗಳು

* ಆಕರಗಳು

  ೧. ವಕ್ತೃಗಳ ಅಂಕಿ-ಅಂಶಗಳ ಪಟ್ಟಿ (ಪ್ರಾಥಮಿಕ ಮಾಹಿತಿ ಮೂಲಗಳು)

  ೨. ಗ್ರಂಥಋಣ (ದ್ವಿತೀಯ ಮಾಹಿತಿ ಮೂಲಗಳು)

* ಪದಕೋಶ

* ಸಾಂದರ್ಭಿಕ ಛಾಯಾಚಿತ್ರಗಳು

* ಆಕರಗಳು

೧. ವಕ್ತೃಗಳ ಅಂಕಿ-ಅಂಶಗಳ ಪಟ್ಟಿ (ವಕ್ತೃಗಳ ಹೆಸರುಗಳನ್ನು ಬದಲಾಯಿಸಲಾಗಿದೆ)

ದೈಹಿಕ ಹಿಂಸೆ

ಕ್ರ.ಸಂ.	ಹೆಸರು	ಊರು	ವಯಸ್ಸು	ಶಿಕ್ಷಣ	ವೃತ್ತಿ	ಜಾತಿ	ವೈವಾಹಿಕ ಸ್ಥಾನಮಾನ	ದೌರ್ಜನ್ಯದ ಸ್ವರೂಪ	ಪ್ರತಿಭಟನೆ	ಪ್ರತಿಫಲ	ಕೃತ್ಯ ಎಸಗಿದವರು
೧	ಅಕ್ಷರ	ಬೂದಿಹಾಳ	೩೪	ಅನಕ್ಷರಸ್ಥೆ	ಗೃಹಕೃತ್ಯ	ಮುಚಗೇರ	ವಿವಾಹಿತೆ	ದೈ. ಭಾ ಹಿಂಸೆ	ಮಾಡಿಲ್ಲ	-	ಅತ್ತೆ, ಮಾವ
೨	ಅನನ್ಯ	ಕವಲೂರು	೩೮	ಬಿ.ಎ	ಗೃಹಕೃತ್ಯ	ಲಿಂಗಾಯತ	ವಿವಾಹಿತೆ	ದೈ. ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ
೩	ಆರತಿ	ಕವಲೂರು	೪೩	೭ನೇ ತರಗತಿ	ಗೃಹಕೃತ್ಯ	ಗೊಲ್ಲರು	ವಿವಾಹಿತೆ	ದೈ. ಭಾ ಹಿಂಸೆ	ಮಾಡಿಲ್ಲ	-	ಗಂಡು ಮಕ್ಕಳು
೪	ಈಶ್ವರಿ	ಬೋಚನಹಳ್ಳಿ	೪೮	ಪಿ.ಯು.ಸಿ	ಕೃಷಿಕಳು	ಬಣಜಿಗ	ವಿವಾಹಿತೆ	ದೈ. ಭಾ. ಆ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ, ಅತ್ತೆ
೫	ಕಮಲಾ	ಬೋಚನಹಳ್ಳಿ	೬೪	ಅನಕ್ಷರಸ್ಥೆ	ಗೃಹಕೃತ್ಯ	ಸಾದರ	ವಿಹಾವಿತೆ	ದೈ. ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡು ಮಕ್ಕಳು
೬	ಗಗನಾ	ಬೆಟಗೇರಿ	೬೪	ಅನಕ್ಷರಸ್ಥೆ	ಕೂಲಿ	ಚೆಲುವಾದಿ	ವಿಧವೆ	ದೈ. ಭಾ ಹಿಂಸೆ	ಮಾಡಿಲ್ಲ	-	ಮಗ, ಸೊಸೆ
೭	ಚಂಚಲ	ಮತ್ತೂರು	೩೧	ಅನಕ್ಷರಸ್ಥೆ	ಕಸಬರಿಗೆ ಮಾರುವದು	ಕುಂಚಿಕೊರವ	ವಿವಾಹಿತೆ	ದೈ. ಭಾಹಿಂಸೆ	ಮಾಡಿಲ್ಲ	-	ಗಂಡ
೮	ಜಯಲಕ್ಷ್ಮಿ	ಬಿಸರಳ್ಳಿ	೮೨	೫ನೇ ತರಗತಿ	ಮಿಟಾಯಿ ವ್ಯಾಪಾರ	ಲಿಂಗಾಯತ	ವಿವಾಹಿತೆ	ದೈ. ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಸೊಸೆ, ಗಂಡ, ಮೊಮ್ಮಕ್ಕಳು
೯	ಜಲಜಾ	ಬಿಸರಳ್ಳಿ	೨೪	೫ನೇ ತರಗತಿ	ಹೊಲದ ಕೆಲಸ	ಗೊರವ	ವಿವಾಹಿತೆ	ದೈ. ಆ. ಭಾ ಹಿಂಸೆ	ಮಾಡಿಲ್ಲ	-	ಗಂಡ
೧೦	ಜಾನಕಿ	ಬಿಸರಳ್ಳಿ	೬೮	೭ನೇ ತರಗತಿ	ಗೃಹಕೃತ್ಯ	ಗೊಲ್ಲರು	ಅವಿವಾಹಿತೆ	ದೈ. ಆ. ಭಾ ಹಿಂಸೆ	ಮಾಡಿಲ್ಲ	-	ತಮ್ಮ

೧೧	ಜೈಲಕ್ಷ್ಮೀ	ಬಿಸರಳ್ಳಿ	೧೬	೬ನೇ ತರಗತಿ	ಗೃಹಕೃತ್ಯ	ಲಿಂಗಾಯತ	ವಿವಾಹಿತೆ	ದೈ, ಭಾ ಹಿಂಸೆ	ಮಾಡಿಲ್ಲ	–	ಗಂಡ
೧೨	ಧನಲಕ್ಷ್ಮೀ	ಬೂದುಗುಂಪಾ	೨೯	ಡಿಪ್ಲೊಮಾ	ಗೃಹಕೃತ್ಯ	ಪಂಚಾಳರು	ವಿವಾಹಿತೆ	ದೈ, ಭಾ ಹಿಂಸೆ	ಮಾಡಿಲ್ಲ	–	ಗಂಡ, ಅತ್ತೆ
೧೩	ನಯನಾ	ಬೂದುಗುಂಪಾ	೨೯	ಅನಕ್ಷರಸ್ಥೆ	ಕೂಲಿ	ಲಂಬಾಣಿ	ವಿಧವೆ	ದೈ, ಆ, ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಅಣ್ಣ, ಅತ್ತಿಗೆ
೧೪	ನಿಂಗವ್ವ	ಮೂದೇನೂರು	೩೭	ಪಿ.ಯು.ಸಿ, ಟೆಲರಿಂಗ್‌ಕೋರ್ಸ್	ಟೇಲರಿಂಗ್	ಸಾದರ	ವಿವಾಹಿತೆ	ದೈ, ಆ, ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಅತ್ತೆ, ಗಂಡನ ಅಣ್ಣ
೧೫	ನೇಮವ್ವ	ಕೋಳೂರು	೬೯	ಅನಕ್ಷರಸ್ಥೆ	ಕೃಷಿಕಳು	ಹೊಲ್ಯಾರು	ವಿಧವೆ	ದೈ, ಹಿಂಸೆ	ಮಾಡಿಲ್ಲ	–	ಸೊಸೆ, ಮಗ
೧೬	ಫಕೀರಮ್ಮ	ಮೂದೇನೂರು	೨೧	ಎಸ್.ಎಸ್.ಎಲ್.ಸಿ	ಕೂಲಿ	ಲಿಂಗಾಯತ	ಅವಿವಾಹಿತೆ	ದೈ, ಭಾ ಹಿಂಸೆ	ಮಾಡಿಲ್ಲ	–	ದೊಡ್ಡಪ್ಪ
೧೭	ಭರಮವ್ವ	ಕಿನ್ನಾಳ	೫೪	ಅನಕ್ಷರಸ್ಥೆ	ಅಡುಗೆ ಕೆಲಸ	ಜಂಗಮರು	ವಿಧವೆ	ದೈ ಹಿಂಸೆ	ಮಾಡಿದೆ	ದೊರಕಿಲ್ಲ	ಮಾವ
೧೮	ಭಾಗ್ಯ	ಕಿನ್ನಾಳ	೧೩	ಅನಕ್ಷರಸ್ಥೆ	ಕೂಲಿ	ಉಪ್ಪಾರ	ಬಾಲ್ಯ ವಿವಾಹ	ದೈ, ಶಾ ಹಿಂಸೆ	ಮಾಡಿಲ್ಲ	–	ಗಂಡ
೧೯	ಭಾನು	ಕಿನ್ನಾಳ	೨೫	೭ನೇ ತರಗತಿ	ಗೊಂಬೆ ತಯಾರಿಕೆ	ಬಡಿಗೇರ	ವಿವಾಹಿತೆ	ದೈ,ಭಾ ಹಿಂಸೆ	ಮಾಡಿಲ್ಲ	–	ಗಂಡ, ಅತ್ತೆ
೨೦	ಭಾರತಿ	ಲೇಬಗೇರಾ	೧೨	ಅನಕ್ಷರಸ್ಥೆ	ಗೃಹ ಕೃತ್ಯ	ಲಿಂಗಾಯತ	ಬಾಲ್ಯ ವಿವಾಹ	ದೈ, ಭಾ ಹಿಂಸೆ	ಮಾಡಿಲ್ಲ	–	ಅತ್ತೆ
೨೧	ಮಂಗಳವ್ವ	ಚಿಕ್ಕ ಬೊಮ್ಮನಾಳ	೨೭	ಅನಕ್ಷರಸ್ಥೆ	ಬಟ್ಟೆ ಒಗಿಯುವ ಕೆಲಸ	ಮಡಿವಾಳ	ವಿವಾಹಿತೆ	ದೈ,ಆ,ಭಾ ಹಿಂಸೆ	ಮಾಡಿಲ್ಲ	–	ಗಂಡ, ಅತ್ತೆ
೨೨	ಮಮತಾಜ್ ಬೇಗಂ	ಚಿಕ್ಕ ಬೊಮ್ಮನಾಳ	೩೭	ಅನಕ್ಷರಸ್ಥೆ	ಮಂಡಳಾ ಬಟ್ಟಿ ಕೆಲಸ	ಪಿಂಜಾರ	ವಿವಾಹಿತೆ	ದೈ,ಆ ಹಿಂಸೆ	ಮಾಡಿಲ್ಲ	–	ಗಂಡ, ಅತ್ತೆ
೨೩	ಮಾರಮ್ಮ	ಚಿಕ್ಕ ಬೊಮ್ಮನಾಳ	೨೧	೫ನೇ ತರಗತಿ	ಕೂಲಿ	ಲಿಂಗಾಯತ್	ವಿವಾಹಿತೆ	ದೈ, ಆ, ಭಾ ಹಿಂಸೆ	ಮಾಡಿಲ್ಲ	–	ತಂದೆ
೨೪	ಮಾದಕ್ಕ	ಹಾನಗಲ್	೪೮	ಅನಕ್ಷರಸ್ಥೆ	ಗೃಹಕೃತ್ಯ	ದೇವಾಂಗ	ವಿವಾಹಿತೆ	ದೈ, ಆ, ಭಾ ಹಿಂಸೆ	ಮಾಡಿಲ್ಲ	–	ಗಂಡ, ಮಾವ, ನಾದಿನಿ

೨೫	ಮೈಲಾರಮ್ಮ	ಕಲ್ ತಾವರಗೇರಿ	೪೯	ಅನಕ್ಷರಸ್ಥೆ	ಕೂಲಿ	ಮ್ಯಾದಾರ	ವಿಧವೆ	ದೈ.ಆ, ಭಾ ಹಿಂಸೆ	ಮಾಡಿದೆ	ದೊರಕಿಲ್ಲ	ಮಗ. ಸೊಸೆ
೨೬	ಯರಿಯಮ್ಮ	ಇಂದರಗಿ	೨೯	ಬಿ. ಕಾಂ	ಗೃಹಕೃತ್ಯ	ಮಾದರು	ವಿವಾಹಿತೆ	ದೈ ಹಿಂಸೆ	ಮಾಡಿಲ್ಲ	–	ಗಂಡ, ಅತ್ತಿಗೆ
೨೭	ರಂಜಿತಾ	ಗುಳ್ಳುವಳ್ಳಿ	೧೭	ಅನಕ್ಷರಸ್ಥೆ	ಕೂಲಿ		ಬಾಲ್ಯ ವಿವಾಹ	ದೈ, ಭಾ ಹಿಂಸೆ	ಮಾಡಿಲ್ಲ	–	ತಂದೆ, ಅಣ್ಣ, ತಾಯಿ
೨೮	ರುಕ್ಮವ್ವ	ಗಿಣಿಗೇರಾ	೪೩	ಅನಕ್ಷರಸ್ಥೆ	ಶಾಲಾ ಆಯಾ	ವಡ್ಡರು	ವಿವಾಹಿತೆ	ದೈ, ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ, ಮಾವ
೨೯	ರುಕ್ಮಿಣಿ	ಗೊಂಡಬಾಳ	೪೨	ಅನಕ್ಷರಸ್ಥೆ	ಕಸಬರಿಗೆ ಮಾರುವಕೆಲಸ	ಕುಂಚಿ ಕೊರವರು	ವಿವಾಹಿತೆ	ದೈ.ಭಾ.ಆ ಹಿಂಸೆ	ಮಾಡಿಲ್ಲ	–	ಗಂಡ
೩೦	ಲಕ್ಷ್ಮೀ	ಅಗಳಕೇರಾ	೨೪	೯ನೇ ತರಗತಿ	ಗೃಹಕೃತ್ಯ	ಜಾಡರ	ವಿವಾಹಿತೆ	ದೈ.ಭಾ.ಆ.ಶಾ ಹಿಂಸೆ	ಮಾಡಿಲ್ಲ	–	ಗಂಡ
೩೧	ಲತಾ	ಅಗಳಕೇರಾ	೩೪	ಬಿ.ಎ	ಕ್ಲರ್ಕ್	ಸಿಂಪಿಗ	ವಿವಾಹಿತೆ	ದೈ, ಭಾ ಹಿಂಸೆ	ಮಾಡಿಲ್ಲ	–	ಗಂಡ
೩೨	ಲಲಿತಾ	ಚುಕನಕಲ್	೫೪	ಅನಕ್ಷರಸ್ಥೆ	ಕೂಲಿ	ಜೋಗ್ಯಾರು	ವಿವಾಹಿತೆ	ದೈ ಹಿಂಸೆ	ಮಾಡಿದೆ	ದೊರಕಿಲ್ಲ	ಮಾವ
೩೩	ಲಾವಣ್ಯ	ಹಿರೇಸಿಂದೋಗಿ	೨೦	ಅನಕ್ಷರಸ್ಥೆ	ಗೃಹಕೃತ್ಯ	ಮುಚಿಗೇರು	ವಿಧವೆ	ದೈ ಹಿಂಸೆ	ಮಾಡಿಲ್ಲ	–	ಮಗಳು, ಅಳಿಯ
೩೪	ಲಾಸ್ಯ	ಹಿರೇಸಿಂದೋಗಿ	೨೯	ಬಿ.ಎ	ಎನ್.ಜಿ.ಓ ಕಾರ್ಯಕರ್ತೆ	ಲಿಂಗಾಯತ	ಅವಿವಾಹಿತೆ	ದೈ ಹಿಂಸೆ	ಮಾಡಿಲ್ಲ	–	ಸೊದರ ಅತ್ತೆ
೩೫	ವನಜಾ	ಹಿರೇಸಿಂದೋಗಿ	೧೦	೪ನೇ ತರಗತಿ	ವಿದ್ಯಾಭ್ಯಾಸ	ಲಿಂಗಾಯತ	ಬಾಲ್ಯ ವಿವಾಹ	ದೈ, ಶಾ ಹಿಂಸೆ	ಮಾಡಿದೆ	ದೊರಕಿಲ್ಲ	ಗಂಡನ ಮನೆಯವರು
೩೬	ವನಿತಾ	ಹ್ಯಾಟಿ	೧೩	ಅನಕ್ಷರಸ್ಥೆ	ಕೂಲಿ	ನೇಕಾರ	ಅವಿವಾಹಿತೆ	ದೈ ಹಿಂಸೆ	ಮಾಡಿದೆ	ದೊರಕಿದೆ	ಮಲತಾಯಿ

೩೭	ವಲ್ಲಿ	ಹ್ಯಾಟಿ	೩೨	೮ನೇ ತರಗತಿ	ಖಾನವಾಳಿ ಕೆಲಸ	ಕೊರವರು	ವಿವಾಹಿತೆ	ದೈ, ಭಾ ಹಿಂಸೆ	ಮಾಡಿಲ್ಲ	–	ನಾದಿನಿ, ನಾದಿನಿ ಗಂಡ
೩೮	ವರಲಕ್ಷ್ಮೀ	ಹ್ಯಾಟಿ	೩೨	೭ನೇ ತರಗತಿ	ಹೊಲಿಗೆಕೆಲಸ	ಬಡಿಗ	ವಿವಾಹಿತೆ	ದೈ ಹಿಂಸೆ	ಮಾಡಿಲ್ಲ	–	ಗಂಡ
೩೯	ವರು	ಹ್ಯಾಟಿ	೬೮	ಅನಕ್ಷರಸ್ಥೆ	ಗೃಹಕೃತ್ಯ	ಅಗಸರು	ವಿಧವೆ	ದೈ, ಆ ಹಿಂಸೆ	ಮಾಡಿಲ್ಲ	–	ಮಗ, ಸೊಸೆ
೪೦	ಶಂಕ್ರವ್ವ	ಬಸಾಪುರ	೧೩	ಅನಕ್ಷರಸ್ಥೆ	ಬಾಲ ಕಾರ್ಮಿಕಳು	ಉಪ್ಪಾರ	ಅವಿವಾಹಿತೆ	ದೈ, ಭಾ ಹಿಂಸೆ	ಮಾಡಿಲ್ಲ	–	ತಂದೆ
೪೧	ಶಕೀಲಾ	ಬಹದ್ದೂರಬಂಡಿ	೬೧	೩ನೇ ತರಗತಿ	ಗೃಹಕೃತ್ಯ	ಲಿಂಗಾಯತ	ವಿಚ್ಛೇದಿತೆ	ದೈ ಹಿಂಸೆ	ಮಾಡಿದೆ	ದೊರಕಿಲ್ಲ	ಮಗ, ಸೊಸೆ
೪೨	ಶರಣಮ್ಮ	ಮುನಿರಾಬಾದ್ ಡ್ಯಾಂ	೩೩	೭ನೇ ತರಗತಿ	ಬಿಜಿನೆಸ್	ಗುಜ್ಜರು	ವಿಚ್ಛೇದಿತೆ	ದೈ, ಭಾ ಹಿಂಸೆ	ಮಾಡಿದೆ	ದೊರಕಿಲ್ಲ	ತಂದೆ, ತಾಯಿ, ಗಂಡ, ಅತ್ತೆ
೪೩	ಶಾಲಿನಿ	ಮುನಿರಾಬಾದ್‌ಡ್ಯಾಂ	೧೫	೪ನೇ ತರಗತಿ	ಗೃಹಕೃತ್ಯ	ಕುರುವಿನಶೆಟ್ಟಿ	ಬಾಲ್ಯವಿವಾಹ	ದೈ, ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಸೊದರ ಮಾವ
೪೪	ಸರಸ್ವತಿ	ಟಣಕನಕಲ್	೪೮	ಅನಕ್ಷರಸ್ಥೆ	ಗೃಹಕೃತ್ಯ	ಗಾಣಿಗೇರ	ವಿಧವೆ	ದೈ, ಸಾ ಹಿಂಸೆ	ಮಾಡಿದೆ	ದೊರಕಿಲ್ಲ	ಗಂಡ
೪೫	ಸ್ವಾತಿ	ಟಣಕನಕಲ್	೮೦	ಅನಕ್ಷರಸ್ಥೆ	ಗೃಹಕೃತ್ಯ	ಲಿಂಗಾಯತ	ವಿಧವೆ	ದೈ, ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಮಗ, ಸೊಸೆ, ಮೊಮ್ಮಕ್ಕಳು

ಲೈಂಗಿಕ ಹಿಂಸೆ

ಕ್ರ.ಸಂ	ಹೆಸರು	ಊರು	ವಯಸ್ಸು	ಶಿಕ್ಷಣ	ವೃತ್ತಿ	ಜಾತಿ	ವೈವಾಹಿಕ ಸ್ಥಾನಮಾನ	ದೌರ್ಜನ್ಯದ ಸ್ವರೂಪ	ಪ್ರತಿಭಟನೆ	ಪ್ರತಿಫಲ	ಕೃತ್ಯ ಎಸಗಿದವರು
೧	ಅನ್ನಪೂರ್ಣ	ಭಾಗ್ಯನಗರ	೩೭	ಬಿ.ಇ ಇನ್ ಕಂಪ್ಯೂಟರ್‌ಸೈನ್ಸ	ಪ್ಯೂವನ್	ನೇವಾರ	ವಿವಾಹಿತೆ	ಲೈ. ಆ ಹಿಂಸೆ	ಮಾಡಿಲ್ಲ	–	ಗಂಡ, ಅತ್ತೆ
೨	ಅಕ್ಷರಾ	ಭಾಗ್ಯನಗರ	೪೯	ಅನಕ್ಷರಸ್ಥೆ	ಕುದಲೂ ಹಿಂಜುವ ಕೆಲಸ	ಮಾದರ	ದೇವದಾಸಿ	ಲೈ. ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ
೩	ಆಫ್ರಿನ್	ಬೆಟಗೇರಿ	೩೪	ಅನಕ್ಷರಸ್ಥೆ	ಖಾನಾವಳಿ	ಮುಸ್ಲಿಂ	ಅವಿವಾಹಿತೆ	ಲೈಂ. ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ
೪	ಈರಮ್ಮ	ಹಟ್ಟಿ	೪೯	ಅನಕ್ಷರಸ್ಥೆ	ಕೂಲಿ	ಗಾಣಿಗೇರ	ವಿವಾಹಿತೆ	ಲೈ. ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಮಾವ
೫	ಈಶ್ವರಮ್ಮ	ಹಟ್ಟಿ	೩೯	ಅನಕ್ಷರಸ್ಥೆ	ತರಕಾರಿ ವ್ಯಾಪಾರ	ಕುರುಬರು	ವಿಧವೆ	ಲೈ. ಭಾ ಹಿಂಸೆ	ಮಾಡಿದೆ	ದೊರಕಿಲ್ಲ	ಭಾವ, ಅತ್ತೆ, ತಂದೆ, ತಾಯಿ
೬	ಉಮಾ	ಮತ್ತೂರು	೨೧	ಎನ್.ಟಿ.ಸಿ	ಅಂಗನವಾಡಿ ಕಾರ್ಯಕರ್ತೆ	ಚೆಲುವಾದಿ	ಅವಿವಾಹಿತೆ	ಲೈ. ಭಾ ಹಿಂಸೆ	ಮಾಡಿಲ್ಲ	–	ಅಣ್ಣ
೭	ಋತು	ಅಳವಂಡಿ	೧೭	೩ನೇ ತರಗತಿ	ಗೃಹಕೃತ್ಯ	ಕುರುಬರು	ದೇವದಾಸಿ	ಲೈ. ದೈ ಹಿಂಸೆ	ಮಾಡಿಲ್ಲ	–	ಗಂಡ
೮	ಕತ್ರಿನಾಬೇಗಂ	ಇರಕಲ್ಲಗಡ	೩೮	ಅನಕ್ಷರಸ್ಥೆ	ಗೃಹಕೃತ್ಯ	ಮುಸ್ಲಿಂ	ವಿವಾಹಿತೆ	ಲೈ. ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ
೯	ಕವಿತಾ	ಚಿಕ್ಕ ಬೊಮ್ಮನಾಳ	೮೦	ಅನಕ್ಷರಸ್ಥೆ	ಗೃಹಕೃತ್ಯ	ಮಾದರ	ದೇವದಾಸಿ	ಲೈಂ. ಭಾ ಹಿಂಸೆ	ಮಾಡಿಲ್ಲ	–	ಗಂಡ
೧೦	ಕಾನಕಾ	ಇಂದರಗಿ	೪೩	ಅನಕ್ಷರಸ್ಥೆ	ಕೂಲಿ	ಮಾದರು	ವಿವಾಹಿತೆ	ಲೈಂ. ದೈ ಹಿಂಸೆ	ಮಾಡಿಲ್ಲ	–	ಗಂಡ

೧೧	ಕೀರ್ತನಾ	ಇಂದರಗಿ	೩೧	ಬಿ.ಎಸ್ಸಿ.ಬಿ.ಎಡ್	ಟೀಚರ್	ಪಂಚಮಸಾಲಿ	ಅವಿವಾಹಿತೆ	ಲೈಂ ಹಿಂಸೆ	ಮಾಡಿದೆ	ದೊರಕಿಲ್ಲ	ಸೊದರಮಾವ
೧೨	ಗೌರಮ್ಮ	ಗಿಣಿಗೇರಾ	೩೬	ಎಸ್.ಎಸ್.ಎಲ್.ಸಿ ಎನ್.ಟಿ.ಸಿ	ಅಂಗನವಾಡಿ ಕಾರ್ಯಕರ್ತೆ	ಜೋಗ್ಯಾರು	ವಿವಾಹಿತೆ	ಲೈಂ, ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ
೧೩	ಗಂಗವ್ವ	ಹೊಸಳ್ಳಿ	೧೮	ಅನಕ್ಷರಸ್ಥೆ	ಗುಡಿಪೂಜಾರಿ	ಮಾದರ	ದೇವದಾಸಿ	ಲೈ, ದೈ, ಭಾ ಹಿಂಸೆ	ಮಾಡಿಲ್ಲ	–	–
೧೪	ಚಂಚಲಾ	ಶಿವಪೂರ	೪೪	ಅನಕ್ಷರಸ್ಥೆ	ಕೂಲಿ	ದೇವಾಂಗ	ವಿವಾಹಿತೆ	ಲೈ, ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಭಾವ
೧೫	ಜಲದರ್ಶಿನಿ	ಶಿವಪೂರ	೧೯	೭ನೇ ತರಗತಿ	ಕೂಲಿ	ಲಂಬಾಣಿ	ವಿವಾಹಿತೆ	ಲೈ, ಭಾ ಹಿಂಸೆ	ಮಾಡಿಲ್ಲ	–	ಗಂಡ, ಅತ್ತೆ
೧೬	ಜಾನ್ಹವಿ	ಚುಕನಕಲ್	೩೪	ಪಿ.ಯು.ಸಿ	ಕೂಲಿ	ವಾಲ್ಮೀಕಿ	ವಿವಾಹಿತೆ	ಲೈ, ಆ, ಶಾ ಹಿಂಸೆ	ಮಾಡಿಲ್ಲ	–	ಅತ್ತೆ
೧೭	ಜೋಗಮ್ಮ	ಹಿರೇಸಿಂದೋಗಿ	೫೮	ಅನಕ್ಷರಸ್ಥೆ	ಕೂಲಿ	ಮಾದಿಗ	ದೇವದಾಸಿ	ಲೈ, ಆ ಹಿಂಸೆ	ಮಾಡಿಲ್ಲ	–	–
೧೮	ತನು	ಹಿರೇಸಿಂದೋಗಿ	೩೬	ಅನಕ್ಷರಸ್ಥೆ	ಪೂಜಾರಿಕೆ	ಮಾದಿಗ	ದೇವದಾಸಿ	ಲೈ, ಶಾ, ಆ ಹಿಂಸೆ	ಮಾಡಿಲ್ಲ	–	–
೧೯	ತಾರಾ	ಹಿರೇಸಿಂದೋಗಿ	೧೯	೬ನೇ ತರಗತಿ	ವಿದ್ಯಾಭ್ಯಾಸ	ಕುಂಬಾರ	ಅವಿವಾಹಿತೆ	ಲೈ ಹಿಂಸೆ	ಮಾಡಿದೆ	ದೊರಕಿದೆ	ಮಾಮ
೨೦	ದನ್ನುಸ್	ಬಂಡಿಹರ್ಲಾಪುರ	೪೩	ಎಸ್.ಎಸ್.ಎಲ್.ಸಿ ಎನ್.ಟಿ.ಸಿ	ಗೃಹಕೃತ್ಯ	ಮುಸ್ಲಿಂ	ವಿವಾಹಿತೆ	ಲೈ, ಭಾ, ಆ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ
೨೧	ದ್ಯಾಮವ್ವ	ಶಿವಪೂರ	೫೧	೭ನೇ ತರಗತಿ	ಗೃಹಕೃತ್ಯ	ಮ್ಯಾದಾರು	ವಿಧವೆ	ಲೈ, ಭಾ ಹಿಂಸೆ	ಮಾಡಿದೆ	ದೊರಕಿಲ್ಲ	ಮಗ, ಸೊಸೆ
೨೨	ದುರಗಮ್ಮ	ಚಿಲಕಮುಖಿ	೨೮	ಎಸ್.ಎಸ್.ಎಲ್.ಸಿ	ಕೂಲಿ	ವಾಲ್ಮೀಕಿ	ವಿವಾಹಿತೆ	ಲೈ, ಆ ಹಿಂಸೆ	ಮಾಡಿಲ್ಲ	–	ಗಂಡ
೨೩	ದುರ್ಗವ್ವ	ಬಸಾಪುರ	೧೯	ಬಿ.ಕಾಂ.ಪ್ರಥಮ	ವಿದ್ಯಾಭ್ಯಾಸ	ಗಂಗಾಮಾತಾ	ಅವಿವಾಹಿತೆ	ಲೈ, ದೈ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ತಾಯಿ, ಸೊದರ ಅತ್ತೆ
೨೪	ನಯನಾ	ಹಿಟ್ನಾಳ	೭೨	ಅನಕ್ಷರಸ್ಥೆ	ಗೃಹಕೃತ್ಯ	ಮರಾಠರು	ವಿಧವೆ	ಲೈ ಹಿಂಸೆ	ಮಾಡಿಲ್ಲ	–	ಮಗ
೨೫	ನವ್ಯ	ಹಿಟ್ನಾಳ	೪೧	ಎಮ್.ಕಾಂ	ಮಕ್ಕಳಿಗೆ ಮನೆಪಾಠ	ಸಾದರು	ವಿವಾಹಿತೆ	ಲೈ, ದೈ ಹಿಂಸೆ	ಮಾಡಿಲ್ಲ	–	ಗಂಡ

೨೬	ನಳಿನಿ	ಹಿಟ್ನಾಳ	೨೯	ಬಿ.ಎ ಫ್ಯಾಶನ್ ಡಿಜನರ್	ಗೃಹಕೃತ್ಯ	ವಿರಶೈವರು	ವಿವಾಹಿತೆ	ಲೈ, ಆ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ, ಅತ್ತೆ
೨೭	ಪಲ್ಲವಿ	ಬೂದುಗುಂಪಾ	೪೪	ಬಿ.ಎ	ಕ್ಲರ್ಕ್	ದಾಸರು	ವಿವಾಹಿತೆ	ಲೈ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ತಂದೆ, ಅಣ್ಣ
೨೮	ಫಲಕ್	ಅಗಳಕೇರಾ	೩೯	ಪಿಯುಸಿ	ಟೇಲರಿಂಗ್	ಲಿಂಗಾಯತ	ವಿಧವೆ	ಲೈ, ಆ ಹಿಂಸೆ	ಮಾಡಿದೆ		ತಂದೆ, ತಾಯಿ
೨೯	ಭವ್ಯ	ಬಂಡಿಹರ್ಲಾಪುರ	೩೮	೬ನೇ ತರಗತಿ	ಟೇಲರಿಂಗ್	ಜಂಗಮರು	ವಿವಾಹಿತೆ	ಲೈ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ
೩೦	ಭಾಗ್ಯ	ಬಂಡಿಹರ್ಲಾಪುರ	೨೧	ಪಿಯುಸಿ	ಗಡಿಗೆತಯಾರಿಕೆ	ಶೆಟ್ಟರು	ಅವಿವಾಹಿತೆ	ಲೈ ಹಿಂಸೆ	ಮಾಡಿಲ್ಲ	-	ತಂದೆ, ತಾಯಿ
೩೧	ಮಮತಾ	ಹಟ್ಟಿ	೫೨	ಅನಕ್ಷರಸ್ಥೆ	ಕೂಲಿ	ಗಂಗಾಮಾತ	ವಿಧವೆ	ಲೈ, ಆ ಹಿಂಸೆ	ಮಾಡಿದೆ	ದೊರಕಿಲ್ಲ	ಮಗ
೩೨	ಮರಿಯವ್ವ	ಗಿಣಿಗೇರಾ	೨೦	ಬಿ. ಎ	ಗೃಹಕೃತ್ಯ	ರಜಪೂತ	ವಿವಾಹಿತೆ	ಲೈ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ತಂದೆ
೩೩	ಮಹಾಲಕ್ಷ್ಮೀ	ಗಿಣಿಗೇರಾ	೪೭	ಬಿ. ಕಾಂ, ಬಿ.	ಎಡ್‌ಟೀಚರ್	ಬ್ರಾಹ್ಮಣ	ವಿಚ್ಛೇದಿತೆ	ಲೈ ಹಿಂಸೆ	ಮಾಡಿದೆ	ದೊರಕಿದೆ	ಗಂಡ, ಆತನ ಮನೆಯವರು
೩೪	ಮಂಜುಳಾ	ಗಿಣಿಗೇರಾ	೩೧	೭ನೇ ತರಗತಿ	ಬಟ್ಟೆ ಹೊಲಿಯುವುದು	ನಾಯಕ	ವಿವಾಹಿತೆ	ಲೈ ಹಿಂಸೆ	ಮಾಡಿಲ್ಲ	-	ಗಂಡ
೩೫	ಯಾಸ್ಮಿನ್	ಗಿಣಿಗೇರಾ	೧೭	೭ನೇ ತರಗತಿ	ಗೃಹಕೃತ್ಯ	ಪಿಂಜಾರ	ಬಾಲ್ಯವಿವಾಹ	ಲೈ.ಆ.ಭಾ ಹಿಂಸೆ	ಮಾಡಿಲ್ಲ	-	ಗಂಡ, ಅತ್ತೆ

ಶಾಬ್ಧಿಕ ಹಿಂಸೆ

ಕ್ರ.ಸಂ	ಹೆಸರು	ಊರು	ವಯಸ್ಸು	ಶಿಕ್ಷಣ	ವೃತ್ತಿ	ಜಾತಿ	ವೈವಾಹಿಕ ಸ್ಥಾನಮಾನ	ದೌರ್ಜನ್ಯದ ಸ್ವರೂಪ	ಪ್ರತಿಭಟನೆ	ಪ್ರತಿಫಲ	ಕೃತ್ಯ ಎಸಗಿದವರು
೧	ಅಂಜನಾ	ಗೊಂಡಬಾಳ	೩೮	ಟೇಲರಿಂಗ್	ಬಟ್ಟೆ ಹೊಲಿಯುವುದು	ದೇವಾಂಗ	ವಿವಾಹಿತೆ	ಶಾ.ದೈ ಹಿಂಸೆ	ಮಾಡಿದೆ	ದೊರಕಿಲ್ಲ	ಗಂಡ
೨	ಅನಿತಾ	ಚುಕನಕಲ್	೪೧	ಅನಕ್ಷರಸ್ಥೆ	ಗೃಹಕೃತ್ಯ	ಲಿಂಗಾಯತ	ಅವಿವಾಹಿತೆ	ಶಾ.ಆ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಅಣ್ಣ, ಅತ್ತಿಗೆ
೩	ಅನುಪಮಾ	ಚುಕನಕಲ್	೬೨	ಅನಕ್ಷರಸ್ಥೆ	ಕೂಲಿ	ಲಿಂಗಾಯತ	ವಿಧವೆ	ಶಾ.ಆ ಹಿಂಸೆ	ಮಾಡಿದೆ	ದೊರಕಿಲ್ಲ	ಅತ್ತೆ,ಮಾವ,ಭಾವ (ಗಂಡನ ಅಣ್ಣ)
೪	ಅರ್ಪಿತಾ	ಹ್ಯಾಟಿ	೧೫	೯ನೇ ತರಗತಿ	ಗೃಹಕೃತ್ಯ	ಲಿಂಗಾಯತ	ಅವಿವಾಹಿತೆ	ಶಾ.ಆ.ಭಾಹಿಂಸೆ	ಮಾಡಿಲ್ಲ	–	ತಂದೆ, ತಾಯಿ
೫	ಅಕ್ಷರಾ	ಭಾಗ್ಯನಗರ	೪೩	ಡಿ.ಎಡ್	ಟೀಚರ್	ಗೊಲ್ಲರು	ವಿವಾಹಿತೆ	ಶಾ ಹಿಂಸೆ	ಮಾಡಿಲ್ಲ	–	ಗಂಡ, ಅತ್ತೆ, ಮಾವ
೬	ಆಯಿಶಾ ಬೇಗಂ	ಮುದ್ದಾಬಳ್ಳಿ	೪೧	ಅನಕ್ಷರಸ್ಥೆ	ಬಿಜಿನೆಸ್	ಮುಸ್ಲಿಂ	ಅವಿವಾಹಿತೆ	ಶಾ.ಭಾ ಹಿಂಸೆ	ಮಾಡಿಲ್ಲ	–	ಅಣ್ಣ, ಅತ್ತಿಗೆ
೭	ಈಶ್ವರಿ	ಹಿರೇಬಗೂಳ	೪೯	೩ನೇ ತರಗತಿ	ಕೂಲಿ	ಹಡಪದ	ವಿವಾಹಿತೆ	ಶಾ.ದೈ, ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ, ಸೊಸೆ
೮	ಉರ್ಮಿಳಾ	ಹಿರೇಬಗೂಳ	೫೧	ಅನಕ್ಷರಸ್ಥೆ	ಗೃಹಕೃತ್ಯ	ಮ್ಯಾದರ	ವಿವಾಹಿತೆ	ಶಾ.ದೈ, ಭಾ, ಹಿಂಸೆ	ಮಾಡಿಲ್ಲ	–	ಗಂಡ
೯	ಕನಕಾ	ಹಿರೇಬಗೂಳ	೬೪	ಅನಕ್ಷರಸ್ಥೆ	ಕೂದಲು ವ್ಯಾಪಾರ	ಮಾದರು	ವಿಧವೆ	ಶಾ.ಭಾ, ಆ ಹಿಂಸೆ	ಮಾಡಿದೆ	ದೊರಕಿಲ್ಲ	ಮಗ, ಸೊಸೆ

೧೦	ಗಂಗಾ	ಹಿರೇಬಗೂಳ	೪೩	೭ನೇ ತರಗತಿ	ಹೂವಿನ ವ್ಯಾಪಾರ	ತಳವಾರ	ವಿಚ್ಛೇದಿತೆ	ಶಾ.ಭಾ ಹಿಂಸೆ	ಮಾಡಿಲ್ಲ	–	ಗಂಡ, ಅತ್ತೆ
೧೧	ಚಂಚಲಾ	ಕುಣಿಕೇರಿ	೧೪	೬ನೇ ತರಗತಿ	ವಿದ್ಯಾಭ್ಯಾಸ	ಸಾದರು	ಅವಿವಾಹಿತೆ	ಶಾ.ಭಾ ಹಿಂಸೆ	ಮಾಡಿಲ್ಲ	–	ತಂದೆ, ತಾಯಿ
೧೨	ಚಂದನಾ	ಕುಣಿಕೇರಿ	೧೨	ಅನಕ್ಷರಸ್ಥೆ	ಬಾಲ ಕಾರ್ಮಿಕಳು	ವಾಲ್ಮೀಕಿ	ಅವಿವಾಹಿತೆ	ಶಾ.ಆ ಹಿಂಸೆ	ಮಾಡಿಲ್ಲ	–	ತಂದೆ, ತಾಯಿ
೧೩	ಜಲಜಾಕ್ಷಿ	ಹೊಸಳ್ಳಿ	೬೮	ಅನಕ್ಷರಸ್ಥೆ	ಗೃಹಕೃತ್ಯ	ಬಾರಕೇರ	ವಿಧವೆ	ಶಾ.ದೈ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಮಕ್ಕಳು, ಸೊಸೆಯಂದಿರು
೧೪	ತಾರುಣ್ಯ	ಹಿರೇಬಗೂಳ	೪೩	ಪಿ.ಯು.ಸಿ ಡಿ.ಇ.ಡಿ	ಟೀಚರ್	ಸಿಂಪಿಗ	ವಿಧವೆ	ಶಾ ಹಿಂಸೆ	ಮಾಡಿದೆ	ದೊರಕಿಲ್ಲ	ಮಾವ
೧೫	ಧನ್ವಂತರಿ	ಹಿರೇಬಗೂಳ	೩೪	೭ನೇ ತರಗತಿ	ಗೃಹಕೃತ್ಯ	ಕ್ರಿಶ್ಚಿಯನ್	ವಿವಾಹಿತೆ	ಶಾ.ಆ, ಭಾ ಹಿಂಸೆ	ಮಾಡಿಲ್ಲ	–	ಗಂಡ
೧೬	ನವ್ಯ	ಹಿರೇಬಗೂಳ	೨೪	ಎಸ್.ಎಸ್.ಎಲ್.ಸಿ	ಹಣ್ಣಿನ ವ್ಯಾಪಾರ	ಮುಚಿಗೇರ	ವಿವಾಹಿತೆ	ಶಾ. ಭಾ ಹಿಂಸೆ	ಮಾಡಿಲ್ಲ	–	ಗಂಡ
೧೭	ನಾಫಿದ್	ಹೊಸಳ್ಳಿ	೨೪	ಪಿ.ಯು.ಸಿ	ಕಂಪ್ಯೂಟರ್ ಆಪರೇಟರ್	ಮುಸ್ಲಿಂ	ಅವಿವಾಹಿತೆ	ಶಾ. ಆ. ಭಾ ಹಿಂಸೆ	ಮಾಡಿಲ್ಲ	–	ತಂದೆ
೧೮	ನಿತು	ಹೊಸಳ್ಳಿ	೩೯	ಅನಕ್ಷರಸ್ಥೆ	ಗೃಹಕೃತ್ಯ	ಮಾದರ	ದೇವದಾಸಿ	ಶಾ. ಆ. ಭಾ ಹಿಂಸೆ	ಮಾಡಿಲ್ಲ	–	–
೧೯	ನಿಹಾರಿಕಾ	ಹೊಸಳ್ಳಿ	೪೫	ಅನಕ್ಷರಸ್ಥೆ	ಗೃಹಕೃತ್ಯ	ಪತ್ತಾರ	ವಿವಾಹಿತೆ	ಶಾ. ಭಾ ಹಿಂಸೆ	ಮಾಡಿಲ್ಲ	–	ಗಂಡ, ತಂದೆ, ತಾಯಿ
೨೦	ನಿಂಗಮ್ಮ	ಹುಲಿಗಿ	೩೮	ಅನಕ್ಷರಸ್ಥೆ	ಕೂಲಿ	ಬ್ಯಾಡ್ರು	ವಿವಾಹಿತೆ	ಶಾ, ಆ, ಭಾ ಹಿಂಸೆ	ಮಾಡಿದೆ	ದೊರಕಿಲ್ಲ	ಗಂಡ, ಸೊದರಮಾವ

೨೧	ನಿಂಬಕ್ಕ	ಹುಲಿಗಿ	೨೧	೨ನೇ ತರಗತಿ	ಬಟ್ಟೆ ಮುಸುರೆಕೆಲಸ	ತಳವಾರ	ಅವಿವಾಹಿತೆ	ಶಾ. ಭಾ ಹಿಂಸೆ	ಮಾಡಿದೆ	ದೊರಕಿಲ್ಲ	ಅಜ್ಜಿ (ತಾಯಿಯ ತಾಯಿ)
೨೨	ಫರೀದಾ	ಹುಲಿಗಿ	೩೪	ಎಸ್.ಎಸ್.ಎಲ್.ಸಿ	ಬಟ್ಟೆ ಅಂಗಡಿ	ಪಿಂಜಾರ	ವಿವಾಹಿತೆ	ಶಾ.ಆ, ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ
೨೩	ಬಾಗಮ್ಮ	ಹುಲಿಗಿ	೪೧	ಅನಕ್ಷರಸ್ಥೆ	ಕಾಯಿ ವ್ಯಾಪಾರ	ಮಡಿವಾಳರು	ವಿವಾಹಿತೆ	ಶಾ.ಆ.ದೈ.ಭಾಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ, ಮಾವ, ಮೈದುನ, ಅತ್ತೆ
೨೪	ಭಗೀರಥಿ	ಹುಲಿಗಿ	೬೩	ಅನಕ್ಷರಸ್ಥೆ	ಗೃಹಕೃತ್ಯ	ಲಂಬಾಣಿ	ವಿಧವೆ	ಶಾ. ದೈ, ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಮಗ, ಸೊಸೆ
೨೫	ಭವಾನಿ	ಹಿಟ್ನಾಳ	೪೮	ಬಿ.ಎ.ಎಮ್.ಎಸ್	ಡಾಕ್ಟರ್	ಸಾದರು	ವಿವಾಹಿತೆ	ಶಾ ಹಿಂಸೆ	ಮಾಡಿದೆ	ದೊರಕಿಲ್ಲ	ಗಂಡ
೨೬	ಭುವನಾ	ಹಿಟ್ನಾಳ	೨೪	ಅನಕ್ಷರಸ್ಥೆ	ಗೃಹಕೃತ್ಯ	ಬಡಿಗೇರ	ಅವಿವಾಹಿತೆ	ಶಾ ಹಿಂಸೆ	ಮಾಡಿದೆ	ದೊರಕಿದೆ	ತಂದೆ
೨೭	ಭುವನೇಶ್ವರಿ	ಅಗಳಕೇರಾ	೩೬	ಎಸ್.ಎಸ್.ಎಲ್.ಸಿ	ಗೃಹಕೃತ್ಯ	ದೇವಾಂಗ	ವಿವಾಹಿತೆ	ಶಾ ಹಿಂಸೆ	ಮಾಡಿದೆ		ಗಂಡ
೨೮	ಬೋರಮ್ಮ	ಶಿವಪೂರ	೪೯	ಎಸ್.ಎಸ್.ಎಲ್.ಸಿ	ಬಿಜಿನೆಸ್	ಲಿಂಗಾಯತ	ವಿವಾಹಿತೆ	ಶಾ ಹಿಂಸೆ	ಮಾಡಿದೆ	ದೊರಕಿದೆ	ಗಂಡ
೨೯	ಯಾಮಿನಿ	ಶಿವಪೂರ	೩೨	ಬಿ. ಎ	ಗೃಹಕೃತ್ಯ	ವಾಲ್ಮೀಕಿ	ಅವಿವಾಹಿತೆ	ಶಾ. ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ತಂದೆ, ತಾಯಿ
೩೦	ರವಳಿ	ಬಂಡಿಹರ್ಲಾಪುರ	೩೮	३ನೇ ತರಗತಿ	ಗಡಿಗೆ ತಯಾರಿಕೆ	ಕುಂಬಾರ	ವಿವಾಹಿತೆ	ಶಾ ಹಿಂಸೆ	ಮಾಡಿಲ್ಲ	–	ಗಂಡ, ಮಗ
೩೧	ರುದ್ರಮ್ಮ	ಬಂಡಿಹರ್ಲಾಪುರ	೪೧	ಅನಕ್ಷರಸ್ಥೆ	ಮನೆ ಕೆಲಸ	ತಳವಾರ	ವಿಚ್ಛೇದಿತೆ	ಶಾ. ಸಾ ಹಿಂಸೆ	ಮಾಡಿದೆ	ದೊರಕಿದೆ	ಗಂಡ, ಅತ್ತೆ
೩೨	ಲಾವಣ್ಯ	ಬಂಡಿಹರ್ಲಾಪುರ	೩೬	೭ನೇ ತರಗತಿ	ಕೂಲಿ	ಗೊಲ್ಲರು	ವಿವಾಹಿತೆ	ಶಾ ಹಿಂಸೆ	ಮಾಡಿದೆ	ದೊರಕಿಲ್ಲ	ಗಂಡ, ಮಾವ, ಅತ್ತೆ
೩೩	ವನಜಾ	ಬಂಡಿಹರ್ಲಾಪುರ	೨೮	ಡಿ.ಎಡ್	ಶಿಕ್ಷಕಿ	ಸಾದರು	ವಿವಾಹಿತೆ	ಶಾ. ಭಾ ಹಿಂಸೆ	ಮಾಡಿಲ್ಲ	–	ಅತ್ತೆ, ನಾದಿನಿ
೩೪	ವನಿತಾ	ಬಹದ್ದೂರಬಂಡಿ	೨೪	ಡಿ.ಎಡ್	ಗೃಹಕೃತ್ಯ	ಕುರುಬರು	ಅವಿವಾಹಿತೆ	ಶಾ. ಭಾ ಹಿಂಸೆ	ಮಾಡಿಲ್ಲ	–	ಅಣ್ಣ

೩೫	ಶರಣ್ಯ	ಬಹದ್ದೂರಬಂಡಿ	೩೮	ಬಿ.ಇ	ಇನ್ಫೋಸಿಸ್	ಕುರುಬರು	ಅವಿವಾಹಿತೆ	ಶಾ, ಭಾ ಹಿಂಸೆ	ಮಾಡಿದೆ	ದೊರಕಿಲ್ಲ	ಅಣ್ಣ, ತಂದೆ, ತಾಯಿ
೩೬	ಶಶಿ	ಬಹದ್ದೂರಬಂಡಿ	೪೪	ಎಸ್.ಎಸ್.ಎಲ್.ಸಿ	ಕೂಲಿ	ಹಡಪದ	ವಿವಾಹಿತೆ	ಶಾ, ಭಾ ಹಿಂಸೆಸ	ಮಾಡಿಲ್ಲ	–	ಗಂಡ
೩೭	ಶಂಕ್ರವ್ವ	ಬಹದ್ದೂರಬಂಡಿ	೩೧	ಅನಕ್ಷರಸ್ಥೆ	ಗೃಹಕೃತ್ಯ	ಮಾದರ	ವಿಧವೆ	ಶಾ, ಭಾ ಹಿಂಸೆ	ಮಾಡಿದೆ	ದೊರಕಿಲ್ಲ	ತಂದೆ, ತಾಯಿ
೩೮	ಸರಳ	ಚುಕನಕಲ್	೫೬	ಅನಕ್ಷರಸ್ಥೆ	ಕೂಲಿ	ವಾಲ್ಮೀಕಿ	ವಿವಾಹಿತೆ	ಶಾ, ದೈ ಹಿಂಸೆ	ಮಾಡಿಲ್ಲ	–	ಸಂಗಾತಿ
೩೯	ಸವಿತಾ	ಚುಕನಕಲ್	೩೪	ಎಸ್.ಎಸ್.ಎಲ್.ಸಿ	ಕೂಲಿ	ಮಾದರು	ವಿವಾಹಿತೆ	ಶಾ,ದೈ,ಭಾ ಹಿಂಸೆ	ಮಾಡಿಲ್ಲ	–	ಗಂಡ, ಅತ್ತೆ, ಮಾವ, ತಂದೆ, ತಾಯಿ
೪೦	ಸಾಧನಾ	ಚುಕನಕಲ್	೫೪	ಅನಕ್ಷರಸ್ಥೆ	ಗೃಹಕೃತ್ಯ	ಜಂಗಮರು	ವಿಧವೆ	ಶಾ,ಸಾ ಹಿಂಸೆ	ಮಾಡಿದೆ	ದೊರಕಿಲ್ಲ	ಮಗ, ಸೊಸೆ
೪೧	ಸುರಭಿ	ಬಸಾಪುರ	೫೧	ಅನಕ್ಷರಸ್ಥೆ	ಗೃಹಕೃತ್ಯ	ಮಾದರ	ವಿವಾಹಿತೆ	ಶಾ,ಆ,ದೈ ಹಿಂಸೆ	ಮಾಡಿಲ್ಲ	–	ಗಂಡ, ಮಗ
೪೨	ಸೌಭಾಗ್ಯ	ಚಿಲಕಮುಖಿ	೪೭	ಎಮ್.ಬಿ.ಎ ಬಜಾಜ್	ಅ.ಮ್ಯಾನೇಜರ್	ಸಾದರು	ವಿವಾಹಿತೆ	ಶಾ ಹಿಂಸೆ	ಮಾಡಿದೆ	ದೊರಕಿದೆ	ಮಾಮ ಮತ್ತು ಮನೆಯವರು
೪೩	ಹನುಮವ್ವ	ಬಾನಾಪುರ	೬೩	ಅನಕ್ಷರಸ್ಥೆ	ಕೂಲಿ	ಪವಾರ	ಅವಿವಾಹಿತೆ	ಶಾ, ಭಾ ಹಿಂಸೆ	ಮಾಡಿಲ್ಲ	–	ಅತ್ತೆ, ಮಾವ
೪೪	ಹರಣಿ	ಮುನಿರಾಬಾದ್‌ಡ್ಯಾಂ	೪೮	ಅನಕ್ಷರಸ್ಥೆ	ಕೂಲಿ	ಲಿಂಗಾಯತ	ವಿವಾಹಿತೆ	ಶಾ ಹಿಂಸೆ	ಮಾಡಿಲ್ಲ	–	ಗಂಡ
೪೫	ಕ್ಷಮಾ	ಗುನ್ನಾಳ	೨೯	೫ನೇ ತರಗತಿ	ಕೂಲಿ	ಲಂಬಾಣಿ	ವಿವಾಹಿತೆ	ಶಾ,ಆ, ಭಾ ಹಿಂಸೆ	ಮಾಡಿದೆ	ದೊರಕಿದೆ	ತಾಯಿ, ತಂದೆ, ತಮ್ಮ

ಭಾವನಾತ್ಮಕ ಹಿಂಸೆ

ಕ್ರಸಂ	ಹೆಸರು	ಊರು	ವಯಸ್ಸು	ಶಿಕ್ಷಣ	ವೃತ್ತಿ	ಜಾತಿ	ವೈವಾಹಿಕ ಸ್ಥಾನಮಾನ	ದೌರ್ಜನ್ಯದ ಸ್ವರೂಪ	ಪ್ರತಿಭಟನೆ	ಪ್ರತಿಫಲ	ಕೃತ್ಯ ಎಸಗಿದವರು
೧	ಅನ್ವಿತಾ	ಹೂವಿನಾಳ	೪೦	೭ನೇ ತರಗತಿ	ಅಂಗನವಾಡಿ ಕಾರ್ಯಕರ್ತೆ	ಸಿಂಪಿಗ	ವಿವಾಹಿತೆ	ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ, ಅತ್ತೆ
೨	ಅರುಣಾ	ದಾಟನಾಳ	೪೮	ಅನಕ್ಷರಸ್ಥೆ	ಕೂಲಿ	ಮಾದರು	ವಿವಾಹಿತೆ	ಭಾ, ದೈ ಹಿಂಸೆ	ಮಾಡಿಲ್ಲ	–	ಗಂಡ
೩	ಆನ್ವಿಕಾ	ಭಾಗ್ಯನಗರ	೧೮	ಎಸ್.ಎಸ್.ಎಲ್.ಸಿ	ಕೂಲಿ	ಚೆಲುವಾದಿ	ವಿವಾಹಿತೆ	ಭಾ, ದೈ ಹಿಂಸೆ	ಮಾಡಿಲ್ಲ	–	ಪೋಷಕರು
೪	ಉಜ್ವಲಾ	ಭಾಗ್ಯನಗರ	೩೪	೩ನೇ ತರಗತಿ	ಗೃಹಕೃತ್ಯ	ಲಿಂಗಾಯತ	ವಿವಾಹಿತೆ	ಭಾ, ಲೈ ಹಿಂಸೆ	ಮಾಡಿಲ್ಲ	–	ಗಂಡ
೫	ಉಮಾವತಿ	ಕೊಪ್ಪಳ	೫೨	ಎಮ್.ಎ ಇನ್ ಇಂಗ್ಲಿಷ್	ಪ್ರಾಧ್ಯಾಪಕಿ	ಬ್ರಾಹ್ಮಣರು	ವಿವಾಹಿತೆ	ಭಾ ಹಿಂಸೆ	ಮಾಡಿಲ್ಲ	–	ಗಂಡ
೬	ಕಲ್ಲಮ್ಮ	ಕವಲೂರು	೪೨	ಬಿ. ಕಾಂ	ಕೃಷಿಕಳು	ಬ್ರಾಹ್ಮಣ	ವಿಧವೆ	ಭಾ, ಶಾ ಹಿಂಸೆ	ಮಾಡಿದೆ	ದೊರಕಿದೆ	ಮಾವ, ಅತ್ತೆ
೭	ಕಾದಂಬರಿ	ಕವಲೂರು	೨೪	ಪಿ. ಯು. ಸಿ	ಗೃಹಕೃತ್ಯ	ತಳವಾರ	ಅವಿವಾಹಿತೆ	ಭಾ ಹಿಂಸೆ	ಮಾಡಿಲ್ಲ	–	ತಂದೆ
೮	ಕೋಮಲಾ	ಅಳವಂಡಿ	೨೮	ಎಸ್.ಎಸ್.ಎಲ್.ಸಿ	ಮಂಜುನಾಥನ ಗುಂಪಿನ ಲೆಕ್ಕ ಪರಿಶೋಧಕಿ	ಉಪ್ಪಾರ	ಅವಿವಾಹಿತೆ	ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ತಮ್ಮ, ತಾಯಿ
೯	ಗಗನಾ	ಅಳವಂಡಿ	೪೭	೮ನೇ ತರಗತಿ	ಹಣ್ಣಿನ ವ್ಯಾಪಾರ	ಉಪ್ಪಾರ	ಅವಿವಾಹಿತೆ	ಭಾ, ಆ ಹಿಂಸೆ	ಮಾಡಿಲ್ಲ	–	ತಮ್ಮ, ತಮ್ಮನ ಹೆಂಡತಿ

೧೦	ಗೌರವ್ವ	ಬೋಚನಹಳ್ಳಿ	೩೩	ಪಿ.ಯು.ಸಿ, ಡಿ. ಎಡ್	ಟೀಚರ್	ನೇಕಾರ	ವಿವಾಹಿತೆ	ಭಾ, ಆ ಹಿಂಸೆ	ಮಾಡಿಲ್ಲ	-	ಗಂಡ, ಮೈದುನ
೧೧	ದಾನೇಶ್ವರಿ	ಮತ್ತೂರು	೨೪	ಪಿ.ಯು.ಸಿ, ಟೈಪರೈಟಿಂಗ್	ಸಿನಿಯರ್ ಟೈಪಿಸ್ಟ್	ಬ್ರಾಹ್ಮಣ	ಅವಿವಾಹಿತೆ	ಭಾ, ಆ. ಹಿಂಸೆ	ಮಾಡಿಲ್ಲ	-	ತಂದೆ
೧೨	ಪರಿಮಳ	ಗುನ್ನಾಳ	೫೨	೭ನೇ ತರಗತಿ	ಗೃಹಕೃತ್ಯ	ಗಂಗಾಮಾತಾ	ವಿವಾಹಿತೆ	ಭಾ, ಆ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ, ಅತ್ತೆ
೧೩	ಪವಿತ್ರಾ	ಕಾತರಿಕಿ	೩೧	೭ನೇ ತರಗತಿ	ಗೃಹಕೃತ್ಯ	ನೇಕಾರ	ವಿವಾಹಿತೆ	ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ, ಮಾವ
೧೪	ಪ್ರತಿಭಾ	ಕಾತರಕಿ	೨೮	ಬಿ.ಎ	ಎಸ್.ಡಿ.ಸಿ	ರೆಡ್ಡಿ	ವಿವಾಹಿತೆ	ಭಾ, ಆ ಹಿಂಸೆ	ಮಾಡಿಲ್ಲ	-	ಗಂಡ
೧೫	ಪಂಕಜಾ	ಹಲಗೇರಿ	೩೪	ಅನಕ್ಷರಸ್ಥೆ	ಗೃಹಕೃತ್ಯ	ಚಿಂಪಿಗೇರ	ವಿವಾಹಿತೆ	ಭಾ ಹಿಂಸೆ	ಮಾಡಿಲ್ಲ	-	ಗಂಡ, ಅತ್ತೆ
೧೬	ಭೂಮಿಕಾ	ಹಲಗೇರಿ	೩೫	ಎನ್.ಟಿ.ಸಿ	ಅಂಗನವಾಡಿ ಟೀಚರ	ಪಂಚಮಸಾಲಿ	ವಿವಾಹಿತೆ	ಭಾ ಹಿಂಸೆ	ಮಾಡಿದೆ	ದೊರಕಿಲ್ಲ	ಗಂಡ
೧೭	ಮಾಂತಮ್ಮ	ಹಲಗೇರಿ	೨೮	ಅನಕ್ಷರಸ್ಥೆ	ಗೃಹಕೃತ್ಯ	ಕುರುಬರು	ವಿವಾಹಿತೆ	ಭಾ ಹಿಂಸೆ	ಮಾಡಿಲ್ಲ	-	ಗಂಡ
೧೮	ಮೌನವ್ವ	ಹಲಗೇರಿ	೨೯	ಅನಕ್ಷರಸ್ಥೆ ವ್ಯಾಪಾರ	ಹಣ್ಣಿನ	ಮಡಿವಾಳರು	ವಿವಾಹಿತೆ	ಭಾ, ಆ ಹಿಂಸೆ	ಮಾಡಿಲ್ಲ	-	ಗಂಡ, ಅತ್ತೆ, ಮಾವ
೧೯	ಮಂಜವ್ವ	ಭಾಗ್ಯನಗರ	೪೭	ಎಮ್.ಎ ಎಲ್.ಎಲ್.ಬಿ	ವಕೀಲರು	ನೇಕಾರ	ವಿವಾಹಿತೆ	ಭಾ ಹಿಂಸೆ	ಮಾಡಿದೆ	ದೊರಕಿದೆ	ಗಂಡ
೨೦	ಯರಿಲಕ್ಷ್ಮೀ	ಭಾಗ್ಯನಗರ	೨೮	ಬಿ.ಎಸ್ಸಿ	ಗೃಹಕೃತ್ಯ	ಜೈನ	ವಿವಾಹಿತೆ	ಭಾ ಹಿಂಸೆ	ಮಾಡಿಲ್ಲ	-	ಅತ್ತ, ಗಂಡ
೨೧	ರಂಜಾನ್‌ಬೀ	ಕೋಳೂರು	೪೩	ಅನಕ್ಷರಸ್ಥೆ	ಗೃಹಕೃತ್ಯ	ಮುಸ್ಲಿಂ	ವಿವಾಹಿತೆ	ಭಾ, ದೈ ಹಿಂಸೆ	ಮಾಡಿದೆ	ದೊರಕಿಲ್ಲ	ಅಣ್ಣ, ತಮ್ಮ

೨೨	ರಾಯಮ್ಮ	ಓಜನಹಳ್ಳಿ	೨೩	ಅನಕ್ಷರಸ್ಥೆ	ಗೃಹಕೃತ್ಯ	ವಿರಶೈವ	ಅವಿವಾಹಿತೆ	ಭಾ ಹಿಂಸೆ	ಮಾಡಿಲ್ಲ	-	ಅಣ್ಣ
೨೩	ರಂಜಿತಾ	ಮುನಿರಾಬಾದ್ ಡ್ಯಾಂ	೨೪	ಎಸ್.ಎಸ್.ಎಲ್.ಸಿ	ಗೃಹಕೃತ್ಯ	ವಾಲ್ಮೀಕಿ	ವಿಧವೆ	ಭಾ ಹಿಂಸೆ	ಮಾಡಿಲ್ಲ	-	ಅತ್ತೆ
೨೪	ಲಲಿತಾ	ಮುನಿರಾಬಾದ್ ಡ್ಯಾಂ	೩೧	ಅನಕ್ಷರಸ್ಥೆ	ಗೃಹಕೃತ್ಯ	ಸಿಂಪಿಗ	ವಿವಾಹಿತೆ	ಭಾ ಹಿಂಸೆ	ಮಾಡಿಲ್ಲ	-	ಗಂಡ
೨೫	ಲಕ್ಷ್ಮೀ	ಮುನಿರಾಬಾದ್ ಡ್ಯಾಂ	೨೧	೬ನೇ ತರಗತಿ	ಬ್ಯೂಟಿಷಿಯನ್	ಗಾಣಿಗೇರ	ವಿವಾಹಿತೆ	ಭಾ ಹಿಂಸೆ	ಮಾಡಿಲ್ಲ	-	ಗಂಡ
೨೬	ವನಜಾ	ಮುನಿರಾಬಾದ್ ಡ್ಯಾಂ	೨೬	ಎಮ್.ಎ ಪತ್ರಿಕೋದ್ಯಮ	ಜರ್ನಲಿಸ್ಟ್	ಕುಡೊಕ್ಕಲಿಗ	ವಿವಾಹಿತೆ	ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	
೨೭	ವನಜಾಕ್ಷಿ	ಟಣಕನಕಲ್	೨೨	೭ನೇ ತರಗತಿ	ಹೂ ಮಾರಾಟ	ಎಸ್ಸಿ	ವಿವಾಹಿತೆ	ಭಾ ಹಿಂಸೆ	ಮಾಡಿದೆ	ದೊರಕಿಲ್ಲ	ಸೊದರಮಾವ
೨೮	ವರುಣ	ಚಿಲವಾಡಗಿ	೨೧	ಬಿ.ಕಾಂ ತೃತೀಯ	ವಿದ್ಯಾಭ್ಯಾಸ	ರೆಡ್ಡಿ	ಅವಿವಾಹಿತೆ	ಭಾ ಹಿಂಸೆ	ಮಾಡಿದೆ	ದೊರಕಿದೆ	ತಂದೆ, ತಾಯಿ
೨೯	ವಲ್ಲಭಿ	ದಾಟನಾಳ	೪೮	ಅನಕ್ಷರಸ್ಥೆ	ಗೃಹಕೃತ್ಯ	ಜಂಗಮ	ವಿವಾಹಿತೆ	ಭಾ ಹಿಂಸೆ	ಮಾಡಿದೆ	ದೊರಕಿದೆ	ಗಂಡ
೩೦	ಶಕುಂತಲಾ	ದಾಟನಾಳ	೧೭	೭ನೇ ತರಗತಿ	ವಿದ್ಯಾಭ್ಯಾಸ	ಲಿಂಗಾಯತ	ಅವಿವಾಹಿತೆ	ಭಾ ಹಿಂಸೆ	ಮಾಡಿಲ್ಲ	-	ಮಲ ತಂದೆ
೩೧	ಶೇಖಮ್ಮ	ಭಾಗ್ಯನಗರ	೪೮	ಅನಕ್ಷರಸ್ಥೆ	ಕೂಲಿ	ಚಲುವಾದಿ	ವಿಧವೆ	ಭಾ, ದೈ ಹಿಂಸೆ	ಮಾಡಿಲ್ಲ	-	ಅತ್ತೆ, ಮಾವ
೩೨	ಶಾಂತಲಾ	ಭಾಗ್ಯನಗರ	೨೩	ಅನಕ್ಷರಸ್ಥೆ	ಕೂಲಿ	ನೇಕಾರ	ವಿವಾಹಿತೆ	ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ, ಮಾವ, ಮೈದುನ
೩೩	ಸುಕೃತಾ	ಮೂದೇನೂರು	೨೯	ಅನಕ್ಷರಸ್ಥೆ	ಶಿಕ್ಷಕಿ	ಸಾದರ	ವಿವಾಹಿತೆ	ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಅತ್ತೆ, ಗಂಡ
೩೪	ಸುನೈನಾ	ಲೇಬಗೇರಾ	೪೬	ಅನಕ್ಷರಸ್ಥೆ	ಗೃಹಕೃತ್ಯ	ಮಡಿವಾಳರು	ವಿವಾಹಿತೆ	ಭಾ ಹಿಂಸೆ	ಮಾಡಿಲ್ಲ	-	ಗಂಡ
೩೫	ಸುರಭೀ	ಹಾನಗಲ್	೨೮	೭ನೇ ತರಗತಿ	ಗೃಹಕೃತ್ಯ	ಲಿಂಗಾಯತ್	ವಿವಾಹಿತೆ	ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ, ಮಾವ, ಅತ್ತೆ

೩೬	ಸುಂದರಮ್ಮ	ಬೂದುಗುಂಪಾ	೩೬	ಎಸ್.ಎಸ್.ಎಲ್.ಸಿ	ಬ್ಯೂಟಿಷಿಯನ್	ಲಿಂಗಾಯತ	ವಿವಾಹಿತೆ	ಭಾ ಹಿಂಸೆ	ಮಾಡಿಲ್ಲ	-	ಗಂಡ, ನಾದಿನಿಯರೂ
೩೭	ಹನುಮವ್ವ	ಇಂದರಗಿ	೪೩	ಪಿ.ಯು.ಸಿ	ಕೂಲಿ	ಲಂಬಾಣಿ	ವಿವಾಹಿತೆ	ಭಾ ಹಿಂಸೆ	ಮಾಡಿಲ್ಲ	-	ಗಂಡ
೩೮	ಹರಿಪ್ರಿಯಾ	ಕುಣಿಕೇರಿ	೫೨	೭ನೇ ತರಗತಿ	ಗೃಹಕೃತ್ಯ	ಗೊಲ್ಲರ್	ವಿವಾಹಿತೆ	ಭಾ ಹಿಂಸೆ	ಮಾಡಿಲ್ಲ	-	ಗಂಡ
೩೯	ಹರ್ಲಿನ್	ಹೊಸಳ್ಳಿ	೩೫	ಬಿ.ಕಾಂ	ಬ್ಯಾಂಕ್‌ಕ್ಲರ್ಕ	ಮುಚಿಗೇರ	ವಿವಾಹಿತೆ	ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಅತ್ತೆ, ಮಾವ
೪೦	ಹರ್ಷಿತಾ	ಹುಲಿಗಿ	೨೯	ಬಿ.ಎ, ಬಿ.ಎಡ್	ಪಾರ್ಟ್‌ಟೈಮ್ ಟೀಚರ್	ವಿರಶೈವರು	ಅವಿವಾಹಿತೆ	ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ತಮ್ಮ
೪೧	ಹುಲಿಗವ್ವ	ಗೊಂಡಬಾಳ	೨೦	ಪಿ.ಯು.ಸಿ	ವಿದ್ಯಾಭ್ಯಾಸ	ಕುರುಬ	ಅವಿವಾಹಿತೆ	ಭಾ ಹಿಂಸೆ	ಮಾಡಿದೆ	ದೊರಕಿಲ್ಲ	ಅಣ್ಣ, ತಾಯಿ
೪೨	ಹುಲಿಗೆಮ್ಮ	ಗೊಂಡಬಾಳ	೨೪	ಬಿ.ಎ	ಗೃಹಕೃತ್ಯ	ಸಿಂಗ್	ವಿವಾಹಿತೆ	ಭಾ. (ಶಿಕ್ಷಣ ನೀಡದಿರುವುದು)ಹಿಂಸೆ	ಮಾಡಿದೆ	ದೊರಕಿಲ್ಲ	ಗಂಡ ಗಂಡನ ಮನೆಯವರು
೪೩	ಹಂಪಮ್ಮ	ಬಸಾಪುರ	೩೪	ಅನಕ್ಷರಸ್ಥೆ	ಮನೆ ಹೊಲದ ಕೆಲಸ	ಚಲುವಾದಿ	ವಿವಾಹಿತೆ	ಭಾ ಹಿಂಸೆ	ಮಾಡಿಲ್ಲ	-	ಸೊಸೆ
೪೪	ಹಂಸಿಕಾ	ಚಿಲಕಮುಖಿ	೫೧	ಪಿ.ಯು.ಸಿ	ಗೃಹಕೃತ್ಯ	ದೇವಾಂಗ	ವಿವಾಹಿತೆ	ಭಾ.ಆ.ಶಾ,ದೈ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಮಾವ, ಮಾಮಿ, ಗಂಡ
೪೫	ಹಂಸಿನಿ	ಬಾನಾಪುರ	೩೨	೫ನೇ ತರಗತಿ	ಮಿಠಾಯಿ ವ್ಯಾಪಾರ	ಪವಾರ	ವಿವಾಹಿತೆ	ಭಾ ಹಿಂಸೆ	ಮಾಡಿಲ್ಲ	-	ಅತ್ತೆ

ಆರ್ಥಿಕ ಹಿಂಸೆ

ಕ್ರ.ಸಂ	ಹೆಸರು	ಊರು	ವಯಸ್ಸು	ಶಿಕ್ಷಣ	ವೃತ್ತಿ	ಜಾತಿ	ವೈವಾಹಿಕ ಸ್ಥಾನಮಾನ	ದೌರ್ಜನ್ಯದ ಸ್ವರೂಪ	ಪ್ರತಿಭಟನೆ	ಪ್ರತಿಫಲ	ಕೃತ್ಯ ಎಸಗಿದವರು
೧	ಅಮಿನಾ ಬಾನು	ಕೊಪ್ಪಳ	೩೫	೫ನೇ ತರಗತಿ	ಗೃಹ ಕೃತ್ಯ	ಪಿಂಜಾರ	ವಿವಾಹಿತೆ	ಆ.ಭಾ.ಶಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ, ಅತ್ತೆ, ಮಾವ, ನಾದಿನಿ
೨	ಅಮೋದಿನಿ	ಕೊಪ್ಪಳ	೪೮	ಅನಕ್ಷರಸ್ಥೆ	ಕೂಲಿ	ಸಾದರ ಲಿಂಗಾಯತ	ಸಹಚರ ಜೀವನ	ಆ.ಶಾ.ಭಾ ಹಿಂಸೆ	ಮಾಡಿಲ್ಲ	-	ಗಂಡ, ಮಕ್ಕಳು
೩	ಅನಿಷಾ	ಅಳವಂಡಿ	೪೩	೭ನೇ ತರಗತಿ	ಕೂಲಿ	ತಳವಾರ	ವಿವಾಹಿತೆ	ಆ.ಶಾ.ಭಾ ಹಿಂಸೆ	ಮಾಡಿದೆ	ದೊರಕಿಲ್ಲ	ಗಂಡ, ಮಾವ
೪	ಆರೋಹಿ	ಬೋಚನಹಳ್ಳಿ	೫೧	ಅನಕ್ಷರಸ್ಥೆ	ಕೂಲಿ	ಒಕ್ಕಲಿಗ	ವಿಧವೆ	ಆ.ಶಾ.ಭಾ ಹಿಂಸೆ	ಮಾಡಿಲ್ಲ	-	ಮಕ್ಕಳು
೫	ಇಂದುಮತಿ	ಬೆಟಗೇರಿ	೫೩	೭ನೇ ತರಗತಿ	ಗೃಹಕೃತ್ಯ	ನೋಣಬ	ವಿಧವೆ	ಆ.ಶಾ.ಭಾ ಹಿಂಸೆ	ಮಾಡಿದೆ	ದೊರಕಿಲ್ಲ	ಮಕ್ಕಳು
೬	ಐಶ್ವರ್ಯ	ಬೆಟಗೇರಿ	೩೪	ಅನಕ್ಷರಸ್ಥೆ	ಗೃಹಕೃತ್ಯ	ಜಂಗಮ	ವಿಧವೆ	ಆ.ಶಾ.ಭಾ ಹಿಂಸೆ	ಮಾಡಿದೆ	ದೊರಕಿಲ್ಲ	ಗಂಡ ಮನೆಯವರಿಂದ
೭	ಕಲಾ	ಚಿಕ್ಕಸಿಂದೋಗಿ	೫೯	ಅನಕ್ಷರಸ್ಥೆ	ಗೃಹಕೃತ್ಯ	ಲಿಂಗಾಯತ	ವಿಧವೆ	ಆ.ಭಾ ಹಿಂಸೆ	ಮಾಡಿಲ್ಲ	-	ಮಗ, ಸೊಸೆ
೮	ಕೆಂಪಮ್ಮ	ಮತ್ತೂರು	೪೮	ಅನಕ್ಷರಸ್ಥೆ	ಮನೆ ಕಸ ಮುಸುರೆ	ಹಡಪದ	ಅವಿವಾಹಿತೆ	ಆ.ಭಾ ಹಿಂಸೆ	ಮಾಡಿದೆ	ದೊರಕಿಲ್ಲ	ಅಕ್ಕನ ಮಗಾ
೯	ಗಂಗಾ	ಕಾತರಕಿ	೪೧	ಅನಕ್ಷರಸ್ಥೆ	ಗೃಹಕೃತ್ಯ	ಹಡಪದ	ಅವಿವಾಹಿತೆ	ಆ.ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಮೈದುನ (ತಂಗಿ ಗಂಡ)
೧೦	ಗೌರಿ	ಕಾತರಕಿ	೬೭	ಅನಕ್ಷರಸ್ಥೆ	ಹಣ್ಣಿನ ವ್ಯಾಪಾರ	ಲಿಂಗಾಯತ	ವಿಧವೆ	ಆ.ಭಾ ಹಿಂಸೆ	ಮಾಡಿದೆ	ದೊರಕಿಲ್ಲ	ಗಂಡು ಮೊಮ್ಮಕ್ಕಳು

೧೧	ಚಿನ್ನು	ಕಾತರಕಿ	೩೦	ಅನಕ್ಷರಸ್ಥೆ	ಕೂಲಿ	ಮಾದರ	ದೇವದಾಸಿ	ಆ. ಭಾ. ಸಾ ಹಿಂಸೆ	ಹೌದು	ದೊರಕಿಲ್ಲ	ಮಾವ, ಭಾವ, ಮೈದುನ
೧೨	ಚಿನ್ಮಯಿ	ಕೋಳೂರು	೪೮	ಅನಕ್ಷರಸ್ಥೆ	ಹೂಕಟ್ಟುವುದು	ಜಂಗಮರು	ಅವಿವಾಹಿತೆ	ಆ. ಹಿಂಸೆ	ಮಾಡಿದೆ	ದೊರಕಿಲ್ಲ	ಅಣ್ಣ, ತಮ್ಮ
೧೩	ಚುಂಬನಾ	ಕೋಳೂರು	೩೪	೪ನೇ ತರಗತಿ	ಕೂಲಿ	ತಳವಾರ	ವಿವಾಹಿತೆ	ಆ. ದೈ. ಭಾ ಹಿಂಸೆ	ಮಾಡಿಲ್ಲ	–	ಗಂಡ, ಮಾವ, ಅತ್ತೆ
೧೪	ಚೇತನಾ	ಓಜನಹಳ್ಳಿ	೪೯	ಅನಕ್ಷರಸ್ಥೆ	ಗೃಹ ಕೃತ್ಯ	ಮಾದರ	ವಿವಾಹಿತೆ	ಆ. ದೈ. ಭಾ ಹಿಂಸೆ	ಮಾಡಿಲ್ಲ	–	ನಾದಿನಿ, ಅತ್ತೆ
೧೫	ಚೈತ್ರಾ	ಓಜನಹಳ್ಳಿ	೧೪	೩ನೇ ತರಗತಿ	ಎನ್.ಜಿ.ಓನಲ್ಲಿ ಕೆಲಸ	ಸಿಂಪಿಗೇರ	ವಿವಾಹಿತೆ	ಆ. ಭಾ ಹಿಂಸೆ	ಮಾಡಿಲ್ಲ	–	ಅಣ್ಣ
೧೬	ಚಂದ್ರಿಕಾ	ಓಜನಹಳ್ಳಿ	೨೯	೭ನೇ ತರಗತಿ	ತರಕಾರಿ ಮಾರಾಟ	ಸಿಂಪಿಗೇರ	ವಿಧವೆ	ಆ. ಭಾ. ಶಾ ಹಿಂಸೆ	ಮಾಡಿದೆ	ದೊರಕಿಲ್ಲ	ಅತ್ತೆ, ಮಾವ
೧೭	ಪಲ್ಲವಿ	ಹಾನಗಲ್	೪೩	ಅನಕ್ಷರಸ್ಥೆ	ಆಯಾ	ಮಡಿವಾಳ	ವಿಧವೆ	ಆ ಹಿಂಸೆ	ಮಾಡಿದೆ	ದೊರಕಿಲ್ಲ	ಅತ್ತೆ
೧೮	ಪಾವನಿ	ಹಾನಗಲ್	೩೪	೮ನೇ ತರಗತಿ	ಗೃಹಕೃತ್ಯ	ಚೆಲುವಾದಿ	ವಿವಾಹಿತೆ	ಆ. ದೈ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಅತ್ತೆ
೧೯	ಪಾರ್ವತಿ	ಹಟ್ಟಿ	೨೫	೭ನೇ ತರಗತಿ	ಕಸೂತಿಕೆಲಸ	ಸಾದರ	ವಿಚ್ಛೇದಿತೆ	ಆ. ಭಾ ಹಿಂಸೆ	ಮಾಡಿದೆ	ದೊರಕಿದೆ	ಗಂಡ, ಮಾವ, ಅತ್ತೆ
೨೦	ಫರೀದಾ	ಹೊಸಳ್ಳಿ	೪೩	ಅನಕ್ಷರಸ್ಥೆ	ಗೃಹಕೃತ್ಯ	ಮುಸ್ಲಿಂ	ವಿವಾಹಿತೆ	ಆ. ಭಾ ಹಿಂಸೆ	ಮಾಡಿಲ್ಲ	–	ಗಂಡ
೨೧	ಪ್ರೀತಿ	ಹೊಸಳ್ಳಿ	೩೪	ಎಸ್.ಎಸ್.ಎಲ್.ಸಿ	ಗೃಹಕೃತ್ಯ	ಉಪ್ಪಾರ	ವಿವಾಹಿತೆ	ಆ. ಭಾ. ದೈ ಹಿಂಸೆ	ಮಾಡಿದೆ	ದೊರಕಿದೆ	ಗಂಡ
೨೨	ಮಲ್ಲಿಕಾ	ಹೊಸಳ್ಳಿ	೪೧	ಅನಕ್ಷರಸ್ಥೆ	ಬಿಜಿನೆಸ್	ಕೊರವ	ವಿವಾಹಿತೆ	ಆ. ದೈ. ಭಾ ಹಿಂಸೆ	ಮಾಡಿಲ್ಲ	–	ಗಂಡ
೨೩	ಯಲ್ಲಮ್ಮ	ಹೊಸಳ್ಳಿ	೩೪	ಅನಕ್ಷರಸ್ಥೆ	ಗೃಹಕೃತ್ಯ	ಆಂದ್ರ ರೆಡ್ಡಿ	ವಿವಾಹಿತೆ	ಆ. ದೈ. ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಸೋದರ ಸಂಬಂಧಿಗಳು
೨೪	ಯಾಮಿನಿ	ಕಿನ್ನಾಳ	೪೮	ಬಿ.ಎ.ಬಿ.ಎಡ್	ಗೃಹಕೃತ್ಯ	ಪೂಜಾರ	ವಿವಾಹಿತೆ	ಆ. ದೈ. ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ

೨೫	ರುಕ್ಸಾ	ಕಿನ್ನಾಳ	೫೬	ಅನಕ್ಷರಸ್ಥೆ	ಕೂಲಿ	ಬಣಗಾರ್	ವಿಧವೆ	ಆ, ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಮಗ, ಸೊಸೆ
೨೬	ರೇಣುಕಮ್ಮ	ಲೇಬಗೇರಾ	೩೫	ಅನಕ್ಷರಸ್ಥೆ	ಗೃಹಕೃತ್ಯ	ಸಿಂಪಿಗೇರ	ವಿವಾಹಿತೆ	ಆ, ಭಾ ಹಿಂಸೆ	ಮಾಡಿಲ್ಲ	–	ಅಕ್ಕ (ಗಂಡನ ಅತ್ತಿಗೆ), ಮಾವ
೨೭	ರೇಷ್ಮಾ	ಲೇಬಗೇರಾ	೩೪	೬ನೇ ತರಗತಿ	ಹೋಟೆಲ್	ಶೆಟ್ಟರು	ವಿವಾಹಿತೆ	ಆ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ, ಅತ್ತೆ
೨೮	ಲಲಿತಾಂಬ	ಇರಕಲ್ಲಗಡ	೪೧	ಬಿ.ಕಾಂ	ಬ್ಯಾಂಕ ಕ್ಲರ್ಕ್	ತಳವಾರ	ವಿಧವೆ	ಆ, ಭಾ ಹಿಂಸೆ	ಮಾಡಿದೆ	ದೊರಕಿಲ್ಲ	ಮಾವ, ಅತ್ತೆ
೨೯	ಲಕ್ಷ್ಮಮ್ಮ	ಇರಕಲ್ಲಗಡ	೩೧	ಡಿ.ಎಡ್	ಪ್ರಾಥಮಿಕ ಶಾಲಾ ಶಿಕ್ಷಕಿ	ಸಾದರ	ವಿವಾಹಿತೆ	ಆ, ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಅತ್ತೆ, ಗಂಡ
೩೦	ವಜ್ರೇಶ್ವರಿ	ಗೊಂಡಬಾಳ	೬೮	ಅನಕ್ಷರಸ್ಥೆ	ಗೃಹಕೃತ್ಯ	ಮಾದರ	ದೇವದಾಸಿ	ಆ, ಭಾ ಲೈ, ದೈ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ
೩೧	ವರದಲಕ್ಷ್ಮೀ	ಗೊಂಡಬಾಳ	೪೧	ಎಮ್.ಎ,ಬಿ.ಎಡ್	ಗೃಹಕೃತ್ಯ	ಬಣಜಿಗ	ವಿವಾಹಿತೆ	ಆ, ದೈ ಹಿಂಸೆ	ಮಾಡಿಲ್ಲ	–	ಗಂಡ, ಅತ್ತೆ ಮಾವ
೩೨	ವಂದನಾ	ಗೊಂಡಬಾಳ	೩೭	ಎಸ್.ಎಸ್.ಎಲ್.ಸಿ	ಅಂಗನವಾಡಿ ಅಡುಗೆ ಕೆಲಸ	ಮುಚಿಗೇರ	ಸಹಚರ ಜೀವನ	ಆ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ
೩೩	ಶಕುಂತಲಾ	ಕಲ್ ತಾವರಗೇರಿ	೭೨	ಅನಕ್ಷರಸ್ಥೆ	ಕೂಲಿ	ದೇವಾಂಗ	ವಿವಾಹಿತೆ	ಆ, ಭಾ ಹಿಂಸೆ	ಮಾಡಿಲ್ಲ	–	ಗಂಡ
೩೪	ಶಣ್ಮುಕವ್ವ	ಕಲ್ ತಾವರಗೇರಿ	೪೧	ಅನಕ್ಷರಸ್ಥೆ	ಗೃಹಕೃತ್ಯ	ಚೆಲುವಾದಿ	ವಿವಾಹಿತೆ	ಆ, ಭಾ ಹಿಂಸೆ	ಮಾಡಿಲ್ಲ	–	ಗಂಡ, ಮಾವ
೩೫	ಸಮಿನಾ	ಕಲ್ ತಾವರಗೇರಿ	೩೧	೭ನೇ ತರಗತಿ	ಗೃಹಕೃತ್ಯ	ಮುಸ್ಲಿಂ	ವಿಧವೆ	ಆ,ಭಾ,ಸಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಅತ್ತೆ
೩೬	ಸೃಷ್ಟಿ	ಮಾದೇನೂರು	೪೩	ಅನಕ್ಷರಸ್ಥೆ	ಕೂಲಿ	ಬಡಿಗೇರ	ವಿಧವೆ	ಆ ಹಿಂಸೆ	ಮಾಡಿದೆ	ದೊರಕಿಲ್ಲ	ಮಾವ, ಮೈದುನ
೩೭	ಸ್ವಾತಿ	ಇರಕಲ್ಲಗಡ	೨೪	ಬಿ. ಎಸ್ಸಿ, ಎಡ್	ಹೈಸ್ಕೂಲ್ ಟೀಚರ	ಲಿಂಗಾಯತ್	ವಿವಾಹಿತೆ	ಆ, ಭಾ ಹಿಂಸೆ	ಮಾಡಿಲ್ಲ	–	ಗಂಡ, ಅತ್ತೆ, ಮಾವ

೩೮	ಸ್ಫೂರ್ತಿ	ಹಿರೇಸಿಂದೋಗಿ	೪೭	ಎಸ್.ಎಸ್.ಎಲ್.ಸಿ	ಗೃಹಕೃತ್ಯ	ಬಡಿಗ.	ವಿಚ್ಛೇದಿತೆ	ಆ ಹಿಂಸೆ	ಮಾಡಿದೆ	ದೊರಕಿದೆ	ಗಂಡ
೩೯	ಸಂಜನಾ	ಹ್ಯಾಟಿ	೩೬	ಅನಕ್ಷರಸ್ಥೆ	ಕೂಲಿ	ಸಿಂಪಿಗ	ಅವಿವಾಹಿತೆ	ಆ, ದೈ ಹಿಂಸೆ	ಮಾಡಿಲ್ಲ	–	ಗಂಡ
೪೦	ಸಂಪ್ರಿತಾ	ಹಿರೇಸಿಂದೋಗಿ	೫೩	ಅನಕ್ಷರಸ್ಥೆ	ಗೃಹಕೃತ್ಯ	ಮಾದರು	ವಿವಾಹಿತೆ	ಆ, ಶಾ ಹಿಂಸೆ	ಮಾಡಿಲ್ಲ	–	ಅಳಿಯ
೪೧	ಸಂಮೃದ್ಧಿ	ಹ್ಯಾಟಿ	೫೩	೮ನೇ ತರಗತಿ	ಗೃಹಕೃತ್ಯ	ಬಡಿಗ	ವಿವಾಹಿತೆ	ಆ ಹಿಂಸೆ	ಮಾಡಿಲ್ಲ	–	ಅತ್ತೆ, ಮಾವ
೪೨	ಸಂರಕ್ಷಾ	ಹ್ಯಾಟಿ	೪೫	ಅನಕ್ಷರಸ್ಥೆ	ಗೃಹಕೃತ್ಯ	ಜಂಗಮರು	ವಿವಾಹಿತೆ	ಆ, ದೈ ಹಿಂಸೆ	ಮಾಡಿಲ್ಲ	–	ಗಂಡ, ನಾದಿನಿ
೪೩	ಹನುಮವ್ವ	ಗುಳವಳ್ಳಿ	೩೯	ಅನಕ್ಷರಸ್ಥೆ	ಕೂಲಿ	ತಳವಾರ	ವಿವಾಹಿತೆ	ಆ ಹಿಂಸೆ	ಮಾಡಿದೆ	ದೊರಕಿಲ್ಲ	ತಮ್ಮ, ತಮ್ಮನ ಹೆಂಡತಿ
೪೪	ಹಂಚಾಳಮ್ಮ	ಗುಳವಳ್ಳಿ	೫೪	ಅನಕ್ಷರಸ್ಥೆ	ಗೃಹಕೃತ್ಯ	ತಳವಾರ	ವಿಧವೆ	ಆ, ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಅತ್ತೆ, ಭಾವ
೪೫	ಕ್ಷಮಾ	ಗುಳವಳ್ಳಿ	೩೨	ಅನಕ್ಷರಸ್ಥೆ	ಗೃಹಕೃತ್ಯ	ಜಂಗಮರು	ವಿವಾಹಿತೆ	ಆ, ಭಾ ಹಿಂಸೆ	ಮಾಡಿಲ್ಲ	–	ತಂದೆ, ತಮ್ಮ

ಸಾಮಾಜಿಕ ಹಿಂಸೆ

ಕ್ರ.ಸಂ	ಹೆಸರು	ಊರು	ವಯಸ್ಸು	ಶಿಕ್ಷಣ	ವೃತ್ತಿ	ಜಾತಿ	ವೈವಾಹಿಕ ಸ್ಥಾನಮಾನ	ದೌರ್ಜನ್ಯದ ಸ್ವರೂಪ	ಪ್ರತಿಭಟನೆ	ಪ್ರತಿಫಲ	ಕೃತ್ಯ ಎಸಗಿದವರು
೧	ಅಖೀಲಾ	ಗುನ್ನಾಳ	೪೧	ಎಸ್.ಎಸ್.ಎಲ್.ಸಿ	ಅಟೆಂಡರ್	ರೆಡ್ಡಿ	ವಿಚ್ಛೇದಿತೆ	ಸಾ, ಶಾ ಹಿಂಸೆ	ಮಾಡಿದೆ	ದೊರಕಿದೆ	ಗಂಡ
೨	ಅಂಬಮ್ಮ	ಗುನ್ನಾಳ	೨೮	ಬಿ. ಎ	ಗೃಹಕೃತ್ಯ	ಕುರುಬರು	ವಿವಾಹಿತೆ	ಸಾ.ಶಾ, ದೈ ಹಿಂಸೆ	ಮಾಡಿದೆ	ಸಿಕ್ಕಿಲ್ಲ	ಗಂಡ
೩	ಆಲಿಯಾ	ಮುನಿರಾಬಾದ್ ಡ್ಯಾಂ	೩೬	ಎಮ್.ಎಸ್.ಡಬ್ಲ್ಯೂ	ಪಿ.ಡಿ(ಬಾಲ ಕಾರ್ಮಿಕ ಇಲಾಖೆ)	ಚಲುವಾದಿ	ವಿವಾಹಿತೆ	ಸಾ.ಶಾ, ಭಾ ಹಿಂಸೆ	ಮಾಡಿಲ್ಲ	–	ದೊಡ್ಡಮ್ಮ
೪	ಊರ್ವಶಿ	ಮುನಿರಾಬಾದ್ ಡ್ಯಾಂ	೨೫	ಎಸ್.ಎಸ್.ಎಲ್.ಸಿ	ಆಯಾ	ದೇವಾಂಗ	ವಿವಾಹಿತೆ	ಸಾ.ಆ.ಭಾ ಹಿಂಸೆ	ಮಾಡಿಲ್ಲ	–	ಗಂಡ, ಮಾವ
೫	ಕೃತಿ	ಟಣಕನಕಲ್	೫೦	ಅನಕ್ಷರಸ್ಥೆ	ಸೊಪ್ಪಿನ ವ್ಯಾಪಾರ	ಜಂಗಮರು	ವಿವಾಹಿತೆ	ಸಾ.ಆ.ಭಾ ಹಿಂಸೆ	ಮಾಡಿಲ್ಲ	–	ಮಗ
೬	ಕಾದಂಬರಿ	ಚಿಲವಾಡಗಿ	೬೧	ಅನಕ್ಷರಸ್ಥೆ	ಗೃಹಕೃತ್ಯ	ಕುರುಬರು	ವಿಧವೆ	ಸಾ.ಆ ಹಿಂಸೆ	ಮಾಡಿಲ್ಲ	–	ಗಂಡ
೭	ಕೆಂಪಮ್ಮ	ಮುನಿರಾಬಾದ್ ಡ್ಯಾಂ	೪೦	ಅನಕ್ಷರಸ್ಥೆ	ಬಿಜಿನೆಸ್	ಬಡಿಗೇರ	ವಿಧವೆ	ಸಾ.ಆ.ಭಾ ಹಿಂಸೆ	ಮಾಡಿಲ್ಲ	–	ಮಗ
೮	ಗಾಳೆಮ್ಮ	ಚಿಲವಾಡಗಿ	೨೯	೭ನೇ ತರಗತಿ	ಗೃಹಕೃತ್ಯ	ಕುರುಬರು	ವಿವಾಹಿತೆ	ಸಾ.ಆ.ಶಾ ಹಿಅಂಸೆ	ಮಾಡಿಲ್ಲ	–	ಗಂಡ
೯	ದುರಗವ್ವ	ಹೂವಿನಾಳ	೩೯	ಎಸ್.ಎಸ್.ಎಲ್.ಸಿ	ಗೃಹಕೃತ್ಯ	ಎಸ್ಸಿ	ವಿಧವೆ	ಸಾ.ಆ.ಭಾ ಹಿಂಸೆ	ಮಾಡಿಲ್ಲ	–	ಗಂಡನ ಮನೆಯವರಿಂದ

೧೦	ದೇವಕ್ಕ	ಭಾಗ್ಯನಗರ	೩೪	ಪಿ.ಯು.ಸಿ	ಗೃಹಕೃತ್ಯ	ಪತಾಣ	ಅವಿವಾಹಿತೆ	ಸಾ. ಆ. ಭಾ ಹಿಂಸೆ	ಮಾಡಿದೆ	ಮತ್ತಷ್ಟುಹಿಂಸೆ	ಅಣ್ಣ
೧೧	ದೇವಕ್ಕವ್ವ	ಬಸಾಪುರ	೧೩	೭ನೇ ತರಗತಿ	ಗೃಹಕೃತ್ಯ	ಹಡಪದ	ವಿವಾಹಿತೆ	ಸಾ. ಭಾ ಹಿಂಸೆ	ಮಾಡಿಲ್ಲ	–	ತಂದೆ, ತಾಯಿ
೧೨	ಬಸಮ್ಮ	ಗುನ್ನಾಳ	೪೩	ಅನಕ್ಷರಸ್ಥೆ	ಕೂಲಿ	ಉಪ್ಪಾರ	ವಿವಾಹಿತೆ	ಸಾ. ಆ. ದೈ ಹಿಂಸೆ	ಮಾಡಿಲ್ಲ	–	ಗಂಡ
೧೩	ಭವಾನಿ	ಮುನಿರಾಬಾದ್ ಡ್ಯಾಂ	೩೮	ಡಿಪ್ಲೋಮಾ	ಗೃಹಕೃತ್ಯ	ಲಿಂಗಾಯತ	ವಿವಾಹಿತೆ	ಸಾ. ಭಾ ಹಿಂಸೆ	ಮಾಡಿಲ್ಲ	–	ಗಂಡ
೧೪	ಮಂಗಳಮ್ಮ	ಭಾಗ್ಯನಗರ	೨೮	ಬಿ.ಕಾಂ	ಗೃಹಕೃತ್ಯ	ಕುರುವಿನಶೆಟ್ಟಿ	ಅವಿವಾಹಿತೆ	ಸಾ. ಶಾ. ಭಾ ಹಿಂಸೆ	ಮಾಡಿಲ್ಲ	–	ತಂದೆ, ತಾಯಿ
೧೫	ರಾಜೇಶ್ವರಿ	ಭಾಗ್ಯನಗರ	೪೭	ಎಲ್.ಎಲ್.ಬಿ	ವಕೀಲರು	ಕುರುವಿನಶೆಟ್ಟಿ	ಅವಿವಾಹಿತೆ	ಸಾ. ಭಾ ಹಿಂಸೆ	ಮಾಡಿಲ್ಲ	–	ಅಣ್ಣ, ತಮ್ಮಂದಿರು
೧೬	ರಾಧಾ	ಭಾಗ್ಯನಗರ	೫೮	ಅನಕ್ಷರಸ್ಥೆ	ಗೃಹಕೃತ್ಯ	ಗುಜ್ಜರು	ವಿಧವೆ	ಸಾ. ಆ. ಶಾ ಹಿಂಸೆ	ಮಾಡಿಲ್ಲ	–	ಗಂಡ, ಮನೆಯವರು
೧೭	ರಂಜಾನ ಬೀ	ಭಾಗ್ಯನಗರ	೨೩	ಪಿ.ಯು.ಸಿ	ಬಟ್ಟೆ ವ್ಯಾಪಾರ	ಮುಸ್ಲಿಂ	ವಿವಾಹಿತೆ	ಸಾ. ಭಾ. ದೈ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ
೧೮	ಲತಾ	ಚಿಲಕಮುಖಿ	೩೯	೫ನೇ ತರಗತಿ	ಕೂಲಿ	ಭಜರಂಗಿ	ವಿವಾಹಿತೆ	ಸಾ. ಭಾ. ಆ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ
೧೯	ಶರಣ್ಯ	ಚಿಲಕಮುಖಿ	೨೪	೭ನೇ ತರಗತಿ	ಕೂಲಿ	ಕುಂಚಿಕೊರವ	ಅವಿವಾಹಿತೆ	ಸಾ. ದೈ ಹಿಂಸೆ	ಮಾಡಿಲ್ಲ	–	ತಂದೆ, ಅಣ್ಣ
೨೦	ಶರಾವತಿ	ಚಿಲಕಮುಖಿ	೨೭	ಬಿ.ಎ	ಕ್ಲರ್ಕ್	ಮಾದರ	ವಿವಾಹಿತೆ	ಸಾ. ಭಾ ಹಿಂಸೆ	ಮಾಡಿಲ್ಲ	–	ಗಂಡ, ಭಾವ, ಅತ್ತಿಗೆ
೨೧	ಶಿವಗಂಗಮ್ಮ	ಚಿಲಕಮುಖಿ	೪೯	ಬಿ.ಎಸ್ಸಿಬಿ.ಎಡ್	ಹೈಸ್ಕೂಲ್ ಟಿಚರ್	ಲಿಂಗಾಯತ	ವಿವಾಹಿತೆ	ಸಾ. ಆ. ದೈ ಹಿಂಸೆ	ಮಾಡಿಲ್ಲ	–	ತಂದೆ, ತಾಯಿ, ಅಣ್ಣ
೨೨	ಶಿವಮ್ಮ	ಬಾನಾಪುರ	೭೪	ಅನಕ್ಷರಸ್ಥೆ	ಗೃಹಕೃತ್ಯ	ಹಡಪದ	ವಿಧವೆ	ಸಾ. ದೈ. ಆ ಹಿಂಸೆ	ಮಾಡಿಲ್ಲ	–	ಗಂಡ

೨೩	ಶಿವಲೀಲಾ	ಮುದ್ದಾಬಳ್ಳಿ	೨೪	ಅನಕ್ಷರಸ್ಥೆ	ಕೂಲಿ	ಜ್ಯೋಗ್ಯಾರು	ವಿವಾಹಿತೆ	ಸಾ,ಭಾ,ದೈ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ, ಮಾವ
೨೪	ಶೃತಿ	ಮುದ್ದಾಬಳ್ಳಿ	೧೨	ಎಸ್.ಎಸ್.ಎಲ್.ಸಿ	ವಿದ್ಯಾಭ್ಯಾಸ	ಲಿಂಗಾಯತ	ಬಾಲ್ಯವಿವಾಹ	ಸಾ,ದೈ,ಲೈ ಹಿಂಸೆ	ಮಾಡಿದೆ	ದೊರಕಿಲ್ಲ	ಗಂಡ
೨೫	ಸರ್ವೇಶ್ವರಿ	ಮುದ್ದಾಬಳ್ಳಿ	೪೬	೭ನೇ ತರಗತಿ	ತರಕಾರಿ ವ್ಯಾಪಾರ	ಹಡಪದ	ವಿವಾಹಿತೆ	ಸಾ, ಶಾ ಹಿಂಶೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ
೨೬	ಸಾವಿತ್ರಿ	ಮುದ್ದಾಬಳ್ಳಿ	೭೦	ಅನಕ್ಷರಸ್ಥೆ	ಗೃಹಕೃತ್ಯ	ತಳವಾರ	ವಿಧವೆ	ಸಾ,ದೈ ಹಿಂಸೆ	ಮಾಡಿಲ್ಲ	-	ಮಗ, ಸೊಸೆ
೨೭	ಸಾಹಿತ್ಯಾ	ಚುಕನಕಲ್	೧೪	ಅನಕ್ಷರಸ್ಥೆ	ಕೂಲಿ	ಸಾಳರು	ಬಾಲ್ಯ ವಿವಾಹ	ಸಾ,ದೈ ಹಿಂಸೆ	ಮಾಡಿಲ್ಲ	-	ತಂದೆ
೨೮	ಸುಕೃತಾ	ಚುಕನಕಲ್	೩೪	೬ನೇ ತರಗತಿ	ಗೃಹಕೃತ್ಯ	ಹಡಪದ	ಅವಿವಾಹಿತೆ	ಸಾ,ದೈ ಹಿಂಸೆ	ಮಾಡಿಲ್ಲ	-	ಚಿಕ್ಕಪ್ಪ, ಚಿಕ್ಕಮ್ಮ
೨೯	ಸುಜಾತ	ಚುಕನಕಲ್	೨೩	ಪಿ.ಯು.ಸಿ. ಎಇ.ಡಿ.ಎಡ್	ಟೀಚರ್	ದೇವಾಂಗ	ಅವಿವಾಹಿತೆ	ಸಾ,ದೈ,ಭಾ,ಆ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ, ಗಂಡನ ಮನೆಯವರು
೩೦	ಸುಧಾರಾಣಿ	ಹ್ಯಾಟಿ	೪೮	ಅನಕ್ಷರಸ್ಥೆ	ಕೂಲಿ	ತಳವಾರ	ವಿವಾಹಿತೆ	ಸಾ,ಆ,ಭಾ ಹಿಂಸೆ	ಮಾಡಿದೆ	ಮತ್ತಷ್ಟು ಹಿಂಸೆ	ಗಂಡ
೩೧	ಸುಮಲತಾ	ಶಾಹಪೂರ	೩೪	ಅನಕ್ಷರಸ್ಥೆ	ಗೃಹಕೃತ್ಯ	ಜೀರ	ವಿಧವೆ	ಸಾ ಹಿಂಸೆ	ಮಾಡಿಲ್ಲ	-	
೩೨	ಸುಮತಿ	ಚಿಕ್ಕ ಸಿಂದೋಗಿ	೫೩	ಅನಕ್ಷರಸ್ಥೆ	ಗೃಹಕೃತ್ಯ	ಮಾದರ	ದೇವದಾಸಿ	ಸಾ,ಭಾ ಹಿಂಸೆ	ಮಾಡಿಲ್ಲ	-	ಸಂಗಾತಿ
೩೩	ಸುಶಿಲಾ	ಹಿರೇ ಸಿಂದೋಗಿ	೩೬	ಅನಕ್ಷರಸ್ಥೆ	ಗೃಹಕೃತ್ಯ	ಮಾದರ	ದೇವದಾಸಿ	ಸಾ,ಲೈ ಹಿಂಸೆ	ಮಾಡಿಲ್ಲ	-	ಸಂಗಾತಿ
೩೪	ಹರಿಣಿ	ಇರಕಲ್ಲಗಡ	೪೦	೭ನೇ ತರಗತಿ	ಗೃಹಕೃತ್ಯ	ಲಿಂಗಾಯತ	ವಿಧವೆ	ಸಾ ಹಿಂಸೆ	ಮಾಡಿಲ್ಲ	-	
೩೫	ಹಫೀದಾ ಬಾನು	ಕೊಪ್ಪಳ	೩೭	೪ನೇ ತರಗತಿ	ಕೂಲಿ	ಪಿಂಜಾರ	ಸಹಚರ ಜೀವನ	ಸಾ,ದೈ ಹಿಂಸೆ	ಮಾಡಿಲ್ಲ	-	ಸಂಗಾತಿ

೨. ಗ್ರಂಥಋಣ

೧. ಅನಸೂಯ ಕಾಂಬಳೆ, **ವಿಚಾರ ಸಾಹಿತ್ಯ ಮತ್ತು ಹೆಣ್ಣು**, ವೈಚಾರಿಕ ಸಾಹಿತ್ಯ ಪ್ರಕಾಶನ, ರಾಯಭಾಗ, ೧೯೯೯.

೨. ಅಶೋಕ ಎಂ.ಎ.ಪಿಎಚ್.ಡಿ, **ಅಪರಾಧ ಶಾಸ್ತ್ರ ಮತ್ತು ನ್ಯಾಯ ವಿಜ್ಞಾನ**, ಸುಧಾ ಪ್ರಕಾಶನ ಮೈಸೂರು, ೨೦೦೬.

೩. ಇಂದಿರಾ ಆರ್., **ಮಹಿಳೆ ಸಮಾಜ ಮತ್ತು ಸಂಸ್ಕೃತಿ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರಸಾರಾಂಗ, ೨೦೦೨.

೪. ಇಂದಿರಾ ಆರ್., **ಸ್ತ್ರೀವಾದ ದಿಕ್ಸೂಚಿ**, ರೆಡಿಪ್ರಿಂಟ್ಸ್, ವಿ.ವಿ. ಮೊಹಲ್ಲಾ, ಮೈಸೂರು, ೧೯೯೯.

೫. ಗೀತಾ ಕೃಷ್ಣಮೂರ್ತಿ, **ಮಹಿಳಾ ಹಕ್ಕುಗಳು**, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೯.

೬. ಚಂದ್ರಚೂಡ್ ವೈ.ವಿ. ಮಾನ್ಯ ನ್ಯಾ, **ಭಾರತ ದಂಡ ಸಂಹಿತೆ**, ಕನ್ನಡಕ್ಕೆ ಅನುವಾದ ಎನ್.ಎಸ್. ಸಂಗೊಳ್ಳಿ, ಎಂ.ಎ, ಎಲ್.ಎಲ್.ಬಿ, ಲೆಕ್ಸಿಸ್ ನೆಕ್ಸಿಸ್ ಬಟರ್‌ವರ್ತ್ಸ್ ವಾದ್ವ ನಾಗಪೂರ್, ಕಾರ್ಯಾಲಯ, ಹರಿಯಾಣ, ೨೦೦೯.

೭. ಚಂದ್ರಪೂಜಾರಿ ಎಂ., **ಸಂಶೋಧನೆ ಏನು? ಏಕೆ? ಹೇಗೆ?**, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪ್ರಸಾರಾಂಗ, ೨೦೦೯.

೮. ಚಿಂಗಾಮಣಿ ಎಂ.ಎ, **ಭಾರತೀಯ ಸಮಾಜದ ಸಮಾಜಶಾಸ್ತ್ರ**, ಅಶ್ವಿನಿ ಗ್ರಾಫಿಕ್ಸ್, ಬೆಂಗಳೂರು, ೧೯೯೯-೨೦೦೦.

೯. ಜೀವಂಧರ ಕುಮಾರ ಹೊಸಪೇಟೆ, ಎಂ.ಎ. ಆಯ್ಕೆ ಶ್ರೇಣಿ ಉಪನ್ಯಾಸಕರು, **ಅಹಿಂಸೆ**,

೧೦. ಜ್ಯೋತಿ ಶಶಿಕುಮಾರ, **ಮಹಿಳಾ ಸಾಮಾಜಿಕತೆ**, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರಸಾರಾಂಗ, ೨೦೦೭.

೧೧. ದಾದಾಪೀರ್ ಕೆ. ವಕೀಲರು, **ಹೆಣ್ಣು ಮಕ್ಕಳನ್ನು ಕೌಟುಂಬಿಕ ಹಿಂಸೆಯಿಂದ ಸುರಕ್ಷಿಸುವ ಕಾಯ್ದೆ -೨೦೦೫**, ಪ್ರಿಮಿಯರ್ ಬುಕ್‌ಹೌಸ್ ಗಾಂಧಿನಗರ, ಬೆಂಗಳೂರು, ೨೦೧೦.

೧೨. ನಾರಾಯಣ ಎಂ., **ಸಾಮಾಜಿಕ ಸಮಸ್ಯೆಗಳು**, ಲಕ್ಷ್ಮೀ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ೨೦೦೩.

೧೩. ನಾರಾಯಣ ಎಂ., **ಸಾಮಾಜಿಕ ಸಂಶೋಧನಾ ವಿಧಾನ**, ಚೇತನ ಬುಕ್‌ಹೌಸ್, ಮೈಸೂರು, ೧೯೯೬.

೧೪. ನೇಮಿಚಂದ್ರ, **ಮಹಿಳಾ ಅಧ್ಯಯನ**, ೫೩ ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿ ಬಜಾರ ಮುಖ್ಯ ರಸ್ತೆ ಬಸವನಗುಡಿ, ಬೆಂಗಳೂರು, ೨೦೦೧.

೧೫. ಭೈರಪ್ಪ ಕೆ., **ಭಾರತೀಯ ಸಮಾಜ**, ಕೇಂಬ್ರಿಡ್ಜ ಪಬ್ಲಿಷಿಂಗ್ ಕಂಪನಿ, ಬೆಂಗಳೂರು, ೧೯೯೬.

೧೬. ಮಹಾಬಲೇಶ್ವರ್ ರಾವ್, **ಸಂಶೋಧನಾ ಮಾರ್ಗ**, ನವಕರ್ನಾಟಕ ಪ್ರಕಾಶನ, ೧೯೯೬.

೧೭. ಮಾರ್ಕೊ ಎ.ಎ.ವಿ ರತಾಕವ್, **ವರ್ಗ, ವರ್ಗ ಹೋರಾಟ ಎಂದರೆ ಏನು?**, ಪ್ರಗತಿ ಪ್ರಕಾಶನ, ಸೋವಿಯತ್ ಒಕ್ಕೂಟ, ಮಾಸ್ಕೊ, ೧೯೮೬.

೧೮. ಮೂರ್ತಿಃಶ್ವರಯ್ಯ ಬೆ.ಕಾ, **ಮಹಿಳೆ ಸಮಾಜ ಮತ್ತು ಕಾನೂನು**, ಸ್ವಪ್ನ ಬುಕ್ ಹೌಸ್, ತುಂಗಾ ಕಾಂಪ್ಲೆಕ್ಸ ಗಾಂಧಿನಗರ, ಬೆಂಗಳೂರು, ೨೦೦೨.

೧೯. ರಮಾನಾಥಬಿ, **ಸಮಾಜಶಾಸ್ತ್ರ**, ಲಕ್ಷ್ಮೀ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರ, ೨೦೦೪.

೨೦. ರಾಘವ್, **ಮಹಿಳಾ ಅಧ್ಯಯನದ ಆಯಾಮಗಳು**, ಶ್ರೀಮತಿ ಯಶೋಧ ರಾಘವ್ ಟ್ರಸ್ಟ, ೧೪೪೪ ಕಾಳಿದಾಸ ರಸ್ತೆ ಜೈಪುರಂ, ಮೈಸೂರು, ೨೦೦೮.

೨೧. ರಾಜಕುಮಾರ್ ಮುದ್ದೆನೆಹಳ್ಳಿ, **ವರದಕ್ಷಿಣೆ ಶಾಪ**, ವಿಜಯಲಕ್ಷ್ಮಿ ಪ್ರಕಾಶನ, ರಾಯಭಾಗ, ೧೯೯೯.

೨೨. ರಾಜವಾಡೆವಿ ಕಾ., **ಭಾರತೀಯ ವಿವಾಹ ಸಂಸ್ಥೆಯ ಇತಿಹಾಸ**, ನವಪ್ರಕಾಶನ, ಬೆಂಗಳೂರು, ೧೯೯೩.

೨೩. ರಾಮಚಂದ್ರ ಜೋಶಿ, **ಭಾರತೀಯ ಸಮಾಜ ಅಧ್ಯಯನ**, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬುರ್ಗಾ, ೨೦೦೭.

೨೪. ಲೀಲಾ ಪಾಟೀಲ್ ಮರಾಠಿಯಲ್ಲಿ, ಕನ್ನಡಕ್ಕೆ ಡಾ. ವಿಠ್ಠಲರಾವ್ ಟಿ. ಗಾಯಕವಾಡ, **ಭಾರತೀಯ ಸ್ತ್ರೀ ಜೀವನ**, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪ್ರಸಾರಾಂಗ, ೨೦೦೯.

೨೫. ವಡಗೇರಿ ಎಸ್.ಆರ್., **ಕಾನೂನು ಮತ್ತು ಅಪರಾಧ ಪೊಲೀಸ್ ಕರ್ತವ್ಯ**, ಶ್ರೀ ರಾಜಗುರು ಪ್ರಕಾಶನ, ವಿಜಾಪುರ, ೨೦೦೫.

೨೬. ವಸಂತಲಕ್ಷ್ಮಿ ಕೆ., **ಭಾರತೀಯ ಸಂಸ್ಕೃತಿ ಮತ್ತು ಮಹಿಳೆ**, ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಂಗಳೂರು, ೨೦೦೯.

೨೭. ವಿಜಯಶ್ರೀ ಸಬರದ, **ಮಹಿಳೆ, ಶೋಷಣೆ ಮತ್ತು ಸವಾಲುಗಳು**, ಗುಲ್ಬರ್ಗಾ ವಿಶ್ವವಿದ್ಯಾಲಯ, ಪ್ರಸಾರಾಂಗ, ೨೦೦೮.

೨೮. ವಿಲಿಯಂ ಜ ಗೂಡ್ –ಮೂಲ, ಪಾಲ್ ಕೆ. ಹ್ಯಾಬ್, ಕನ್ನಡಕ್ಕೆ ಡಾ. ಎಂ. ಶಿವಮೂರ್ತಿ, **ಸಾಮಾಜಿಕ ಸಂಶೋಧನಾ ವಿಧಾನಗಳು**, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೯೫.

೨೯. ಶ್ರೀಮತಿ ಎಚ್.ಎಸ್., **ದಿ ಸೆಕೆಂಡ್ ಸೆಕ್ಸ, ಸಿಮೋನ್ ದ ಬೊವಾ, ಒಂದು ಕನ್ನಡದ ಓದು**, ಅಧ್ಯಯನ ಮಂಡಲ, ಬೆಂಗಳೂರು, ೨೦೦೭.

೩೦. ಶ್ರೀಮತಿ ಎಚ್.ಎಸ್, **ಮಹಿಳಾ ಅಧ್ಯಯನ**, ಸಂಪುಟ–೨, ಸಂಚಿಕೆ–೨, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪ್ರಸಾರಾಂಗ, ಜುಲೈ ೨೦೦೦.

೩೧. ಶೈಲಜಾ ಹಿರೇಮಠ, **ಪಾತರದವರು,** ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರಸಾರಾಂಗ, ೧೯೯೯.

೩೨. ಸುರೇಶ ಚೋಳಂಚಿ, ಮಹಾನ ತತ್ವಜ್ಞಾನಿ ಜೆ. ಕೃಷ್ಣಮೂರ್ತಿ, **ಕಣಜ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩೩. ಹನುಮಂತರಾವ ಜಿ, ಎಂ.ಎ, **ಕುಟುಂಬ ಜೀವನ,** ಮೈಸೂರು ವಿಶ್ವವಿದ್ಯಾಲಯ, ೧೯೬೦.

ENGLISH BIBLIOGRAPHY

1. Ahuja Ram, **Crime Against Women,** (Rawat, 1987).
2. Barathi Tekchandani, **With in the Four Walls-A Profile of Domestic Violence,** (Multipat Action Reserch Group, 1998).
3. Indira R and Depak Kumar Baher (ed), **Gender and Society in India, Vol.1,** (Manak Publications Pvt. Ltd 1999).
4. Jeff Hearn, **The Violence of Women,** (Sage, 1998).
5. Krishana Raj Maithreyi **Women and Violence-A Countray Report,** (Ed, SNDT, Bombey, 1991).
6. Reddy G B, **Women and the Law,** (Gogial Law house, 1999).
7 Shree L. Schornstein, **Domestic Violence and Health care,** (Sage, 1997).
8 Singh A.K, S.P. Singh, S.P. Pandey, **Domestic Violence Against Women in India,** (Modhar Books, Hriyana, 2009).

ಪಿಎಚ್.ಡಿ. ಮಹಾಪ್ರಬಂಧಗಳು

೧. ಶ್ರೀದೇವಿ ವೀರಭದ್ರಪ್ಪ, **ಸಾರ್ವಜನಿಕ ವಲಯದಲ್ಲಿ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯ,** ಮಾರ್ಗದರ್ಶಕರು, ಡಾ. ಎಚ್.ಎಸ್ ಶ್ರೀಮತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೨. ಸುಮಲತಾ ಆಕಳವಾಡಿ, **ಮಹಿಳೆಯ ಮೇಲಿನ ದೌರ್ಜನ್ಯದ ಹಿನ್ನೆಲೆಯಲ್ಲಿ ; ಮಹಿಳಾ ಅಪರಾಧಗಳು, ವ್ಯಾಖ್ಯೆ ಮತ್ತು ಶಿಕ್ಷೆ,** ಮಾರ್ಗದರ್ಶಕರು, ಡಾ. ಎಚ್.ಎಸ್. ಶ್ರೀಮತಿ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೯.

ಎಂ.ಫಿಲ್. ನಿಬಂಧಗಳು

೧. ಉಮೇಶ್ ಬಸಪ್ಪ ಕಾತರಕಿ, **ಬಿಸರಳ್ಳಿಯ ದೇವದಾಸಿ ಪದ್ಧತಿ : ಒಂದು ಅಧ್ಯಯನ,** ಮಾರ್ಗದರ್ಶಕರು, ಡಾ. ಶಿವಾನಂದ ಎಸ್. ವಿರಕ್ತಮಠ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೨. ಶಿವಾನಂದ ಆರ್. ಬಡಿಗೇರ್, **ಕೌಟುಂಬಿಕ ಹಿಂಸೆ ಮತ್ತು ಮಹಿಳೆ,** ಮಾರ್ಗದರ್ಶಕರು, ಡಾ.ಶೈಲಜಾ ಹಿರೇಮಠ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

ಅಂತರ್ ಜಾಲದ ವೆಬ್‌ಸೈಟ್‌ಗಳು

1. http//www. goggle. com
2. http//www. yahoo. com
3. http//www. uni mysore. koha informindia. co. in

ದಿನಪತ್ರಿಕೆಗಳು

೧. ಕನ್ನಡ ಪ್ರಭಾ

೨. ಪ್ರಜಾವಾಣಿ

೩. ವಿಜಯ ವಾಣಿ

*** ಪದಕೋಶ**

ಅಟ್ಟುವುದು	–	ಹೊಡೆಯುವುದು
ಅಡಕೊತ	–	ಅಡಕಿಯನ್ನು ತುಂಡರಿಸುವ ಸಾಧನ
ಅನಬೊಸಿದೆ	–	ಅನುಭವಿಸಿದೆ
ಅವಗವಗ	–	ಆಗೊಮ್ಮೆ ಈಗೊಮ್ಮೆ
ಆಸರಾಗ್ಲಿ	–	ಆಸರೆಯಾಗಲಿ
ಉಂತಿಯನು	–	ಊಟ ಮಾಡುವೆ ಏನು
ಉರಣ್ಗೆ	–	ಕೆಟ್ಟದಾಗಿ ನಡೆದುಕೊಳ್ಳುವ ನಡುವಳಿಕೆ
ಐತಂತ	–	ಇದೆ ಅಂತೆ
ಓದ್ರು	–	ಹೋದರು
ಕರೆಗ್ಲೂ	–	ನಿಜವಾಗಿಯೂ
ಕಾಲ್	–	ಕಾಲು
ಕೂಳು	–	ಊಟ
ಕೆರ‍್ಯಾಗ	–	ಕೇರಿ (ಏರಿಯಾ)
ಕಂಗಾಲು	–	ದಿಕ್ಕುತೋಚದಂತಾಗು
ಖಬುರು	–	ಪರಿಜ್ಞಾನ
ಖರೆ	–	ನಿಜಾ
ಗಾಬ್ರಿಲೆ	–	ಗಾಬರಿಯಲ್ಲಿ
ಗುಡ್ಯಾಗ	–	ಗುಡಿಯ ಒಳಗೆ
ಗಂಗಾಳ	–	ತಟ್ಟೆ
ಚಾಳಿ	–	ನಡುವಳಿಕೆ
ಚಿಮ್ಣದೆಣ್ಣೆ	–	ಚಿಮ್ಮಣಿ ಎಣ್ಣೆ

ಜಡ್ಡ್	–	ರೋಗ
ತಲಿಹರ್ಕ	–	ತಲೆಹರುಕ, ಅವಿವೇಕಿ
ದಬ್ಬಿಹಾಕು	–	ಮುಂದಕ್ಕೆ ಹಾಕು
ದೈವ	–	ಊರಿನ ಹಿರಿಯರ ಗುಂಪು
ನಡಿಗಿ	–	ನಡುಗಿ
ನಾಕಸಲಿ	–	ನಾಲ್ಕು ಬಾರಿ
ಪಗಾರ	–	ಸಂಬಳ
ಪಡಬಾರ್ದ ಕಷ್ಟ	–	ಅನುಭವಿಸಲಾಗದಷ್ಟು
ಪೆಚಾಡತಾರ	–	ಪಿಕಲಾಟ
ಬರಮಟ	–	ಬರುವವರೆಗೂ
ಬದ್‌ವೈರಿ	–	ದ್ವೇಷ ಮಾಡುವವ
ಬಾಸೆ	–	ಭಾಷೆ
ಬಾಳೆ	–	ಬಾಳುವೆ
ಬುರುಗ್ಯಾರ	–	ಉದಿಕೊಂಡಿದ್ದಾರೆ
ಬೇಸಿ	–	ಚೆನ್ನಾಗಿ
ಮಕ್ಳಅರ	–	ಮಕ್ಕಳು ಆದವರು
ಮುಲಾಜು	–	ಭಿಡೆ
ಯ್ಯಪ್ಪ	–	ಅಪ್ಪ
ಯಮ್ಮ	–	ಅಜ್ಜಿ
ಯರಡ ಯರಡ ಗುಂಡಗಿ	–	ಎರಡು ಹೃದಯ ಎಂದು ವ್ಯಕ್ತಿಯ ಗಟ್ಟಿತನವನ್ನು ಹೇಳುವ ವೈಖರಿ
ಯವ್ವ	–	ಅವ್ವ
ಯಾರಂತ್ಯಾಕೂ	–	ಯಾರ ಹತ್ತಿರದಲ್ಲೂ
ಲಗೂನ	–	ಬೇಗನೆ
ವಜ್ಜ	–	ಭಾರ
ವಸ್ತಿ ಹೋಗ್ಯಾರ	–	ವಸತಿ ಹೋಗಿದ್ದಾರೆ
ಶಿಕ್ಷೆ ಉಣ್ಣಾಕತ್ತಿನಿ	–	ಶಿಕ್ಷೆ ಅನುಭವಿಸುತ್ತಿದ್ದೇನೆ
ಸರ್ಕಲ್‌ನ್ಯಾಗ	–	ಗುಂಪಿನಲ್ಲಿ
ಸಾಲಹರ್ಕೊ	–	ಸಾಲವನ್ನು ತೀರಿಸು
ಸಂಗ್ಟ	–	ಸಂಕಟ
ಸಿಟ್	–	ಸಿಟ್ಟು

ಸೀರಿಸತೆ	–	ಸೀರೆ ಆದರೂ
ಸುರು	--	ಶುರು
ಹಕಿಕತ್	–	ಇರುವ ವಿಷಯ
ಹಡ್ಯಾತನ	–	ಹಡೆಯುವವರೆಗೆ
ಹತ್ತಿ	–	ಹತ್ತಿರ
ಹ್ವಾದವರ್ಷ	–	ಕಳೆದ ವರ್ಷ
ಹಿರ್‍ಯಾನವ್ವ	–	ಗಂಡನ ತಾಯಿ
ಹೀರೆಕಿನ್ನ	–	ಹೀರೆ ಆಕೆಯನ್ನ
ಹುಚ್ಪೆಂಗಿ	–	ಪೆದ್ದ, ದಡ್ಡ
ಹೊತ್‌ಬಂದ್ರ	–	ಸಮಯ ಬಂದರೆ
ಹೊಳ್ಳಿ	–	ಮರಳಿ
ಹೊಳ್ಳಾಡಿ	–	ಹೊರಳಾಡಿ
ಹಂತ್ಯಾಕ	–	ಹತ್ತಿರ.

ಸಾಂದರ್ಭಿಕ ಛಾಯಾಚಿತ್ರಗಳು



ತವರು ಮನೆಯಲ್ಲಿ ಆಸ್ತಿ ಕೇಳಿದ ಪ್ರಯುಕ್ತ ಜಗಳಗಳಾಗಿ ಅಣ್ಣ-ತಮ್ಮಂದಿರಿಂದ ದೈಹಿಕವಾಗಿ ಮತ್ತು ಭಾವನಾತ್ಮವಾಗಿ ಹಿಂಸೆಗೊಳಗಾದ ಮಹಿಳೆ.



ಗಂಡನಿಂದ ಬೆಂಕಿಯಲ್ಲಿ ಬೆಂದ ಮಹಿಳೆ



ಅತ್ತೆಯಾದವಳು ಸೊಸೆಗೆ ಬಿಸಿ ನೀರು ಎರಚಿ ಹಿಂಸೆಗೊಳಪಡಿಸಿದ ರೀತಿ.



ಗಂಡನ ಮನೆಯಲ್ಲಿನ ಹಿಂಸೆ ತಾಳಲಾರದೇ ವಿಷ ಸೇವಿಸಿ
ಆಸ್ಪತ್ರೆಗೆ ದಾಖಲಾದ ಮಹಿಳೆ.



ಗಂಡನಿಂದ ದೈಹಿಕ ಹಿಂಸೆಗೊಳಗಾಗಿ ಬೀದಿಪಾಲಾದ ತಾಯಿ
ಮತ್ತು ಹೆಣ್ಣು ಮಗಳು



ಮಗನಿಂದ ದೌರ್ಜನ್ಯಕ್ಕೊಳಗಾದ ಸಂಗತಿಯನ್ನು ಹಂಚಿಕೊಳ್ಳುತ್ತಿರುವ ಮಹಿಳೆ.



ನಿರ್ಲಕ್ಷಕ್ಕೊಳಗಾದ ವೃದ್ಧೆ.



ಬಾಲ್ಯ ವಿವಾಹಕ್ಕೊಳಗಾದ ಹೆಣ್ಣು ಮಗಳು ತನ್ನ ಮಗನೊಟ್ಟಿಗೆ.

ಮಹಿಳಾ ಅಧ್ಯಯನ ವಿಭಾಗ